ISSN: 2249-2429 Volume : 13, Issue : 3, Pages 120, 7th December 2023 Annual Subscription ₹.750/-

RNI REG.NO.KARKAN/2011/38712

# ಶಿಕ್ಷಣ ಸೌಧ

ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನಾ ಪತ್ರಿಕೆ

**SHIKSHAN SOUDHA** *A Quarterly Education and Research Journal*

APPROVED BY UGC CARE


Listed in U.G.C. Care List



## ಸ್ವಾಸ್ಥ್ಯ-ಸುಧಾರಿತ ಸಮಾಜ ನಿರ್ಮಾಣಕ್ಕೆ ಮೌಲ್ಯ ಶಿಕ್ಷಣ



## ಬೆಳ್ವೊಲನಾಡಿನ ಜೈನ ಧರ್ಮಕ್ಕೆ ಕಲ್ಯಾಣ ಚಾಲುಕ್ಯರ ಕೊಡುಗೆಗಳು



## ವಿಜ್ಞಾನ ನಗರಿಯಾಗಿ ಬೆಂಗಳೂರು

KARNATAKA One

## ಕರ್ನಾಟಕದಲ್ಲಿ ಇ-ಆಡಳಿತ ಕರ್ನಾಟಕ-ಒನ್ ಯೋಜನೆ

# ಶಿಕ್ಷಣ ಸೌಧ

ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನ ಪತ್ರಿಕೆ

U.G.C. Care Listed Journal

**7ನೇ ಡಿಸೆಂಬರ 2023 ಸಂಪುಟ : 13 ಸಂಚಿಕೆ : 3**

ಪ್ರಕಾಶಕರು :

**ಡಾ॥ ಜಯದೇವ ಮೈ. ಮೆಣಸಗಿ**

ವಿದ್ಯಾನಿಧಿ ಪ್ರಕಾಶನ, ಗದಗ

ಮಾಜಿ ಸಿಂಡಿಕೇಟ್ ಸದಸ್ಯರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಸಂಪಾದಕರು :

**ಡಾ. ಎಸ್.ಬಿ. ಯಾದವಾಡ**

ಸಹಸಂಪಾದಕರು :

**ಡಾ. ಪ್ರಕಾಶ ಕೆ. ಬಡಿಗೇರ**



**ಸಂಪಾದಕ ಮಂಡಳಿ**

- **ಪ್ರೊ. ಎಸ್.ಎಸ್. ಪಾಟೀಲ**
  ಪ್ರಾಧ್ಯಾಪಕರು, ಶಿಕ್ಷಣ ಅಧ್ಯಯನ ವಿಭಾಗ,
  ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ.
- **ಪ್ರೊ. ಬಿ.ಎಲ್. ಲಕ್ಕಣ್ಣವರ**
  ಪ್ರಾಧ್ಯಾಪಕರು, ಶಿಕ್ಷಣ ಅಧ್ಯಯನ ವಿಭಾಗ,
  ಕ.ರಾ.ಅ.ಮ.ವಿ,ವಿಜಯಪುರ ಮತ್ತು ಕುಲಸಚಿವರು, ಕ.ರಾ.ಗ್ರಾ.ಅ.
  ಮತ್ತು ಪಂ.ರಾ. ವಿಶ್ವವಿದ್ಯಾಲಯ, ಗದಗ.
- **ಪ್ರೊ. ಕೆ.ಎಂ. ಮೇತ್ರಿ**
  ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಬುಡಕಟ್ಟು ಅಧ್ಯಯನ ವಿಭಾಗ,
  ಕನ್ನಡ ವಿಶ್ವವಿದ್ಯಾಲಯ, ಹಂಪಿ.
- **ಪ್ರೊ. ಜಗನ್ನಾಥ ಕೆ. ಡಾಂಗೆ**
  ಡೀನರು, ಶಿಕ್ಷಣ ನಿಕಾಯ ಮತ್ತು ಮುಖ್ಯಸ್ಥರು, ಶಿಕ್ಷಣ ಅಧ್ಯಯನ ವಿಭಾಗ,
  ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ.
- **ಡಾ. ಎನ್. ಲಕ್ಷ್ಮೀ**
  ಸಹ ಪ್ರಾಧ್ಯಾಪಕರು, ಶಿಕ್ಷಣ ಅಧ್ಯಯನ ವಿಭಾಗ,
  ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು.
- **ಡಾ. ರಾಜಪ್ಪ ದಳವಾಯಿ**
  ಸಹಾಯಕ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಕೇಂದ್ರ,
  ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
- **ಡಾ. ಭೀಮಪ್ಪ ರಂಗಣ್ಣವರ**
  ಸಹ ಪ್ರಾಧ್ಯಾಪಕರು, ಶಿಕ್ಷಣ ವಿಭಾಗ, ಕೇಂದ್ರೀಯ ವಿಶ್ವವಿದ್ಯಾಲಯ,
  ತಮಿಳುನಾಡು, ನಿಲಕುಡಿ, ತಿರುವರುರ್.
- **ಡಾ. ಹುಚ್ಚೇಗೌಡ**
  ಸಹ ಪ್ರಾಧ್ಯಾಪಕರು, ಅರ್ಥಶಾಸ್ತ್ರ ಅಧ್ಯಯನ ವಿಭಾಗ,
  ದಾವಣಗೆರೆ ವಿಶ್ವವಿದ್ಯಾಲಯ, ದಾವಣಗೆರೆ.



**Shikshan Soudha**

*A Quarterly Education and Research Journal*

**VIDYANIDHI PRAKASHANA®**

Since:1973

**SRI SIVAKUMAR AGENCY®**

Station Road, Near Mahendrakar Circle,
GADAG-582 101 Dist. : Gadag
Karnataka State (India)
Phone : 08372-200527
email : shikshansoudha@gmail.com



The views expressed in the articles side are the individual opinions of the authors and they in no way represent or reflect the opinion of SHIKSHAN SOUDHA nor does SHIKSHAN SOUDHA subscribe to these views in no way. All disputes are subject to the jurisdiction of Gadag court only.




## ಅಂತರಂಗ Inside

### ಸೈದ್ಧಾಂತಿಕ (Articles)


**06** ಸ್ವಾಸ್ಥ್ಯ– ಸುಧಾರಿತ ಸಮಾಜ ನಿರ್ಮಾಣಕ್ಕೆ ಮೌಲ್ಯ ಶಿಕ್ಷಣ – ಡಾ. ದೇವರಾಜ ವೈ.

**07** ಸಮಾಜ ವಿಜ್ಞಾನ ಬೋಧನೆಗಾಗಿ ರಚನಾತ್ಮಕ ಕಲಿಕೆಯ ಸಿದ್ಧಾಂತ ಆಧಾರಿತ 5 "ಇ" (5 'ಇ') ಮಾದರಿಯ ಪಾಠವಿನ್ಯಾಸ – ಡಾ. ಮೆಹಬೂಬಸಾಬ ಅಣ್ಣಿಗೇರಿ

**09** ಆಧುನಿಕ ಕನ್ನಡ ಕಥಾ ಸಾಹಿತ್ಯ – ವರ್ಗ ಸಂಘರ್ಷ – ಪ್ರೊ. ಸಿದ್ಧಲಿಂಗೇಶ ಉ. ಸಜ್ಜನಶೆಟ್ಟರ್

**11** ದೇಶದ ಸ್ವಾತಂತ್ರ ಚಳುವಳಿಯಲ್ಲಿ ವೈಚಾರಿಕತೆಯ ಪ್ರಭಾವ – ಡಾ. ಶಿವಯೋಗಿ ಕೋರಿಶೆಟ್ಟರ್

**13** ಬೆಳ್ವೊಲನಾಡಿನ ಜೈನ ಧರ್ಮಕ್ಕೆ ಕಲ್ಯಾಣ ಚಾಲುಕ್ಯರ ಕೊಡುಗೆಗಳು – ಡಾ. ಶರಣಪ್ಪ ಬಸಪ್ಪ ಜಗ್ಗಲ

**16** ಅಂಟಿಕೆ – ಪಂಟಿಕೆ : ಮಾಯವಾಗುತ್ತಿರುವ ಜನಪದ ಸಂಗೀತ – ಡಾ. ಹಂಪೇಶ್ ಕೆ.ಎಸ್.

**20** ಮುಳಗುಂದ ನಾಡು : ಒಂದು ಸಾಂಸ್ಕೃತಿಕ ಅಧ್ಯಯನ – ಡಾ. ಬಿ. ಸುರೇಶ

**25** ವೃದ್ಧ ಮಹಿಳೆಯರು ದುಃಖಿತ ಮಹಿಳೆಯರು – ಎಂ. ಶೃತಿ

**29** ಕೊಪ್ಪಳ ಜಿಲ್ಲೆಯ ತತ್ವಪದಕಾರರ ಪರಂಪರೆ – ಡಾ. ಯಮನೂರಪ್ಪ

**32** ನಗರ ಸ್ಥಳೀಯ ಸಂಸ್ಥೆಗಳು ಮತ್ತು ನಗರಾಭಿವೃದ್ಧಿ ನಿರ್ವಹಣೆ – ರಾಜು ಬಿ.ಕೆ., ಡಾ. ಎಂ. ವೆಂಕಟೇಶ್

**37** ಕೋವಿಡ್ ಲಾಕ್ಡೌನ್ ಕಾರಣದಿಂದ ಸ್ಥಗಿತಗೊಂಡ ಆಚರಣೆಗಳ ಪರಿಣಾಮದ ವಿಶ್ಲೇಷಣೆ – ಡಾ. ರೋಹಿಣಾಕ್ಷ ಶಿರ್ಲಾಲು

**42** ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರ : ಒಂದು ಅವಲೋಕನ – ಸಾವಿತ್ರಿ ಕ. ಹಿರೇಮಠ

**45** ವಿಜ್ಞಾನ ನಗರಿಯಾಗಿ ಬೆಂಗಳೂರು : ಒಂದು ಅವಲೋಕನ – ಡಾ. ಸ್ಮಿತಾ ಎಂ. ಭಾವಿಕಟ್ಟಿ

**52** ವಚನ ಸಾಹಿತ್ಯದಲ್ಲಿ ಕೃಷಿ ಕುರಿತ ಚಿಂತನೆಗಳು – ಡಾ. ಸುನೀಲಕುಮಾರ ಎಸ್.

**56** ರನ್ನನ ಗದಾಯುದ್ಧದ ನಾಯಕರುಗಳು : ಒಂದು ಅವಲೋಕನ – ಶ್ರೀನಿವಾಸ ಎನ್.

**59** ಜಾನಪದ ಮಹಾಕಾವ್ಯಗಳಲ್ಲಿ ಸ್ತ್ರೀ ಸ್ವಾಯತ್ತತೆ – ಡಾ. ಆಶಾರಾಣಿ ಬಗ್ಗನಡು

**64** ಆಧುನಿಕ ವಚನ ಅಧ್ಯಯನಗಳ ವೈಧಾನಿಕತೆ – ಡಾ. ಅಂದಯ್ಯ ಅರವಟಗಿಮಠ

**66** ಹೈದರ್ ಮತ್ತು ಟಿಪ್ಪು ಕಾಲದ ನಾಣ್ಯ ವ್ಯವಸ್ಥೆ : ಚಾರಿತ್ರಿಕ ವಿಶ್ಲೇಷಣೆ – ಡಾ. ಬಿ. ಜಯಮ್ಮ

**72** ಸಾಂಸ್ಕೃತಿಕ ಮತ್ತು ಧಾರ್ಮಿಕ ಆಚರಣೆಗಳು – ಡಾ. ಧರಣೇಂದ್ರಯ್ಯ ಡಿ.

**78** ಬಸವೇಶ್ವರರ ರಾಜಕೀಯ ಚಿಂತನೆಗಳು : ದೃಷ್ಟಿ ಮತ್ತು ಧೋರಣೆ – ಡಾ. ಸಂಗೀತಾ ಯಲ್ಲಪ್ಪ

**81** ಸ್ಮಾರಕ ಶಿಲ್ಪಗಳಲ್ಲಿ ಜೀವನ ಮೌಲ್ಯಗಳು – ಡಾ. ವೈ. ಮದ್ದಾನಸ್ವಾಮಿ


### ಸಂಶೋಧನೆ (Reserch)


**86** ಕರ್ನಾಟಕದಲ್ಲಿ ಇ–ಆಡಳಿತ : ಕರ್ನಾಟಕ–ಒನ್ ಯೋಜನೆಯ ಒಂದು ಅಧ್ಯಯನ – ಡಾ. ಜಗದೀಶ ಹೆಚ್., ಡಾ. ಸಂದೀಪ ಜಿ. ತಿವಾರಿ

**90** ಶೈಕ್ಷಣಿಕ ಸಾಧನವಾಗಿ ಟೆಲಿವಿಷನ್ ಮಾಧ್ಯಮ : ಕೇರಳ ವಿದ್ಯಾರ್ಥಿಗಳ ಬಳಕೆ ಮತ್ತು ಪ್ರವೃತ್ತಿ ಕುರಿತು ಅಧ್ಯಯನ – ವಿನಯ್ ಜಿ.ಪಿ., ಸತ್ಯಪ್ರಕಾಶ್ ಎಂ.ಆರ್.

**: ಸೂಚನೆ :**

ಲೇಖನ ಹಾಗೂ ಸಂಶೋಧನಾ ಲೇಖನಗಳನ್ನು ಕಳಿಸುವವರು ಕಡ್ಡಾಯವಾಗಿ ಪತ್ರಿಕೆಯ ಸದಸ್ಯತ್ವ ಪಡೆದವರಾಗಿರಬೇಕು. ಲೇಖನವಾದಲ್ಲಿ 1500 ಶಬ್ದಗಳನ್ನು ಮೀರಬಾರದು ಹಾಗೂ ಸಂಶೋಧನಾ ಲೇಖನವಾದಲ್ಲಿ 2000 ಶಬ್ದಗಳನ್ನು ಮೀರಿರಬಾರದು. ಹೆಚ್ಚಿನ ಸಂಖ್ಯೆಯಲ್ಲಿ ಪತ್ರಿಕೆಗೆ ಚಂದಾದಾರರಾಗಿ ಪತ್ರಿಕೆಯನ್ನು ಪ್ರೋತ್ಸಾಹಿಸಿರಿ. ಉತ್ತಮ ಲೇಖನ ಅಥವಾ ಸಂಶೋಧನಾ ಲೇಖನಗಳನ್ನು ಕಳಿಸಿರಿ.


**93** ಅಧ್ಯಾಪಕರಿಗಾಗಿ ಸ್ವಬೋಧನಾ ಸಾಮಗ್ರಿಯ ತಯಾರಿ ಮತ್ತು ಮೌಲ್ಯೀಕರಣ ಕುರಿತು ಒಂದು ಅಧ್ಯಯನ – ಡಾ. ಚಿದಾನಂದ ಎ.ಎಲ್.,

**101** ಮಹಿಳೆಯರ ಆರ್ಥಿಕ ಅಭಿವೃದ್ಧಿಯಲ್ಲಿ ಸ್ವ–ಸಹಾಯ ಸಂಘಗಳ ಪಾತ್ರ : ಒಂದು ಸಮಾಜ ಕಾರ್ಯ ಅಧ್ಯಯನ – ಡಾ. ಕಲಾವತಿ ಹೆಚ್. ಕಾಂಬಳೆ

**105** ಮೀಸಲಾತಿ ಮತ್ತು ಒಳ ಮೀಸಲಾತಿ ಹಂಚಿಕೆಯ ಸಾಧಕ – ಬಾಧಕಗಳು : ವಿಶ್ಲೇಷಣೆ – ಡಾ. ತಿಪ್ಪೇಸ್ವಾಮಿ

**108** ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕೃತಕ ಬುದ್ಧಿವಂತಿಕೆಯ ಪಾತ್ರ : ಕೊಡಗು ಜಿಲ್ಲೆಯ ಅಧ್ಯಯನ – ರಶ್ಮಿ, ಡಾ. ಪ್ರಕಾಶ ಡಿ.ಎನ್.

**113** ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆ ಮತ್ತು ಮನೆಯ ವಾತಾವರಣವನ್ನು ಕುರಿತು ಒಂದು ಅಧ್ಯಯನ – ಡಾ. ಭೈರಸಿದ್ದಪ್ಪ ಜಿ.ಇ.


**ಶಿಕ್ಷಣ ತಜ್ಞರು (Education Thinkers)**


**117** ವಿನೋಬಾ ಭಾವೆ (1894–1986) – ಡಾ॥ ಜಯದೇವ ಮೆಣಸಗಿ



**ಶಿಕ್ಷಣ ಸೌಧ**

ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನ ಪತ್ರಿಕೆ

*ಚಂದಾ ವಿವರ:*

| | | |
|---|---|---|
| ವಾರ್ಷಿಕ ಚಂದಾ | ₹ 750/- | ☐ |
| ತ್ರೈವಾರ್ಷಿಕ ಚಂದಾ | ₹ 2100/- | ☐ |
| ಆಜೀವ ಸದಸ್ಯತ್ವ | ₹ 7000 /- | ☐ |

*ಚಂದಾದಾರರು :*
**ಶಿಕ್ಷಣ ಸೌಧ**
ಈ ಹೆಸರಿನ ಮೇಲೆ ಡಿಡಿ ತೆಗೆಯಿಸಬೇಕು.

*Bank Detils :*
**SHIKSHANA SOUDHA**
Indian Overseas Bank
J.T. Math Road, Gadag Branch
A/c.No.: 285402000000179
IFSC : IOBA0002854

ಡಿ.ಡಿ. ಕಳುಹಿಸಬೇಕಾದ ವಿಳಾಸ :
**ಶಿಕ್ಷಣ ಸೌಧ**
ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನ ಪತ್ರಿಕೆ
ವಿದ್ಯಾನಿಧಿ ಪ್ರಕಾಶನ
ಸ್ಟೇಶನ್ ರೋಡ ಮತ್ತು 'ನನಸು' ಜೆ.ಟಿ.ಮಠ ರೋಡ,
ಗದಗ – 582101. ಕರ್ನಾಟಕ ರಾಜ್ಯ
ಫೋನ್ : 08372–200527
Email : shikshansoudha@gmail.com

**ಶಿಕ್ಷಣ ಸೌಧ**

ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನ ಪತ್ರಿಕೆ
ಯು.ಜಿ.ಸಿ. ಕೇರ್‌ನ ಮಾನ್ಯತೆ ಪಡೆದಿರುವ ಪತ್ರಿಕೆ
ನೂತನ ಚಂದಾದಾರರ ನೋಂದಣಿ ಪ್ರತಿ

Date :

Name : ______________________

Designation : ______________________

Institution : ______________________

Address : ______________________

______________________

Phone Cell Nos.: ______________________

e-mail : ______________________

D.D. No. : ____________ Dated : ____________

Amount : ________ Bank : ______________________

*Institution's* *Signature*

ಶಿಕ್ಷಣ ಸೌಧ

## ಸಂಪಾದಕೀಯ

# ಸರಕಾರಿ ವಸತಿ ಶಾಲೆಗಳಿಗೆ ಬೇಕು ನೀತಿ ಸಂಹಿತೆ

ಶಿಕ್ಷಣವನ್ನು ಮೂಲಭೂತ ಹಕ್ಕು ಎಂದು ಘೋಷಿಸಿದ ನಂತರ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಕ್ಕೆ ಸರಕಾರ ಆದ್ಯತೆ ನೀಡಿದೆ. ಅದಕ್ಕೆ ಪೂರಕವಾಗಿ ವಸತಿ ಶಾಲೆಗಳನ್ನು ಪ್ರಾರಂಭಿಸಿದೆ. ಆದರೆ ವಸತಿ ಶಾಲೆಗಳಲ್ಲಿ ಗುಣಮಟ್ಟದ ಬೋಧನೆ, ಕಲಿಕೆ ಹಾಗೂ ಊಟ, ವಸತಿ ದೊರೆಯುತ್ತಿಲ್ಲ ಎನ್ನುವುದು ಕಳವಳಕಾರಿ ಸಂಗತಿ. ಇದರಿಂದ ಸರಕಾರಿ ವಸತಿ ಶಾಲೆ ಎಂದರೆ ಮಕ್ಕಳು ಮತ್ತು ಪೋಷಕರು ಹಿಂದೇಟು ಹಾಕುತ್ತಿದ್ದಾರೆ. ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಶಿಕ್ಷಕರು ಮಕ್ಕಳಿಂದಲೆ ಮಲದ ಗುಂಡಿಯನ್ನು ಸ್ವಚ್ಛಗೊಳಿಸಿದುದು ಇದಕ್ಕೆ ಇತ್ತೀಚಿನ ಘಟನೆ ಉದಾಹರಣೆಯಾಗಿದೆ. ದೇಶದಲ್ಲಿ ಮಲದ ಗುಂಡಿಗೆ ಇಳಿದು ಕೆಲಸ ಮಾಡುವುದನ್ನು ನಿಷೇಧಿಸಿ ಹಲವು ವರ್ಷಗಳು ಕಳೆದಿವೆ. ಯಾರಾದರು ಹಾಗೆ ಮಾಡಿಸಿದರೆ ಅದು ಶಿಕ್ಷಾರ್ಹ ಅಪರಾಧ. ವಸತಿ ಶಾಲೆ ಪ್ರಾಚಾರ್ಯರು ಹಾಗೂ ಶಿಕ್ಷಕರು ಸಂಬಂಧಿಸಿದ ಆಡಳಿತದ ಗಮನಕ್ಕೆ ತಂದು ಮಲದ ಗುಂಡಿಯನ್ನು ಸ್ವಚ್ಛಗೊಳಿಸಬಹುದಿತ್ತು, ಹಾಗೇ ಮಾಡದೇ ಮಕ್ಕಳನ್ನು ಗುಂಡಿಗೆ ಇಳಿಸಿರುವುದು ಅಕ್ಷಮ್ಯ ಅಪರಾಧ.

ಸಾಮಾನ್ಯವಾಗಿ ಸರಕಾರದ ವಸತಿ ಶಾಲೆಗಳಿಗೆ ಪ್ರವೇಶ ಪಡೆಯುವವರು ಆರ್ಥಿಕವಾಗಿ ಹಿಂದುಳಿದವರು ಆಗಿರುತ್ತಾರೆ. ಇದೊಂದು ಕಾರಣಕ್ಕೆ ಪೋಷಕರು ವಿಷಯ ತಿಳಿದು ಯಾರಿಗೂ ದೂರು ನೀಡದೆ ಸುಮ್ಮನಿರುತ್ತಾರೆ. ಇದನ್ನು ಬಂಡವಾಳ ಮಾಡಿಕೊಂಡು ಸಿಬ್ಬಂದಿ ಮಕ್ಕಳಿಂದ ಇಂತಹ ಕೆಲಸ ಮಾಡಿಸಿಕೊಳ್ಳುತ್ತಾರೆ. ಯಲದಹಳ್ಳಿ ಮೊರಾರ್ಜಿ ವಸತಿ ಶಾಲೆಯಲ್ಲಿ ಮಕ್ಕಳಿಂದ ಮಲದ ಗುಂಡಿಯನ್ನು ಸ್ವಚ್ಛಗೊಳಿಸಿರುವುದು ವಿಡಿಯೋಗಳ ಸಾಕ್ಷ್ಯ ಮಾಧ್ಯಮದಲ್ಲಿ ಭಿತ್ತರವಾಗಿದೆ. ಸಾಕ್ಷ್ಯ ಇದ್ದರೂ ಶಾಲೆಯ ಪ್ರಾಚಾರ್ಯರು ಮಾತ್ರ ನಮ್ಮ ಶಾಲೆಯ ಮಕ್ಕಳಿಗೆ ಯಾವುದೇ ರೀತಿ ತೊಂದರೆ ಕೊಟ್ಟಿಲ್ಲ ಎಂದು ಸಮಜಾಯಿಸಿ ಉತ್ತರ ನೀಡಿದ್ದಾರೆ. ಈ ಧೋರಣೆ ಅಪಾಯಕಾರಿ ಇದರಿಂದ ಮಕ್ಕಳು ಏನನ್ನೂ ಕಲಿಯಬಲ್ಲರು.

ಮಾಧ್ಯಮದಲ್ಲಿ ವರದಿಗಳು ಪ್ರಕಟವಾಗುತ್ತಿದ್ದಂತೆಯೇ ಎಚ್ಚೆತ್ತುಕೊಂಡ ಸರಕಾರ ಪ್ರಾಚಾರ್ಯರು ಹಾಗೂ ಮೂವರು ಸಿಬ್ಬಂದಿಯನ್ನು ಅಮಾನತ್ತುಗೊಳಿಸಿದೆ ಮತ್ತು ಪೊಲೀಸ ಠಾಣೆಯಲ್ಲಿ ಪ್ರಕರಣವನ್ನು ದಾಖಲಿಸಿದೆ. ಇದು ಇಷ್ಟಕ್ಕೆ ಮುಗಿಯಬಾರದು. ಇವರಿಗೆ ಸೂಕ್ತ ಶಿಕ್ಷೆಯಾಗಿ ಇಂತಹವರನ್ನು ಶಿಕ್ಷಣ ಕ್ಷೇತ್ರದಿಂದ ದೂರವಿಡಬೇಕು. ಸರಕಾರ ಸಿಬ್ಬಂದಿಯನ್ನು ನೇಮಿಸುವಾಗ ಸೂಕ್ತವಾದ ನಿಬಂಧನೆಗಳನ್ನು ಹಾಕಬೇಕು ಹಾಗೂ ಇಂತಹ ಶಾಲೆಗಳಿಗೆ ನೀತಿ ಸಂಹಿತೆಯನ್ನು ರೂಪಿಸಬೇಕು.

– ಡಾ. ಎಸ್.ಬಿ. ಯಾದವಾಡ
ಸಂಪಾದಕರು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಸ್ವಾಸ್ಥ್ಯ– ಸುಧಾರಿತ ಸಮಾಜ ನಿರ್ಮಾಣಕ್ಕೆ ಮೌಲ್ಯ ಶಿಕ್ಷಣ

✍ **ಡಾ. ದೇವರಾಜ ವೈ.**, ಸಹಾಯಕ ಪ್ರಾಧ್ಯಾಪಕರು, ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ.

'ಸತ್ಯಂ ವದಧರ್ಮಂಚರ' ಎಂಬ ಮಾತನ್ನು ಉಪನಿಷತ್ತುಗಳಲ್ಲಿ ಉಲ್ಲೇಖಿಸಲಾಗಿದೆ. ಪ್ರತಿಯೊಬ್ಬ ಮನುಷ್ಯನುಉತ್ತಮ ಬಾಳನ್ನು ಬಾಳಬೇಕೆಂದರೆ ನೈತಿಕ ಮೌಲ್ಯಗಳ ಅರಿವು–ಪಾಲನೆ ಅಗತ್ಯ. ಇತ್ತೀಚೆಗೆ ಹೆಚ್ಚುತ್ತಿರುವ ಹಿಂಸೆ, ಬಾಲಾಪರಾಧಗಳು, ಅಪ್ರಾಪ್ತ ವಯಸ್ಸಿನ ಹುಡುಗಿಯರಲ್ಲಿ ಗರ್ಭಪಾತ, ವಿವಾಹ ವಿಚ್ಛೇದನ ಮುಂತಾದವು ಈಗಿನ ಪೀಳಿಗೆಯ ಮಕ್ಕಳಿಗೆ ನೈತಿಕ ಮೌಲ್ಯಗಳ ಬಗ್ಗೆ ಹೆಚ್ಚು ತಿಳಿದಿಲ್ಲವಾದ್ದರಿಂದ ಉಂಟಾಗುತ್ತಿರುವ ಸಮಸ್ಯೆಗಳೇ ಎಂದೇಳಬಹುದು. ಹಾಗೆಯೇ ಅನೇಕ ದೇಶಗಳಲ್ಲಿ ಶಿಕ್ಷಕರು, ಪೋಷಕರನ್ನೇ ಗುಂಡಿಕ್ಕಿ ಕೊಂದ ಮಕ್ಕಳು, ದೆಹಲಿಯ ಪ್ರತಿಷ್ಠಿತ ಪ್ರೌಢಶಾಲೆಯೊಂದರ ಮಕ್ಕಳ ಲೈಂಗಿಕ ಪ್ರಕರಣ, ನಮ್ಮನ್ನು ಕಾಯುವ ಸರ್ಕಾರವನ್ನೇ ಅವ್ಯವಸ್ಥೆಗೊಳಿಸುವಂತಹ ನಕಲೀ ನೋಟು, ಪೂಜ್ಯನೀಯ ಸ್ಥಾನದಲ್ಲಿರುವ ಅನೇಕ ಸ್ವಾಮಿಗಳ ಕಾಮಲೀಲೆಗಳು, ವೇಶ್ಯಾವಾಟಿಕೆಯ ದಂಧೆಗಳು..... ಇವುಗಳೆಲ್ಲಾ ಇಂದಿನ ದಿನಪತ್ರಿಕೆಗಳಲ್ಲಿ ಆಗಾಗ (ಹೆಚ್ಚುಕಡಿಮೆ ಪ್ರತಿದಿನವೂ !) ಕಾಣಿಸಿಕೊಳ್ಳುವ ತಲೆಬರಹಗಳು. ಇದರ ಬಗ್ಗೆ ಚಿಂತನೆ ನೆಡೆಸಿದಾಗ ನಮ್ಮ ಸಮಾಜವು ಅಧಃಪತನಕ್ಕೀಡಾಗಿರುವ ಅಂಶವು ಗೋಚರಿಸಿ, ಗಾಂಧೀಜಿಯವರು ಕಂಡ "ರಾಮರಾಜ್ಯ"ದ ನಿರೀಕ್ಷೆಯನ್ನು ಇಟ್ಟುಕೊಂಡಿರುವವರಿಗೆ ಭ್ರಮನಿರಸನವನ್ನು ಉಂಟು ಮಾಡುತ್ತಿರುವುದು ಸ್ಪಷ್ಟವಾಗುತ್ತದೆ. ಇವುಗಳಿಗೆಲ್ಲಾ ಮೌಲ್ಯಗಳ ಬದಲಾಗಿ ಸ್ವಾರ್ಥಲಾಲಸೆಗೆ, ಭೋಗ ಜೀವನಕ್ಕೆ ಹಾಗೂ ಇದನ್ನು ಪೂರೈಸಲು ಬೇಕಾದ ಹಣಕ್ಕೆ ಬೆಲೆಕೊಡುತ್ತಿರುವ ಸಮಾಜ, ಅಂದರೆ ಈ ಸಿದ್ಧಾಂತದತ್ತ ವಾಲಿರುವ ನಾವುಗಳೇ ಕಾರಣವೆಂದರೆ ಕೆಲವರು ಸಿಟ್ಟಾಗಬಹುದು !

ಈ ಪರಿಸ್ಥಿತಿಯು ಸುಧಾರಿಸಬೇಕಾದರೆ ನೈತಿಕ ಮೌಲ್ಯಗಳಿಗೆ ಗೌರವವನ್ನಿತ್ತು, ಪರಸ್ಪರರಿಗೆ ಸಹಕಾರ ನೀಡುವಂತಹ ಸಾರಯುತ ಸಮಾಜದ ನಿರ್ಮಾಣವಾಗಬೇಕು. "ಬೆಳೆಯುವ ಸಿರಿ ಮೊಳಕೆಯಲ್ಲಿಯೇ", ಆದ್ದರಿಂದ ನೀತಿವಂತರಾದ ಯುವಜನತೆಯ ನಿರ್ಮಾಣವಾದರೆ, ಅದು ಮೌಲ್ಯಯುತ ಸಮಾಜ ನಿರ್ಮಾಣಕ್ಕೆ ಸುಭದ್ರ ಅಡಿಪಾಯವಾಗುತ್ತದೆ. ಇದೆಲ್ಲಾ ರಾತ್ರೋರಾತ್ರಿಯಾಗುವ ಕೆಲಸವಲ್ಲ. ಬಹುಕಾಲದಿಂದ ಭೋಗದೆಡೆಗೆ ಜಾರಿರುವ ಸಮಾಜವನ್ನು ನೀತಿಯ ಚೌಕಟ್ಟಿಗೆ ಒಳಪಡಿಸಲು ಅಪಾರ ಪರಿಶ್ರಮದಅಗತ್ಯವಿದೆ.

"If wealth is lost, nothing is lost; If health is lost, something is lost; but, if the character is lost, everything is lost." (ಸಂಪತ್ತು ನಷ್ಟಹೊಂದಿದರೆ, ಏನೂ ನಷ್ಟವಿಲ್ಲ; ಆರೋಗ್ಯವುಇಲ್ಲವಾದರೆ, ಏನೋ ಸ್ವಲ್ಪವನ್ನು ಕಳೆದುಕೊಂಡಂತೆ; ಆದರೆ ಮನುಷ್ಯನು ಸಚ್ಚಾರಿತ್ರ್ಯವನ್ನು ಹೊಂದದಿದ್ದರೆ, ಎಲ್ಲವನ್ನೂ ಕಳೆದುಕೊಂಡಂತೆ.) ಎಂದು ನಮ್ಮ ಹಿರಿಯರು ಹೇಳುತ್ತಿದ್ದರು. ಹಣವಂತನಿಗಿಂತ ಗುಣವಂತನಿಗೆ ಅಂದು ಹೆಚ್ಚಿನಗೌರವವು ಲಭ್ಯವಾಗುತ್ತಿತ್ತು. ಆಗ ಮಹಾಜ್ಞಾನಿಗಳು, ವಿರಾಗಿಗಳು, ಪರೋಪಕಾರಿಗಳು ನಮ್ಮಆದರ್ಶಪುರುಷರಾಗಿದ್ದರು. ಅಂದಿನ ಶಿಕ್ಷಣಪದ್ಧತಿಯು ಕೇವಲ ವಿಚಾರಗಳನ್ನು ತಲೆಗೆತುಂಬದೇ, ಜ್ಞಾನದಜೊತೆಯಲ್ಲಿಯೇ ಶೀಲದ ನಿರ್ಮಾಣಕ್ಕೆಒತ್ತು ನೀಡುತ್ತಿತ್ತು. "ಗೋವಿನ ಹಾಡಿ"ನಲ್ಲಿ ಪುಣ್ಯಕೋಟಿ ಗೆದುರಾದ ಕಷ್ಟಕೋಟಲೆಗಳನ್ನೋದಿ ಕಣ್ಣೀರು ಸುರಿಸದ, ಅದರ ಸತ್ಯಸಂಧತೆಯನ್ನು ಮನದಲ್ಲೇ ಮೆಲುಕು ಹಾಕದ ವಿದ್ಯಾರ್ಥಿಗಳಿರಲಿಲ್ಲ. ಅಂದಿನ ವಿದ್ಯಾರ್ಥಿಗಳ ಮನದಲ್ಲಿ ಶಿವಾಜಿ ಮಹಾರಾಜನ ದೇಶಭಕ್ತಿ, ಕಿತ್ತೂರು ಚೆನ್ನಮ್ಮಾಜಿಯ ಶೌರ್ಯ, ಮ್ಯಾಕ್ಸ್ ಮುಲ್ಲರನು ನಮ್ಮ ಸನಾತನ ಸಂಸ್ಕೃತಿಯನ್ನು ಅವಹೇಳನ ಮಾಡಹೋಗಿ ಕೊನೆಗೆ ಅದನ್ನೇತನ್ನ ಜೀವಾಳವನ್ನಾಗಿ ಪರಿವರ್ತಿಸಿಕೊಂಡು ಅವನು ಭಾರತೀಯತೆಗೆ ಸಲ್ಲಿಸಿದ ಕಾಣಿಕೆಯೇ ಮೊದಲಾದ ಸದ್ವಿಚಾರಗಳು ಅಚ್ಚಳಿಯದ ಛಾಪನ್ನೊತ್ತಿದ್ದವು. ಅದೇ ಸಮಯದಲ್ಲಿ ಮಹಾತ್ಮಾ ಗಾಂಧೀಜಿಯವರು ದೇಶದ ನಾಡಿಮಿಡಿತವನ್ನರಿತು ಸದಾಚಾರಿಗಳಾಗುವಂತೆ ಕರೆಕೊಟ್ಟಾಗ ದೇಶಕ್ಕೆ ದೇಶವೇ (ಹೆಚ್ಚಿನವರು) ಓಗೊಟ್ಟು ಸತ್ವಯುತವಾದ ಸಮಾಜದ ನಿರ್ಮಾಣವಾಗಿತ್ತೆಂದರೆ, ಅದುಅತಿಶಯೋಕ್ತಿಯೆನಿಸದು.

ಆದರೆ ಅದಾದ ಕೆಲ ವರ್ಷಗಳ ನಂತರದಲ್ಲಿಯೇ ನೈತಿಕವಾಗಿ ನಾವೆಷ್ಟು ಅಧೋಗತಿಗಿಳಿದು ಬಿಟ್ಟೆವು ? ಪಾಶ್ಚಾತ್ಯರ ಸದ್ವಿಚಾರಗಳನ್ನು ಅವಗಾಹಿಸದೇ, ಅವರ ಸ್ವೇಚ್ಛಾ ಜೀವನ ಶೈಲಿಯಷ್ಟನ್ನೇಅಂಧಾನುಕರಣೆ ಮಾಡುವಜನತೆ, ಕೋಮುದಳ್ಳುರಿಯೆಬ್ಬಿಸಿ ಸಮಾಜದ ಸ್ವಾಸ್ಥ್ಯವನ್ನು ಹಾಳುಮಾಡಿ ಪರಸ್ಪರರಲ್ಲಿ ಗೌರವ, ಸಹಕಾರ ಪ್ರವೃತ್ತಿ ನಿರ್ಮಾಣವಾಗದಂತೆ ಮಾಡಿ ಸ್ವಹಿತಾಸಕ್ತಿಯನ್ನು ಕಾಯ್ದುಕೊಳ್ಳುವ ಪಟ್ಟಭದ್ರ ಹಿತಾಸಕ್ತಿಗಳು, ಭ್ರಷ್ಟಾಚಾರ, ಲಂಚಗುಳಿತನಗಳೇ ಮೊದಲಾದ ಕರಾಳ ಅಂಶಗಳಿಂದ ಸಮಾಜ ನರಳುತ್ತಿದೆ. ಇದಕ್ಕೆಲ್ಲಾ ನವಯುಗದ ನಿರ್ಮಾತರಾದ ಮಕ್ಕಳಿಗೆ ನೈತಿಕ ಶಿಕ್ಷಣವನ್ನೊದಗಿಸುವುದೇ ಸಂಜೀವಿನಿಯಾಗಿದೆ. ಅದೇನೇಇರಲಿ; "ಹಿಂದಿನ ಕಾಲ ಚೆನ್ನಾಗಿತ್ತು; ಈಗೆಲ್ಲಾ ಕೆಟ್ಟು ಕುಲವೆದ್ದು ಹೋಗಿದೆ"ಯೆಂಬ ನಿರಾಶಾದಾಯಕ ಸಿನಿಕತನವನ್ನು ಬದಿಗಿಟ್ಟು ಮುಂದೆ ಮಾಡ ಬಹುದಾದರೆಡೆಗೆ ಗಮನ ಹರಿಸೋಣ. ಮಕ್ಕಳಿಗೆ ಗಿಳಿಪಾಠವನ್ನಷ್ಟೇ ಮಾಡದೇ, ನೀತಿ, ಪ್ರಾಮಾಣಿಕತೆಗಳ ಮಹತ್ವವನ್ನರಿತು ಅವುಗಳನ್ನು ಸ್ವತಃ ಪಾಲಿಸಿ, ಮಕ್ಕಳಿಗೆ ಆದರ್ಶಪ್ರಾಯರಾಗಿ ಪ್ರೀತಿಯಿಂದ ಇದನ್ನು ಬೋಧಿಸುವ ಗುರುಸಮುದಾಯ ನಿರ್ಮಾಣವಾಗಬೇಕು. ಅಂತಹವರು ಸ್ವಲ್ಪಜನರಾದರೂ "ಎಲೆಮರೆಯ ಕಾಯಿ"ಗಳಂತೆ ನಮ್ಮ ಸಮಾಜದಲ್ಲಿದ್ದಾರೆಂಬುದು ಸಮಾಧಾನದ ಸಂಗತಿ ! ಪಠ್ಯಕ್ರಮಗಳಲ್ಲಿ ಜ್ಞಾನಕ್ಕಿರುವಷ್ಟೇ ಸ್ಥಾನಮಾನವನ್ನು ನೈತಿಕಶಿಕ್ಷಣಕ್ಕೆ ನೀಡಬೇಕು. ನಾವೆಷ್ಟೇ ಸಿರಿವಂತರಾಗಿದ್ದರೂ ನಮ್ಮನ್ನುರೂಪಿಸುವಲ್ಲಿ, ನಮ್ಮ ಮೇಲೆ ಸಮಾಜದ ಋಣವೊಂದಿದೆಯೆಂಬುದನ್ನು ಹಾಗೂ ಅದನ್ನು ನಮ್ಮ ಶಕ್ತ್ಯಾನುಸಾರವಾಗಿ ತೀರಿಸುವುದರತ್ತ ಪ್ರತಿಯೊಬ್ಬರೂ ಕಾಯಕ ಗೈಯ್ಯಬೇಕೆನ್ನುವ ಜಾಗೃತಿಯನ್ನು ನಮ್ಮ ಶಿಕ್ಷಣ ವ್ಯವಸ್ಥೆಯು ಮಕ್ಕಳಲ್ಲಿ ಮೂಡಿಸುವಂತಿರಬೇಕು. ಕೇವಲ ಮಕ್ಕಳಿಗೆ ಜನ್ಮ ನೀಡಿದರೆ ಸಾಲದು; ಅವರನ್ನುದೇಶದ ಸತ್ಪ್ರಜೆಗಳನ್ನಾಗಿ ರೂಪಿಸಬೇಕೆಂಬ ನೈತಿಕತೆಯು ಪೋಷಕರಲ್ಲಿ ಮೂಡಬೇಕು. ಹಿರಿಯರಿಗೆ ಗೌರವವೀಯುವ, ಕಿರಿಯರನ್ನು ಆದರಿಸುವ, ನೊಂದವರ ಕಂಬನಿಯೊರೆಸುವ ಹಾಗೂ ಕೌಟುಂಬಿಕ ಹೊಣೆಯನ್ನರಿತು ಅದನ್ನು ನಿಭಾಯಿಸುವುದರ ಮಹತ್ವಗಳನ್ನು ಅವರು ಮಕ್ಕಳಿಗೆ ತಿಳಿಸಿಕೊಡಬೇಕು. ಏಕೆಂದರೆ ಮಕ್ಕಳಿಗೆ ಮನೆಯೇ ಮೊದಲ ಪಾಠಶಾಲೆಯಷ್ಟೇ?

ಇಂಥಾ ಸಂಸ್ಕಾರಯುತವಾದ ವಾತಾವರಣದಲ್ಲಿ ಬೆಳೆದು ದೊಡ್ಡವರಾದ ಮಕ್ಕಳೆಂದೂ ಮುಂದೆ ಲಂಚದ ಹೇಸಿಗೆ ಕಾಸಿಗೆ

*– 63ನೇ ಪುಟಕ್ಕೆ ಮುಂದುವರೆದುದು*

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಸಮಾಜ ವಿಜ್ಞಾನ ಬೋಧನೆಗಾಗಿ ರಚನಾತ್ಮಕ ಕಲಿಕೆಯ ಸಿದ್ಧಾಂತ ಆಧಾರಿತ 5 "ಇ" (5 'ಇ') ಮಾದರಿಯ ಪಾಠವಿನ್ಯಾಸ

✍ **ಡಾ. ಮೆಹಬೂಬಜಾನ ಅಣ್ಣಿಗೇರಿ,** ಸಹಾಯಕ ಪ್ರಾಧ್ಯಾಪಕರು, ಸೇಂಟ್ ಆನ್ಸ ಶಿಕ್ಷಣ ಮಹಾವಿದ್ಯಾಲಯ, ಸಿಕಂದರಾಬಾದ, ತೆಲಂಗಾಣ

## ಪೀಠಿಕೆ

ಭಾರತದ ಶಾಲಾ ಶಿಕ್ಷಣ ಪಠ್ಯಕ್ರಮದಲ್ಲಿ ಸಮಾಜ ವಿಜ್ಞಾನವು ಮಹತ್ತರ ಸ್ಥಾನವನ್ನು ಹೊಂದಿದೆ. ಏಕೆಂದರೆ ಸಮಾಜ ವಿಜ್ಞಾನವು ವಿದ್ಯಾರ್ಥಿಗಳಲ್ಲಿ ಸಮಾಜದ ರಚನೆ ಅದರ ಆಡಳಿತದ ಕುರಿತು ಜ್ಞಾನವನ್ನು ಬೆಳೆಸುತ್ತದೆ. ಇದರ ಪ್ರಮುಖ ಗುರಿ ನಾಗರಿಕ ತರಬೇತಿಯನ್ನು ಒದಗಿಸುವದು ಮತ್ತು ಸಾಮಾಜಿಕ ಕೌಶಲ್ಯಗಳನ್ನು ಬೆಳೆಸುವದಾಗಿದೆ. ಅಲ್ಲದೆ ವಿದ್ಯಾರ್ಥಿಗಳು ಸಮಾಜದಲ್ಲಿ ಸಂತೋಷ ಮತ್ತು ಸಾಮರಸ್ಯದ ಜೀವನ ನಡೆಸುವದಕ್ಕಾಗಿ ತರಬೇತಿಯನ್ನು ಒದಗಿಸುವದಾಗಿದೆ. ಈ ಗುರಿಯನ್ನು ಸಾಧಿಸುವದಕ್ಕಾಗಿ ಶಿಕ್ಷಕರು ಉತ್ತಮ ಬೋಧನಾ ವಿಧಾನಗಳ ಮೂಲಕ ಅವಶ್ಯವಾದಕಲಿಕೆಯ ಅನುಭವಗಳನ್ನು ನೀಡಬೇಕಾಗುತ್ತದೆ.

ಭಾರತದಂತಹ ಪ್ರಜಾಪ್ರಭುತ್ವ ದೇಶದಲ್ಲಿ ವಿದ್ಯಾರ್ಥಿಗಳು ಸಕ್ರೀಯವಾಗಿ ಭಾಗವಹಿಸಲು ಅವಶ್ಯವಿರುವ ಬೌದ್ಧಿಕ ಹಾಗೂ ಸಾಮಾಜಿಕ ಕೌಶಲ್ಯಗಳನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಬೇಕಾಗುತ್ತದೆ. ಅದಕ್ಕಾಗಿ ವಿದ್ಯಾರ್ಥಿಗಳು ಪಾಠದಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳುವಂತಹ ಬೋಧನಾ ವಿಧಾನಗಳನ್ನು ಶಿಕ್ಷಕರು ಉಪಯೋಗಿಸಬೇಕಾಗುತ್ತದೆ. ಈ ದಿಶೆಯಲ್ಲಿ ರಚನಾತ್ಮಕ ಸಿದ್ಧಾಂತ ಆಧಾರಿತ 5 "ಇ" (5 'ಇ')ಮಾದರಿಯು ಹೆಚ್ಚು ಸೂಕ್ತವಾದುದು.

## ರಚನಾತ್ಮಕ ಕಲಿಕೆಯ ಸಿದ್ಧಾಂತ

ರಚನಾತ್ಮಕವಾದದ ಪ್ರಕಾರ ಪ್ರತಿಯೊಬ್ಬ ವ್ಯಕ್ತಿ ಈ ಪ್ರಪಂಚದ ಬಗ್ಗೆ ತನ್ನದೇ ಆದ ವಿಚಾರ, ನಂಬಿಕೆ, ಅಭಿಪ್ರಾಯಗಳನ್ನು ಹೊಂದಿರುತ್ತಾನೆ. ಇವು ಅವನು ಜೀವನದಲ್ಲಿ ಪಡೆದ ಅನುಭವಗಳಿಂದ ರೂಪಗೊಂಡಿರುತ್ತವೆ. ಹೀಗೆ ಮನುಷ್ಯನಚಿತ್ತ ಅವನ ಅನುಭವಗಳ ಸಂಗ್ರಹಣೆಯಾಗಿರುತ್ತದೆ. ವ್ಯಕ್ತಿಯು ಹೊಸ ವಿಷಯ ಅಥವಾ ಅನುಭವಗಳನ್ನು ಎದುರುಗೊಂಡಾಗ ಅವುಗಳನ್ನು ಪೂರ್ವ ಅನುಭವಗಳೊಡನೆ ಹೋಲಿಸುವ ಮೂಲಕ ಹೊಸ ಜ್ಞಾನವನ್ನು ನಿರ್ಮಿಸುತ್ತಾನೆ. ಆದುದರಿಂದ ಜ್ಞಾನವನ್ನುಒಬ್ಬ ವ್ಯಕ್ತಿಯಿಂದ ಮತ್ತೊಬ್ಬ ವ್ಯಕ್ತಿಗೆ ವರ್ಗಾವಣೆಗೊಳಿಸಲು ಸಾಧ್ಯವಿಲ್ಲ. ರಚನಾತ್ಮಕವಾದದ ಪ್ರಕಾರ ಕಲಿಕೆ ಒಂದು ಬೌದ್ಧಿಕ ಮತ್ತು ಸಾಮಾಜಿಕ ಪ್ರಕ್ರಿಯೆಯಾಗಿದೆ. ವಿದ್ಯಾರ್ಥಿಗಳು ತಮ್ಮ ಬೌದ್ಧಿಕ ಶಕ್ತಿಯಿಂದ ಮತ್ತು ಸಾಮಾಜಿಕ ಸಂವಹನದ ಮೂಲಕ ಜ್ಞಾನವನ್ನು ನಿರ್ಮಿಸುತ್ತಾರೆ. ಅದಕ್ಕಾಗಿ ವಿದ್ಯಾರ್ಥಿಗಳಲ್ಲಿ ಬೌದ್ಧಿಕ ಶಕ್ತಿಯನ್ನು ವೃದ್ಧಿಗೊಳಿಸುವ ಮತ್ತು ಸಂವಹನಕ್ಕೆ ಅವಕಾಶವಿರುವ ಕಲಿಕೆಯ ಸನ್ನಿವೇಶವನ್ನು ಒದಗಿಸುವದು ಅಪೇಕ್ಷಣೀಯವಾದುದು.

## 5 ಇ (5 'ಇ') ಮಾದರಿ

5 ಇ ಬೋಧನಾ ಮಾದರಿಯು ರಚನಾತ್ಮಕ ಕಲಿಕೆಯ ಸಿದ್ಧಾಂತದ ಕಲಿಕೆಯ ತತ್ವಗಳನ್ನು ಕಾರ್ಯರೂಪಕ್ಕೆ ತರುವ ಸಾಧನವಾಗಿದೆ. ಇದು ಕಲಿಕೆಯ ಅನುಭವಗಳನ್ನು ಕ್ರಮಬದ್ಧವಾಗಿ ಮತ್ತು ಅರ್ಥಗರ್ಭಿತವಾಗಿ ವಿನ್ಯಾಸಗೊಳಿಸಿ ವರ್ಗಕೋಣೆಯಲ್ಲಿ ಪ್ರಾಯೋಗಿಕವಾಗಿ ಕಾರ್ಯರೂಪಕ್ಕೆ ತರಲು ಸಹಾಯಕವಾಗಿದೆ. ಇದರ 5 ಹಂತಗಳು ಕೆಳಗಿನಂತಿವೆ.

1. ನಿರತಗೊಳಿಸುವಿಕೆ (Engage)
2. ಕುಲಂಕುಶ ಅಧ್ಯಯನ/ಪರಿಶೋಧನೆ (Explore)
3. ವಿವರಣೆ (Explain)
4. ವಿಶದೀಕರಣ (Elaborate)
5. ಮೌಲ್ಯಮಾಪನ (Evaluate)

ಈ ಹಂತಗಳು ವಿದ್ಯಾರ್ಥಿಗಳು ಪಾಠದಲ್ಲಿ ಸಕ್ರೀಯವಾಗಿ ಪಾಲ್ಗೊಂಡು ಜ್ಞಾನ ರಚನೆ ಮಾಡಲು ಅವಶ್ಯವಿರುವ ಸನ್ನಿವೇಶಗಳನ್ನು ಒದಗಿಸುತ್ತವೆ. ಆದುದರಿಂದ ಶಿಕ್ಷಕರು ಪ್ರತಿ ಹಂತದ ಉದ್ದೇಶ ಹಾಗೂ ಪ್ರಾಮುಖ್ಯತೆಯನ್ನು ತಿಳಿದುಕೊಳ್ಳಬೇಕು. ಮತ್ತು ರಚನಾತ್ಮಕ ಕಲಿಕೆಯ ಸಿದ್ಧಾಂತದ ಕಲಿಕೆಯ ತತ್ವಗಳನ್ನು ಮತ್ತು ಸಮಾಜ ವಿಜ್ಞಾನದ ಸ್ವರೂಪವನ್ನುಗಮನದಲ್ಲಿಟ್ಟಕೊಂಡುಕಲಿಕೆಯ ಅನುಭವಗಳನ್ನು ಪ್ರತಿ ಹಂತದಲ್ಲಿ ವಿನ್ಯಾಸಗೊಳಿಸಬೇಕು. ಆದಕ್ಕಾಗಿ 5 ಇ ಮಾದರಿಯ ಪಾಠವನ್ನು ವಿನ್ಯಾಸಗೊಳಿಸಲು ಈ ಕೆಳಗಿನ ಅಂಶಗಳನ್ನು ಗಮನದಲ್ಲಿಡಬೇಕು.

- **ಪಾಠ್ಯಾಂಶದ ಆಯ್ಕೆ :** 5 "ಇ" ಮಾದರಿಯ ಪಾಠ ವಿನ್ಯಾಸಕ್ಕಾಗಿ ಸೂಕ್ತವಾದ ಪಾಠ್ಯಾಂಶದಆಯ್ಕೆ ಮಾಡಿಕೊಳ್ಳಬೇಕು. ವಿಷಯ ಅಥವಾ ಪರಿಕಲ್ಪನೆಯನ್ನು ಆಯ್ಕೆ ಮಾಡಿಕೊಳ್ಳುವಾಗ ಹೊಸ ಪರಿಕಲ್ಪನೆಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳ ಪೂರ್ವಜ್ಞಾನ ಹಾಗೂ ವಿದ್ಯಾರ್ಥಿಗಳ ಸಾಮರ್ಥ್ಯವನ್ನು ಗಮನದಲ್ಲಿಡಬೇಕು. ಆಯ್ಕೆ ಮಾಡಿದ ಪಾಠ್ಯಂಶದಲ್ಲಿ ಪ್ರಮುಖ ಪರಿಕಲ್ಪನೆಗಳನ್ನು, ವಾಖ್ಯಾನಗಳನ್ನು, ಪದಗಳನ್ನು ಗುರುತಿಸಿ ವಿಶ್ಲೇಷಿಸಬೇಕು. ಇದರಿಂದಾಗಿ ಮಾದರಿಯ ವಿವಿಧ ಹಂತಗಳಲ್ಲಿ ವಿದ್ಯಾರ್ಥಿಗಳಿಗೆ ನೀಡಬೇಕಾದ ವಿವಿಧ ಚಟುವಟಿಕೆಗಳನ್ನು ಯೋಜಿಸಲು ಸುಲಭವಾಗುವದು. ಅಲ್ಲದೆ ವಿದ್ಯಾರ್ಥಿಗಳ ಜ್ಞಾನರಚನೆಯನ್ನು ಪರೀಕ್ಷಿಸಲು ಅನುಕೂಲವಾಗುವದು.
- **ಪಾಠದ ಉದ್ದೇಶಗಳನ್ನು ಕ್ರಮ ಕ್ರಿಯಾಪದಗಳಲ್ಲಿ (action verbs) ನಿರೂಪಿಸಬೇಕು/ವ್ಯಕ್ತಪಡಿಸಬೇಕು :** ಪಾಠದ ಉದ್ದೇಶಗಳನ್ನು ಬ್ಲೂಮ ಮತ್ತು ಕ್ರೇತವಾರ ಹೊಸ ವರ್ಗೀಕರಣದಲ್ಲಿ ನಿರೂಪಿಸಲಾದಕ್ರಮ ಕ್ರಿಯಾಪದಗಳನ್ನು ಉಪಯೋಗಿಸಿ ನಿರೂಪಿಸಬೇಕು. ಏಕೆಂದರೆ ರಚನಾತ್ಮಕ ಕಲಿಕೆಯ ಸಿದ್ಧಾಂತದ ಪ್ರಕಾರ ವಿದ್ಯಾರ್ಥಿಗಳು ಬೌದ್ಧಿಕ ಚಟುವಟಿಕೆಗಳ ಮೂಲಕ ಹೊಸ ಜ್ಞಾನ ರಚನೆಯನ್ನು ಮಾಡುವರು. ಅದಕ್ಕಾಗಿ ಬ್ರೂಕ್ ಮತ್ತು ಬ್ರೂಕ್‌ರ ಪ್ರಕಾರ ಕಲಿಕೆಯ ಚಟುವಟಿಕೆಗಳನ್ನು ವಿವಿಧ ಬೌದ್ಧಿಕ ಕೌಶಲ್ಯಗಳಾದ ವಿಶ್ಲೇಷಣೆ, ವರ್ಗೀಕರಣ, ಹೋಲಿಸುವದು, ವ್ಯತ್ಯಾಸಗೊಳಿಸುವದು, ವಿಭಿನ್ನಗೊಳಿಸುವಿಕೆ, ಊಹೆ ಮಾಡುವಿಕೆಯಂತಹ ಚಟುವಟಿಕೆಗಳೊಡನೆ ಹೆಣೆಯುವದು ಅವಶ್ಯವಾಗಿರುತ್ತದೆ.
- **ಚಟುವಟಿಕೆಗಳ ಸಂಘಟನೆ :** ಪಾಠದ ಉದ್ದೇಶಗಳನ್ನು ಮತ್ತು 5 'ಇ' ಮಾದರಿಯ ಪ್ರತಿ ಹಂತದ ಉದ್ದೇಶಗಳು ಮತ್ತು ತತ್ವಗಳನ್ನು

ಗಮನದಲ್ಲಿಟ್ಟುಕೊಂಡು ಕಲಿಕೆಯ ಚಟುವಟಿಕೆಗಳನ್ನು ಪ್ರತಿ ಹಂತದಲ್ಲಿ ಯೋಜಿಸಬೇಕು. 5 ಇ ಮಾದರಿಯ ಹಂತಗಳು ಒಂದಕ್ಕೊಂದು ಸಂಬಂಧ ಹೊಂದಿವೆ ಎಂಬುದನ್ನು ಶಿಕ್ಷಕರು ಗಮನವಿಡಬೇಕು.

## 1. ನಿರತಗೊಳಿಸುವಿಕೆ (Engage)

ಈ ಹಂತದ ಮುಖ್ಯಉದ್ದೇಶ ವಿದ್ಯಾರ್ಥಿಗಳ ಪೂರ್ವ ಜ್ಞಾನವನ್ನು ಅರಿಯುವದು. ಏಕೆಂದರೆ ರಚನಾತ್ಮಕ ಕಲಿಕೆಯ ಸಿದ್ಧಾಂತದ ಪ್ರಕಾರ ವಿದ್ಯಾರ್ಥಿಗಳು

ಹೊಸ ವಿಷಯ ಅಥವಾ ಅನುಭವಗಳನ್ನು ಎದುರುಗೊಂಡಾಗ ಅವುಗಳನ್ನು ಪೂರ್ವ ಅನುಭವಗಳೊಡನೆ ಹೋಲಿಸುವ ಮೂಲಕ ಹೊಸ ಜ್ಞಾನವನ್ನು ನಿರ್ಮಿಸುತ್ತಾರೆ. ಇದರಿಂದಾಗಿ ವಿದ್ಯಾರ್ಥಿಗಳ ಪೂರ್ವ ಜ್ಞಾನವನ್ನು ಅರಿಯಲು ಸಹಾಯವಾಗುವಂತಹ ಚಟುವಟಿಕೆಗಳಲ್ಲಿ ಅವರನ್ನು ನಿರತಗೊಳಿಸುವದು 5 ಇ ಮಾದರಿಯ ಪ್ರಥಮ ಹಂತವಾದ ನಿರತಗೊಳಿಸುವಿಕೆಯ ಉದ್ದೇಶವಾಗಿದೆ. ಅದಕ್ಕಾಗಿ ಶಿಕ್ಷಕರು ಆಯ್ದುಕೊಂಡ ಪಾಠ್ಯಂಶಕ್ಕೆ ಸಂಬಂದಿಸಿದಂತೆ ವಿದ್ಯಾರ್ಥಿಗಳ ಪೂರ್ವ ಜ್ಞಾನವನ್ನು ತಿಳಿಯಲು ಅವರನ್ನು ವಿವಿಧ ಚಟುವಟಿಕೆಗಳಲ್ಲಿ ನಿರತಗೊಳಿಸಬೇಕು. ವಿದ್ಯಾರ್ಥಿಗಳ ಪೂರ್ವ ಜ್ಞಾನಕ್ಕೆ ಸಂಬಂದಿಸಿದ ವಿಷಯದ ಮೇಲೆ ಪ್ರಶ್ನೆಗಳನ್ನು ಕೇಳುವದು ಅಥವಾ ಚರ್ಚೆ ಮಾಡುವದು, ದೃಕ್ ಶ್ರವಣ ಉಪಕರಣಗಳನ್ನು ಉಪಯೋಗಿಸುವದು ಅಥವಾ ತಂತ್ರಜ್ಞಾನದ ಸಾಧನಗಳನ್ನು ಉಪಯೋಗಿಸುವದರ ಮೂಲಕ ಅವರನ್ನು ಚಟುವಟಿಕೆಗಳಲ್ಲಿ ನಿರತವಾಗುವಂತೆ ಮಾಡಬಹುದು.ಪಾಠಕ್ಕೆ ಸಂಬಂಧಿಸಿದಂತೆ ಸೂಕ್ತವಾದ ಚಟುವಟಿಕೆಗಳನ್ನು ಶಿಕ್ಷಕರು ಪೂರ್ವ ನಿಯೋಜಿತವಾಗಿ ಯೋಜಿಸಬೇಕು. ಇದು ವಿದ್ಯಾರ್ಥಿಗಳು ಜ್ಞಾನರಚನೆಯ ಪ್ರಕ್ರಿಯೆಯಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳಲು ಸಹಾಯ ಮಾಡುವದು.

## 2. ಕುಲಂಕುಶ ಅಧ್ಯಯನ/ ಪರಿಶೋಧನೆ (Explore)

5 ಇ ಮಾದರಿಯ ಎರಡನೆ ಹಂತವಾದ ಪರಿಶೋಧನೆಯ ಮುಖ್ಯಉದ್ದೇಶ ಹೊಸ ವಿಷಯಕ್ಕೆ ಸಂಬಂದಿಸಿದಂತೆ ಸಂಪೂರ್ಣ ತಿಳುವಳಿಕೆಯನ್ನು ಬೆಳೆಸಲು ವಿದ್ಯಾರ್ಥಿಗಳನ್ನು ವಿಷಯದ ಕುಲಂಕುಶ ಅಧ್ಯಯನದಲ್ಲಿ ನಿರತಗೊಳಿಸುವದು. ಅಲ್ಲದೆ ಹೊಸ ಪರಿಕಲ್ಪನೆಗಳ ಕುರಿತು ಹೊಸ ಅನುಭವಗಳನ್ನು ಒದಗಿಸುವದು, ಹೊಸ ಕೌಶಲ್ಯಗಳನ್ನು ಬೆಳೆಸುವದು, ವಿವಿಧ ಪರಿಕಲ್ಪನೆಗಳ ಮಧ್ಯ ಸಂಬಂಧವನ್ನು ಗುರುತಿಸಲು ಅವಶ್ಯವಾದ ಸನ್ನಿವೇಶಗಳನ್ನು ಒದಗಿಸುವದಾಗಿದೆ. ಇಲ್ಲಿ ಶಿಕ್ಷಕ ಮಾರ್ಗದರ್ಶಕನಂತೆ ಮತ್ತು ಒಬ್ಬ ಅವಲೋಕನಾಗಿ ಪಾತ್ರ ನಿರ್ವಹಿಸಬೇಕು. ಅಲ್ಲದೆ ವಿಷಯದ ಕುಲಂಕುಶ ಅಧ್ಯಯನಕ್ಕೆ ಸಹಾಯಕಾರಿಯಾಗುವ ಪ್ರಶ್ನೆಗಳನ್ನು ಕೇಳಬೇಕು. ಮತ್ತು ಸಮಯವನ್ನು ನೀಡಬೇಕು. ರಚನಾತ್ಮಕ ಕಲಿಕೆಯ ಸಿದ್ಧಾಂತದ ಪ್ರಕಾರ ಅರ್ಥಗರ್ಭಿತ ಕಲಿಕೆ ಅಧಿಕೃತ ಚಟುವಟಿಕೆಗಳ ಮೂಲಕ ಮತ್ತು ನೈಜ ಸನ್ನಿವೇಶದಲ್ಲಿ ಸಂಭವಿಸುವದು. ಅದಕ್ಕಾಗಿ ಈ ಹಂತದಲ್ಲಿ ವಿಷಯದ ಕುಲಂಕುಶ ಅಧ್ಯಯನಕ್ಕೆ ಸಹಾಯವಾಗುವಂತಹ ಚಟುವಟಿಕೆಗಳನ್ನು ರಚನಾತ್ಮಕ ಕಲಿಕೆಯ ಸಿದ್ಧಾಂತದ ನಿಯಮಗಳನ್ನು ಗಮನದಲ್ಲಿಟ್ಟುಕೊಂಡು ವ್ಯವಸ್ಥಿತವಾಗಿ ಸಂಘಟಿಸಬೇಕು.

ಸಮಾಜ ವಿಜ್ಞಾನವು ಸಾಮಾಜಿಕ ತಥ್ಯಗಳ, ಸಮಸ್ಯೆಗಳ ಅಧ್ಯಯನವಾಗಿದೆ. ಈ ಸಾಮಾಜಿಕ ತಥ್ಯಗಳನ್ನು ಮತ್ತು ಸಮಸ್ಯೆಗಳನ್ನು ನೈಜ ಸನ್ನೀವೇಶದಲ್ಲಿ ಸರಿಯಾಗಿ ಅರ್ಥೈಸಿಕೊಳ್ಳಬಹುದು. ಅದಕ್ಕಾಗಿ ಶಿಕ್ಷಕರು ಜ್ಞಾನ ರಚನೆಗಾಗಿ ನೈಜ ಸನ್ನೀವೇಶಗಳನ್ನು ಒದಗಿಸಬೇಕು. ವಿಷಯಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ಆಕರ ಗ್ರಂಥಗಳ, ಪಠ್ಯಪುಸ್ತಕಗಳ ಅಧ್ಯಯನ, ಸರಕಾರಿ ವರದಿಗಳ ಅಧ್ಯಯನ, ವರ್ತಮಾನ ಪತ್ರಿಕೆಗಳ ಅವಲೋಕನ, ಅಂತರ್ಜಾಲದಿಂದ ಮಾಹಿತಿಯ ಶೇಕರಣೆ, ಸಮುದಾಯದಲ್ಲಿ ವಿಷಯಕ್ಕೆ ಸಂಬಂಧಿಸಿದ ವ್ಯಕ್ತಿಗಳಿಂದ ವಿಷಯವನ್ನು ಸಂಗ್ರಹಿಸಲು ವಿದ್ಯಾರ್ಥಿಗಳಿಗೆ ಪ್ರೇರೇಪಿಸಬೇಕು. ಅದಕ್ಕಾಗಿ ವಿದ್ಯಾರ್ಥಿಗಳು ಪರಾಮರ್ಶಿಸಬೇಕಾದ ಗ್ರಂಥಗಳ ಉಲ್ಲೇಖವನ್ನು ಯೋಜನೆಯಲ್ಲಿ ಮಾಡಬೇಕು.

ಉದಾಹರಣೆಗೆ ಭಾರತದ ಜನಸಂಖ್ಯಾ ಬೆಳವಣಿಗೆ ಹಾಗೂ ಅದರ ಸಮಸ್ಯೆಗಳ ಅಭ್ಯಾಸಕ್ಕಾಗಿ ಶಿಕ್ಷಕರು ಭಾರತದ ಜನಗಣತಿಯ ವರದಿಯನ್ನು ಅಧ್ಯಯನ ಮಾಡಿ ಪರಿಹಾರಗಳನ್ನು ಸೂಚಿಸಲು ವಿದ್ಯಾರ್ಥಿಗಳಿಗೆ ಹೇಳಬಹುದು.

ರಚನಾತ್ಮಕ ಕಲಿಕೆಯ ಸಿದ್ಧಾಂತದ ಪ್ರಕಾರ ಜ್ಞಾನ ರಚನೆ ಒಂದು ಬೌದ್ಧಿಕ ಮತ್ತು ಸಾಮಾಜಿಕ ಪ್ರಕ್ರಿಯೆಯಾಗಿದೆ. ಆದ್ದರಿಂದ ಪಾಠಯೋಜನೆಯಲ್ಲಿ ವಿದ್ಯಾರ್ಥಿಗಳ ವಿಚಾರಶಕ್ತಿಯನ್ನು ಪ್ರಚೋದಿಸುವ ಪ್ರಶ್ನೆಗಳನ್ನು ಉಲ್ಲೇಖಿಸಬೇಕು ಮತ್ತು ಅವರು ತಮ್ಮ ಸಹಪಾಠಿಗಳೊಡನೆ ವಿಚಾರ ವಿನಿಮಯ ಮಾಡಲು ಅವಕಾಶವನ್ನು ನೀಡುವ ಸನ್ನಿವೇಶಗಳನ್ನು ಉಲ್ಲೇಖಿಸಬೇಕು. ಅದಕ್ಕಾಗಿ ವಿದ್ಯಾರ್ಥಿಗಳ ವಿಚಾರ ವಿನಿಮಯಕ್ಕೆ ಅವಕಾಶ ನೀಡುವ ರಚನಾತ್ಮಕ ಬೋಧನಾ ತಂತ್ರಗಳಾದ ಸಮಸ್ಯಾ ಪರಿಹಾರ ಪದ್ಧತಿ, ಸಹಕಾರಿ ಕಲಿಕೆಯ ತಂತ್ರ,

ಬ್ರೇನ್ ಸ್ಟ್ರಾಮಿಂಗ್ (brain storming) ತಂಡ ಅನ್ವೇಷಣೆಯಂತಹ (group inquiry) ತಂತ್ರಗಳು ಹೆಚ್ಚು ಸೂಕ್ತವಾಗಿವೆ. ಇಂತಹ ಬೋಧನಾ ತಂತ್ರಗಳು ವಿದ್ಯಾರ್ಥಿಗಳ ಜ್ಞಾನವನ್ನು ವೃದ್ಧಿಗೊಳಿಸುವ ಜೊತೆಗೆ ಅವರಲ್ಲಿ ಸಾಮಾಜಿಕ ಕೌಶಲ್ಯಗಳನ್ನು ಬೆಳೆಸುತ್ತವೆ.

## 3. ವಿವರಣೆ (Explain)

5 'ಇ' ಮಾದರಿಯ ವಿವರಣೆ ಹಂತದ ಪ್ರಮುಖ ಉದ್ದೇಶ ವಿದ್ಯಾರ್ಥಿಗಳಿಗೆ ಪರಿಶೋಧನೆಯ ಹಂತದಲ್ಲಿ ಸಂಗ್ರಹಿಸಿದ ಮಾಹಿತಿಯನ್ನು ವಿವರಿಸಲು ಅಥವಾ ಪ್ರಸ್ತುತಪಡಿಸಲು ಅವಕಾಶ ನೀಡುವದು ಮತ್ತು ಇತರರ ವಿವರಣೆಯನ್ನು ಆಲಿಸಿ ಪ್ರತಿಕ್ರಿಯೆಯನ್ನು ನೀಡಬೇಕಾಗುವದು. ಈ ಹಂತದಲ್ಲಿ ವಿದ್ಯಾರ್ಥಿಗಳು ತಾವು ಅರಿತುಕೊಂಡ ವಿಷಯವನ್ನು ಸರಳವಾಗಿ ಎಲ್ಲರಿಗೂ ಅರ್ಥವಾಗುವ ರೀತಿಯಲ್ಲಿ ವಿವರಿಸಬೇಕು/ ಪ್ರಸ್ತುತಪಡಿಸಬೇಕು. ಈ ಹಂತ ವಿದ್ಯಾರ್ಥಿಗಳ ಜ್ಞಾನ ರಚನೆ ಹಾಗೂ ಅವರ ಪರಿಕಲ್ಪನೆಯನ್ನು ಅರ್ಥೈಸುವಿಕೆಯಲ್ಲಿಯ ಲೋಪಗಳನ್ನು ಗುರುತಿಸುವಲ್ಲಿ ಶಿಕ್ಷಕರಿಗೆ ಸಹಾಯಕವಾಗುವದು. ಆದ್ದರಿಂದ ವಿದ್ಯಾರ್ಥಿಗಳು ವಿಷಯದ ವಿವರಣೆಯನ್ನು ವಿಷಯದ ಸ್ವರೂಪಕ್ಕನುಗುಣವಾಗಿ ವಿವಿಧ ರೀತಿಯ ತಂತ್ರಗಳ ಮೂಲಕ ಪ್ರಸ್ತುತಪಡಿಸಲು ಅಂದರೆ ನಾಟಕೀಕರಣ, ಪಾತ್ರ ನಿರ್ವಹಣೆ, ಪವರ್ ಪಾಯಿಂಟ್, ದೃಕ್ ಶ್ರವಣ ಉಪಕರಣಗಳ ಉಪಯೋಗದ ಮೂಲಕ ಪ್ರಸ್ತುತಪಡಿಸಲು ಅವಕಾಶ ನೀಡಬೇಕು. ವಿದ್ಯಾರ್ಥಿಗಳ ವಿವರಣೆಯ ನಂತರ ಶಿಕ್ಷಕರು ಪ್ರಮುಖ ಪರಿಕಲ್ಪನೆಗಳನ್ನು ದೃಕ್ ಶ್ರವಣ ಉಪಕರಣಗಳ ಸಹಾಯದಿಂದ ವಿವರಿಸಬೇಕು ಮತ್ತು ವಿದ್ಯಾರ್ಥಿಗಳ ತಪ್ಪು ತಿಳುವಳಿಕೆಯನ್ನು ಹೋಗಲಾಡಿಸಬೇಕು. ಇದಕ್ಕಾಗಿ ಶಿಕ್ಷಕರು ಸಮರ್ಪಕ ರೀತಿಯಲ್ಲಿ ಯೋಜಿಸಬೇಕು.

## 4. ವಿಶದೀಕರಣ (Elaborate)

ಈ ಹಂತದ ಉದ್ದೇಶ ವಿದ್ಯಾರ್ಥಿಗಳು ರಚಿಸಿದ ಜ್ಞಾನವನ್ನು ನೈಜ ಸನ್ನಿವೇಶಗಳಲ್ಲಿ ಅನ್ವಯಿಸಲು ಅವರಿಗೆ ಅವಕಾಶ ನೀಡುವದು. ಆದ್ದರಿಂದ ಈ ಹಂತದಲ್ಲಿ ಚಟುವಟಿಕೆಗಳನ್ನು ಯೋಜಿಸುವಾಗ ಶಿಕ್ಷಕರು ರಚನಾತ್ಮಕ ಕಲಿಕಾ ಸಿದ್ಧಾಂತದ ತತ್ವಗಳನ್ನು ನೆನಪಿನಲ್ಲಿಡಬೇಕು. ಅದೇನಂದರೆ,

*– 71ನೇ ಪುಟಕ್ಕೆ ಮುಂದುವರೆದುದು*

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಆಧುನಿಕ ಕನ್ನಡ ಕಥಾ ಸಾಹಿತ್ಯ – ವರ್ಗ ಸಂಘರ್ಷ

✍ ಪ್ರೊ. ಸಿದ್ಧಲಿಂಗೇಶ ಉ. ಸಜ್ಜನಶೆಟ್ಟರ್, ಕನ್ನಡ ಸಹಾಯಕ ಪ್ರಾಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಗದಗ.

## ಪೀಠಿಕೆ

ಕನ್ನಡ ಸಾಹಿತ್ಯ ತನ್ನದೆ ಆದ ವಿಶಿಷ್ಟ ಪ್ರಾಚೀನ ಇತಿಹಾಸವನ್ನು ಒಳಗೊಂಡು ಬಂದಿದೆ. ಪೂರ್ವದ ಹಳೆಗನ್ನಡ, ಹಳೆಗನ್ನಡ, ನಡುಗನ್ನಡ, ಹೊಸಗನ್ನಡ ಪ್ರಕಾರಗಳಲ್ಲಿ ಹೊಸಗನ್ನಡ ಸಾಹಿತ್ಯ ಪ್ರಕಾರವು ವಿಭಿನ್ನತೆಯಿಂದ ಹಲವು ಘಟ್ಟಗಳಲ್ಲಿ ಹೊಸ ನೆಲೆ ಹಾಗೂ ಆಯಾಮಗಳಲ್ಲಿ ಈ ಪ್ರಕಾರವು ಬೆಳೆದು ಬಂದಿತು. ಕಾದಂಬರಿ, ಪ್ರವಾಸ ಕಥನ, ಆತ್ಮಚರಿತ್ರೆ, ಕಾವ್ಯ, ನಾಟಕ, ಪ್ರಬಂಧ, ನಗೆ ಬರಹಗಳು ಜೊತೆ ಜೊತೆಗೆ ಜನಪ್ರಿಯವಾದ ಒಂದು ಪ್ರಕಾರವೆಂದರೆ ಅದು ಕಥಾ ಸಾಹಿತ್ಯ. ಕನ್ನಡದಲ್ಲಿ ಸಣ್ಣಕಥೆ ಒಂದು ವಿಶಿಷ್ಟ ರೂಪವಾಗಿ ಜನ್ಮ ತಾಳಿದುದು ಸುಮಾರು ನೂರು ವರ್ಷಗಳ ಕಾಲದ ಹಿಂದೆಯೆ ಸಣ್ಣ ಕಥೆಗಳಿಗೆ ವಿಶಿಷ್ಟ ರೂಪವನ್ನು ಕೊಟ್ಟವರು, ಚಾರಿತ್ರಿಕವಾಗಿ ಮೊಟ್ಟ ಮೊದಲು ಕಥೆಗಳನ್ನು ಬರೆದವರು ಕೆರೂರು ವಾಸುದೇವಾಚಾರ್ಯರು, ಪಂಜೆಮಂಗೇಶರಾಯರು, ಎಂ.ಎನ್.ಕಾಮತ್, ಕಡೆಂಗೋಡಲ್ಲ ಶಂಕರಭಟ್ಟರು, ಎ.ಆರ್. ಕೃಷ್ಣಶಾಸ್ತ್ರಿ, ಅ.ನ.ಕೃ. ತ.ರಾ.ಸು ಮುಂತಾದವರೊಂದಿಗೆ ಪಾಶ್ಚಾತ್ಯ ಸಾಹಿತ್ಯದ ಜೊತೆಗೆ ಕನ್ನಡ ಮತ್ತು ಸಂಸ್ಕೃತ ಭಾಷೆಯ ಪರಂಪರೆಯನ್ನು ಸ್ಪಷ್ಟವಾಗಿ ಬಲ್ಲವರಾಗಿದ್ದ ಮಾಸ್ತಿಯವರು ಆಧುನಿಕ ಕಥಾ ಸಾಹಿತ್ಯವನ್ನು ಜನಪ್ರೀಯಗೊಳಿಸಿದರು.

ಇದೆ ಪರಂಪರೆಯಲ್ಲಿ ಆಧುನಿಕ ಕಥಾ ಸಾಹಿತ್ಯವನ್ನು ಮುನ್ನಡಿಸಿ ಕೊಂಡು ಬಂದಿರುವ ಸಾವಿರಾರು ಕಥೆಗಾರರು ಕಾಣಸಿಗುತ್ತಾರೆ. ನವೋದಯ, ಪ್ರಗತಿಶೀಲ, ನವ್ಯ, ದಲಿತ, ಬಂಡಾಯ ಹೀಗೆ ಅವಸ್ಥಾಂತರಗಳನ್ನು ಕಂಡಂತೆ ಕನ್ನಡ ಸಣ್ಣ ಕಥಾ ಪ್ರಪಂಚ ಕಾಲ ಘಟ್ಟಕ್ಕೆ ಹೊಂದಿಕೊಂಡಂತೆ ವಿಸ್ತರಿಸುತ್ತಾ ಹೋಗುವುದಲ್ಲದೆ ಆಯಾ ಕಾಲದ ಸ್ಪಂದನಕ್ಕೆ ಜೀವಂತವಾಗಿ ಉಳಿಯಿತು. ಕನ್ನಡ ಸಾಹಿತ್ಯದಲ್ಲಿ ಪ್ರಗತಿಶೀಲತೆಯ ಚಳುವಳಿ ಸಣ್ಣ ಕಥೆಯಿಂದಲೇ ಆರಂಭವಾಯಿತೆಂದರೆ ತಪ್ಪೆನಿಸುವುದಿಲ್ಲ.

ಕನ್ನಡದಲ್ಲಿ 'ಸಂಗ' ಮತ್ತು 'ಸಂಘ'ಗಳಿದ್ದು ಈ ಎರಡರಲ್ಲಿ ಸಂಘ ಜನಾಂಗವನ್ನು ಸೂಚಿಸುತ್ತದೆ. ಜನಾಂಗ ಜನಾಂಗಗಳ ಮದ್ಯೆ ಹಿಂದಿನಿಂದಲೂ ಸಂಘರ್ಷಗಳು ನಡೆದಿರುವುದನ್ನು ಕಾಣಬಹುದು. ಆಧುನಿಕ ಕನ್ನಡ ಕಥಾ ಸಾಹಿತ್ಯದಲ್ಲಿ ಉಳಿದ ಘಟ್ಟಗಳಿಗಿಂತ ಪ್ರಗತಿಶೀಲ, ದಲಿತ–ಬಂಡಾಯದಲ್ಲಿ ಕೆಲವೊಂದಿಷ್ಟು ಬದಲಾವಣೆಗಳನ್ನು ಕಾಣುತ್ತೇವೆ. ಸಮಾಜದಲ್ಲಿ ತಾಂಡವವಾಡುತ್ತಿದ್ದ ವರ್ಗ ಸಂಘರ್ಷ, ಶೋಷಣೆ, ಅಸಮಾನತೆಯ ವಿರುದ್ದ ಬರವಣಿಗೆಗೆ ಹೆಚ್ಚು ವೇಗ ಮೊನಚು ಬಂತು. ಸಂಭಾಷಣೆಗಳಲ್ಲಿ ಆಡು ಮಾತಿನ ಬಳಕೆ ಹೆಚ್ಚಾಯಿತು. ತೇಜಸ್ವಿ, ಬರಗೂರು ರಾಮಚಂದ್ರಪ್ಪ, ಸಿದ್ದಲಿಂಗಯ್ಯನವರು, ಶಿವರಾಮ ಕಾರಂತರು, ದೇವನೂರ ಮಹಾದೇವರು, ಕುಂ.ವೀರಭದ್ರಪ್ಪ, ಸಾ.ರಾ.ಅಬೂಬಕ್ಕರ, ಅರವಿಂದ ಮಾಲಗಿತ್ತಿ, ನಿರಂಜನ ಹೀಗೆ ಹಲವಾರು ಕವಿಗಳು ಸಮಾಜದಲ್ಲಿರುವ ಈ ವರ್ಗ ಸಂಘರ್ಷವನ್ನು ತಮ್ಮ ಕಥೆಗಳ ಮೂಲಕ ತಿಳಿಹೇಳಿದ್ದಾರೆ. ಆ ಹಿನ್ನಲೆಯಲ್ಲಿ ಆಧುನಿಕ ಕಥಾ ಸಾಹಿತ್ಯದಲ್ಲಿ ವರ್ಗ ಸಂಘರ್ಷವನ್ನು ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಹಿನ್ನಲೆಯಲ್ಲಿ ಇಲ್ಲಿ ಚರ್ಚಿಸಲಾಗಿದೆ.

'ಕತ್ತಲನು ತ್ರಿಶುಲ ಹಿಡಿದ ಕಥೆ' ಕುಂ.ವೀರಭದ್ರಪ್ಪನವರ ಈ ಕಥೆಯು ಸಂಪೂರ್ಣ ವರ್ಗ ಸಂಘರ್ಷದೊಂದಿಗೆ ಸಾಗುತ್ತದೆ. ಹಸುವಿನ ಪ್ರಸಂಗವನ್ನು ಶಿಷ್ಟ ಸಮಾಜ ಗ್ರಹಿಸುವ ರೀತಿಗೂ ಕತ್ತಲನೂ ಗ್ರಹಿಸುವ ಕ್ರಮಕ್ಕೂ ಇರುವ ವ್ಯತ್ಯಾಸಗಳಲ್ಲೇ ವರ್ಗ ಸಂಘರ್ಷ ಸಮಾಜದ ವೈರುದ್ಯಗಳನ್ನು ಬಿಚ್ಚಿಡುತ್ತದೆ. ಕತ್ತಲನು ಬದುಕುತ್ತಿರುವುದು ಗೌಡ್ರ ಓಣಿ, ಕ್ವಾಂಟ್ರ ಓಣಿ, ಬಣಜಿಗರ ಓಣಿಗಳ ಜೊತೆ ಜೊತೆಗೆ ಹಸುವಿನಿಂದ ಬಳಲಿದರೂ ಯಾರೂ ಅವನಿಗೆ ಅನ್ನವನ್ನು ನೀಡದೆ ಇರುವುದು, ಕಾಗೆಗಳೂ ಒಂದಗಳಿಗೆ ನಡೆಸುವ ಆ ಕಸರತ್ತನ್ನು ನೋಡಿ ತಾನೂ ಕಾಗೆ ಯಾಕಾಗಬಾರದಾಗಿತ್ತು. ಮನುಷ್ಯನಾಗಿ ಹುಟ್ಟಬಾರದಿತ್ತು ಎಂದು ಹಸಿದ ಹೊಟ್ಟೆಯನ್ನು ಬಯ್ಯುತ್ತಾ ಸಾಗುವ ಅವನ ಮನಸ್ಸು ಉಳ್ಳವರ ವಿರುದ್ಧ ಸಿಡಿದೆಳುತ್ತಿತ್ತು. ಹಸಿವಿನಿಂದ ಬಳಲಿದ ಕತ್ತಲ ಗೌಡ್ರ ಮನೆಯಲ್ಲಿ ಬಕಪಕ್ಷಿಯ ಹಾಗೆ ಕಾದು ಕುಳಿತರೂ ಏನೂ ಪ್ರಯೋಜನವಾಗಲಿಲ್ಲ. ಕೊನೆಗೆ ಆ ಊರಿನ ಹೋರಗಿರುವ ಗುಡಿಗೆ ಬಂದು ನೋಡಿದ ಒಳಗಡೆ ತುಪ್ಪದ ದೀಪದ ಬೆಳಕಿನಲ್ಲಿ ದಕ್ಷಣೆ ಕಾಸು ಎಣಿಸುತ್ತಾ ಕೂತಿದ್ದ ಪೂಜಾರಿಗೆ ಯಾವ ಕಡೆ ಧ್ಯಾಸ ಇರಲಿಲ್ಲ ಸಹಸ್ರಾರು ನೊಣಗಳ ಆಕ್ರಮಣಕ್ಕೆ ತುತ್ತಾಗಿ ಹೋಳಿಗೆ ಹುಗ್ಗಿ ಮತ್ತು ಅನ್ನದ ರಾಸಿ ನೋಡಿದ ಕತ್ತಲನು ನಾನು ನೋಣವಾಗಬಾರದಿತ್ತೆ ಎಂದುಕೊಳ್ಳುತ್ತಾನೆ. ಎರಡು ದಿನದಿಂದ ಉಂಡಿಲ್ಲ ಪರಸಾದ ಕೊಡ್ರಿ ಎಂದು ಕೈ ಚಾಚುವಾಗಿನ ಅವನ ಮನಸ್ಥಿತಿಗೂ ನಿಮ್ಮಂತವರಿಗಲ್ಲಾ ಆ ಪ್ರಸಾದ ಎಂದು ಪೂಜಾರಿಯೂ ಆ ಪರಸಾದವನ್ನು ಕೊಡದೆ ಇದ್ದಾಗ ಅವನ ಮನಸ್ಥತಿ ಸಂಘರ್ಷದ ಕಡೆಗೆ ಹೊರಳುತ್ತದೆ ಪರಸಾದ ಅಂತೆ ಪರಸಾದ ಅಂದವನೆ ಪೂಜಾರಿಯನ್ನು ಆಚೆ ತಳ್ಳಿ ಒಳನುಗ್ಗಿ "ಅಡ್ಡ ಯಾವೊನಾದ್ರೂ ಬಂದ್ರೆ ಈ ತ್ರಿಶೂಲದಿಂದ ಇರ್ದುಬುಡ್ತಿನಿ" ಅಂತ ಕತ್ತಲ ಒಮ್ಮೆ ಗಟ್ಟಿಯಾಗಿ ಎಚ್ಚರಿಸು ಪರಿಯನ್ನು ಕಥೆಗಾರರು ವರ್ಗ ಸಂಘರ್ಷದ ಮೂಲವನ್ನು ಬಿಚ್ಚಿಡುತ್ತಾರೆ.

'ಡಾಂಬರು ಬಂದುದು' ದೇವನೂರು ಮಹಾದೇವ ಅವರ ಈ ಕಥೆಯ ಶೈಲಿಯು ಕನ್ನಡ ಸಣ್ಣ ಕಥೆಗಳಲ್ಲಿಯೆ ಹೊಸ ಆಯಾಮದ ಜೊತೆಗೆ ಆಡುಮಾತಿನಲ್ಲಿ ಬಳಸುವ ಪದ, ಉದ್ಗಾರಗಳು ಸಾಹಿತ್ಯದಲ್ಲಿ ಹೊಸ ಸಂಚಲನವನ್ನೆ ಎಬ್ಬಿಸಿತು. ಜಮೀನ್ದಾರ ಮತ್ತು ಅವರನ್ನೆ ನಂಬಿರುವ ಜನರ ನಡುವೆ ನಡೆಯುವ ಸಂಘರ್ಷವನ್ನು ಎತ್ತಿ ತೋರಿಸುವ ಈ ಕಥೆಯು ಜಮೀನ್ದಾರ ಹೇಳಿದ್ದನ್ನು ನಂಬುವ ಮತ್ತು ಆರಾಧಿಸುವ ಜನರು ಆದರೆ ದೇವರು, ದೇವಸ್ಥಾನದ ಹೆಸರಲ್ಲಿ ಮೋಸ ಮಾಡುವ ಮತ್ತು ಮೋಸ ಹೋಗುವ ಜನರೂ, ಪಟೇಲರು ಹಳ್ಳಿಗೆ ಡಾಂಬರು ರಸ್ತೆ ಮಾಡಿಸಲು ಹಣ ಮಂಜೂರು ಮಾಡಿಸಿಕೊಂಡು ರಸ್ತೆಯ ಕೆಲಸದಲ್ಲಿ ಹಣ ಉಳಿಸಿ ಊರಿನ ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ ಬಳಸಲು ಅಣಿಯಾಗುತ್ತಾನೆ. ದೇವಸ್ಥಾನದ ಹೆಸರಲ್ಲಿ ಬಂದ ಹಣವನ್ನೆಲ್ಲಾ ಲೊಟಿ ಮಾಡುವುದನ್ನು ಪ್ರಶ್ನಿಸುವ ಲಕುಮ, ರಾಜಪ್ಪ, ಮಾದು, ಶಂಭು ಎನ್ನುವ ಹುಡುಗರು ಪಟೇಲರ ಕೃತ್ಯವನ್ನು ಪತ್ರಿಕೆಗೆ ಪತ್ರ ಬರೆದು ಕಳುಹಿಸುತ್ತಾರೆ. ಈ ಯುವಕರೆಲ್ಲರೂ ಮೈಸೂರಿನಲ್ಲಿ ಓದಿ ಬಂದ ವಿದ್ಯಾವಂತರಾಗಿದ್ದರು. ಪಂಚಾಯಿತಿಯಲ್ಲಿ ಶಂಭು ಜಮೀನ್ದಾರರನ್ನು ಪ್ರಶ್ನಿಸಿದಾಗ ಪಟೇಲರು ಕೈ ಬಿಗಿ ಹಿಡಿದುಕೊಂಡು ತಟಕ್ಕನ ಎದ್ದು ನಿಲ್ಲುತ್ತಾರೆ. ಆ ರಭಸಕ್ಕೆ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಲಾಟೀನಿಗೆ ಬಡೆದು ಗಾಜು ಒಡೆದು ಟಳ ಟಳ ನೆಲಕ್ಕೆ ಉದುರಿತು. ಇಲ್ಲಿ ಸಿಟ್ಟಿನ ತೀವ್ರತೆಯನ್ನು ಕಾಣಬಹುದು.

ಇಲ್ಲಿ ಜಮೀನ್ದಾರರನ್ನು ಮೊದಲ ಬಾರಿಗೆ ಧೈರ್ಯದಿಂದ ಪ್ರಶ್ನಿಸುವ ಸಾಂಕೇತಿಕತೆಯನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ಅಂದರೆ ಸವರ್ಣಿಯರನ್ನು ನೋಡುವ ದೃಷ್ಟಿಯಲ್ಲಿನ ತಾರತಮ್ಯ ಕೃತ್ರಿಮತೆ ಆತ್ಮವಂಚನೆ ಇವೆಲ್ಲಾ ಸಮಾನಾಂತರವಾಗಿ ಅಶಿಕ್ಷಿತ ದಲಿತರಲ್ಲಿ ಮೂಡಿಸಬಹುದಾದ ಭಾವ ಸಂಕೀರ್ಣ, ವಿದ್ಯಾವಂತ ದಲಿತರು ಭೂಮಾಲಿಕ ಶೋಷಕ ವರ್ಗದ ವಿರುದ್ಧ ತಿರುಗಿ ಬೀಳುವ ಅಗತ್ಯವನ್ನು ಮನಗಾನುತ್ತೇವೆ.

'ಅವ್ವ' ಗೀತಾ ನಾಗಭೂಷಣ ಅವರ ಈ ಕಥೆಯಲ್ಲಿ ಅನಕ್ಷರತೆ ಬಡತನ ಮತ್ತು ಅಸಹಾಯಕತೆಯೇ ಸಂಪತ್ತಾಗಿರುವ ಹೆಣ್ಣೊಬ್ಬಳ ಬದುಕಿನಲ್ಲಿ ಅನುಭವಿಸಿದ ನೋವು ಮತ್ತು ಯಾತನೆಯ ಸ್ಥಿತಿಯನ್ನು ಇಲ್ಲಿ ಚಿತ್ರಿಸಲಾಗಿದೆ. ನಗರದಲ್ಲಿ ಸೂಟುಧಾರಿಯೊಬ್ಬ ಹಣಕೊಟ್ಟು ಗಂಗಾ ಎನ್ನುವ ಹೆಣ್ಣುಮಗಳ ದೇಹವನ್ನು ಖರೀದಿಸಿದರೆ, ಹಳ್ಳಿಯಲ್ಲಿ ಋಣಕ್ಕಾಗಿ ಜಮೀನ್ದಾರ ತನ್ನ ಜೀತದಾಳಾದ ಮೈಲಾರಿಯನ್ನು (ಗಂಗಾಳ ಗಂಡ) ಒಂದು ಖೂನಿ ಕೇಸಿನಲ್ಲಿ ಸಿಕ್ಕಿಸುವಂತದ್ದು ಗಂಗಾಳ ದೇಹದ ಆಸೆಯಿಂದ ತನ್ನ ತಂಟಗೆ ಬಂದಿದ್ದ ಜಮೀನ್ದಾರನಿಗೆ ಗಂಗಾ ಮೆಟ್ಟು ತೋರಿಸಿ ಗರ್ಜಿಸುವ ಮೂಲಕ ಮತ್ತು ತನ್ನ ದೇಹ ಖರೀದಿಸಿದ ಸಾಹುಕಾರನ ಕಾರಿಗೆ ಕಲ್ಲು ಹೊಡೆಯುವ ಮೂಲಕ ವ್ಯವಸ್ಥೆಯ ವಿರುದ್ಧದ ಪ್ರತಿಭಟನಾ ದನಿ ಕೂಡ ಕಥೆಯಲ್ಲಿ ದಾಖಲಾಗುತ್ತದೆ.

ಪಿ. ಲಂಕೇಶರವರ 'ಮುಟ್ಟಿಸಿ ಕೊಂಡವರು' ಕಥೆಯು ವ್ಯವಸ್ಥೆ ಸೃಷ್ಟಿಸಿದ ವರ್ಗದ ಬೇರುಗಳು ಬಡತನಕ್ಕಿಂತಲೂ ಪ್ರಭಲ ಮತ್ತು ಆಳದಲ್ಲಿವೆ ಎಂಬುದನ್ನು ಸೂಕ್ಷ್ಮವಾಗಿ ಹೇಳುತ್ತದೆ. ಬಸಲಿಂಗ ಎಂಬ ಮೇಲು ವರ್ಗದ ವ್ಯಕ್ತಿ ಡಾ. ತಿಮ್ಮಪ್ಪ ಕೀಳು ಜಾತಿಯವ ಎಂಬುದು ಗೊತ್ತಾದಾಗ ಅವನ ಹತ್ತಿರ ಚಿಕಿತ್ಸೆ ಪಡೆದುಕೊಳ್ಳಲು ಹಿಂದೇಟನ್ನು ಹಾಕಿ ಹೆಂಡತಿ ಸಿದ್ಲಿಂಗಿ ಕಣ್ಣು ಕಳೆದುಕೊಳ್ಳುವ ಪ್ರಸಂಗವನ್ನಿಲ್ಲಿ ಕಾಣಬಹುದು.

'ಎಣ್ಣೆ ! ಚಿಮಣಿ ಎಣ್ಣೆ !' – ನಿರಂಜನರ ಈ ಕಥೆಯಲ್ಲಿ ಸೋಮನ ಹತಾಸ ಜೀವನ ನಂಬಿದ ಅಂಗಡಿಯ ಮಾಲೀಕರಾದ ರಾಯರು ಒಂದಕ್ಕೆ ಎರಡು ಪಟ್ಟು ಬೆಲೆ ಹೇಳಿದಾಗ ಅನ್ಯಾಯದ ವಿರುದ್ಧ ಸಿಡಿದೆದ್ದು ದೀಪದ ಬುಡ್ಡಿಗಾಗಿ ಎಣ್ಣೆಯನ್ನು ಪಡೆದುಕೊಳ್ಳಲು ಆತನು ಪಡುವ ಆ ಯಾತನೆ ಮತ್ತು ಮಗಳಿಗೆ ಮೈ ಕೆಂಡದಂತ ಜ್ವರ ಬಂದಿದ್ದರೂ ಏನೂ ಮಾಡದ ಸ್ಥಿತಿಯಲ್ಲಿ ತೊಳಲಾಡುವಂತ ಪ್ರಸಂಗ ಪ್ರತಿಯೊಬ್ಬರ ಹತ್ತಿರ ಹೋಗಿ ಕಿರುಚುತ್ತಾ ಎಣ್ಣೆ ! ಎಣ್ಣೆ ! ಎಂದು ಕಣ್ಣೀರ ಸುರಿಸುವುದು ಒಂದು ಸಂಘರ್ಷವೇ ಸರಿಯಾಗಿದೆ. ಬಡತನ ಎಂಬುವುದು ಹೇಗೆ ವ್ಯಕ್ತಿಯನ್ನು ಅಮಾನುಷವಾಗಿಸುತ್ತದೆ ಮತ್ತು ಆ ವ್ಯಕ್ತಿ ಸಮಾಜದ ವಿರುದ್ಧ ಹೇಗೆಲ್ಲಾ ಹೋರಾಡಿದರೂ ಕೊನೆಗೆ ಅವನಿಗೆ ಸಿಕ್ಕ ಪ್ರತಿಫಲವೆನೆಂಬುವದನ್ನು ಈ ಕಥೆ ತಿಳಿಸಿಕೊಡುತ್ತದೆ.

ಶ್ರೀ ಕೃಷ್ಣ ಆಲನಹಳ್ಳಿಯವರ 'ಸಂಬಂಧ' ಸಣ್ಣ ಕಥೆಯಲ್ಲಿ ಲಲಿತಾ ಬ್ರಾಹ್ಮಣ ಜಾತಿಯ ಹುಡುಗಿಯಾಗಿದ್ದು, ಕೆಳವರ್ಗದ ಹುಡುಗ ಮಂತ್ರ ತಂತ್ರವನ್ನು ಮಾಡುತ್ತಾ ಇದ್ದ. ಲಲಿತಾರ ಅಪ್ಪ ಇವನ್ನೆಲ್ಲಾ ನಂಬುತ್ತಿದ್ದ ಹಾಗೆಯೇ ದೇವರ ಜೊತೆ ಮಾತನಾಡತಾ ಇದ್ದ. ಕೆಳಗಿನಮನಿ ಸಿದ್ಧನಗೌಡನ ಮೇಲೆ ದೇವರು ಬಂದರೂ ಅದು ದೇವರಲ್ಲ ಗಾಳಿ ಎಂದು ಲಲಿತಾ ಹೇಳಿದಾಗ, ದೇವ್ರು ಗೌಡ್ರ ಜಾತಿಯವರ ಮೇಲೆ ಬರೊಲ್ಲವಂತೆ ಹಾಗಾದರೆ ಲಲಿತಾಳ ಮನೆಯ ದೇವರು ಹೇಗಿದ್ದಾನೆ ಅನ್ನುವ ಕುತೂಹಲ ಕೆಳವರ್ಗದ ಹುಡುಗನಿಗೆ ಅವನು ಲಲಿತಾರ ಮನೆಗೆ ಹೋದಾಗ ಅವರ ಅಜ್ಜಿ ಬಯ್ಯುತ್ತಾಳೆ. ನಂತರ ಲಲಿತಾಳ ಮದುವೆ ಆಗಿ ಕೆಲ ವರ್ಷಗಳ ನಂತರ ಆಕೆಯ ಮಗು ಅನಾರೋಗ್ಯಕ್ಕೆ ಇಡಾದಾಗ ಕೆಳವರ್ಗದ ಹುಡುಗ ದುಡ್ಡು ನೀಡುತ್ತಾನೆ. ಆದರೆ ಅದೇ ದುಡ್ಡು ಆಕೆಯ ಜೀವನಕ್ಕೆ ಮುಳುವಾಗುವದನ್ನ ಈ ಕಥೆಯು ತಿಳಿಹೇಳುತ್ತದೆ.

'ಆಟಿಕೆ' ಬಸವಣ್ಣೆಪ್ಪಾ ಕಂಬಾರ ಅವರ ಕಥೆಯಲ್ಲಿ ಕಿಟ್ಟಿ ಪೀಪಿ ಕಳೆದುಕೊಳ್ಳುವ ಪ್ರಸಂಗ ನಂತರ ಅದನ್ನು ಹುಡುಕುತ್ತಾ ಇರುವಾಗ ಎಲ್ಲರ ಮನಸ್ಥಿತಿಗಳೂ ಒಂದು ಸಣ್ಣ ವಿಷಯಕ್ಕೆ ಹೇಗೆಲ್ಲಾ ಕೆಟ್ಟು ಹೋಗುತ್ತವೆ ಎಂಬುದನ್ನು ಕಥೆಯು ಎಳೆದುಕೊಂಡು ಹೋಗುತ್ತದೆ. ಕಿಟ್ಟಿಯ ತಾಯಿ ಚೆನ್ನವ್ವ ಮಗನ ಹಟಕ್ಕೆ ಬೆಸತ್ತು ಮಗನ ಕಡೆಗೆ ಚಪ್ಪಲಿ ಒಗೆಯುತ್ತಾಳೆ ಆದರೆ ಅದು ಬೇರೆಯವರಿಗೆ ತಗುಲಿದಾಗ ಎಲ್ಲರೂ ಆಕೆಯನ್ನು ಜರಿಯುತ್ತಾರೆ. ಅವಮಾನದಿಂದ ನೊಂದ ಚೆನ್ನವ್ವ ತನ್ನ ಮಗ ಕಿಟ್ಟಿಯನ್ನು ಕೋಣೆಗೆ ಕರೆದುಕೊಂಡು ಹೋಗಿ ಚಿಲಿಕ ಹಾಕಿಕೊಂಡು ಸೀರಿಯಿಂದ ಆತ್ಮಹತ್ಯೆ ಮಾಡಿಕೊಳ್ಳುವುದು ಈ ಕಥೆಯ ಸಾರವಾಗಿದೆ.

ಹೀಗೆ ಕನ್ನಡ ಸಾಹಿತ್ಯದಲ್ಲಿ ಹಲವಾರು ಕವಿಗಳು ವರ್ಗ ಸಂಘರ್ಷದ ತಳಹದಿಯ ಮೇಲೆಯೇ ಸಣ್ಣ ಕಥೆಗಳನ್ನು ಬರೆದಿದ್ದು, ಅವುಗಳಲ್ಲಿ ಕೆಲ ಕಥೆಗಳನ್ನು ತೆಗೆದುಕೊಂಡು ವಿವರಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

## ಉಪಸಂಹಾರ

ವರ್ಗ ಸಂಘರ್ಷದ ತೀವ್ರತೆ ಎಷ್ಟಿರುತ್ತೆ ಎಂದರೆ ಒಂದು ಪತ್ರಿಕೆಯಲ್ಲಿ ನಾ ಓದಿದ ನೆನಪು ಉಚ್ಚ ಕುಲದ ಒಬ್ಬ ವ್ಯಕ್ತಿಯ ಮಗನನ್ನು ಕೀಳು ಜಾತಿಯ ವ್ಯಕ್ತಿಯೊಬ್ಬ ಪ್ರಾಣಾಪಾಯದಿಂದ ರಕ್ಷಿಸುತ್ತಾನೆ. ಆದರೆ ಕೀಳು ಜಾತಿಯ ವ್ಯಕ್ತಿ ರಕ್ಷಿಸಿದ ಎಂಬ ಮಾತ್ರಕ್ಕೆ ಮಗು ನನಗೆ ಬೇಡವೆಂದು ಸ್ವಂತ ಮಗನನ್ನೆ ಹೊರ ಹಾಕುವ ಪರಿ ನಿಜಕ್ಕೂ ವರ್ಗ ಸಂಘರ್ಷಕ್ಕೆ ಹಿಡಿದ ಕೈಗನ್ನಡಿಯಾಗಿದೆ. ವರ್ಗ ಸಂಘರ್ಷ ಇದು ನಿನ್ನೆ ಮೊನ್ನೆಯದಲ್ಲ ಹಿಂದಿನಿಂದಲೂ ನಡೆದುಕೊಂಡು ಬಂದಿರುವುದನ್ನು ಕಾಣಬಹುದು. ಹನ್ನೆರಡನೆಯ ಶತಮಾನದಲ್ಲಿ ಬಸವಾದಿ ಶರಣರು ಈ ಸಂಘರ್ಷವನ್ನು ಹೋಗಲಾಡಿಸಲು ತಮ್ಮ ಪ್ರಾಣವನ್ನೇ ಪಣಕಿಟ್ಟರು. ಆ ಕಾಲದಿಂದ ಹಿಡಿದು ಇವತ್ತಿನವರೆಗೂ ಅದನ್ನು ಬೇರು ಸಹಿತ ಕಿತ್ತೂಗೆಯಲು ಸಾಧ್ಯವಾಗದೆ ಇರುವುದು ದುರಂತವೇ ಸರಿ. ಈ ನಿಟ್ಟಿನಲ್ಲಿ ಕನ್ನಡ ಸಾಹಿತ್ಯದ ಸಣ್ಣ ಕಥಾ ಪ್ರಕಾರವನ್ನು ಬಳಸಿಕೊಂಡು ಹಲವಾರು ಕವಿಗಳು, ಕವಿತ್ರಿಯರು ಸಣ್ಣ ಕಥೆಗಳ ಮುಖಾಂತರ ಸಮಾಜದಲ್ಲಿ ನಡೆಯುವ ಜಾತಿ, ವರ್ಗ ಸಂಘರ್ಷವನ್ನು ಬಿಚ್ಚಿಟ್ಟಿರುವದನ್ನು ಕಾಣಬಹುದು.

## ಪರಾಮರ್ಶನ ಗ್ರಂಥಗಳು


- **ಬಸವಣ್ಣೆಪ್ಪಾ ಕಂಬಾರ :** ಆಟಿಕೆ.
- **ತ.ಸು. ಶಾಮರಾಯ :** ಕನ್ನಡ ಸಾಹಿತ್ಯ ಚರಿತ್ರೆ.
- **ಜಿ.ಎಚ್. ನಾಯಕ :** ಕನ್ನಡ ಸಣ್ಣ ಕಥೆಗಳು.



ವಿದ್ಯಾನಿಧಿ ಪ್ರಕಾಶನ ®
ಶ್ರೀ ಶಿವಕುಮಾರ ಏಜನ್ಸಿ®
ಶೈಕ್ಷಣಿಕ ಪುಸ್ತಕಗಳ ಪ್ರಕಾಶಕರು ಮತ್ತು ಮಾರಾಟಗಾರರು
ಸ್ಟೇಶನ್ ರೋಡ ಮತ್ತು 'ನನಸು' ಜೆ. ಟಿ. ಮಠ ರೋಡ, ಗದಗ.
ದೂರವಾಣಿ : 08372–200527
e-mail : vidyanidhiprakashana@gmail.com.
www. vidyanidhionline.com

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ದೇಶದ ಸ್ವಾತಂತ್ರ ಚಳುವಳಿಯಲ್ಲಿ ವೈಚಾರಿಕತೆಯ ಪ್ರಭಾವ

✍ **ಡಾ. ಶಿವಯೋಗಿ ಕೋರಿಶೆಟ್ಟರ.** ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಕೆ.ಎಲ್.ಇ. ಸಂಸ್ಥೆಯ, ಜಿ.ಎಚ್. ಪದವಿ ಮಹಾವಿದ್ಯಾಲಯ, ಹಾವೇರಿ.

ಯಾವುದೇ ದೇಶದ ರಾಷ್ಟ್ರೀಯತೆಯ ಬೆಳವಣಿಗೆಯಲ್ಲಿ ವೈಚಾರಿಕತೆಯ ಪ್ರಭಾವ ಅಧಿಕವಾಗಿರುವುದನ್ನು ಕಾಣಬಹುದು. ಪ್ರಪಂಚದ ಚರಿತ್ರೆಯಲ್ಲಿ ರಾಷ್ಟ್ರೀಯತೆಯಿಂದ ಪ್ರಭಾವಿತಗೊಂಡು ಅನೇಕ ಕ್ರಾಂತಿಗಳು ಜರುಗಿದ್ದು, ಅವುಗಳಲ್ಲಿ ಪ್ರಮುಖವಾಗಿ ಅಮೇರಿಕಾ ಕ್ರಾಂತಿ, ಫ್ರಾನ್ಸ್ ಕ್ರಾಂತಿ, ರಷ್ಯಾ ಕ್ರಾಂತಿಗಳನ್ನು ಹೆಸರಿಸಬಹುದು. ಈ ಕ್ರಾಂತಿಗಳಿಗೆ ಪೂರಕವಾಗಿ ಪ್ರಜೆಗಳ ರಾಷ್ಟ್ರೀಯ ಭಾವನೆಗಳನ್ನು ಕೆರಳಿಸಿ, ಕ್ರಾಂತಿಯ ಕಿಡಿ ಹೊತ್ತಿಸಿರುವುದು ಆಯಾ ದೇಶದ ಬುದ್ದಿ ಜೀವಿಗಳ ವೈಚಾರಿಕತೆಯ ಪ್ರಭಾವವೆ ಕಾರಣವೆನ್ನಬಹುದು. ಅಮೇರಿಕಾದ ಬುದ್ದಿಜೀವಿಗಳಾದ ಥಾಮಸ್ ಪೆಯ್ನ್, ಜೇಮ್ಸ ಮ್ಯಾಡಿಸನ್, ಥಾಮಸ್ ಜಫರಸನ್, ಬೆಂಜಮಿನ್ ಫ್ರ್ಯಾಂಕ್ಲಿನ್ ಮುಂತಾದವರು ತಮ್ಮ ವೈಚಾರಿಕತೆಯಿಂದ ಅಮೇರಿಕಾ ಕ್ರಾಂತಿ ಆರಂಭಗೊಳ್ಳಲು ಕಾರಣರಾದರೆ, ಮಾಂಟೆಸ್ಕೋ, ಓಲ್ವೇರ ರುಸೋರಂತಹ ವಿಚಾರವಾದಿಗಳು ಫ್ರಾನ್ಸ್ ದೇಶದಲ್ಲಿ ಕ್ರಾಂತಿಯ ಕಿಡಿ ಹೊತ್ತಿಸುವಲ್ಲಿ ಯಶಸ್ವಿಯಾದರು. ಅದರಲ್ಲಿಯೂ ರುಸೋನಂತಹ ತತ್ವಜ್ಞಾನಿ ಇಡೀ ಜಗತ್ತಿಗೆ ಸ್ವಾತಂತ್ರತೆ ಸಮಾನತೆ ಹಾಗೂ ಭ್ರಾತೃತ್ವ ತತ್ವಗಳನ್ನು ಕೊಡುಗೆಯಾಗಿ ನೀಡಿರುವನು. ಇದೇ ರೀತಿಯಲ್ಲಿ ಕಾರ್ಲ್‌ಮಾರ್ಕ್ಸ, ಲೆನಿನ್, ಹೆಗಲ್ಸರ ವೈಚಾರಿಕತೆಯ ಪ್ರಭಾವವನ್ನು ರಷಿಯಾ ಕ್ರಾಂತಿಯ ಮೇಲೆ ಕಾಣಬಹುದಾಗಿದೆ.

ಭಾರತದ ಮೇಲೆ ಸುಮಾರು ಎರಡು ಶತಮಾನಗಳ ಕಾಲ ಪ್ರಭುತ್ವ ಹೊಂದಿದ್ದ ಬ್ರಿಟೀಷ ಆಧಿಪತ್ಯವನ್ನು ಕೊನೆಗಾಣಿಸಲು ಹತ್ತೊಂಬತ್ತನೆ ಶತಮಾನದಲ್ಲಿ ಭಾರತೀಯ ವೈಚಾರಿಕ ಬರಹಗಾರರು ಹಾಗೂ ಬುದ್ದಿ ಜೀವಿಗಳು ತಮ್ಮ ಬರಹ, ಭಾಷಣ, ಪದ್ಯ, ಕತೆ, ಕಾದಂಬರಿ, ನಾಟಕ ಹಾಗೂ ಇನ್ನಿತರ ಮಾಧ್ಯಮಗಳ ಮೂಲಕ ಜನಸಾಮಾನ್ಯರು ಅನುಭವಿಸುತ್ತಿರುವ ನೋವು, ಅಪಮಾನ, ಅನ್ಯಾಯ, ಸಂಕಷ್ಟ ಹಾಗೂ ದೌರ್ಜನ್ಯಗಳನ್ನು ಬಯಲಿಗೆಳೆದು, ಇದಕ್ಕೆ ಕಾರಣರಾದವರ ವಿರುದ್ದ ಹೋರಾಡುವಂತೆ ಪ್ರೇರೇಪಿಸಿದರು. ಈ ವೈಚಾರಿಕತೆಯ ಪ್ರಭಾವ ಜನಸಾಮಾನ್ಯರಲ್ಲಿ ದೇಶ ಭಕ್ತಿಯನ್ನು ಬೆಳೆಸುವಲ್ಲಿ, ಸಾಮಾಜಿಕ ವರ್ಗಗಳನ್ನು ಬೆಸೆಯುವಲ್ಲಿ ಹಾಗೂ ಕ್ರಾಂತಿಕಾರರನ್ನು ಬ್ರಿಟಿಷರ ವಿರುದ್ದ ಬಡಿದೆಬ್ಬಿಸುವಲ್ಲಿ ಪ್ರಮುಖ ಪಾತ್ರ ವಹಿಸಿತು. ಪ್ರಸ್ತುತ ಲೇಖನದ ಉದ್ದೇಶ ಭಾರತದ ಸ್ವಾತಂತ್ರ ಚಳುವಳಿಯ ಹೋರಾಟಗಾರರು ಹಾಗೂ ರಾಷ್ಟ್ರ ಪ್ರೇಮಿಗಳ ಮೇಲೆ ಇಲ್ಲಿನ ಬುದ್ದಿಜೀವಿಗಳು ಬೀರಿರುವ ವೈಚಾರಿಕ ಪ್ರಭಾವದ ಪಕ್ಷಿ ನೋಟವಾಗಿದೆ.

ಭಾರತ ಪ್ರಾಚೀನ ಕಾಲದಿಂದಲೂ ವಿವಿಧ ಭಾಷೆ, ಸಂಪ್ರದಾಯ ಆಚಾರ ವಿಚಾರಗಳನ್ನು ಹೊಂದಿದ ದೇಶ. ಭಾರತದಲ್ಲಿ ಬ್ರಿಟೀಷ ಆಳ್ವಿಕೆಯಲ್ಲಿ ಪ್ರಸಾರಗೊಂಡ ಇಂಗ್ಲೀಷ ಭಾಷೆ ಹಾಗೂ ಪಾಶ್ಚಿಮಾತ್ಯ ಸಾಹಿತ್ಯ ವಿವಿಧ ಭಾರತೀಯ ಪ್ರಾಂತಗಳನ್ನು ವೈಚಾರಿಕವಾಗಿ ಬೆಸೆಯುವಲ್ಲಿ ಪ್ರಮುಖ ಪಾತ್ರ ವಹಿಸಿತು. ಬರ್ಕ, ಮಿಲ್, ಮೆಕಾಲೇ, ಹರ್ಬರ್ಟ ಸ್ಪೆನ್ಸರ್ ರಂತಹ ವಿದ್ವಾಂಸರ ಸಂಶೋಧನೆಗಳ ಪ್ರಭಾವ ಭಾರತೀಯರ ಜ್ಞಾನದ ದಿಗಂತವನ್ನು ಹೆಚ್ಚಿಸಿದವು. ಭಾರತೀಯರು ತಮ್ಮ ಪ್ರಾಚೀನ ಸಂಸ್ಕೃತಿ ಇತಿಹಾಸ ಅರಿಯುವಲ್ಲಿ ವಿಲಿಯಂ ಜೋನ್ಸ್ ಕೋಲ್ ಬ್ರೂಕ್, ಮ್ಯಾಕ್ಸಮುಲ್ಲರ, ರಾಜೇಂದ್ರಲಾಲ ಮಿಶ್ರಾ, ಭಂಡಾರ್ಕರ ಮುಂತಾದ ವಿದ್ವಾಂಸರ ಕೃತಿಗಳು ಕಾರಣವಾದವು. ಯೂರೋಪದ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಭಾರತೀಯ ವಿದ್ಯಾರ್ಥಿಗಳು ಇಟಲಿ, ಜರ್ಮನಿ ಏಕೀಕರಣ ಮತ್ತು ಯೂರೋಪದಲ್ಲಾದ ಬದಲಾವಣೆಗಳನ್ನು ಭಾರತದಲ್ಲಿಯೂ ತಂದು ಬ್ರಿಟಿಷರ ದಾಸ್ಯದಿಂದ ಬಿಡುಗಡೆಯಾಗಬೇಕೆಂದು ಯೋಚಿಸ ಲಾರಂಭಿಸಿದರು.

ವೃದ್ಧ ಪಿತಾಮಹ ಎಂಬುದಾಗಿಯೇ ಪ್ರಖ್ಯಾತಿ ಪಡೆದಿದ್ದ ದಾದಬಾಯಿ ನವರೋಜಿ ಭಾರತದ ಸಂಪತ್ತು ಇಂಗ್ಲೆಂಡಿಗೆ ಸೋರಿ ಹೋಗುತ್ತಿರುವುದನ್ನು ತಮ್ಮ *ಸೋರಿಕೆಯ ಸಿದ್ದಾಂತದ* ಮೂಲಕ ಪ್ರತಿಪಾದಿಸಿದರು. *ಪಾವರ್ಟಿ ಆ್ಯಂಡ ಅನ್ ಬ್ರಿಟೀಷ ರೂಲ ಇನ್ ಇಂಡಿಯಾ* ಎಂಬ ಕೃತಿಯ ಮೂಲಕ ಬ್ರಿಟೀಷರು ಭಾರತದಿಂದ ದೋಚಿದ ಸಂಪತ್ತಿನ ಬಗ್ಗೆ ಭಾರತೀಯರಲ್ಲಿ ಅರಿವು ಮೂಡಿಸಿದರು. ಉಗ್ರ ರಾಷ್ಟ್ರೀಯವಾದಿಯೆಂದೇ ಪ್ರಖ್ಯಾತಿ ಪಡೆದಿದ್ದ ಬಾಲ ಗಂಗಾಧರ ತಿಲಕ ತಮ್ಮ ವಿಚಾರಧಾರೆಗಳನ್ನು *ಮರಾಠಾ* ಹಾಗೂ *ಕೇಸರಿ* ಪತ್ರಿಕೆಗಳ ಮೂಲಕ ಜನರಿಗೆ ತಲುಪಿಸಿ ಅವರಲ್ಲಿ ರಾಷ್ಟ್ರಾಭಿಮಾನವನ್ನು ಬೆಳೆಸಿದರು. *ಗೀತಾರಹಸ್ಯ* ಎಂಬುದು ಇವರ ಕೃತಿ. ಸ್ವದೇಶಿ, ಸ್ವರಾಜ್ಯ ಹಾಗೂ ರಾಷ್ಟ್ರೀಯ ಶಿಕ್ಷಣ ಕುರಿತು ತಮ್ಮ ಹರಿತ ಭಾಷಣಗಳ ಮೂಲಕ ಜನ ಜಾಗೃತಿ ಮೂಡಿಸಿದರು. *ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು ಅದನ್ನು ಪಡೆದೇ ತೀರುವೆ* ಎಂಬ ತಮ್ಮ ಮೂಲ ಮಂತ್ರಕ್ಕೆ ಬದ್ದರಾಗಿದ್ದರು. ಇವರಂತೆಯೇ ಮತ್ತೊಬ್ಬ ಉಗ್ರ ರಾಷ್ಟ್ರೀಯ ವಾದಿಯೆಂದರೆ ಬಿಪಿನ್ ಚಂದ್ರ ಪಾಲ್ *ಮೆಮೋರಿಸ್ ಆಫ್ ಲೈಫ್ ಆ್ಯಂಡ ಟೈಮ್ಸ* ಎಂಬ ಗ್ರಂಥದ ಎರಡು ಸಂಪುಟಗಳ ಮೂಲಕ ಭಾರತೀಯ ಸಮಾಜದ ಮೂಢನಂಬಿಕೆಗಳನ್ನು ಹೋಗಲಾಡಿಸಲು ಯತ್ನಿಸಿದರು. *ಪರದಾಸಕ* ಹಾಗೂ *ಟ್ರೀಬ್ಯೂನ* ಪತ್ರಿಕೆಗಳ ಮೂಲಕ ಜನಜಾಗೃತಿ ಉಂಟು ಮಾಡಿದರು. ಬಂಗಾಳದಲ್ಲಿ ತಮ್ಮ ಭಾಷಣಗಳ ಮೂಲಕ ಬ್ರಿಟಿಷರ ವಿರುದ್ದ ಬಹಿಷ್ಕಾರ ಚಳುವಳಿಗೆ ಪ್ರೇರೇಪಿಸಿದರು. ಇದೇ ರೀತಿಯಾಗಿ ಮಹಾನ್ ಸಮಾಜ ಸುಧಾರಕರಾದ ರಾಜಾರಾಮ ಮೋಹನರಾಯ್, ಸ್ವಾಮಿ ದಯಾನಂದ ಸರಸ್ವತಿ, ಸ್ವಾಮಿ ವಿವೇಕಾನಂದ, ಆ್ಯನಿ ಬೆಸೆಂಟ ಸೇರಿದಂತೆ ಅನೇಕ ಮುಖಂಡರು ತಮ್ಮ ತತ್ವ, ಸಿದ್ದಾಂತ ಬರಹ ಹಾಗೂ ಭಾಷಣಗಳ ಮೂಲಕ ಭಾರತೀಯ ಸಮಾಜದ ಡೊಂಕುಗಳನ್ನು ತಿದ್ದುವಲ್ಲಿ ಆ ಮೂಲಕ ಅವರಲ್ಲಿ ರಾಷ್ಟ್ರೀಯತೆಯನ್ನು ಕೆರಳಿಸಿ, ಬ್ರಿಟಿಷರ ವಿರುದ್ದ ಬಡಿದೆಬ್ಬಿಸುವಲ್ಲಿ ಯಶಸ್ವಿಯಾದರು.

ಬ್ರಿಟಿಷರ ದಬ್ಬಾಳಿಕೆಯಿಂದಾದ ದುಷ್ಪರಿಣಾಮಗಳ ಕುರಿತು ಅರಿವು ಮೂಡಿಸುವಲ್ಲಿ, ಆ ಮೂಲಕ ಜನಸಾಮಾನ್ಯರು ಪ್ರಭುತ್ವದ ವಿರುದ್ದ ಸಂಘಟನೆಗೊಳ್ಳುವಲ್ಲಿ ಭಾರತೀಯ ಪತ್ರಿಕೆಗಳು ಮಹತ್ವದ ಪ್ರಭಾವ ಬೀರಿದವು. ಈ ನಿಟ್ಟಿನಲ್ಲಿ ಇಂಡಿಯನ್ ಮಿರರ್, ದಿ ಬೆಂಗಾಲಿ, ಅಮೃತ ಬಜಾರ ಪತ್ರಿಕಾ, ಬಾಂಬೆ ಕ್ರಾನಿಕಲ್, ದಿ ಹಿಂದೂ ಪೆಟ್ರಿಯಾಟ್, ಮರಾಠಾ, ಕೇಸರಿ, ಆಂಧ್ರಪ್ರಕಾಶಿಕಾ, ಕೊಹಿನೂರ್ ಮುಂತಾದ ಪತ್ರಿಕೆಗಳು ದೇಶದ ಸ್ವಾತಂತ್ರ್ಯ ಪ್ರಜಾಪ್ರಭುತ್ವ ಮುಂತಾದ ವಿಷಯಗಳ ಕುರಿತು ಚಿಂತನೆಗೆ ಪ್ರೇರೇಪಿಸಿದವು.

ದೇಶೀಯ ಭಾಷಾ ಸಾಹಿತ್ಯವು ಜನರಲ್ಲಿ ರಾಷ್ಟ್ರೀಯ ಭಾವನೆ ಹಾಗೂ ರಾಷ್ಟ್ರಭಕ್ತಿ ಬೆಳೆಸುವಲ್ಲಿ ಸಹಕಾರಿಯಾಯಿತು. ಬಂಗಾಲಿ, ಮರಾಠಿ, ಕನ್ನಡ, ತೆಲುಗು, ತಮಿಳು ಸೇರಿದಂತೆ ವಿವಿಧ ದೇಶೀಯ ಭಾಷೆಗಳಲ್ಲಿ ವಿವಿಧ ವಿದ್ವಾಂಸರು ಹಾಗೂ ದಾರ್ಶನಿಕರಿಂದ ರಚಿತವಾದ ಸಾಹಿತ್ಯ,

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ದೇಶಭಕ್ತಿ ಗೀತೆಗಳು ಜನಸಾಮಾನ್ಯರ ಹೃದಯ ತಟ್ಟಿದವು ಆ ಮೂಲಕ ರಾಷ್ಟ್ರೀಯತಾ ಮನೋಭಾವವನ್ನು ಪ್ರಕರಗೊಳಿಸಿದವು. ಅಂತಹುಗಳಲ್ಲಿ ಪ್ರಮುಖವಾದವುಗಳೆಂದರೆ,

**ರವಿಂದ್ರನಾಥ ಟ್ಯಾಗೋರ :** 1913ರಲ್ಲಿ ಸಾಹಿತ್ಯಕ್ಕಾಗಿ ನೋಬೆಲ್ ಪ್ರಶಸ್ತಿ ಪಡೆದ ಯುರೋಪ ರಾಷ್ಟ್ರೀಯನಲ್ಲದ ಮೊದಲ ಬರಹಗಾರನೆಂಬ ಖ್ಯಾತಿಯನ್ನು ರವಿಂದ್ರನಾಥ ಟ್ಯಾಗೋರ ಹೊಂದಿದ್ದಾರೆ. ಇವರು ಭಾರತ ಕಂಡ ಖ್ಯಾತ ಬರಹಗಾರ, ಕವಿ, ಬಂಗಾಲ ಜ್ಞಾನ ಪುನರುಜ್ಜೀವನದ ಪ್ರತಿಪಾದಕ ಹಾಗೂ ಮಾನವತಾವಾದಿಯಾಗಿದ್ದಾರೆ. ಇವರ ಕೃತಿಗಳ ಪ್ರಭಾವ ಭಾರತೀಯ ಸ್ವಾತಂತ್ರ್ಯ ಹೋರಾಟದ ಮೇಲೆ ಅಧಿಕ ವಾಗಿರುವುದನ್ನು ಕಾಣಬಹುದು. ರವಿಂದ್ರನಾಥ ಟ್ಯಾಗೋರ ರಚಿಸಿದ ಕೃತಿಗಳಲ್ಲಿ *ವೇರ ದಿ ಮೈಂಡ್ ಇಸ್ ವಿದೌಟ ಫಿಯರ್* ಹಾಗೂ *ಗೀತಾಂಜಲಿ* ಪ್ರಮುಖವಾಗಿವೆ. ಇವರು ರಚಿಸಿರುವ *ಜನಮನಗಣ ಅಧಿನಾಯಕ ಜಯಹೇ* ಗೀತೆ ಸ್ವತಂತ್ರ ಭಾರತದ ರಾಷ್ಟ್ರಗೀತೆಯಾಗಿದ್ದರೆ, ಇವರೆ ರಚಿಸಿದ *ಅಮರ ಸೋಹನ್ ಬಂಗಾಲ* ಎಂಬ ಗೀತೆ ಇಂದಿನ ಬಾಂಗ್ಲಾದೇಶದ ರಾಷ್ಟ್ರಗೀತೆಯಾಗಿದೆ.

**ಸರೋಜಿನಿ ನಾಯ್ಡು :** ಭಾರತದ ಕೋಗಿಲೆ ಎಂಬುದಾಗಿಯೇ ಪ್ರಸಿದ್ದರಾಗಿದ್ದ ಸರೋಜಿನಿ ನಾಯ್ಡು ಪ್ರತಿಭಾವಂತ ಕವಿಯತ್ರಿ, ಸ್ವಾತಂತ್ರ್ಯ ಹೋರಾಟಗಾರ್ತಿ ಹಾಗೂ ರಾಜಕಾರಣಿಯಾಗಿದ್ದರು. ಸರೋಜಿನಿ ನಾಯ್ಡು ಅದ್ಭುತ ವಾಕ್ ಚಾತುರ್ಯ ಹೊಂದಿದ್ದು, ಮಹಿಳೆಯರ ಹಕ್ಕುಗಳು, ಶಿಕ್ಷಣ ಹಾಗೂ ಸಾಮಾಜಿಕ ಸುಧಾರಣೆ ಕುರಿತಂತೆ ಜಾಗೃತಿ ಮೂಡಿಸಿದರು. ಅಂತೆಯೇ ಇವರ ಜನ್ಮದಿನವನ್ನು ರಾಷ್ಟ್ರೀಯ ಮಹಿಳಾ ದಿನವನ್ನಾಗಿ ಆಚರಿಸಲಾಗುತ್ತಿದೆ. ಇವರು ರಚಿಸಿದ ಪ್ರಖ್ಯಾತ ಕೃತಿಗಳೆಂದರೆ *ದಿ ಗೋಲ್ಡನ್ ತ್ರಿಶೋಲ್ಡ, ದಿ ಬರ್ಡ ಆಫ್ ಟೈಮ್, ದಿ ಫಾದರ ಆಫ್ ದಿ ಡಾನ್* ಮುಂತಾದ ಕೃತಿಗಳು ಸ್ವಾತಂತ್ರ ಚಳುವಳಿಕಾರರ ಮೇಲೆ ಪ್ರಭಾವ ಬೀರಿ ಅವರನ್ನು ಹೋರಾಟಕ್ಕೆ ಅಣಿಗೊಳಿಸಿದವು. ಭಾರತೀಯ ರಾಷ್ಟ್ರೀಯ ಕಾಂಗ್ರೇಸ್ಸಿನ ನಾಯಕಿಯಾಗಿದ್ದ ಸರೋಜಿನಿ ನಾಯ್ಡು ಬ್ರಿಟೀಷರ ವಿರುದ್ದ ನಾಗರೀಕ–ಅಸಹಕಾರ ಚಳುವಳಿಯಲ್ಲಿ ಪ್ರಮುಖ ಪಾತ್ರವಹಿಸಿದ್ದರು. 1925ರ ಕಾನ್ಪುರದಲ್ಲಿ ಜರುಗಿದ ಭಾರತೀಯ ರಾಷ್ಟ್ರೀಯ ಕಾಂಗ್ರೇಸ್‌ದ ಅಧ್ಯಕ್ಷತೆಯನ್ನು ವಹಿಸಿದ್ದ ಮೊದಲ ಭಾರತೀಯ ಮಹಿಳೆ ಎಂಬ ಖ್ಯಾತಿ ಹೊಂದಿದ್ದಾರೆ.

**ಶ್ಯಾಮಲಾ ಗುಪ್ತಾ :** *ಪರ್ಷಾದ* ಎಂದೇ ಖ್ಯಾತಿ ಹೊಂದಿದ್ದ ಶ್ಯಾಮಲಾ ಗುಪ್ತ ಪ್ರಖ್ಯಾತ ಹಿಂದಿ ಕವಿಯತ್ರಿ. ಇವರು ರಚಿಸಿದ ಪ್ರಖ್ಯಾತ ಗೀತೆ *ಝುಂಡಾ ಊಂಚಾ ರಹೇ ಹಮಾರಾ* ಇದನ್ನು ಭಾರತದ ಧ್ವಜಗೀತೆಯಾಗಿ ಅಂಗೀಕರಿಸಲಾಗಿದೆ. ಇಂದಿಗೂ ಧ್ವಜಾರೋಹಣ ಕಾರ್ಯಕ್ರಮಗಳಲ್ಲಿ ಭಾರತೀಯ ತರುಣರು ಹೆಮ್ಮೆ ಹಾಗೂ ರಾಷ್ಟ್ರಭಕ್ತಿಯಿಂದ ಈ ಗೀತೆಯನ್ನು ಹಾಡುತ್ತಾರೆ.

**ಹಸ್ರತ್ ಸೋಹನ :** ಪ್ರಖ್ಯಾತ ಕವಿಯಾಗಿದ್ದ ಹಸ್ರತ್ ಸೋಹನ ರಾಷ್ಟ್ರಪ್ರೇಮ ಕುರಿತು ಅನೇಕ ಘಜಲ್‌ಗಳನ್ನು ರಚಿಸಿದ್ದಾರೆ. ಭಾರತೀಯ ಸ್ವಾತಂತ್ರ್ಯ ಚಳುವಳಿಯ ಜನಪ್ರೀಯ ಘೋಷಣೆಯಾದ ಇನ್‌ಕ್ವಿಲಾಬ್ ಜಿಂದಾಬಾದ್ ಇದನ್ನು ನೀಡಿದವರು ಹಸ್ರತ್ ಸೋಹನ್. ಭಾರತೀಯ ಕಮ್ಯೂನಿಷ್ಟ ಪಾರ್ಟಿಯ ಸ್ಥಾಪಕರಲ್ಲಿ ಇವರೂ ಕೂಡಾ ಒಬ್ಬರಾಗಿದ್ದಾರೆ.

**ಮಕಾನಲಾಲ ಚತುರ್ವೇದಿ :** ನವ ರೊಮ್ಯಾಂಟಿಸಿಸಂ ಅವಧಿಯ ಪ್ರಖ್ಯಾತ ಹಿಂದಿ ಕವಿಯಾಗಿದ್ದ ಮಕಾನಲಾಲ ಚತುರ್ವೇದಿ ಕ್ರಿ.ಶ. 1889 ಎಪ್ರೀಲ್ 4ರಂದು ಜನಿಸಿದರು. ಕವಿ, ಬರಹಗಾರ, ಪತ್ರಿಕೋದ್ಯಮಿ ಹಾಗೂ ಪ್ರಬಂಧಕಾರರಾಗಿದ್ದ ಚತುರ್ವೇದಿ ಸಕ್ರೀಯ ಸ್ವಾತಂತ್ರ್ಯ ಹೋರಾಟಗಾರರೂ ಆಗಿದ್ದರು. *ಪಂಡಿತಜಿ* ಎಂದೇ ಪ್ರಖ್ಯಾತರಾಗಿದ್ದ ಚತುರ್ವೇದಿ ರಚಿಸಿದ ಪ್ರಖ್ಯಾತ ಕವಿತೆ *ಪುಷ್ಪ ಕಿ ಅಭಿಲಾಷಾ* ಇದು ಆ ಕಾಲದ ಸ್ವಾತಂತ್ರ್ಯ ಹೋರಾಟಗಾರರ ಭಾವನೆಗಳನ್ನು ಪ್ರತಿಬಿಂಬಿಸುತ್ತದೆ.

**ಅರಬಿಂದೋ :** ಭಾರತದ ಪ್ರಖ್ಯಾತ ತತ್ವಜ್ಞಾನಿ ಯೋಗಗುರು ಹಾಗೂ ಕವಿಯಾಗಿದ್ದರು. ಬ್ರಿಟೀಷ ಪ್ರಿನ್ಸ್ಲಿ ಸ್ಟೇಟ್‌ಗಳಲ್ಲಿ ಒಂದಾಗಿದ್ದ ಬರೋಡಾ ಸಂಸ್ಥಾನದಲ್ಲಿ ನಾಗರೀಕ ಕೆಲಸಗಾರರಾಗಿ ಸೇವೆ ಸಲ್ಲಿಸಿದರು. ಭಾರತದ ಸ್ವಾತಂತ್ರ ಚಳುವಳಿಯಲ್ಲಿ ಬ್ರಿಟೀಷರ ವಿರುದ್ದ ದೇಶದ ಸ್ವಾತಂತ್ರಕ್ಕಾಗಿ ಹೋರಾಡಿದರು. ಇವರ ಕೃತಿಗಳೆಂದರೆ *ಸಾವಿತ್ರಿ: ಎ ಲೀಸೆಂಡ ಅ್ಯಂಡ ಸಿಂಬಾಲ್*, ಹಾಗೂ *ದಿ ಲೈಫ್ ಡಿವಾಯಿನ್* ಪ್ರಮುಖವಾಗಿವೆ. ಜನಸಾಮಾನ್ಯರಲ್ಲಿ ಉತ್ಸಾಹ ಹಾಗೂ ಪ್ರಗತಿ ಮೂಡಿಸುವುದಕ್ಕಾಗಿ ತಮ್ಮದೇ ಆದ ವಿಚಾರಗಳನ್ನು ಮಂಡಿಸಿದರು. ಜನರಲ್ಲಿ ಆಧ್ಯಾತ್ಮಿಕ ಭಾವನೆಗಳನ್ನು ಬೆಳೆಸುವುದಕ್ಕಾಗಿ 1926ರಲ್ಲಿ ಪಾಂಡಿಚೇರಿಯಲ್ಲಿ ಇವರು ಮೀರಾ ಅಲ್ಫಾಸಾ ಜೊತೆಗೂಡಿ ಸ್ಥಾಪಿಸಿದ *ಅರಬಿಂದೋ ಆಶ್ರಮ* ಇಂದಿಗೂ ಇದು ಪ್ರಖ್ಯಾತಿ ಪಡೆದಿರುವುದನ್ನು ಕಾಣಬಹುದು.

**ರಾಮಪ್ರಸಾದ ಬಿಸ್ಮಿಲ್ಲಾ :** ಆರ್ಯ ಸಮಾಜಿ ರಾಮಪ್ರಸಾದ ಬಿಸ್ಮಿಲ್ಲಾ ಉರ್ದು ಕವಿಯಾಗಿದ್ದು, ಅನೇಕ ಘಝುಲ್ ಗಳನ್ನು ರಚಿಸಿದ್ದಾರೆ. ಸರ್ಫಾರೋಸಿ ಕಿ ತಮನ್ನಾ (ಡಿಜಾಯರ್ ಫಾರ್ ರೆವಲೂಶನ್) ಇವರ ಘಝುಲ್‌ಗಳು ದೇಶಪ್ರೇಮ, ತ್ಯಾಗ ಬಲಿದಾನಗಳ ಪ್ರೇರಕವಾಗಿದ್ದು, ದೇಶದ ಸ್ವಾತಂತ್ರ್ಯ ಚಳುವಳಿಕಾರರಿಗೆ ಸ್ಪೂರ್ತಿದಾಯಕವಾಗಿದ್ದವು.

**ಹರಿವಂಶರಾಯ್ ಬಚ್ಚನ್ :** ಪ್ರಖ್ಯಾತ ಹಿಂದಿ ಕವಿ ಹಾಗೂ ಲೇಖಕ ಹರಿವಂಶರಾಯ್ ಬಚ್ಚನ್ ರಚಿಸಿದ ಕವಿತೆ *ಆಜಾದಿ ಕಾ ಗೀತ* (ಸಾಂಗ್ಸ ಆಫ್ ಫ್ರೀಡಂ) ಭಾರತದ ಬೇರೆ ಬೇರೆ ಭಾಷೆಗಳಿಗೆ ಭಾಷಾಂತರಗೊಂಡಿದೆ. *ಮಧುಶಾಲಾ* ಇವರು ರಚಿಸಿದ ಕೃತಿಗಳಲ್ಲಿ ಪ್ರಖ್ಯಾತಿ ಪಡೆದ ಕೃತಿಯಾಗಿದೆ. ಇವರ ಕವಿತೆಗಳು ಹೋರಾಟಗಾರರಲ್ಲಿ ಸ್ವಾತಂತ್ರ್ಯ ಪಡೆಯುವ ಭಾವನೆಗಳನ್ನು ಕೆರಳಿಸುತ್ತವೆ ಅಲ್ಲದೇ ಉತ್ತಮ ಭವಿಷ್ಯದ ಭರವಸೆಯನ್ನು ಹೊಂದಿವೆ.

**ವೀರ ಸಾವರ್ಕರ :** ಮರಾಠಾ ಭಾಷೆಯಲ್ಲಿ ವೀರ ಸಾವರ್ಕರ ಅನೇಕ ದೇಶಭಕ್ತಿ ಗೀತೆಗಳನ್ನು ರಚಿಸಿದ್ದಾರೆ. *ಜಯೋಸ್ತುತೆ ಹಾಗೂ ಸಾಗರಪ್ರಾಣ ತಲ್ಮಾಲಾಲಾ* ಎಂಬ ಗೀತೆಗಳು ದೇಶಭಕ್ತಿ ಕುರಿತಾಗಿವೆ. ಈ ಗೀತೆಗಳು ಸ್ವಾತಂತ್ರದ ಪ್ರಾಮುಖ್ಯತೆ ಹಾಗೂ ಸೌಂದರ್ಯವನ್ನು ಜನಸಾಮಾನ್ಯರಿಗೆ ತಿಳಿಸಿಕೊಟ್ಟು ಸ್ವಾತಂತ್ರ ಪ್ರಾಪ್ತಿಗಾಗಿ ಜನಸಾಮಾನ್ಯರನ್ನು ಪ್ರೇರೇಪಿಸುವಲ್ಲಿ ಯಶಸ್ವಿಯಾದವು.

**ಸುಬ್ರಮಣ್ಯ ಭಾರತಿ :** ತಮಿಳು ಭಾಷೆಯಲ್ಲಿ ಅಲ್ಲಿನ ಜನಪದ ಸಾಹಿತ್ಯ ಲಯಬದ್ದತೆ ಸರಳ ಸಂಗೀತದ ಮೂಲಕ ಅಲ್ಲಿನ ಜನರನ್ನು ಪ್ರೇರೇಪಿಸುವಲ್ಲಿ ಯಶಸ್ವಿಯಾಯಿತು. ತಮಿಳು ವಿದ್ವಾಂಸ ಸುಬ್ರಮಣ್ಯ ಭಾರತಿಯವರು *ಸ್ವದೇಶ ಗೀತೆಗಳ* ಹೆಸರಿನಲ್ಲಿ ರಾಷ್ಟ್ರೀಯತೆಯನ್ನು ಪ್ರಚೋದಿಸುವ ಸರಳ ಗೀತೆಗಳನ್ನು ರಚಿಸಿದರು. ಈ ಗೀತೆಗಳು ತಮಿಳರಲ್ಲಿ ಏಕತೆಯ ಮಹತ್ವ ತಿಳಿಸಿದವಲ್ಲದೇ ಜಾತಿ ವ್ಯಸ್ಥೆಯನ್ನು ಖಂಡಿಸಿ ಸ್ವಾತಂತ್ರಕ್ಕಾಗಿ ಬ್ರಿಟೀಷರ ವಿರುದ್ದ ಒಟ್ಟುಗೂಡಲು ಪ್ರೇರೇಪಿಸಿದವು. *ಸ್ವದೇಶ ಗೀತೆಗಳನ್ನು* ವಿ. ಕೃಷ್ಣಸ್ವಾಮಿ ಅಯ್ಯರ ಸ್ವಂತ ಹಣದಲ್ಲಿ ಸುಮಾರು ಐದು ಸಾವಿರ ಕರಪತ್ರಗಳನ್ನು ಮುದ್ರಿಸಿ ಹಂಚಿದರು. ವಿದ್ಯಾರ್ಥಿಗಳಲ್ಲಿ ಸ್ವದೇಶಾಭಿಮಾನ ಮೂಡುವಂತೆ ಪ್ರೇರೇಪಿಸುವಲ್ಲಿ ಇವು ಯಶಸ್ವಿಯಾದವು.

ಮಧುರೈದ ಷಣ್ಮಗಂ ಪಿಳ್ಳೈ ರಚಿಸಿದ ಗೀತೆಗಳು *ಒಂದೇ ಮಾತರಂ* ಅಂಶವನ್ನು ಕೇಂದ್ರೀಕರಿಸಿದ್ದವು. ತಮಿಳು ಮಹಿಳಾ ಕವಿಯತ್ರಿಯರಾದ ಕುಡ್ಡಲೂರು ಅಸಲಂಬಿಗೈ ಅಮ್ಮಾಳ ಹಾಗೂ ಚಿದಂಬರಮ್ ಅಗಿಳಾಂದಮ್ಮಾಳ್ ರಾಷ್ಟ್ರಪ್ರೇಮದ ಸಾಹಿತ್ಯ ಜನತೆಯಲ್ಲಿ ರಾಷ್ಟ್ರಾಭಿಮಾನ ಮೂಡಿಸಿತು. ವಂದೇಮಾತರಂ ಕುಮ್ಮಿಗಳ ಪ್ರಕಟಗೊಂಡು, ಸ್ವದೇಶಂ ಹೆಸರಿನಲ್ಲಿ ಹಲವರು ಕರಪತ್ರಗಳನ್ನು ಮುದ್ರಿಸಿ ಕಾರೈಕಲ್, ಪಾಂಡಿಚೇರಿ, ಚಿದಂಬರಂ, ಕುಂಭಕೋಣಂ, ತಿರುವೆಲ್ಲೂರು, ತಂಜಾವೂರು ಮುಂತಾದ

– *31ನೇ ಪುಟಕ್ಕೆ ಮುಂದುವರೆದುದು*

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಬೆಳ್ವೊಲನಾಡಿನ ಜೈನ ಧರ್ಮಕ್ಕೆ ಕಲ್ಯಾಣ ಚಾಲುಕ್ಯರ ಕೊಡುಗೆಗಳು

✍ **ಡಾ. ಶರಣಪ್ಪ ಬಸಪ್ಪ ಜಗ್ಗಲ,** ಇತಿಹಾಸ ಉಪನ್ಯಾಸಕರು, ಕೆ.ಎಲ್.ಇ. ಸಂಸ್ಥೆಯ ಗುದ್ಲೆಪ್ಪ ಹಳ್ಳಿಕೇರಿ ಪದವಿ ಕಾಲೇಜು, ಹಾವೇರಿ.

## ಪ್ರಸ್ತಾವನೆ

ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳಲ್ಲಿ ಧವಳ ವಿಷಯ ಎಂದು ಕರೆಸಿಕೊಳ್ಳುವ ಬೆಳ್ವೊಲನಾಡು ಕರ್ನಾಟಕದ ಹೃದಯ ಭಾಗದಲ್ಲಿದೆ. ಬೆಳ್ವೊಲನಾಡು ಇತಿಹಾಸ ಪೂರ್ವ ಕಾಲದಿಂದಲೂ ಮೊದಲುಗೊಂಡು ಹಲವಾರು ಅರಸು ಮನೆತನಗಳ ಆಳ್ವಿಕೆಯನ್ನು ಕಂಡ ಭೂ–ಪ್ರದೇಶವಾಗಿದ್ದು, ಕವಿರಾಜ ಮಾರ್ಗಕಾರ ಶ್ರೀವಿಜಯನು ಹೇಳುವ 'ತಿರುಳುಗನ್ನಡ' ನಾಡಿನಲ್ಲಿರುವ ಪ್ರದೇಶವಾಗಿದೆ.[1] ಬೆಳ್ವೊಲನಾಡು ಆರುನೂರಾ ಐವತ್ತು ವರ್ಷಗಳ ಚರಿತ್ರೆಯಲ್ಲಿ ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಕಲಚೂರಿಗಳು, ಯಾದವರು, ಹೊಯ್ಸಳರು ಹಾಗೂ ವಿಜಯನಗರದ ಪ್ರಾರಂಭಿಕ ಅರಸರು, ರಾಣಿಯರು, ಮಹಾಮಂಡಳೇಶ್ವರರು, ಮಹಾಸಾಮಂತರು, ಮನ್ನೆಯರು ಹಾಗೂ ಗಾವುಂಡ–ಪ್ರಭುಗಾವುಂಡರು ತಮ್ಮದೆಯಾದ ಆಡಳಿತದ ಪರಿಮಿತಿಯಲ್ಲಿ ಜೈನಧರ್ಮಕ್ಕೆ ರಾಜಾಶ್ರಯವನ್ನು ಕೊಡ ಮಾಡಿದ್ದಾರೆ. ಕುಂತಳದ ಮಧ್ಯವರ್ತಿ ಸ್ಥಾನವನ್ನಲಂಕರಿಸಿದ ಈ ನಾಡು ಮಹತ್ವಾಕಾಂಕ್ಷಿ ವೀರರಿಗೆ ಯಾವತ್ತೂ ನಿರಾಶರನ್ನಾಗಿ ಮಾಡಲಿಲ್ಲ. ದುರ್ಬಲರ ಅಧಿಕಾರದಲ್ಲಿ ತತ್ತರಿಸುವ ಬದಲು ಅದು ಸಬಲರ ಆಳ್ವಿಕೆಯಲ್ಲಿ ಸಾಂಸ್ಕೃತಿಕ ಚರಿತ್ರೆಯನ್ನು ತನ್ನ ಒಡಲಾಳದಲ್ಲಿ ರೂಪಿಸಿಕೊಂಡಿದೆ.

ಕ್ರಿ.ಶ. ಸುಮಾರು 6ನೆಯ ಶತಮಾನದಿಂದಲೂ ಮೂಲಸಂಘ ಮತ್ತು ಯಾಪನೀಯ ಸಂಘದ ವಿವಿಧ ಗಣ, ಗಚ್ಛ, ಅನ್ವಯ, ಬಳಿ ಪರಂಪರೆಗಳ ಮುನಿಗಳು, ಕಂತಿಯರು, ಭಟ್ಟಾರಕರು ಧರ್ಮಪ್ರಸಾರದ ಮೂಲಕ ಜೈನ ಚಟುವಟಿಕೆಗಳಿಗೆ ಸ್ಫೂರ್ತಿ–ಪ್ರೇರಣೆ ಕೊಡಮಾಡುತ್ತ ಬಂದಿದ್ದಾರೆ. ಅವರ ಪ್ರೇರಣೆ ಮತ್ತು ಉಪದೇಶದಿಂದ ಅಂದಿನಿಂದಲೂ ಈ ಪರಿಸರದಲ್ಲಿ ಬಸದಿಗಳ ನಿರ್ಮಾಣ, ಶಿಲ್ಪಗಳ ಪ್ರತಿಷ್ಠಾಪನೆ, ವಿವಿಧ ಪೂಜೆ–ಪುನಸ್ಕಾರಗಳು ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ದಾನ–ದತ್ತಿಗಳ ಕಾರ್ಯಗಳು ಸಾಂಗವಾಗಿ ನಡೆಯುತ್ತ ಬಂದಿವೆ. ರಾಜಕೀಯದ ಈ ಮಹತ್ಸಾಧನೆಯಲ್ಲಿ ಅಲ್ಲಿನ ಚಕ್ರವರ್ತಿಗಳೊಂದಿಗೆ ಬೆಳ್ವೊಲನಾಡಿನ ಆಡಳಿತವನ್ನು ಸುಸೂತ್ರವಾಗಿ ನೋಡಿಕೊಂಡು ಹೋದ ಆಡಳಿತಾಧಿಕಾರಿಗಳು ಮತ್ತು ಮಂತ್ರಿಮಹೋದಯರು, ಸಮಕಾಲೀನ ವರ್ತಕರು, ಪ್ರಜೆಗಳೂ ಜೈನ ಚಟುವಟಿಕೆಗಳನ್ನು ಕೈಗೊಳ್ಳುವ ಮೂಲಕ ಈ ಧರ್ಮವನ್ನು ಪೋಷಿಸಿ ಬೆಳೆಸಿದ್ದಾರೆ. ಈ ನಾಡಿನಲ್ಲಿ ದೊರೆತ ಕಲ್ಯಾಣ ಚಾಲುಕ್ಯರ ಶಾಸನಗಳನ್ನು ಪೂರಕವಾಗಿಟ್ಟುಕೊಂಡು ಜೈನಧರ್ಮಕ್ಕೆ ಕಲ್ಯಾಣ ಚಾಲುಕ್ಯರು ನೀಡಿರುವ ರಾಜಾಶ್ರಯ ಮತ್ತು ಅಂದು ನಡೆದಿರುವ ಜೈನ ಚಟುವಟಿಕೆಗಳ ಕುರಿತು ಪರಿಶೀಲಿಸುವುದು ಪ್ರಸ್ತುತ ಲೇಖನದ ಆಶಯವಾಗಿದೆ.

## ಕಲ್ಯಾಣ ಚಾಲುಕ್ಯರ ಕೊಡುಗೆಗಳು

ಹತ್ತನೆಯ ಶತಮಾನದ ಕೊನೆಯ ದಶಕದಲ್ಲಿ ದಕ್ಷಿಣ ಭಾರತದಲ್ಲಿ ಕಲ್ಯಾಣದ ಚಾಲುಕ್ಯರೆಂಬ ಹೊಸದೊಂದು ಶಕ್ತಿ ಮಳಖೇಡದ ರಾಷ್ಟ್ರಕೂಟರ ನಂತರ ಉದಯವಾಯಿತು. ರಾಷ್ಟ್ರಕೂಟರ 3ನೆಯ ಕೃಷ್ಣನ ಸಾಮಂತ 2ನೆಯ ತೈಲಪನು ಪರಮಾರ ಅರಸ ಮಾನ್ಯಖೇಟದ ಮೇಲೆ ದಾಳಿಮಾಡಿದ ಸಮಯ ಸಾಧಿಸಿ ತನ್ನ ಸ್ವಾತಂತ್ರ್ಯವನ್ನು ಸಾರಿದನು.[2] ನಂತರ ಕ್ರಿ.ಶ. 973ರಲ್ಲಿ 3ನೆಯ ಕರ್ಕನನ್ನು ಸೋಲಿಸಿ ಕಲ್ಯಾಣದಲ್ಲಿ ರಾಜ್ಯ ಸ್ಥಾಪಿಸಿದನು. ಕಲ್ಯಾಣದಲ್ಲಿ ರಾಜ್ಯ ಸ್ಥಾಪಿಸಿದ್ದರಿಂದ ಚರಿತ್ರೆಯಲ್ಲಿ ಕಲ್ಯಾಣ ಚಾಲುಕ್ಯರೆಂದು ಪ್ರಸಿದ್ಧರಾಗಿದ್ದಾರೆ. ಸುಮಾರು ಎರಡು ಶತಮಾನಗಳ(ಕ್ರಿ. ಶ. 973–1186) ಕಾಲ ಆಳ್ವಿಕೆ ಮಾಡಿದ್ದಾರೆ. ಕಲ್ಯಾಣದ ಚಾಲುಕ್ಯರು ಮತ್ತು ಅವರ ಅಧೀನದಲ್ಲಿ ಪ್ರಾದೇಶಿಕ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ಮಹಾಮಂಡಳೇಶ್ವರರು, ಮಹಾಸಾಮಂತರು, ಪ್ರಭುಗಾವುಂಡರು, ಗಾವುಂಡರು ಮೊದಲಾದ ಪ್ರಭುವರ್ಗದವರು, ದಂಡನಾಯಕರು, ಸಮಕಾಲೀನ ವರ್ತಕರು, ಶ್ರಾವಕರು ಹಾಗೂ ಅಂದು ವಿವಿಧ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಮಂತ್ರಿಮಹೋದಯರು ಬಸದಿಗಳ ನಿರ್ಮಾಣ, ಜೀರ್ಣೋದ್ಧಾರ, ಶಿಲ್ಪಗಳ ಪ್ರತಿಷ್ಠಾಪನೆ, ಚತುರ್ವಿಧ (ಅಭಯ, ಆಹಾರ, ಶಾಸ್ತ್ರ, ಔಷಧ) ದಾನ–ದತ್ತಿಗಳು, ಜೈನಾಚಾರ್ಯರು ಮತ್ತು ಜೈನ ಕವಿಗಳಿಗೆ ಆಶ್ರಯ–ಪ್ರೋತ್ಸಾಹ ಮೊದಲಾದ ಚಟುವಟಿಕೆಗಳನ್ನು ಕೈಗೊಳ್ಳುವ ಮೂಲಕ ಜೈನ ಸಾಂಸ್ಕೃತಿಕ ಕಾರ್ಯಗಳಿಗೆ ಸ್ಫೂರ್ತಿ–ಪ್ರೇರಣೆ ಕೊಡಮಾಡಿದ್ದಾರೆ. ಈ ಕಾಲದಲ್ಲಿ ಗದಗ, ಬೆಟಗೇರಿ, ಕಳಸಾಪುರ, ಕೋಟುಮಚಗಿ, ಸೂಡಿ, ಸವಡಿ, ಗಾವರವಾಡ, ಮುಳಗುಂದ, ಲಕ್ಕುಂಡಿ, ಅಣ್ಣಿಗೇರಿ, ನವಲಗುಂದ, ಹೂಲಿ, ವಿಕ್ರಮಪುರ, ಕುಕನೂರು, ಇಟಗಿ, ಮುಳಗುಂದ, ಮಲ್ಲಸಮುದ್ರ, ಹೊಂಬಳ, ನಾಗಸಮುದ್ರ, ಹೊಸೂರು, ಚಿಂಚಲಿ, ಕುರ್ತಕೋಟಿ, ಕಿರಟಗೇರಿ, ನೀರಲಗಿ, ಹಾತಲಗೇರಿ, ಜಕ್ಕಲಿ, ಸವಡಿ, ಕುರುಹಟ್ಟಿ, ಕೊಡಗಾನೂರು, ನರಗುಂದ ಹಾಗೂ ಸೋಮಾಪುರ ಮೊದಲಾದೆಡೆಗಳಲ್ಲಿ ಬಸದಿಗಳ ನಿರ್ಮಾಣ, ಶಿಲ್ಪಗಳ ಪ್ರತಿಷ್ಠಾಪನೆ ಇತ್ಯಾದಿ ಸಾಂಸ್ಕೃತಿಕ ಚಟುವಟಿಕೆಗಳು ನಡೆದಿವೆ.[3] ಕಲ್ಯಾಣ ಚಾಲುಕ್ಯರ ಆಳ್ವಿಕೆಯ ಪೂರ್ವಾರ್ಧದಲ್ಲಿ ಜೈನಧರ್ಮವು ಅತ್ಯಂತ ಉಚ್ಛ್ರಾಯ ಸ್ಥಿತಿಯಲ್ಲಿತ್ತು.

ಕಲ್ಯಾಣದ ಚಾಲುಕ್ಯರ ಆಹವಮಲ್ಲದೇವ ಇರಿವಬೆಡಂಗ ಸತ್ಯಾಶ್ರಯನ ಆಳ್ವಿಕೆಯಲ್ಲಿ ದಾನಚಿಂತಾಮಣಿ ಅತ್ತಿಮಬ್ಬೆಯು ನಾಡಿನಾದ್ಯಂತ ನಿರ್ಮಿಸಿದ ಸಾವಿರದಾ ಐನೂರು ಬಸದಿಗಳಿಗೆಲ್ಲ ಕಳಶಪ್ರಾಯವಾಗಿ 1501ನೆಯ ಬಸದಿಯನ್ನು ವಿಷ್ಣುಪುರಿ ವೈಕುಂಠದಂತಿದ್ದ ಅಗ್ರಹಾರ ಲಕ್ಕುಂಡಿಯಲ್ಲಿ ಕ್ರಿ. ಶ. 1007ರಲ್ಲಿ ನಿರ್ಮಿಸಿ, ಆಹವಮಲ್ಲದೇವನಿಗೆ ಬಿನ್ನಹ ಮಾಡಿಕೊಂಡು ಚಕ್ರವರ್ತಿದತ್ತಿಯಾಗಿ ಪಡೆದ ಸುರುಕಿ ಗ್ರಾಮವನ್ನು ತನ್ನ ಗುರುಗಳಾದ ಸೂರಸ್ತಗಣದ ಕೌರೂರುಗಚ್ಛ ಪರಂಪರೆಯ ಅರಹನಂದಿಪಂಡಿತದೇವನ ಸನ್ನಿಧಿಯಲ್ಲಿ ತಳವೃತ್ತಿಯಾಗಿ ದತ್ತಿ ಕೊಟ್ಟಿದ್ದಾಳೆ.[4] ಅದೇ ಶಾಸನದಲ್ಲಿ ದಾನಚಿಂತಾಮಣಿ ಅತ್ತಿಮಬ್ಬೆ ಲಕ್ಕುಂಡಿಯಲ್ಲಿ ಮಾಡಿಸಿದ ಆದಿನಾಥ ಬಸದಿಗೆ ಪ್ರತಿಬದ್ಧವಾದ (ಅಧೀನವಾದ) ತೋಂಟದ ಘಟಾಂತಿಕೆಯ ಬಸದಿಯ ಪಾರ್ಶ್ವನಾಥ ದೇವರಿಗೆ ಮುನ್ನೂರು ಪುಷ್ಪಗಳು ಸಲ್ಲಬೇಕು, ಈ ತೋಟವನ್ನು ಯಾರು ನೋಡಿಕೊಳ್ಳುತ್ತಾರೋ ಅವರು ಪುಷ್ಪಗಳನ್ನು ಸಲ್ಲಿಸುತ್ತ ನಡೆಯಬೇಕು ಎಂದು ನಿರೂಪಣೆಯಿದೆ.[5] ಚಿಕ್ಕಬಸದಿಯ (ಅಜಿತನಾಥ ಬಸದಿ) ಎಡಬದಿಯಲ್ಲಿರುವ ಹಾಳು ಬಸದಿಯ ಮುಖಮಂಟಪದ ತಲಪಾಯದ (ಅಧಿಷ್ಠಾನ) ಮೇಲೆ ಸತ್ಯಾಶ್ರಯನ ರಾಜ್ಯದಲ್ಲಿನ ಅತ್ತಿಯಬ್ಬೆಯ(ಅತ್ತಿಮಬ್ಬೆ) ಬಸದಿಗೆ ದತ್ತಿ ಬಿಟ್ಟರು ಎಂದು ಒಂದು ಸಾಲಿನ ಶಾಸನವಿದೆ.[6] ಇದೇ ತಲಪಾಯದ ಮೇಲೆ ಮಹಾಗುಡ್ಡರಾದ(ಶಿಷ್ಯರು) ಬಸವಯ್ಯ ಮತ್ತು ಮದಯ್ಯ(ಮಾದಯ್ಯ)

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಎಂಬುವವರು ಮನೆಯನ್ನು ದಾನ ಮಾಡಿದರು ಎಂದು ಒಂದು ಸಾಲಿನ ಶಾಸನವಿದೆ.[7]

ಇಮ್ಮಡಿ ಜಯಸಿಂಹನ ಕ್ರಿ. ಶ. 1027ರ ಬ್ಯಾಹಟ್ಟಿಯ ಶಾಸನದಲ್ಲಿ ವಾಮನರಸ ಮತ್ತು ಹನ್ನೆರಡು ಗಾವುಂಡರು ಬಸದಿಗೆ ತೆರಿಗೆಯನ್ನು ದಾನ ಮಾಡಿದ ನಿರೂಪಣೆಯಿದೆ.[8] 1ನೆಯ ಜಗದೇಕಮಲ್ಲನ (ಕ್ರಿ. ಶ. 1015–1042) ಆಳ್ವಿಕೆಯ ಕಾಲಾವಧಿಯಲ್ಲಿ ಎಲೆಯ ಪೊಸವೂರಿನ (ಇಂದಿನ ಹೊಸೂರು) ಪ್ರಭುಗಾವುಂಡನೂ, ನಾಗಚಂದ್ರಮುನಿಯ ಶಿಷ್ಯನೂ, ಮೊರಕಾಮ್ನಾಯ ತಿಳಕನೂ ಆದ ಆಯ್ಚರಸನು ತನ್ನ ಧರ್ಮಪತ್ನಿ ಕಂಚಿಕಬ್ಬೆಯ ಪರೋಕ್ಷ ವಿನಯಾರ್ಥವಾಗಿ ಬಸದಿಯನ್ನು ಮಾಡಿಸಿ, ಅದರ ಪೂಜಾದಿಗಳಿಗೆ ಅಡಕೆ ತೋಟ, ಇಪ್ಪತ್ನಾಲ್ಕು ಮತ್ತರು ಭೂಮಿಯನ್ನು ದಾನ ಮಾಡಿದ್ದನು. ಆತನ ಹಿರಿಯ ಮಗ ಎರಗನ ಮಗನಾದ ಪೊಲೆಗನು ಕ್ರಿ. ಶ. 1028ರಲ್ಲಿ ಅದೇ ಬಸದಿಗೆ ಬೇರೆ ಬೇರೆ ದಾನಗಳನ್ನು ಕೊಟ್ಟಿದ್ದಾನೆ.[9] ಇದರಿಂದ ಒಂದನೆಯ ಜಗದೇಕಮಲ್ಲನ ಅಧೀನ ದೊರೆಗಳು ಜೈನ ಧರ್ಮದ ಬಗೆಗೆ ಅಪಾರ ಕಾಳಜಿ ಹೊಂದಿದ್ದರೆಂದು ತಿಳಿಯುತ್ತದೆ. ಆಯ್ಚರಸನು ಕಟ್ಟಿಸಿದ ಈ ಬಸದಿಗೆ ದಾನ ಕೊಟ್ಟ ವಿಷಯವನ್ನು ತಿಳಿಸುವ ಈ ಶಾಸನವನ್ನು ಅವನ ಮೊಮ್ಮಗನಾದ ಪೊಲೆಗನು ಮಾಡಿಸಿದುದು ವಿಶೇಷವಾಗಿದೆ. ಈ ಶಾಸನವು ಹೊಸೂರಿನ ಶಿವಾಲಯದ ಮೇಲ್ಛಾವಣಿಯಲ್ಲಿ ಹಾಕಿ ಕಟ್ಟಲಾಗಿದೆ. ಈತನ ಕಾಲದಲ್ಲಿ ಈ ಹೊಸೂರು ಗ್ರಾಮ ಜೈನಪಂಗಡಗಳಲ್ಲೊಂದಾದ ಯಾಪನೀಯ ಸಂಘದ ಪ್ರಮುಖ ಕೇಂದ್ರವಾಗಿತ್ತು ಅದರ ಅವಶೇಷವಾಗಿ ಉಳಿದ ಈ ಸಂಘದ ಮಠ ಈಗಲೂ ಇದೆ.[10]

ತ್ರೈಲೋಕ್ಯಮಲ್ಲ ಆಹವಮಲ್ಲ 1ನೆಯ ಸೋಮೇಶ್ವರನ (ಕ್ರಿ. ಶ. 1042–1068) ಆಳ್ವಿಕೆಯ ಕಾಲಾವಧಿಯ ಹೂಲಿಯ ಕ್ರಿ. ಶ. 1044ರ ಶಾಸನವು ಚಾಲುಕ್ಯ ಆಹವಮಲ್ಲದೇವನು ರಾಜ್ಯವಾಳುತ್ತಿದ್ದಾಗ ರಟ್ಟ ಮನೆತನದ ಲಚ್ಚಿಯಬ್ಬರಸಿಯು ಊರಿನ ಪ್ರಮುಖ ಸಾಸಿರ ಮಹಾಜನಗಳ ಪಾದಗಳನ್ನು ತೊಳೆದು ಅವರಿಂದ ಭೂಮಿಯನ್ನು ಪಡೆದು ಹೂಲಿಯಲ್ಲಿ ಬಸದಿ ಮಾಡಿಸಿ, ಆ ಬಸದಿಯ ಖಂಡಸ್ಪುಟಿತ ಜೀರ್ಣೋದ್ಧಾರಕ್ಕೆ ಮತ್ತು ಮುನಿಗಳ ಆಹಾರದಾನಕ್ಕಾಗಿ ಆ ಬಸದಿಯ ಆಚಾರ್ಯರಾದ ಬಾಳಚಂದ್ರ ಭಟ್ಟಾರಕರ ಪಾದ ಪೂಜೆ ಮಾಡಿ ದಾನ ನೀಡಿರುವುದನ್ನು ಶಾಸನ ತಿಳಿಸುತ್ತದೆ.[11]

ಮುಳಗುಂದದ ಕ್ರಿ. ಶ. 1050ರ ಶಾಸನದಲ್ಲಿ ಚಂದ್ರಪ್ರಭನಾಥ ಬಸದಿಯ ದೇವರ ಚರುಗಿಗೆ (ಅಷ್ಟವಿಧ ಅರ್ಚನೆಗಳ ಪದಾರ್ಥಗಳಲ್ಲಿ ಒಂದು) ನರೇಂದ್ರಸೇನ ಪಂಡಿತನ ಶಿಷ್ಯ ನಯಸೇನ ಪಂಡಿತನ ಶಿಷ್ಯನೂ, ಸಮಸ್ತ ರಾಜರ ಕಿರೀಟ ಶೋಭಿತ ಅಡಿದಾವರೆಯುಳ್ಳವನೂ ಆದ ಸಿದ್ಧಸೇನಪಂಡಿತನ ಕಾಲುಗಳನ್ನು ತೊಳೆದು ಮುಳಗುಂದದ ತೀರ್ಥದ ಬಸದಿಯ ತಳದೊಳಗೆ ಚಿಂಚಿಲದ (ಚಿಂಚಲಿ) ಬೆಟ್ಟದಿಂದ ಪೂರ್ವದಲ್ಲಿ ಮುಳಗುಂದದ ನಗರೇಶ್ವರ ಗಡಿಂಬದ ಅಳತೆ ಕೋಲಿನಿಂದ ಅಳೆದು ಇಪ್ಪತ್ನಾಲ್ಕು ಮತ್ತರು ಗದ್ದೆಯನ್ನು ದತ್ತಿಕೊಟ್ಟ ಮತ್ತು ಬಿಬ್ಬದ ಶಂಕಿಮಯ್ಯ ಸೆಟ್ಟಿಯು ತಾನಿರುವ ಮನೆಯನ್ನು ದಾನ ಮಾಡಿದ ಪ್ರಸ್ತಾಪವಿದೆ.[12] ಜಿನತ್ವದಲ್ಲಿ ಸದ್ಭಾವನೆ ಹೊಂದಿರುವ ಒಂದನೆಯ ಸೋಮೇಶ್ವರನು ಚಂದ್ರಪ್ರಭದೇವರ ಪೂಜೆಗೆ ತೆರಿಗೆಗಳಿಲ್ಲದೆ ಈ ದಾನವನ್ನು ನೀಡಿದ್ದಾನೆ. ಈತನ ಹಿರಿಯ ಮಗ ಇಮ್ಮಡಿ ಸೋಮೇಶ್ವರನು ಮಹಾ ಮಂಡಳೇಶ್ವರನಾಗಿ ಬೆಳ್ವೊಲ–300 ಮತ್ತು ಪುಲಿಗೆರ–300 ಎರಡರುನೂರು ಪ್ರದೇಶಗಳನ್ನು ಆಳುತ್ತಿರುವಾಗ ಮುಳುಗುಂದದ ಚಂದ್ರನಾಥ ಬಸದಿಗೆ ದಾನ ಕೊಟ್ಟಿರುವುದನ್ನು ಅಲ್ಲಿಯ ಕ್ರಿ.ಶ. 1053ರ ಶಾಸನವು ನಿರೂಪಿಸುತ್ತದೆ.[13] ದಾನದ ವಿವರಗಳು ಈ ಶಾಸನದಿಂದ ಸ್ಪಷ್ಟವಾಗುವುದಿಲ್ಲ, ಆದರೆ ಇದೇ ಅವಧಿಯಲ್ಲಿ 2ನೆಯ ಭುವನೈಕಮಲ್ಲ ಸೋಮೇಶ್ವರನು ಈ ಪ್ರದೇಶದಲ್ಲಿ ಜಿನಾಲಯ ಮತ್ತು ಇತರೆ ದೇವಾಲಯಗಳನ್ನು ಖಂಡಸ್ಪುಟಿತ ಜೀರ್ಣೋದ್ಧಾರ ಮಾಡಿಸಿ ದಾನಿಗಳಿಂದ ಪುನರ್ಭರಣಗೊಳಿಸಿದ ಸಂಗತಿಯನ್ನು ನಂದವಾಡಿಗೆಯ ಶಾಸನವು ದಾಖಲಿಸುತ್ತದೆ.[14] ಈ ದೊರೆಯ ಕಾಲದಲ್ಲಿ ಸಂಸ್ಕೃತ ಕವಿ ಮಲ್ಲಿಷೇಣನು ಈ ಪ್ರದೇಶದಲ್ಲಿದ್ದು ಸಾಹಿತ್ಯ ಸೃಷ್ಟಿ ಮಾಡಿದನು. ಈತನು ಜೈನಧರ್ಮಕ್ಕೆ ಗುರುವಾಗಿದ್ದು ಅದನ್ನು ಪೋಷಿಸಿದನು. ಇದರಿಂದ ಒಂದನೆಯ ಸೋಮೇಶ್ವರನು ಜೈನಕವಿಗಳಿಗೆ ಅಧಿಕ ಪ್ರೋತ್ಸಾಹ ಕೊಟ್ಟನೆಂದು ತಿಳಿಯುತ್ತದೆ. ಜೈನಧರ್ಮವನ್ನು ತಮ್ಮ ರಾಷ್ಟ್ರೀಯ ಧರ್ಮವನ್ನಾಗಿಸಿಕೊಂಡಿದ್ದ ಗಂಗ ಅರಸರ ರಾಜಕುವರಿ ಬಾಚಲದೇವಿಯನ್ನು ಸೋಮೇಶ್ವರನು ವಿವಾಹವಾಗಿದ್ದನು. ಇದು ಜೈನಧರ್ಮದವರೊಂದಿಗಿದ್ದ ಇವರ ಅನ್ಯೋನ್ಯ ಸಂಬಂಧಕ್ಕೆ ಸಾಕ್ಷಿಯಾಗಿದೆ.

ಗಾವರವಾಡದ ಕ್ರಿ. ಶ. 1071–72ರ ಶಾಸನದಲ್ಲಿ ಮಹಾಪ್ರಧಾನ ವಸುಧೈಕ ಬಾಂಧವ ರೇಚಿದೇವ ದಂಡನಾಯಕನು ಬಟ್ಟಕೆರೆಯ ಕಲಿದೇವಸ್ವಾಮಿ ಜಿನನ (ಆದಿನಾಥ ತೀರ್ಥಂಕರ) ಪಾದಾರ್ಚನೆಗೆ ಮತ್ತು ಕರ್ಪೂರ, ಕುಂಕುಮ, ಶ್ರೀಗಂಧ ಸಹಿತವಾಗಿ ಅಷ್ಟವಿಧಾರ್ಚನೆಗೆ ಹನ್ನೆರಡು ಮತ್ತರು ಭೂಮಿಯನ್ನು ದಾನ ಮಾಡಿದನು ಎಂದು ಪ್ರಸ್ತಾಪವಿದೆ.[15] ಸೋಮಾಪುರದ ಕ್ರಿ. ಶ. 1074ರ ಶಾಸನದಲ್ಲಿ ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯಲ್ಲಿ ಈ ಭಾಗದ ಮಹಾಮಂಡಳೇಶ್ವರನಾದ ಶಿಲಾಹಾರ ಮಾರಸಿಂಹನು ಈ ಗ್ರಾಮದಲ್ಲಿ ಬಸದಿಯನ್ನು ನಿರ್ಮಿಸಿ ಆ ಬಸದಿಯ ಜೀರ್ಣೋದ್ಧಾರಕ್ಕಾಗಿ ದಾನ ನೀಡಿದ ಮಾಹಿತಿಯನ್ನು ತಿಳಿಸುತ್ತದೆ.[16] ಆರನೆಯ ವಿಕ್ರಮಾದಿತ್ಯನ ಜಕ್ಕಲಿಯ ಕ್ರಿ. ಶ. 1117ರ ಶಾಸನವು ಈ ಗ್ರಾಮದ ಜಿನಾಲಯದ ಜೀರ್ಣೋದ್ಧಾರಕ್ಕಾಗಿ ದಾನ ನೀಡಿದ ಮಾಹಿತಿಯನ್ನು ಉಲ್ಲೇಖಿಸುತ್ತದೆ.[17]

ಕ್ರಿ. ಶ. ಸುಮಾರು 11–12ನೆಯ ಶತಮಾನದ ಶಾಸನದಲ್ಲಿ ಯಾಪನೀಯ ಸಂಘ ಪರಂಪರೆಯ ಶಿಷ್ಯನಾದ ಸೋಮವಂಶದ ರೇಮಿಸೆಟ್ಟಿ ತನ್ನ ಧರ್ಮದ ಅಭಿವೃದ್ಧಿಗಾಗಿ ಕಾಳಿಕಾದೇವಿಯ ನೇಮಿಸ್ವಾಮಿಯ ಬಸದಿಯನ್ನು ಜೀರ್ಣೋದ್ಧಾರ ಮಾಡಿಸಿದನು ಎಂದು ನಿರೂಪಣೆಯಿದೆ.[18] ಇದೇ ಶಾಸನದ ಹಿಂಬದಿಯಲ್ಲಿರುವ ಕ್ರಿ.ಶ. ಸುಮಾರು 11–12ನೆಯ ಶತಮಾನದ ಶಾಸನದಲ್ಲಿ ಕಲ್ಯಾಣದ ಚಾಳುಕ್ಯರ ತ್ರಿಭುವನಮಲ್ಲದೇವನ (6ನೆಯ ವಿಕ್ರಮಾದಿತ್ಯ) ಮಂಡಳೇಶ್ವರ ಬೀಚಿರಾಜನ ಬಿರುದಾವಳಿಗಳ ಪರಿಚಯವಿದೆ.[19] ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯಲ್ಲಿ ಈ ಭಾಗದ ಮಹಾಮಂಡಳೇಶ್ವರನಾದ ಬೀಚಿರಾಜನು ಯಾಪನೀಯ ಸಂಘದ ಮೂಲಗಣ ಸ್ಥಾನಗಚ್ಚ ಪರಂಪರೆಯ ಭದ್ರಬಾಹು ಮುನಿಗಳಿಗೆ ದಾನ ನೀಡಿದಂತೆ ಲಕ್ಕುಂಡಿಯ ಕ್ರಿ. ಶ. 12ನೆಯ ಶತಮಾನದ ಶಾಸನವು ಉಲ್ಲೇಖಿಸುತ್ತದೆ.[20] ಹೂಲಿಯ ಕ್ರಿ. ಶ. 1145ರ ಶಾಸನವು ಚಾಲುಕ್ಯ ಚಕ್ರವರ್ತಿ ಎರಡನೆಯ ಜಗದೇಕಮಲ್ಲದೇವನು ರಾಜ್ಯವಾಳುತ್ತಿದ್ದಾಗ ತನ್ನ ಅಜ್ಜಿ ಲಚ್ಚಿಯಬ್ಬರಸಿಯು ಮಾಡಿಸಿದ ಬಸದಿಯ ಖಂಡಸ್ಪುಟಿತ ಜೀರ್ಣೋದ್ಧಾರ ಮತ್ತು ಮುನಿಗಳ ಆಹಾರದಾನಕ್ಕಾಗಿ ಆ ಬಸದಿಯ ಆಚಾರ್ಯರು ಮತ್ತು ಮಠಾಧೀಶರಾದ ಯಾಪನೀಯ ಸಂಘದ ಪುನ್ನಾಗವೃಕ್ಷ ಮೂಲಗಣದ ರಾಮಚಂದ್ರ ದೇವರ ಪಾದ ಪೂಜೆ ಮಾಡಿ ಬಸದಿಗೆ ಆಕೆಯ ಮೊಮ್ಮಗನಾದ ಪೂಲಿಯ ನೇಮಯ್ಯಾ (ನೇಮಣ)ನು ಭೂದಾನ ನೀಡಿರುವುದನ್ನು ಶಾಸನ ನಿರೂಪಿಸುತ್ತದೆ.[21]

4ನೆಯ ಸೋಮೇಶ್ವರನ ಆಳ್ವಿಕೆಯ ಕ್ರಿ. ಶ. 1184ರ ಶಾಸನದಲ್ಲಿ ವಸುಧೈಕ ಬಾಂಧವನು ಗ್ರಾಮಚಕ್ರವರ್ತಿ ಎಂದೆನಿಸಿದ ಲೊಕ್ಕಿಗುಂಡಿಯಲ್ಲಿ ಬಸದಿಯನ್ನು ಮಾಡಿಸಿ, ಅದರಲ್ಲಿ ತ್ರಿಭುವನತಿಳಕ ಶಾಂತಿನಾಥನ ಶಿಲ್ಪವನ್ನು ಪ್ರತಿಷ್ಠಾಪಿಸಿದ ಮತ್ತು ಶಾಂತಿನಾಥ ದೇವರ ಅಂಗಭೋಗ, ರಂಗಭೋಗ, ನಿತ್ಯನೈಮಿತ್ತಿಕ ಪೂಜೆ, ಖಂಡಸ್ಫುಟಿತ ಜೀರ್ಣೋದ್ಧಾರ, ಆಹಾರ

ದಾನಗಳಿಗಾಗಿ ಬೆಳ್ವೊಲ ಮುನ್ನೂರರಲ್ಲಿಯ ಬೆಳುಹೋಡೆ (ಗದಗ ತಾಲ್ಲೂಕಿನ ಬೆಲಹೋಡ) ಗ್ರಾಮವನ್ನು ಮೂಲ ಸಂಘದ ದೇಶಿಯ ಗಣದ ಪುಸ್ತಕಗಚ್ಛದ ಇಂಗಳೇಶ್ವರ ಬಳಿ ಪರಂಪರೆಯ ಮಾಘನಂದಿಮುನಿಯ ಸನ್ನಿಧಿಯಲ್ಲಿ ದತ್ತಿಯಾಗಿ ಕೊಡಲಾಯಿತು ಎಂದು ನಿರೂಪಣೆಯಿದೆ.[22] ಇದರಿಂದ ಲಕ್ಕುಂಡಿಯಲ್ಲಿ ವಸುಧೈಕ ಬಾಂಧವ ಬಿರುದಾಂಕಿತ ರೇಚಣ ದಂಡನಾಯಕನು ತ್ರಿಭುವನತಿಲಕ ಶಾಂತಿನಾಥ ಬಸದಿಯನ್ನು ಮಾಡಿಸಿದ ಸಂಗತಿ ಮನದಟ್ಟಾಗುತ್ತದೆ. ಕ್ರಿ. ಶ. 1185ರ ಶಾಸನದಲ್ಲಿ ಕಲ್ಯಾಣದ ಚಾಲುಕ್ಯರ ತ್ರಿಭುವನಮಲ್ಲ ವೀರಸೋಮೇಶ್ವರ ದೇವನ (4ನೆಯ ಸೋಮೇಶ್ವರ) ಆಳ್ವಿಕೆಯ ಸಂದರ್ಭದಲ್ಲಿ, ಲಕ್ಕುಂಡಿಯ ಊರೊಡೆಯ ಪ್ರಮುಖರ (ಮಹಾಜನರು) ಸನ್ನಿಧಾನದಲ್ಲಿ (ಉಪಸ್ಥಿತಿಯಲ್ಲಿ), ಅಚ್ಚಿನ ಮೊಳೆಯ ಕೇಣಿಕಾರ ವಿಷ್ಣುಸೆಟ್ಟಿ (ಗುತ್ತಿಗೆದಾರರ ಸಂಘದ ಸದಸ್ಯ ಅಥವಾ ಮುಖ್ಯಸ್ಥ) ನೋಂಪಿಯ ಬಸದಿಯ ದೇವರ ಅಷ್ಟವಿಧಾರ್ಚನೆಗೆ ಐದು ಹಣಗಳನ್ನು, ಹನ್ನಿರ್ವರು (ವ್ಯಾಪಾರಿಗಳು) ಅಜ್ಜಿಯ (ಜೈನ ಸನ್ಯಾಸಿನಿ) ವಸ್ತ್ರದಾನಕ್ಕೆ ಪ್ರತಿವರ್ಷ ಒಂದು ಹಣವನ್ನು, ಬೆಳ್ಳಿ ಗಮ್ಮಟದವರು ಅಜ್ಜಿಯ ವಸ್ತ್ರದಾನಕ್ಕೆ ತಮ್ಮ ಕಮ್ಮಟದಿಂದ ಒಂದು ಪಣವನ್ನು ದಾನ ಮಾಡಿದರು ಎಂದು ನಿರೂಪಣೆಯಿದೆ.[23]

ಕ್ರಿ. ಶ. 1185ರ ಶಾಸನದಲ್ಲಿ ಕಲ್ಯಾಣದ ಚಾಲುಕ್ಯರ ತ್ರಿಭುವನಮಲ್ಲ ವೀರಸೋಮೇಶ್ವರ ದೇವನ ಆಳ್ವಿಕೆಯ ಸಂದರ್ಭದಲ್ಲಿ, ಲೊಕ್ಕಿಗುಂಡಿಯ ಅಶೇಷ ಕೊತ್ತಳಿಗಳು (ಬೇರೆ ಬೇರೆ ಉದ್ಯೋಗದವರ ಸಂಘದ ಸದಸ್ಯರು) ಮುಖ್ಯವಾಗಿ ಕೇಶವದೇವರ ಮಾದಿವೋಜ, ದೇವೋಜ, ಕಮ್ಮಟದ ಹಿರಿಯ ಕೇತೋಜ, ರುದ್ರೋಜ, ರಾಮೋಜ, ನಾಗೀಂದ್ರ ಕೇಶವದೇವರ ರೂವಾರಿ ಗಣಪೋಜ, ಶಾಂತಿನಾಥದೇವರ ಓಜ ಸೋವೋಜ, ದಾಳಿಸೆಟ್ಟಿಯ ಬಮ್ಮೋಜ, ಅಯಿಸೆಟ್ಟಿಯರ ಜಿನ್ನೋಜ ಮೊದಲಾದ ಹಲವು ಓಜರು ಕೂಡಿಕೊಂಡು ಕಮ್ಮಟ ಜಿನಾಲಯದ ಶಾಂತಿನಾಥ ದೇವರಿಗೆ ಹಣವನ್ನು(ಮೂರು ಹಾಗ, ಎರಡು ಬೇಳೆ) ದಾನ ಮಾಡಿದರು ಎಂದು ನಿರೂಪಣೆಯಿದೆ.[24]

## ಸಮಾರೋಪ

ಸುಮಾರು ಎರಡು ಶತಮಾನಗಳ ಕಾಲ ಕನ್ನಡ ನಾಡಿನ ಸಂಸ್ಕೃತಿ ಮತ್ತು ಪರಂಪರೆಗೆ ವಿಶೇಷವಾದ ಕೊಡುಗೆ ನೀಡಿದ ಕಲ್ಯಾಣ ಚಾಲುಕ್ಯರು ಬೆಳ್ವೊಲನಾಡಿನ ಜೈನ ಪರಂಪರೆಗೂ ಕೂಡಾ ಮಹತ್ವದ ಕೊಡುಗೆಳನ್ನು ಸಲ್ಲಿಸಿರುವುದು ಅಂದಿನ ಶಾಸನಗಳ ಅಧ್ಯಯನದಿಂದ ತಿಳಿದು ಬರುತ್ತದೆ. ಕಲ್ಯಾಣದ ಚಾಲುಕ್ಯರು ಮತ್ತು ಅವರ ಅಧೀನದಲ್ಲಿ ಪ್ರಾದೇಶಿಕ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ಮಹಾಮಂಡಳೇಶ್ವರರು, ಮಹಾಸಾಮಂತರು, ಪ್ರಭುಗಾವುಂಡರು, ಗಾವುಂಡರು ಮೊದಲಾದ ಪ್ರಭುವರ್ಗದವರು, ದಂಡನಾಯಕರು, ಸಮಕಾಲೀನ ವರ್ತಕರು, ಶ್ರಾವಕರು ಹಾಗೂ ಅಂದು ವಿವಿಧ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಮಂತ್ರಿಮಹೋದಯರು ಬಸದಿಗಳ ನಿರ್ಮಾಣ, ಜೀರ್ಣೋದ್ಧಾರ, ಶಿಲ್ಪಗಳ ಪ್ರತಿಷ್ಠಾಪನೆ, ಚತುರ್ವಿಧ (ಅಭಯ, ಆಹಾರ, ಶಾಸ್ತ್ರ, ಔಷಧ) ದಾನ–ದತ್ತಿಗಳು, ಜೈನಾಚಾರ್ಯರು ಮತ್ತು ಜೈನ ಕವಿಗಳಿಗೆ ಆಶ್ರಯ–ಪ್ರೋತ್ಸಾಹ ಮೊದಲಾದ ಚಟುವಟಿಕೆಗಳನ್ನು ಕೈಗೊಳ್ಳುವ ಮೂಲಕ ಜೈನ ಸಾಂಸ್ಕೃತಿಕ ಕಾರ್ಯಗಳಿಗೆ ಸ್ಫೂರ್ತಿ–ಪ್ರೇರಣೆ ಕೊಡಮಾಡಿದ್ದಾರೆ.

## ಕೊನೆ ಟಿಪ್ಪಣಿ

1. ಸೀತಾರಾಮಯ್ಯ ಎಂ.ವಿ.(ಸಂ.), ಶ್ರೀವಿಜಯ ಕೃತ ಕವಿರಾಜಮಾರ್ಗಂ, ಪು. 111.
2. ಗೋಪಾಲ ಬಿ.ಆರ್., ದಿ ಚಾಲುಕ್ಯಾಸ್ ಆಫ್ ಕಲ್ಯಾಣ ಅ್ಯಂಡ್ ದಿ ಕಲಚೂರಿ, ಪು. 55.
3. ಹಂಜೆ ಅಪ್ಪಣ್ಣ ಎನ್., ಕರ್ನಾಟಕದ ಬಸದಿಗಳು, ಪು. 21–22.
4. ಎಸ್.ಆಯ್.ಆಯ್., ಸಂ. 11–1, ಶಾ.ಸಂ. 52
5. ಅದೇ, ಶಾಸನ
6. ಗೋಗಿ ಹನುಮಾಕ್ಷಿ, ಲಕ್ಕುಂಡಿ ಶಾಸನಗಳು, ಶಾ.ಸಂ. 18ಬ.
7. ಅದೇ, ಶಾ.ಸಂ. 18 ಅ.
8. ಕಲಬುರ್ಗಿ ಎಂ.ಎಂ.(ಸಂ.), ಧಾರವಾಡ ಜಿಲ್ಲೆಯ ಶಾಸನ ಸೂಚಿ, ಶಾ.ಸಂ. 53, ಪು. 5.
9. ಎಸ್.ಆಯ್.ಆಯ್., ಸಂ. 11–1, ಶಾ.ಸಂ. 65.
10. ಹಂಪ ನಾಗರಾಜಯ್ಯ, ಯಾಪನೀಯ ಸಂಘ, ಪು. 79
11. ಕ.ಜೈ.ಶಾ., ಸಂ. 4, ಶಾ. ಸಂ. 84, ಪು. 200–202.
12. ಹಾಜವಗೋಳ ಧನವಂತ, ಮುಳಗುಂದ ನಾಡು: ಒಂದು ಅಧ್ಯಯನ, ಶಾ.ಸಂ. 7, ಪು. 373.
13. ಅದೇ, ಶಾ. ಸಂ. 7, ಪು. 374.
14. ಹಂಪ ನಾಗರಾಜಯ್ಯ, ನಂದವಾಡಿಗೆಯ ಶಾಸನ, ಚಂದ್ರಕೊಡೆ, ಪು. 203–228
15. ಇ.ಆಯ್., ಸಂ. 15, ಶಾ.ಸ. 23/ಬಿ.
16. ಎಸ್.ಆಯ್.ಆಯ್., ಸಂ. 18, ಶಾ.ಸಂ. 79
17. ಎಸ್.ಆಯ್.ಆಯ್., ಸಂ. 11, ಶಾ.ಸಂ. 166
18. ಗೋಗಿ ಹನುಮಾಕ್ಷಿ, ಪೂರ್ವೋಕ್ತ, ಶಾ.ಸಂ. 31.
19. ಅದೇ, ಶಾ.ಸಂ. 30.
20. ಹನುಮಾಕ್ಷಿ ಗೋಗಿ., ಪೂರ್ವೋಕ್ತ, ಪುಟ–53–55.
21. ಎಸ್.ಆಯ್.ಆಯ್., ಸಂ. 5, ಶಾ.ಸಂ. 849, ಅದೇ, ಸಂ. 4, ಶಾ. ಸಂ. 85 ಪು. 203–204.
22. ಗೋಗಿ ಹನುಮಾಕ್ಷಿ, ಪೂರ್ವೋಕ್ತ, ಶಾ.ಸಂ. 57.
23. ಎಸ್.ಆಯ್.ಆಯ್., ಸಂ. 15, ಶಾ.ಸಂ. 67.
24. ಅದೇ, ಶಾಸನ

## ಪರಾಮರ್ಶನ ಗ್ರಂಥಗಳು


- **ಗೋಪಾಲರಾವ್ ಎಚ್.ಎಸ್., (1993)** : ಶಾಸನಗಳ ಹಿನ್ನಲೆಯಲ್ಲಿ ಕಲ್ಯಾಣ ಚಾಲುಕ್ಯರ ದೇವಾಲಯಗಳು, ಮೈಸೂರು ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ.
- **ದೇವರ ಕೊಂಡಾರೆಡ್ಡಿ (ಸಂ.)(2019)** : ಕರ್ನಾಟಕ ಜೈನ ಶಾಸನ ಸಂಪುಟ–4, ಹಂಪಿ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- **ನಾಗಯ್ಯ ಜೆ.ಎಂ.(ಸಂ.) (2011)** : ಕಲ್ಯಾಣ ಚಾಲುಕ್ಯರ ಶಾಸನಗಳು ಸಂಪುಟ–1, ಕುವೆಂಪು ಮೈಸೂರು ಕನ್ನಡ ಅಧ್ಯಯನ ಸಂಸ್ಥೆ, ವಿಶ್ವವಿದ್ಯಾನಿಲಯ, ಮೈಸೂರು.
- **ನಾಗರಾಜು ಡಿ. ಎಂ. (2012)** : ಕಲ್ಯಾಣ ಚಾಲುಕ್ಯ ಆರನೆಯ ವಿಕ್ರಮಾದಿತ್ಯನ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಮೈಸೂರು ಗೌತಮ ಪ್ರಕಾಶನ.
- **ಹಾಜವಗೋಳ ಧನವಂತ (2004)** : ಮುಳಗುಂದ ನಾಡು ಒಂದು ಅಧ್ಯಯನ, ಧಾರವಾಡ ಮಹಾದೇವಿ ಪ್ರಕಾಶನ.
- **ಹಂಜೆ ಅಪ್ಪಣ್ಣ ಎನ್. (2015)** : ಲಕ್ಕುಂಡಿಯ ಬಸದಿಗಳು, ಅಳಗವಾಡಿ ವಿದ್ಯಾಶ್ರೀ ಪ್ರಕಾಶನ.
- **ಹಂಪ ನಾಗರಾಜಯ್ಯ (1997)** : ಚಂದ್ರಕೊಡೆ (ಸಂಶೋಧನ ಲೇಖನಗಳ ಸಂಗ್ರಹ), ಪ್ರಸಾರಾಂಗ, ಹಂಪಿ ಕನ್ನಡ ವಿಶ್ವವಿದ್ಯಾಲಯ.


APPROVED BY UGC CARE

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಅಂಟಿಕೆ – ಪಂಟಿಕೆ : ಮಾಯವಾಗುತ್ತಿರುವ ಜನಪದ ಸಂಗೀತ

✍ **ಡಾ. ಹಂಪೇಶ್ ಕೆ.ಎಸ್.**, ಸಹ ಪ್ರಾಧ್ಯಾಪಕ, ಸ್ನಾತಕೋತ್ತರ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ (ಸ್ವಾಯತ್ತ) ಕಾಲೇಜು, ಉಜಿರೆ.

## ಮುನ್ನುಡಿ

ಭಾರತ ದೇಶದಲ್ಲೇ ನಮ್ಮ ಕರ್ನಾಟಕದ ಜಾನಪದ ಸಂಸ್ಕೃತಿ ಅತ್ಯಂತ ಶ್ರೀಮಂತವಾಗಿದೆ. ಕಲೆ, ಸಾಹಿತ್ಯ, ನೃತ್ಯ (ಡೊಳ್ಳು ಕುಣಿತ, ಕಂಸಾಳೆ, ಕರಡಿ ಮಜಲು, ವೀರಗಾಸೆ, ನಂದಿಕೋಲು ಕುಣಿತ, ಇತ್ಯಾದಿ), ನಾಟಕ (ಬಯಲಾಟ, ದೊಡ್ಡಾಟ, ಶ್ರೀ ಕೃಷ್ಣಪಾರಿಜಾತ, ಯಕ್ಷಗಾನ) ಮುಂತಾದ ವಿವಿಧ ಪ್ರಕಾರಗಳನ್ನು ನಮ್ಮ ಕನ್ನಡ ಜಾನಪದ ಸಂಸ್ಕೃತಿಯಲ್ಲಿ ಕಾಣಬಹುದು. ಕನ್ನಡ ಜಾನಪದ ಸಂಸ್ಕೃತಿಯು ಒಂದು ಭಾಗವಾದ ಜಾನಪದ ಗೀತೆಗಳು ಅತ್ಯಂತ ವೈವಿಧ್ಯಮಯವಾಗಿ ಕನ್ನಡನಾಡಿನ ವಿವಿಧ ಪ್ರದೇಶಗಳ ಪ್ರಾದೇಶಿಕ ಸೊಗಡುಗಳನ್ನು ನಮ್ಮ ಮುಂದಿನ ಪೀಳಿಗೆಗೆ ಜೋಪಾನ ಮಾಡಿವೆ ಎಂದರೆ ತಪ್ಪಲ್ಲ. ಇಂದಿನ ಪಾಶ್ಚಾತ್ಯ ಶೈಲಿಯ ಸಂಗೀತದ ಮಧ್ಯೆ ಜಾನಪದ ಗೀತೆಗಳು ತನ್ನ ಹಿಂದಿನ ವೈಭವವನ್ನು ಸ್ವಲ್ಪಮಟ್ಟಿಗೆ ಕಳೆದುಕೊಂಡಿವೆ ಎಂದೆನಿಸಿದರೂ ತನ್ನ ಮೂಲನೆಲೆಯಾದ ಹಳ್ಳಿಗಳಲ್ಲಿ ಇನ್ನೂ ತನ್ನ ನೆಲೆಯನ್ನು ಭದ್ರವಾಗಿ ಉಳಿಸಿಕೊಂಡಿರುವುದು ಸಮಾಧಾನ ತರುವ ಸಂಗತಿಯಾಗಿದೆ.

ಕಂಸಾಳೆ ಪದ, ಗೀಗೀಪದ, ಕೋಲಾಟದ ಪದ, ರಾಗಿ ಬೀಸೋ ಪದ, ಸುಗ್ಗಿ ಹಾಡುಗಳು, ಹೀಗೆ ಇನ್ನೂ ಅನೇಕ ವಿವಿಧ ಬಗೆಯ ಜಾನಪದ ಗೀತೆಗಳು ಆಯಾ ಪ್ರದೇಶದ ಜನರ ದೈನಂದಿನ ಚಟುವಟಿಕೆಗಳನ್ನು, ಕೌಟುಂಬಿಕ ಜೀವನವನ್ನು, ಸಂಬಂಧಗಳನ್ನು, ದೇವರುಗಳನ್ನು ಹಾಗೂ ಧಾರ್ಮಿಕ ಆಚರಣೆಗಳನ್ನು ನಮ್ಮ ಮುಂದೆ ತೆರೆದಿಡುತ್ತವೆ. ಈ ಜಾನಪದ ಗೀತೆಗಳನ್ನು ಸೃಷ್ಟಿಸಿದವರು ಯಾರೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಇವು ಹಳ್ಳಿಯ ಸಾಮಾನ್ಯ ಜನರ ನಡುವೆ ಹುಟ್ಟಿ ಬಾಯಿಂದ ಬಾಯಿಗೆ ಹರಿದು ಬಂದಿರುವ ಸಿರಿನುಡಿ ಎನ್ನಬಹುದು.

ಪ್ರಾಯಶಃ ಸಹಸ್ರಾರು ವರ್ಷದ ಹಿಂದೆ ಜಗತ್ತಿನಲ್ಲೆಲ್ಲ ಇದ್ದುದ್ದು ಜಾನಪದವೊಂದೇ, ಮಾನವನು ತಾನು ಮಾಡುವ ಕೆಲಸಗಳಲ್ಲೆಲ್ಲಾ ತನ್ಮಯತೆಯನ್ನು ತುಂಬಲು ಮಾಡಿದ ಪ್ರಯತ್ನಗಳ ಸರಮಾಲೆಯೇ ಜಾನಪದವಾಗಿರಬಹುದು. ತನ್ನ ಸುತ್ತಲಿನ ಪರಿಸ್ಥಿತಿಗೆ ತಕ್ಕಂತೆ ತಂತ್ರಜ್ಞಾನಗಳನ್ನೂ, ಆರೋಗ್ಯ ರಕ್ಷಣೆಗೆ ವೈದ್ಯಕೀಯವನ್ನೂ, ಪ್ರಕೃತಿಯ ಬಿರುಸಿಗೆ ಉತ್ತರವಾಗಿ ಭಕ್ತಿಯನ್ನೂ ಬೆಳೆಸಿಕೊಂಡಿರಬಹುದು.

ಜನಪದ ಮತ್ತು ಜಾನಪದ ಎಂಬ ಶಬ್ದಗಳು ಒಂದು ಸಾಮಾಜಿಕ ವ್ಯವಸ್ಥೆಯನ್ನು ಸೂಚಿಸುತ್ತವೆ. ಪ್ರತಿಯೊಂದು ಸಮಾಜವೂ ತನ್ನ ಪುರಾತನ ಸಾರವನ್ನು ಹೀರಿ ತನ್ನ ಸದ್ಯದ ಬದುಕಿಗೊಂದು ಅರ್ಥವನ್ನೂ, ತನ್ನ ಸದ್ಯದ ಸಮಸ್ಯೆಗಳಿಗೊಂದು ಪರಿಹಾರವನ್ನೂ, ತನ್ನ ಭಕ್ತಿಗೊಂದು ರೂಪವನ್ನೂ–ಕಲೆ, ತಂತ್ರಜ್ಞಾನ ಇತ್ಯಾದಿಗಳ ಬೆಳವಣಿಗೆಯನ್ನೂ ಸಾಮುದಾಯಿಕವಾಗಿ ನಿರ್ವಹಿಸುತ್ತದೆ. ಇದು ಯಾವುದೇ ಅಧಿಕಾರದ, ಸಂಪ್ರದಾಯದ ಪೋಷಣೆಯಿಲ್ಲದೇ ತನ್ನಿಂದ ತಾನೇ ಹರಿದು ಬಂದು ಮಣ್ಣಿನ ಸಂಸ್ಕೃತಿಯ ಸಾರವಾಗಿ 'ಜಾನಪದ' ಎನ್ನಿಸಿಕೊಂಡಿದೆ.

## ಜಾನಪದದ ಅರ್ಥ ಮತ್ತು ವ್ಯಾಖ್ಯಾನಗಳು

'ಜಾನಪದ' ಎನ್ನುವ ಪದ ಇಂಗ್ಲೀಷಿನಲ್ಲಿ Folklore ಎಂಬುದಕ್ಕೆ ಸಮನಾರ್ಥಕವಾಗಿ ಬಳಸಿರುವ ಕನ್ನಡ ಪದ. Folklore ಎನ್ನುವುದು Folk & Lore ಎಂಬ ಎರಡು ಪ್ರತ್ಯೇಕ ಅರ್ಥವನ್ನು ಉಳ್ಳ ಪದಗಳ ಸಂಯೋಗದಿಂದ ಕೂಡಿದೆ. Folk ಎನ್ನುವುದಕ್ಕೆ ಕನ್ನಡದಲ್ಲಿ ಜನಪದ ಎಂತಲೂ, Lore ಜ್ಞಾನ ಎಂತಲೂ ಇದೆ. ಜಾನಪದ ಜ್ಞಾನ ಈ ವಿಷಯಕ್ಕೆ ಡಾ. ಹಾ.ಮಾ. ನಾಯಕ ಅವರು ಜಾನಪದ ಎಂಬ ಶಬ್ದವನ್ನು ಬಳಸಿದ್ದಾರೆ. ಜನಪದ ಜ್ಞಾನವೇ ಜನಪದ ಎಂದು ಕರೆಯಬಹುದು. ಜನಪದರ ಸಾಹಿತ್ಯ, ಸಂಗೀತ, ನೃತ್ಯ, ಆಟ ಈ ಎಲ್ಲವನ್ನು ಒಳಗೊಂಡಿದ್ದೇ ಜಾನಪದವೆಂದು ಹೇಳಬಹುದು. ಮನುಷ್ಯನ ಬದುಕಿನೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿ ತಲೆ–ತಲೆಮಾರುಗಳಿಂದ ಬಂದಿರುವ ಮೌಖಿಕ ಪರಂಪರೆಯಲ್ಲಿ ಸಂಬಂಧ ಜ್ಞಾನವೇ ಜಾನಪದ.

ಆಂಡ್ರೋಲಾಂಗ್ ಎಂಬ ವಿದ್ವಾಂಸನು "ಜನಾಂಗಗಳ ಪಳೆಯುಳಿಕೆಗಳನ್ನು ಸಂಗ್ರಹಿಸಿ ಅಧ್ಯಯನ ಮಾಡುವ ವಿಜ್ಞಾನ, ಜನ ಜೀವನದಲ್ಲಿ ಇಂದಿಗೂ ಕಂಡು ಬರುವುದು. ಆದರೆ ಈ ಕಾಲದಲ್ಲಿ ಕತೆಗಳನ್ನು ನಂಬಿಕೆಗಳನ್ನು ವಿಚಾರಗಳನ್ನು ಕುರಿತು ವಿಜ್ಞಾನ ಅಧ್ಯಯನ ಮಾಡುತ್ತದೆ. ಸಮಾಜದ ಮುಂತಾದವುಗಳ ಮೊತ್ತವೇ ಜಾನಪದ ಎಂದಿದ್ದಾರೆ. ಎಡ್ವಿನ್ ಸಿಡ್ನಿ ಹಾರ್ಟ್‌ಲ್ಯಾಂಡ್ ಎಂಬ ಮತ್ತೊಬ್ಬ ವಿದ್ವಾಂಸನು "ಜಾನಪದ ಎನ್ನುವುದು ಸಂಪ್ರದಾಯದ ಪ್ರಜ್ಞೆ, ಅಂದರೆ ಪರಂಪರಾಗತ ಜ್ಞಾನವು ನೆನಪಿನ ರೂಪದಲ್ಲಿ ಕ್ರೀಯಾರೂಪದಲ್ಲಿ ಸಾಗಿಬರುವ ಪ್ರಕ್ರಿಯೆಯನ್ನು ಹಾರ್ಟ್‌ಲ್ಯಾಂಡ್ ಸಂಪ್ರದಾಯ ಎಂದೇ ಗುರುತಿಸಿರುವರು.

ಭಾರತೀಯ ವಿದ್ವಾಂಸರಾದ ಹಾ.ಮಾ.ನಾಯಕರು ಜಾನಪದ ಲಿಖಿತ ದಾಖಲೆಗಿಂತ ಜನತೆಯ ಗ್ರಂಥಸ್ಥವಲ್ಲದ ಸಾಂಪ್ರದಾಯಿಕ ಮೊತ್ತ. ಸಂಪ್ರದಾಯವನ್ನು ಕುರಿತಾದ ವಿಜ್ಞಾನ ಯಾವುದೇ ಸಮಾಜದ ವಾಚಿಕ ಪರಂಪರೆಗಳ ಕಲೆ ಮತ್ತು ನಂಬಿಕೆಗಳ ಮೊತ್ತ ಎಂದಿದ್ದಾರೆ. ದೇ.ಜವರೇಗೌಡರು ಮುಂದುವರೆದು "ಬಾಲ ಬಾಯಿಯಲ್ಲಿ ಬ್ರಹ್ಮಾಂಡವು ಅಡಗಿರುವಂತೆ ಜಾನಪದದಲ್ಲಿ ಎಲ್ಲವೂ ಅಡಗಿದೆ ಎಂದು ಜಾನಪದವನ್ನು ವಿವರಿಸಿದ್ದಾರೆ.

## ಅಂಟಿಗೆ–ಪಂಟಿಗೆ

ಅಂಟಿಗೆ–ಪಂಟಿಗೆಯು ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಕೆಲವು ಭಾಗಗಳಲ್ಲಿ ಪ್ರಚಲಿತದಲ್ಲಿರುವ ಕಲೆ. ಉತ್ತರ ಕರ್ನಾಟಕದಲ್ಲಿ ಇದನ್ನು **'ಬೆಳಕು ನೀಡುವ ಬಿಂಗಿ; 'ಬಿಂಗಿ ಪದ;** ಎಂದೂ ಕರೆಯುತ್ತಾರೆ. ಇದಕ್ಕೆ ಹಬ್ಬ ಹಾಡುವುದು, ದೀಪ ನೀಡುವುದು ಎಂಬ ಹೆಸರುಗಳೂ ಇವೆ. ತೀರ್ಥಹಳ್ಳಿಯ ಸುತ್ತಮುತ್ತ ಮಾತ್ರ ಇದಕ್ಕೆ ಅಂಟಿಕೆ–ಪಂಟಿಕೆ ಎನ್ನುತ್ತಾರೆ. ಅವಂಟಿಗ್ಯೋ–ಪವಂಟಿಗ್ಯೋ, ಅಡೀಪೀಡಿ, ಅಂಟಿ ಪಂಟಿ, ಅವಟಿಗೋ ಪವಟಿಗೋ, ಔಂಟಿಗ್ಯೋ–ಸುಂಟಿಗ್ಯೋ ಇತ್ಯಾದಿ ಹೆಸರುಗಳಿಂದ ಕರೆಯುತ್ತಾರೆ. ಮುಖ್ಯವಾಗಿ ದೀವರು, ಲಿಂಗಾಯಿತರು, ಬಂಟರು, ಒಕ್ಕಲಿಗರು ಹಾಗೂ ಹಸಲರು ಇದರಲ್ಲಿ ಪಾಲ್ಗೊಳ್ಳುತ್ತಾರೆ. ಅಂಟಿಗೆ–ಪಂಟಿಗೆ ಪದಗಳಲ್ಲಿ ಅಂಟಿಗೆ ಕುರಿತು ಗೋಜಲುಗಳಿವೆ. "ಅಂಟಿಸುವುದೇ ಅಂಟಿಗೆ" ಎನ್ನುವ ಅರ್ಥದಲ್ಲಿ ಆ ಪದವನ್ನು ಇಲ್ಲಿ ಪರಿಗಣಿಸುವುದು ಅವೈಜ್ಞಾನಿಕವಲ್ಲ. ಆದರೆ ಪಂಟಿಗೆಯ ಬಗೆಗೆ ಇನ್ನೂ ಗೊಂದಲಗಳಿವೆ. ವಿದ್ವಾಂಸರು ತಮಿಳಿನ ಪಂಟಿಗ್ಯೆ ಪದ ಕುರಿತು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಉಲ್ಲೇಖಿಸಿದ್ದಾರೆ. ಪಂಟಿಗೈ ಪದಕ್ಕಿರುವ ಹಬ್ಬ ಎನ್ನುವ ಅರ್ಥದಲ್ಲಿ ಅಂಟಿಗೆ–ಪಂಟಿಗೆಂಬುನ್ನು ದೀಪಾವಳಿ ಹಬ್ಬ ಎಂಬ ಮೂಲಾರ್ಥವಿರಬಹುದು ಎಂದಿದ್ದಾರೆ.

ಪಂಟಮ್ ಎಂಬ ಪದ ತಮಿಳು ಮತ್ತು ಮಲಯಾಳದಲ್ಲಿದೆ. ಅದರರ್ಥ 'ದೀಪ' ಎಂಬುದಾಗಿದೆ. ತುಳುವಿನಲ್ಲಿ ಇದು 'ಪಂಟೆ' ಅದುವೇ ಕನ್ನಡದ ಪಂಟಿಗೆ, ಹಾಗಾದುದರಿಂದ 'ಪಂಟಿಗೆ' ಪದದಿಂದ ಪಂಟಿಗೆಯ ನಿವೃತ್ತಿಯನ್ನು ಸಾಧಿಸಬೇಕಾಗಿಲ್ಲ. ಪಂಟಮ್, ಪಂಟೆ ಮೂಲದಿಂದ ಅಂಟಿಗೆ ಪಂಟಿಗೆಯ ನಿಷ್ಪತ್ತಿಯನ್ನು ಹೇಳುವುದಾದರೆ, ದೀಪ ಅಂಟಿಸುವುದು, ಜ್ಯೋತಿ ಅಂಟಿಸುವುದು ಎಂದಾಗುತ್ತದೆ. ಅಂಟಿಗೆ–ಪಂಟಿಗೆಯ ಆಚರಣೆ ಕೂಡ ಇದೇ ಆದುದರಿಂದ ಇಲ್ಲಿ ಹೆಚ್ಚಿನ ಗೊಂದಲವೇನೂ ಇಲ್ಲ.

## ಸಂಪ್ರದಾಯ

ದೀಪಾವಳಿ ಮಲೆನಾಡಿನ ಜನರಿಗೆ ದೊಡ್ಡ ಹಬ್ಬ. ಕಾರ್ತೀಕ ಮಾಸದ ಮೊದಲ ದಿನ ಬಲಿಪಾಡ್ಯಮಿಯಿಂದ ಪ್ರಾರಂಭಿಸಿ, ಕೆಲವು ಕಡೆ ಎರಡು ದಿನಗಳ ಕಾಲ ಮತ್ತೆ ಕೆಲವು ಕಡೆ ಐದು ದಿನಗಳ ಕಾಲ ಅಂಟಿಕೆ ಪಂಟಿಕೆ ಆಚರಣೆ ನೆಡೆಯುತ್ತದೆ. ಬಲೀಂದ್ರನ ಆರಾಧನೆಗಾಗಿಯೇ ರೂಪಗೊಂಡಿದೆ ಎಂದು ಹೇಳಲಾಗಿರುವ ಈ ಆಚರಣೆಯ ಹಿನ್ನಲೆಯ ದಂತಕತೆಯ ಪ್ರಕಾರ "ಬಲೀಂದ್ರನು ಭೂಮಿಯಲ್ಲಿ ಅವತರಿಸಿ, ತಾನು ಪ್ರತಿ ವರ್ಷವೂ ದೀಪಾವಳಿಯ ಸಂದರ್ಭದಲ್ಲಿ ಭೂಮಿಗೆ ಬರುವುದಾಗಿಯೂ ಈ ಅವಧಿಯಲ್ಲಿ ಎಲ್ಲರೂ ತಮ್ಮ ನೋವನ್ನು ಮರೆತು ಸಂತೋಷದಿಂದ ನನ್ನನ್ನು ಸ್ಮರಿಸಿ ಸ್ವಾಗತಿಸಿದರೆ ಅವರ ಇಷ್ಟಾರ್ಥಗಳನ್ನು ನೆರವೇರಿಸುವುದಾಗಿಯೂ ವರವನ್ನು ನೀಡಿದ" ಎಂಬ ನಂಬಿಕೆಯಿದೆ. ಬಲೀಂದ್ರನ ಅಂಶವು ಲೀನವಾಗಿದೆ ಎಂದು ನಂಬಲಾಗುವ **"ಕೈದೀಪ"**ವೊಂದನ್ನು ಹಿಡಿದ ಕಲಾವಿದರು ಮನೆಮನೆಗೆ ಹೋಗಿ ಬಲೀಂದ್ರನ ಸಂದೇಶವನ್ನು ನೆನಪು ಮಾಡಿಕೊಟ್ಟು ಅವನ ಮಹಿಮೆಯನ್ನು ಹಾಡಿ ಹೊಗಳುತ್ತಾರೆ.

ಜನರಿಗೆ ದೀಪಾವಳಿ ಬೆಳಕಿನ ಹಬ್ಬ, ಅವರ ಪಾಲಿನ ದೊಡ್ಡ ಹಬ್ಬ, ಮೊದಲ ದಿನ ನೀರುತುಂಬುವುದು, ಮೀಯುವ ಹಂಡೆ – ಹರವಿಗಳಿಗೆ ಜೋಡಿಕೆಮ್ಮಣ್ಣು ಸಾರಸಿ, ಜೊತೆಗೆ 'ಬೂರೆಕಳವು' ಆಚರಣೆ – ಅಂದರೆ ಆ ಒಂದು ರಾತ್ರಿ ಕಳ್ಳತನ ಮಾಡಲು ಅನುಮತಿ ಉಂಟು. ಅಂದು ಕದ್ದವರಿಗೆ ಶಿಕ್ಷೆ ಇಲ್ಲ. ಆದರೆ ಸಿಕ್ಕಿ ಬೀಳಬಾರದು. ಒಂದು ಪಕ್ಷ ಸಿಕ್ಕಿ ಬಿದ್ದರೆ ಅಪಶಕುನದ ಸೂಚನೆ ಎಂಬ ನಂಬಿಕೆ ಇದೆ. ಒಬ್ಬರ ಮನೆಯಲ್ಲಿ ಕಣ್ಣಿಕರು ನಾಪತ್ತೆಯಾದರೆ ಮತ್ತೊಬ್ಬರ ಮನೆಯ ಮೀಯುವ ಹಂಡೆಗೆ ಸಗಣಿಕಲ್ಲು ಮಣ್ಣು ಬೆರೆಸಿಡುತ್ತಾರೆ. ಮನೆಯ ಹಿತ್ತಲಲ್ಲಿ ತರಕಾರಿ, ಹಣ್ಣು ಹೂಗಳು ಕೂಡ ಸೂರೆಯಾಗುತ್ತವೆ. ಇವೆಲ್ಲವೂ ಬೂರೆಯ ಪರಿಣಾಮದಿಂದ ಆಗುತ್ತವೆ.

ಹಬ್ಬದ ಎರಡನೆಯ ದಿನ ಬಲಿಪಾಡ್ಯ, ಊರಿನವರಿಗೆ ಇದು ಪಾಡ್ಯದ ದಿನ. ಅಂದು ಹೊಲಗದ್ದೆಗಳ ಪೈರನ್ನು ಹೊಸದಾಗಿ ಮನೆಗೆ ತಂದು ಪೂಜೆ ಮಾಡಿ ಊರಿನ ದೇವರಿಗೆಲ್ಲಾ ತೆಗೆದುಕೊಂಡು ಹೋಗಿ ಅರ್ಪಿಸುತ್ತಾರೆ. ಇದನ್ನು ದೇವರಿಗೆ 'ಕದರು ಹಾಕುವುದು' ಎನ್ನುತ್ತಾರೆ. ಅಂದು ಸೂರ್ಯ ಮುಳುಗಿ ಕತ್ತಲು ಆವರಿಸುತ್ತಿರುವಾಗಲೇ ಹೊಲಗದ್ದೆಗಳ ಅಂಚುಗಳಲ್ಲಿ ಕೋಲುದೀಪಗಳು ಬೆಳಗುತ್ತೆ. ಚಾವಡಿಯಲ್ಲಿ ಹಣತೆಗಳು ಸಾಲುಗಟ್ಟುತ್ತವೆ. ಮನೆ – ಮನೆಯ ಮುಂದೆ ಇರುವ ತುಳಸಿಕಟ್ಟೆಯ 'ಗೂಡುದೀಪ' ಹಚ್ಚುತ್ತಾರೆ. ಊರಿನ ಉತ್ಸಾಹಿ ಯುವಕರು ದೇವಸ್ಥಾನದಲ್ಲೋ, ಜಟ್ಟಿಗನ ಬನದಲ್ಲೋ, ತುಳಸಿಕಟ್ಟೆಯ ಮುಂದೆಯೋ ಬಂದು ಸೇರುತ್ತಾರೆ. ದೇವರಿಗೆ ಭಕ್ತಿಯಿಂದ ಪೂಜೆ ಸಲ್ಲಿಸಿ ಉರಿಯುತ್ತಿರುವ ದೇವರ ನಂದಾದೀಪದಿಂದ ಜ್ಯೋತಿಗಳನ್ನು ಹಚ್ಚಿಸಿಕೊಳ್ಳುತ್ತಾರೆ. ಆಗ ಜ್ಯೋತಿ ಹಚ್ಚುವ ಪದ ಆರಂಭವಾಗುತ್ತದೆ. ತಮ್ಮ ಜ್ಯೋತಿ ಸತ್ಯದಿಂದ, ಆಯದಿಂದ, ಒಪ್ಪದಿಂದ ಉರಿಯುವಂತೆ ಪ್ರಾರ್ಥಿಸಿಕೊಳ್ಳುತ್ತಾರೆ. ಅನಂತರ ಅವರು ಹಣತೆಗೆ ವಂದನೆಗಳನ್ನು ಸಲ್ಲಿಸುತ್ತಾರೆ.

ದೀಪಾವಳಿಯ ಬಲಿಪಾಡ್ಯಮಿ ದಿನದಿಂದ ಮೂರು ದಿನಗಳವರೆಗೆ ಹಳ್ಳಿಯ ರೈತರು ಮನೆ ಮನೆಗೂ ದೀಪಾವಳಿಯ ಬೆಳಕಿನ ದಿವ್ಯ ಸಂದೇಶವನ್ನು ಒಯ್ಯುತ್ತಾ ಜ್ಯೋತಿ ಹಚ್ಚಿ ಹೀಗೆ ಹಾಡುತ್ತಾರೆ.

**"ಮಣ್ಣಲಿ ಹುಟ್ಟೋಳೆ ಮಣ್ಣಲಿ ಬೆಳೆಯೋಳೆ**
**ಮಣ್ಣಲಿ ಕಣ್ಣಾ ಬಿಡುವೋಳೆ... ಜಗಜ್ಯೋತಿ ಸತ್ಯದಿಂದುರಿಯೇ ನಮಗಾಗಿ..."**

**"ಬಾಗಿಲು ಬಾಗಿಲು ಚಂದ ಈ ಮನೆಯ ಬಾಗಿಲು ಚಂದ,**
**ಬಾಗಿಲ ಮ್ಯಾಲೇನು ಬರೆದಾರೆ, ಬಾಗಿಲ ಮ್ಯಾಲೇನು ಬರೆದಾರೆ ಸಿರಿಕೈಲಿ,**
**ಕೊಚ್ಚು ಪಾಲಿವಾಣದ ಗಿಳಿವಿಂಡು,**
**ಅಂದುಳ ಮನೆಗೆ ಚಂದುಳ್ಳ ಕದವು,**
**ಚಂದುಳ್ಳ ಕದಕ ಚಿನ್ನದ ಬಾಗಿಲಾಗಿ,**
**ವಜ್ರದ ಗಣೆಯಾಗಿ'** ಎಂದು ಹಾಡುಗಳಲ್ಲಿ ವರ್ಣಿತವಾಗುತ್ತದೆ.

ಬಾಗಿಲನ್ನು ತೆರೆದು ದೀಪಧಾರಿಗಳಿಗೆ ಅಂದದ ಅರಮನೆಯಾಗಿ, ಚಿನ್ನದ ಬಾಗಿಲಾಗಿ, ವಜ್ರದ ಅಗಣಿಯಾಗಿ ಹಾಡುಗಳಲ್ಲಿ ವರ್ಣಿತವಾಗುತ್ತವೆ. ನಂತರ ಬಾಗಿಲನ್ನು ತೆರೆದು ದೀಪಧಾರಿಗಳನ್ನು ಬರಮಾಡಿಕೊಳ್ಳುತ್ತಾರೆ. ಮನೆಯ ಒಡತಿ ದೀಪಕ್ಕೆ ಎಣ್ಣೆ ಎರೆದು, ದೀಪದಿಂದ ತನ್ನ ಹಣತೆಗೆ ಅಂಟಿಸಿಕೊಂಡು ಒಲೆಯ ಬೆಂಕಿಯಲ್ಲಿ ಅಗ್ನಿ ಗೂಡಿಸುತ್ತಾಳೆ. ಹಣತೆಯನ್ನು ದೇವರ ಮುಂದೆ ಇಟ್ಟು ಕೈ ಮುಗಿಯುತ್ತಾಳೆ. ದೀಪಧಾರಿಗಳು

**"ರನ್ನಾದಟ್ಟಾಕೆ ಬಣ್ಣದೇಣಿಯಾ ಚಾಚಿ**
**ಸಾಲೆಣ್ಣೆ ಕೊಡುವ ಬಾಯಿಬಿಚ್ಚಿ ಎಣ್ಣೆಯ ಬಗಸಿ**
**ಜ್ಯೋತಮ್ಮಗೆಣ್ಣೆ ಎರೆ ಬನ್ನಿ**
**ಎಣ್ಣೆಯ ನೆರೆದಾರೆ ಪುಣ್ಯಾದ ಫಲ ನಿಮಗೆ**
**ಮುಂದಣ ದೇವರಿಗೊಂದರಿಕ್ಯಾದ**
**ಮುಂದಣ ದೇವರಿಗೊಂದರಿಕ್ಯಾದ ಕಾರಣದಿಂದ**
**ಕಾಮನುಡುಗಾರು ನುಡಿಸ್ಯಾರು**
**ಕಾಮನುಡುಗಾರು ಏನೆಂದು ನುಡಿಸ್ಯಾರು**
**ಕಂದಯ್ಯರ ಫಲವೇ ತಮಗಾದು ಕಾರಣದಿಂದ**
**ಸಾವಿರ ಕಾಲ ಸುಖಿಬಾಳಿ"** ಎಂದು ಹಾಡುತ್ತಾರೆ.

## ತಂಡಗಳು ಮತ್ತು ನಿಯಮಗಳು

ಒಂದೊಂದು ಸೀಮೆಯಲ್ಲೂ ನಾಲ್ಕರಿಂದ ಐದು ಜನರಿರುವ ಹಲವು ತಂಡಗಳು ಹಬ್ಬ ಹಾಡಲು ಹೋಗುವುದುಂಟು. ರಾತ್ರಿ ಆ ಸೀಮೆಯ ದೇವಸ್ಥಾನಕ್ಕೆ ಹೋಗಿ ಅಲ್ಲಿ ತಮ್ಮ ಹಣತೆ ಹಚ್ಚಿಕೊಂಡು ಹಾದಿಯುದ್ದಕ್ಕೂ ಹಾಡುತ್ತಲೇ ಮನೆ ಮನೆಗೆ ಹೋಗುತ್ತಾರೆ. ದೀಪಧಾರಿಗಳ ಮೇಳದಲ್ಲಿ ತಂಡದ ನಾಯಕತ್ವವನ್ನು ಊರಿನ ಹಿರಿಯ ಯಜಮಾನರು ವಹಿಸಿಕೊಂಡಿರುತ್ತಾರೆ. ತಂಡದಲ್ಲಿ ಹತ್ತರಿಂದ ಐವತ್ತು ಜನರವರೆಗೂ ಇರುತ್ತಾರೆ. ಹಾಡುಗಾರರು ನಾಲ್ಕು ಮಂದಿ ಇದ್ದು, ಅವರಲ್ಲಿ ಒಬ್ಬರು ಮುಮ್ಮೇಳಧಾರಿಗಳು, ಮತ್ತಿಬ್ಬರು ಹಿಮ್ಮೇಳಧಾರಿಗಳಿರುತ್ತಾರೆ. ತಂಡದಲ್ಲಿ ದೀಪಧಾರಿಗಳು, ದೀವಟಿಕೆಯವರು, ಸಂಭಾವನೆ ತೆಗೆದುಕೊಳ್ಳುವವರು ಇರುತ್ತಾರೆ.

ದೀಪಾವಳಿಯಲ್ಲಿ ದೀಪಧಾರಿಗಳು ದೊಡ್ಡ ತಂಡಗಳಲ್ಲಿ ನೆರೆಯ ಊರುಗಳಿಗೂ ಹೋಗುತ್ತಾರೆ. ಕವಿದ ಕತ್ತಲಿನಲ್ಲಿ ಕಾಡಿನ ನಡುವೆ ಕೇಕೆ ಹಾಕುತ್ತಾ 'ದೀಪ್ ದೀಪೋಳ್ಗೆ' ಎಂದು ಕೂಗುತ್ತ ಸಾಗುತ್ತಾರೆ. ಪಂಜಿನವರು, ಲಾಟೀನಿನವರು ಈ ಗುಂಪಿನ ಜೊತೆಯಲ್ಲಿರುತ್ತಾರೆ. ದೀಪಾವಳಿಯ ಮೂರು ದಿವಸ ಹಾಡುವಾಗ ಹಿಡಿದ ಜ್ಯೋತಿ ಮಾರ್ಗ ಮಧ್ಯದಲ್ಲಿ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ನಂದಬಾರದು. ಒಂದು ವೇಳೆ ನಂದಿದರೆ ಕೇಡಾಗುತ್ತದೆಂಬ ಪ್ರತೀತಿ ಇದೆ.

ಅಂಟಿಗೆ–ಪಂಟಿಗೆ ಕೆಲವು ಖಚಿತವಾದ ನಿಯಮಗಳಿಂದ ಬದ್ಧವಾಗಿರುತ್ತದೆ. ಉದಾಹರಣೆಗೆ ಒಂದು ಊರಿನಲ್ಲಿ ಎರಡು ತಂಡಗಳು ಪರಸ್ಪರ ಎದುರುಬದುರಾಗಿ ಸಂಧಿಸಿ ಮುಂದೆ ಹೋಗಬಾರದು. ಅಂತಹ ಸಂಭವವು ಎದುರಾಗದ ಹಾಗೆ 'ದೀಪ–ದೀಪೋಳ್ಗೆ' ಎಂದು ಗಟ್ಟಿಯಾಗಿ ಕೂಗುವುದರ ಮೂಲಕ ಪರಸ್ಪರ ಎಚ್ಚರಿಕೆ ಕೊಟ್ಟುಕೊಂಡು ಬೇರೆ ಬೇರೆ ಹಾದಿ ಹಿಡಿಯುತ್ತಾರೆ. ದೀಪಾವಳಿ ಹಬ್ಬದ ರಾತ್ರಿಗಳಲ್ಲಿ ಮಾತ್ರ ತಂಡ ಕಟ್ಟಬೇಕು. ದೇವಾಲಯದಲ್ಲಿ ಹೊತ್ತಿಸಿಕೊಂಡ ದೀಪವನ್ನು ಅಗ್ನಿ ಗುಡಿಯಲ್ಲಿ ಸೇರುವ ತನಕ ನಂದುವಂತಿಲ್ಲ. ಬಾಗಿಲಿಗೆ ಬಂದ ಜ್ಯೋತಿಯನ್ನು ಸ್ವಾಗತಿಸಿ, ಎಣ್ಣೆ ಎರೆಯಬೇಕು. ಜ್ಯೋತಿ ಹಿಡಿದವರು ಕಾಲಿಗೆ ಚಪ್ಪಲಿ ಧರಿಸುವಂತಿಲ್ಲ. ಮನೆ ಮನೆ ಹೋಗುವ ಸಂದರ್ಭದಲ್ಲಿ ಮಲಮೂತ್ರ ವಿಸರ್ಜನೆ ಮಾಡುವಂತಿಲ್ಲ. ಸೂತಕವಿದ್ದವರು ಮೇಳದಲ್ಲಿ ಭಾಗವಹಿಸುವಂತಿಲ್ಲ. ಸೂತಕದವರ ಮನೆಗೆ ದೀಪ ನೀಡುವಂತಿಲ್ಲ. ಒಮ್ಮೆ ಸೂತಕವಾದರೆ, ಮೂರು ವರ್ಷಗಳವರೆಗೆ ಮೇಳದಲ್ಲಿ ಭಾಗವಹಿಸುವಂತಿಲ್ಲ.

## ಹಾಡಿನ ಅರ್ಥ ಮತ್ತು ವಿಧಗಳು

ಅಂಟಿಗೆ–ಪಂಟಿಗೆ ಸಂದರ್ಭದಲ್ಲಿ ಹಾಡುಗಾರರು ವಿವಿಧ ರೀತಿಯ ಹಾಡುಗಳನ್ನು ಹಾಡುತ್ತಾರೆ. ಒಂದೊಂದು ಮನೆಯ ಮುಂದೆ ನಿಂತಾಗಲು;

**'ಬಾಗಿಲು ತೆಗೆಯಿರಮ್ಮ ಭಾಗ್ಯದ ಲಕ್ಷ್ಮಮ್ಮ ಜ್ಯೋತ್ಸಮ್ಮನೊಳಗೆ ಕರಕೊಳ್ಳಿ**
**ಮುಳ್ಳಾಗೆ ಕಲ್ಲಾಗೆ ಬಂದೇವಯ್ಯ ತಂದೀವಿ ದೀಪವ ಕೊಳ್ಳೀರೀ'**

ಮುಂತಾಗಿ ಹಾಡಿಸಿ ಬಾಗಿಲು ತೆಗೆಸಿ 'ಜ್ಯೋತಿಗೆಣ್ಣೆಯೆರೆಯ ಬನ್ನಿ' ಎಂಬಂತಹ ಹಾಡುಗಳನ್ನು ಹೇಳಿ ತಮ್ಮ ಹಣತೆಯಿಂದ ಅವರಿಗೆ ದೀಪದ ಕುಡಿ ಕೊಡುತ್ತಾರೆ. ಆನಂತರ ಮನೆಯ ಜಗುಲಿಯನ್ನೇರಿ ಅರ್ಜುನ ಜೋಗಿಯ ಹಾಡು, ಉತ್ತರದೇವಿಯ ಹಾಡು ತೆರೆ ಎಳೆಯುವ ಹಾಡು, ಕರು ಹಾಡು ಇತ್ಯಾದಿ ದೀರ್ಘ ಗೀತೆಗಳನ್ನು ಒಕ್ಕೊರಲಿನಿಂದ ಹಾಡುತ್ತಾರೆ. ಕೊನೆಯಲ್ಲಿ ಮಂಗಳಗೀತೆ ಹೇಳುತ್ತಾರೆ.

ಹಾಡುಗಳಲ್ಲಿ ಹೆಚ್ಚಿನವು ತ್ರಿಪದಿಗಳು. ಉಳಿದವುಗಳು ದ್ವಿಪದಿ, ಚೌಪದಿ ಮುಂತಾದ ಸ್ವರಗಳ ರಚನೆಗಳು, ಅಪರೂಪವಾಗಿ ಲಾವಣಿ ಅಥವಾ ಕೋಲಾಟದ ಮಟ್ಟುಗಳೂ ಇರುತ್ತದೆ. ಹಾಡುವಾಗ ಇವರ ಜೊತೆ ಯಾವುದೇ ವಾದ್ಯಗಳು ಇರುವುದಿಲ್ಲ. ಕಥನಗೀತೆಗಳಲ್ಲಿ ಸಾಮಾನ್ಯವಾಗಿ ಶಿವನ, ಶಿವನಭಕ್ತರ, ಅಪರೂಪವಾಗಿ ಐತಿಹಾಸಿಕ, ಕೌಟುಂಬಿಕ ಕಥೆಗಳು ಹಾಡಿನಲ್ಲಿ ಸೇರಿರುತ್ತವೆ. ಹಾಡುವವರಿಗೆ ಮನೆಮನೆಯಲ್ಲೂ ದೀಪಕ್ಕೆ ಎಣ್ಣೆ, ಬಟ್ಟೆ, ಅಕ್ಕಿ, ಹಣ್ಣು, ತೆಂಗಿನಕಾಯಿ, ಹಬ್ಬದ ತಿಂಡಿ, ಹಣ ಕೊಡುವುದು ವಾಡಿಕೆ. ಹೀಗೆ ಮೂರು ರಾತ್ರಿ ದೀಪ ನೀಡುವುದು ನಡೆಯುತ್ತದೆ.

ದೀಪ ಹಚ್ಚುವುದು ಮತ್ತು ದೀಪವನ್ನು ಊರೂರಿಗೆ ಹೊತ್ತೊಯ್ಯುವ ಈ ಸಂಪ್ರದಾಯ ಪ್ರಧಾನವಾಗಿ ಬೆಳಕು ನೀಡುವ ಕ್ರಿಯೆಗೆ ಸಂಬಂಧಿಸಿದ್ದಾದರೂ ಕಲಾವಿದರು ಹಾಡುವ ಪದಗಳು ಅಷ್ಟಕ್ಕೆ ಸೀಮಿತಗೊಂಡಿಲ್ಲ. ದಾರಿ ಸಾಗಬೇಕಾದ ಕಾರಣ ಹಲವಾರು ಕಥನ ಕವನಗಳೂ ಇವರಿಗೆ ಕರಗತವಾಗಿರುತ್ತವೆ. ಹೀಗಾಗಿ ಇವರು ಹಾಡುವ ಪದಗಳನ್ನು ಎರಡು ರೀತಿಯಲ್ಲಿ ವಿಂಗಡಿಸಬಹುದಾಗಿದೆ.

1. **ದೀಪದ ಯಾತ್ರೆಗೆ ಸಂಬಂಧಿಸಿದ ಪದಗಳು :** ಈ ದೀಪದ ಯಾತ್ರೆಯ ವಿವಿಧ ಘಟ್ಟಗಳನ್ನು ಶಾಸ್ತ್ರೋಕ್ತವಾಗಿ ಪೂರೈಸುವ ಹಾಡಿನ ಪ್ರಕಾರಗಳೆಂದರೆ; ಬಾಗಿಲು ತೆಗೆಯುವ ಹಾಡು, ದೀಪ ಹಚ್ಚುವ ಹಾಡು, ಬಲೀಂದ್ರನ ಹಾಡು, ಗ್ರಾಮದೇವತೆ ಹಾಡು, ಎಣ್ಣೆ ಎರೆಯುವ ಹಾಡು, ಭಾವನೆಂಟರ ಹಾಡು, ದೀಪ ಆರಿಸುವ ಪದ, ಜಟ್ಟಿಗನ ಪದಗಳಾಗಿವೆ.

2. ಇತರೆ ಪದಗಳಲ್ಲಿ ಮುಖ್ಯವಾಗಿ ಗೋವಿನ ಪದ, ದ್ರೌಪದಿ ಪದ, ಜೋಗುಳ ಪದ, ಗಂಗೆ ಗೌರಿ ಪದ, ಥರಣಮ್ಮನ ಪದ, ಬಂಜೆ ಪದ, ಗುಣಸಾಗರೀ ಪದ, ಶಿವಯೋಗಿ ಪದ, ಉತ್ತರದೇವಿ ಪದ ಮುಂತಾದ ಕಥನಗಳಿರುತ್ತವೆ. ಉದಾಹರಣೆಗೆ ಊರಿಗೆ ಪ್ರವೇಶಿಸುವ ಸಂದರ್ಭದಲ್ಲಿ

**"ದಿಮ್ಮಿಸಾಲ್ದೋಡಿರಣ್ಣ ದಿಮ್ಮಿಸಾಲ್ದೋಡಿರಣ್ಣ ದಿಮ್ಮಿಸಾಲ್ದೋಡಿರಣ್ಣ**
**ಒಂದೊಂದೆ ದನಿಗೆ ಎತ್ತಿದ ಸಲಿಗೆ ಕಿತ್ತೆದ್ದು ಬರಲೋ**
**ಈ ಊರ ದೇವರಿಗೆ ಎನೇನ ಉಡುಗರೋ**
**ಈ ಊರ ಜಟಿಗಪ್ಪಗೆ ಎನೇನ ಉಡುಗರೋ**
**ಊರ ಮಾಸ್ತ್ಯಮ್ಮಾಗೆ ಎನೇನ ಉಡುಗರೋ ಹೇರಲ್ಲಿ**
**ಕಾಯೋ ಹೆಡಿಗಳ್ಳಿ ಹಣ್ಣೊ ಸತ್ಯವಂತನಾದರೆ**
**ಸಭೆ ಮುಂದೆ ಬರಲೋ ಸಭೆಗೆ**
**ನಮಗೂ ಸಂತೋಷ ತರಲೋ**
**ಆಚೆಯ ದಡದಾಗೆ ಯಾತರ ಬೆಳಕು**
**ಸ್ವನಾಗರ ಹುಡುಗಿಯ ಪಟ್ಟಿಯ ಬೆಳಕೋ**
**ಕಾಮಣ್ಣ ಭೀಮಣ್ಣ ಎನ್ ಮಾಡಿತ್ತಿದ್ದಿರೋ**
**ಕಗ್ಗಲ್ಲ ಕಡಿದು ಹಿಟ್ಟು ಮಾಡುತ್ತಿದ್ದರೋ"**

ಎಂಬಂತಹ ಹಾಡುಗಳನ್ನು ಹಾಡುತ್ತಾರೆ.

## ಹಿಡಿದೊಣ್ಣೆ

ಪದಗಳನ್ನು ಹಾಡುವವರ ಕೈಯಲ್ಲಿ ಒಂದು ಕೋಲು ಹಿಡಿದಿರುತ್ತಾರೆ. ಅದನ್ನು ಹಾಡುವಾಗ ಕೈಗೆ ಹಿಡಿವ ಹಿಡಿದೊಣ್ಣೆ ಎಂದು ಕರೆಯುತ್ತಾರೆ. ಇದು ಹಾಡುಗಾರರು ನಿದ್ದೆಗಣ್ಣಲ್ಲಿ ಹಾಡುವುದಕ್ಕೂ ಸಹಾಯ ಮಾಡುತ್ತದೆ. ಜ್ಯೋತಿ ಹಚ್ಚುವಾಗ ಮತ್ತು ಕಳಿಸುವಾಗ ಈ ದೊಣ್ಣೆಗಳನ್ನು ಹಿಡಿಯುವಂತಿಲ್ಲ. ಹಿಡಿದೊಣ್ಣೆ ಮತ್ತೊಬ್ಬರಿಗೆ ವರ್ಗಾಯಿಸಲು ಒಂದು ಹಾಡಿನ ಪದ ಕೂಡ ಇದೆ. ಈ ದೊಣ್ಣೆಗಳನ್ನು ಕೆಳಗೆ ಬೀಳಿಸುವಂತಿಲ್ಲ ಮತ್ತು ಅಡಿ ಮಲಗಿಸುವಂತೆಯೂ ಇಲ್ಲಾ. ಹಾಡುಗಾರ ಬದಲಾಗುವಾಗ ಮುಂದಿನ ಹಾಡುಗಾರನಿಗೆ ದೊಣ್ಣೆ ವರ್ಗಾಯಿಸುತ್ತಾನೆ. ಹಿಂದಿನ ಕಾಲದಲ್ಲಿ ಒಳ್ಳೆಯ ಹಾಡುಗಾರನಿಗೆ ಕಟ್ಟು ಹಾಕಿಸಿದ ದೊಣ್ಣೆಯನ್ನು ಗೌರವ ಸೂಚಕವಾಗಿ ಕೊಡುತ್ತಿದ್ದರು.

## ಮೇಳದ ಮುಕ್ತಾಯ

ಮೂರು ದಿನವಾದ ಮೇಲೆ ದೀಪದ ಬತ್ತಿಯನ್ನು ಹಣತೆಯಿಂದ ತೆಗೆದು ಹಲಸಿನ ಮರದ ಕೊಂಬೆಯ ಮೇಲಿಟ್ಟು ಅದಕ್ಕೆ ಕೈ ಮುಗಿಯುತ್ತಾರೆ. "ಅಂಟಿಕೆ–ಪಂಟಿಕೆ ಔಂತ್ಲ" ಎಂದು ಕರೆಯುವ ಸಾಮೂಹಿಕ ಔತಣಕೂಟವನ್ನು ಏರ್ಪಡಿಸುತ್ತಾರೆ. ಮೇಳದಲ್ಲಿ ಸಂಗ್ರಹಿಸಿದ ದವಸ–ಧಾನ್ಯ ಹಾಗೂ ಹಣದಿಂದ ಔತಣಕೂಟದ ಖರ್ಚುಗಳನ್ನು ಭರಿಸುತ್ತಾರೆ. ಅಂದು ಊರಿನವರಲ್ಲದೆ ಸುತ್ತಲಿನ ಊರಿನವರನ್ನು ಸ್ವಾಗತಿಸುತ್ತಾರೆ. ಜ್ಯೋತಿ ಕಳುಹಿಸಲು ಒಂದು ನಿಗದಿತ ಸ್ಥಳವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಊರಿನ ಹಲಸಿನ ತೋಪಿನ ದೊಡ್ಡ ಬಯಲೇ ಸಮಾರಂಭದ ಸ್ಥಳವಾಗಿರುತ್ತದೆ. ಹಾಲು ಸುರಿಸುವ ಆಲ, ಹಲಸು ಮರಗಳ ಬುಡದಲ್ಲಿ ಜ್ಯೋತಿಯನ್ನು ಇಟ್ಟು, ಎಡೆಮಾಡಿ, ಪೂಜೆ ಸಲ್ಲಿಸುತ್ತಾರೆ. ಈ ಸಂದರ್ಭದಲ್ಲಿ ದೀಪ ಹಿಡಿದ ದೀಪಧಾರಿಗಳು ಜ್ಯೋತಿ ಕಳುಹಿಸುವ ಪದಗಳನ್ನು ಹಾಡುತ್ತಾರೆ. "ಒಂದೇ ಬಟ್ಟಲು ಒಂದೇ ಬೆಲ್ಲದಚ್ಚು

**ಒಂದೆಲೆ ಹಲಸು ಬಲಬಂದು**
**ಒಂದೆಲೆ ಹಲಸು ಬಲಬಂದು ಜ್ಯೋತಮ್ಮ ತಾಯಿ**
**ಒಂದೆ ದೀವಿಗೆಲೆ ಗುಡಿದುಂಬಿ**
**ಒಂದೆ ದೀವಿಗೆಲೆ ಗುಡಿದುಂಬಿ ಜ್ಯೋತಮ್ಮ ತಾಯಿ**
**ಇಂದೋಗಿ ಮುಂದೆ ಬರಬೇಕು"** ಎಂದು ಹಾಡುತ್ತಾರೆ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಈ ಸಂಪ್ರದಾಯವು ದೀಪ ಮತ್ತು ಅದಕ್ಕೆ ಸಂಬಂಧಿಸಿದ ನಂಬಿಕೆಯ ಅಂಶ ಎದ್ದು ಕಾಣುತ್ತದೆ. ದೀಪ ಅಂಟಿಸುವ ಕ್ರಿಯೆ ಪ್ರಧಾನವಾಗಿಯೂ, ಸುಗ್ಗಿ ಒಳ್ಳೆಯದನ್ನು ಹೊತ್ತು ತರಲಿ ಎಂಬ ಹಾರೈಕೆ ವ್ಯಕ್ತವಾಗಿದೆ. ಮಲೆನಾಡಿನ ಸಾಂಸ್ಕೃತಿಕ ಕನ್ನಡಿಯಂತಿರುವ ಈ ಸಂಪ್ರದಾಯವು ಅಜ್ಞಾನವನ್ನು, ಕತ್ತಲನ್ನು ಆ ಮೂಲಕ ಸಂಕಷ್ಟಗಳನ್ನು ಕಳೆಯುವ ಮುಖ್ಯ ಆಶಯವನ್ನು ಹೊಂದಿದೆ.

### ಸಂವಹನ ಮಾಧ್ಯಮವಾಗಿ ಅಂಟಿಗೆ-ಪಂಟಿಗೆ

ಜಾನಪದ ಪ್ರಕಾರವಾದ ಅಂಟಿಗೆ-ಪಂಟಿಗೆ ಒಂದು ಸಂವಹನ ಮಾಧ್ಯಮವಾಗಿದೆ. ಸಂವಹನವು ಒಬ್ಬರಿಂದ ಇನ್ನೊಬ್ಬರಿಗೆ ಸಂದೇಶಗಳನ್ನು ರವಾನಿಸುವ ಕ್ರಿಯೆಯಾಗಿದ್ದು, ಅದರಲ್ಲೂ ಜಾನಪದ ಮಾಧ್ಯಮವು ಸಂವಹನದ ಅತ್ಯಂತ ಉಪಯುಕ್ತ ರೂಪವಾಗಿದೆ. ದೇಶದ ವಿವಿಧ ಭಾಗಗಳಲ್ಲಿ ವಿವಿಧ ಹೆಸರುಗಳಿಂದ ಜನಪದ ಕಲೆಗಳನ್ನು ಕರೆಯಲಾಗುತ್ತದೆ. ಅವರವರ ಸ್ಥಳೀಯ ಭಾಷೆಗಳು ಮತ್ತು ಸಂಸ್ಕೃತಿಗಳನ್ನು ಅವಲಂಬಿಸಿ ವಿಭಿನ್ನ ಸಂವಹನ ವಿಧಾನವನ್ನು ಜಾನಪದ ಮಾಧ್ಯಮದಲ್ಲಿ ಅಭಿವೃದ್ಧಿಪಡಿಸಿರುತ್ತಾರೆ. ಆದ್ದರಿಂದ ಇವುಗಳನ್ನು "ಜನ ಮಾಧ್ಯಮ" ಎಂದೂ ಕರೆಯಲಾಗುತ್ತದೆ.

ಸಂವಹನದ ಸಾಂಪ್ರದಾಯಿಕ ಸಾಧನಗಳನ್ನು ಜನರು ಆಚರಿಸುವ ಆಚರಣೆಗಳು ಮತ್ತು ಅವರ ನಂಬಿಕೆ ಪದ್ಧತಿಗಳು ಮತ್ತು ಆಚರಣೆಗಳಿಂದ ಅಭಿವೃದ್ಧಿಪಡಿಸಲಾಗಿದೆ. ಮಲೆನಾಡಿನ ಕೆಲವು ಭಾಗಗಳಲ್ಲಿ ಅಂಟಿಗೆ-ಪಂಟಿಗೆಯು ಬಹಳ ಹಳೆಯದಾದ ಮತ್ತು ಆಳವಾಗಿ ಬೇರೂರಿರುವ ಒಂದು ಕಲಾ ಮಾಧ್ಯಮವಾಗಿದೆ. ಇದು ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ಮಾಹಿತಿ ಪ್ರಸಾರ ಮಾಡುವ ಕಾರ್ಯ ನಿರ್ವಹಿಸುತ್ತಿದೆ. ಸಮಾಜ ಅಥವಾ ಜನರ ಗುಂಪಿನಿಂದ ಹರಡುವ ಗಾಯನ, ಮೌಖಿಕ ಮತ್ತು ದೃಶ್ಯ ಜಾನಪದ ಕಲಾ ಪ್ರಕಾರಗಳನ್ನು ಬಳಸಿಕೊಳ್ಳುತ್ತದೆ.

ಜಾನಪದ ಮಾಧ್ಯಮವು ಜಗತ್ತಿನಲ್ಲಿ ಸಂವಹನದ ಪರಿಣಾಮಕಾರಿ ಸಾಧನವಾಗಿದೆ. ಅದರಂತೆ ಅಂಟಿಗೆ-ಪಂಟಿಗೆಯೂ ಸಹ ಜನರನ್ನು ಅವರ ಸಂಸ್ಕೃತಿಯೊಂದಿಗೆ ಸಂಪರ್ಕಿಸುವುದು ಮಾತ್ರವಲ್ಲದೆ ಸಮಾಜದ ಕಳೆದುಹೋದ ಸಂಸ್ಕೃತಿಯನ್ನು ಮರುಸೃಷ್ಟಿಸುತ್ತಿದೆ. ಅಂಟಿಗೆ ಪಂಟಿಗೆ ಸಂವಹನ ಮಾಧ್ಯಮವಾಗಿ ಸ್ಥಳೀಯ ಜನರ ಅಭಿವ್ಯಕ್ತಿಯ ಭಾಷೆಯಾಗಿ ರೂಪುಗೊಳ್ಳುತ್ತದೆ ಮತ್ತು ವಿವಿಧ ವಿಷಯಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶ ನೀಡುತ್ತದೆ.

ಸಾಮಾನ್ಯವಾಗಿ, ಸಾಂಪ್ರದಾಯಿಕ ಅಂಟಿಗೆ-ಪಂಟಿಗೆಯು ಯಾವುದೇ ಸಮಾಜದ ತಳಮಟ್ಟದಲ್ಲಿ ಸಂವಹನವನ್ನು ಬಲಪಡಿಸಲು ಮತ್ತು ಸಂವಾದಗಳನ್ನು ಉತ್ತೇಜಿಸಲು ಅತ್ಯುತ್ತಮ ಸಾಧನವಾಗಿದೆ. ಮನರಂಜನೆಯೂ ಸಹ ಸಾಂಪ್ರದಾಯಿಕ ಮಾಧ್ಯಮದ ಭಾಗ. ಮನರಂಜನೆಯ ಜೊತೆಗೆ ವಿವಿಧ ವಿಷಯಗಳ ಬಗ್ಗೆ ಪ್ರೇಕ್ಷಕರಿಗೆ ಶಿಕ್ಷಣ ನೀಡುವುದು ಸಾಂಪ್ರದಾಯಿಕ ಮಾಧ್ಯಮದ ಪ್ರಮುಖ ಲಕ್ಷಣ. ಮನರಂಜನೆಯು ಪ್ರೇಕ್ಷಕರನ್ನು ಸೆಳೆಯುವ ಆಸಕ್ತಿದಾಯಕ ಮಾರ್ಗಗಳಲ್ಲಿ ಒಂದಾಗಿದೆ. ಸಂದೇಶಗಳನ್ನು ಮನರಂಜನೆ, ಶಿಕ್ಷಣ ಮತ್ತು ಸಂವಹನದ ಮಿಶ್ರಣದೊಂದಿಗೆ ಅಂಟಿಗೆ-ಪಂಟಿಗೆ ಹಾಡುಗಳ ಮುಖಾಂತರ ತಲುಪಿಸಲಾಗುತ್ತದೆ.

### ಅಂಟಿಗೆ-ಪಂಟಿಗೆ ಅಳಿವಿನಂಚಿಗೆ ಕಾರಣಗಳು

### ಹಳ್ಳಿಗಳಲ್ಲಿ ಯುವಜನತೆಯ ಕೊರತೆ

ತಂತ್ರಜ್ಞಾನಗಳ ಆವಿಷ್ಕಾರ, ಶೈಕ್ಷಣಿಕ ಬೆಳವಣಿಗೆ, ಅಗಾಧ ಉದ್ಯೋಗಾವಕಾಶಗಳು, ಸಾಮಾಜಿಕ-ಆರ್ಥಿಕ ಸವಾಲುಗಳು ಮತ್ತು ಆಧುನಿಕ ಜೀವನಶೈಲಿಗಳ ಕಾರಣದಿಂದಾಗಿ ಪಟ್ಟಣ ವ್ಯವಸ್ಥೆ ಸದೃಢಗೊಂಡಿದೆ. ಹಳ್ಳಿಗಳಲ್ಲಿನ ಜರ್ಜರಿತ ಮೂಲಸೌಕರ್ಯ, ಆರ್ಥಿಕ-ಸಾಮಾಜಿಕ ವ್ಯವಸ್ಥೆ, ಕುಸಿಯುತ್ತಿರುವ ವರಮಾನ, ಹೆಚ್ಚುತ್ತಿರುವ ಬಡತನ-ನಿರುದ್ಯೋಗ ಮತ್ತು ಮಾರುಕಟ್ಟೆಯ ವೈಫಲ್ಯದ ಫಲವಾಗಿ ಕೃಷಿಯಿಂದ ವಿಮುಖರಾಗಿ ಬದಲೀ ಉದ್ಯೋಗದ ನಿರೀಕ್ಷೆಯೊಂದಿಗೆ ಪಟ್ಟಣ ಸೇರುವವರ ಸಂಖ್ಯೆ ಹೆಚ್ಚುತ್ತಿರುವುದರಿಂದ ಹಳ್ಳಿಗಳು ಅಭಿವೃದ್ಧಿ ಮತ್ತು ಕಲ್ಯಾಣದ ದೃಷ್ಟಿಯಿಂದ ಹಿಂದುಳಿದಿವೆ. ಇದರಿಂದಾಗಿ ಅಗಾಧ ಯುವಸಮುದಾಯ ಆಧುನಿಕ ಜೀವನಶೈಲಿಯ ಕಡೆಗಿನ ವ್ಯಾಮೋಹದಿಂದಾಗಿ ಪಟ್ಟಣದೆಡೆಗೆ ವಾಲುತ್ತಿದೆ.

### ಅನಾಸಕ್ತಿ

ಆಧುನಿಕ ಜೀವನ ಶೈಲಿಗೆ ಒಗ್ಗಿಕೊಳ್ಳುತ್ತಿರುವ ಜನ ಸಮುದಾಯದಲ್ಲಿ ಸಂಸ್ಕೃತಿ-ಜಾನಪದ ಸೊಗಡಿನ ಕುರಿತ ಆಸಕ್ತಿ ಕುಂದುತ್ತಿದೆ. ಇದರ ನೇರ ಪರಿಣಾಮ ಜನಪದದ ಆಚರಣೆಗಳ ಮೇಲಾಗುತ್ತಿದೆ.

### ಮೊಬೈಲ್ ಮತ್ತು ಟಿವಿ ಅಡಿಕ್ಷನ್

ಮೊಬೈಲ್ ಮತ್ತು ಟಿವಿ ಬಹುತೇಕ ಆಧುನಿಕ ಜೀವನ ಶೈಲಿಯ ಅವಿಭಾಜ್ಯ ಭಾಗಗಳಾಗಿವೆ. ತಂತ್ರಜ್ಞಾನಗಳ ತ್ವರಿತ ಬೆಳವಣಿಗೆ ಮತ್ತು ಹೆಚ್ಚುತ್ತಿರುವ ದೈನಂದಿನ ಬದುಕಿನ ಸವಾಲುಗಳಿಗೆ ಅನುಗುಣವಾಗಿ ಮೊಬೈಲ್ ಮತ್ತು ಟಿವಿಗಳ ಮೇಲಿನ ಜನರ ಅವಲಂಬನೆ ಗರಿಷ್ಠ ಮಟ್ಟ ತಲುಪುತ್ತಿದೆ. ಹೀಗಾಗಿ ಜನರಲ್ಲಿನ ಸ್ವಂತಿಕೆಯ ನಾಶವೂ ಎಗ್ಗಿಲ್ಲದೇ ಆಗುತ್ತಿದೆ.

### ರಾತ್ರಿ ನಿದ್ದೆಗೆಟ್ಟರೆ ಅನಾರೋಗ್ಯದ ಸಮಸ್ಯೆ

ಅಂಟಿಗೆ-ಪಂಟಿಗೆ ಜನಪದ ಆಚರಣೆ ದೀಪಾವಳಿಯ ರಾತ್ರಿ ನಡೆಯುವುದರಿಂದ ನಿದ್ದೆಗೆಡುವ ಸಂಭವ ಹೆಚ್ಚಿರುತ್ತದೆ. ಬಹುತೇಕ ಮಂದಿಗೆ ರಾತ್ರಿ ನಿದ್ದೆಗೆಟ್ಟರೆ ಅನಾರೋಗ್ಯ ಬಾಧಿಸುತ್ತದೆ. ಶಾರೀರಿಕ ಸಮಸ್ಯೆಗಳು ದೀರ್ಘಕಾಲದ ಸಮಸ್ಯೆಗಳನ್ನು ಸೃಷ್ಟಿಸುವ ಅಪಾಯವನ್ನೂ ತಳ್ಳಿಹಾಕುವಂತಿಲ್ಲ. ಸ್ವಸ್ಥ ಬದುಕಿಗೆ ಕನಿಷ್ಠ 7-8 ಗಂಟೆಗಳ ನಿದ್ದೆಯ ಅವಶ್ಯಕತೆಯಿರುತ್ತದೆ ಎಂಬುದು ಹಲವು ಸಂಶೋಧನೆಗಳಿಂದ ವೈಜ್ಞಾನಿಕವಾಗಿ ದೃಢಪಟ್ಟಿದೆ.

### ವಿಭಜಿತ ಕುಟುಂಬಗಳು

ಪ್ರಸ್ತುತ ಸಮಾಜದಲ್ಲಿ ವಿಭಜಿತ ಕುಟುಂಬ ವ್ಯವಸ್ಥೆ ಪ್ರಾಮುಖ್ಯತೆ ಪಡೆದುಕೊಳ್ಳುತ್ತಿದೆ. ಜವಾಬ್ದಾರಿಗಳ ಹಂಚಿಕೆ ಮತ್ತು ವೈಯಕ್ತಿಕ ಹಿತಾಸಕ್ತಿಗಳಿಗೆ ಅನುಗುಣವಾಗಿ ಕುಟುಂಬಗಳ ವಿಭಜನೆ ಹೆಚ್ಚಿನ ಮನ್ನಣೆ ಪಡೆಯುತ್ತಿದೆ. ಇದರಿಂದ ಕುಟುಂಬಗಳಲ್ಲಿನ ಜನಪದ ಆಚರಣೆಗಳು ಮೌಲ್ಯ ಕಳೆದುಕೊಳ್ಳುತ್ತಿವೆ. ಇದರಿಂದಾಗಿ ನುರಿತ ಕಲಾವಿದರ ವಿಭಜನೆಯಾಗುತ್ತಿದ್ದು, ಒಗ್ಗಟ್ಟು ಮೂಡದಂತಾಗಿದೆ.

### ಹಾಡುಗಾರರ ಕೊರತೆ

ಕುಟುಂಬ ವಿಭಜನೆ, ಹೆಚ್ಚಿದ ಒತ್ತಡ, ಆಧುನಿಕ ಹಿತಾಸಕ್ತಿಗಳು, ಪಾಶ್ಚಾತ್ಯ ಸಂಸ್ಕೃತಿಗಳ ಅನುಕರಣೆ ಮತ್ತು ಜನಪದ ಆಚರಣೆಗಳೆಡೆಗಿನ ಅಸಡ್ಡೆಯಿಂದಾಗಿ ಹಾಡುಗಾರರ ಕೊರತೆ ಕಾಡುತ್ತಿದೆ. ಅರ್ಥ ಮತ್ತು ಭಾವವನ್ನು ಹೊರಹೊಮ್ಮಿಸುವ ಜನಪದ ಹಾಡುಗಾರಿಕೆಯ ಮೇಲೆ ಸಿನಿಮಾ-ಪಾಶ್ಚಾತ್ಯ ಹಾಡುಗಳ ಅತಿಕ್ರಮಣವೂ ಹಾಡುಗಾರರ ಕೊರತೆಗೆ ನೇರ ಕಾರಣಗಳು. ಜನ ಸಮುದಾಯ ಹಳ್ಳಿ ಬಿಟ್ಟು ಪಟ್ಟಣ ಸೇರುತ್ತಿರುವುದರಿಂದ ನುರಿತ ಕಲಾವಿದರ ಕೊರತೆ ಕಾಡುತ್ತಿದೆ.

### ತಂಡವಾಗಲು ಒಮ್ಮನಸ್ಸಿನ ಕೊರತೆ

ಆಧುನಿಕ ಜೀವನ ಶೈಲಿ ಪಾರಂಪರಿಕ ಜೀವನ ಶೈಲಿಯನ್ನು

*- 51ನೇ ಪುಟಕ್ಕೆ ಮುಂದುವರೆದುದು*

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಮುಳಗುಂದ ನಾಡು : ಒಂದು ಸಾಂಸ್ಕೃತಿಕ ಅಧ್ಯಯನ

✍ **ಡಾ. ಬಿ. ಸುರೇಶ,** ಸಹ ಪ್ರಾಧ್ಯಾಪಕರು, ಸ್ನಾತಕೋತ್ತರ ಇತಿಹಾಸ ವಿಭಾಗ, ಸರ್ಕಾರಿ ಕಲಾ ಕಾಲೇಜು (ಸ್ವಾಯತ್ತ), ಚಿತ್ರದುರ್ಗ–577501.

ಯಾವುದೇ ಒಂದು ದೇಶದ,ರಾಜ್ಯದ ಸಮಗ್ರ ಇತಿಹಾಸ ರಚನೆಯಲ್ಲಿ ಸ್ಥಳೀಯ ಇತಿಹಾಸವು ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ. ಸ್ಥಳೀಯ ಇತಿಹಾಸವು ಸಮಗ್ರ ಇತಿಹಾಸಕ್ಕೆ ಪೂರಕವಾದುದು. ಅದರ ಅಧ್ಯಯನವಾಗದಿದ್ದರೆ ರಾಜ್ಯ ಅಥವಾ ರಾಷ್ಟ್ರದ ಇತಿಹಾಸ ರಚನೆಯಾಗದು. ಆಯಾ ಪ್ರದೇಶದ ಸಾಮಾಜಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ವಿವರಗಳು ಹೊರಬಂದಾಗ ಮಾತ್ರ ನಮ್ಮ ಇತಿಹಾಸ ಸ್ಪಷ್ಟವಾಗುತ್ತದೆ.ಒಂದು ಸಣ್ಣ ವಿಭಾಗದಲ್ಲಿ ದೊರೆಯುವ ಸಾಂಸ್ಕೃತಿಕ ವಿವರಗಳು ವಿಸ್ತಾರವಾದ ಪ್ರದೇಶಕ್ಕೆ ಅನ್ವಯವಾಗುತ್ತವೆ. ಈ ಹಿನ್ನೆಲೆಯಲ್ಲಿ ಮುಳಗುಂದ ನಾಡಿನಲ್ಲಿ ಕಂಡು ಬರುವ ಶಾಸನಗಳು, ದೇವಾಲಯಗಳು, ಶಿಲ್ಪಗಳು ಹಾಗೂ ಇನ್ನಿತರ ಐತಿಹಾಸಿಕ ಕುರುಹುಗಳು ಇಲ್ಲಿನ ಇತಿಹಾಸವನ್ನು ತಿಳಿಯುವಲ್ಲಿ ಸಹಕಾರಿಯಾಗುತ್ತವೆ. ಇವುಗಳ ಸಹಾಯದಿಂದ ಸ್ಥಳೀಯ ಇತಿಹಾಸ ಮತ್ತು ಸಂಸ್ಕೃತಿಯನ್ನು ತಿಳಿಯಬಹುದು.

ಕುಂತಲ ದೇಶದ ಒಂದು ಭಾಗವಾಗಿದ್ದ 'ಮುಳಗುಂದ ನಾಡು' ಬೆಳ್ವೊಲ ಮುನ್ನೂರರ ಒಂದು ಉಪವಿಭಾಗವಾಗಿದ್ದು, ಪುಲಿಗೆರೆ ಮುನ್ನೂರರ ಅಂಚಿನಲ್ಲಿತ್ತು. ಇದು ಕೇವಲ ಹನ್ನೆರಡು ಗ್ರಾಮಗಳನ್ನು ಒಳಗೊಂಡ ಒಂದು ಚಿಕ್ಕ ಆಡಳಿತ ಘಟಕವಾಗಿದ್ದರೂ ಇಡೀ ಕರ್ನಾಟಕವನ್ನು ಪ್ರತಿನಿಧಿಸುವಂತಹದ್ದು. ಮುಳಗುಂದವು ಈ ಆಡಳಿತ ಉಪವಿಭಾಗದ ಕೇಂದ್ರವಾಗಿದ್ದು ಇದರ ವ್ಯಾಪ್ತಿಯಲ್ಲಿ ಹನ್ನೆರಡು ಗ್ರಾಮಗಳಿದ್ದವು. ಅವುಗಳೆಂದರೆ, ಹೊಸೂರು, ಕುರ್ತಕೋಟಿ, ಕಣವಿ, ಹರ್ತಿ, ಎಲೆಹೊಸೂರು, ವೆಂಕಟಾಪುರ, ಎಲಿಶಿರೂರು, ಕಲ್ಲೂರು, ಎಳವತ್ತಿ, ಶಿರೂರು ಮತ್ತು ನೀಲಗುಂದ.ಪ್ರಸ್ತುತ ಗದಗ ತಾಲ್ಲೂಕಿನ ದಕ್ಷಿಣ ದಿಕ್ಕಿನಲ್ಲಿರುವ ಈ ಪ್ರದೇಶವು ಐತಿಹಾಸಿಕವಾಗಿ ಶ್ರೀಮಂತವಾಗಿದೆ.ಇಲ್ಲಿ ದೊರೆತಿರುವ ಶಾಸನಗಳು, ಕಂಡುಬರುವ ದೇವಾಲಯಗಳು, ಶಿಲ್ಪಗಳು ಹಾಗೂ ಇನ್ನಿತರ ಐತಿಹಾಸಿಕ ಆಕರಗಳನ್ನು ಬಳಸಿಕೊಂಡು ಇಲ್ಲಿನ ಇತಿಹಾಸ ಮತ್ತು ಸಂಸ್ಕೃತಿಯನ್ನು ಚರ್ಚಿಸಲು ಪ್ರಯತ್ನಿಸಲಾಗಿದೆ.

## ರಾಜಕೀಯ ಇತಿಹಾಸ

ಉತ್ತರ ಕರ್ನಾಟಕದ ದಕ್ಷಿಣ ಭಾಗದಲ್ಲಿರುವ ಗದಗ ಜಿಲ್ಲೆಯು ಪ್ರಾಗ್–ಇತಿಹಾಸ ಕಾಲದಿಂದಲೂ ಮಾನವನ ನೆಲೆಯಾಗಿದ್ದಿತು. ಬೂದಿಹಾಳು, ಭೈರವನಮಟ್ಟಿ, ಶೀರೋಳ(ನರಗುಂದ ತಾ), ಬಿದರಹಳ್ಳಿ (ಮುಂಡರಗಿ ತಾ), ಅಸೂಟಿ, ಕೌಜಗೇರಿ, ಗೌಡಗೇರಿ, ಬಸರಕೋಡ, ಬೆಳವಣಿಕಿ, ಮೆಣಸಿಗಿ, ಹಿರೇಹಾಳ್ (ರೋಣ ತಾ), ಇಟಗಿ, ಬಟ್ಟೂರು, ಬೆಳ್ಳಟ್ಟಿ, ಹೊಸೂರು (ಶಿರಹಟ್ಟಿ), ಕೊಲ್ಲೂರು, ಬೆನಕನಕೊಪ್ಪ (ಗದಗ ತಾ) ಹಾಗೂ ಇನ್ನಿತರವು ಇಲ್ಲಿನ ಪ್ರಮುಖ ನಿವೇಶನಗಳು. ಹಾಗೆಯೇ, ಪ್ರಸ್ತುತ ಅಧ್ಯಯನ ಪ್ರದೇಶವೂ ಸಹ ಇದೇ ರೀತಿಯ ಭೌಗೋಳಿಕ ಅಂಶಗಳನ್ನು ಒಳಗೊಂಡಿದ್ದು ಚಿಕ್ಕ–ಚಿಕ್ಕ ಬೆಟ್ಟ ಗುಡ್ಡಗಳಿಂದಲೂ, ಹಲವಾರು ಹಳ್ಳ–ಕೊಳ್ಳಗಳಿಂದಲೂ ಕೂಡಿದ್ದು, ಪ್ರಾಚೀನ ಮಾನವ ವಾಸಯೋಗ್ಯ ತಾಣವಾಗಿದೆ. ಈ ನಿಟ್ಟಿನಲ್ಲಿ ಇನ್ನೂ ಹೆಚ್ಚಿನ ಅಧ್ಯಯನದ ಅವಶ್ಯಕತೆಯಿದೆ. ಐತಿಹಾಸಿಕ ಯುಗಕ್ಕೆ ಬಂದರೆ, ಬದಾಮಿ ಚಾಲುಕ್ಯರಿಂದ ಪ್ರಾರಂಭಗೊಂಡು ರಾಷ್ಟ್ರಕೂಟರು, ಗಂಗರು, ಕಲ್ಯಾಣದ ಚಾಲುಕ್ಯರು, ಕಳಚೂರ್ಯರು, ಹೊಯ್ಸಳರು, ಯಾದವರು ಹಾಗೂ ವಿಜಯನಗರದ ಅರಸರು ಇಲ್ಲಿ ನಿರಂತರವಾಗಿ ಆಳ್ವಿಕೆ ನಡೆಸಿದ್ದಾರೆ.

ಬದಾಮಿ ಚಾಲುಕ್ಯರ ಅರಸ ವಿಜಯಾದಿತ್ಯನ ಕಾಲಾವಧಿಯಲ್ಲಿ ರಚನೆಗೊಂಡಿರುವ ಶಾಸನವು ಕುರ್ತಕೋಟಿಯಲ್ಲಿದ್ದು, ಆತನನ್ನು ಸತ್ಯಾಶ್ರಯ, ಪೃಥ್ವಿವಲ್ಲಭ, ಮಹಾರಾಜಾಧಿರಾಜ ಇನ್ನೂ ಮುಂತಾದ ಬಿರುದುಗಳಿಂದ ಹೊಗಳಿದೆ.ಇವರ ಆಳ್ವಿಕೆಯ ಸಂದರ್ಭದಲ್ಲಿ ವಾಣಸತ್ತಿ ಅರಸ ಕುಂದಸತ್ತಿ ಯು ಇಲ್ಲಿನ ಸಾಮಂತನಾಗಿ ಆಳುತ್ತಿದ್ದನು. ರಾಷ್ಟ್ರಕೂಟರಿಗೆ ಸಂಬಂಧಿಸಿದ ಅನೇಕ ಶಾಸನಗಳು ಇಲ್ಲಿ ದೊರೆತಿವೆ. ಅವುಗಳಲ್ಲಿ, ಒಂದನೇ ಕೃಷ್ಣ ಹಾಗು ಆತನ ಮಗನಾದ ದ್ರುವ ಮತ್ತು ಮೂರನೇ ಗೋವಿಂದನಿಗೆ ಸಂಬಂಧಿಸಿದ ನೀಲಗುಂದ ಶಾಸನ, ಅಮೋಘವರ್ಷನಿಗೆ ಸಂಬಂಧಿಸಿದ ಇಲ್ಲಿನ ಮತ್ತೊಂದು ಶಾಸನ, ಈತನ ಮಗನಾದ ಎರಡನೇ ಕೃಷ್ಣನಿಗೆ ಸಂಬಂಧಿಸಿದ ವೆಂಕಟಾಪುರ ಶಾಸನ, ಮೂರನೆ ಇಂದ್ರನಿಗೆ ಸಂಬಂಧಿಸಿದ ಕಣವಿಯ ವೀರಗಲ್ಲು ಶಾಸನ, ಮೂರನೇ ಕೃಷ್ಣನಿಗೆ ಸಂಬಂಧಿಸಿದ ಕುರ್ತಕೋಟಿ ಶಾಸನಗಳು ಪ್ರಮುಖವು. ರಾಷ್ಟ್ರಕೂಟ ಅರಸರು ಈ ಪ್ರದೇಶದ ಮೇಲೆ ತಮ್ಮ ನಿಯಂತ್ರಣವನ್ನು ಸಾಧಿಸಿದ್ದರು ಎನ್ನುವುದು ಈ ಶಾಸನಗಳಿಂದ ಸ್ಪಷ್ಟವಾಗುತ್ತದೆ.ಬದಾಮಿ ಚಾಲುಕ್ಯರು ಮತ್ತು ರಾಷ್ಟ್ರಕೂಟರ ಸಾಮಂತರಾಗಿ ಆಳ್ವಿಕೆ ನಡೆಸಿದ ಗಂಗ ಅರಸರನ್ನು ಹೆಸರಿಸುವ ಶಾಸನಗಳೂ ಇಲ್ಲಿವೆ. ಕ್ರಿ. ಶ. 975 ರ ಮುಳಗುಂದ ಶಾಸನವು ಮಾರಸಿಂಹನನ್ನು ಮತ್ತು ಆತನಿಗಿದ್ದ ಬಿರುದುಗಳನ್ನೂ ಉಲ್ಲೇಖಿಸಿದೆ.

ಕಲ್ಯಾಣದ ಚಾಲುಕ್ಯರು ಈ ಪ್ರದೇಶದ ಮೇಲೆ ಮತ್ತಷ್ಟು ಹಿಡಿತವನ್ನು ಸಾಧಿಸಿದ್ದರು ಎನ್ನುವ ವಿವರಗಳನ್ನು ಇಲ್ಲಿನ ಶಾಸನಗಳು ನಿರೂಪಿಸುತ್ತವೆ. ರಾಜ್ಯಸ್ಥಾಪಕನಾದ ಎರಡನೇ ತೈಲಪನ ಆಳ್ವಿಕೆಯ ಕಾಲದಿಂದಲೇ ಇಲ್ಲಿ ಶಾಸನಗಳು ದೊರೆತಿದ್ದು, ಹೊಸೂರಿನ ಶಾಸನವು ಈತನ ಬಿರುದುಗಳನ್ನು ಹೇಳುವುದರ ಜೊತೆಗೆ ಆಡಳಿತಾತ್ಮಕ ವಿವರಗಳನ್ನೂ ನೀಡುತ್ತದೆ. ಎಲೆಶಿರೂರಿನ ಶಾಸನವು ಇರಿವಬೆಡಂಗ ಸತ್ಯಾಶ್ರಯನನ್ನು ಮತ್ತು ಆತನ ಆಡಳಿತಕ್ರಮವನ್ನು, ಮುಳಗುಂದ ಶಾಸನವು ಒಂದನೇ ಜಗದೇಕಮಲ್ಲನನ್ನು, ಕ್ರಿ. ಶ. 1053 ರ ಮತ್ತೊಂದು ಮುಳಗುಂದ ಶಾಸನವು ಎರಡನೇ ಸೋಮೇಶ್ವರನನ್ನು , ಕುರ್ತಕೋಟಿ, ಹೊಸೂರು, ಎಲಿಶಿರೂರು, ಹಾಗೂ ಮುಳಗುಂದ ಶಾಸನಗಳು ಆರನೇ ವಿಕ್ರಮಾದಿತ್ಯನನ್ನು ಹೆಸರಿಸುತ್ತಾ ಅವರು ಈ ಪ್ರದೇಶದಲ್ಲಿ ಕೈಗೊಂಡ ಕೆಲಸ–ಕಾರ್ಯಗಳ ವಿವರಗಳನ್ನು ನೀಡುತ್ತವೆ. ಕಲ್ಯಾಣದ ಚಾಲುಕ್ಯರ ಆಳ್ವಿಕೆಯ ಸಂದರ್ಭದಲ್ಲಿ ಇಲ್ಲಿ ಮಹಾಸಾಮಂತರಾಗಿ ಆಡಳಿತ ನಡೆಸಿದ ಶೋಭನರಸ, ಕೇಶವರಸ, ವಾವಣರಸ, ಶ್ರೀಪಾಳರಸ, ಆಯ್ಚರಸ ಮತ್ತು ಕಂಚಿಕಬ್ಬೆ ಇನ್ನೂ ಮುಂತಾದವರ ಸಮರ್ಥ ಆಡಳಿತ ವ್ಯವಸ್ಥೆಯ ಬಗ್ಗೆ ಮತ್ತು ಅವರುಗಳು ಸ್ಥಳೀಯವಾಗಿ ಕೈಗೊಂಡ ಸಾಮಾಜಿಕ–ಧಾರ್ಮಿಕ ಕಾರ್ಯಗಳು, ದಾನ–ದತ್ತಿಯ ವಿವರಗಳನ್ನೂ ಈ ಶಾಸನಗಳು ವಿವರಿಸುತ್ತವೆ.

ಆರಂಭದಲ್ಲಿ ಕಲ್ಯಾಣದ ಚಾಲುಕ್ಯರ ಮಾಂಡಳೀಕರಾಗಿ ಆಡಳಿತ ನಡೆಸಿದ ಕಳಚೂರ್ಯರು ಬಿಜ್ಜಳನ ಕಾಲಾವಧಿಯಲ್ಲಿ ಚಾಲುಕ್ಯ ಅರಸ ಮೂರನೇ ತೈಲಪನನ್ನು ಕೊಂದು ಸ್ವತಂತ್ರವಾಗಿ ಆಳ್ವಿಕೆ ಪ್ರಾರಂಭಿಸಿದರು.ಕಳಚೂರಿ ಬಿಜ್ಜಳನ ಎರಡು ಶಾಸನಗಳು ಎಳವತ್ತಿಯಲ್ಲಿ ದೊರೆತಿದ್ದು, ಆತನ ಬಿರುದು ಪರಾಕ್ರಮಗಳನ್ನು ವಿವರಿಸುತ್ತವೆ. ಈತನಿಗೆ ಸಂಬಂಧಿಸಿದ ಮತ್ತೊಂದು ಶಾಸನವು ಹರ್ತಿಯಲ್ಲಿ ದೊರೆತಿದ್ದು, ಈಶ್ವರ ದೇವಾಲಯಕ್ಕೆ ದಾನ ನೀಡಿದ ವಿವರಗಳನ್ನು ನೀಡುತ್ತದೆ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಕಲ್ಯಾಣದ ಚಾಲುಕ್ಯರ ಪ್ರಾಬಲ್ಯವು ಕರ್ನಾಟಕದ ದಕ್ಷಿಣ ಭಾಗದಲ್ಲಿ ಕಡಿಮೆಯಾಗುತ್ತಿದ್ದಂತೆ, ಹೊಯ್ಸಳರು ಸ್ವತಂತ್ರವಾಗಿ ಆಡಳಿತ ನಡೆಸಲು ಪ್ರಾರಂಭಿಸಿದರು. ಇವರು ದೋರಸಮುದ್ರದಿಂದ ಆಡಳಿತ ನಡೆಸಿದರೂ ಮುಳಗುಂದ ನಾಡು ಅವರ ಆಡಳಿತ ವ್ಯಾಪ್ತಿಯಲ್ಲಿತ್ತು ಎಂದು ಇಲ್ಲಿನ ಹಲವಾರು ಶಾಸನಗಳು ಉಲ್ಲೇಖಿಸಿವೆ. ಕ್ರಿ. ಶ. 1191 ರಲ್ಲಿ ಯಾದವ ಅರಸ ಬಿಲ್ಲಮನಿಗೂ ಹೊಯ್ಸಳ ಅರಸ ಎರಡನೇ ವೀರಬಲ್ಲಾಳನಿಗೂ ಸೊರಟೂರ ಬಳಿ ನಡೆದ ಕದನದಲ್ಲಿ ವೀರಬಲ್ಲಾಳನು ಜಯಶಾಲಿಯಾಗಿ ಈ ಪ್ರದೇಶದ ಮೇಲೆ ತನ್ನ ಹಿಡಿತಸಾಧಿಸಿದನು.ಈ ಹಿನ್ನೆಲೆಯಲ್ಲಿ ವೀರಬಲ್ಲಾಳ ಕ್ರಿ. ಶ. 1192 ರಲ್ಲಿ ಹೊಸೂರಿನಲ್ಲಿ ಬೀಡುಬಿಟ್ಟ ವಿವರವನ್ನು ಇಲ್ಲಿನ ಶಾಸನವು ಮಾಹಿತಿ ನೀಡುವುದರ ಜೊತೆಗೆ ಅಡಿಕೆಯ ಮೇಲಿನ ಸುಂಕವನ್ನು ಮನ್ನ ಮಾಡಿದ ವಿವರವನ್ನೂ ತಿಳಿಸುತ್ತದೆ.ಸ್ಥಳೀಯ ಮುಖಂಡನೋರ್ವನು ಎಳವತ್ತಿಯ ಸ್ವಯಂಭು ದೇವಾಲಯದ ಮುಂಭಾಗದಲ್ಲಿ ಪುಷ್ಕರಣಿಯನ್ನು ನಿರ್ಮಿಸಿ ಅದರ ನಿರ್ವಹಣೆಗಾಗಿ ಮೂರುಮತ್ತರು ಭೂಮಿಯನ್ನು ವೀರಬಲ್ಲಾಳನ ಸಮ್ಮುಖದಲ್ಲಿ ದಾನನೀಡಿದ ವಿವರವನ್ನು ಕ್ರಿ. ಶ. 1195 ರ ಎಳವತ್ತಿ ಶಾಸನವು ವಿವರಿಸುತ್ತದೆ. ಕ್ರಿ.ಶ 1207 ರ ಮುಳಗುಂದ ಶಾಸನವು ವೀರಬಲ್ಲಾಳನನ್ನು ಗುಣಗಾನ ಮಾಡುತ್ತದೆ. ಕ್ರಿ. ಶ. 1224 ರವೇಳೆಗಾಗಲೇ ಯಾದವರು ಪುನಃ ಈ ಪ್ರದೇಶದ ಮೇಲೆ ಹಿಡಿತವನ್ನು ಸಾಧಿಸಿದ ವಿವರಗಳು ಲಭ್ಯವಾಗುತ್ತವೆ. ಯಾದವ ಸಿಂಘಣನಿಗೆ ಸೇರಿದ ಮೂರು ಶಾಸನಗಳು ಮುಳಗುಂದದಲ್ಲಿವೆ. ಕ್ರಿ. ಶ.1225 ರ ಮುಳಗುಂದ ಶಾಸನವು ಸಿಂಘಣನ ಬಿರುದುಗಳನ್ನು ಉಲ್ಲೇಖಿಸುತ್ತಾ ನಗರೇಶ್ವರ ದೇವಾಲಯಕ್ಕೆ ನೀಡಿದ ದಾನದ ವಿವರಗಳನ್ನು ವಿವರಿಸುತ್ತದೆ. ಕ್ರಿ. ಶ. 1224 ರ ಹರ್ತಿ ಶಾಸನವು ಸಿಂಘಣನು ಸೋಮೇಶ್ವರ ದೇವರಿಗೆ ನೀಡಿದ ದಾನದ ವಿವರಗಳನ್ನು ನೀಡುತ್ತದೆ.ಯಾದವರ ಆಳ್ವಿಕೆಯ ಕಾಲದಲ್ಲಿ ಮಾಯಿದೇವನು ಮಹಾಮಂಡಳೇಶ್ವರನಾಗಿ ಆಡಳಿತ ನಡೆಸುತ್ತಿದ್ದನು.

ಹೊಯ್ಸಳರ ನಂತರ ವಿಜನಗರದ ಅರಸರು ಈ ಪ್ರದೇಶದಲ್ಲಿ ಆಳ್ವಿಕೆ ನಡೆಸಿದರು. ಕ್ರಿ. ಶ. 1407 ರ ಕಣವಿಯಮಹಾಸತಿ ಶಿಲ್ಪಶಾಸನವು ಹರಿಹರನ ಬಿರುದುಗಳನ್ನು ಹೇಳುತ್ತಾ ಸಾಯಿನಾಯಕನ ಮಗ ದೇವನಾಯಕ ಮತ್ತು ಆತನ ಮಡದಿ ನಾಗಯಿ ದೆಮಾಯಿಗಳು ಮಹಾಸತಿಯರಾದ ಬಗ್ಗೆ ಮಾಹಿತಿ ನೀಡುತ್ತದೆ. ಕ್ರಿ.ಶ. 1420 ರ ಮುಳಗುಂದದ ವೀರಗಲ್ಲು ಶಾಸನವು ಎರಡನೇ ದೇವರಾನ ಕಾಲಕ್ಕೆ ಸೇರಿದ್ದು ಬುಳಿಸೆಟ್ಟಿಯ ಮಗ ಕೇಶಪ್ಪನು ಸ್ವರ್ಗಸ್ಥನಾದ ಬಗ್ಗೆ ಮಾಹಿತಿ ನೀಡುತ್ತದೆ.ಸರಿಸುಮಾರು ಇದೇ ಕಾಲದ ಮತ್ತೊಂದು ನಿಷಧಿಶಾಸನವು ಚಂದ್ರನಾಥ ಬಸದಿಯಲ್ಲಿದ್ದು ಹೆಗ್ಗಡೆ ಸೇನಭೋವ ಮಧುವರಸನ ಮಗ ನಾಗರಸನು ಸ್ವರ್ಗಸ್ಥನಾದ ಬಗ್ಗೆ ವಿವರ ನೀಡುತ್ತದೆ. ವಿಜಯನಗರ ಅರಸರ ನಂತರ ಈ ಪ್ರದೇಶವು ಪೇಶ್ವೆಗಳ ವ್ಯಾಪ್ತಿಗೆ ಸೇರುತ್ತದೆ. ಹೀಗೆ, ಮುಳಗುಂದ ನಾಡು ಪರಿಸರವು ಬದಾಮಿ ಚಾಲುಕ್ಯರಿಂದ ವಿಜಯನಗರ ಅರಸರ ಆಳ್ವಿಕೆಯವರೆಗೆ ನಿರಂತರವಾಗಿ ಹಲವಾರು ಮನೆತನಗಳವರ ಆಡಳಿತಕ್ಕೊಳಪಟ್ಟಿದ್ದಿತು ಎಂದು ಹೇಳಬಹುದು.

## ಸಾಂಸ್ಕೃತಿಕ ವಿವರಗಳು

ಸ್ಥಳೀಯ ಇತಿಹಾಸದ ಅಧ್ಯಯನ ಕೈಗೊಳ್ಳುವಾಗ ಅದನ್ನು ಸಾಂಸ್ಕೃತಿಕ ದೃಷ್ಟಿಯಿಂದ ಅಭ್ಯಸಿಸುವುದು ಉತ್ತಮ. ದೇವಾಲಯಗಳ ನಿರ್ಮಾಣ ಮತ್ತು ಅವುಗಳ ನಿರ್ವಹಣೆಗೆ ಸಂಬಂಧಿಸಿದಂತೆ ನೀಡಿರುವ ದಾನ–ದತ್ತಿ ವಿವರಗಳು, ಬಿಡಿಶಿಲ್ಪಗಳು, ಸ್ಮಾರಕಶಿಲ್ಪಗಳು, ಸಾಹಿತ್ಯ, ಧರ್ಮ ಹಾಗೂ ಇನ್ನಿತರ ವಿಷಯಗಳು ವಿಕಾಸ ನೀತಿಯನ್ನು ಅನುಸರಿಸಿರುವುದ ರಿಂದ ಅವು ಭೌಗೋಳಿಕ ಗಡಿಯನ್ನು ದಾಟಿ ವಿಸ್ತೃತಗೊಂಡಿರುತ್ತವೆ. ಸಾಂಸ್ಕೃತಿಕ ಹಾಗೂ ಸಾಮಾಜಿಕ ಇತಿಹಾಸ ಅಧ್ಯಯನದಲ್ಲಿ ತೊಡರುಗಳು ಕಡಿಮೆ. ಈ ಹಿನ್ನೆಲೆಯಲ್ಲಿ, ಮುಳಗುಂದ ನಾಡಿನ ಸಾಂಸ್ಕೃತಿಕ ವಿವರಗಳನ್ನು ಇಲ್ಲಿ ಚರ್ಚಿಸಲು ಪ್ರಯತ್ನಿಸಲಾಗಿದೆ.

## ಸಾಹಿತ್ಯ

ಕನ್ನಡನಾಡಿನ ಸಾಹಿತ್ಯಕ್ಕೆ ಮುಳಗುಂದ ನಾಡಿನ ಕೊಡುಗೆ ಅಪಾರವಾದುದು. ಮಲ್ಲಿಷೇಣನು ಮುಳಗುಂದ ನಾಡಿನ ಪ್ರಸಿದ್ಧ ಸಂಸ್ಕೃತ ಕವಿ.ಈತನು ಮುಳಗುಂದದ ಪ್ರಸಿದ್ಧ ಜೈನ ಬಸದಿಯಲ್ಲಿದ್ದನು. ಕನ್ನಡ ಸಾಹಿತ್ಯಕ್ಕೆ ಅದರಲ್ಲೂ ಜೈನ ಸಾಹಿತ್ಯಕ್ಕೆ ಈತನ ಕೊಡುಗೆ ಬಹುಮುಖ್ಯವಾದುದು. ಈತನು ವ್ಯಾಕರಣಶಾಸ್ತ್ರ ಮತ್ತು ಕಾವ್ಯಶಾಸ್ತ್ರಗಳಲ್ಲಿ ಪರಿಣತನಾಗಿದ್ದನು. ಮಹಾಪುರಾಣ, ನಾಗಕುಮಾರಕಾವ್ಯ, ಭೈರವಪದ್ಮ, ಸರಸ್ವತಿಕಲ್ಪ ಹಾಗೂ ಇನ್ನಿತರ ಕಾವ್ಯಗಳನ್ನು ಈತನು ಬರೆದಿರುವನು. ನಯಸೇನನು ಇಲ್ಲಿನ ಮತ್ತೊಬ್ಬ ಶ್ರೇಷ್ಠಕವಿ. ಈತನನ್ನು ನಯಸೇನ ಸೂರಿ ಎಂದೂ ಕರೆಯಲಾಗುತ್ತದೆ. ಕಲ್ಯಾಣದ ಚಾಲುಕ್ಯ ಅರಸ ಒಂದನೇ ಸೋಮೇಶ್ವರನ ಸಮಕಾಲೀನನಾದ ಈತನನ್ನು ಇಲ್ಲಿನ ಅನೇಕ ಶಾಸನಗಳಲ್ಲಿ ಹೆಸರಿಸಲಾಗಿದೆ. ಕ್ರಿ. ಶ. 1053 ರ ಮುಳಗುಂದ ಶಾಸನವು ಈತನನ್ನು ನರೇಂದ್ರಸೇನನ ಶಿಷ್ಯನೆಂದು ಉಲ್ಲೇಖಿಸಿದೆ. ಈತನು ವ್ಯಾಕರಣ ಗ್ರಂಥವನ್ನು ಬರೆದಿರುವನು. ಇದೇ ಹೆಸರಿನ ಮತ್ತೊಬ್ಬ ಜೈನಕವಿ ಇಲ್ಲಿದ್ದು, ಈತನನ್ನು ಎರಡನೆಯ ನಯಸೇನ ಎಂದು ಕರೆಯಲಾಗಿದೆ. ಈತನು ಜೈನಧರ್ಮದ ತತ್ವಗಳನ್ನು ಸಾರುವ ಧರ್ಮಾಮೃತ ಎನ್ನುವ ಕಾವ್ಯವನ್ನು ರಚಿಸಿರುವನು. ಕರ್ನಾಟಕದ ಸಾಮಾಜಿಕ ಮತ್ತು ಧಾರ್ಮಿಕ ಅಧ್ಯಯನಕ್ಕೆ ಇದೊಂದು ಉತ್ತಮ ಆಕರಗ್ರಂಥ. ಬಾಲಲೀಲ ಮಹಾಂತಶಿವಯೋಗಿಗಳು ಈ ಪ್ರದೇಶದ ಪ್ರಸಿದ್ಧ ಕವಿಗಳಾಗಿದ್ದು, ಕ್ರಿ. ಶ. 19ನೇ ಶತಮಾನದಲ್ಲಿ ಜೀವಿಸಿದ್ದವರು. ಇವರು ಅನೇಕ ಕೃತಿಗಳನ್ನು ರಚಿಸಿದ್ದು ಅವುಗಳಲ್ಲಿ ಕೈವಲ್ಯದರ್ಪಣ ಎನ್ನುವ ಕೃತಿಯು ಪ್ರಮುಖವಾದುದು. ಪ್ರಖರ ಚಿಂತನಾಶೀಲರಾಗಿದ್ದ ಇವರು ವಿರಾಗಿಯಾಗಿ ಲೋಕಕಲ್ಯಾಣದ ದೃಷ್ಟಿಯಿಂದ ಈ ನಾಡಿನ ತುಂಬೆಲ್ಲಾ ಓಡಾಡಿದವರು.ತಮ್ಮ ದಿವ್ಯಶಕ್ತಿಯಿಂದ ಮುಮ್ಮಡಿ ಕೃಷ್ಣರಾಜವೊಡೆಯರ ಮಹಾರೋಗನಿವಾರಣೆ ಇನ್ನು ಮುಂತಾದ ಅನೇಕ ಪವಾಡಗಳನ್ನು ಮಾಡಿರುವರು.ಇವರಲ್ಲದೇ ಇನ್ನೂ ಹಲವಾರು ಸಾಹಿತಿಗಳನ್ನು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಕೊಡುಗೆ ನೀಡಿದ ಭೂಮಿಯಿದಾಗಿದೆ.

## ಕಲೆ ಮತ್ತು ವಾಸ್ತುಶಿಲ್ಪ

ಕಲೆ ಮತ್ತು ವಾಸ್ತುಶಿಲ್ಪದ ದೃಷ್ಟಿಯಿಂದ ಮುಳಗುಂದನಾಡು ಅಧ್ಯಯನ ಯೋಗ್ಯವಾದುದು. ವಿಭಿನ್ನ ಧರ್ಮಗಳ ನೆಲೆವೀಡಾಗಿರುವ ಈ ಪ್ರದೇಶದಲ್ಲಿ ಅನೇಕ ದೇವಾಲಯಗಳು, ಬಸದಿಗಳು, ಬಿಡಿಶಿಲ್ಪಗಳು, ಸ್ಮಾರಕಶಿಲ್ಪಗಳು, ಮಠಗಳು, ಮಸೀದಿಗಳು, ದರ್ಗಾಗಳು ಹಾಗೂ ಇನ್ನಿತರ ಸ್ಮಾರಕಗಳಿವೆ.

**ಸಿದ್ದೇಶ್ವರ ದೇವಾಲಯ :** ಸಿದ್ದೇಶ್ವರ ದೇವಾಲಯವು ಮುಳಗುಂದ ಪಟ್ಟಣದ ದಕ್ಷಿಣ ಭಾಗದಲ್ಲಿದ್ದು ಪಶ್ಚಿಮಾಭಿಮುಖವಾಗಿದೆ. ವಿಶಾಲವಾದ ಪ್ರಾಂಗಣದಲ್ಲಿ ನಿರ್ಮಾಣಗೊಂಡಿರುವ ಈ ದೇವಾಲಯವು ವಾಸ್ತುಶಿಲ್ಪ ದೃಷ್ಟಿಯಿಂದ ಗಮನ ಸೆಳೆಯುತ್ತದೆ. ಕ್ರಿ. ಶ. 15ನೇ ಶತಮಾನದಲ್ಲಿ ರಚನೆಗೊಂಡಿರುವ ಇಲ್ಲಿನ ಶಾಸನವು ಸಿದ್ದಯ್ಯದೇವರ ಪೂಜೆಗಾಗಿ ಅರ್ಚಕ ಸಿದ್ದರಾಮಯ್ಯನಿಗೆ ಭೂದಾನ ಮಾಡಿದ ವಿವರವನ್ನು ಉಲ್ಲೇಖಿಸುತ್ತದೆ. ಈ ಅಂಶವನ್ನು ಗಮನಿಸಿದರೆ ದೇವಾಲಯವು ಇದಕ್ಕೂ ಪೂರ್ವದಲ್ಲಿಯೇ ನಿರ್ಮಾಣಗೊಂಡಿರುವುದು ಸ್ಪಷ್ಟ ಹಾಗೂ ಇದರ ವಾಸ್ತುಶೈಲಿಯ ಆಧಾರದ ಮೇಲೆ ಹೇಳುವುದಾದರೆ ಕ್ರಿ. ಶ. 12–13ನೇ ಶತಮಾನದಲ್ಲಿ ನಿರ್ಮಾಣಗೊಂಡಿರಬೇಕು.

ದೇವಾಲಯವು ತ್ರಿಕೂಟ ಶೈಲಿಯಲ್ಲಿದ್ದು ತಳವಿನ್ಯಾಸದಲ್ಲಿ ಮೂರು ಗರ್ಭಗೃಹಗಳು, ಮೂರು ಅಂತರಾಳ, ನವರಂಗ, ಸಭಾಮಂಟಪ ಹಾಗೂ ಮುಖಮಂಟಪಗಳನ್ನು ಹೊಂದಿದೆ. ಪಶ್ಚಿಮಾಭಿಮುಖವಾಗಿರುವ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಗರ್ಭಗೃಹವೇ ಪ್ರಧಾನವಾಗಿದ್ದು ಮಧ್ಯದಲ್ಲಿ ಶಿವಲಿಂಗವಿದೆ. ಇದರ ಪ್ರವೇಶದ್ವಾರವು ಸಪ್ತಶಾಖೆಗಳಿಂದ ಕೂಡಿದ್ದು ಲತಾ ಸುರಳಿ, ವಜ್ರ, ಸ್ತಂಭ ಶಾಖೆಗಳು ಗಮನ ಸೆಳೆಯುತ್ತವೆ. ಪೇಧ್ಯದಲ್ಲಿ ಗಂಗಾ-ಯಮುನೆಯರ ಶಿಲ್ಪಗಳು ಹಾಗೂ ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬು ಶಿಲ್ಪಗಳಿವೆ. ಗರ್ಭಗೃಹದ ಮುಂಭಾಗದಲ್ಲಿ ಮುಚ್ಚಿದ ಅಂತರಾಳವಿದೆ. ಅಂತರಾಳದ ಪ್ರವೇಶದ್ವಾರವೂ ಸಹ ಗರ್ಭಗೃಹದ ಪ್ರವೇಶ ದ್ವಾರದ ರೀತಿಯಲ್ಲಿಯೇ ಅಲಂಕೃತಗೊಂಡಿದ್ದು ಇಕ್ಕೆಲಗಳಲ್ಲಿ ಜಾಲಂದ್ರ ವ್ಯವಸ್ಥೆಯನ್ನು ಅಳವಡಿಸಲಾಗಿದೆ. ಉತ್ತರಾಂಗ ಭಾಗದಲ್ಲಿ ಸಮಭಂಗದಲ್ಲಿ ನಿಂತಿರುವ ಶಿವನ ಐದು ಉಬ್ಬುಶಿಲ್ಪಗಳನ್ನು ಖಂಡರಿಸಲಾಗಿದೆ. ದಕ್ಷಿಣ ಹಾಗೂ ಉತ್ತರಾಭಿಮುಖವಾಗಿರುವ ಉಳಿದೆರಡು ಗರ್ಭಗೃಹಗಳು ಹಾಗೂ ಅಂತರಾಳಭಾಗಗಳು ಹೆಚ್ಚು ಕಡಿಮೆ ಇದೇ ರೀತಿಯಲ್ಲಿವೆ. ಈ ಗರ್ಭಗೃಹಗಳಲ್ಲೂ ಸಹ ಶಿವಲಿಂಗಗಳನ್ನು ಪ್ರತಿಷ್ಠಾಪಿಸಲಾಗಿದೆ. ಅಂತರಾಳ ಪ್ರವೇಶದ್ವಾರದ ಉತ್ತರಾಂಗ ಭಾಗದಲ್ಲಿ ಸಮಭಂಗದಲ್ಲಿ ನಿಂತಿರುವ 11 ಶಿವನ ಉಬ್ಬು ಶಿಲ್ಪಗಳನ್ನು ಖಂಡಿರಿಸಲಾಗಿದೆ.

ಮೂರು ಅಂತರಾಳಗಳಿಗೆ ಹೊಂದಿಕೊಂಡಂತೆ ಮಧ್ಯದಲ್ಲಿ ವಿಶಾಲವಾದ ನವರಂಗವಿದೆ. ನವರಂಗದ ಮಧ್ಯದಲ್ಲಿ ನಾಲ್ಕು ಕಂಭಗಳಿವೆ. ಈ ಕಂಭಗಳು ಪೀಠ-ಪಾದ-ಬಳೆಗಳಾಕಾರದ ದಿಂಡು-ವೃತ್ತಾಕಾರದ ಬೋದಿಗೆಗಳನ್ನ ಹೊಂದಿವೆ. ನಾಲ್ಕು ಕಂಭಗಳಿಗೆ ಹೊಂದಿಕೊಂಡಂತೆ ನಾಟ್ಯವೇದಿಕೆ ಹಾಗೂ ಸರಳವಾದ ಭುವನೇಶ್ವರಿಯಿದೆ. ನವರಂಗದ ಮುಂಭಾಗದಲ್ಲಿ 32 ಕಂಬಗಳಿಂದ ಕೂಡಿದ ವಿಶಾಲವಾದ ಸಭಾಮಂಟಪವಿದೆ. ಇಲ್ಲಿರುವ ಕಂಭಗಳು ಸರಳವಾಗಿದ್ದು ಯಾವುದೇ ಶಿಲ್ಪಗಳಿರುವುದಿಲ್ಲ. ಇದರ ವಾಸ್ತು ರಚನೆಯನ್ನು ಗಮನಿಸಿದರೆ ನಂತರ ಕಾಲದಲ್ಲಿ ನಿರ್ಮಾಣಗೊಂಡಿರಬೇಕೆನಿಸುತ್ತದೆ. ಸಭಾಮಂಟವು ಮೂರು ಪ್ರವೇಶದ್ವಾರಗಳನ್ನು ಹೊಂದಿದೆ. ಪಶ್ಚಿಮಾಭಿಮುಖವಾಗಿರುವದೇ ಪ್ರಧಾನ ಪ್ರವೇಶದ್ವಾರವಾಗಿದ್ದು ನಿರಾಲಂಕಾರವಾಗಿದೆ. ಇದರ ಮುಂಭಾಗದಲ್ಲಿ ಚಿಕ್ಕದಾದ ಮುಖಮಂಟಪವನ್ನು ನೋಡಬಹುದು. ಮುಖಮಂಟಪದಲ್ಲಿ ಸುತ್ತಲೂ ಕಕ್ಷಾಸನವಿದೆ.

ಈಶ್ವರ ದೇವಾಲಯವು ಏರು ವಿನ್ಯಾಸದಲ್ಲಿ ಎತ್ತರವಾದ ಅಧಿಷ್ಠಾನದ ಮೇಲೆ ನಿರ್ಮಾಣಗೊಂಡಿದೆ. ಅಧಿಷ್ಠಾನದಲ್ಲಿ ಉಪಾನ, ಜಗತಿ, ತ್ರಿಪಟ್ಟಕುಮುದ ಹಾಗೂ ಅಲಂಕೃತ ಪಟ್ಟಿಕೆ ಗಳನ್ನು ನೋಡಬಹುದು.ಈ ಅಲಂಕೃತ ಪಟ್ಟಿಕೆಗಳಲ್ಲಿ ಆಯುಧಗಳನ್ನು ಹಿಡಿದು ಸಾಗುತ್ತಿರುವ ಸೈನಿಕರ ದೃಶ್ಯಾವಳಿಗಳು, ಕುದುರೆ, ಒಂಟೆ, ಆನೆ ಹಾಗೂ ಇನ್ನಿತರ ಪ್ರಾಣಿಗಳ ಉಬ್ಬುಶಿಲ್ಪಗಳ ಪಟ್ಟಿಕೆಗಳಿವೆ. ಅಧಿಷ್ಟಾನದ ಮೇಲ್ಭಾಗದಲ್ಲಿ ಸರಳವಾದ ಭಿತ್ತಿ ಇದೆ. ಪ್ರತಿಯೊಂದು ಗರ್ಭಗೃಹಗಳ ಹಿಂಭಾಗದಲ್ಲಿ ಮೂರು ದಿಕ್ಕಿನಲ್ಲೂ ದೇವಕೋಷ್ಠಗಳಿವೆ. ಆದರೆ ಇಲ್ಲಿ ಯಾವುದೇ ಶಿಲ್ಪಗಳಿರುವದಿಲ್ಲ. ಈ ದೇವಕೋಷ್ಠ ಗಳು ಒಂದೇ ರೀತಿಯಲ್ಲಿದ್ದು ಸರಳ ಅಲಂಕರಣಗಳಿಂದ ಕೂಡಿವೆ. ಮೇಲ್ಭಾಗದಲ್ಲಿ ಕಿರು ದ್ರಾವಿಡಶೈಲಿಯ ಶಿಖರಗಳನ್ನು ಅಳವಡಿಸಲಾಗಿದೆ. ಭಿತ್ತಿಯ ಮೇಲ್ಭಾಗದಲ್ಲಿ ಕಪೋತ ಹಾಗೂ ಮೂರು ಗರ್ಭಗೃಹಗಳ ಮೇಲ್ಭಾಗದಲ್ಲೂ ಪ್ರತ್ಯೇಕವಾಗಿ ನಿರ್ಮಾಣಗೊಂಡಿರುವ ಕದಂಬ ನಾಗರ ಶೈಲಿಯ ಗೋಪುರ, ಗ್ರೀವ ಹಾಗೂ ಸ್ತೂಪಗಳನ್ನು ನೋಡಬಹುದು. ಸಭಾಮಂಟಪದ ಮುಖ್ಯ ಪ್ರವೇಶದ್ವಾರದ ಮೇಲ್ಭಾಗದಲ್ಲಿ ಸಮಭಂಗದಲ್ಲಿರುವ ಹನ್ನೆರಡು ಸ್ಥಾನಿಕಶಿವನ ಉಬ್ಬುಶಿಲ್ಪಗಳಿವೆ. ದೇವಾಲಯದ ಸುತ್ತಲೂ ವಿಶಾಲವಾದ ಪ್ರಾಂಗಣವಿದೆ.

**ಅನ್ನದಾನೇಶ್ವರ ದೇವಾಲಯ:** ಮುಳಗುಂದ ಪಟ್ಟಣಕ್ಕೆ ಹೊಂದಿ ಕೊಂಡಂತೆ ಇರುವ ಕೆರೆಯ ಏರಿಯ ಮೇಲೆ ಪ್ರಸ್ತುತ ದೇವಾಲಯವಿದೆ. ದೇವಾಲಯವು ಪೂರ್ವಾಭಿಮುಖವಾಗಿದ್ದು, ಇಲ್ಲಿರುವ ಶಾಸನಗಳಲ್ಲಿ ಸ್ವಯಂಭು ದೇವಾಲಯ, ಶ್ರೀಪಾಳೇಶ್ವರ ದೇವಾಲಯ ಎಂಬುದಾಗಿ ಉಲ್ಲೇಖಿತಗೊಂಡಿದೆ. ಕ್ರಿ. ಶ. 12ನೇ ಶತಮಾನದಲ್ಲಿ ಸ್ಥಳೀಯವಾಗಿ ಆಳ್ವಿಕೆನಡೆಸುತ್ತಿದ್ದ, ಶ್ರೀಪಾಳರಸನೆಂಬ ದಂಡನಾಯಕನಿಂದ ಈ ದೇವಾಲಯ ನಿರ್ಮಾಣಗೊಂಡಿದ್ದರಿಂದ ಶ್ರೀಪಾಳರಸ ದೇವಾಲಯವೆಂಬ ಹೆಸರು ಇದಕ್ಕೆ ಬಂದಿರಬಹುದು. ಪ್ರಸ್ತುತ ದೇವಾಲಯವನ್ನು ಶ್ರೀ ಅನ್ನದಾನೇಶ್ವರ ದೇವಾಲಯವೆಂದು ಕರೆಯಲಾಗುತ್ತದೆ. ಈ ದೇವಾಲಯಕ್ಕೆ ಹೊಂದಿಕೊಂಡಂತೆ ಅನ್ನದಾನ ಮಠವಿದ್ದುದ್ದಾಗಿ ಸ್ಥಳೀಯರು ಅಭಿಪ್ರಾಯ ಪಡುತ್ತಾರೆ. ಆದರೆ ಮಠವು ಅಸ್ತಿತ್ವದಲ್ಲಿದ್ದ ಬಗ್ಗೆ ಯಾವುದೇ ಕುರುಹುಗಳು ಇರುವುದಿಲ್ಲ.

ಸ್ವಯಂಭು ದೇವಾಲಯಕ್ಕೆ ಮುಳಗುಂದ ನಗರದ ಮಹಾಜನ ಪ್ರಮುಖರು, ಪವಿತ್ರರಾಶಿ ಮುನಿಗಳ ಪಾದಪೂಜೆ ಮಾಡಿ ಭೂಮಿಯನ್ನು ದಾನವಾಗಿ ಕೊಟ್ಟಿರುವ ವಿವರವನ್ನು, ನಾಗರಸನೆಂಬ ಮತ್ತೊಬ್ಬ ಅಧಿಕಾರಿಯು ಈ ದೇವರನಂದಾದೀವಿಗೆಗಾಗಿ ಶ್ರೀ ಸೋಮೇಶ್ವರ ದೇವರ ಪಾದಪ್ರಕ್ಷಾಳನ ಮಾಡಿ ಭೂದಾನ ಮಾಡಿದ ವಿವರವನ್ನು, ಮಾಹಿದೇವನೆಂಬ ಮತ್ತೊಬ್ಬ ಅಧಿಕಾರಿಯು ಈ ದೇವಾಲಯಕ್ಕೆ ಅನೇಕ ಹಳ್ಳಿಗಳನ್ನು ದಾನ ಬಿಟ್ಟ ವಿವರಗಳನ್ನು ಇಲ್ಲಿರುವ ಶಾಸನಗಳು ತಿಳಿಸುತ್ತವೆ. ಈ ಅಂಶಗಳನ್ನು ಗಮನಿಸಿದರೆ ಪ್ರಸ್ತುತ ದೇವಾಲಯವು ಪ್ರಾಚೀನ ಕಾಲದಲ್ಲಿ ಸಾಂಸ್ಕೃತಿಕವಾಗಿ ತುಂಬಾ ಮಹತ್ವವಾದ ಸ್ಥಾನವನ್ನ ಹೊಂದಿದ್ದಿತು ಎಂದು ಹೇಳಬಹುದು.

ದೇವಾಲಯವು ದ್ವಿಕೂಟ ಶೈಲಿಯಲ್ಲಿದ್ದು ಪೂರ್ವಾಭಿ ಮುಖವಾಗಿದೆ. ತಳ ವಿನ್ಯಾಸದಲ್ಲಿ ಎರಡು ಗರ್ಭಗೃಹಗಳು, ಅಂತರಾಳ ಹಾಗೂ ನವರಂಗಗಳನ್ನ ಹೊಂದಿದೆ. ಪೂರ್ವಾಭಿಮುಖವಾಗಿರುವ ಗರ್ಭಗೃಹವೇ ಪ್ರಧಾನವಾಗಿದ್ದು ಮಧ್ಯದಲ್ಲಿ ಶಿವಲಿಂಗವಿದೆ. ಪ್ರವೇಶ ದ್ವಾರವು ಪಂಚಶಾಖೆಗಳಿಂದ ಅಲಂಕೃತಗೊಂಡಿದೆ.ಲಳಾಟದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ. ಇದರ ಮುಂಭಾಗದಲ್ಲಿ ಚಿಕ್ಕದಾದ ಅಂತರಾಳವಿದ್ದು ಇದರ ಪ್ರವೇಶ ದ್ವಾರವು ಗರ್ಭಗೃಹದ ಪ್ರವೇಶದ್ವಾರದ ಮಾದರಿಯಲ್ಲಿಯೇ ಇದೆ.ದಕ್ಷಿಣಾಭಿಮುಖವಾಗಿರುವ ಮತ್ತೊಂದು ಗರ್ಭಗೃಹವು ಸಂಪೂರ್ಣವಾಗಿ ಭಗ್ನಗೊಂಡಿದ್ದು ಜೀರ್ಣೋದ್ಧಾರಗೊಳ್ಳುತ್ತಿದೆ. ಇದರ ಮುಂಭಾಗದಲ್ಲಿ ಚಿಕ್ಕದಾದ ತೆರೆದ ಅಂತರಾಳವಿದೆ. ಈ ಎರಡು ಅಂತರಾಳಗಳಿಗೆ ಹೊಂದಿ ಕೊಂಡಂತೆ ನವರಂಗವಿದೆ.ನವರಂಗದ ಮಧ್ಯದಲ್ಲಿ ನಾಟ್ಯ ವೇದಿಕೆಯಿದೆ, ಇಲ್ಲಿ ಚಾಲುಕ್ಯ ಶೈಲಿಯ ನಾಲ್ಕು ಕಂಭಗಳಿವೆ. ಗರ್ಭಗೃಹದ ಭಿತ್ತಿಯು ಸರಳವಾಗಿದೆ. ಭಿತ್ತಿಯ ಮೇಲ್ಭಾಗದಲ್ಲಿ ಕಪೋತ ಹಾಗೂ ವೇಸರ ಶೈಲಿಯ ದ್ವಿತಲ ವಿಮಾನವಿದೆ. ಇಲ್ಲಿ ಸರಸ್ವತಿ, ಲಕ್ಷ್ಮಿ, ಭೈರವ, ಹಾಗೂ ಇನ್ನಿತರ ಶಿಲ್ಪಗಳಿವೆ. ಕೇಂದ್ರಿಯ ಪುರಾತತ್ವ ಇಲಾಖೆಯವರು ದೇವಾಲಯದ ಜೀರ್ಣೋದ್ಧಾರ ಕಾರ್ಯ ಕೈಗೊಂಡಿರುವರು.

**ನಗರೇಶ್ವರ ದೇವಾಲಯ :** ಮುಳಗುಂದ ನಗರದ ಮಧ್ಯಭಾಗದಲ್ಲಿ ಈ ದೇವಾಲಯವಿರುವದರಿಂದ ಬಹುಶಃ ಇದಕ್ಕೆ ಎನ್ನುವ ಹೆಸರು ಬಂದಿರಬಹುದು. ಇಲ್ಲಿರುವ ಶಾಸನವು ಬಲ್ಲಶೆಟ್ಟಿ, ಧರ್ಮಶೆಟ್ಟಿ, ಕೃತಯುಗಶೆಟ್ಟಿ ಹಾಗೂ ಮೊದಲಾದವರು ದೇವಾಲಯಕ್ಕೆ ದಾನ ನೀಡಿದ ವಿವರಗಳನ್ನು ತಿಳಿಸುತ್ತದೆ. ಮುಳಗುಂದವು ಸಾಂಸ್ಕೃತಿಕವಾಗಿ ಶ್ರೀಮಂತವಾಗಿದ್ದಂತೆ ಆರ್ಥಿಕ ಚಟುವಟಿಕೆಗಳ ಕೇಂದ್ರವು ಆಗಿದ್ದಿರಬೇಕು. ಇದೊಂದು ಪ್ರಮುಖ ವ್ಯಾಪಾರ ಕೇಂದ್ರವಾಗಿದ್ದರಿಂದಲೇ ಇಲ್ಲಿ ನೆಲೆಸಿದ್ದ ಶೆಟ್ಟಿಗಳು ದೇವಾಲಯಕ್ಕೆ ಉದಾರವಾಗಿ ದಾನ-ದತ್ತಿಗಳನ್ನು ನೀಡಿರಬಹುದು.ದೇವಾಲಯವು ತಳವಿ ನ್ಯಾಸದಲ್ಲಿ ಸರಳವಾಗಿದ್ದು ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದೆ.

ಗರ್ಭಗೃಹದಲ್ಲಿ ಬೃಹತ್ ಶಿವಲಿಂಗವಿದೆ. ಇದರ ಪ್ರವೇಶ ದ್ವಾರವು ಪಂಚಶಾಖೆಗಳಿಂದ ಕೂಡಿದ್ದು ರತ್ನ ಹಾಗೂ ಸ್ಥಂಭ ಶಾಖೆಗಳು ಗಮನ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಸೆಳೆಯುತ್ತವೆ. ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ. ಇದರ ಮುಂಭಾಗದಲ್ಲಿ ಇಷ್ಟೇ ವಿಸ್ತೀರ್ಣದ ಅಂತರಾಳವಿದ್ದು, ಇದರ ಪ್ರವೇಶದ್ವಾರವು ಸಹ ಗರ್ಭಗೃಹ ಪ್ರವೇಶದ್ವಾರದ ಮಾದರಿಯಲ್ಲಿಯೇ ಇದೆ.ಮಧ್ಯದಲ್ಲಿ ನಂದಿಯ ಶಿಲ್ಪವಿದೆ. ಇಕ್ಕೆಲಗಳಲ್ಲಿ ಜಾಲಂಧ್ರ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಇದರ ಮುಂಭಾಗದಲ್ಲಿ ನಾಲ್ಕು ಕಂಭಗಳ ಸರಳವಾದ ನವರಂಗವಿದೆ. ಗರ್ಭಗೃಹದ ಭಿತ್ತಿಯು ಅತ್ಯಂತ ಸರಳವಾಗಿದ್ದು, ಮೇಲ್ಭಾಗದಲ್ಲಿ ಕದಂಬನಾಗರ ಶೈಲಿಯ ಶಿಖರವಿದೆ. ಈ ದೇವಾಲಯವೂ ಸಹ ಇತ್ತೀಚಿಗೆ ಜೀರ್ಣೋದ್ಧಾರಗೊಂಡಿದೆ. ದೇವಾಲಯಕ್ಕೆ ಹೊಂದಿಕೊಂಡಂತೆ ಉತ್ತರಕ್ಕೆ ಚಿಕ್ಕದಾದ ಮತ್ತೊಂದು ಗುಡಿ ಇದೆ. ಇದನ್ನು ಸ್ಥಳೀಯರು ನಗರೇಶ್ವರ ಮಠ ಎಂದು ಕರೆಯುತ್ತಾರೆ.

**ವೀರನಾರಾಯಣ ದೇವಾಲಯ :** ನೀಲಗುಂದ ಗ್ರಾಮದ ಮಧ್ಯದಲ್ಲಿ ವೀರನಾರಾಯಣ ದೇವಾಲಯವು ಪೂರ್ವಾಭಿಮುಖವಾಗಿದೆ. ದೇವಾಲಯವು ಸಂಪೂರ್ಣವಾಗಿ ಸ್ಥಳೀಯರ ನಿರ್ಲಕ್ಷಕ್ಕೊಳಗಾಗಿದ್ದು ಬಹುತೇಕ ಬಿದ್ದು ಹೋಗಿದೆ. ಆದರೆ, ದೇವಾಲಯ ನಿರ್ಮಾಣ ಮಾಡಲು ಬಳಸಿರುವ ಶಿಲೆ, ಶಿಲ್ಪಗಳು, ಕಂಬಗಳು ಹಾಗೂ ಇನ್ನಿತರ ದೇವಾಲಯದ ಭಾಗಗಳನ್ನು ಗಮನಿಸಿದರೆ ಇದೊಂದು ಪ್ರಮುಖ ದೇವಾಲಯವೇಂದೆ ಹೇಳಬಹುದು.ದೇವಾಲಯವು ತಳವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗ ಹಾಗೂ ಮುಂಭಾಗದಲ್ಲಿ ಪ್ರತ್ಯೇಕವಾಗಿ ನಿರ್ಮಾಣಗೊಂಡಿರುವ ಮಂಟಪದಲ್ಲಿ ಒಂದೇ ನವರಂಗವನ್ನು ಹೊಂದಿ ಪರಸ್ಪರ ಅಭಿಮುಖವಾಗಿರುವ ಎರಡು ಗರ್ಭಗೃಹಗಳನ್ನು ನೋಡಬಹುದು. ಹೀಗೆ ಮೂರು ಗರ್ಭ ಗೃಹಗಳು ಹಾಗೂ ಎರಡು ನವರಂಗಗಳನ್ನು ಹೊಂದಿರುವ ಈ ದೇವಾಲಯವು ಕ್ರಿ. ಶ. 11 ನೇ ಶತಮಾನದಲ್ಲಿ ನಿರ್ಮಾಣಗೊಂಡಿದೆ ಎಂದು ದೇವಾಲಯದ ವಾಸ್ತು ಲಕ್ಷಣಗಳು ಹಾಗೂ ಇಲ್ಲಿರುವ ಶಾಸನದ ಸಹಾಯದಿಂದ ಹೇಳಬಹುದು.

ಮುಖ್ಯ ಗರ್ಭಗೃಹವು ಪೂರ್ವಾಭಿಮುಖವಾಗಿದ್ದು ಮಧ್ಯದಲ್ಲಿ ವೀರನಾರಾಯಣನ ಸ್ಥಾನಿಕ ಶಿಲ್ಪವಿದೆ. ಆದರೆ ಪ್ರಸ್ತುತ ಇಲ್ಲಿರುವ ಶಿಲ್ಪವು ಇತ್ತೀಚಿನದಾಗಿದ್ದು ಮೂಲ ಶಿಲ್ಪವು ನಿಧಿಯಾಸೆಗೆ ಕಣ್ಮರೆಯಾಗಿದೆ. ಗರ್ಭಗೃಹದ ಪ್ರವೇಶ ದ್ವಾರವು ರತ್ನ–ಲತಾಸುರುಳಿ–ಸ್ಥಂಭ–ವಲ್ಲಿ ಹಾಗೂ ಪದ್ಮಣವೇಶದ ಅಲಂಕೃತಗೊಂಡಿದೆ. ಇವುಗಳು ಉತ್ತರಾಂಗದಲ್ಲಿ ಮುಂದುವರೆದಿದೆ. ಗಜಲಕ್ಷ್ಮೀ ಹಾಗೂ ಮಧ್ಯದಲ್ಲಿ ರತಿ–ಮನ್ಮಥರ ಉಬ್ಬುಶಿಲ್ಪಗಳಿವೆ. ಗರ್ಭಗೃಹದ ಮುಂಭಾಗದಲ್ಲಿ ತೆರೆದ ಅಂತರಾಳವಿದ್ದು ಇಲ್ಲಿರುವ ಚಂದ್ರಶಿಲೆಯು ಆಕರ್ಷಣೆಯವಾಗಿದೆ.

ನವರಂಗದ ಮಧ್ಯದಲ್ಲಿ ಚಾಲುಕ್ಯ ಶೈಲಿಯ ನಾಲ್ಕು ಕಂಬಗಳಿವೆ. ಸುತ್ತ,ಲೂ ಹನ್ನೆರಡು ಗೋಡೆಗಂಬಗಳನ್ನು ಹೊಂದಿರುವ ನವರಂಗವು ಒಂಭತ್ತು ಅಂಕಣಗಳಿಂದ ಕೂಡಿದೆ. ಕಂಬಗಳು ಸರಳವಾಗಿದ್ದು ಯಾವುದೇ ಶಿಲ್ಪಗಳಿರುವದಿಲ್ಲ. ನವರಂಗಕ್ಕೆ ಪೂರ್ವ ಹಾಗೂ ದಕ್ಷಿಣಕ್ಕೆ ಎರಡು ಪ್ರವೇಶ ದ್ವಾರಗಳಿವೆ. ಎರಡು ಪ್ರವೇಶ ದ್ವಾರಗಳು ಒಂದೇ ಶೈಲಿಯಲ್ಲಿದ್ದು ಗರ್ಭಗೃಹದ ಪ್ರವೇಶ ದ್ವಾರದೋಪಾದಿಯಲ್ಲಿವೆ.

ಏರು ವಿನ್ಯಾಸದಲ್ಲಿ ದೇವಾಲಯವು ಸಾಧಾರಣವಾದ ಅಧಿಷ್ಠಾನದ ಮೇಲೆ ನಿರ್ಮಾಣಗೊಂಡಿದೆ. ಅಧಿಷ್ಠಾನದಲ್ಲಿ ಪೀಠ, ಪಾದ, ಉಪಾನ, ಜಗತಿ, ಪದ್ಮ, ತ್ರಿಪಟ್ಟಕುಮುದ ಹಾಗೂ ಕಪೋತ ಭಾಗಗಳಿವೆ. ಅಧಿಷ್ಠಾನದ ಮೇಲ್ಭಾಗದಲ್ಲಿರುವ ಭಿತ್ತಿಯು ಭದ್ರ ಹಾಗೂ ಕರ್ಣ ಭಾಗಗಳನ್ನ ಹೊಂದಿದೆ. ಇಲ್ಲಿರುವ ಕೋಷ್ಟ ಪಂಜರ ಹಾಗೂ ಸ್ತಂಭ ಪಂಜರಗಳು ಆಕರ್ಷಣೀಯವಾಗಿವೆ. ಆದರೆ ಭಿತ್ತಿಯಲ್ಲಿ ಯಾವುದೇ ಶಿಲ್ಪಗಳಿರುವದಿಲ್ಲ. ಭಿತ್ತಿಯ ಮೇಲ್ಭಾಗದಲ್ಲಿ ದ್ರಾವಿಡ ಶೈಲಿಯ ತ್ರಿತಲ ವಿಮಾನ, ಸ್ತೂಪಿ ಹಾಗೂ ಕಲಶ ಭಾಗಗಳಿವೆ. ವಿಮಾನದಲ್ಲಿ ಯಾವುದೇ ಶಿಲ್ಪಗಳಿರುವದಿಲ್ಲ. ಶುಕನಾಸಿಯಲ್ಲಿ ನಟರಾಜನ ಶಿಲ್ಪವಿದೆ. ನವರಂಗ ಮೇಲ್ಭಾಗದ ಮೇಲ್ಛಾವಣಿಯು ಚಪ್ಪಟೆಯಾಗಿದೆ. ನವರಂಗದ ಮುಂಭಾಗದಲ್ಲಿ ಪ್ರತ್ಯೇಕವಾಗಿ ಆಯತಾಕಾರದಲ್ಲಿ ನಿರ್ಮಾಣಗೊಂಡಿರುವ ಮಂಟಪವಿದೆ. ಮಧ್ಯದಲ್ಲಿ ನವರಂಗವಿದ್ದು ಇದಕ್ಕೆ ಹೊಂದಿಕೊಂಡಂತೆ ಉತ್ತರ ಹಾಗೂ ದಕ್ಷಿಣಾಭಿಮುಖವಾಗಿ ಎರಡು ಗರ್ಭಗೃಹಗಳಿವೆ. ಇವುಗಳಲ್ಲಿ ಶಿವಲಿಂಗಗಳಿವೆ.ಈ ಭಾಗವು ಸಂಪೂರ್ಣವಾಗಿ ಭಗ್ನಗೊಂಡಿದೆ.

ದೇವಾಲಯವು ವಾಸ್ತು ಶೈಲಿಯ ದೃಷ್ಟಿಯಿಂದ ತುಂಬಾ ಪ್ರಮುಖವಾಗಿದ್ದರೂ ನಿರ್ವಹಣೆಯ ಕೊರತೆಯಿಂದ ವಿನಾಶದ ಅಂಚಿನಲ್ಲಿದೆ. ಭಿತ್ತಿಯಲ್ಲಿ ಗಿಡ–ಗಂಟೆಗಳು ಬೆಳೆದಿದ್ದು ಗೋಡೆ ಭಾಗವು ಬಿರುಕು ಬಿಡುತ್ತಿದೆ.

**ಭೋಗೇಶ್ವರ ದೇವಾಲಯ** : ಎಲೆಶಿರೂರಿನ ಭೋಗೇಶ್ವರ ದೇವಾಲಯವು ಪಶ್ಚಿಮಾಭಿಮುಖವಾಗಿದೆ. ತ್ರಿಕೂಟ ಶೈಲಿಯಲ್ಲಿರುವ ಈ ದೇವಾಲಯವನ್ನು ಕಲ್ಯಾಣದ ಚಾಲುಕ್ಯ ಅರಸ ಆರನೇ ವಿಕ್ರಮಾದಿತ್ಯನು ಕ್ರಿ. ಶ. 1109 ರಲ್ಲಿ ನಿರ್ಮಿಸಿದ ಎನ್ನುವ ವಿವರ ಇಲ್ಲಿನ ಶಾಸನದಿಂದ ತಿಳಿದುಬರುತ್ತದೆ. ದೇವಾಲಯದ ಶೈಲಿಯನ್ನು ಹಾಗೂ ದೇವಾಲಯಕ್ಕೆ ಸಂಬಂಧಿಸಿದ ಶಾಸನಗಳನ್ನು ಗಮನಿಸಿ ಹೇಳುವದಾದರೆ, ಆ ಕಾಲದಲ್ಲಿ ಇದೊಂದು ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಪ್ರಭಾವಿ ದೇವಾಲಯವಾಗಿತ್ತು ಎಂದು ಹೇಳಬಹುದು.

ದೇವಾಲಯವು ತಳವಿನ್ಯಾಸದಲ್ಲಿ ಮೂರು ಗರ್ಭಗೃಹಗಳನ್ನು ಹೊಂದಿದೆ. ಪಶ್ಚಿಮಾಭಿಮುಖವಾಗಿರುವ ಗರ್ಭಗೃಹವನ್ನು ಭೋಗೇಶ್ವರ ಎಂದೂ, ದಕ್ಷಿಣಾಭಿಮುಖವಾಗಿರುವ ಗರ್ಭಗೃಹವನ್ನು ರಾಮಲಿಂಗೇಶ್ವರ ಎಂದೂ ಮತ್ತು ಪೂರ್ವಾಭಿಮುಖವಾಗಿರುವ ಗರ್ಭಗೃಹವನ್ನು ಸೂರ್ಯಲಿಂಗೇಶ್ವರ ಎಂದೂ ಕರೆಯಲಾಗುತ್ತಿದೆ. ಮೂರು ಗರ್ಭ ಗೃಹಗಳಲ್ಲೂ ಲಿಂಗಗಳಿವೆ. ಭೋಗೇಶ್ವರ ಮತ್ತು ರಾಮಲಿಂಗೇಶ್ವರ ಗರ್ಭಗೃಹಗಳಿಗೆ ಹೊಂದಿಕೊಂಡಂತೆ ಅಂತರಾಳಗಳಿವೆ. ಮುಂಭಾಗದಲ್ಲಿ ನವರಂಗವಿದೆ. ವಿಶಾಲವಾದ ನವರಂಗದ ಮಧ್ಯದಲ್ಲಿ ಚಾಲುಕ್ಯಶೈಲಿಯ ನಾಲ್ಕು ಕಂಬಗಳಿವೆ. ಉತ್ತರದ ದೇವ ಕೋಷ್ಠದಲ್ಲಿ ಮೂರು ಅಡಿ ಎತ್ತರದ ಶಿವಪಾರ್ವತಿಯರ ಶಿಲ್ಪವಿದೆ. ನವರಂಗದ ಮುಂಭಾಗದಲ್ಲಿ ಸಭಾಮಂಟಪವಿದೆ. ಆದರೆ, ಇಲ್ಲಿಯೂ ಸಹ ನವರಂಗದೋಪಾದಿಯಲ್ಲಿ ನಾಲ್ಕು ಕಂಬಗಳಿವೆ. ದಕ್ಷಿಣಕ್ಕೆ ಪ್ರವೇಶದ್ವಾರವನ್ನು ಕಲ್ಪಿಸಲಾಗಿದೆ.

ಭೋಗೇಶ್ವರ ದೇವಾಲಯವು ಏರು ವಿನ್ಯಾಸದಲ್ಲಿ ಎತ್ತರವಾದ ಅಧಿಷ್ಠಾನದ ಮೇಲೆ ನಿರ್ಮಾಣಗೊಂಡಿದೆ. ಅಧಿಷ್ಠಾನದಲ್ಲಿ ಉಪಾನ, ಜಗತಿ, ತ್ರಿಪಟ್ಟಕುಮದ ಹಾಗೂ ಅಲಂಕೃತ ಪಟ್ಟಿಕೆ ಗಳನ್ನು ನೋಡಬಹುದು. ಈ ಅಲಂಕೃತ ಪಟ್ಟಿಕೆಗಳಲ್ಲಿ ಆಯುಧಗಳನ್ನು ಹಿಡಿದು ಸಾಗುತ್ತಿರುವ ಸೈನಿಕರ ದೃಶ್ಯಾವಳಿಗಳು, ಕುದುರೆ, ಒಂಟೆ, ಆನೆ ಹಾಗೂ ಇನ್ನಿತರ ಪ್ರಾಣಿಗಳ ಉಬ್ಬುಶಿಲ್ಪಗಳ ಪಟ್ಟಿಕೆಗಳಿವೆ. ಅಧಿಷ್ಠಾನದ ಮೇಲ್ಭಾಗದಲ್ಲಿ ಸರಳವಾದ ಭಿತ್ತಿ ಇದೆ. ಭಿತ್ತಿಯ ಮೇಲ್ಭಾಗದಲ್ಲಿ ಕಪೋತ ಹಾಗೂ ಗರ್ಭಗೃಹಗಳ ಮೇಲ್ಭಾಗದಲ್ಲಿ ಪ್ರತ್ಯೇಕವಾಗಿ ನಿರ್ಮಾಣಗೊಂಡಿರುವ ಕದಂಬ ನಾಗರ ಶೈಲಿಯ ಗೋಪುರ, ಗ್ರೀವ ಹಾಗೂ ಸ್ತೂಪಗಳನ್ನು ನೋಡಬಹುದು.

ಮುಳಗುಂದದಲ್ಲಿ ಇನ್ನೂ ಅನೇಕ ದೇವಾಲಯಗಳಿದ್ದು ಅವುಗಳಲ್ಲಿ ಭೈರವೇಶ್ವರ, ಶೋಭನೇಶ್ವರ, ಬಸವೇಶ್ವರ, ಈಶ್ವರ, ಭೀಮೇಶ್ವರ, ಶ್ರೀರಾಮ, ವೀರನಾರಾಯಣ ಹಾಗೂ ಇನ್ನಿತರ ದೇವಾಲಯ ಗಳನ್ನು ಹೆಸರಿಸಬಹುದು. ಆದರೆ ಇವುಗಳು ವಾಸ್ತುಶೈಲಿ ದೃಷ್ಟಿಯಿಂದ ಅಷ್ಟೇನೂ ಆಕರ್ಷಣೀಯವಾಗಿರುವುದಿಲ್ಲ.ಹಾಗೆಯೇಮುಳಗುಂದ ನಾಡಿನ ವ್ಯಾಪ್ತಿಯಲ್ಲಿ, ಹೊಸೂರಿನ ಕಲ್ಮೇಶ್ವರ, ಶಿವಾಲಯ, ಕಣವಿಯ ಕಲ್ಮೇಶ್ವರ,

ಹರ್ತಿಯ ಈಶ್ವರ, ವೆಂಕಟಾಪುರದ ವೆಂಕಟೇಶ್ವರ, ಹಾಗೂ ಇನ್ನಿತರ ದೇವಾಲಯಗಳಿದ್ದು ಇವುಗಳೂಸಹ ಮೇಲೆ ಚರ್ಚಿಸಿದ ವಾಸ್ತುಶೈಲಿಯೇ ಇವೆ.

## ಜೈನ ಬಸದಿಗಳು

ಮುಳಗುಂದ ಪರಿಸರವು ಪ್ರಾಚೀನ ಕಾಲದಲ್ಲಿಜೈನಮುನಿಗಳ ಪ್ರಮುಖ ವಾಸಸ್ಥಾನವಾಗಿದ್ದಿತು ಎಂದು ಇಲ್ಲಿನ ಅನೇಕ ಶಾಸನಗಳು ನಿರೂಪಿಸುತ್ತವೆ. ಹಾಗಾಗಿ ಇದಕ್ಕೆ ಜಿನಪುರವೆಂದೂ ಕರೆಯಲಾಗುತ್ತಿತ್ತು. ಇದಕ್ಕೆ ಪೂರಕವೆಂಬಂತೆ ಇಂದಿಗೂ ಸಹ ಇಲ್ಲಿ ಅನೇಕ ಜೈನ ಬಸದಿಗಳು, ಜೈನಸಂಪ್ರದಾಯಸ್ತರು ಇರುವುದನ್ನು ನೋಡುತ್ತೇವೆ. ಅವುಗಳಲ್ಲಿ ಚಂದ್ರನಾಥ ಬಸದಿ, ಪಾರ್ಶ್ವನಾಥ ಬಸದಿಗಳು ಪ್ರಮುಖವು.

**ಚಂದ್ರನಾಥ ಬಸದಿ :** ಮುಳಗುಂದ ಪಟ್ಟಣದ ದಕ್ಷಿಣ ಮಧ್ಯಭಾಗದಲ್ಲಿ ಚಿಕ್ಕ ಬೆಟ್ಟವಿದೆ. ಇಲ್ಲಿ ಅನೇಕ ಜೈನ ಕುರುಹುಗಳಿವೆ. ಅವುಗಳಲ್ಲಿ ಚಂದ್ರನಾಥ ಬಸದಿಯು ಪ್ರಮುಖ. ರಾಷ್ಟ್ರಕೂಟ ಅರಸ ಎರಡನೇ ಕೃಷ್ಣನ ಕಾಲಾವಧಿ ಯಲ್ಲಿ ರಚನೆಗೊಂಡಿರುವ ಇಲ್ಲಿರುವ ಶಾಸನವು ಮುಳಗುಂದದ ವೈಶ್ಯನಾದ ಚೀಕಾರ್ಯನು ಈ ಬಸದಿಯನ್ನು ಕಟ್ಟಿಸಿದನೆಂದು, ಈತನ ಮಗನಾದ ಅರಸಾರ್ಯನು ಪೂಜಾದಿಕಾರ್ಯಗಳು ನೆರವೇರಿಕೊಂಡು ಹೋಗುವಂತೆ ಮಾಡಿದನೆಂದು ಉಲ್ಲೇಖಿಸುತ್ತದೆ.

ಪ್ರಾರಂಭದಲ್ಲಿ ಏಕಕೂಟವಾಗಿದ್ದ ಈ ಬಸದಿಗೆ ಕ್ರಿ. ಶ. 11–12ನೇ ಶತಮಾನದಲ್ಲಿ ನವರಂಗದ ಇಕ್ಕೆಲಗಳಲ್ಲಿ ಚಿಕ್ಕದಾದ ಮತ್ತೆರಡು ಗರ್ಭಗೃಹಗಳನ್ನು ಸೇರಿಸಲಾಗಿದೆ. ಹಾಗಾಗಿ ಪ್ರಸ್ತುತ ಈ ಜಿನಾಲಯವು ತ್ರಿಕೂಟ ಶೈಲಿಯಲ್ಲಿದ್ದು ಯಾವುದೇ ಜಿನಮೂರ್ತಿಗಳಿರುವದಿಲ್ಲ. ಉತ್ತಾರಭಿಮುಖ ವಾಗಿರುವ ಮೂಲ ಗರ್ಭಗೃಹವೇ ಪ್ರಧಾನವಾಗಿದ್ದು ಪ್ರಸ್ತುತ ಯಾವುದೇ ಶಿಲ್ಪಗಳಿರುವದಿಲ್ಲ (ಮೂಲತಃ ಚಂದ್ರನಾಥ ತೀರ್ಥಂಕರರ ಶಿಲ್ಪವಿದ್ದಿರಬೇಕು). ಗರ್ಭಗೃಹದ ಪ್ರವೇಶ ದ್ವಾರವು ಸರಳ ಪಟ್ಟಿಕೆಗಳಿಂದ ಕೂಡಿದೆ. ಉಳಿದೆರಡು ಗರ್ಭಗೃಹಗಳು ಸಹ ಇದೇ ಮಾದರಿಯಲ್ಲಿವೆ. ಮೂಲ ಗರ್ಭ ಗೃಹದ ಮುಂಭಾಗದಲ್ಲಿ ನವರಂಗ ಭಾಗವಿದೆ.ಮಧ್ಯದಲ್ಲಿ ನಾಲ್ಕು ಕಂಬಗಳಿಂದ ಕೂಡಿದ ನಾಟ್ಯವೇದಿಕೆ ಇದೆ. ಹಾಗೂ ಇದರ ಸುತ್ತಲೂ ಎಂಟು ಕಂಬಗಳಿವೆ. ಹಾಗಾಗಿ ಇದನ್ನು ಹಜಾರವೆಂದೂ ಕರೆಯಬಹುದು. ಮೂಲ ಗರ್ಭಗೃಹದ ಹಿಂಭಾಗದಲ್ಲಿ ಮೂರು ದಿಕ್ಕುಗಳಲ್ಲಿರುವ ಆನೆಯ ಶಿಲ್ಪಗಳು ಗಮನ ಸೆಳೆಯುತ್ತವೆ. ಎರಡು ಅಂತಸ್ತಿನ ಚಿಕ್ಕ ಮಂಟಪವನ್ನು ಹೊತ್ತು ಚಲಿಸುತ್ತಿರುವ ಆನೆಯು ತುಂಬಾ ಆಕರ್ಷಣೀಯ ವಾಗಿದೆ.ಪ್ರಾಯಶಃ ಇದು ತೀರ್ಥಂಕರರ ಪಂಚ ಕಲ್ಯಾಣೋತ್ಸವಗಳಲ್ಲಿ ಒಂದನ್ನು ನಿರೂಪಿಸುತ್ತಿರಬೇಕು.

**ಪಾರ್ಶ್ವನಾಥ ಬಸದಿ :** ಚಂದ್ರನಾಥ ಬಸದಿಯಪಕ್ಕದಲ್ಲಿಯೇ ಪಾರ್ಶ್ವನಾಥಬಸದಿ ಇದ್ದು, ಇದೂ ಸಹ ಉತ್ತಾರಾಭಿಮುಖವಾಗಿದೆ. ಇಲ್ಲಿರುವ ಶಾಸನವು ಇದನ್ನು ಸಿಡಿಲ ಶ್ರೀ ಜಿನಪಾರ್ಶ್ವನಾಥ ಮಹಾಚೈತ್ಯಾಲಯ ಎಂದು ಉಲ್ಲೇಖಿಸಿದೆ. ಕ್ರಿ. ಶ. 15–16ನೇ ಶತಮಾನದಲ್ಲಿ ದೇಶಿಗಣಾಗ್ರೇಸರರೆನಿಸಿದ ಸಹಸ್ರಕೀರ್ತಿಯು ಇದನ್ನು ಜೀರ್ಣೋದ್ದಾರ ಗೊಳಿಸಿದನೆಂದು ಇಲ್ಲಿನ ಮತ್ತೊಂದು ಶಾಸನವು ತಿಳಿಸುತ್ತದೆ. ಗರ್ಭಗೃಹದಲ್ಲಿ ಮೂಲತಃ ಪಾರ್ಶ್ವನಾಥ ತೀರ್ಥಂಕರನ ಶಿಲ್ಪವಿದ್ದಿರಬೇಕು. ಆದರೆ ಪ್ರಸ್ತುತ ಇಲ್ಲಿ ಯಾವುದೇ ಶಿಲ್ಪವಿರುವುದಿಲ್ಲ. ಗರ್ಭಗೃಹದ ಮುಂಭಾಗದಲ್ಲಿ ಸ್ವಲ್ಪ ವಿಶಾಲವಾದ ಅಂತರಾಳಭಾಗವಿದೆ.ಇದರ ಮುಂಭಾಗದಲ್ಲಿ ಮೂವತ್ತೆರಡು ಕಂಬಗಳ ವಿಶಾಲವಾದ ತೆರೆದ ಸಭಾಮಂಟಪವಿದೆ.ಇದರ ವಾಸ್ತುರಚನಾ ಶೈಲಿಯನ್ನು ನೋಡಿದರೆ ವಿಜಯನಗರ ಕಾಲದ್ದೆನಿಸುತ್ತದೆ.ಮಧ್ಯದ ನಾಲ್ಕು ಕಂಬಗಳಿಗೆ ಹೊಂದಿಕೊಂಡಂತೆ ಚಿಕ್ಕದಾದ ಭುವನೇಶ್ವರಿ ಇದೆ.ಇಲ್ಲಿರುವ ಕಂಭಗಳು ವಿಭಿನ್ನ ಶೈಲಿಯಲ್ಲಿದ್ದು ಸುತ್ತಲೂ ಕಕ್ಷಾಶನವಿದೆ.

## ಮೂರ್ತಿಶಿಲ್ಪಗಳು

ಮುಳಗುಂದ ನಾಡಿನಾದ್ಯಂತ ವಿಭಿನ್ನ ಧರ್ಮಕ್ಕೆ ಸೇರಿದ ಹಾಗೂ ವೈವಿಧ್ಯಮಯವಾದ ಮೂರ್ತಿಶಿಲ್ಪಗಳು ಕಂಡುಬರುತ್ತವೆ. ಮುಳಗುಂದದ ಕಾಲಭೈರವನ ಬೃಹತ್ ಸ್ಥಾನಿಕ ಶಿಲ್ಪ, ಶೋಭನೇಶ್ವರ ದೇವಾಲಯದ ಮುಂಭಾಗದ ಬ್ರಹ್ಮನ ಶಿಲ್ಪ, ಪೋಲಿಸ್ ಸ್ಟೇಷನ್ ಆವರಣದಲ್ಲಿರುವ ವಿಷ್ಣು ಶಿಲ್ಪ, ಪ್ರಸ್ತುತ ಶ್ರೀ ಆರ್. ಎನ್. ದೇಶಪಾಂಡೆ ಸರ್ಕಾರಿ ಪ್ರಥಮದರ್ಜೆ ಕಾಲೇಜಿನ ಆವರಣದಲ್ಲಿರುವ ಗಣೇಶ.

## ಸ್ಮಾರಕಶಿಲ್ಪಗಳು

ಯಾವುದೇ ಒಂದು ಪ್ರದೇಶದ ಸಾಮಾಜಿಕ ವ್ಯವಸ್ಥೆಯನ್ನು ತಿಳಿಯಲು ಅಲ್ಲಿನ ಸ್ಮಾರಕಶಿಲ್ಪಗಳು ಸಹಕಾರಿಯಾಗುತ್ತವೆ. ಹಾಗೆಯೇ ಮುಳಗುಂದ ಪರಿಸರದಲ್ಲಿಯೂ ಅನೇಕ ಸ್ಮಾರಕಶಿಲ್ಪಗಳು ಕಂಡುಬರುತ್ತವೆ. ಅವುಗಳಲ್ಲಿ ಹೊಸೂರಿನ ಮೈಲಾರಲಿಂಗ ಗುಡಿಯ ಮುಂಭಾಗದಲ್ಲಿರುವ ಮಹಾಸತಿಶಿಲ್ಪಗಳು, ಮುಳಗುಂದದ ಬನ್ನಿಕಟ್ಟೆ ಹತ್ತಿರವಿರುವ ಕ್ರಿ. ಶ.11 ನೇ ಶತಮಾನದ ಮಹಾಸತಿಶಿಲ್ಪ, ಹೊಸೂರಿನ ಶಿವಾಲಯದ ಮುಂಭಾಗದಲ್ಲಿರುವ ವೀರಗಲ್ಲುಶಿಲ್ಪ, ಈಶ್ವರ ದೇವಾಲಯದ ಮುಂಭಾಗದಲ್ಲಿ ಅನಾಥವಾಗಿಬಿದ್ದಿರುವ ವೀರಗಲ್ಲು ಶಿಲ್ಪಗಳು, ಮುಳುಗುಂದದ ಆರ್. ಎನ್. ದೇಶಪಾಂಡೆಯವರ ಹೊಲದಲ್ಲಿರುವ ವೀರಗಲ್ಲುಶಿಲ್ಪ, ನೀಲಗುಂದದ ಶಾಲೆಯಬಳಿಯಿರುವ ವೀರಗಲ್ಲುಶಿಲ್ಪ ಹಾಗೂ ಇನ್ನಿತರವು ಪ್ರಮುಖವು. ಇವುಗಳು ಮುಳಗುಂದ ಪರಿಸರದ ಆಯಾ ಕಾಲದ ಸಾಮಾಜಿಕ ವ್ಯವಸ್ಥೆಯನ್ನು ನಿರೂಪಿಸುತ್ತವೆ.

## ಉಪಸಂಹಾರ

ಪ್ರಾಚೀನ ಆಡಳಿತದ ಉಪವಿಭಾಗಗಳಲ್ಲಿ ಒಂದಾಗಿದ್ದ ಮುಳಗುಂದನಾಡು ಪರಿಸರವು ಐತಿಹಾಸಿಕವಾಗಿ ತುಂಬಾ ಮಹತ್ವವಾದ ಸ್ಥಾನವನ್ನು ಪಡೆದಿದೆ. ಮಧ್ಯ ಕರ್ನಾಟಕದಲ್ಲಿ ಆಳ್ವಿಕೆ ನಡೆಸಿದ ಬಹುತೇಕ ಎಲ್ಲಾ ಅರಸು ಮನೆತನದವರು ಇಲ್ಲಿ ಆಳ್ವಿಕೆ ಅಡೆಸಿದ್ದು ಇಲ್ಲಿನ ಇತಿಹಾಸ ಮತ್ತು ಸಂಸ್ಕೃತಿಗೆ ತಮ್ಮದೇ ಆದ ಕೊಡುಗೆಗಳನ್ನು ನೀಡಿದ್ದಾರೆ. ವಿವಿಧ ಕಾಲಘಟ್ಟಗಳಲ್ಲಿ ನಿರ್ಮಾಣಗೊಂಡಿರುವ ಅನೇಕ ಶಾಸನಗಳು, ದೇವಾಲಯಗಳು, ಬಿಡಿಶಿಲ್ಪಗಳು ಹಾಗೂ ಇನ್ನಿತರ ಸ್ಮಾರಕಶಿಲ್ಪಗಳು ಇಲ್ಲಿನ ಇತಿಹಾಸ ಮತ್ತು ಸಂಸ್ಕೃತಿಯನ್ನು ನಿರೂಪಿಸುತ್ತವೆ.

## ಪರಾಮರ್ಶನ ಗ್ರಂಥಗಳು


- **ಎಫಿಗ್ರಾಫಿಯಾ ಇಂಡಿಕಾ :** ಸಂಪುಟ 6, 13, 16, 26.
- **ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್ :** ಸಂಪುಟ 1 ಮತ್ತು 2.
- **ಕಲಬುರ್ಗಿ ಎಂ.ಎಂ. (1975) :** ಧಾರವಾಡ ಜಿಲ್ಲೆ ಶಾಸನಸೂಚಿ, ಕನ್ನಡ ಅಧ್ಯಯನ ಪೀಠ, ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯ.
- **ಹಿರೇಮಠ ಆರ್.ಸಿ. (ಸಂ) (1975) :** ಕನ್ನಡ ಶಾಸನ ಸಂಪದ, ಕನ್ನಡ ಅಧ್ಯಯನ ಪೀಠ, ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯ.
- **ಧನವಂತ ಹಾಜವಗೋಳ (2004) :** ಮುಳಗುಂದ ನಾಡು ಒಂದು ಅಧ್ಯಯನ, ಧಾರವಾಡ ಮಹಾದೇವಿ ಪ್ರಕಾಶನ.
- **ರಿತ್ತಿ ಶ್ರೀನಿವಾಸ (1969) :** ಮುಳಗುಂದ ನಾಡು, ಪ್ರಸಾರಂಗ, ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯ.
- **ಬಿ.ಸುರೇಶ (2019) :** ಮುಳುಗುಂದ ನಾಡು – ವಾಸ್ತುಶಿಲ್ಪ ಮತ್ತು ಶಾಸನಗಳು, ಮೈಸೂರು ರಿಯಾ ಏಜನ್ಸಿಸ್.


■■

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ವೃದ್ಧ ಮಹಿಳೆಯರು ದುಃಖಿತ ಮಹಿಳೆಯರು

✍ **ಎಂ. ಶೃತಿ,** ಪಿಹೆಚ್.ಡಿ ಸಂಶೋಧನಾ ವಿದ್ಯಾರ್ಥಿನಿ, ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ-583276

## ಪ್ರಸ್ತಾವನೆ

ಭಾರತೀಯ ಸಮಾಜದಲ್ಲಿ ಅನಾದಿ ಕಾಲದಿಂದಲೂ ಬಹುಪಾಲು ಹೆಣ್ಣುಗಳನ್ನು ಸಾಂಪ್ರದಾಯಿಕವಾಗಿ ಶುದ್ಧವಾದ ಹಣಕಾಸಿನ ಅರ್ಥದಲ್ಲಿ ಸಂಪೂರ್ಣ ಅಜ್ಞಾನ ಮತ್ತು ಅಭ್ಯಾಸದಿಂದ ಕೆಲಸ ಮಾಡದವರೆಂದು ಪರಿಗಣಿಸಲಾಗಿದೆ. ಮನೆಕೆಲಸಗಳಾದ ಅಡುಗೆ, ಶುಚಿಗೊಳಿಸುವಿಕೆ, ತೊಳೆಯುವುದು ಮತ್ತು ಮಕ್ಕಳನ್ನು ನೋಡಿಕೊಳ್ಳುವುದು ಮತ್ತು ಕೆಲಸ ಮಾಡುವುದು. ಎಲ್ಲೆಡೆ ಮನೆ, ಕುಟುಂಬ ಮತ್ತು ಸಂಬಂಧಗಳ ನಿರ್ವಹಣೆಯು ಮಹಿಳೆಯರಿಗೆ ಹೆಚ್ಚು ಪ್ರಸ್ತುತ ಮತ್ತು ಅಗತ್ಯ ಕರ್ತವ್ಯಗಳಾಗಿವೆ. ಸುಮಾರು 15 ಮಿಲಿಯನ್ ವಯಸ್ಸಾದ ಭಾರತೀಯರು ಏಕಾಂಗಿಯಾಗಿ ವಾಸಿಸುತ್ತಿದ್ದಾರೆ ಮತ್ತು ನಾಲ್ಕನೇ ಮೂರು ಭಾಗದಷ್ಟು ಮಹಿಳೆಯರು ಭಾರತದಲ್ಲಿನ ಸುಮಾರು 250 ಮಿಲಿಯನ್ ಪ್ರತಿ ಕುಟುಂಬಗಳಲ್ಲಿ, ಶೇ.31.3ರಷ್ಟು ಕನಿಷ್ಠ ಒಬ್ಬ ಹಿರಿಯ ವ್ಯಕ್ತಿಯನ್ನು ಹೊಂದಿದೆ(ಭಾರತ 2011 ಜನಗಣತಿ).

ಬಹುಪಾಲು ಮಹಿಳೆಯರು ಯಾವುದೇ ಆರ್ಥಿಕ ಪ್ರಯೋಜನಗಳಿಲ್ಲದೆ, ಕೇವಲ ಪ್ರೀತಿ ಮತ್ತು ಜವಾಬ್ದಾರಿಯಿಂದ ತಮ್ಮ ಎಲ್ಲಾ ಉತ್ಪಾದಕ ಜೀವನದಲ್ಲಿ ಹಾಕುವ ಕೆಲಸದ ಸಮಯವನ್ನು ಪರಿಗಣಿಸಿ, ಅವರು ದುಃಖಕರವಾಗಿ, ಕೆಟ್ಟದಾಗಿ ಬಳಲುತ್ತಿದ್ದಾರೆ. ಹೆಚ್ಚಾಗಿ ಅವರ ಎಲ್ಲಾ ಕೆಲಸ, ಪ್ರಯತ್ನಗಳು ಮತ್ತು ತ್ಯಾಗ; ತೋರಿಕೆಯ ಅಜ್ಞಾನದಿಂದಾಗಿ ಅಥವಾ ಪುರುಷ ಅಹಂಕಾರದಿಂದ ಎಂದಿಗೂ ಬಾಧ್ಯತೆ ಅಥವಾ ಪ್ರತಿಫಲವನ್ನು ಪಡೆಯುವುದಿಲ್ಲ. ಪ್ರಸ್ತುತ ಕಾಲದಲ್ಲಿ ಮಹಿಳೆಯರು ಕಚೇರಿಗಳು, ಕಾರ್ಖಾನೆಗಳು ಮತ್ತು ಜೀವನದ ಯಾವುದೇ ಕ್ಷೇತ್ರಗಳಲ್ಲಿ ಅಮೂಲ್ಯವಾದ ಕೆಲಸದ ಶಕ್ತಿಯಾಗಿ ಮನೆಯಿಂದ ಹೊರಗೆ ಕೆಲಸ ಮಾಡಲು ಸಮಾನವಾಗಿ ಉತ್ತಮರಾಗಿದ್ದಾರೆ; ಇನ್ನೂ ಪುರುಷರು ಮನೆಯಲ್ಲಿ ಮತ್ತು ಕೆಲಸದಲ್ಲಿ ಮಹಿಳೆಯರನ್ನು ಕಡಿಮೆ ಮೌಲ್ಯೀಕರಿಸುತ್ತಾರೆ. ಈ ಘೋರ ಅನ್ಯಾಯವು ವಿದ್ಯಾವಂತ ಮತ್ತು ಆಧುನಿಕ ಕುಟುಂಬಗಳಲ್ಲಿ ದುಃಖಕರವಾಗಿ ಮುಂದುವರಿಯುತ್ತದೆ, ಅಲ್ಲಿ ಮಹಿಳೆಯರನ್ನು ಲಘುವಾಗಿ ತೆಗೆದುಕೊಳ್ಳಲಾಗುತ್ತದೆ, ಯಾವುದೇ ಗೌರವ, ಪ್ರೀತಿ ಅಥವಾ ಕಾಳಜಿಗಾಗಿ ಪರಿಗಣಿಸಲಾಗುವುದಿಲ್ಲ.

ಗುರು ನಾನಕ್ ದೇವ್ ಅವರು ಮಹಿಳೆಗೆ ಸಮಾನ ಸ್ಥಾನಮಾನದ ಜೊತೆಗೆ ಗೌರವಾನ್ವಿತ ಸ್ಥಾನವನ್ನು ನೀಡಬೇಕೆಂದು ಒತ್ತಿಹೇಳಿದರು. ಭವಿಷ್ಯದ ರಾಜರನ್ನು ಹೊಂದಿದ್ದರೂ ಸಹ ತನ್ನ ಗರ್ಭದಿಂದ ಹುಟ್ಟಿದ ಅದೇ ಪುರುಷರಿಂದ ಶೋಷಣೆಗೆ ಒಳಗಾಗುತ್ತಾರೆ ಮತ್ತು ಮಣ್ಣಿನ ಕೊಳೆತರಂತೆ ಪರಿಗಣಿಸುತ್ತಾರೆ. ಪ್ರಪಂಚದಾದ್ಯಂತ ಮೊದಲ ಸಿಖ್ ಗುರುವಿನ 550ನೇ ಜನ್ಮ ವಾರ್ಷಿಕೋತ್ಸವವನ್ನು 2019 ರಲ್ಲಿ ಆಚರಿಸಲಾಗುತ್ತದೆ ಮತ್ತು ಕುಟುಂಬದಿಂದ ಪ್ರಾರಂಭವಾಗುವ ನೈತಿಕ ಜೀವನದ ಆದರ್ಶಗಳನ್ನು ದೃಢೀಕರಿಸಲು ಮತ್ತು ಮಹಿಳೆಯರಿಗೆ ಎಲ್ಲೆಡೆ ಯೋಗ್ಯವಾದ ಜೀವನವನ್ನು ನಡೆಸಲು ಅನುವು ಮಾಡಿಕೊಡುತ್ತದೆ. ತಾಯಂದಿರಿಗೆ ವಿಶೇಷವಾಗಿ ವಯಸ್ಸಾದ ಅವಲಂಬಿತರಿಗೆ ಕುಟುಂಬದಲ್ಲಿನ ಪರಿಸ್ಥಿತಿಗಳನ್ನು ಲೆಕ್ಕಿಸದೆ ಅತ್ಯಂತ ಭಕ್ತಿಯಿಂದ ಬೆಳೆದ ತಮ್ಮ ಸ್ವಂತ ಮಕ್ಕಳಿಂದ ಹೆಚ್ಚಿನ ಪ್ರೀತಿ, ಕಾಳಜಿ ಮತ್ತು ಗೌರವದ ಅಗತ್ಯವಿದೆ ಮತ್ತು ಬಯಸುತ್ತಾರೆ.

ಆದರ್ಶ ಜಗತ್ತಿನಲ್ಲಿ, ಮಕ್ಕಳು ಮತ್ತು ಮೊಮ್ಮಕ್ಕಳಿಂದ ಸುತ್ತುವರೆದಿರುವ ಕುಟುಂಬದ ಪ್ರೀತಿಯ ಆರೈಕೆಯಲ್ಲಿ, ವೃದ್ಧರು ವಿಶೇಷವಾಗಿ ವಯಸ್ಸಾದ ಮಹಿಳೆಯರು ತಮ್ಮ ದೈಹಿಕ ಅವನತಿ ಅಥವಾ ಕಾಯಿಲೆಗಳಿಂದ ಯಾವುದೇ ಸಮಸ್ಯೆಗಳನ್ನು ಎದುರಿಸಬಾರದು. ಆದರೆ ಆಯಾ ನೈತಿಕ ಮತ್ತು ಸಾಮಾಜಿಕ ಮೌಲ್ಯಗಳನ್ನು ಅವಲಂಬಿಸಿ ವಯಸ್ಸಾದ ಮಹಿಳೆಯರನ್ನು ವಿಭಿನ್ನ ಸಮಾಜಗಳಲ್ಲಿ ವಿಭಿನ್ನವಾಗಿ ಪರಿಗಣಿಸಲಾಗುತ್ತದೆ. ಭಾರತದಲ್ಲಿ ಮಹಿಳೆಯರು ಧಾರ್ಮಿಕ ಆಚರಣೆಗಳು ಮತ್ತು ಆಚರಣೆಗಳ ಅವಿಭಾಜ್ಯ ಅಂಗವಾಗಿ ಉಳಿದಿದ್ದಾರೆ ಮತ್ತು ಪೂಜಿಸುವ ಹೆಚ್ಚಿನ ದೈಹಿಕ ಘಟಕಗಳನ್ನು ಯಾವಾಗಲೂ ದಂಪತಿಗಳಾಗಿ ಚಿತ್ರಿಸಲಾಗುತ್ತದೆ, ದೇವರುಗಳು ಸಹ ಅವರ ದೈವತ್ವವಿಲ್ಲದೆ ಅಪೂರ್ಣರಾಗಿದ್ದಾರೆ. ವಿಚಿತ್ರವೆಂದರೆ ಅದೇ ದೇವಿಯ ಆರಾಧಕರು ತಮ್ಮ ಮನೆಗಳಲ್ಲಿ ಮಹಿಳೆಯರನ್ನು ಕೆಟ್ಟದಾಗಿ ನಡೆಸಿಕೊಳ್ಳುವಾಗ, ಚಿತ್ರಹಿಂಸೆ ನೀಡುವಾಗ ಮತ್ತು ಅವರನ್ನು ಕಡೆಗಣಿಸುವಾಗ, ಶೋಷಣೆ ಮಾಡುವ ಮತ್ತು ಕೊಲ್ಲುವಾಗ ದ್ವಂದ್ವ ನೀತಿಯನ್ನು ಪ್ರದರ್ಶಿಸುತ್ತಾರೆ.

ಆದರೆ ಪ್ರಸ್ತುತ ಸನ್ನಿವೇಶದಲ್ಲಿ, ವಯಸ್ಸಾದ ಮಹಿಳೆಯರ ಅಮಾನವೀಯ ಅಗೌರವಕ್ಕಾಗಿ ಕರೆಯಲಾಗದ ಆತಂಕ ಮತ್ತು ಅಭದ್ರತೆಯ ಭಾವವನ್ನು ತರುತ್ತದೆ, ಇದು ಅವರ ಆರೋಗ್ಯ ಸಮಸ್ಯೆಗಳಿಗೆ ಸಂಬಂಧಿಸಿದೆ ಮತ್ತು ಸಾಮಾನ್ಯ ಅಥವಾ ನಿರ್ಣಾಯಕ ಆರೈಕೆಗಾಗಿ ಲಭ್ಯವಿರುವ ಅಲ್ಪ ಆರ್ಥಿಕ ಮೂಲಗಳನ್ನು ಪ್ರತಿಬಿಂಬಿಸುತ್ತದೆ. ಆದ್ದರಿಂದ, ವಯಸ್ಸಾದವರು ಅಭಿವೃದ್ಧಿ ಹೊಂದಿದ ಅಥವಾ ಅಭಿವೃದ್ಧಿಯಾಗದ ರಾಷ್ಟ್ರದಲ್ಲಿದ್ದರೆ ಪರವಾಗಿಲ್ಲ, ಹಿರಿಯರ ಕಡೆಗೆ ಯುವ ಪೀಳಿಗೆಯ ದೃಷ್ಟಿಕೋನವು ಹಿರಿಯರ ಆರೈಕೆಯಲ್ಲಿ ಅತ್ಯಂತ ಮುಖ್ಯವಾಗಿದೆ. ಅಭಿವೃದ್ಧಿ ಹೊಂದಿದ ಜಪಾನ್ ಮತ್ತು ಅಭಿವೃದ್ಧಿ ಹೊಂದುತ್ತಿರುವ ಭಾರತದಲ್ಲಿಯೂ ಸಹ ಭೌತಿಕ ನೀತಿಗಳಿಗೆ ವಿರುದ್ಧವಾಗಿ ವಯಸ್ಸಾದವರನ್ನು ಜೀವಂತ-ದೇವರುಗಳಾಗಿ ಗೌರವಿಸಲಾಗುತ್ತದೆ, ಅಲ್ಲಿ ವಯಸ್ಸಾದವರನ್ನು ನಿರ್ಲಕ್ಷಿಸಲಾಗುತ್ತದೆ ಮತ್ತು ನಿಷ್ಪ್ರಯೋಜಕ ಹೊರೆಯಾಗಿ ಬಿಡಲಾಗುತ್ತದೆ.

ಇದಲ್ಲದೆ, ಸ್ವಯಂ ಅಥವಾ ಸಂಗಾತಿಯ ಸನ್ನಿಹಿತ ಸಾವಿನ ಭಯವು ವಯಸ್ಸಾದವರಲ್ಲಿ ಭಾವನಾತ್ಮಕ ದುರ್ಬಲತೆಯನ್ನು ತರುವ ಮತ್ತು ಮತ್ತಷ್ಟು ಗಾಢವಾಗಿಸುವ ಕ್ರೂರ ಅಂಶವಾಗಿದೆ. ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ವಿಧವೆಯರ ಕ್ರೂರ ಸ್ಥಿತಿಯು ಅತ್ಯಂತ ಅಮಾನವೀಯವಾಗಿ ನಡೆಸಿಕೊಳ್ಳುವ ಮಹಿಳೆಯರ ಜೀವನವನ್ನು ನಾಶಪಡಿಸುತ್ತದೆ, ಬದಲಿಗೆ ಅಸಂಖ್ಯಾತ ಕಷ್ಟಗಳನ್ನು ಅನುಭವಿಸುವಂತೆ ಮಾಡುತ್ತದೆ ಮತ್ತು ಲಘುವಾಗಿ ತೆಗೆದುಕೊಳ್ಳಲಾಗುತ್ತದೆ. ಪಪ್ಪತಿ ಮತ್ತು ಇತರರು 2005, ಮಾನಸಿಕ-ಸಾಮಾಜಿಕ ದೃಷ್ಟಿಕೋನಗಳು, ಸಮಸ್ಯೆಗಳು ಮತ್ತು ಗ್ರಾಮೀಣ ಮಹಿಳಾ ಕಲ್ಯಾಣಕ್ಕಾಗಿ ಕಾರ್ಯತಂತ್ರಗಳನ್ನು ಅಧ್ಯಯನ ಮಾಡಿದರು, ಅದು ಕೇವಲ ಶೇ.30ರಷ್ಟು ಜನರು ಉತ್ತಮ ಆರೋಗ್ಯವನ್ನು ಅನುಭವಿಸುತ್ತಿದ್ದಾರೆಂದು ಬಹಿರಂಗಪಡಿಸಿದರು.

ಒಂದು ಕುಟುಂಬವು ಸಹ-ಅಸ್ತಿತ್ವದಲ್ಲಿ ಒಲವು ತೋರುವ ಸಾಮಾಜಿಕ ಘಟಕವನ್ನು ಒಳಗೊಂಡಿರುತ್ತದೆ ಮತ್ತು ದೈನಂದಿನ ಜೀವನವನ್ನು ಸೌಹಾರ್ದಯುತ ಮತ್ತು ವಿನೋದಮಯವಾಗಿಸುವ ಅಗತ್ಯ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಮಾನವ ಸಂಬಂಧಗಳನ್ನು ಅವಲಂಬಿಸಿರುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ, ಹತ್ತಿರದವರಿಂದ ಉದ್ದೇಶಪೂರ್ವಕವಾಗಿ ತ್ಯಜಿಸಲ್ಪಟ್ಟ ವಯಸ್ಸಾದವರನ್ನು ವೃದ್ಧಾಶ್ರಮಗಳಲ್ಲಿ ಭೇಟಿಯಾದಾಗ ಮತ್ತು ಅವರ ಸಂಬಂಧಗಳ ಬಗ್ಗೆ ಚರ್ಚಿಸಿದಾಗ, ಪ್ರೀತಿಯ ಅವನತಿ, ಭಾವನಾತ್ಮಕ ಬೇರ್ಪಡುವಿಕೆ ಮತ್ತು ಪೂರೈಸದ ಕೌಟುಂಬಿಕ ಕರ್ತವ್ಯಗಳು ಬಹಿರಂಗಗೊಳ್ಳುತ್ತವೆ. ತಮ್ಮ ವಯಸ್ಸಾದ ಪೋಷಕರ ಬಗ್ಗೆ ವಿಶೇಷವಾಗಿ ವಯಸ್ಸಾದ ತಾಯಂದಿರು, ಅಜ್ಜಿಯರು ಅಥವಾ ಚಿಕ್ಕಮ್ಮನ ಬಗ್ಗೆ ಮಕ್ಕಳ ಕಾಳಜಿಯ ಮನೋಭಾವವು ಹೆಚ್ಚು ಮುಖ್ಯವಾಗಿದೆ ಮತ್ತು ಕಿರಿಯ ಪೀಳಿಗೆಯು ವಯಸ್ಸಾದವರಿಗೆ ಹೆಚ್ಚು ಭಾವೋದ್ರಿಕ್ತ ಆರೈಕೆ ಮತ್ತು ತಾಳ್ಮೆಯ ನಿರ್ವಹಣೆಯ ಅಗತ್ಯವಿದೆ ಎಂದು ಅರಿತುಕೊಳ್ಳಬೇಕು. ಆಶಾದಾಯಕವಾಗಿ ಕೆಲವು ಯುವಕರು ಸಾಮಾಜಿಕ ಮಾಧ್ಯಮದಲ್ಲಿ ತಮ್ಮ ಅಜ್ಜಿಯರೊಂದಿಗೆ ತಮ್ಮ ಪ್ರೀತಿಯ ಸಂಬಂಧವನ್ನು ಪ್ರದರ್ಶಿಸುವ ಜಾಗೃತಿ ಮತ್ತು ಯುವ ಐಕಾನ್‌ಗಳು ವಯಸ್ಸಾದವರನ್ನು ನೋಡಿಕೊಳ್ಳಲು ಆಸಕ್ತಿ ತೋರಿಸುತ್ತಾರೆ.

ವಿಭಕ್ತ ಕುಟುಂಬ ವ್ಯವಸ್ಥೆಯು ಕ್ರಮೇಣ ದಿನದ ಕ್ರಮವಾಗುವುದ ರೊಂದಿಗೆ, ಮೂಲಭೂತವಾಗಿ ಆರ್ಥಿಕ ಮತ್ತು ಸಾಮಾಜಿಕ ಕಾರಣಗಳಿಂದಾಗಿ, ವಯಸ್ಸಾದ ಜೀವನ ಮತ್ತು ಆರೈಕೆಗೆ ಸಂಬಂಧಿಸಿದಂತೆ ಕಳೆದ ಕೆಲವು ದಶಕಗಳಲ್ಲಿ ವಿಪರೀತ ಪರಿಸ್ಥಿತಿಯು ಹೊರಹೊಮ್ಮಿದೆ. ಕೆಲವೊಮ್ಮೆ ವಯಸ್ಸಾದ ಮಹಿಳೆಯರನ್ನು ತಮ್ಮ ಗಂಡನಿಂದ ಬೇರ್ಪಡಿಸಲಾಗುತ್ತದೆ, ಮಕ್ಕಳಿಂದ ನಗರಗಳಿಗೆ ಕರೆತರಲಾಗುತ್ತದೆ ಮತ್ತು ನ್ಯೂಕ್ಲಿಯರ್ ವಾಸಸ್ಥಳಗಳಲ್ಲಿ ಸಂಬಳವಿಲ್ಲದ ಸೇವಕಿಗಳಂತೆ ದುಃಖದಿಂದ ಬದುಕಲು ಒತ್ತಾಯಿಸಲಾಗುತ್ತದೆ. ಮತ್ತು ಅವರು ಆಶ್ಚರ್ಯಕರವಾಗಿ, ಕೇವಲ ಪ್ರೀತಿ ಮತ್ತು ಬಾಂಧವ್ಯದಿಂದ ಅಥವಾ ಬೇರೆ ದಾರಿಯಿಲ್ಲದೆ, ದುಡಿಯುವ ಸೊಸೆಗಾಗಿ ಎಲ್ಲಾ ಕೀಳು ಕೆಲಸಗಳನ್ನು ಮಾಡುತ್ತಾರೆ, ಹೆಚ್ಚು ಗೌರವ ಅಥವಾ ಕಾಳಜಿಯನ್ನು ನೀಡುವುದಿಲ್ಲ. ವಯಸ್ಸಾದ ಮಹಿಳೆಯರು ಇದನ್ನು ತಮ್ಮ ಪ್ರಧಾನ, ಧಾರ್ಮಿಕ ಕರ್ತವ್ಯವೆಂದು ಭಾವಿಸುತ್ತಾರೆ, ಇದು ಪೀಳಿಗೆಯಿಂದ ಮುಂದಕ್ಕೆ ಸಾಗುತ್ತಿದೆ. ಅವರು ವಾಸ್ತವವಾಗಿ ತಮ್ಮ ದುಃಖದ ಪರಿಸ್ಥಿತಿಯ ಬಗ್ಗೆ ತಿಳಿದಿರುವುದಿಲ್ಲ ಮತ್ತು ಆಕರ್ಷಕವಾದ ಹಿರಿಯ ಜೀವನ, ಪೌಷ್ಟಿಕ ಆಹಾರ, ಸಕಾಲಿಕ ವೈದ್ಯಕೀಯ ಸಹಾಯ, ಸ್ವಾತಂತ್ರ್ಯ ಮತ್ತು ಸಂತೋಷದ ಅವರ ಸಾಂವಿಧಾನಿಕ ಹಕ್ಕುಗಳ ಬಗ್ಗೆ ಸ್ವಲ್ಪ ಜ್ಞಾನವನ್ನು ಹೊಂದಿರುವುದಿಲ್ಲ.

ಈಗ ಸಮಾಜಶಾಸ್ತ್ರಜ್ಞರು, ಸಮಾಜ ಕಾರ್ಯಕರ್ತರು ಹಾಗೂ ಸರ್ಕಾರಗಳು ವೃದ್ಧಾಪ್ಯದಲ್ಲಿ ಮಹಿಳೆಯರು ಹೆಚ್ಚುತ್ತಿರುವ ಸಂಖ್ಯೆಯಲ್ಲಿ ನೋಂದಾಯಿಸುತ್ತಿರುವಾಗ ವೃದ್ಧರನ್ನು ನೋಡಿಕೊಳ್ಳಲು ಮತ್ತು ನೋಡಿಕೊಳ್ಳಲು ಸಾಕಷ್ಟು ಯುವಕರು ಭವಿಷ್ಯದಲ್ಲಿ ಲಭ್ಯವಿರುತ್ತಾರೆಯೇ ಎಂದು ಭಯಪಡುತ್ತಾರೆ. ಆಧುನಿಕ ಕೈಗಾರಿಕೀಕರಣಗೊಂಡ ಸಮಾಜದಲ್ಲಿ ಸಣ್ಣ ಕುಟುಂಬ ರಚನೆಗಳು, ವಲಸೆ ಮತ್ತು ವೈಯಕ್ತಿಕ ಅಸ್ತಿತ್ವದ ಆದ್ಯತೆಗಳು ವಯಸ್ಸಾದ ಜನರಿಗೆ ಹಾನಿಕಾರಕವಾಗಿದೆ. ಡ್ಯಾನೆಫರ್ ಮತ್ತು ಫಿಲಿಪ್ಸನ್ 2010 ಆಧುನಿಕ ಸಮಾಜಗಳಲ್ಲಿ ಹಿರಿಯ ಆರೋಗ್ಯ ರಕ್ಷಣೆಯ ಅವಿಭಾಜ್ಯ ಅಂಗವಾಗಿ ಹಿರಿಯರ ಆರೈಕೆಯ ಅಗತ್ಯವನ್ನು ಒತ್ತಿಹೇಳುತ್ತಾರೆ, ಅದು ಮನೆಯಲ್ಲಿ ಅಥವಾ ಮನೆಗಳಲ್ಲಿ ಕಾಳಜಿ ವಹಿಸುತ್ತದೆ.

ತಮ್ಮ ಪ್ರಬುದ್ಧ ವಯಸ್ಸಿನಲ್ಲಿ ಪುರುಷರು ಇನ್ನೂ ಸಾಮಾಜಿಕ ಮತ್ತು ಆರ್ಥಿಕ ವಿಷಯಗಳನ್ನು ಕಾಪಾಡಿಕೊಳ್ಳಲು ನಿರ್ವಹಿಸುತ್ತಾರೆ, ಆದರೆ ಮಹಿಳೆಯರು ತಮ್ಮ ಜೀವನದುದ್ದಕ್ಕೂ ಅವಲಂಬನೆಯ ಜೀವನವನ್ನು ನಡೆಸುತ್ತಾರೆ, ಮೊದಲು ಅವರ ಹೆತ್ತವರ ಮನೆಯಲ್ಲಿ, ನಂತರ ಅತ್ತೆಯ ಬಳಿ ಮತ್ತು ಕೊನೆಯದಾಗಿ ತಮ್ಮ ಮಕ್ಕಳು ಅಥವಾ ಮೊಮ್ಮಕ್ಕಳೊಂದಿಗೆ. ಮಹಿಳೆಯರನ್ನು ತೀವ್ರವಾಗಿ ಹೊರಗಿಡಲಾಗಿದೆ, ಅವರ ಅಂತರ್ಗತ ಆರೋಗ್ಯ, ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳನ್ನು ಕಡಿಮೆ ಅಧ್ಯಯನ ಮಾಡಲಾಗಿದೆ ಅಥವಾ ಸಂಶೋಧಿಸಲಾಗಿದೆ, ಇದು ಮಹಿಳಾ ಕೇಂದ್ರಿತ ನಿಭಾಯಿಸುವ ಮತ್ತು ಆರೈಕೆ ಕಾರ್ಯವಿಧಾನವನ್ನು ರೂಪಿಸುವಲ್ಲಿ ಸಹಾಯ ಮಾಡಿರಬಹುದು.

ಭಾರತೀಯ ಕುಟುಂಬಗಳಲ್ಲಿ ಹೆಚ್ಚಾಗಿ ಮಹಿಳೆಯರು ತಮ್ಮ ಉಳಿವಿಗಾಗಿ ತಮ್ಮ ಗಂಡ ಮತ್ತು ಮಗನ ಮೇಲೆ ಅವಲಂಬಿತರಾಗುತ್ತಾರೆ. ನಿಸ್ವಾರ್ಥ ಮನೆಯ ಮಹಿಳೆಯರಿಂದ ತಮ್ಮ ಅಗತ್ಯಗಳನ್ನು ಸುಲಭವಾಗಿ ಪೂರೈಸಿಕೊಳ್ಳಲು ಪುರುಷರು ಸ್ತ್ರೀಯರ ಒಳ್ಳೆಯ ಸ್ವಭಾವವನ್ನು ಬಳಸಿಕೊಳ್ಳುತ್ತಿದ್ದಾರೆ ಎಂಬುದು ಸ್ಪಷ್ಟವಾಗಿದೆ. ಮಹಿಳೆಯರು ಬಳಲುತ್ತಿರುವಾಗ ಅಥವಾ ಆರೈಕೆ ಮತ್ತು ಸೌಕರ್ಯವನ್ನು ಬಯಸಿದಾಗ, ಅವರು ಕೇಳಲು ಅಥವಾ ಅವಲಂಬಿಸಲು ಯಾರೂ ಇರುವುದಿಲ್ಲ. ಮಹಿಳೆಯರು ತಮ್ಮದೇ ಆದ ವಿಶಿಷ್ಟವಾದ ಶಾರೀರಿಕ, ಮಾನಸಿಕ ಮತ್ತು ವೈಯಕ್ತಿಕ ಸಮಸ್ಯೆಗಳನ್ನು ಹೊಂದಿದ್ದಾರೆ, ಅದನ್ನು ತರಬೇತಿ ಪಡೆದ ಆರೈಕೆ ನೀಡುವವರು ಅಥವಾ ಕೆಲವು ಅರ್ಥಮಾಡಿಕೊಳ್ಳುವ ಕುಟುಂಬ ಸದಸ್ಯರು ಅಥವಾ ಸ್ನೇಹಿತರು ಪರಿಹರಿಸಬಹುದು ಅಥವಾ ನಿರ್ವಹಿಸಬಹುದು.

ಅಜಯ್, ಅಭಯ್ ಮತ್ತು ಇತರರು 2010 ಒಎಹೆಚ್ ನಿವಾಸಿಗಳ ಅನಾರೋಗ್ಯದ ಪ್ರೊಫೈಲ್‌ಗಳನ್ನು ಅಧ್ಯಯನ ಮಾಡಿದರು, ಆರ್ಥಿಕ ಅವಲಂಬನೆ, ನಿರ್ಲಕ್ಷ್ಯ ಮತ್ತು ಏಕಾಂಗಿಯಾಗಿ ವಾಸಿಸುವ ಕಾರಣದಿಂದ ಉಂಟಾಗುವ ಅನೇಕ ಸಾಮಾನ್ಯ ವಯಸ್ಸಿಗೆ ಸಂಬಂಧಿಸಿದ ಕಾಯಿಲೆಗಳನ್ನು ಪಟ್ಟಿ ಮಾಡಿದ್ದಾರೆ. ಈ ಕೌಟುಂಬಿಕ, ಸಾಮಾಜಿಕ ಸಮಸ್ಯೆಯನ್ನು ಅಪೇಕ್ಷಣೀಯ, ಸಹಾಯಕವಾದ ಪರಿಹಾರಗಳೊಂದಿಗೆ ಪರಿಹರಿಸುವ ತುರ್ತು ಅಗತ್ಯವನ್ನು ಇದು ಸೂಚಿಸುತ್ತದೆ. ಆಯಾ ಸರ್ಕಾರಗಳು ಮಾತ್ರವಲ್ಲದೆ ಸಾಮಾಜಿಕ ಸಂಸ್ಥೆಗಳು, ಸಂಶೋಧಕರು ಮತ್ತು ಯುವಕರು ಈಗಲೇ ಕಾರ್ಯನಿರ್ವಹಿಸಬೇಕು.

ಮಹಿಳಾ ಮನೆಕೆಲಸಗಾರರು ಹಣವನ್ನು ಸಂಪಾದಿಸದಿದ್ದರೂ ಅಥವಾ ಕುಟುಂಬಕ್ಕೆ ತಮ್ಮ ಜೀವಮಾನದ ಸೇವೆಗಳಿಗಾಗಿ ಏನನ್ನೂ ಪಾವತಿಸದಿದ್ದರೂ, ಅವರು ತಮ್ಮ ಇಡೀ ಜೀವನ ಸಮಯವನ್ನು, ಶಕ್ತಿಯನ್ನು ತಮ್ಮ ಮನೆಯ ವ್ಯವಹಾರಗಳನ್ನು ನಿರ್ವಹಿಸುವಲ್ಲಿ ತಮ್ಮ ಅಸ್ತಿತ್ವದ ಮೂಲಕ ಕೊಡುಗೆ ನೀಡುತ್ತಾರೆ ಎಂಬುದನ್ನು ನಿರಾಕರಿಸಲಾಗುವುದಿಲ್ಲ. ಅವರು ದೈಹಿಕವಾಗಿ ಅಸಮರ್ಥರಾದಾಗ, ಅವರು ಹೇಗಾದರೂ ಮಾಡುವುದನ್ನು ಮುಂದುವರಿಸುತ್ತಾರೆ. ವಿರುದ್ಧವಾಗಿ ಅದೇ ಕುಟುಂಬಗಳು

ಮನೆಗೆಲಸಕ್ಕಾಗಿ ನೇಮಕಗೊಂಡ ದಾಸಿಯರಿಗೆ ಸುಂದರವಾಗಿ ಪಾವತಿಸಿ ಆದರೆ ಯಾವುದೇ ಹಣದ ಪರಿಗಣನೆಯಿಲ್ಲದೆ ಮನೆಯಲ್ಲಿ ಅನೇಕ ಕಾರ್ಯಗಳನ್ನು ನಿರ್ವಹಿಸುವ ತಾಯಂದಿರು, ಹೆಂಡತಿಯರು ಅಥವಾ ಇತರ ಸ್ತ್ರೀ ಸಂಬಂಧಗಳಿಗೆ ಸ್ವಲ್ಪ ಗೌರವ ಮತ್ತು ಮೌಲ್ಯವನ್ನು ತೋರಿಸುವುದಿಲ್ಲ.

ಮನೆಯ ನಿರ್ವಹಣೆಯಲ್ಲಿ ಆಧುನಿಕ ಕೆಲಸ ಮಾಡುವ ದಂಪತಿಗಳ ಸನ್ನಿವೇಶದಲ್ಲಿ ಮಹಿಳೆಯರು ತಮ್ಮ ಗಂಡನ ಆದಾಯಕ್ಕೆ ಪೂರಕವಾಗಿ ಗಳಿಸಲು ಮನೆಯಿಂದ ಹೊರಗೆ ಹೋಗುವುದನ್ನು ಬಯಸುತ್ತದೆ ಮತ್ತು ನಂತರ ದಿನದಲ್ಲಿ ಮನೆಯ ಕಾರ್ಯಗಳನ್ನು ನಿರ್ವಹಿಸುವ ಅಗತ್ಯವಿರುತ್ತದೆ. ವೃದ್ಧಾಪ್ಯದಲ್ಲಿ ಹೆಚ್ಚುತ್ತಿರುವ ಪ್ರತಿಕೂಲತೆಯು ಜಾಗತಿಕ ಸಮಸ್ಯೆಯಾಗುತ್ತಿದೆ ಎಂದು ಆಲಂ ಮತ್ತು ಇತರರು 2013 ಕಂಡು ಹಿಡಿದಿದ್ದಾರೆ, ಇದು ಹಿರಿಯರ ಗೌರವಾನ್ವಿತ ಸ್ಥಾನಮಾನದ ಮೇಲೆ ಪರಿಣಾಮ ಬೀರುತ್ತದೆ ಮತ್ತು ಅವರ ಆರ್ಥಿಕ ಸ್ವಾತಂತ್ರ್ಯವನ್ನು ಕಡಿಮೆ ಮಾಡುತ್ತದೆ. ಈ ಕೌಟುಂಬಿಕ, ಸಾಮಾಜಿಕ ಮತ್ತು ಆರ್ಥಿಕ ಶೋಷಣೆಯು ಸಮಾಜದಲ್ಲಿ ಯುಗಗಳಿಂದಲೂ ವೃದ್ಧಿಸುತ್ತಿದೆ ಮತ್ತು ಮಹಿಳೆಯರು ಸ್ವತಃ ಭಾವನಾತ್ಮಕ,

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಸಾಂಪ್ರದಾಯಿಕ ಸಂಕೋಲೆಗಳಿಂದ ಮುಕ್ತರಾಗಲು ಪ್ರಯತ್ನಿಸದ ಹೊರತು ಮುಂದುವರಿಯಬಹುದು.

ಆಧುನೀಕರಣ ಮತ್ತು ಉದ್ಯೋಗಗಳ ಪಲ್ಲಟದಿಂದಾಗಿ, ಸಣ್ಣ ವಾಸಸ್ಥಳಗಳು, ಹೆಚ್ಚಿನ ಬಾಡಿಗೆಗಳು, ದುಬಾರಿ ಜೀವನದೊಂದಿಗೆ ಪಟ್ಟಣಗಳು ಮತ್ತು ನಗರಗಳಿಗೆ ವಲಸೆಯ ಸಂಪೂರ್ಣ ಅಗತ್ಯವು ಹೊರಹೊಮ್ಮಿದೆ ಮತ್ತು ಅವರ ನೋಯುತ್ತಿರುವ ಅಗತ್ಯತೆಗಳಲ್ಲಿ ವಯಸ್ಸಾದವರ ಆರೈಕೆಯು ಆದ್ಯತೆಯಿಲ್ಲದಾಗಿದೆ. ವಯಸ್ಸಾದ ತಾಯಂದಿರು ಅಥವಾ ಚಿಕ್ಕಮ್ಮರನ್ನು ಮನೆಕೆಲಸಗಳಲ್ಲಿ ಸಹಾಯ ಮಾಡಲು ಅಥವಾ ಚಿಕ್ಕ ಮಕ್ಕಳನ್ನು ನೋಡಿಕೊಳ್ಳಲು ಅಗತ್ಯವಿರುವಾಗ ಮಾತ್ರ ಮನೆಗೆ ಕರೆತರಲಾಗುತ್ತದೆ. ಅಂತಹ ವಾಸಸ್ಥಳಗಳಲ್ಲಿ ವಯಸ್ಸಾದ ಮಹಿಳೆಯರ ಗಂಭೀರ ಸ್ಥಿತಿಗಳು ಶೋಚನೀಯವಾಗಿವೆ, ಹೃದಯ ವಿದ್ರಾವಕವಾಗಿವೆ ಮತ್ತು ಹಲವಾರು ಎನ್‌ಜಿಓಗಳು ಅಂತಹ ನೋವಿನಿಂದ ಬಳಲುತ್ತಿರುವ ವೃದ್ಧ ಮಹಿಳೆಯರನ್ನು ಉಳಿಸಲು ಮತ್ತು ಉತ್ತಮ ಆರೈಕೆಯನ್ನು ನೀಡಲು ಪ್ರಯತ್ನಿಸುತ್ತಿವೆ.

ಇತ್ತೀಚಿನ ದಿನಗಳಲ್ಲಿ, ವೇಗದ ಜೀವನದಿಂದ ಕುಟುಕುವ ಮತ್ತು ಪ್ರಭಾವಿತವಾಗಿರುವ ಆಧುನಿಕ ಯುವಕರು ಆಡಂಬರ ಮತ್ತು ಪ್ರದರ್ಶನದಿಂದ ತುಂಬಿದ ಜೀವನ ಶೈಲಿಯನ್ನು ಪ್ರದರ್ಶಿಸುತ್ತಾರೆ ಮತ್ತು ಅವರು ಅನುಸರಿಸುವ ಅವಾಸ್ತವಿಕ ಪ್ರವೃತ್ತಿಗಳು ಮತ್ತು ಗುರಿಗಳು, ವಯಸ್ಸಾದವರ ಭಾವನೆಗಳನ್ನು ವ್ಯಕ್ತಪಡಿಸಲು ಅವರಿಗೆ ಸಮಯ, ಹಣ ಮತ್ತು ಶಕ್ತಿಯಿಲ್ಲ. ಆಧುನಿಕ ಗ್ರಾಹಕೀಕರಣವು ದುಬಾರಿ ಜೀವನವನ್ನು ಉತ್ತೇಜಿಸುತ್ತದೆ; ಇತ್ತೀಚಿನ ಸಾಮಾಜಿಕ-ಆರ್ಥಿಕ ಅಂಶಗಳು ಸ್ವಯಂ-ಕೇಂದ್ರಿತ ವ್ಯಕ್ತಿಗಳನ್ನು ತಮ್ಮ ವೈಯಕ್ತಿಕ ಅಗತ್ಯಗಳು ಮತ್ತು ಜೀವನಕ್ಕೆ ಮಾತ್ರ ಹೆಚ್ಚು ಕಾಳಜಿಯನ್ನು ಸೃಷ್ಟಿಸುತ್ತವೆ. ಇಂತಹ ಸಮಸ್ಯೆಯು ಈಗಾಗಲೇ ಅಸ್ತಿತ್ವದಲ್ಲಿದೆ ಮತ್ತು ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಸಮಸ್ಯೆಗಳನ್ನು ಸೃಷ್ಟಿಸುತ್ತಿದೆ, ಇದು ವಯಸ್ಸಾದವರ ಹೆಚ್ಚಿನ ಅನುಪಾತವನ್ನು ಎದುರಿಸುತ್ತಿದೆ, ಕಡಿಮೆ ಸಂಖ್ಯೆಯ ಯುವಕರು ಅವರನ್ನು ನೋಡಿಕೊಳ್ಳಲು ತೀವ್ರ ವ್ಯತಿರಿಕ್ತವಾಗಿದೆ.

ಮಹಿಳೆಯರ ಆರೋಗ್ಯದ ಪ್ರಕಾರ 2019 ಸಾರ್ವತ್ರಿಕವಾಗಿ ಮಹಿಳೆಯರು ಪುರುಷರಿಗಿಂತ ಹೆಚ್ಚು ಬದುಕುತ್ತಾರೆ ಮತ್ತು ಅವರ ಜೀವಿತಾವಧಿ ಸುಮಾರು 81 ವರ್ಷಗಳು ಮತ್ತು ಏಷ್ಯಾದ ಮಹಿಳೆಯರು 87 ರಿಂದ 90 ವರ್ಷಗಳವರೆಗೆ ಬದುಕುತ್ತಾರೆ. ಆದ್ದರಿಂದ, ಇದು ವಯಸ್ಸಾದ ಪುರುಷರು ಮತ್ತು ಮಹಿಳೆಯರಿಗೆ ತೊಂದರೆಯನ್ನುಂಟು ಮಾಡುತ್ತದೆ ಆದರೆ ಯುವ ಪೀಳಿಗೆಗೆ ಎಡಿಎಲ್‌ಗಳನ್ನು ನಿರ್ವಹಿಸಲು ಸಾಧ್ಯವಾಗದಿದ್ದಾಗ ಅವರನ್ನು ನೋಡಿಕೊಳ್ಳಲು ಖಂಡಿತವಾಗಿಯೂ ಹೆಚ್ಚಿನ ಒತ್ತಡವನ್ನು ಸೃಷ್ಟಿಸುತ್ತದೆ. ಅನೇಕ ಕುಟುಂಬಗಳಲ್ಲಿ ವಯಸ್ಸಾದವರನ್ನು ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸಲಾಗುತ್ತದೆ ಮತ್ತು ಅದನ್ನು ಫ್ಯಾಶನ್ ಅಥವಾ ಆಧುನಿಕ ಅಗತ್ಯವೆಂದು ಪರಿಗಣಿಸಿ ತೀವ್ರವಾಗಿ ನಿರ್ಲಕ್ಷಿಸಲಾಗುತ್ತದೆ. ವಿಚಿತ್ರವೆಂದರೆ ತಮ್ಮ ವಯಸ್ಸಾದ ಹೆತ್ತವರನ್ನು ಹೊರಗೆ ಎಸೆಯುವ ಮಕ್ಕಳು, ಈ ಕಠೋರ ವಾಸ್ತವವನ್ನು ಅರಿತುಕೊಳ್ಳುವುದಿಲ್ಲ ಅಥವಾ ಅತ್ಯಂತ ಕರಾಳ ಭವಿತವ್ಯವನ್ನು ಕಲ್ಪಿಸಿಕೊಳ್ಳುತ್ತಾರೆ, ಅವರು ತಮ್ಮದೇ ಆದ ಒಂದು ದಿನವನ್ನು ಎದುರಿಸುತ್ತಾರೆ.

ಯುವ ದಂಪತಿಗಳು ಪೋಷಕರಿಲ್ಲದೆ ಅಪಾರ್ಟ್‌ಮೆಂಟಗಳಲ್ಲಿ ಪ್ರತ್ಯೇಕವಾಗಿ ವಾಸಿಸಲು ಅಥವಾ ಕುಟುಂಬದ ಹಿರಿಯರನ್ನು ಓಎಹೆಚ್‌ಗೆ ಕಳುಹಿಸಲು ಬಯಸುತ್ತಾರೆ. ವಯಸ್ಸಾದ ಅಜ್ಜಿಯರು ಅಥವಾ ಪೋಷಕರ ಹಸ್ತಕ್ಷೇಪವಿಲ್ಲದೆ, ಹೊಸ ಸ್ವಾತಂತ್ರ್ಯವನ್ನು ಆನಂದಿಸುತ್ತಾ ಸ್ವತಂತ್ರವಾಗಿ ಬದುಕುವ ಬಯಕೆಯು ಆಧುನಿಕ ಜೀವನಶೈಲಿಯ ನಿಷೇಧವಾಗಿದೆ. ಅನುಭವಿ ಮತ್ತು ಪ್ರಬುದ್ಧ ವಯಸ್ಸಾದ ಪೋಷಕರು ಅಥವಾ ಅಜ್ಜಿಯರ ಅಗತ್ಯವಿರುವ ಈ ನೆರಳು ಇನ್ನು ಮುಂದೆ ಲಭ್ಯವಿಲ್ಲದಿದ್ದರೆ, ಪಾಶ್ಚಿಮಾತ್ಯೀಕರಣದ ಜೀವನದ ಆಕರ್ಷಕ ಶಾಖದಲ್ಲಿ ಯುವಕರು ಸುಟ್ಟುಹೋಗುತ್ತಾರೆ. ಆದ್ದರಿಂದ, ಓ.ಎ.ಹೆಚ್. ಗೆ ವಯಸ್ಸಾದವರನ್ನು ಕಳುಹಿಸುವುದನ್ನು ಆಧುನಿಕ ಜೀವನ ಶೈಲಿ ಎಂದು ಪರಿಗಣಿಸಲಾಗಿದೆ. ಆದರೆ ನಾಚಿಕೆಗೇಡು, ಉದ್ದೇಶಪೂರ್ವಕವಾಗಿ ತಾತ್ವಿಕವಾಗಿ ಅನುಸರಿಸಲಾಗುತ್ತದೆ.

ಅದರ ಜೊತೆಗೆ, ಹೊಸ ಸಹಸ್ರಮಾನದ ಕೆಲವು ದಶಕಗಳಷ್ಟು ಹಳೆಯದಾದ ಹೆಚ್ಚಿನ ವಯಸ್ಸಿನ ಪೋಷಕರ ಆರೈಕೆಯನ್ನು ಹೇಗಾದರೂ ಸಂಪೂರ್ಣವಾಗಿ ತೆಗೆದುಕೊಳ್ಳಲಾಗುತ್ತಿಲ್ಲ ಅಥವಾ ಮುಂದುವರಿಸಲಾಗಿಲ್ಲ. ಹೊಸ ತಲೆಮಾರು ಹಳೆಯ ಜನರು ತಮ್ಮ ಸಹವಾಸ, ಪ್ರೀತಿ, ವಾತ್ಸಲ್ಯ, ಗೌರವದಿಂದ ಹೆಚ್ಚು ಸಂತೋಷದಿಂದ ಮತ್ತು ಹೆಚ್ಚು ತೃಪ್ತರಾಗಿದ್ದಾರೆಂದು ಮರೆತಿದ್ದಾರೆ. ಮಕ್ಕಳು ತಮ್ಮ ಕರ್ತವ್ಯ ಪ್ರಜ್ಞೆಯನ್ನು ಅರಿತು ತಮ್ಮ ವಯಸ್ಸಾದ ಪೋಷಕರನ್ನು ಕಾಳಜಿ ವಹಿಸಿದಾಗ ಮತ್ತು ಭಾವನಾತ್ಮಕ ಬಾಂಧವ್ಯವನ್ನು ವ್ಯಕ್ತಪಡಿಸಿದಾಗ, ಪೋಷಕರು ವಿಶೇಷವಾಗಿ ವಯಸ್ಸಾದ ಮಹಿಳೆಯರು ಸಂತೋಷ ಮತ್ತು ತೃಪ್ತಿಯನ್ನು ಅನುಭವಿಸುತ್ತಾರೆ. ದುರದೃಷ್ಟವಶಾತ್, ಆಧುನಿಕ ವೇಗದ ಜೀವನದ ಜಟಿಲದಲ್ಲಿ ಈ ಎಲ್ಲಾ ಮೌಲ್ಯಗಳು ಕಳೆದುಹೋಗುತ್ತಿವೆ, ಅಲ್ಲಿ ಲೈವ್-ಇನ್ ಅನ್ನು ಅನುಸರಿಸಲಾಗುತ್ತದೆ ಮತ್ತು ಓಎಹೆಚ್ ಗೆ ಪೋಷಕರನ್ನು ಹೊರಹಾಕುವುದನ್ನು ನಾಚಿಕೆಯಿಲ್ಲದೆ ಅಳವಡಿಸಿಕೊಳ್ಳಲಾಗುತ್ತದೆ.

ನಿರಂತರವಾಗಿ ಹೆಚ್ಚುತ್ತಿರುವ ಪೀಳಿಗೆಯ ಅಂತರವು ಇನ್ನು ಮುಂದೆ ಸಮಸ್ಯೆಯಾಗಿಲ್ಲ, ಅವಿಭಕ್ತ ಕುಟುಂಬ ವ್ಯವಸ್ಥೆಯ ಯಾವುದೇ ಸಮಸ್ಯೆಗಳು ಅಥವಾ ಪ್ರಯೋಜನಗಳನ್ನು ಅನುಭವಿಸಲು ಮತ್ತು ಪರಸ್ಪರ ಎದುರಿಸಲು ಯಾವುದೇ ತಲೆಮಾರುಗಳು ಒಟ್ಟಿಗೆ ಇರುವುದಿಲ್ಲ. ರಾಮಮೂರ್ತಿ 2002 ರವರ ಪ್ರಕಾರ, ಸಂಬಂಧಿತ ವಯೋಮಾನವನ್ನು ಯುವಕರು ಮತ್ತು ಹಿರಿಯರು ವಿಭಿನ್ನವಾಗಿ ಗ್ರಹಿಸುತ್ತಾರೆ ಮತ್ತು ಅರ್ಥಮಾಡಿಕೊಳ್ಳುತ್ತಾರೆ. ತಾಯಂದಿರು ಕುಟುಂಬದ ಕೇಂದ್ರವಾಗಿದ್ದರು ಮತ್ತು ಜಪಮಾಲೆಯಂತೆ ಪ್ರೀತಿ ಮತ್ತು ಕಾಳಜಿಯ ಸರಮಾಲೆಯೊಂದಿಗೆ ವಿವಿಧ ಸದಸ್ಯರನ್ನು ಒಟ್ಟಿಗೆ ಇಡುತ್ತಾರೆ. ಮತ್ತು ಅನೇಕ ತಾಯಂದಿರು ಕುಟುಂಬದವರ ಕೈಯಿಂದ ಮನೆಯಲ್ಲಿ ಅಸಂಖ್ಯಾತ ಕಷ್ಟಗಳನ್ನು ಅನುಭವಿಸುತ್ತಾರೆ ಅಥವಾ ಕೆಲವು ಆಶ್ರಮಗಳಲ್ಲಿ ಮಾಗಿದ ವಯಸ್ಸಿನಲ್ಲಿ ಕಠಿಣ ಜೀವನವನ್ನು ಎದುರಿಸುತ್ತಾರೆ ಅಥವಾ ಕೆಲವು ವೃದ್ಧಾಶ್ರಮದಲ್ಲಿ ಕಳಪೆಯಾಗಿ ವಾಸಿಸುತ್ತಾರೆ, ಪ್ರತ್ಯೇಕತೆ ಮತ್ತು ಹೆಚ್ಚಿನ ಸಹಾಯವಿಲ್ಲದೆ ಅನಾರೋಗ್ಯದಿಂದ ಬಳಲುತ್ತಿದ್ದಾರೆ.

ಮಗನ ಮದುವೆಯ ನಂತರ ವೃದ್ಧರು ತಮ್ಮ ಕೌಟುಂಬಿಕ ಜೀವನದಲ್ಲಿ ನಾಟಕೀಯ ಮತ್ತು ಹಠಾತ್ ಬದಲಾವಣೆಗಳನ್ನು ಎದುರಿಸುತ್ತಾರೆ, ಇದು ಶೇಕಡಾ 74 ರಷ್ಟಿದೆ ಎಂದು ವರದಿಯಾಗಿದೆ ಮತ್ತು ಕುಟುಂಬದಿಂದ ವೃದ್ಧಾಶ್ರಮಕ್ಕೆ ಶಿಫ್ಟ್ ಮಾಡುವಿಕೆಯು ಸ್ಪಷ್ಟವಾಗಿ ಒಪ್ಪಿಗೆಯೊಂದಿಗೆ ಇನ್ನೂ 86 ಪ್ರತಿಶತದಷ್ಟು ದಾಖಲಾಗಿರುವ ಅಸಹಾಯಕ ವೃದ್ಧ ಪೋಷಕರ ಮೇಲೆ ಬಲವಂತವಾಗಿ ಹೇರಲಾಗಿದೆ. ಮಗನು ಮದುವೆಯಾದ ಕಾರಣ ಮತ್ತು ಕುಟುಂಬದ ರಚನೆಯು ಬದಲಾದ ಕಾರಣ ಮಾತ್ರವಲ್ಲ, ಅದರೊಂದಿಗೆ ಮಗನ ವರ್ತನೆಯೂ ಸಂಪೂರ್ಣವಾಗಿ ವ್ಯತಿರಿಕ್ತವಾಗಿದೆ. ಆದರೆ ಸೊಸೆಯನ್ನು ಸಂಪೂರ್ಣವಾಗಿ ದೂಷಿಸಲಾಗುತ್ತದೆ ಮತ್ತು ಪ್ರೀತಿಯಿಂದ ಮಗ ಇನ್ನೂ ವಯಸ್ಸಾದ ಜೀವನದಲ್ಲಿ ವಿಚಿತ್ರವಾದ ಘಟನೆಗಳಿಗೆ ಕಾರಣವಾಗುವುದಿಲ್ಲ. ವಿಚಿತ್ರವೆಂದರೆ, ಆಯಾ ಕುಟುಂಬದೊಂದಿಗೆ ಅವರ ಅಂತರ್ಗತ ಮೃದುವಾದ, ಪ್ರೀತಿಯ ಸಹಜ ಬಾಂಧವ್ಯದಿಂದಾಗಿ ಒಡೆಯುವ ಕುಟುಂಬದಲ್ಲಿ ಮಹಿಳೆಯರು ಹೆಚ್ಚು ಬಳಲುತ್ತಿದ್ದಾರೆ. ಅವರು ಕುಟುಂಬದ ನಿರ್ಧಾರಗಳಲ್ಲಿ ಯಾವುದೇ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಹೇಳಿಕೆಯನ್ನು ಹೊಂದಿಲ್ಲ ಮತ್ತು ಎಲ್ಲಾ ಕ್ರೂರ ಮತ್ತು ಅಮಾನವೀಯ ಶೋಷಣೆಗೆ ಮೂಕರಾಗಿದ್ದಾರೆ.

ಅನೇಕ ಬಾರಿ ಅವರು ಎಲ್ಲಿಯೂ ಹೋಗದ ಕಾರಣ ನರಕಯಾತನೆಯ ಪರಿಸ್ಥಿತಿಗಳಿಂದ ಅವರನ್ನು ರಕ್ಷಿಸಲು ಯಾರೂ ಇಲ್ಲ ಎಂದು ಬಳಲುತ್ತಿದ್ದಾರೆ. ಒಎಹೆಚ್ ಜೀವನದ ಕೊನೆಯ ವರ್ಷಗಳನ್ನು ಮುನ್ನಡೆಸಲು ಏಕೈಕ ಮಾರ್ಗವಾಗಿದೆ. ವಾಸನ್ ಮತ್ತು ಜೈನ್ (2011) ಅವರು ಯಾವುದೇ ಆದಾಯದ ಮೂಲ ಅಥವಾ ಆಸ್ತಿಯ ಹಕ್ಕು ಇಲ್ಲದ ವಯಸ್ಸಾದ ಮಹಿಳೆಯರಿಗೆ, ಮಗ ಅಥವಾ ಸೊಸೆಯೊಂದಿಗಿನ ಸಂಬಂಧವು ಅವರ ಭವಿಷ್ಯವನ್ನು ನಿರ್ಧರಿಸುತ್ತದೆ. ಮಕ್ಕಳು ಇನ್ನು ಮುಂದೆ ತಮ್ಮ ವಯಸ್ಸಾದ ಜನರನ್ನು ಇರಿಸಿಕೊಳ್ಳಲು, ಸೇವೆ ಮಾಡಲು ಮತ್ತು ನೋಡಿಕೊಳ್ಳಲು ಬಯಸುವುದಿಲ್ಲವಾದ್ದರಿಂದ ಅವಲಂಬಿತ ವೃದ್ಧ ಪೋಷಕರನ್ನು ಹೊರಹಾಕಲು ಅಥವಾ ವೃದ್ಧಾಶ್ರಮಕ್ಕೆ ಸ್ಥಳಾಂತರಿಸಲು ಇದು ಈಗ ಒಂದು ಪ್ರವೃತ್ತಿಯಾಗಿದೆ ಮತ್ತು ಒಪ್ಪಿಕೊಂಡ ರೂಢಿಯಾಗಿದೆ. ಇದಲ್ಲದೆ, ಸಂಬಂಧಿಕರು ಅಥವಾ ಸಂಬಂಧಿಕರು ಸಾಮಾನ್ಯವಾಗಿ ತಮ್ಮ ಜವಾಬ್ದಾರಿಯಿಂದ ದೂರ ಸರಿಯುತ್ತಾರೆ. ಕೆಲವೊಮ್ಮೆ ಸ್ನೇಹಿತರು ಅಥವಾ ಸಂಬಂಧಿಕರು ನಿರ್ಗತಿಕ ವಯಸ್ಸಾದವರನ್ನು ನೋಡಿಕೊಳ್ಳುತ್ತಾರೆ ಆದರೆ ಅವರು ಅನೇಕ ಒತ್ತಾಯಗಳಿಂದ ಅವರನ್ನು ತ್ಯಜಿಸಲು ಒತ್ತಾಯಿಸುತ್ತಾರೆ.

ಹಿರಿಯ ನಾಗರಿಕರ ಮನೆಗಳು, ಆಶ್ರಮಗಳು ಮತ್ತು ಹಿರಿಯ ನಾಗರಿಕರ ಸರಿಯಾದ ನಿರ್ವಹಣೆಯಂತಹ ಉತ್ತಮ ಸೌಲಭ್ಯಗಳನ್ನು ಸ್ಥಾಪಿಸಲು ಎನ್‌ಜಿಒಗಳು ಹೆಜ್ಜೆ ಹಾಕಲು ಮತ್ತು ಕೆಲಸ ಮಾಡಲು ತೀವ್ರವಾಗಿ ಭಾವಿಸಲಾಗಿದೆ. ಆಲಂ ಮತ್ತು ಇತರರು, 2013 ಮಾಧ್ಯಮಗಳು ಮತ್ತು ಸರ್ಕಾರವು ಕುಟುಂಬ, ಸಮಾಜದೊಂದಿಗೆ ಹಿರಿಯರಿಗೆ ಸರಿಯಾದ ಸ್ಥಾನಮಾನ ಮತ್ತು ಕಾಳಜಿಯ ಮನೋಭಾವವನ್ನು ಉತ್ತೇಜಿಸಬೇಕು ಎಂದು ಒತ್ತಿ ಹೇಳಿದರು.

ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ವಯಸ್ಸಾದವರಿಗೆ ಲಭ್ಯವಿರುವ ಉತ್ತಮ ವೈದ್ಯಕೀಯ ಸೌಲಭ್ಯಗಳೊಂದಿಗೆ ಸಮಾಜ ಮತ್ತು ಸರ್ಕಾರವು ಇಂದಿನ ದಿನಗಳಲ್ಲಿ ವಯಸ್ಸಾದವರು ಹೆಚ್ಚು ಕಾಲ ಬದುಕುತ್ತಿದ್ದಾರೆ. ಇದು ಬಹಳ ಧನಾತ್ಮಕ ಸಂಗತಿಯಾಗಿದೆ ಆದರೆ ಮುಂದಿನ ದಿನಗಳಲ್ಲಿ ಹಿರಿಯರ ಆರೈಕೆ ಮತ್ತು ವಸತಿಗಾಗಿ ಹೊಸ ಸವಾಲುಗಳನ್ನು ಹೊಂದಿದೆ. ಮತ್ತು ಯಾವುದೇ ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳದಿದ್ದರೆ, ಬೂದುಬಣ್ಣದ ಜನಸಂಖ್ಯೆಯ ಜೀವನವು ಹೆಚ್ಚಾಗಿ ಮಹಿಳೆಯರ ಮೇಲೆ ಪರಿಣಾಮ ಬೀರುತ್ತದೆ. ಎಲ್ಲಾ ಸಂಶೋಧನೆಗಳು ಮತ್ತು ಸಲಹೆಗಳು ವ್ಯವಸ್ಥಿತ ಯೋಜನೆ ಮತ್ತು ಹಿರಿಯರ ಆರೈಕೆಗಾಗಿ ವಿಶೇಷವಾಗಿ ವಯಸ್ಸಾದ ಮಹಿಳೆಯರಿಗೆ ಗಣನೀಯ ಬಜೆಟ್ ಹಂಚಿಕೆಯನ್ನು ಸೂಚಿಸುತ್ತವೆ. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿನ ಸರ್ಕಾರಗಳು ಮತ್ತು ವ್ಯಕ್ತಿಗಳಿಂದ ವಯಸ್ಸಾದ ಆದ್ಯತೆ ಮತ್ತು ಸಾಮಾಜಿಕ ಜವಾಬ್ದಾರಿ ಎಂದು ಪರಿಗಣಿಸಬೇಕು.

ಹಣವು ಮೂಲಭೂತವಾಗಿ ವಯಸ್ಸಾದವರು ವಿಶೇಷವಾಗಿ ಅವಲಂಬಿತ ವಯಸ್ಸಾದ ಮಹಿಳೆಯರು ಎದುರಿಸುತ್ತಿರುವ ಹೆಚ್ಚಿನ ಸಮಸ್ಯೆಗಳಿಗೆ ಮೂಲ ಕಾರಣವಾಗಿದೆ ಮತ್ತು ಅನಿವಾರ್ಯವಾಗಿ ಲಭ್ಯವಿರುವ ಏಕೈಕ ಪರಿಹಾರವಾಗಿದೆ. ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರದಲ್ಲಿ ಇದು ಸಹಸ್ರಮಾನದ ಎರಡು ದಶಕಗಳಲ್ಲಿ ತೀವ್ರ ಮತ್ತು ಹೆಚ್ಚು ಆತಂಕಕಾರಿಯಾಗಿದೆ, ಬೆವಿನಾಮಾರ್ 2012 ರ ಪ್ರಕಾರ, ವಯಸ್ಸಾದ ಮಹಿಳೆಯರು ವಿಧವೆಯರು ದುರ್ಬಲ ಪೀಡಿತರಾಗಿ ಉಳಿದಿದ್ದಾರೆ, ಅವರಿಗೆ ಆರೋಗ್ಯ ಮತ್ತು ಆರ್ಥಿಕ ಯೋಜನೆಗಳನ್ನು ಪ್ರತ್ಯೇಕವಾಗಿ ರಚಿಸುವ ತುರ್ತು ಅಗತ್ಯವಿದೆ. ಹೀಗೆ ನಿರಂತರವಾಗಿ ಬೆಳೆಯುತ್ತಿರುವ ನಿರ್ಣಾಯಕ ಪರಿಸ್ಥಿತಿಯು ಕೇಂದ್ರದಲ್ಲಿರುವ ಮಹಿಳೆಯರೊಂದಿಗೆ ಸಮಸ್ಯೆಯನ್ನು ಎಚ್ಚರಿಕೆಯಿಂದ, ಪರಿಗಣನೆಯಿಂದ ಅಧ್ಯಯನ ಮಾಡುವುದರ ಜೊತೆಗೆ ನಗರ ಮತ್ತು ಗ್ರಾಮೀಣ ವೃದ್ಧ ಮಹಿಳೆಯರನ್ನು ನೋಡಿಕೊಳ್ಳಲು ವ್ಯವಸ್ಥೆಗಳನ್ನು ಮಾಡಲು ಒಂದು ನಿರ್ದಿಷ್ಟ, ವಾಸ್ತವಿಕ ಮತ್ತು ಸರಿಯಾದ ಯೋಜನೆ ಅಗತ್ಯವಿರುತ್ತದೆ. ತಮ್ಮ ವಯಸ್ಸಾದ ಪೋಷಕರನ್ನು ವಿಶೇಷವಾಗಿ ತಾಯಿಯನ್ನು ಚೆನ್ನಾಗಿ ನೋಡಿಕೊಳ್ಳುವ ಅಗತ್ಯವನ್ನು ಅರಿತುಕೊಳ್ಳುವ ವಿಭಕ್ತ ಕುಟುಂಬಗಳಲ್ಲಿ ವಯಸ್ಸಾದವರು ಉತ್ತಮರಾಗಿದ್ದಾರೆ, ಅವರಿಗೆ ಸೇವೆ ಮಾಡಲು ಬೇರೆ ಯಾರು ಇದ್ದಾರೆ. ತಮ್ಮ ವಯಸ್ಸಾದ ಪೋಷಕರನ್ನು ವಿಶೇಷವಾಗಿ ತಾಯಿಯನ್ನು ಚೆನ್ನಾಗಿ ನೋಡಿಕೊಳ್ಳುವ ಅಗತ್ಯವನ್ನು ಅರಿತುಕೊಳ್ಳುವ ವಿಭಕ್ತ ಕುಟುಂಬಗಳಲ್ಲಿ ಹಳೆಯವರು ಉತ್ತಮರಾಗಿದ್ದಾರೆ.

## ಪರಾಮರ್ಶನ ಗ್ರಂಥಗಳು


- **ಪಪ್ಪತಿ ಕೆ. ಮತ್ತು ಸುಧೀರ್, ಎಂ.ಎ. (2005)** : ಗ್ರಾಮೀಣ ವಯೋಮಾನದವರ ಮಾನಸಿಕ-ಸಾಮಾಜಿಕ ಗುಣಲಕ್ಷಣಗಳು ಮತ್ತು ಸಮಸ್ಯೆಗಳು. ಸಂಶೋಧನೆ ಮತ್ತು ಅಭಿವೃದ್ಧಿ ಜರ್ನಲ್, ಹೆಲ್ಪ್ ಏಜ್ ಇಂಡಿಯಾ, ಸಂಪುಟ. 11, ಸಂ.1.
- **ಫಿಲಿಪ್ಸನ್ ಮತ್ತು ಡ್ಯಾನೆಫರ್ (2010)** : ದಿ ಸೇಜ್ ಬುಕ್ ಆಫ್ ಸೋಶಿಯಲ್ ಜೆರೊಂಟಾಲಜಿ. ಲಂಡನ್
- **ಅಜಯ್, ಅಭಯ್ ಮತ್ತು ಇತರರು (2010)** : OAH- ಜರ್ನಲ್ ಆಫ್ ಇಂಡಿಯನ್ ಅಕಾಡೆಮಿ ಆಫ್ ಜೆರಿಯಾಟ್ರಿಕ್ಸ್‌ನ ಖೈದಿಗಳಲ್ಲಿ ಮಾರ್ಬಿಡಿಟಿ ಪ್ಯಾಟರ್ನ್ ಅಧ್ಯಯನ. ಸಂಪುಟ (1)
- **ಹಮೀದ್ ಆಲಂ, ಫರ್ಮಾನ್ ಅಲಿ, ಉಮರ್ ದರಾಜ್, ವಕಾರ್ ಅಹ್ಮದ್, ಇಬ್ರಾಹಿಂ (2013)** : ಡಿಸ್ಟ್ರಿಕ್ಟ್ ಡಿರ್ ಲೋವರ್ ಖೈಬರ್ ಪಖ್ತುಂಕ್ವಾ ಪಾಕಿಸ್ತಾನ್, ಸಮಾಜ ವಿಜ್ಞಾನ ಮತ್ತು ಮಾನಹಿಕತೆಗಳಲ್ಲಿ ವೃದ್ಧಾಪ್ಯ ಹೊಂದಿರುವ ವ್ಯಕ್ತಿಗಳ ಸಾಮಾಜಿಕ-ಆರ್ಥಿಕ ಸಮಸ್ಯೆಗಳು, ಸಂಪುಟ. 4, ಸಂ. 1, 93-100.
- **ರಾಮಮೂರ್ತಿ ವಿ. ಪಿ. (2002)** : 21 ನೇ ಶತಮಾನದ ಸಂಶೋಧನಾ ಕಾರ್ಯಸೂಚಿಗಾಗಿ ವಯಸ್ಸಾದವರು - ವಿಶ್ವಸಂಸ್ಥೆ, (ವಿವಿಧ ಸಮಾಜಗಳಲ್ಲಿ ವಯೋಸಹಜತೆ)
- **ವಾಸನ್ ಮತ್ತು ಜೈನ್ (2011)** : ಅಪೌಷ್ಟಿಕತೆ ಮತ್ತು ಹಿರಿಯರಲ್ಲಿ ಅಪೌಷ್ಟಿಕತೆಯ ಅಪಾಯ, ಇಂಡಿಯನ್ ಜರ್ನಲ್ ಆಫ್ ಜೆರೊಂಟಾಲಜಿ, 25(2).
- **ಬೇವಿನಮರದ ಎಸ್. ಕವಿತಾ (2012)** : ವಯಸ್ಸಾದ ಮಹಿಳೆಯರ ಸಮಸ್ಯೆಗಳು: ಮಧ್ಯಸ್ಥಿಕೆಗಳ ಅಗತ್ಯತೆ, ಇಂಡಿಯನ್ ಸ್ಟ್ರೀಮ್ಸ್ ರಿಸರ್ಚ್ ಜರ್ನಲ್, ಸಂಪುಟ-1, ಸಂಚಿಕೆ-5; 12 ಪುಟಗಳು 1-4.


■■

ವಿದ್ಯಾನಿಧಿ ಪ್ರಕಾಶನ ®
ಶ್ರೀ ಶಿವಕುಮಾರ ಏಜನ್ಸಿ®
ಶೈಕ್ಷಣಿಕ ಪುಸ್ತಕಗಳ ಪ್ರಕಾಶಕರು ಮತ್ತು ಮಾರಾಟಗಾರರು
ಸ್ಟೇಶನ್ ರೋಡ ಮತ್ತು 'ನನಸು' ಜೆ. ಟಿ. ಮಠ ರೋಡ, ಗದಗ.
ದೂರವಾಣಿ : 08372-200527
e-mail : vidyanidhiprakashana@gmail.com.
www. vidyanidhionline.com

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಕೊಪ್ಪಳ ಜಿಲ್ಲೆಯ ತತ್ವಪದಕಾರರ ಪರಂಪರೆ

✍ **ಡಾ. ಯಮನೂರಪ್ಪ,** ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಹಿಂಭಾಗ, ವಡಕಿ ಗ್ರಾಮ, ಜೀರ್ಾಳ ಅಂಚೆ, ಕನಕಗಿರಿ ತಾಲೂಕು, ಕೊಪ್ಪಳ ಜಿಲ್ಲೆ,–583 283

ಕನ್ನಡ ನಾಡಿನ ಅನೇಕ ಪರಂಪರೆಗಳಲ್ಲಿ ತತ್ವಪದ ಪರಂಪರೆಯು ಒಂದು. ನಾಡಿನ ಉದ್ದಗಲಕ್ಕೂ ವ್ಯಾಪಿಸಿರುವ ಈ ಪರಂಪರೆಯು ಅಭಿವ್ಯಕ್ತಿಯಾದ ತತ್ವಪದಗಳು ಕನ್ನಡ ಸಾಹಿತ್ಯದಲ್ಲಿ ಅತ್ಯಂತ ವಿಸ್ತಾರವಾದಂತ ಒಂದು ಭಾಗವಾಗಿದೆ. ತತ್ವಪದಗಳು ಮಾನವನ ದೇಹವನ್ನು ಕೇಂದ್ರವನ್ನಾಗಿ ಮಾಡಿಕೊಂಡು ಆ ದೇಹದೊಳಗಿನ ಅರಿವಿನ ಮೂಲಭೂತ ತತ್ವಗಳನ್ನು ಹಾಗೂ ಆಧ್ಯಾತ್ಮಿಕ ವಿಚಾರಗಳನ್ನ ಸುಂದರವಾಗಿ, ಸಾಂಕೇತಿಕ ನೆಲೆಯಲ್ಲಿ ನಿರೂಪಿಸುತ್ತವೆ. ಸ್ವರವಚನ, ಅನುಭವಪದ, ಕೈವಲ್ಯ ಪದಗಳು, ಭಜನೆ ಪದಗಳು, ಧ್ಯಾನದ ಪದ ಎಂದು ಬೇರೆ ಬೇರೆ ಹೆಸರುಗಳಿಂದ ಅವು ಕರೆಸಿಕೊಳ್ಳುತ್ತವೆ. ಇಂತಹ ತತ್ವಪದಗಳ ಕೃಷಿ ವಚನಗಳನ್ನು ಬರೆದ 12ನೇ ಶತಮಾನದ ವಚನಕಾರರಿಂದಲೇ ಆರಂಭವಾಯಿತ್ತಾದರೂ ಅವುಗಳಿಗೆ ನಿಜವಾದ ಅರ್ಥದಲ್ಲಿ ಒಂದು ಸುಭದ್ರವಾದ ತಳಹದಿಯನ್ನು ಒದಗಿಸಿದವರು 16ನೇ ಶತಮಾನದ ನಿಜಗುಣ ಶಿವಯೋಗಿಗಳು ಇವರ 'ಕೈವಲ್ಯ ಪದ್ಧತಿ' ತತ್ವಪದಗಳ ಆದ್ಯ ಕೃತಿ ಎನ್ನಲಾಗಿದೆ.

ನಿಜಗುಣ ಶಿವಯೋಗಿಗಳಿಂದ ಆರಂಭವಾದ ಕನ್ನಡ ತತ್ವಪದಕಾರರ ಪರಂಪರೆ 18, 19ನೇ ಶತಮಾನಗಳಲ್ಲಿ ತುಂಬ ಸಮ್ಮೃದ್ಧವಾಗಿ ಹಾಗೂ ಬಹು ವಿಸ್ತೃತವಾಗಿ ಬೆಳಯಿತು. ಈ ಕಾಲದ ಕನ್ನಡ ನಾಡಿನ ಅದರಲ್ಲೂ ಉತ್ತರ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲೂ ನೂರಾರು ತತ್ವಪದಕಾರರು ಅಧಿಕ ಸಂಖ್ಯೆಯಲ್ಲಿ ನೂರಾರು ತತ್ವಪದಗಳನ್ನು ರಚಿಸಿರುವುದನ್ನು ಕಾಣಬಹುದು. ಅದೇ ರೀತಿಯಾಗಿ ಕೊಪ್ಪಳ ಜಿಲ್ಲೆಯಲ್ಲಿಯೂ ಸಹ ಅನೇಕ ತತ್ವಪದಕಾರರಿದ್ದಾರೆ. ಕೊಪ್ಪಳ ಜಿಲ್ಲೆಯಲ್ಲಿ ಕಂಡುಬರುವ ಅಂತಃವರ ತತ್ವಪದಕಾರರ ಪರಂಪರೆಯನ್ನು ಇಲ್ಲಿ ಗುರುತಿಸಲಾಗುತ್ತದೆ.

ಶ್ರೀ ಚಿದಾನಂದಾವಧೂತರಿಂದ ಈ ಜಿಲ್ಲೆಯಲ್ಲಿ ತತ್ವಪದ ಸಾಹಿತ್ಯವು ಪ್ರಾರಂಭವಾಗುತ್ತದೆ. ಕ್ರಿ. ಶ. 1700–1781ರಲ್ಲಿದ್ದ, ಚಿದಾನಂದಾವಧೂತರು 12 ವರ್ಷಗಳ ಕಾಲ ಸತತ ಯೋಗ ತಪಸ್ಸು ಮಾಡಿ ಸಮಾಧಿಯೋಗದ ಸಿದ್ಧಿಯನ್ನು ಪಡೆದು ಶ್ರೀ ಬಗಳಾಂಬಿಕೆಯನ್ನು ಪ್ರತ್ಯಕ್ಷ ಮಾಡಿಕೊಂಡರು ಎಂಬ ಪ್ರತೀತಿ ಇದೆ. ಶ್ರೀ ದೇವಿಪುರಾಣ, ಜ್ಞಾನಸಿಂಧು, ಎಂಬ ಮಹತ್ವದ ಗ್ರಂಥಗಳನ್ನು ರಚಿಸಿದ್ದಾರೆ. 'ಚಿದಾನಂದ' ಎಂಬ ಅಂಕಿತದಲ್ಲಿ ಅನೇಕ ತತ್ವಪದಗಳನ್ನು ಚಿದಾನಂದಾವಧೂತರು ರಚಿಸಿದ್ದಾರೆ.

ಹೇರೂರು ವಿರುಪಣ್ಣತಾತನು 1779–1842ರ ಅವಧಿಯಲ್ಲಿ ಜೀವಿಸಿದ್ದ ತತ್ವಪದಕಾರನಾಗಿದ್ದಾನೆ. ಲಿಂಗಾಯತ ಗೌಡರ ಮನೆತನದಲ್ಲಿ ಜನಿಸಿದ ಈತನನ್ನು ವಿರುಪನಗೌಡನೆಂತಲೂ ಕರೆಯುತ್ತಾರೆ. 'ಕೈವಲ್ಯ ತತ್ವಪದಗಳು' ಎಂಬ ಹೆಸರಿನಲ್ಲಿ ಈತನ 48 ತತ್ವಪದಗಳು ಪ್ರಕಟವಾಗಿವೆ. 'ಸಿದ್ದೇಶ' 'ರುದ್ರೇಶ' ಎಂಬ ಅಂಕಿತದಲ್ಲಿ ಈತನ ತತ್ವಪದ ರಚನೆ ಮಾಡಿದ್ದು ಕೊಪ್ಪಳ ಜಿಲ್ಲೆಯ ಪ್ರಮುಖ ತತ್ವಪದಕಾರನಾಗಿದ್ದಾನೆ.

ಇವರ ನಂತರದ ಬಹುಮುಖ್ಯ ತತ್ವಪದಕಾರನಾಗಿ ಗುರುತಿಸಿಕೊಂಡ ವಡಿಕೆಪ್ಪ ತಾತ ಅಥವಾ ವಡಕಿ ತಾತಪ್ಪಯ್ಯನು ಕೂಡ ಕನಕಗಿರಿ ತಾಲೂಕಿನ ವಡಕಿ ಗ್ರಾಮದವರಾಗಿದ್ದು, 1890–1961ರ ಕಾಲಘಟ್ಟದಲ್ಲಿ ಬದುಕಿದ್ದನು. ವಡಿಕೆಪ್ಪ ತಾತನೂ ಪಾಂಚಾಳ ಸಮುದಾಯಕ್ಕೆ ಸೇರಿದ ಬಹುಮಹತ್ವದ ತತ್ವಪದಕಾರನಾಗಿದ್ದಾನೆ. 'ಘಡಿವಡಕೀಶ' 'ಭೀಮೇಶ' ಎಂಬ ಅಂಕಿತದಲ್ಲಿ ತತ್ವಪದ ರಚನೆ ಮಾಡಿದ್ದಾನೆ. 'ಅಮೃತಶಿಖಾಮಣಿ' ಎಂಬ ಕೃತಿಯಲ್ಲಿ 139 ತತ್ವಪದಗಳು ದೊರಕಿವೆ.

ಈ ಜಿಲ್ಲೆಯ ಪ್ರಸಿದ್ಧ ಪುರಾಣ ಕವಿ ಎಂದು ಪ್ರಖ್ಯಾತಿಯನ್ನು ಪಡೆದುಕೊಂಡಿದ್ದ ಪಂಡಿತ ಅಮರನಾಥ ಶಾಸ್ತ್ರಿಯವರು 1897–1978ರ ಕಾಲಾವಧಿಯಲ್ಲಿ ಜೀವಿಸಿದ್ದವರು. ಹಿರೇಮಠ ಮನೆತನದಲ್ಲಿ ಜನಿಸಿದ ಇವರು ಕುಕನೂರು ತಾಲೂಕಿನ ಬನ್ನಿಕೊಪ್ಪ ಗ್ರಾಮದವರು 'ನೀತಿಮಂಜರಿ' ಇವರ ತತ್ವಪದಗಳ ಸಂಕಲನವಾಗಿದ್ದು, 'ಶಮಾಪುರಿ' ಎಂಬ ಅಂಕಿತದ ಮೂಲಕ ತತ್ವಪದಗಳನ್ನು ರಚಿಸಿದ್ದಾರೆ.

ಕನಕಗಿರಿ ತಾಲೂಕಿನ ಹುಡೇಜಾಲಿ ಗ್ರಾಮುದವರಾದ ಮಹಾದೇವಗೌಡನೂ ಮೂಲತಃ ರಾಯಚೂರು ಜಿಲ್ಲೆಯ ದಿನ್ನಿ ಗ್ರಾಮದವರು. ಹುಡೇಜಾಲಿ ಗ್ರಾಮದ ಗೌಡ್ರು ಮನೆತನಕ್ಕೆ ಗಂಡು ಸಂತಾನವಿಲ್ಲದ ಕಾರಣಕ್ಕೆ ಈ ಗೌಡ್ರು ಮನೆತನದ ಹನುಮಮ್ಮ ಎಂಬುವವರನ್ನು ಮದುವೆಯಾಗಿ ಈ ಮನೆತನದ ಆಸ್ತಿಗೆ ಒಡೆಯನಾದನು. 1897–1996ರ ಅವಧಿಯಲ್ಲಿ ಜೀವಿಸಿದ್ದ ಮಹಾದೇವಗೌಡನು ನಾಯಕ ಜನಾಂಗಕ್ಕೆ ಸೇರಿದ ವ್ಯಕ್ತಿಯಾಗಿದ್ದಾನೆ. 'ಮೃಢವೀರಬಸವ' ಎಂಬ ಅಂಕಿತದಲ್ಲಿ ಅನೇಕ ತತ್ವಪದಗಳು ರಚನೆಯಾಗಿವೆ.

ಇವರ ಸಮಕಾಲಿನವರಾದ ಮರಕುಂಬಿ ರುದ್ರೇಶ ತಾತಾನವರು ಗಂಗಾವತಿ ತಾಲೂಕಿನ ಅರಳಳ್ಳಿ ಎಂಬಲ್ಲಿ 1900–1985ರ ಅವಧಿಯಲ್ಲಿ ಬದುಕಿದವರಾಗಿದ್ದಾರೆ. 'ಚೆನ್ನಾನಂದ' ಎಂಬ ಅಂಕಿತದಲ್ಲಿ ಅನೇಕ ತತ್ವಪದಗಳನ್ನು ರಚಿಸಿದ್ದಾನೆ. ಗುಂಡಪ್ಪ ಹುಲಿಹೈದರ, ಸಂತೆಕೇರೂರು ಅಮರನಾಥ ಶಾಸ್ತ್ರಿ, ಅರಳಳ್ಳಿ ಈಶ್ವರಪ್ಪ ನಡುವಿನಮನಿ, ಯಾವಗಲ್ಲದ ಯಲ್ಲಪ್ಪ, ಬುದುವಂತಪ್ಪ ಹಳೇ ಹುಬ್ಬಳ್ಳಿ, ಇನ್ನೂ ಅನೇಕ ಮುಂತಾದವರು ಮರಕುಂಬಿ ರುದ್ರೇಶ ತಾತನ ದಾರಿಯಲ್ಲಿ ಮುನ್ನೆಡದವರಾಗಿದ್ದಾರೆ.

ಅಲಕ್ಷೀತ ದಲಿತ ಜನಾಂಗದ ತತ್ವಪದಕಾರನಾದ ಗುರು ಫಕೀರೇಶ್ವರ ವಡಿಯಾರಟ್ಟಿ ಕೊಪ್ಪಳ ತಾಲೂಕಿನ ನಾಗೇಶನಹಳ್ಳಿಯಲ್ಲಿ ಜನಿಸಿ, 1910–1991ರ ಕಾಲಘಟ್ಟದಲ್ಲಿ ಬದುಕಿ ಬಾಳಿದವರು. 'ಪೂಜೇಶ್ವರ' ಎಂಬ ಅಂಕಿತದಲ್ಲಿ ಅನೇಕ ತತ್ವಪದಗಳನ್ನು ರಚಿಸಿದ್ದಾರೆ. ಆದರೆ ತತ್ವಪದ ಸಾಹಿತ್ಯ ಕ್ಷೇತ್ರದಲ್ಲಿ ಇವರಾಗಲಿ, ಇವರ ತತ್ವಪದಗಳಾಗಲಿ ಎಲ್ಲಿಯೂ ಬೆಳಕಿಗೆ ಬಂದಿರುವುದಿಲ್ಲ. ಆದರೆ ನಾನು ಕ್ಷೇತ್ರಕಾರ್ಯ ಕೈಗೊಂಡ ಸಂದರ್ಭದಲ್ಲಿ ಅನೇಕ ತತ್ವಪದಗಳು ನನಗೆ ದೊರಕಿವೆ.

1910–1995 ರ ಕಾಲಘಟ್ಟದಲ್ಲಿ ಬರುವ ಹಲಕಾವಟಗಿ ಹನುಮಂತಪ್ಪನವರು ಮೂಲತಃ ರಾಯಚೂರು ಜಿಲ್ಲೆಯವರಾಗಿದ್ದು, ಇವರು ನೆಲೆನಿಂತಿದ್ದು ಯಲಬುರ್ಗಾ ತಾಲೂಕಿನ ಹಿರೇ ಅರಳಹಳ್ಳಿಯಲ್ಲಿ ಕೆಲವು ವರ್ಷಗಳ ಕಾಲ ಇದ್ದರು. ಅಲ್ಲದೇ ಕುಷ್ಟಗಿ ತಾಲೂಕಿನ ದೋಟಿಹಾಳ ಶಿಕ್ಷಕರಾಗಿ ಸೇವೆಯನ್ನು ಸಲ್ಲಿಸಿದ್ದಾರೆ. ಇವರ ಬಗ್ಗೆ ಡಾ. ಬಸವರಾಜ ಸಬರದ ಅವರ ಕೃತಿಯಾದ ಕೊಪ್ಪಳ ಜಿಲ್ಲೆಯ ಅನುಭಾವಿ ಕವಿಗಳು ಎಂಬ ಕೃತಿಯಲ್ಲಿ ಇವರ ಪರಿಚಯವಿದೆ. 'ಸುಖಮುನಿ' ಎಂಬ ಅಂಕಿತದಿಂದ ಸಬರದ ಕೃತಿಯಲ್ಲಿ ಇವರ ತತ್ವಪದ ಪ್ರಕಟಗೊಂಡಿದೆ.

ನಂತರದಲ್ಲಿ ಕನಕಗಿರಿ ತಾಲೂಕಿನ ಹುಲಿಹೈದರ್ ಗ್ರಾಮದಲ್ಲಿದ್ದ, ಗುಂಡಪ್ಪ ಚೆನ್ನದಾಸರು ಸಹ 1929–2015ರ ಅವಧಿಯಲ್ಲಿ ಜನಿಸಿದ್ದ ಪ್ರಮುಖ ಕವಿ. ಮರಕುಂಬಿ ರುದ್ರೇಶ ತಾತನ ಶಿಷ್ಯನಾದ ಗುಂಡಪ್ಪನು 'ಗುರುಭಕ್ತ ಗುಂಡಪ್ಪ' ಎಂಬ ಅಂಕಿದಲ್ಲಿ ಅನೇಕ ತತ್ವಪದಗಳನ್ನು ರಚಿಸಿದ್ದಾನೆ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಹತ್ತೊಂಭತ್ತನೇ ಶತಮಾನದ ತತ್ವಪದಕಾರರು ಹಾಗೂ ಇಪ್ಪತ್ತನೇಯ ಶತಮಾನದ ಗುರುಪರಂಪರೆಗಳ ಮೂಲಕ ಬೆಳೆದು ಬಂದ ತತ್ವಪದಕಾರರನ್ನು ಹೊರೆತುಪಡಿಸಿದರೆ, ಎದ್ದು ಕಾಣುವ ಮತ್ತೊಬ್ಬ ತತ್ವಪದಕಾರ ತಾಳಕೇರಿ ಬಸವರಾಜ ಯಲಬುರ್ಗಾ ತಾಲ್ಲೂಕಿನ ತಾಳಕೇರಿ ಎಂಬ ಗ್ರಾಮದಲ್ಲಿ 1930–2004ರ ಅವಧಿಯಲ್ಲಿ ಬದುಕಿದ ಈತನು 'ಮುದ್ದು ಬಸವ' ಎಂಬ ಅಂಕಿತದಲ್ಲಿ ತತ್ವಪದಗಳನ್ನು ರಚಿಸಿ ಪ್ರಕಟಿಸಿದ್ದಾರೆ.

1928–2003ರ ಅವಧಿಯಲ್ಲಿದ್ದ ಕೊಪ್ಪಳ ಗವಿಮಠದ 17ನೇ ಪೀಠಾಧಿಪತಿಗಳಾಗಿದ್ದ ಶಿವಶಾಂತವೀರ ಮಹಾಸ್ವಾಮಿಗಳು ಅನೇಕ ತತ್ವಪದಗಳನ್ನು 'ಗುರು ಮರಿಶಾಂತ' 'ಗವಿಸಿದ್ಧ' ಎಂಬ ಅಂಕಿತದಲ್ಲಿ ತತ್ವಪದಗಳನ್ನು ರಚಿಸಿದ್ದಾರೆ. ಇವರ ಶಿಷ್ಯ ಪರಂಪರೆಯಲ್ಲಿ ಎಸ್.ಕೆ. ಸಂಗಯ್ಯ, ಬಸಯ್ಯ ಮಾಸ್ತಾರ, ಜಿ.ವಿಠಲ ಪ್ರಸಾದ, ಜೆ.ಶಂಭುಲಿಂಗಯ್ಯ, ಕಂಪ್ಲಿ ಬಸವರಾಜ ಶಾಸ್ತ್ರಿ, ಲಿಂಗಾರ್ಯ ಜುಕ್ತಿಮಠ, ಬಸನಳ್ಳಿ ಶಿವಬಸಯ್ಯ, ಈ ಮೊದಲಾದವರು ಅನೇಕ ತತ್ವಪದಗಳನ್ನು ಭಜನೆಪದಗಳನ್ನು ರಚಿಸಿದ್ದಾರೆ.

ಅಲೆಮಾರಿ ಜನಾಂಗದ ಮಾರೆಪ್ಪ ಚೆನ್ನದಾಸರು ಒಬ್ಬ ತತ್ವಪದಕಾರನಾಗಿ ಹಾಗೂ ತತ್ವಪದ ಹಾಡುಗಾರನಾಗಿ ಗುರುತಿಸಿಕೊಂಡಿದ್ದಾರೆ. 1931 ರಲ್ಲಿ ಜನಿಸಿದ ಇವರು ಯಲಬುರ್ಗಾ ತಾಲೂಕಿನ ಲಿಂಗನಬಂಡಿಯಲ್ಲಿದ್ದಾರೆ. 'ರಾಮಣ್ಣ' ಎಂಬ ಗುರುವಿನ ಹೆಸರಿನಿಂದ ತತ್ವಪದಗಳನ್ನು ರಚಿಸಿದ್ದಾರೆ. ಇಂದಿಗೂ ಅನೇಕ ತತ್ವಪದಗಳನ್ನು ಹಾಡುತ್ತಾ ಕಾಲ ಕಳೆಯುತ್ತಿದ್ದಾರೆ.

ಕೊಪ್ಪಳ ತಾಲೂಕಿನ ಅಲ್ಲಾನಗರ ಇಮಾಮ್ ಸಾಬ್ ಕೊಪ್ಪಳ ಜಿಲ್ಲೆಯ ಏಕೈಕ ಮುಸ್ಲಿಂ ತತ್ವಪದಕಾರನಾಗಿದ್ದಾನೆ. 1937–2020ರ ಕಾಲಾವಧಿಯಲ್ಲಿ ಜೀವಿಸಿದ್ದ, 'ಇಮಾಮ್ ಸಾಬ್' ಎಂಬ ಅಂಕಿತದಿಂದ ಅನೇಕ ತತ್ವಪದಗಳನ್ನು ರಚಿಸಿದ್ದಾರೆ.

ದ್ಯಾಂಪೂರದ ಎಸ್.ಕೆ. ಸಂಗಯ್ಯನವರು ಕುಕನೂರು ತಾಲೂಕಿನ ದ್ಯಾಂಪೂರದವರು. 1942–2010ರ ಕಾಲ ಘಟ್ಟದಲ್ಲಿ ಬದುಕಿದ್ದ, ಇವರು ಕೊಪ್ಪಳ ಗವಿಮಠದ ಶ್ರೀ ಶಿವಶಂತವೀರ ಮಹಾಸ್ವಾಮಿಗಳ ಭಕ್ತರಾಗಿದ್ದು, ವೃತ್ತಿಯಲ್ಲಿ ವೈದ್ಯರಾದ ಇವರು ಗವಿಮಠದ ಶಿಷ್ಯ ಪರಂಪರೆಗೆ ಸೇರಿದವರಾಗಿದ್ದಾರೆ. 'ಗುದ್ನೇಶ' 'ಗವಿಸಿದ್ದೇಶ' ಎಂಬ ಅಂಕಿತದಲ್ಲಿ ಅನೇಕ ತತ್ವಪದಗಳನ್ನು ರಚಿಸಿದ್ದಾರೆ.

ವೇದಮೂರ್ತಿ ಚಿದಾನಂದಯ್ಯ ಹೀರೆಮಠ ಅವರು ಕುಷ್ಟಗಿ ತಾಲೂಕಿ ಹಾಬಲಗಟ್ಟಿ ಗ್ರಾಮದವರು. 1947ರಲ್ಲಿ ಜನಿಸಿದ ಇವರು 'ಚಿದಾನಂದಯ್ಯ ಹೀರೆಮಠ' ಎಂಬ ಅಂಕಿತದಲ್ಲಿ ಅನೇಕ ತತ್ವಪದಗಳನ್ನು ರಚಿಸಿದ್ದಾರೆ. ವಯಸ್ಸಾದ ಇವರು ಆರೋಗ್ಯದಲ್ಲಿ ಅಡಚಣೆ ಉಂಟಾಗಿರುವ ಕಾರಣಕ್ಕೆ ಮನೆಯಲ್ಲಿ ವಾಸಿಸುತ್ತಿದ್ದಾರೆ.

ವಿಠ್ಠಪ್ಪ ಗೋರಂಟ್ಲಿಯವರು ಕೊಪ್ಪಳದ ಭಾಗ್ಯನಗರದವರಾದ 1948–2021ರ ಅವಧಿಯಲ್ಲಿ ಬದುಕಿದ್ದ ಇವರು ಆಧ್ಯಾತ್ಮಿಕ ಜೀವಿಗಳಾಗಿ, ಪತ್ರಕರ್ತರಾಗಿ, ಹೋರಾಟಗಾರರಾಗಿ ಗುರುತಿಸಿಕೊಂಡವರಾಗಿದ್ದಾರೆ. 'ಸದಾನಂದ' ಎಂಬ ಅಂಕಿತದಲ್ಲಿ ನಿನ್ನ ನೀನು ತಿಳಿ ಎನ್ನುವ ತತ್ವಪದ ಸಂಕಲನವನ್ನು ಪ್ರಕಟಿಸಿದ್ದಾರೆ.

ಕುಕನೂರು ತಾಲೂಕಿನ ರಾಜೂರು ಗ್ರಾಮದ ಹನುಮೇಶಪ್ಪ ತಾತ ದೊಡ್ಡ ಶರಣನಾಗಿದ್ದು ಅನೇಕ ತತ್ವಪದ ರಚನಕಾರರಿಗೆ ಗುರುವಾಗಿ ಪ್ರೇರಣೆ ನೀಡಿದ್ದಾನೆ. ಈತನ ಶಿಷ್ಯ ಪರಂಪರೆಯಲ್ಲಿ ಮುಖ್ಯವಾಗಿ ರಾಯಚೂರು ಜಿಲ್ಲೆಯ ತಿಪ್ಪಣ್ಣ ತಾತ ಮುಂತಾದವರು ಬರುತ್ತಾರೆ. ಕೊಪ್ಪಳ ಜಿಲ್ಲೆಯಲ್ಲಿಯೂ ಕೂಡ ಹನುಮೇಶಪ್ಪ ತಾತನ ಶಿಷ್ಯ ಪರಂಪರೆಯಿದೆ. ಬನ್ನಿಕೊಪ್ಪ ಹಾಗೂ ರಾಜೂರು ಗ್ರಾಮಗಳಲ್ಲಿ ಈ ಶಿಷ್ಯಪರಂಪರೆ ಬೆಳೆದುಕೊಂಡು ಬಂದಿದೆ. ಇವರಲ್ಲಿ ರಾಜೂರಿನ ರಾಮಣ್ಣ ಪರಸಪ್ಪ (ಆರ್.ಪಿ. ರಾಜೂರು) ಅವರನ್ನು ಹೆಸರಿಸಬಹುದಾಗಿದೆ. ಆಧುನಿಕ ತತ್ವಪದಕಾರರಾಗಿ ಗುರುತಿಸಿಕೊಂಡರು. ಆರ್.ಪಿ. ರಾಜೂರು ಅವರು ಕೊಪ್ಪಳ ಜಿಲ್ಲೆಯ ಕುಕನೂರು ತಾಲೂಕಿನ ರಾಜೂರು ಎಂಬ ಗ್ರಾಮದಲ್ಲಿ 08–10–1955 ರಂದು ದಲಿತ ಜನಾಂಗದಲ್ಲಿ ಜನಿಸಿದ ಇವರು 2015 ರಲ್ಲಿ ಬಿಡುಗಡೆಯಾದ 'ಸದ್ಗುರುವಿನೊಡಗೂಡು' ಸ್ವರಚಿತ ತತ್ವಪದಗಳು ಸಂಕಲನ ಇವರ ಪ್ರಥಮ ಕೃತಿಯಾಗಿದೆ. 2019 ರಲ್ಲಿ ಬಿಡುಗಡೆಯಾದ 'ಆಧ್ಯಾತ್ಮದ ಅಂತರಂಗ' ಸ್ವರಚಿತ ತತ್ವಪದಗಳು ಸಂಕಲನ ಇವರ ಎರಡನೇ ಕೃತಿಯಾಗಿದೆ. 'ಹನುಮೇಶಪ್ಪ' 'ಚಂದಲಿಂಗ' 'ರಾಜೂರು ಕಂದ' ಎಂಬ ಅಂಕಿತದಲ್ಲಿ ತತ್ವಪದಗಳನ್ನು ರಚಿಸಿರುವುದನ್ನು ಕಾಣುತ್ತೇವೆ.

ಡಾ. ಬಸವರಾಜ ಸಬರದ ಅವರು ಕೊಪ್ಪಳ ಜಿಲ್ಲೆಯ ಕುಕನೂರಿನಲ್ಲಿ 1955ರಲ್ಲಿ ಜನಿಸಿದ್ದಾರೆ. ವೃತ್ತಿಯಲ್ಲಿ ಉಪನ್ಯಾಸಕರಾಗಿದ್ದು, ಸಾಹಿತ್ಯ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದವರಾಗಿದ್ದಾರೆ. ಕೊಪ್ಪಳ ಜಿಲ್ಲೆಯ ಅನುಭಾವಿ ಕವಿಗಳು ಎನ್ನುವಂತ ಕೃತಿಯಲ್ಲಿ ಸುಮಾರು ಹದಿನಾಲ್ಕು ಜನ ಅನುಭಾವಿ ಕವಿಗಳನ್ನು ಗುರುತಿಸಿದ್ದಾರೆ. ಈ ಕೃತಿಯು ಕೊಪ್ಪಳ ಜಿಲ್ಲೆಯ ತತ್ವಪದಕಾರರನ್ನು ಕುರಿತು ಹೆಚ್ಚಿನ ಸಂಶೋಧನೆ ಕೈಗೊಳ್ಳಲು ಈ ಕೃತಿ ಸಹಾಯಕವಾಗಿದೆ. ಈ ಕೃತಿಯಲ್ಲಿ ಡಾ. ಬಸವರಾಜ ಸಬರದ ಅವರು ಸ್ವತಃ ತಾವೇ ಹೇಳಿರುವ ಹಾಗೆ ತನ್ನನ್ನೇ ತಾನು ತತ್ವಪದಕಾರನೆಂದು ಪರಿಚಯಿಸಿಕೊಳ್ಳುವುದು ಸೂಕ್ತವೂ ಅಲ್ಲ, ಸಾಧುವೂ ಅಲ್ಲ. ಹಾಗೆ ನೋಡಿದರೆ ನಾನು ತತ್ವಪದಕಾರನಲ್ಲ. ಆದರೆ ಓದುಗರು–ವಿಮರ್ಶಕರು ನನ್ನ ಕಾವ್ಯದಲ್ಲಿ ತತ್ವಪದ ಶೈಲಿಯನ್ನು ಗಮನಿಸಿದ್ದಾರೆ. ನನ್ನ ಆಡುಗಳಲ್ಲಿರುವ ಬದುಕಿನ ಗೂಡಾರ್ಥಗಳನ್ನು ಕಂಡುಕೊಂಡಿದ್ದಾರೆ. 'ಸಬರದ ಬಸವ' ಎನ್ನುವಂತ ಅಂಕಿತದಲ್ಲಿ 'ಗುಬ್ಬಿಯೊಂದು ಗೂಡು ಕಟ್ಯ್ಯಾದೊ' 2005ರಲ್ಲಿ ಪ್ರಕಟವಾದ ಇವರ ಪ್ರಮುಖ ತತ್ವಪದಗಳ ಸಂಕಲನವಾಗಿದೆ. ಓದುಗರು ಹಾಗೂ ವಿಮರ್ಶಕರು ತತ್ವಪದಗಳೆಂದು ಗುರುತಿಸಿರುವ ಕೃತಿಯಲ್ಲಿನ ಅನೇಕ ಹಾಡುಗಳು ಈ ಸಂಕಲನದಲ್ಲಿವೆ ಎಂದು ತಿಳಿಸಿದ್ದಾರೆ.

ಗಂಗಾವತಿಯ ಎನ್. ಶರಣಪ್ಪ ಮೇಟ್ರಿಯವರು ಕೂಕನೂರು ತಾಲೂಕಿನ ಮುತ್ತಾಳ ಗ್ರಾಮದವರಾದ ಇವರು 1985ರಲ್ಲಿ ಜನಿಸಿದ್ದಾರೆ. ಚಿಕ್ಕ ವಯಸ್ಸಿನಿಂದಲೂ ಆಧ್ಯಾತ್ಮಿಕ ಹಿನ್ನೆಲೆಯಿಂದ ಬೆಳದವರು. ಮೇಟ್ರೀ ಮಹದೇವ ತಾತನ ಹೆಸರಿನಿಂದಲೆ 'ಮಹದೇವ ಮಂದಾರ' ಎಂಬ ತತ್ವಪದ ಕವನ ಸಂಕಲನವನ್ನು ರಚಿಸಿದ್ದಾರೆ. ಈ ಕೃತಿಯಲ್ಲಿ 75 ತತ್ವಪದಗಳನ್ನು ಕಾಣಬಹುದು. ಅಷ್ಟಕಗಳು, ಜೋಗುಳಪದಗಳು, ಮಂಗಳಾರತಿ ಪದಗಳು ಒಳಗೊಂಡಿವೆ. 'ಮಹದೇವ' ಎಂಬುದು ಇವರ ತತ್ವಪದ ಅಂಕಿತನಾಮವಾಗಿದೆ.

ಶ್ಯಾಮಣ್ಣ ಅವರು ಯಲಬುರ್ಗಾ ತಾಲೂಕಿನ ಮರ್ಕಟ್ ಎಂಬ ಗ್ರಾಮದಲ್ಲಿ ಬಡ ದಲಿತ ಕುಟುಂಬವೊಂದರಲ್ಲಿ ಶ್ಯಾಮಣ್ಣರವರು 1961ರಂದು ಜನಿಸಿದ್ದಾರೆ. ಇವರು ಅವಿದ್ಯಾವಂತರಾಗಿದ್ದು, ಶಿಕ್ಷಣದಿಂದ ದೂರ ಉಳಿದವರಾಗಿದ್ದಾರೆ. ಇವರು ಕೃಷಿಯನ್ನೇ ನಂಬಿ ಬದುಕು ಕಟ್ಟಿಕೊಂಡವರಾಗಿದ್ದು, ತಮ್ಮ ಹೊಲದಲ್ಲಿ ಕೃಷಿಕರಾಗಿ ಕಾಯಕ ಜೀವಿಗಳಾಗಿ ಬದುಕುತ್ತಿದ್ದಾರೆ. ಭಜನೆ, ಇತ್ಯಾದಿ ಸತ್ಸಂಗದಲ್ಲಿ ಭಾಗಿಯಾಗಿ ತಮ್ಮ ತತ್ವಪದಗಳನ್ನು ಹಾಡುತ್ತಾರೆ. 'ಶಿವಾನಂದ' 'ಕಂದ ಶ್ಯಾಮಣ್ಣ' ಎಂಬ ಅಂಕಿತದೊಂದಿಗೆ ಅನೇಕ ತತ್ವಪದಗಳನ್ನು ರಚಿಸಿದಾನೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಇವರನ್ನು ಗುರುತಿಸಿ ಇವರ ತತ್ವಪದಗಳನ್ನು ಸಂಶೋಧನಗೆ ಒಳಪಡಿಸಲಾಗಿದೆ.

ಅಧುನಿಕ ತತ್ವಪದಕಾರನಾಗಿ ಗುರುತಿಸಿಕೊಂಡಿರುವ ಆದಯ್ಯ ತಾತನು ಗಂಗಾವತಿ ತಾಲೂಕಿನ ರಾಂಪೂರ–ಮಲ್ಲಾಪೂರ ಗ್ರಾಮದ ವಡ್ಡಮ್ಮ ದೇವಿಯ ದೇವಸ್ಥಾನದಲ್ಲಿ ವಾಸಮಾಡುತ್ತಿದ್ದಾರೆ. ಎಲೆ ಮರಿ ಕಾಯಿಯಂತೆ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಇದ್ದು ಇವರು ತತ್ವಪದ ಸಾಹಿತ್ಯ ಕ್ಷೇತ್ರಕ್ಕೆ ಅಮೂಲ್ಯವಾದ ಕೊಡುಗೆಯನ್ನು ನೀಡಿದ್ದಾರೆ. ಆದಯ್ಯ ತಾತನು ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಮಾಟೂರು ಎಂಬಲ್ಲಿ 1965 ರಂದು ಜನಿಸಿದ್ದಾನೆ. ಇವರು ಅನೇಕ ತತ್ವಪದಗಳನ್ನು ರಚಿಸಿದ್ದಾರೆ. ಆದರೆ ಇವರ ತತ್ವಪದಗಳು ಎಲ್ಲಿಯೂ ಪ್ರಕಟವಾಗಿಲ್ಲ. ವಡ್ಡಮ್ಮ ದೇವಿಯ ಆರಾಧಕನಾಗಿರುವುದರಿಂದ ಇವನ್ನು ಸ್ಥಳಿಯ ಜನರು ವಡ್ಡಮ್ಮ ತಾತ ಎಂದು ಕರೆಯುತ್ತಾರೆ. 'ವಿಶ್ವಪ್ರೀಯ ವಡ್ಡಮ್ಮ' ಎಂಬುದು ಇವರ ತತ್ವಪದ ಅಂಕಿತವನ್ನಾಗಿ ಬಳಸಿಕೊಂಡು ಅನೇಕ ತತ್ವಪದಗಳನ್ನು ರಚಿಸಿದ್ದಾರೆ.

ಹೀಗೆ ಕೊಪ್ಪಳ ಜಿಲ್ಲೆಯಲ್ಲಿ ತತ್ವಪದ ಸಾಹಿತ್ಯವು ತನ್ನದೇ ಆದ ಸ್ಥಾನಮಾನವನ್ನು ಪಡೆದುಕೊಂಡು ಬೆಳೆದು ಬಂದಿದೆ. ಹದಿನೆಂಟನೇ ಶತಮಾನದಿಂದ ಇಪ್ಪತ್ತೊಂದನೇ ಶತಮಾನದವರೆಗೂ ಅನೇಕ ತತ್ವಪದಕಾರರನ್ನು ಕೊಪ್ಪಳ ಜಿಲ್ಲೆಯಲ್ಲಿ ಆಗಿ ಹೊಗಿರುವುದನ್ನು ಕಾಣುತ್ತೆವೆ. ಒಟ್ಟಾರೆಯಾಗಿ ಈ ಜಿಲ್ಲೆಯಲ್ಲಿ ಇಪ್ಪತ್ತೊಂದು ಜನ ತತ್ವಪದಕಾರರನ್ನು ಗುರುತಿಸಲು ಪ್ರಯತ್ನಿಸಿದ್ದೇನೆ. ಕೊಪ್ಪಳ ತಾಲೂಕಿನಲ್ಲಿ ನಾಲ್ಕು ಜನ ತತ್ವಪದಕಾರರು ಬದುಕಿ ಬಾಳಿದ್ದಾರೆ. ಗಂಗಾವತಿ ತಾಲೂಕಿನಲ್ಲಿ ನಾಲ್ಕು ಜನ ತತ್ವಪದಕಾರರು ಸಾಧನೆಗೈದಿದ್ದಾರೆ. ಕನಕಗಿರಿ ತಾಲೂಕಿನಲ್ಲಿ ಮೂರು ಜನ ತತ್ವಪದಕಾರರು ಜೀವಿಸಿದ್ದಾರೆ. ಯಲಬುರ್ಗಾ ತಾಲೂಕಿನಲ್ಲಿ ನಾಲ್ಕು ಜನ ತತ್ವಪದಕಾರರು ಬದುಕಿ ಬಾಳಿ ಹೊಗಿದ್ದಾರೆ. ಕುಕನೂರು ತಾಲೂಕಿನಲ್ಲಿ ಐದು ಜನ ತತ್ವಪದಕಾರರು ಹಾಗೂ ಕುಷ್ಟಗಿ ತಾಲೂಕಿನಲ್ಲಿ ಒಬ್ಬ ತತ್ವಪದಕಾರರು ಈ ನಾಡಿನಲ್ಲಿ ಜೀವಿಸಿ ತಮ್ಮದೇ ಆದ ಅನುಭವದ ಮೂಲಕ ಜನರಿಗೆ ಅರಿವನ್ನು ಮೂಡಿಸಲು ಪ್ರಯತ್ನಿಸಿದ್ದಾರೆ. ಆದರೆ ಕಾರಟಗಿ ತಾಲೂಕಿನಲ್ಲಿ ಮಾತ್ರ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಯಾವುದೇ ತತ್ವಪದಕಾರರ ಮಾಹಿತಿ ಕಂಡುಬಂದಿಲ್ಲ. ಹೀಗೆ ಅವರ ತತ್ವಪದಗಳ ಮೂಲಕ ಈ ಕೊಪ್ಪಳ ಜಿಲ್ಲೆಯ ಪರಿಸರದಲ್ಲಿ ಅಲ್ಲದೇ ರಾಯಚೂರು, ಯಾದಗಿರಿ, ಬಳ್ಳಾರಿ ಜಿಲ್ಲೆಗಳಲ್ಲಿ ಸಹ ತಮ್ಮ ನೆಲೆಗಳನ್ನು ಕಂಡುಕೊಂಡು ಅಲ್ಲಿನ ಜನರನ್ನು ಸಹ ಅವರ ಮಾರ್ಗದಲ್ಲಿಯೆ ಸಮಾಜವನ್ನು ತಿದ್ದಲು ಯತ್ನಿಸಿದ್ದಾರೆ.

## ಪರಾಮರ್ಶನ ಗ್ರಂಥಗಳು


- **ಅಮರೇಶ ನುಗಡೋಣಿ (1999)** : ನುಡಿವ ಬೆಡಗು, ಪ್ರಸಾರಾಂಗ ಹಂಪಿ ಕನ್ನಡ ವಿಶ್ವವಿದ್ಯಾಲಯ.
- **ಅಮರೇಶ ನುಗಡೋಣಿ (2014)** : ತತ್ವಪದ ಸಾಹಿತ್ಯ ಅಧ್ಯಯನ, ಪ್ರಸಾರಾಂಗ ಹಂಪಿ ಕನ್ನಡ ವಿಶ್ವವಿದ್ಯಾಲಯ.
- **ಬಸವರಾಜ ಸಬರದ (2000)** : ಹೈದ್ರಬಾದ್ ಕರ್ನಾಟಕ ತತ್ವಪದಗಳು, ಪ್ರಸರಾಂಗ, ಹಂಪಿ ಕನ್ನಡ ವಿಶ್ವವಿದ್ಯಾಲಯ.
- **ಬಸವರಾಜ ಸಬರದ (2013)** : ಕೊಪ್ಪಳ ಜಿಲ್ಲೆಯ ಅನುಭಾವಿ ಕವಿಗಳು, ಕಲಬುರ್ಗಿ ಪ್ರಸರಾಂಗ ಗುಲ್ಬರ್ಗಾ ವಿಶ್ವವಿದ್ಯಾಲಯ.
- **ಬಸಣ್ಣ ಕುಂಬಾರ ಚಿಲ್ಕರಾಗಿ (2006)** : ಕಲ್ಲು ದೇವರ ಕುಟ್ಟುತ ಬಂದೆ (ಹೇರೂರು ವಿರುಪಾವಧೂತರ ಚರಿತಾಮೃತ), ಕಾರಟಗಿ ಚಿಲ್ಕರಾಗಿ ಅಲ್ಲಮ ಪ್ರಕಾಶನ.
- **ಮಹಾಬಳೆಶ್ವರ ಬಿ.ಎ.** : ಶ್ರೀ ಪರಮಪೂಜ್ಯ ಶ್ರೀ ಘಡಿವಡಕೀಶ್ವರ ಚರಿತಾಮೃತ, ಗಂಗಾವತಿ ಶ್ರೀ ಲಕ್ಷೀ ಪ್ರಿಂಟರ್ಸ್.
- **ರಾಮಾನಂದ ರಾಜೂರು (2015)** : ಸದ್ಗುರುವಿನೊಡಗೂಡು ತತ್ವಪದಗಳ ಸಂಕಲನ, ಕೂಕನೂರು ಸದ್ಗರು ಪ್ರಕಾಶನ,
- **ರಾಮಾನಂದ ರಾಜೂರು (2019)** : ಆಧ್ಯಾತ್ಮದ ಅಂತರಂಗ ತತ್ವಪದಗಳ ಸಂಕಲನ, ಕೂಕನೂರು ಸದ್ಗರು ಪ್ರಕಾಶನ.
- **ವಿಠ್ಠಪ್ಪ ಗೋರಂಟ್ಲಿ (2009)** : ನಿನ್ನ ನೀನು ತಿಳಿ, ತತ್ವಪದಗಳ ಸಂಕಲನ, ಭಾಗ್ಯನಗರ, ಕೊಪ್ಪಳ ಶ್ರೀ ಸದಾನಂದ ಪ್ರಕಾಶನ.


■■

*– 12ನೇ ಪುಟದಿಂದ ಮುಂದುವರೆದುದು*

ಪ್ರದೇಶಗಳಲ್ಲಿ ಹಂಚಲಾಯಿತು. ಹಾಡಲು ಸರಳವಾಗಿದ್ದ, ಲಯಬದ್ಧ ಸಂಗೀತವನ್ನು ಹೊಂದಿದ್ದ ಈ ಸಾಹಿತ್ಯ ತಮಿಳರಲ್ಲಿ ಜನಪ್ರಿಯಗೊಂಡು ಜನಸಾಮಾನ್ಯರಲ್ಲಿ ಸ್ವಾತಂತ್ರಾಭಿಲಾಷೆಯನ್ನು ಮೂಡಿಸಿತು.

**ಎಂ. ಗೋವಿಂದ ಪೈ** : ಬಹುಭಾಷಾ ವಿಷಾರದರಾದ ಕನ್ನಡದ ಮೊದಲ ರಾಷ್ಟ್ರಕವಿಯೆಂಬ ಹೆಗ್ಗಳಿಕೆ ಹೊಂದಿರುವ ಮಂಜೇಶ್ವರ ಗೋವಿಂದ ಪೈ ವಿವಿಧ ಪ್ರಕಾರಗಳ ಸಾಹಿತ್ಯ ರಚನೆಯ ಜೊತೆಗೆ ರಾಷ್ಟ್ರ ಹಾಗೂ ನಾಡು ಪ್ರೇಮವನ್ನು ಉತ್ತೇಜಿಸುವ ಹಲವಾರು ಕೃತಿಗಳನ್ನು ರಚಿಸಿದ್ದಾರೆ. *ಭಾರತವನಳಿಯುತ್ತ ನನಗೆ ಜೀವನವೆತ್ತ ? ಭಾರತವೇ ನನ್ನುಸಿರು, ನನ್ನೊಗೆದ ಬಸಿರು* ಎಂದು ಭಕ್ತಿಯಿಂದ ನಮಿಸುತ್ತ ಭಾರತೀಯ ಶೋಗಾನವೆನ್ನದೆಯ ತಾನ ಭಾರತಾಂಬೆಯ ಭಕ್ತಿ ನನಗಾತ್ಮಶಕ್ತಿ ಎಂಬುದಾಗಿ ಭಾರತಮಾತೆಗೆ ಧನ್ಯತೆಯ ಭಾವವನ್ನು ವ್ಯಕ್ತಪಡಿಸಿದರೆ, ತಾಯೆ ಬಾರ, ಮೊಗವ ತೋರ. ಕನ್ನಡಿಗರ ಮಾತೆಯೇ, ಹರಸು ತಾಯೆ ಸುತರ ಕಾಯೆ ನಮ್ಮ *ಜನ್ಮದಾತೆಯೆ* ಎಂಬ ಗೀತೆಯು ಕನ್ನಡಿಗರ ಹೃದಯ ಹಾಗೂ ಮನಸ್ಸಿನಲ್ಲಿ ಮಾರ್ದನಿಸುತ್ತದೆ.

**ಕುವೆಂಪು** : ಕನ್ನಡದ ಶ್ರೇಷ್ಠ ಕವಿ, ಚಿಂತಕ, ಸ್ವಾತಂತ್ರ್ಯ ಪ್ರೇಮಿ ಕುವೆಂಪು ತಮ್ಮ ಅನೇಕ ಕವಿತೆಗಳ ಮೂಲಕ ಸ್ವಾತಂತ್ರ ಹೋರಾಟಗಾರರನ್ನು ಪ್ರೇರೇಪಿಸಿದ್ದಾರೆ. *ಭಾರತಾಂಬೆಯೇ ಜನಿಸಿ ನಿನ್ನೊಳು ಧನ್ಯನಾದೆನು ದೇವಿಯೇ ನಿನ್ನ ಪ್ರೇಮದಿ ಬೆಳೆದು ಜೀವವು ಮಾನ್ಯವಾದುದು ತಾಯಿಯೆ* ಎಂಬುದಾಗಿ ಧನ್ಯತೆಯ ಭಾವದಿಂದ ಹೇಳಿದ್ದರೆ, ತಮ್ಮ ಮತ್ತೊಂದು ಕವಿತೆ ಪಾಂಚ್ಯಜನ್ಯದಲ್ಲಿ ನಡೆ ಮುಂದೆ ನಡೆ ಮಂದೆ ನುಗ್ಗಿ ನಡೆ ಮುಂದೆ ಜಗ್ಗದೆಯ ಕುಗ್ಗದೆಯೆ ಹಿಗ್ಗಿ ನಡೆ ಮುಂದೆ ಎಂಬುದಾಗಿ ತಿಳಿಸುವುದರ ಮೂಲಕ ಜನಸಾಮಾನ್ಯರನ್ನು ವೀರರಭಸವಾಗಿ ಹುರಿದುಂಬಿಸಿದ್ದಾರೆ.

**ಡಿ. ವಿ. ಗುಂಡಪ್ಪ** : ಕನ್ನಡದ ಮತ್ತೊಬ್ಬ ಕವಿ ಡಿ.ವಿ.ಜಿಯವರು ಪತ್ರಿಕಾ ಪ್ರಕಟಣೆ ಮತ್ತು ಬರಹಗಳ ಮೂಲಕ ಜನರನ್ನು ಒಗ್ಗೂಡಿಸಿ ಸ್ವಾತಂತ್ರ್ಯ ಚಳುವಳಿಯ ಕಡೆಗೆ ಸೆಳೆದರು. *ವೀರಗೀತೆ* ಎಂಬ ತಮ್ಮ ಕವನದಲ್ಲಿ ಅಹಿಂಸಾತ್ಮಕವಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಳ್ಳಲು ಕನ್ನಡಿಗರನ್ನು ಪ್ರೇರೇಪಿಸಿದರು.

**ವಿ. ಕೆ. ಗೋಕಾಕ** : 1857ರಲ್ಲಿ ಭಾರತದಲ್ಲಿ ಬ್ರಿಟೀಷರ ವಿರುದ್ಧ ನಡೆದ ಭಾರತೀಯರ ಹೋರಾಟವನ್ನು ಸ್ವಾತಂತ್ರ್ಯ ಸಂಗ್ರಾಮವೆಂದು ಗುರುತಿಸಿ ಅದನ್ನು ತಮ್ಮ ಕವನ *1857ರ ಕ್ರಾಂತಿವೀರರನ್ನ ನೆನೆದು* ಎಂಬುದರಲ್ಲಿ ಪ್ರಸ್ತುತ ಪಡಿಸಿದ ಗೋಕಾಕ ಅವರು ಇದರಲ್ಲಿ ಪಾಲ್ಗೊಂಡಿದ್ದ ಕನ್ನಡಿಗರನ್ನು ಸ್ಮರಿಸಿದ್ದಾರೆ. ಭಾರತಕ್ಕೆ ಸ್ವಾತಂತ್ರ್ಯ ದೊರೆತ ಘಟನೆಯನ್ನು ತಮ್ಮ ರಾಷ್ಟ್ರೋದಯ ಕವನದಲ್ಲಿ ವಿವರಿಸಿದ್ದಾರೆ.

ಒಟ್ಟಿನಲ್ಲಿ ಹತ್ತೊಂಬತ್ತನೇ ಶತಮಾನದ ಸುಮಾರಿಗೆ ಭಾರತೀಯರಲ್ಲಿ ಆಚರಣೆಯಲ್ಲಿದ್ದ ಸಂಪ್ರದಾಯಶೀಲತೆ, ಅಂಧಶ್ರದ್ದೆಗಳು ಭಾರತೀಯ ಸಮಾಜವನ್ನು ಅಧೋಗತಿಗೆ ಸಾಗಿಸಿದ್ದವು. ಜನತೆ ಬೌದ್ದಿಕತೆ, ಸರಿ ತಪ್ಪುಗಳ ವಿವೇಚನೆ, ವೈಚಾರಿಕ ಪ್ರಜ್ಞೆಗಳಿಂದ ವಂಚಿತರಾಗಿ ಅಂಧಕಾರದಲ್ಲಿ ಮುಳುಗಿದ್ದ ಸಂದರ್ಭದಲ್ಲಿ, ಭಾರತೀಯರಲ್ಲಿ ವೈಚಾರಿಕ ಪ್ರಜ್ಞೆ ಬೆಳೆಯುವಲ್ಲಿ, ರಾಷ್ಟ್ರೀಯ ಪ್ರಜ್ಞೆ ಮೂಡುವಲ್ಲಿ, ಆ ಮೂಲಕ ಭಾರತೀಯರ ಬದುಕಿನಲ್ಲಿ ಸ್ವಾತಂತ್ರದ ಪ್ರೇಮವನ್ನು ಅವಿರ್ಭಾವಗೊಳಿಸಿದ ಕೀರ್ತಿ ಈ ಮೇಲಿನ ವಿದ್ವಾಂಸರ ವೈಚಾರಿಕತೆಗೆ ಸಲ್ಲುತ್ತದೆ.

## ಪರಾಮರ್ಶನ ಗ್ರಂಥಗಳು


- **ಜನಪದ ಮಾಸಿಕ ಪತ್ರಿಕೆ (ಅಗಷ್ಟ, 2016)** ಬೆಂಗಳೂರು
- **ಸದಾಶಿವ. ಕೆ., (2019)** : ಆಧುನಿಕ ಭಾರತದ ಇತಿಹಾಸ ಮೈಸೂರು,


■■

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ನಗರ ಸ್ಥಳೀಯ ಸಂಸ್ಥೆಗಳು ಮತ್ತು ನಗರಾಭಿವೃದ್ಧಿ ನಿರ್ವಹಣೆ

**ರಾಜು. ಬಿ. ಕೆ.** ಪಿಎಚ್.ಡಿ ಸಂಶೋಧನ ವಿದ್ಯಾರ್ಥಿ, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

**ಡಾ. ಎಂ. ವೆಂಕಟೇಶ್,** ಪ್ರಾಂಶುಪಾಲರು ಮತ್ತು ಸಂಶೋಧನ ಮಾರ್ಗದರ್ಶಕರು, ಡಿ.ವಿ.ಎಸ್. ಪ್ರಥಮ ದರ್ಜೆ ಕಾಲೇಜು, ಶಿವಮೊಗ್ಗ.

## ವಿಕೇಂದ್ರಿಕರಣ ಮತ್ತು ಅಭಿವೃದ್ಧಿ

ವಿಕೇಂದ್ರಿಕರಣಕ್ಕೆ ಸಂಬಂಧಿಸಿದ ಹಾಗೇ ಅನೇಕ ಚಿಂತಕರು ತಮ್ಮದೇ ಆದ ಅನೇಕ ಅಭಿಪ್ರಾಯಗಳನ್ನು ಮತ್ತು ಅನೇಕ ವ್ಯಾಖ್ಯಾನಗಳನ್ನು ನೀಡಿದ್ದು ವಿಕೇಂದ್ರಿಕರಣ ಚಿಂತನೆಯನ್ನು ವಿಸ್ತೃತಗೊಳಿಸಿದೆ.

**ಎಂ ಗೋವಿಂದ್‌ರಾಜ್‌**ರವರು ಹೇಳಿರುವಂತೆ **"**ಭಾರತದಲ್ಲಿ ಅದರ ಚರಿತ್ರೆಯು ಅಸಮತೋಲನದಿಂದ ಕೂಡಿದ್ದರು ಸಹಭಾಗಿತ್ವವಾದಿ ಜನತಂತ್ರವನ್ನು ಬಲಪಡಿಸಲು ಜನರ ಆಶೋತ್ತರಗಳಿಗೆ ಸ್ಪಂಧಿಸಲು ಆಡಳಿತದ ಸ್ಥಾಪನೆಗೆ ಅವಕಾಶ ಮಾಡಿಕೊಡಲು ಮತ್ತು ಸಾರ್ವಜನಿಕ ಸೇವೆಯನ್ನು ಒದಗಿಸಲು ಅಗತ್ಯವಾದಂತಹ ಸಾಮರ್ಥ್ಯನೀಡಲು ವಿಕೇಂದ್ರಿಕರಣ ಅತ್ಯಂತ ನಿರ್ಣಾಯಕ**"**.

**ಪೀಟರ್‌ಕ್ರೋಪೋಟಕೀನ್‌**ರವರು ಹೇಳಿರುವಂತೆ **"**ಪ್ರಾದೇಶಿಕ ಮತ್ತು ಪ್ರಕಾರ್ಯಗಳನ್ನು ಒಳಗೊಂಡಂತೆ ವಿಕೇಂದ್ರಿಕರಣ ದಿಕ್ಕಿನಲ್ಲಿ ನಡೆಯುವ ನಿಜವಾದ ಪ್ರಗತಿ ಎನ್ನುವುದು ಸ್ಥಳೀಯ ಮತ್ತು ವೈಯಕ್ತಿಕ ಪ್ರಯತ್ನಗಳ ಚೈತನ್ಯದ ಬೆಳವಣಿಗೆಯಲ್ಲಿದೆ ಮತ್ತು ಅಸ್ಥಿತ್ವದಲ್ಲಿರುವ ಶ್ರೇಣಿಕೃತಕೇಂದ್ರ ಮತ್ತು ಪರಧಿಗಳ ಸಂಬಂಧಕ್ಕೆ ಪ್ರತಿಯಾಗಿ ಸರಳತೆ ಮತ್ತು ಸಂಕೀರ್ಣತೆಯ ಮುಕ್ತ ಒಕ್ಕೂಟದಲ್ಲಿದೆ**"**.

ಅಭಿವೃದ್ಧಿಯನ್ನು ಸ್ಥಳೀಯ ಮಟ್ಟಕ್ಕೆ ಜಾರಿಗೆ ತರುವುದು ಅಭಿವೃದ್ಧಿಯ ವಿಕೇಂದ್ರಿಕರಣದ ಉದ್ದೇಶವಾಗಿದ್ದು ಪ್ರಾರಂಭದಲ್ಲಿ ಅಭಿವೃದ್ಧಿಯಲ್ಲಿ ವಿಕೇಂದ್ರಿಕರಣದ ಕುರಿತಂತೆ ಸರ್ವಾನುಮತದ ಒಪ್ಪಿಗೆ ಇರಲಿಲ್ಲ. ವಿಕೇಂದ್ರಿಕರಣದ ಕುರಿತು ಅನೇಕ ಚಿಂತಕರು ಆರಂಭದಲ್ಲಿ ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಅಭಿವೃದ್ಧಿಯಲ್ಲಿ ವಿಕೇಂದ್ರಿಕರಣದ ಕುರಿತಂತೆ ಅನೇಕ ವ್ಯಾಖ್ಯಾನಗಳಂತೆ ಅನೇಕ ಚರ್ಚೆಗಳು ನಡೆದಿದೆ ನಂತರ ಪುನರ್ ವಿಕೇಂದ್ರಿಕರಣವು ನಡೆದಿದೆ. ನಂತರ ಅಭಿವೃದ್ಧಿ ಮತ್ತು ವಿಕೇಂದ್ರಿಕರಣದ ಕುರಿತು ಕೆಲವು ಚಿಂತನಕಾರರು **ಮೋಹಿತ್ ಭಟ್ಟಾಚಾರ್ಯ** ತಮ್ಮ ಗ್ರಂಥವಾದ **"ಡೆವಲಪ್‌ಮೆಂಟ್ ಆಡ್ಮಿನಿಸ್ಟ್ರೇಷನ್"** ಎಂಬ ಗ್ರಂಥದಲ್ಲಿ ವಿಕೇಂದ್ರಿಕೃತ ಅಭಿವೃದ್ಧಿಯ ಬಗ್ಗೆ ಚರ್ಚಿಸುತ್ತ 1970ರ ದಶಕದಲ್ಲಿ ಅಭಿವೃದ್ಧಿಯು ಮುನ್ನಡೆಯನ್ನು ಸಾಧಿಸಿತು ಎಂದು ಹೇಳುತ್ತಾ 1970ರ ದಶಕದ ಮಧ್ಯ ಭಾಗದಲ್ಲಿ ವಿಕೇಂದ್ರಿಕರಣ ಪುನಾರಾವರ್ತಿತವಾಗುವುದನ್ನು ಕಂಡು ವಿಕೇಂದ್ರಿಕರಣ ಚರ್ಚೆಯು ಸ್ಥಳೀಯ ಸ್ವಾಯುತತೆ ಮತ್ತು ಜನರ ಭಾಗವಹಿಸುವಿಕೆ ಮುಂತಾದ ಮೌಲ್ಯಗಳಿಗೆ ಪ್ರಾರಂಭದಲ್ಲಿ ಕಡಿಮೆ ಒತ್ತು ನೀಡಿ ದಕ್ಷತೆಯ ಮೇಲೆ ಹೆಚ್ಚು ಗಮನ ಹರಿಸಿತು. ವಿಕೇಂದ್ರಿಕರಣ ಚರ್ಚೆಯು ಅಭಿವೃದ್ಧಿಗೆ ಕೇಂದ್ರಿಕೃತವಾಯಿತಾದರು ಕೆಳಗಿನಿಂದಾಗುವ ಅಭಿವೃದ್ಧಿಯನ್ನು ಒಳಗಿನಿಂದಾಗುವ ಅಭಿವೃದ್ಧಿಯೆಂದು ಬಣ್ಣಿಸಲಾಗಿತು. ಮೂಲಭೂತ ಮಾನವನ ಅಗತ್ಯತೆಯನ್ನು ಮತ್ತು ಸ್ವಾವಲಂಬಿ ಅಭಿವೃದ್ಧಿಯನ್ನು ಸ್ಥಳೀಯ ಸಂಪನ್ಮೂಲಗಳ ಬಳಕೆಗೆ ಒತ್ತು ನೀಡಲಾಯಿತು ಎಂದು ಚರ್ಚಿಸಲಾಗಿದೆ. **ಡಾ. ಎಂ. ಚಂದ್ರ ಪೂಜಾರಿ**ರವರು ತಮ್ಮ ಗ್ರಂಥವಾದಂತಹ **"ಅಭಿವೃದ್ಧಿ ಸಿದ್ಧಾಂತಗಳು"** ಎಂಬ ಗ್ರಂಥದಲ್ಲಿ ವಿಕೇಂದ್ರಿಕರಣವನ್ನು ಎರಡು ದೃಷ್ಟಿಕೋನಗಳಿಂದ ಗುರುತಿಸಿದ್ದು ಅಭಿವೃದ್ಧಿಯ ನಿರ್ವಾಹಣೆಯ ದೃಷ್ಟಿಕೋನ ಮತ್ತು ವಿಕೇಂದ್ರಿಕೃತ ಪ್ರಜಾಪ್ರಭುತ್ವ ಎಂದು ಹೇಳಿದ್ದು ಅಭಿವೃದ್ಧಿಯ ನಿರ್ವಾಹಣೆಯ ದೃಷ್ಟಿಯಿಂದ ನೋಡುವವರಿಗೆ ಅಭಿವೃದ್ಧಿಯನ್ನು ಕಡಿಮೆ ವೆಚ್ಚದಲ್ಲಿ ಜನರಿಗೆ ತಲುಪಿಸುವುದು ವಿಕೇಂದ್ರಿಕರಣ ಎಂದು ಕರೆದಿದ್ದಾರೆ. ಇವರ ಮತ್ತೊಂದು ದೃಷ್ಟಿಕೋನದ ಪ್ರಕಾರ ಜನಸಾಮಾನ್ಯರ ಸ್ಥಾನದಲ್ಲಿ ನಿಂತು ನೋಡುವುದಾದರೆ ವಿಕೇಂದ್ರಿಕರಣದ ಉದ್ದೇಶ ಸವಲತ್ತುಗಳನ್ನು ಕಡಿಮೆ ವೆಚ್ಚದಲ್ಲಿ ಜನರಿಗೆ ತಲುಪಿಸುವುದಲ್ಲ ಬದಲಿಗೆ ಜನಸಾಮಾನ್ಯರು ತಮ್ಮ ಆದ್ಯತೆಗೆ ಅನುಗುಣವಾಗಿ ಆದರ್ಶ ಸಮಾಜವನ್ನು ರೂಪಿಸುವುದು ಎಂದು ಹೇಳಿದ್ದಾರೆ. **ಬಾನ್–ಕಿ–ಮೂನ್‌**ರವರು ಹೇಳಿರುವಂತೆ ವಿಕೇಂದ್ರಿಕರಣವನ್ನು ಸುಸ್ಥಿರವಾದ ನಗರವನ್ನು ಮತ್ತು ಒಂದು ಸುಸ್ಥಿರವಾದ ಭವಿಷ್ಯವನ್ನು ನಿರ್ಮಿಸುವುದಕ್ಕೆ ರಾಷ್ಟ್ರೀಯ, ಪ್ರಾದೇಶಿಕ ಮತ್ತು ಸ್ಥಳೀಯ ಸರ್ಕಾರಗಳ ನಡುವೆ ಸಂವಾದವಿರುವುದು ಅಗತ್ಯವಾಗಿದೆ ಎಂದು ಹೇಳುತ್ತಾ ಇದಕ್ಕೆ ಸಂಬಂಧ ಪಟ್ಟ ಎಲ್ಲರೂ ಅಂದರೆ ಖಾಸಗಿ ವಲಯ, ನಾಗರಿಕ ಸಮಾಜ, ವಿಶೇಷವಾಗಿ ಬಡವರು, ಸಮಾಜದ ಅಂಚಿಗೆ ದೂಡಲ್ಪಟ್ಟಂತಹ ಜನರ ನಡುವೆ ಪರಸ್ಪರ ಸಹಭಾಗಿತ್ವ ಅಗತ್ಯವಾಗಿದೆ ಎಂದು ವಿಕೇಂದ್ರಿಕರಣವನ್ನು ವಿವರಿಸಿದ್ದಾರೆ. **ವಿಲ್‌ಬರ್. ಎಲ್. ಕೀಚ್‌**ರವರು ಹೇಳಿರುವಂತೆ ವಿಕೇಂದ್ರಿಕರಣ ಎಂದರೆ ನಿಯಂತ್ರಣವು ಕೈತಪ್ಪಿ ಹೋಗುವುದು ಎಂದು ಅನೇಕರ ಭಾವನೆಯಾಗಿದೆ ಆದರೆ ಇದು ಖಂಡಿತ ನಿಜವಲ್ಲ ನಿಯಂತ್ರಣ ಎಂದರೆ ಘಟನೆಗಳ ನಿಯಂತ್ರಣವೆ ಹೊರತು ವ್ಯಕ್ತಿಗಳ ನಿಯಂತ್ರಣವಲ್ಲ ಎಂಬ ದೃಷ್ಟಿಯಿಂದ ನಿಯಂತ್ರಣವನ್ನು ಅರ್ಥ ಮಾಡಿಕೊಂಡಾಗ ನಿಯಂತ್ರಣವನ್ನು ಸುಧಾರಿಸಬಹುದೆಂದು ಆಗ ಘಟನೆಗಳನ್ನು ನಿಯಂತ್ರಿಸುವ ಹೆಚ್ಚು ಜನರು ನಿಮ್ಮಲ್ಲಿದ್ದಾರೆ ಎಂದರೆ ಘಟನೆಗಳನ್ನು ನಿಯಂತ್ರಿಸುವ ಬಗ್ಗೆ ಗಮನ ಹರಿಸುವ ಹೆಚ್ಚು ಜನರು ನಿಮ್ಮಲ್ಲಿದ್ದಾರೆ ಅನುಕೂಲಕರವಾದ ಸಂದರ್ಭಗಳನ್ನು ಸೃಷ್ಟಿಸುವುದಕ್ಕಾಗಿ ಪೂರ್ವಭಾವಿಯಾಗಿ ಕಾರ್ಯನಿರ್ವಹಿಸುವಂತಹ ಹೆಚ್ಚು ಜನ ನಿಮ್ಮಲ್ಲಿದ್ದಾರೆ ಎಂದು ಅರ್ಥ ಈಗ ವ್ಯವಸ್ಥೆಯೊಳಗೆ ನೀವು ಹೆಚ್ಚಿನ ನಿಯಂತ್ರಣವನ್ನು ಹೊಂದುತ್ತಿರಿ ಎಂದು ಚರ್ಚಿಸುತ್ತಾ ವಿಕೇಂದ್ರಿಕರಣದ ಬಗ್ಗೆ ವಿವರಣೆಯನ್ನು ನೀಡಿದ್ದಾರೆ. **ಚಾರ್ಲ್ಸ್‌ಟೈಬೂ ಮಾದರಿ** ಈ ಮಾದರಿಯಲ್ಲಿ ಸಾರ್ವಜನಿಕ ಸರಕುಗಳ ಪೂರೈಕೆಯ ಕುರಿತಂತೆ ಸ್ಥಳೀಯ ಸರ್ಕಾರಗಳ ಕಾರ್ಯಚರಣೆ ಶೈಲಿ ಆಧಾರಿತ ವಿಕೇಂದ್ರಿಕೃತ ಮಾದರಿಯನ್ನು ಅಮೇರಿಕದ ಅರ್ಥಶಾಸ್ತ್ರಜ್ಞನಾದ ಚಾರ್ಲ್ಸ್ ಟೈಬೂ ತಮ್ಮ ಗ್ರಂಥವಾದ Theory of Local Public Expenduture ಈ ಗ್ರಂಥದಲ್ಲಿ ಚಾರ್ಲ್ಸ್ ಟೈಬೂರವರು **"ಸ್ಥಳೀಯ ಸಾರ್ವಜನಿಕ ಸರಕುಗಳಿಗೆ ಜನರ ಒಲವುಗಳು ರಾಷ್ಟ್ರೀಯ ಮಟ್ಟಕ್ಕಿಂತ ಸ್ಥಳೀಯ ಸಾರ್ವಜನಿಕ ವೆಚ್ಚದಲ್ಲಿ ಹೆಚ್ಚು ಸಮರ್ಪಕವಾಗಿ ಪ್ರತಿಫಲವಾಗುತ್ತವೆ"** ಎಂಬುದು ಇವರ ವಾದವಾಗಿದ್ದು ಇವರು ತಮ್ಮ ಗ್ರಂಥದಲ್ಲಿ **"ನಗರ ಸಾರ್ವಜನಿಕ ಸರಕುಗಳು"** ಇವುಗಳನ್ನು ಗುರುತಿಸಿದ್ದು ನಿರ್ದಿಷ್ಟಜನ ವಸತಿ ಪ್ರದೇಶ ಒಂದರಲ್ಲಿ ಸ್ಥಳೀಯ ಸರ್ಕಾರಗಳು ಪೂರೈಸುವಂತಹ ಕುಡಿಯುವ ನೀರು ಪೂರೈಕೆ, ಶೌಚಾಲಯ, ಸೇತುವೆಗಳು ಉದ್ಯಾನವನ, ಬೀದಿ ದೀಪ, ಚರಂಡಿ ಒಳ ಚರಂಡಿ ವ್ಯವಸ್ಥೆಗಳ ಬಗ್ಗೆ ಹೇಳಿದ್ದಾರೆ ಸ್ಥಳೀಯ ಮಟ್ಟದಲ್ಲಿ ಸಾರ್ವಜನಿಕ ಸರಕುಗಳನ್ನು ಪೂರೈಸಲು ಕೇಂದ್ರ ಸರ್ಕಾರಕ್ಕೆ ಸ್ಥಳೀಯ ಮಟ್ಟದ ಸರ್ಕಾರಗಳನ್ನು ಸೃಷ್ಟಿಸುವುದು ಅನಿವಾರ್ಯ ಏಕೆಂದರೆ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಹತ್ತು ಹಲವು ಬಗೆಯ ಸಾರ್ವಜನಿಕ ಸರಕುಗಳು ಪ್ರಾದೇಶಿಕ ಮತ್ತು ಸ್ಥಳೀಯ ಭೌಗೋಳಿಕ ಸ್ಥಾನಿಕರಣವನ್ನು ಹೊಂದಿರುತ್ತವೆ. Region and Local Area Specific Public Goods ಹೀಗಾಗಿ ಕೇಂದ್ರ ಸರ್ಕಾರಕ್ಕೆ ಪ್ರಾದೇಶಿಕ ಮತ್ತು ಸ್ಥಳೀಯ ಸರ್ಕಾರಗಳ ನಿರ್ದಿಷ್ಟರೂಪದ ವಿತ್ತೀಯ ಪರಮಾಧಿಕಾರವನ್ನು ನೀಡುವುದು ಅನಿವಾರ್ಯ ಎಂದು ಹೇಳಿದ್ದಾರೆ ಚಾರ್ಲ್ಸ್ ಟೈಬೂರವರ ಸ್ಥಳೀಯ ಸಾರ್ವಜನಿಕ ವೆಚ್ಚವು ಅವುಗಳ ಸ್ಥಳೀಯ ಸಾರ್ವಜನಿಕ ಸರಕುಗಳನ್ನು ಪೂರೈಸುವುದರಿಂದ ಏರ್ಪಡುವುದು ಎಂದು ಸ್ಥಳೀಯ ನಿರ್ದಿಷ್ಟ ಬಗೆಯ ಸಾರ್ವಜನಿಕ ಸರಕುಗಳನ್ನು ಪೂರೈಸಲು ಉನ್ನತ ಹಂತದ ಸರ್ಕಾರಗಳಿಗೆ ಪ್ರತಿಯಾಗಿ ಸ್ಥಳೀಯ ನಗರ ಮತ್ತು ಗ್ರಾಮೀಣ ಸರ್ಕಾರಗಳು ಹಸ್ತಾಂತರದ ಮೂಲಕ ಪಡೆಯುತ್ತವೆ ಹೀಗೇ ಚಾರ್ಲ್ಸ್ ಟೈಬೂರವರು ಸ್ಥಳೀಯ ಸಾರ್ವಜನಿಕ ವೆಚ್ಚಗಳ ತತ್ವವು ಸ್ಥಳೀಯ ಸಮುದಾಯಗಳಲ್ಲಿ ಸ್ಥಳೀಯ ಸಾರ್ವಜನಿಕ ಸರಕುಗಳನ್ನು ವಿಭಿನ್ನವಾಗಿ ಹೇಗೆ ಪೂರೈಕೆ ಮಾಡಬಹುದು ಎಂಬುದನ್ನು Local Government Model ನಲ್ಲಿ ಅನೇಕ ಸಾರ್ವಜನಿಕ ಸರಕುಗಳು ಸ್ಥಾನಿಕರಣಗೊಂಡಿದ್ದು ಅಂತವುಗಳೇಂದರೆ ತ್ಯಾಜ್ಯ ವಿಲೇವಾರಿ, ಕುಡಿಯುವ ನೀರು, ಶೌಚಾಲಯ ವ್ಯವಸ್ಥೆ ಮುಂತಾದವುಗಳನ್ನು ಜನರುಎಲ್ಲಿ ವಾಸಿಸುತ್ತಾರೊ ಅಲ್ಲೇ ಪೂರೈಕೆ ಮಾಡಬೇಕು ಸಮಾಜಕ್ಕೊಂದು ಸ್ಥಳೀಯ ಮಟ್ಟದ ಸರ್ಕಾರವನ್ನು ಹುಟ್ಟುಹಾಕಬೇಕು ಎಂದು ಚರ್ಚಿಸಿದ್ದಾರೆ.

ಅಭಿವೃದ್ಧಿಯನ್ನು ನಗರ ಪ್ರದೇಶಗಳಿಗೆ ವಿಕೇಂದ್ರಿಕರಣ ಮಾಡಲು ನಗರ ಪ್ರದೇಶದ ಆಡಳಿತದಲ್ಲಿ ಅಭಿವೃದ್ಧಿಯನ್ನು ಸಾಧಿಸಲು ನಗರ ಸ್ಥಳೀಂಯ ಸಂಸ್ಥೆಗಳಿಗೆ ಸಂವಿಧಾನದ ತಿದ್ದುಪಡಿ 74ರಲ್ಲಿ ನೀಡಲಾಯಿತಾದರು ನಗರ ಪ್ರದೇಶದಲ್ಲಿ ಅಭಿವೃದ್ಧಿಯನ್ನು ಸಾಧಿಸಲು ನಗರ ಪ್ರದೇಶದಲ್ಲಿ ದಿನದಿಂದ ದಿನಕ್ಕೆ ಉಲ್ಬವಗೊಳ್ಳುತ್ತಿರುವ ಸಮಸ್ಯೆಗಳಿಗೆ ಹಣಕಾಸಿನ ಸಂಪನ್ಮೂಲಗಳ ಕೊರತೆಯನ್ನು ಅನುಭವಿಸುತ್ತಿವೆ ನಗರ ಮಟ್ಟದಲ್ಲಿ ಅಭಿವೃದ್ಧಿಯನ್ನು ಸಾಧಿಸಲು ಒಂದು ದೊಡ್ಡ ಸವಲಾಗಿ ಉಳಿದಿದೆ ಇದಕ್ಕಾಗಿ ನಗರ ಮಟ್ಟದಲ್ಲಿ ಅಭಿವೃದ್ಧಿಯನ್ನು ಸಾಧಿಸಲು ಉದಾರೀಕರಣದ ನಂತರ ಅನೇಕ ವಿಶೇಷ ಸಂಘಟನೆಗಳನ್ನು ಜಾರಿಗೆತರಲಾಗಿದ್ದು ಅಭಿವೃದ್ಧಿಯ ಆಡಳಿತದಲ್ಲಿ "PPP" PUBLIC-PRIVATE-PARTNERSHIP ಮತ್ತು "DBFOT" DESIGN-BUILD-FINANCE-OPERATE-TRANSFER ಮಾದರಿಗಳ ಮೂಲಕ ಅಭಿವೃದ್ಧಿಯನ್ನು ಸಾಧಿಸಲು ವಿಪರೀತವಾಗಿ ಬೆಳೆಯುತ್ತಿರುವ ಒಂದು ಸಾಧನವಾಗಿದ್ದು ಸ್ಥಳೀಯ ಸಂಸ್ಥೆ ಮತ್ತು ಒಂದು ಇಲಾಖೆ ಅಥವಾ ಒಂದು ಖಾಸಗೀ ಕಂಪನಿಯೊಂದಿಗೆ ಸಂಪರ್ಕವನ್ನು ಏರ್ಪಡಿಸುವುದರ ಮೂಲಕ ಮೂಲ ಸೌಕರ್ಯಗಳಾದ ನೀರು ಸರಬರಾಜು, ರಸ್ತೆ ವ್ಯವಸ್ಥೆ ಮುಂತಾದಂತಹ ಮೂಲಭೂತ ಸೌಕರ್ಯ ಅಭಿವೃದ್ಧಿಯನ್ನು ನೀಡಲು ಈ ಮಾದರಿ ಬಳಕೆಯಾಗುತ್ತಿದೆ.

### ಅಭಿವೃದ್ಧಿ ಮತ್ತು ಹಣಕಾಸಿನ ನಡುವಿನ ಸಂಬಂಧ

ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದ ಹಾಗೆ ಅಭಿವೃದ್ಧಿ ಎಂದರೆ **"ನಗರಾಭಿವೃದ್ಧಿ"** ಎಂಬ ಅರ್ಥವನ್ನು ನೀಡುತ್ತದೆ 1988ರಲ್ಲಿ ರಚನೆಯಾದ **"ರಾಷ್ಟ್ರೀಯ ನಗರೀಕರಣ ಆಯೋಗವು"** ನಗರಾಭಿವೃದ್ಧಿ ಎಂಬುದಕ್ಕೆ ನಗರದಲ್ಲಿನ ಮೂಲಭೂತ ಸೌಕರ್ಯ ಮತ್ತು ಮೂಲ ಸೇವೆಗಳ ಅನುಕೂಲತೆ ಎಂದು ಕರೆದಿದೆ. ಅರ್ಥಶಾಸ್ತ್ರಜ್ಞಾರಾದ **ಜೆ.ಆರ್. ಹಿಕ್ಸ್ ಮತ್ತು ಸ್ಟ್ರೀಟನ್**ರವರು ರಚಿಸಿದ **"ಮೂಲ ಅವಶ್ಯಕತೆಗಳ ಸೂಚಿ"**ಯಲ್ಲಿ ಮೂಲ ಅವಶ್ಯಕತೆಗಳು ಅಭಿವೃದ್ಧಿಯನ್ನು ಅಳೆಯುವ ಮಾನದಂಡವಾಗಿದೆ ಎಂದು ಹೇಳುತ್ತಾ ಮೂಲ ಅವಶ್ಯಕತೆಗಳು ಹೇಗೆ ಹಂಚಿಕೆಯಾಗಿದೆ ಎಂಬುದರ ಮೇಲೆ ಅಭಿವೃದ್ಧಿಯನ್ನು ಅಳತೆ ಮಾಡಬಹುದೆಂದು ತಮ್ಮ ಮೂಲ ಅವಶ್ಯಕತೆಗಳ ಸೂಚಿಯಲ್ಲಿ ನೀರು, ವಸತಿ, ನೈರ್ಮಲ್ಯ ಜನರಿಗೆ ಪೂರೈಸುವಲ್ಲಿ ಎಷ್ಟರಮಟ್ಟಿಗೆ ಯಶಸ್ವಿಯಾಗಿದೆ ಎಂಬುದರ ಆಧಾರದ ಮೇಲೆ ಅಭಿವೃದ್ಧಿಯನ್ನು ಮಾಪನ ಮಾಡಬಹುದೆಂದು ಹೀಕ್ಸ್ ಮತ್ತು ಸ್ಟ್ರೀಟನ್‌ರವರ ವಾದವಾಗಿದೆ. **ಹರ್ಷಮನ್** ಎಂಬ ಅರ್ಥಶಾಸ್ತ್ರಜ್ಞನು ಮೂಲಭೂತ ಸೌಕರ್ಯವನ್ನು ಕುರಿತು **"ಆರ್ಥಿಕ ಅಭಿವೃದ್ಧಿಯ ಆರಂಭಕಾರ"** ಎಂದು ಹೇಳಿರುವುದು ಆರ್ಥಿಕವಾಗಿ ಒಂದು ದೇಶ ಅಭಿವೃದ್ಧಿಯನ್ನು ಹೊಂದಲು ಮೂಲಭೂತ ಅವಶ್ಯಕತೆಗಳು ಎಷ್ಟು ಪ್ರಾಮುಖ್ಯತೆಯನ್ನು ಪಡೆದಿದೆ ಎಂಬುದನ್ನು ವಿಶ್ಲೇಷಿಸಿದ್ದಾರೆ. ಪ್ರಸಿದ್ಧ ಅರ್ಥಶಾಸ್ತ್ರಜ್ಞನಾದ **ಗುನ್ನಾರ್ ಮಿರ್ಡಲ್** ತನ್ನ ಗ್ರಂಥವಾದ **"ಏಷಿಯನ್ ಡ್ರಾಮಾ"** 1968 ಎಂಬ ಕೃತಿಯಲ್ಲಿ ಮೂಲಭೂತ ಸೌಕರ್ಯಗಳ ಕುರಿತು **"ಅಭಿವೃದ್ಧಿಯ ಅವಶ್ಯಕ ಷರತ್ತು"**ಎಂದು ಕರೆದಿರುವುದು ಅಭಿವೃದ್ಧಿಯಲ್ಲಿ ಮೂಲ ಸೌಕರ್ಯಗಳ ಮಹತ್ವವನ್ನು ಎತ್ತಿ ಹಿಡಿದಿದೆ ಹೀಗೆ ವಿವಿಧ ಚಿಂತಕರ ಪ್ರಕಾರ ನಗರದಲ್ಲಿ ವಾಸಿಸುತ್ತಿರುವ ಜನರ ಜೀವನಕ್ಕೆ ಅಗತ್ಯವಾದಂತಹ ಮೂಲ ಭೂತ ಅವಶ್ಯಕತೆಗಳಾದ ನೀರು, ರಸ್ತೆ ವ್ಯವಸ್ಥೆ, ನಗರದ ಶುಚೀಕರಣ ಮುಂತಾದಂತಹ ಭೌತಿಕ ಮೂಲ ಸೌಕರ್ಯಗಳನ್ನು ಉತ್ತಮಗೊಳಿಸುವುದು ಆಗಿರುತ್ತದೆ. ಇದಕ್ಕಾಗಿ ನಗರ ಮಟ್ಟದಲ್ಲಿ ನಗರ ಸ್ಥಳೀಯ ಸಂಸ್ಥೆಗಳು ಮೂಲ ಸೇವೆಗಳನ್ನು ನೀಡುವ ಅಧಿಕಾರ ಮತ್ತು ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದು ನಗರಾಭಿವೃದ್ಧಿಯನ್ನು ಸಾಧಿಸಲು ಅನೇಕ ಹಣಕಾಸಿನ ಸಂಪನ್ಮೂಲಗಳನ್ನು ಅವಲಂಬಿಸಿದೆ ಹಣಕಾಸಿನ ಹೊರತಾಗಿ ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯವಿಲ್ಲ ಹಣಕಾಸಿನ ಹೂಡಿಕೆಯು ಜೊತೆಯಲ್ಲಿ ಅಭಿವೃದ್ಧಿ ನಡೆಯುವುದು ಸಹಜವಾಗಿದ್ದು ಹಣಕಾಸಿನ ಸಂಪನ್ಮೂಲಗಳು ಸಮರ್ಪಕವಾಗಿ ಪೂರೈಕೆಯಾದಾಗ ಮತ್ತು ದೊರೆತಾಗ ಮಾತ್ರಯಶಸ್ಸು ಸಾಧ್ಯವಾಗುತ್ತದೆ ಅರ್ಥಶಾಸ್ತ್ರಜ್ಞನಾದ **ರ್‍ಯಾಗ್ನರ್ ನರ್ಕ್ಸ**ನು ಹೇಳಿರುವಂತೆ **"ಬಂಡವಾಳ ಮನೆಯಲ್ಲಿಯೇ ಸಿದ್ಧವಾಗುತ್ತದೆ"** ಎಂಬ ಹೇಳಿಕೆಯಂತೆ ನಗರ ಸ್ಥಳೀಯ ಸಂಸ್ಥೆಗಳ ಆದಾಯವು ನಗರ ಸ್ಥಳೀಯ ಸಂಸ್ಥೆಗಳ ಬಳಿಯೆ ಇದ್ದು ತಮ್ಮ ಬಳಿ ಇರುವತೆರಿಗೆ, ತೆರಿಗೇತರ ಆದಾಯ, ಇತರೆ ಹಣಕಾಸಿನ ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ಹೆಚ್ಚಿಸಿಕೊಂಡಾಗ ಅಭಿವೃದ್ಧಿಯ ಮೇಲಿನ ಹೂಡಿಕೆಗೆ ತೊಂದರೆ ಯಾಗುವುದಿಲ್ಲ ನಗರಾಭಿವೃದ್ಧಿಯು ಒಂದು ಮಹಾನ್ ಪ್ರಕ್ರಿಯೆಯಾಗಿದ್ದು ಅಗಾಧ ಪ್ರಮಾಣದ ಹಣಕಾಸು ಸಕಾಲಕ್ಕೆ ದೊರೆತಾಗ ಮಾತ್ರ ನಗರ ಸ್ಥಳೀಯ ಸಂಸ್ಥೆಗಳು ಸಾಧಿಸಲು ಸಾಧ್ಯವಾಗುತ್ತದೆ ಆದರೆ ಹಣಕಾಸು ಸಮರ್ಪಕವಾಗಿ ದೊರೆಯದೆ ಹೋದಾಗ ನಗರಾಭಿವೃದ್ಧಿಯ ಮೇಲೆ ಋಣಾತ್ಮಕ ಪರಿಣಾಮ ಬೀರುತ್ತದೆ ಅಭಿವೃದ್ಧಿಯು ಹೆಚ್ಚು ಕ್ರಿಯಾಶೀಲ ಸಾಧನ ಪ್ರವೃತ್ತಿಯಾಗಿದ್ದು ಪ್ರಸ್ತುತ ಜಾರಿಯಲ್ಲಿರುವ ನಗರ ಸ್ಥಳೀಯ ಸಂಸ್ಥೆಗಳ ಹಣಕಾಸು ನಿರ್ವಹಣೆಯಲ್ಲಿ ಬದಲಾವಣೆಗಳು ಆಗಬೇಕಾದ ಅನಿವಾರ್ಯತೆ ಇದೆ.

### ನಗರಾಭಿವೃದ್ಧಿಗೆ ಸರ್ಕಾರದ ವಿವಿಧ ಯೋಜನೆಗಳು

ನಗರಾಭಿವೃದ್ಧಿಗೆ ಸಂಬಂಧಿಸಿದ ಹಾಗೆ ನಾನಾ ಬಗೆಯ ಅನುಕೂಲಗಳನ್ನು ಮತ್ತು ಮೂಲ ಸೌಕರ್ಯಗಳನ್ನು ನಗರ ಪ್ರದೇಶಗಳಿಗೆ ಕಲ್ಪಿಸುವ ಸಲುವಾಗಿ ಸರ್ಕಾರಗಳು ಅನೇಕ ಬಗೆಯ ಯೋಜನೆಗಳನ್ನು ಹಾಕಿಕೊಂಡಿದ್ದು ನಗರಾಭಿವೃದ್ಧಿಯನ್ನು ಸಾಧಿಸಲು ಅನೇಕ ಪ್ರಯತ್ನವನ್ನು ಯೋಜನೆಯ ಮೂಲಕ ಕೈಗೊಳ್ಳಲಾಗಿದೆ ಭಾರತದ ನಗರಾಭಿವೃದ್ಧಿಗೆ ಸಂಬಂಧಿಸಿದಂತೆ ಯೋಜನೆಗಳ ನಿರ್ವಹಣೆಯನ್ನು Ministry of Urban Development ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಿದ್ದು ನಗರಾಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸುತ್ತದೆ ಮತ್ತು ಹಣಕಾಸಿನ ನೆರವು ನೀಡುತ್ತದೆ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಪಂಚವಾರ್ಷಿಕ ಯೋಜನೆಗಳಲ್ಲಿ ಅನೇಕ ಯೋಜನೆಗಳು ನಗರಾಭಿವೃದ್ಧಿಗೆ ಒಲವು ತೋರಿದೆ 2ನೇ ಪಂಚವಾರ್ಷಿಕ ಯೋಜನೆಯಲ್ಲಿ ಕೈಗಾರಿಕೆಯ ಜೊತೆಗೆ ನಗರಾಭಿವೃದ್ಧಿಗೆ ಹೆಚ್ಚು ಗಮನವನ್ನು ಹರಿಸಲಾಯಿತು ಕೈಗಾರಿಕೀಕರಣದಿಂದ ನಗರೀಕರಣ ಉಂಟಾಗಿ ನಗರದ ಸಮಸ್ಯೆಗಳಿಗೆ ಕಾರಣವಾಗಿದ್ದರಿಂದ ನಗರಗಳ ಸಮಸ್ಯೆ ನಿವಾರಣೆಗೆಕ್ರಮ ಕೈಗೊಳ್ಳಲಾಯಿತು 3ನೇ ಪಂಚವಾರ್ಷಿಕ ಯೋಜನೆಯಲ್ಲಿ ನಗರಗಳ ಅಭಿವೃದ್ಧಿಗಾಗಿ ಸಮಗ್ರ ನಗರ ಯೋಜನೆಯನ್ನು ಜಾರಿಗೆ ತರಲಾಯಿತು ಈ ಯೋಜನೆಗಳಲ್ಲಿ ಕೆಲವು ಪಟ್ಟಣ ಪ್ರದೇಶಗಳನ್ನು ಪ್ರಾಯೋಗಿಕವಾಗಿ ಆಯ್ದುಕೊಂಡು ನಗರಾಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಯಿತು. 1967–69ರ ಅವಧಿಯಲ್ಲಿ ಮಧ್ಯಂತರ ನಗರ ಯೋಜನೆಯನ್ನು ನೀರು, ನೀರು ಸರಬರಾಜು, ರಸ್ತೆಗಳಿಗೆ ಸಂಬಂಧಿಸಿದ ಹಾಗೆ ಅನೇಕ ಸಂಸ್ಥೆಗಳನ್ನು ಜಾರಿಗೊಳಿಸಲಾಗಿದೆ 5ನೇ ಪಂಚವಾರ್ಷಿಕ ಯೋಜನೆಯಲ್ಲಿ ನಗರಾಭಿವೃದ್ಧಿಗೆ ಅವಕಾಶಗಳನ್ನು ಮಾಡಲಾಯಿತು ನಗರ ವಾಸಿಗಳಿಗೆ ನಾಗರೀಕ ಸೌಲಭ್ಯಗಳನ್ನು ಒದಗಿಸುವುದು ನಗರಯೋಜನೆಯ ಮುಖ್ಯಕರ್ತವ್ಯವೆಂದು ತಿಳಿಸಲಾಗಿದೆ 6ನೇ ಪಂಚವಾರ್ಷಿಕ ಯೋಜನೆಯಲ್ಲಿ ಸಣ್ಣ ಮತ್ತು ಮಧ್ಯಮ ನಗರ ಪ್ರದೇಶಗಳಿಗೆ ಅತಿ ಹೆಚ್ಚಿನ ಗಮನ ಹರಿಸಲಾಯಿತು.

• **JNNRUM :** JAWAHARLAL NEHRU NATIONAL URBAN RENEWAL MISSION ಜವಹರ್‌ಲಾಲ್ ನೆಹರು ರಾಷ್ಟ್ರೀಯ ನವೀಕರಣ ಮಿಷನ್ 2005 ರಲ್ಲಿ ಪ್ರಾರಂಭಿಸಲಾಗಿ 7 ವರ್ಷದ ಅವಧಿಗೆ ವಿಸ್ತರಿಸಲಾಯಿತು 20 ಬಿಲಿಯನ್ ಹೂಡಿಕೆಯೊಂದಿಗೆ ನಗರಗಳ ಆಧುನೀಕರಣಗೊಳಿಸುವ ಯೋಜನೆಯಾಗಿದ್ದು ಇದುಎರಡು ಪ್ರಮುಖ ಉದ್ದೇಶಗಳನ್ನು ಹೊಂದಿದೆ. **BSUP :** BASIC SERVICES FOR URBAN POOR ನಗರದ ಬಡವರಿಗೆ ಮೂಲಭೂತ ಸೇವೆಯನ್ನು ಒದಗಿಸುವುದು ಒಂದು ಉದ್ದೇಶವಾದರೆ ಮತ್ತೊಂದು ಉದ್ದೇಶ **IHSDP:** INTERGRATED HOUSING AND SLUM DEVELOPMENT PROGRAM ಸಮಗ್ರ ವಸತಿ ಮತ್ತು ಕೊಳಗೇರಿ ಅಭಿವೃದ್ಧಿಕಾರ್ಯಕ್ರಮ ನಗರ ಮಟ್ಟದಲ್ಲಿ ಮೂಲ ಸೌಕರ್ಯವನ್ನು ಒದಗಿಸುವುದು, ಹೂಡಿಕೆಯನ್ನು ಹೆಚ್ಚಿಸುವುದು ಉತ್ತಮ ಮೂಲ ಸೌಕರ್ಯವನ್ನು ನೀಡುವುದರ ಮೂಲಕ ನಗರದ ಬಡವರು ಮತ್ತು ಕೊಳಗೇರಿ ನಿವಾಸಿಗಳ ಆರ್ಥಿಕ ದುರ್ಬಲ ವರ್ಗದ ಜನರಿಗೆ ಕೈಗೆಟುಕುವ ಮನೆಗಳನ್ನು ನಿರ್ಮಿಸುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ.

• **SBM-U :** SWACHA BHARATH MISSION – URBAN ಸ್ವಚ್ಛ ಭಾರತ್ ಮಿಷನ್‌ನ್ನುಅಕ್ಟೋಬರ್ – 2 – 2014 ರಂದು ಜಾರಿಗೆ ತರಲಾಯಿತು 2018–19 ಕ್ಕೆ ಕೊನೆಗೊಂಡಂತೆ ನಲವತ್ತೊಂದು ಸಾವಿರದ ಏಳುನೂರ ಅರವತ್ತೈದು ಕೋಟಿಯನ್ನು ಈ ಯೋಜನೆಗೆ ಹಂಚಿಕೆ ಮಾಡಲಾಗಿದ್ದು ನಗರ ಪ್ರದೇಶಗಳಲ್ಲಿ ಸಾರ್ವತ್ರಿಕ ನೈರ್ಮಲ್ಯ ಕಾಪಾಡುವ ಉದ್ದೇಶದಿಂದ ರಾಷ್ಟ್ರವ್ಯಾಪ್ತಿಯಲ್ಲಿರುವ ಪ್ರಮುಖ ಯೋಜನೆಯಾಗಿದ್ದು, 2019 ರ ವೇಳೆಗೆ ದೇಶವನ್ನು ಬಯಲು ಶೌಚ ಮುಕ್ತವಾಗಿಸುವುದು ಮತ್ತು ಪುರಸಭೆಗಳ ಮಟ್ಟದಲ್ಲಿ ಘನತ್ಯಾಜ್ಯ ನಿರ್ವಹಣೆಯನ್ನು ಮಾಡುವುದು ಘನತ್ಯಾಜ್ಯ ನಿರ್ವಹಣೆಯನ್ನು ವೈಜ್ಞಾನಿಕವಾಗಿ ಸಂಸ್ಕರಣೆ ಮಾಡುವುದರ ಮೂಲಕ ನಗರ ಸ್ಥಳೀಯ ಸಂಸ್ಥೆಗಳನ್ನು ಪ್ರೋತ್ಸಾಹಿಸುವುದು ಇದರ ಉದ್ದೇಶವಾಗಿದೆ.

• **AMRUT :** ATAL MISSION FOR REJUVENTATION AND URBAN TRANSFORMATION 2015 ರಲ್ಲಿ ಅಮೃತ್ ಯೋಜನೆಯು ಜಾರಿಗೆ ಬಂದಿದ್ದು ನಗರ ಪ್ರದೇಶದ ನಾಗರೀಕರುಗಳಿಗೆ ಉತ್ತಮ ಮೂಲ ಸೇವೆಗಳನ್ನು ಒದಗಿಸುವುದು ಮತ್ತು ಮೂಲಭೂತ ಸೌಕರ್ಯಗಳನ್ನು ವಿಸ್ತೃತಗೊಳಿಸುವುದು ಇದರ ಉದ್ದೇಶವಾಗಿದ್ದು ಭಾರತದಲ್ಲಿರುವ ನಗರ ಪ್ರದೇಶಗಳಿಗೆ ನೀರು ಸರಬರಾಜು, ಚರಂಡಿ ವ್ಯವಸ್ಥೆ ಮತ್ತು ಒಳಚರಂಡಿ ವ್ಯವಸ್ಥೆಯನ್ನು ಸುಧಾರಿಸುವುದು ಇದರ ಉದ್ದೇಶವಾಗಿದ್ದು 2021 ರ ವೇಳೆಗೆ ಸಂಪೂರ್ಣಗುರಿಯನ್ನು ಹೊಂದಿದ್ದು, ಈ ಯೋಜನೆಗೆ 50,000 ಕೋಟಿರೂ ವೆಚ್ಚ ಮಾಡಲಾಗಿದೆ.

• **NUSP :** NATIONAL URBAN SANITISATOIN POLICY ರಾಷ್ಟ್ರೀಯ ನಗರ ನೈರ್ಮಲ್ಯ ನೀತಿ ಈ ಯೋಜನೆಯನ್ನು 2008 ರಲ್ಲಿ ಜಾರಿಗೆ ತರಲಾಯಿತು ನಗರದಲ್ಲಿ ವಾಸಿಸುತ್ತಿರುವ ನಗರದ ಬಡವರಿಗೆ ವಿಶೇಷವಾಗಿ ಮಹಿಳೆಯರಿಗೆ ನೈರ್ಮಲ್ಯಕೈಗೆಟುಕುವ ಸೌಲಭ್ಯವನ್ನುಒದಗಿಸಲು ಪರಿಣಾಮಕಾರಿಯಾಗಿ ನಗರ ನೈರ್ಮಲ್ಯ ವ್ಯವಸ್ಥೆಯನ್ನು ಜಾರಿಗೊಳಿಸಲು ಈ ಯೋಜನೆಯನ್ನುಜಾರಿಗೆತರಲಾಯಿತು.

• **PMAY :** PRADHAN MANTHRI AWAZ YOJANA ಪ್ರಧಾನ ಮಂತ್ರಿ ಆವಾಜ್ ಯೋಜನೆಯಲ್ಲಿ ನಗರದಲ್ಲಿ ಎಲ್ಲರಿಗೂ ವಸತಿ ಈ ಯೋಜನೆಯು 2022 ರ ವೇಳೆಗೆ ನಗರ ಪ್ರದೇಶದ ಕೊಳಗೇರಿ ನಿವಾಸಿಗಳಿಗೆ ನಗರ ಪ್ರದೇಶದ ಬಡವರಿಗೆ 20 ಮಿಲಿಯನ್ ವೆಚ್ಚದಲ್ಲಿ ಕೈಗೆಟುಕುವ ಮನೆಯನ್ನು ನೀಡುವ ಯೋಜನೆಯಾಗಿದ್ದು 2015 – ಜೂನ್ –25 ರಂದು ಜಾರಿಗೆ ತರಲಾಯಿತು ಆರ್ಥಿಕವಾಗಿ ದುರ್ಬಲ ವರ್ಗದ ಕಡಿಮೆ ಆದಾಯದ ಗುಂಪುಗಳು ಮತ್ತು ಮಧ್ಯಮ ಆದಾಯದ ಗುಂಪುಗಳನ್ನು ಫಲಾನುಭವಿಗಳೆಂದು ಗುರುತಿಸಿ ನಗರ ಮತ್ತು ಗ್ರಾಮೀಣ ಪ್ರದೇಶಗಳೆರಡನ್ನು ಆಯ್ಕೆ ಮಾಡಿಕೊಂಡಿದೆ.

• **UIDSSMT :** URBAN INFRASTRUCTURE DEVELOPMENT SCHEME FOR SMALL AND MEDIUM TOWNS ಸಣ್ಣ ಮತ್ತು ಮಧ್ಯಮ ಪಟ್ಟಣಗಳಿಗೆ ನಗರ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆ ಈ ಯೋಜನೆಯು ಮಾರ್ಚ್ 2012 ರಲ್ಲಿ ಪ್ರಾರಂಭವಾಗಿದ್ದು ಈ ಯೋಜನೆಯನ್ನು AMRUT ಮತ್ತು JNNRUMಗೆ ಒಳಪಡಿಸಲಾಯಿತು. ಈ ಯೋಜನೆಯ ಪ್ರಕಾರ ನಗರ ಮೂಲ ಸೌಕರ್ಯಗಳನ್ನು ಸುಧಾರಿಸುವುದು ಘನತ್ಯಾಜ್ಯ ನಿರ್ವಹಣೆ, ನೀರು ಸರಬರಾಜು, ನಗರ ನವೀಕರಣ ಮುಂತಾದವುಗಳಿಗೆ ಮೂಲ ಸೌಕರ್ಯ ಅಭಿವೃದ್ಧಿಗೆ ಸಾರ್ವಜನಿಕ ಖಾಸಗಿ ಸಹಭಾಗಿತ್ವವನ್ನು ಹೆಚ್ಚಿಸುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ.

ಈ ಮೇಲಿನ ಎಲ್ಲಾ ಯೋಜನೆಗಳನ್ನು ನಗರಾಭಿವೃದ್ಧಿಯನ್ನು ಸಾಧಿಸಲು ಸರ್ಕಾರಗಳು ನಗರ ಪ್ರದೇಶದಲ್ಲಿ ಅಭಿವೃದ್ಧಿಯನ್ನು ಸಾಧಿಸಲು ಹಾಕಿಕೊಂಡು ಸಾವಿರಾರು ಕೋಟಿ ರೂಪಾಯಿ ವೆಚ್ಚವನ್ನು ಮಾಡಿದ್ದರೂ ಕೂಡ ಸಂಪೂರ್ಣವಾಗಿ ಯಶಸ್ಸು ಸಾಧ್ಯವಾಗಿಲ್ಲ ಕಾರಣ ದಿನದಿಂದ ದಿನಕ್ಕೆ ನಗರ ಪ್ರದೇಶದ ಸಮಸ್ಯೆಗಳು ಹೆಚ್ಚುತ್ತಲೇ ಬರುತ್ತಿದ್ದು ಸಂಪೂರ್ಣವಾಗಿ ಯೋಜನೆಗಳನ್ನು ಹಾಕಿಕೊಂಡ ಗುರಿಯನ್ನು ತಲುಪಲು ಸಾಧ್ಯವಾಗಿಲ್ಲ.

### ನಗರ ಸ್ಥಳೀಯ ಸಂಸ್ಥೆಗಳ ನಗರ ಪ್ರದೇಶದಚರಂಡಿ ವ್ಯವಸ್ಥೆ.

ನಗರ ಸ್ಥಳೀಯ ಸಂಸ್ಥೆಗಳು ಒದಗಿಸುವ ಸೇವೆಗಳಲ್ಲಿ ಚರಂಡಿ ವ್ಯವಸ್ಥೆಯು ಒಂದಾಗಿದ್ದು ನಗರ ಪ್ರದೇಶದ ವ್ಯಾಪ್ತಿಗೆ ಬರುವಎಲ್ಲಾ ವಾರ್ಡುಗಳ ಚರಂಡಿ ವ್ಯವಸ್ಥೆಯನ್ನು ನಿರ್ಮಾಣ ಮಾಡುವುದು ಮತ್ತು ಅವುಗಳ ನಿರ್ವಹಣೆ ಸಂಪೂರ್ಣವಾಗಿ ಪುರಸಭೆಯದ್ದೆ ಆಗಿರುತ್ತದೆ. ನಗರ ಸ್ಥಳೀಯ ಸಂಸ್ಥೆಗಳ ಚರಂಡಿ ವ್ಯವಸ್ಥೆಗೆ ಈ ಮೇಲಿನ ಕಾರ್ಯಗಳನ್ನು ನಿರ್ವಹಣೆಯನ್ನು ನಗರ ಸಮೀಕ್ಷೆಯ ಮೂಲಕ ಕೈಗೊಳ್ಳಲಾಗಿದ್ದು ಹಣಕಾಸು ಸಾಮರ್ಥ್ಯ ನಗರಗಳ ಚರಂಡಿ ವ್ಯವಸ್ಥೆಯ ಮೇಲೆ ಕಡಿಮೆ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಇದೆ ಎಂದು ಹೇಳಬಹುದು. ಚರಂಡಿ ವ್ಯವಸ್ಥೆಯನ್ನು ಸಮೀಕ್ಷೆ ಮಾಡಿದಾಗ ಕೆಲವು ಪ್ರದೇಶಗಳಲ್ಲಿ ಚರಂಡಿ ವ್ಯವಸ್ಥೆಉತ್ತಮವಾಗಿದ್ದು ಮತ್ತೆ ಕೆಲವು ಪ್ರದೇಶಗಳಲ್ಲಿ ಚರಂಡಿ ವ್ಯವಸ್ಥೆ ಸಮರ್ಪಕವಾಗಿ ನಿರ್ವಹಿಸದೆ ಇರುವುದು ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯವಾಗಿಲ್ಲ ನಗರದ ಪ್ರದೇಶದಲ್ಲಿ ಬಹುತೇಕ ಚರಂಡಿಗಳು ಕಾಂಕ್ರೀಟ್ ಅಥವಾ ಸಿಮೆಂಟ್ ಆಧಾರಿತ ಬಾಕ್ಸ್‌ಚರಂಡಿಗಳು ನಿರ್ಮಾಣವಾಗಿಲ್ಲ ಪುರಸಭೆಗಳ ನಿಯಮಗಳಂತೆ ಪ್ರತೀ ನಗರದಲ್ಲಿಯೂ ಸಿಮೆಂಟ್ ಆಧಾರಿತ ಬಾಕ್ಸ್ ಚರಂಡಿಗಳನ್ನು ನಿರ್ಮಾಣ ಮಾಡಬೇಕು ಎಂಬ ನಿಯಮವಿದೆ. ನಗರ ಪ್ರದೇಶದ ಕೆಲವು ಚರಂಡಿಗಳು ಬಾಕ್ಸ್ ಚರಂಡಿಗಳಾಗಿಲ್ಲ ಇದನ್ನು ಛಾಯಾಚಿತ್ರ 1.1 ನೋಡಬಹುದಾಗಿರುತ್ತದೆ ಮತ್ತೆ ಕೆಲವು ಪ್ರದೇಶಗಳಲ್ಲಿ ಬಾಕ್ಸ್ ಚರಂಡಿಗಳು ನಿರ್ಮಾಣಗೊಂಡಿದ್ದರೂ ಚರಂಡಿಗಳು ಒಡೆದು ಹೋದ ಸ್ಥಿತಿಯಲ್ಲಿದೆ ಇದಕ್ಕೆ ಕಳಪೆ ಕಾಮಗಾರಿ ಅಥವಾ ಚರಂಡಿಯ ಮೇಲೆ ವೆಚ್ಚ ಮಾಡುವಲ್ಲಿ ಪುರಸಭೆಗಳು ತಮ್ಮದೆ ಆದ ಕೊರತೆಯನ್ನು ಅನುಭವಿಸುತ್ತಿರುವುದು ಕಂಡು ಬಂದಿದೆ ಅಲ್ಲದೆ ಕಾಂಕ್ರೀಟ್ ಚರಂಡಿ ನಿರ್ಮಾಣ ಮಾಡುವಲ್ಲಿ ಗುತ್ತಿಗೆದಾರರು ಕಳಪೆ ಗುಣಮಟ್ಟದ ಕಾರ್ಯ ನಿರ್ವಹಿಸಿರುವುದನ್ನು ನೋಡಬಹುದಾಗಿದೆ. ಹೀಗೆ ನಿರ್ಮಾಣವಾದ ಕಾಂಕ್ರೀಟ್ ಚರಂಡಿಯ ನೀರು ಒಡೆದು ಹೊರ ಹೋಗುತ್ತಿರುವುದರಿಂದ ಮತ್ತು ಕೆಲವು ಚರಂಡಿಗಳ ನೀರು ರಸ್ತೆ ಮತ್ತು ವಾಸಿಸುವ ಸ್ಥಳಗಳಿಗೆ ಬಂದು ಸೇರುತ್ತಿರುವುದನ್ನು ನೋಡಬಹುದಾಗಿರುತ್ತದೆ. ಕೆಲವು ಚರಂಡಿಗಳ ಮತ್ತು ರಸ್ತೆಯನ್ನು ಜೋಡಿಸುವ ಸಿಮೆಂಟ್ ಆಧಾರಿತ ಮೇಲ್ಛಾವಣಿಗಳಲ್ಲಿ ದೊಡ್ಡ ರಂಧ್ರಗಳಾಗಿದ್ದು ಕಳಪೆ ಕಾಮಗಾರಿಗೆ ಸಾಕ್ಷಿಯಾಗಿದೆ. ಕೆಲವು ಚರಂಡಿ ವ್ಯವಸ್ಥೆಯು ಒಳಚರಂಡಿಗಳಾಗಿದ್ದು ಒಳಚರಂಡಿಯು ನೀರು ರಸ್ತೆಗೆ ಬಂದು ಸೇರುತ್ತಿರುವುದನ್ನು



ಛಾಯಾಚಿತ್ರ 1.1. ಮೂಲ : ಕ್ಷೇತ್ರ ಕಾರ್ಯ

ನೋಡಬಹುದಾಗಿರುತ್ತದೆ. ಇದರಿಂದ ವಾಸಿಸುವ ಪ್ರದೇಶಗಳಲ್ಲಿ ಸೊಳ್ಳೆಗಳ ಸೃಷ್ಟಿಯಾಗಲು ಮತ್ತು ಅನೇಕ ರೋಗಗಳು ಸೃಷ್ಟಿಯಾಗುವುದರ ಜೊತೆಗೆ ಕೊಳಚೆ ಪ್ರದೇಶ ನಿರ್ಮಾಣವಾಗಿ ಕೆಟ್ಟ ವಾಸನೆಯನ್ನು ಸೃಷ್ಟಿಸಿದೆ ಮತ್ತೆ ಕೆಲವು ಚರಂಡಿಗಳಲ್ಲಿ ಅತಿಯಾದ ಕಸ ತುಂಬಿಕೊಂಡಿದ್ದು ಅತಿ ಕಸ ಚರಂಡಿಗಳಲ್ಲಿ ಶೇಖರವಾಗಲು ಕಾರಣಗಳನ್ನು ನೋಡಿದಾಗ ನಗರದಲ್ಲಿ ವಾಸಿಸುವ ಜನರು ನೇರವಾಗಿ ಕಸವನ್ನು ಚರಂಡಿಗೆ ಹಾಕುವುದು ಒಂದು ಕಡೆಯಾದರೆ ಮತ್ತೊಂದು ಕಡೆ ಚರಂಡಿಯನ್ನು ಶುಚಿ ಮಾಡುವ ಕಾರ್ಯದಲ್ಲಿ ಪುರಸಭೆಯ ವೈಫಲ್ಯ ಎದ್ದುತೋರುತ್ತದೆ. ಚರಂಡಿ ಶುಚಿ ಮಾಡುವ ಪೌರಕಾರ್ಮಿಕರ ಕೊರತೆಕಂಡು ಬಂದಿದೆ ಹೀಗೆ ಪ್ರಸ್ತುತ ಚರಂಡಿ ನಿರ್ಮಾಣ ಮತ್ತು ನಿರ್ವಹಣೆಯಲ್ಲಿ ತಮ್ಮದೆ ಆದ ವೈಫಲ್ಯವನ್ನು ಒಳಗೊಂಡಿದ್ದು ಇಂತಹ ಚರಂಡಿ ವ್ಯವಸ್ಥೆಯಿಂದ ಚರಂಡಿಯ ನೀರು ಮಳೆಗಾಲದಲ್ಲಿ ರಸ್ತೆ ಮತ್ತು ವಾಸಿಸುವ ಪ್ರದೇಶಗಳಿಗೆ ಬರುವುದರಿಂದ ಅನೇಕ ರೋಗಗಳು ಮತ್ತು ನಗರದ ವ್ಯವಸ್ಥೆಯ ಮೇಲೆ ದುಷ್ಪರಿಣಾಮವನ್ನು ಉಂಟುಮಾಡಿದ್ದು ಅಭಿವೃದ್ಧಿಯನ್ನು ಸಾಧಿಸಲು ಎರಡೂ ಪುರಸಭೆಗಳು ತಮ್ಮದೆ ಆದ ವೈಫಲ್ಯವನ್ನು ಒಳಗೊಂಡಿದೆ.

**ನಗರ ಸ್ಥಳೀಯ ಸಂಸ್ಥೆಗಳ ನಗರ ಪ್ರದೇಶದ ಘನ ತ್ಯಾಜ್ಯ ನಿರ್ವಹಣೆ.**

ಘನತ್ಯಾಜ್ಯ ನಿರ್ವಹಣೆಯು ನಗರ ಸ್ಥಳೀಯ ಸಂಸ್ಥೆಗಳು ಕಡ್ಡಾಯವಾಗಿ ನಿರ್ವಹಣೆ ಮಾಡಬೇಕಾದ ಒಂದು ಪ್ರಮುಖ ಕೆಲಸವಾಗಿದ್ದು ಬಳಸಿ ಬೇಡವಾದಂತಹ ತ್ಯಾಜ್ಯವನ್ನು ಸಂಗ್ರಹಣೆ ಮಾಡಿ ಅದನ್ನು ಪುರಸಭೆಗಳ ವಾಹನಗಳಾದ ಟ್ರಕ್, ಟ್ರ್ಯಾಕ್ಟರ್ ಮುಂತಾದವುಗಳಲ್ಲಿ ಹಾಕಬೇಕಾಗಿದ್ದು ಇದಕ್ಕೆ ಅನೇಕ ನ್ಯಾಯಾಲಯದ ಆದೇಶ ಮಾಡಿದೆ ಆದರೆ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ನಗರೀಕರಣದಿಂದ ತ್ಯಾಜ್ಯವು ಹೆಚ್ಚಾಗುತ್ತಿದ್ದು ಇದರ ಪರಿಣಾಮವಾಗಿ ಪರಿಸರ ಮಾಲಿನ್ಯ, ವಿಂಗಡಣೆಯಾಗದ ಕಸ ಮುಂತಾದ ಪ್ರಕ್ರಿಯೆಗಳಿಂದಾಗಿ ಗಂಭೀರ ಪರಿಣಾಮವನ್ನು ನಗರಗಳ ಮೇಲೆ ಉಂಟುಮಾಡಿ ರಾಜ್ಯ ಘನತ್ಯಾಜ್ಯ ನಿರ್ವಹಣೆ ನೀತಿ ನಿಯಮ 2000–01 ರಂತೆ ಕಸವನ್ನು ವೈಜ್ಞಾನಿಕವಾಗಿ ಸಂಗ್ರಹಣೆ ಮಾಡಿ ವೈಜ್ಞಾನಿಕವಾಗಿ ವಿಲೇವಾರಿ ಮಾಡಬೇಕು ಎಂಬ ನಿಯಮವಿದ್ದು ಆದರೆ ಇದನ್ನು ಸಮರ್ಪಕವಾಗಿ ಕೆಲವು ನಗರ ಸ್ಥಳೀಯ ಸಂಸ್ಥೆಗಳು ನಿರ್ವಹಿಸಿಲ್ಲ. ಕಾರಣ ಕಸವನ್ನು ಸಂಗ್ರಹಿಸಲು ಅಗತ್ಯವಾದಂತಹ ಬೃಹತ್ ಪ್ರಮಾಣದ ಹಣಕಾಸನ್ನು ಹೆಚ್ಚಿಸುವ ಅಗತ್ಯತೆ ಇದೆ ಅಂದರೆ ತ್ಯಾಜ್ಯವನ್ನು ಸಂಗ್ರಹಿಸಲು ಸಿಬ್ಬಂದಿಯ ಕೊರತೆ ತ್ಯಾಜ್ಯವನ್ನು ಸಂಗ್ರಹಿಸುವ ಪ್ರದೇಶ ತ್ಯಾಜ್ಯವನ್ನು ಸಾಗಿಸಲು ಸಾಕಷ್ಟು ವಾಹನಗಳ ಕೊರತೆ ನಗರ ಸ್ಥಳೀಯ ಸಂಸ್ಥೆಗಳಲ್ಲಿ ವ್ಯವಸ್ಥೆ ಇಲ್ಲದಿರುವುದು ತ್ಯಾಜ್ಯವನ್ನು ಸಮರ್ಪಕವಾಗಿ ನಿರ್ವಹಣೆ ಮಾಡಲು ಸಾಧ್ಯವಾಗುತ್ತಿಲ್ಲ. ನಗರಗಳ ಸಮೀಕ್ಷೆಯನ್ನು ಮಾಡಿದಾಗ ಕೆಲವು ವಾರ್ಡುಗಳಲ್ಲಿ ತ್ಯಾಜ್ಯ ನಿರ್ವಹಣೆಗಾಗಿ ಸಮರ್ಪಕವಾಗಿ ನಡೆದಿಲ್ಲ ಅಲ್ಲದೆ ಇದರಿಂದ ಜನರು ತ್ಯಾಜ್ಯವನ್ನು ಜವಾಬ್ದಾರಿಯಿಂದ ಪುರಸಭೆಗಳು ನೇಮಿಸಿದ ವಾಹನಗಳಲ್ಲಿ ವಿಲೇವರಿ ಮಾಡಲಾಗುತ್ತಿಲ್ಲ ಇದನ್ನು ಛಾಯಾಚಿತ್ರ 1.2. ನೋಡಿದಾಗ ವಾಣಿಜ್ಯ ಪ್ರದೇಶಗಳಲ್ಲಿ ತ್ಯಾಜ್ಯವನ್ನು ನೇರವಾಗಿ ಅಕ್ಕಪಕ್ಕದಲ್ಲಿ ಖಾಲಿ ಇರುವ ಭಾಗಗಳಲ್ಲಿ ತಂದು ಸುರಿಯುತ್ತಿರುವ ಪ್ರವೃತ್ತಿ ಬೆಳೆದು ಬಂದಿದ್ದು ರಸ್ತೆಯ ಅಕ್ಕಪಕ್ಕದ ಜಾಗಗಳಿಗೆ ನೇರವಾಗಿತಂದು ಸುರಿಯುವ ಜನರ ಮನೋ ಪ್ರವೃತ್ತಿ ಜನರ ನಿರ್ಲಕ್ಷ್ಯ ಎದ್ದು ತೋರುತ್ತದೆ ಇದರಿಂದಾಗಿ ನಗರದಲ್ಲಿ ವಾಸ ಮಾಡುವ ಪ್ರದೇಶಗಳಲ್ಲಿ ಕಲುಷಿತ ಪರಿಸರ, ವಾಸನೆ, ಮಣ್ಣಿನ ಫಲವತ್ತತೆಯ ಮೇಲೆ ದುಷ್ಪರಿಣಾಮವನ್ನು ಬೀರಲು ಕಾರಣವಾಗಿದೆ ಅಲ್ಲದೆ ಪುರಸಭೆಗಳು ಸಮರ್ಪಕವಾಗಿ ನಿಗಧಿತ ಸಮಯಕ್ಕೆ ತ್ಯಾಜ್ಯವನ್ನು ವಿಲೇವಾರಿ ಮಾಡದೇ ಹೋದಾಗ ನಾಗರೀಕರು ತಮ್ಮ ಬಳಿ ಹೆಚ್ಚಾದಂತಹ ಕಸವನ್ನು ರಸ್ತೆಗಳ ಅಕ್ಕಪಕ್ಕದ ಖಾಲಿ ಉಳಿದ ಭಾಗಗಳಿಗೆ ಸುರಿಯುವ ಪ್ರವೃತ್ತಿ ಬೆಳೆದುಬಂದಿದೆ. ಪುರಸಭೆಗಳ ತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಸೇವೆಯನ್ನು ನೀಡಲು ಇರುವ ತೊಡಕುಗಳನ್ನು ನೋಡಿದಾಗ ಪೌರಕಾರ್ಮಿಕರ ಸೇವೆ ಕಾರ್ಯಾಚರಣೆ ಮತ್ತು ಕಾರ್ಯ ನಿರ್ವಹಣೆಗೆ ಅಗತ್ಯವಾದ ಸಲಕರಣೆಗಳು ಇಲ್ಲದಿರುವುದು ಕಾರ್ಯಾಚರಣೆ ಮತ್ತು ಕಾರ್ಯ ಪಾಲನೆಗೆ ವೆಚ್ಚವನ್ನು ಪುರಸಭೆಗಳು ಸಮರ್ಪಕವಾಗಿ ಸರಿದೂಗಿಸದೆ ಇರುವುದು ಕಂಡು ಬಂದಿದೆ ಹೊರಗುತ್ತಿಗೆಯ ಕೆಲಸಗಾರರು ಅಸಹಾಕಾರ ತೋರುವುದು ಸ್ಪಷ್ಟವಾಗಿದೆ ಅಲ್ಲದೇ ರಸ್ತೆ ಬದಿಯ ಚರಂಡಿಗಳ ಕಸ ನಿವಾರಣೆಯು ಸಾರ್ವಜನಿಕರಲ್ಲಿ ತ್ಯಾಜ್ಯದಿಂದ ಉಂಟಾಗುವ ಸಮಸ್ಯೆಗಳಿಗೆ ಕಾನೂನು ದಂಡದ ಬಗ್ಗೆ ಮಾಹಿತಿ ಇಲ್ಲದಿರುವುದು ಕಂಡು ಬಂದಿದೆ. ತ್ಯಾಜ್ಯ ನಿರ್ವಾಹಣ ಸೂತ್ರ “RRR” REDUCE -

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

REUSE - RECYCLE ನೀರಿಕ್ಷಿಸಿದ ಮಟ್ಟದಲ್ಲಿ ಸಾಧಿಸಲು ಸಾಧ್ಯವಾಗಿಲ್ಲ ಎರಡು ಪುರಸಭೆಗಳ ತ್ಯಾಜ್ಯ ನಿರ್ವಹಣೆ ನೋಡಿದಾಗ ಅವುಗಳ ಮೂಲದಲ್ಲಿಯೇ ಕೆಲವು ಸಮಸ್ಯೆಗಳಿದ್ದು ಈ ಸಮಸ್ಯೆಗಳನ್ನು ಬಗೆಹರಿಸಲು ದೊಡ್ಡ ಪ್ರಮಾಣದ ಹಣ ಕಾಸಿನ ಹೂಡಿಕೆಯು ಅಗತ್ಯವಾಗಿದೆ.




ಛಾಯಾಚಿತ್ರ 1.2. ಮೂಲ : ಕ್ಷೇತ್ರ ಕಾರ್ಯ

## ನಗರ ಸ್ಥಳೀಯ ಸಂಸ್ಥೆಗಳ ನಗರ ಪ್ರದೇಶದ ರಸ್ತೆ ವ್ಯವಸ್ಥೆ.

ನಗರ ವ್ಯಾಪ್ತಿಯಲ್ಲಿ ಪುರಸಭೆಗಳು ಕೆಲವು ವಾರ್ಡ್‌ಗಳ ರಸ್ತೆ ವ್ಯವಸ್ಥೆಯನ್ನು ನಿರ್ವಹಿಸುವ ಜವಾಬ್ದಾರಿಯನ್ನು ಹೊತ್ತುಕೊಂಡಿವೆ ನಗರ ಪ್ರದೇಶದ ರಸ್ತೆಗಳು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಸಂಪರ್ಕ ಕಲ್ಪಿಸಲು ಸಹಕಾರಿಯಾಗಿದೆ ಅಲ್ಲದೇ ವಾಹನಗಳು ಮತ್ತು ನಾಗರೀಕರುಗಳು ಸಂಚರಿಸಲು ಸಹಕಾರಿಯಾಗಿದೆ ಒಂದು ನಗರದ ಆರ್ಥಿಕ ಚಟುವಟಿಕೆಯನ್ನು ಹೆಚ್ಚಿಸಲು ಉತ್ತಮ ರಸ್ತೆಗಳು ತಮ್ಮದೇ ಆದ ಪಾತ್ರವನ್ನು ನಿರ್ವಹಿಸುತ್ತವೆ. ನಗರ ವ್ಯಾಪ್ತಿಯಲ್ಲಿರುವ ನಗರ ಪ್ರದೇಶದ ರಸ್ತೆಗಳನ್ನು ಸಮೀಕ್ಷೆ ಮಾಡಿದಾಗ ಕೆಲವು ವಾರ್ಡ್‌ಗಳ ರಸ್ತೆಗಳು ಉತ್ತಮವಾಗಿದ್ದು ಮತ್ತೇ ಕೆಲವು ವಾರ್ಡ್‌ಗಳ ರಸ್ತೆಗಳು ಸಂಪೂರ್ಣವಾಗಿ ಮಣ್ಣಿನ ರಸ್ತೆಗಳೇ ಮುಂದುವರೆದಿದ್ದು ಮತ್ತೆ ಕೆಲವು ವಾರ್ಡ್‌ಗಳಲ್ಲಿ ರಸ್ತೆಗಳು ಡಾಂಬಾರೀಕರಣದಿಂದ ನಿರ್ಮಾಣಗೊಂಡು ನಶಿಸಿಹೋಗುವ ಹಂತದಲ್ಲಿವೆ. ಡಾಂಬರ್ ಆಧಾರಿತ ರಸ್ತೆಯು ನಿರ್ಮಾಣಗೊಂಡು ನಾಶವಾಗುವ ಹಂತವನ್ನುತಲುಪಿವೆ. ಡಾಂಬರ್ ರಸ್ತೆಗಳು ಬೇಗ ಹಾಳಾಗಲು ಕಾರಣಗಳನ್ನು ನೋಡಿದಾಗ ಕಳಪೆ ಗುಣಮಟ್ಟದ ಕಾಮಗಾರಿಯ ಒಂದು ಕಡೆಯಾದರೆ ತುಂಬಾ ಹಳೆಯದಾದ ರಸ್ತೆಗಳ ಮೇಲೆ ಪದೇ ಪದೇ ಹಣ ಹೂಡಿಯನ್ನು ಮಾಡುವ ಸಾಮರ್ಥ್ಯ ಪುರಸಭೆಗಳಿಗೆ ಕಡಿಮೆ ಇರುವುದು ತಿಳಿದು ಬಂದಿದೆ ಅಲ್ಲದೇ ರಸ್ತೆಕಾಮಗಾರಿ ನಡೆಸುವ ಗುತ್ತಿಗೆದಾರರು ಕಳಪೆ ಗುಣಮಟ್ಟದ ಡಾಂಬರ್ ಬಳಸಿರುವುದನ್ನು ನೋಡಬಹುದಾಗಿದೆ. ರಸ್ತೆ ನಿರ್ಮಾಣದ ಹೆಸರಿನಲ್ಲಿ ಗುತ್ತಿಗೆದಾರರ ಭ್ರಷ್ಟಾಚಾರ ಕಂಡುಬಂದಿದೆ. ಕೆಲವು ಪ್ರದೇಶದಲ್ಲಿ ರಸ್ತೆಯು ನಿರ್ಮಾಣವಾಗದೆ ಮಣ್ಣಿನ ರಸ್ತೆಗಳೇ ಮುಂದುವರೆದುಕೊಂಡು ಬಂದಿದೆ. ಅಂದರೇ ಪುರಸಭಾ ವ್ಯಾಪ್ತಿಯಲ್ಲಿರುವ ರಸ್ತೆಗಳನ್ನು ಡಾಂಬರ್ ಮತ್ತು ಅಸ್ಫಾಲ್ಟ್ ಆಧಾರದಲ್ಲಿ ನಿರ್ಮಾಣ ಮಾಡಬೇಕು ಎಂಬ ನಿಯಮವಿದ್ದು ರಸ್ತೆಗಳ ನಿರ್ಮಾಣಕ್ಕೆ ಭಾರೀ ಪ್ರಮಾಣದ ಹೂಡಿಕೆ ಪುರಸಭೆಗಳ ಬಳಿ ಇಲ್ಲದಿರುವುದು ಕಂಡು ಬರುತ್ತದೆ ಈ ವಿಷಯದಲ್ಲಿ ಎರಡು ಪುರಸಭೆಗಳು ಸಮರ್ಪಕವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗಿಲ್ಲ ಕಾರಣ ರಸ್ತೆಗಳನ್ನು ನಿರ್ಮಿಸಲು ಸಕಾಲಕ್ಕೆ ಸರಿಯಾಗಿ ಅನುದಾನ ದೊರೆಯದೇ ಇರುವುದು ಗುತ್ತಿಗೆ ದಾರರನ್ನು ಕರೆಯುವುದರಲ್ಲಿ ವಿಳಂಬ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸದೆ ಇರುವುದು ಕಾರಣವಾಗಿದ್ದು ಮಣ್ಣಿನ ರಸ್ತೆಗಳಿಂದ ರಸ್ತೆಗಳ ಮೇಲೆ ವಾಹನಗಳು ಚಲಿಸಿದಾಗ ವಾಸ ಸ್ಥಳಗಳಿಗೆ ಧೂಳು ಉಂಟಾಗುವುದು ಪರಿಸರಕ್ಕೆ ಹಾನಿಯನ್ನುಂಟು ಮಾಡುವುದು ಮತ್ತು ವಾಯುಮಾಲಿನ್ಯಕ್ಕೆ ಕಾರಣವಾಗುವುದು ಕಂಡುಬಂದಿದೆ ಮತ್ತು ಕೆಲವು ರಸ್ತೆಗಳು ಪ್ರದೇಶದಲ್ಲಿ ದೊಡ್ಡ ರಂಧ್ರಗಳಾದ ಪರಿಣಾಮವಾಗಿ ಮಳೆಗಾಲದಲ್ಲಿ ರಸ್ತೆಗಳಲ್ಲಿಯೇ ನೀರು ರಂಧ್ರಗಳಲ್ಲಿ ಸಂಗ್ರಹವಾಗಿ ಇದರ ಪರಿಣಾಮ ವಾಹನಗಳು ಚಲಾಯಿಸುವುದು ಕಷ್ಟಕರವಾದುದಲ್ಲದೇ ಸಾರ್ವಜನಿಕರು ಒಂದು ಕಡೆಯಿಂದ ಮತ್ತೊಂದು ಕಡೆಗೆ ಚಲಿಸಲು ತೊಡಕು ನಗರ ಪ್ರದೇಶದ ರಸ್ತೆಗಳು ಸಮರ್ಪಕವಾಗಿ ನಿರ್ವಹಿಸಲು ಪುರಸಭೆಗಳ ಬಳಿ ಸಾಕಷ್ಟು ಪ್ರಮಾಣದ ಹಣದ ಹೂಡಿಕೆಯು ಕಡಿಮೆ ಇದೆ ಎಂದು ಅಭಿವೃದ್ಧಿಗೆ ತೊಡಕು ಉಂಟುಮಾಡಿದೆ.





## ನಗರ ಸ್ಥಳೀಯ ಸಂಸ್ಥೆಗಳ ನಗರ ಪ್ರದೇಶದ ನೀರು ಸರಬರಾಜು ವ್ಯವಸ್ಥೆ

ನಗರ ಸ್ಥಳೀಯ ಸಂಸ್ಥೆಗಳು ನಗರ ಪ್ರದೇಶದಲ್ಲಿ ವಾಸಿಸುತ್ತಿರುವ ಜನರಿಗೆ ನೀರು ಪೂರೈಸುವುದು ಒಂದು ಪ್ರಮುಖ ಕರ್ತವ್ಯವಾಗಿದ್ದು ನಗರ ಪ್ರದೇಶಕ್ಕೆ ಆಣೆಕಟ್ಟಿನಿಂದ ನೀರನ್ನು ಪೂರೈಸಿದರು ಸಮಸ್ಯೆಗಳಿಂದ ಮುಕ್ತವಾಗಿಲ್ಲ ಪುರಸಭೆಗಳ ವ್ಯಾಪ್ತಿಯ ಎಲ್ಲಾ ಪ್ರದೇಶಗಳಿಗೂ ಕೊಳಾಯಿಗಳ ಮೂಲಕ ನೀರು ಸರಬರಾಜು ಮಾಡುತ್ತಿದ್ದು ನೆಲ್ಲಿ ಸಂಪರ್ಕಗಳಿಗೆ ಮೀಟರ್ ಮಾಪನಗಳನ್ನು ಅಳವಡಿಸದೇ ಇರುವುದು ನೀರಿನ ಸರಬರಾಜುಕಾರು ವಕ್ಕಾಗಿ ಲೆಕ್ಕಕ್ಕೆ ಸಿಗದೇ ನೀರು ಬಳಕೆದಾರರು ಎಷ್ಟು ಪ್ರಮಾಣದ ನೀರನ್ನು ಬಳಸುತ್ತಿದಾರೆ ಎಂಬುದು ಲೆಕ್ಕಕ್ಕೆ ಸಿಗದೇ ಹಣಕಾಸಿನ ನಷ್ಟವನ್ನು ಉಂಟುಮಾಡಿದ್ದು ಮೀಟರ್ ಮಾಪನಗಳನ್ನು ಅಳವಡಿಸದಿರುವ ನೆಲ್ಲಿ ಸಂಪರ್ಕಗಳ ಛಾಯಚಿತ್ರ ಮಾದರಿಗಳನ್ನು 1.4. ನೋಡಬಹುದಾಗಿರುತ್ತದೆ ನೀರಿನ ಶುಲ್ಕಗಳ ವಸೂಲಾತಿಯೂ ಹಳೆಯ ಸಂಪ್ರದಾಯ ಬದ್ಧ ನೆಲ್ಲಿಕಂದಾಯವಾಗಿದ್ದು ಮೀಟರ್ ಮಾಪನಕ್ಕೂ ನೆಲ್ಲಿಕಂದಾಯಕ್ಕೂ ವ್ಯತ್ಯಾಸಗಳಿವೆ ಮೀಟರ್ ಮಾಪನಗಳನ್ನು ಅಳವಡಿಸುವುದರಿಂದ ಪುರಸಭೆಗಳ ಹಣಕಾಸು ಆದಾಯವನ್ನು ಹೆಚ್ಚಿಸಬಹುದಾಗಿದ್ದು ಇದ್ದಕ್ಕೆ ಇರುವ ಮತ್ತೊಂದು ತೊಡಕೆಂದರೆ ಮೀಟರ್‌ಗಳನ್ನು ಅಳವಡಿಸಲು ಭಾರೀ ದೊಡ್ಡಗಾತ್ರದ ಹೂಡಿಕೆಯು ಮಾಡಬೇಕಾಗುತ್ತದೆ ಎರಡೂ ನಗರಗಳಲ್ಲಿರುವ ನಾಗರೀಕರುಗಳನ್ನು ಸಂದರ್ಶನಕ್ಕೊಳಪಡಿಸಿದಾಗ ನೀರಿನ ಸರಬರಾಜಿಗೆ ಸಂಬಂಧಿಸಿದ ಹಾಗೆ ಅನೇಕ ದೂರುಗಳು ಕೇಳಿಬಂದಿವೆ ಅಂತಹುಗಳೇಂದರೆ ಕೆಲವು ಪ್ರದೇಶಗಳಲ್ಲಿ ಸಮರ್ಪಕವಾಗಿ ಸಮಯಕ್ಕೆ ಸರಿಯಾಗಿ ನೀರು ಸರಬರಾಜು ಆಗದಿರುವುದು ವಾರದಲ್ಲಿ ಒಂದು ದಿನ ಮಾತ್ರ ನೀರನ್ನು ಸರಬರಾಜು ಮಾಡುತ್ತಿರುವುದು ರಾತ್ರಿಯ ವೇಳೆಯಲ್ಲಿ ನೀರು ಸರಬರಾಜು ಮಾಡುವುದು ಮುಂತಾದ ವೈಫಲ್ಯಗಳು ಪುರಸಭೆಗಳ ನೀರು ಸರಬರಾಜು ನಿರ್ವಹಣೆಯು ಸರಿಯಾಗಿ ನಿರ್ವಹಿಸದೇ ಇರುವುದು ಕಂಡು ಬಂದಿದೆ.

*– 55ನೇ ಪುಟಕ್ಕೆ ಮುಂದುವರೆದುದು*

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಕೋವಿಡ್ ಲಾಕ್ಡೌನ್ ಕಾರಣದಿಂದ ಸ್ಥಗಿತಗೊಂಡ ಆಚರಣೆಗಳ ಪರಿಣಾಮದ ವಿಶ್ಲೇಷಣೆ

**(ಕೀ ವರ್ಡ್ಸ್ : ಕೋವಿಡ್ – 19, ಸಾಂಸ್ಕೃತಿಕ, ಆಚರಣೆಗಳು)**

✍ **ಡಾ. ರೋಹಿಣಾಕ್ಷ ಶಿರ್ಲಾಲು,** ಸಹಾಯಕ ಪ್ರಾಧ್ಯಾಪಕರು, ಜಾನಪದ ಶಾಸ್ತ್ರ ಮತ್ತು ಬುಡಕಟ್ಟು ಅಧ್ಯಯನ ವಿಭಾಗ,
ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಲಬುರ್ಗಿ

## ಪ್ರಸ್ತಾವನೆ

ಕೋವಿಡ್–19 ಹರಡುವುದನ್ನು ತಡೆಗಟ್ಟಲು ವಿಧಿಸಲಾದ ಲಾಕ್ಡೌನ್ ಜನರ ಸಾಮಾಜಿಕ ಜೀವನದ ಮೇಲೆ ಅದರಲ್ಲಿಯೂ ಮುಖ್ಯವಾಗಿ ಧಾರ್ಮಿಕ ಮತ್ತು ಸಾಂಸ್ಕೃತಿಕ ಆಚರಣೆಗಳ ಮೇಲೆಯೂ ವ್ಯತಿರಿಕ್ತ ಪರಿಣಾಮವನ್ನುಂಟು ಮಾಡಿದೆ. ಜೊತೆಗೆ ಇದೇ ಆಚರಣೆಗಳನ್ನ ನಂಬಿಕೊಂಡ ಅದೆಷ್ಟೋ ಕುಟುಂಬಗಳ ಜನರ ಜೀವನ ನಿರ್ವಹಣೆಗೆ ಪ್ರತಿಕೂಲವಾಗಿ ಪರಿಣಮಿಸಿತು. ಈ ಆಚರಣೆಗಳ ಜೊತೆಗೇ ಸಾಗುವ ಅರ್ಥ ವ್ಯವಸ್ಥೆಯೂ ಸ್ಥಗಿತಗೊಂಡು ಮನುಷ್ಯನ ಜೀವನದ ಗತಿಯನ್ನೇ ಬದಲಿಸಿತು.ಪ್ರಸ್ತುತ ಈ ಲೇಖನದಲ್ಲಿ ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಲಾಕ್ಡೌನ್‌ನಿಂದಾಗಿ ಧಾರ್ಮಿಕ ಹಾಗು ಸಾಂಸ್ಕೃತಿಕ ಕ್ಷೇತ್ರಗಳ ಮೇಲೆ ಉಂಟಾದ ಸಾಮಾಜಿಕ ಹಾಗು ಆರ್ಥಿಕ ಪರಿಣಾಮಗಳನ್ನು ಅರಿಯುವ ಪ್ರಯತ್ನವನನ್ನು ಮಾಡಲಾಗಿದೆ.

ಪ್ರಾಚೀನ ಕಾಲದಿಂದಲೂ ಯಾವುದೇ ಅಡ್ಡಿ ಆತಂಕಗಳಿಲ್ಲದೆ ಅನೂಚಾನವಾಗಿ ನಡೆದುಕೊಂಡು ಬಂದಿದ್ದ ಆಚರಣೆಗಳು ಲಾಕ್ಡೌನ್‌ನಿಂದಾಗಿ ಅಕ್ಷರಶಃ ಸ್ಥಗಿತವಾದವು. ಹಾಗೆಯೇ ದೇವಸ್ಥಾನ, ದೈವಸ್ಥಾನ, ಬಸದಿ, ಮಸೀದಿ ಮತ್ತು ಚರ್ಚ್ ಮೊದಲಾದ ಧಾರ್ಮಿಕ ಕ್ಷೇತ್ರಗಳು ಲಾಕ್ಡೌನ್‌ನಿಂದ ಮುಚ್ಚಲ್ಪಟ್ಟ ಪರಿಣಾಮವಾಗಿ ಧಾರ್ಮಿಕ ಕ್ಷೇತ್ರಗಳನ್ನು ಜೀವನೋಪಾಯಕ್ಕಾಗಿ ಅವಲಂಭಿಸಿದ್ದ ಜನರ ಜೀವನ ಆತಂಕಕ್ಕೀಡಾಯಿತು. ನಮ್ಮ ಧಾರ್ಮಿಕ ಕ್ಷೇತ್ರಗಳು ಕೇವಲ ದೇವತಾರಾಧನಾ ಕೇಂದ್ರಗಳಾಗಿ ಮಾತ್ರ ಉಳಿದಿಲ್ಲ. ಇವುಗಳು ಜನರ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನದ ಒಂದು ಪ್ರಧಾನ ಕೇಂದ್ರವಾಗಿದೆ. ಧಾರ್ಮಿಕ ಹಾಗು ಸಾಂಸ್ಕೃತಿಕ ಆಚರಣೆಗಳನ್ನೇ ಜೀವನೋಪಾಯಕ್ಕಾಗಿ ನಂಬಿರುವಂತಹ ಅನೇಕ ಕುಟುಂಬಗಳು ಹಾಗು ಸಮುದಾಯಗಳಿವೆ. ಹಾಗಾಗಿ ಲಾಕ್ಡೌನ್ ಧಾರ್ಮಿಕ ಹಾಗು ಸಾಂಸ್ಕೃತಿಕ ಆಚರಣೆಗಳನ್ನೇ ನಂಬಿಕೊಂಡಿರುವ ಅನೇಕ ಕುಟುಂಬಗಳ ಹಾಗು ಸಮುದಾಯಗಳ ಜೀವನದ ಮೇಲೆ ತೀವ್ರವಾದ ದುಷ್ಪರಿಣಾಮಗಳನ್ನು ಬೀರಿದೆ. ಧಾರ್ಮಿಕ ಮತ್ತು ಸಾಂಸ್ಕೃತಿಕ ಆಚರಣೆಗಳು ಸ್ಥಗಿತಗೊಂಡಿದ್ದರಿಂದ ಜನರ ಮಾನಸಿಕ ಆರೋಗ್ಯದ ಮೇಲೂ ದುಷ್ಪರಿಣಾಮಗಳನ್ನು ಬೀರಿದೆ.

ಕೊರೋನಾವು ಒಂದು ರೋಗವಾಗಿ ಹಳ್ಳಿಗಳ ಮೇಲೆ ಹೆಚ್ಚಿನ ಪ್ರಭಾವ ಬೀರದಿದ್ದರೂ ಲಾಕ್ಡೌನ್‌ನ ಪ್ರಭಾವ ಹಳ್ಳಿಗಳ ಆರ್ಥಿಕತೆಯ ಮೇಲೆಯೂ ತೀವ್ರವಾಗಿತ್ತು. ಲಾಕ್ಡೌನ್‌ನಿಂದಾಗಿ ಹಳ್ಳಿಗರು ತಮ್ಮ ಜೀವನೋಪಾಯವನ್ನೇ ಕಳೆದುಕೊಂಡರು. ವರ್ಷವಿಡೀ ಹಬ್ಬ ಹರಿದಿನಗಳನ್ನು ಆಚರಿಸಿಕೊಂಡು ಜೀವಿಸುವ ಜನರ ಜೀವನಾನಂದಕ್ಕೆ ಕಾರಣವಾದ ಧಾರ್ಮಿಕ ಹಾಗು ಸಾಂಸ್ಕೃತಿಕ ಆಚರಣೆಗಳು ಲಾಕ್ಡೌನ್‌ನ ಕಾರಣದಿಂದ ಒಂದು ಹಂತದಲ್ಲಿ ಸಂಪೂರ್ಣವಾಗಿ ರದ್ದಾದವು.ಹಬ್ಬ–ಹರಿದಿನಗಳು ಹಾಗು ಉತ್ಸವಾದಿಗಳಿಗೆ 2020 ಒಂದು ಹೊಸ ತಿರುವು ನೀಡಿತು. ಪ್ರತಿ ವರ್ಷವೂ ಉತ್ಸಾಹದಿಂದ, ಸಮುದಾಯಗಳ ಕೂಡುವಿಕೆಯೊಂದಿಗೆ ಆಚರಿಸುತ್ತಿದ್ದ ಹಬ್ಬಗಳನ್ನು 2020ರಲ್ಲಿ ಕೊರೋನಾ ಹಾಗು ಲಾಕ್ಡೌನ್‌ನಿಂದಾಗಿ ಆಚರಿಸುವುದು ಅಸಾಧ್ಯವಾಯಿತು.

## ಅಧ್ಯಯನದ ಉದ್ದೇಶ

ಧಾರ್ಮಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳ ಮೇಲೆ ಲಾಕ್ಡೌನ್‌ನಿಂದಾದ ದುಷ್ಪರಿಣಾಗಳನ್ನು ಎರಡು ವಿಧವಾಗಿ ವಿಂಗಡಿಸಬಹುದು; ಲಾಕ್ಡನ್‌ನಿಂದ ಆಚರಣೆಗಳ ಮೇಲಾದ ದುಷ್ಪರಿಣಾಮಗಳು ಮತ್ತು ಆಚರಣೆಗಳನ್ನೇ ನಂಬಿಕೊಂಡು ಬದುಕುತ್ತಿರುವವರ ಮೇಲಾದ ದುಷ್ಪರಿಣಾಮಗಳು. ಒಂದು ದೇವಸ್ಥಾನ, ದೈವಸ್ಥಾನ ಅಥವಾ ಯಾವುದೇ ಒಂದು ಧಾರ್ಮಿಕ ಕ್ಷೇತ್ರವನ್ನು ಕೇವಲ ಆರಾಧನಾ ಕ್ಷೇತ್ರವಾಗಿ ಪ್ರತ್ಯೇಕಿಸಲು ಸಾಧ್ಯವಿಲ್ಲ. ಒಂದು ದೇವಸ್ಥಾನದ ಉತ್ಸವ ಅಥವಾ ಆಚರಣೆಗಳೆಂದರೆ ಅದು ಸಾವಿರಾರು ಜನರ ಧಾರ್ಮಿಕ, ಸಾಂಸ್ಕೃತಿಕ, ಸಾಮಾಜಿಕ ಮತ್ತು ಆರ್ಥಿಕವಾದ ಜೀವನವನ್ನು ಕೂಡ ಜತೆಜತೆಗೆ ರೂಪಿಸುತ್ತದೆ. ಧಾರ್ಮಿಕ ಆಚರಣೆಗಳ ಸುತ್ತ ಆಚರಣೆಗಳಿಗೆ ಸಂಬಂಧಿಸಿದ ಅನೇಕ ವೃತ್ತಿಗಳು ಮತ್ತು ಆ ವೃತ್ತಿಯನ್ನು ಆಧಾರಿಸಿದ ಅನೇಕ ಸಮುದಾಯಗಳಿರುತ್ತವೆ. ಕೆಲವು ಸಮುದಾಯಗಳ ಜನರು ಧಾರ್ಮಿಕ ಆಚರಣೆಗಳನ್ನೇ ತಮ್ಮ ಜೀವನೋಪಾಕ್ಕಾಗಿ ಅವಲಂಬಿಸಿರುತ್ತಾರೆ.

ಕರಾವಳಿಯ ಭಾಗದಲ್ಲಿ ದೇವಸ್ಥಾನ ಹಾಗು ದೈವಸ್ಥಾನಗಳ ಆಚರಣೆಗಳಿಗೆ ಸಂಬಂಧಿಸಿದಂತೆ ಸಾಂಪ್ರದಾಯಿಕವಾಗಿ 16 ವರ್ಗಗಳಿವೆ. ಧಾರ್ಮಿಕ ಪ್ರಕ್ರಿಯೆಗಳಿಗೆ ಸಂಬಂಧಿಸಿದ ಎಲ್ಲಾ ಕ್ರಿಯಾವಿಧಿಗಳನ್ನು ಈ 16 ವರ್ಗ/ಸಮುದಾಯದ ಜನರು ಒಂದಾಗಿ ಸೇರಿ ಮಾಡುತ್ತಾರೆ. ಪ್ರತಿಯೊಂದು ವರ್ಗವೂ ತಮಗೆ ಪಾರಂಪರಿಕಾಗಿ ಬಂದ ಕರ್ತವ್ಯವನ್ನು ನಿಭಾಯಿಸಿಕೊಂಡು ಹೋಗುತ್ತವೆ. ಹೆಚ್ಚಿನ ಸಮುದಾಯಗಳ ಮೂಲ ಕಸುಬೇ ಆಚರಣೆಗಳಿಗೆ ಸಂಬಂಧಿಸಿದ ವೃತ್ತಿಗಳಾಗಿರುತ್ತವೆ. ಹಾಗಾಗಿ ಧಾರ್ಮಿಕ ಆಚರಣೆಗಳಿಗೆ ಅಡಚಣೆಯಾದರೆ ಅದನ್ನೇ ನಂಬಿ ಬದುಕುತ್ತಿರುವ ಅನೇಕ ಜನರ ಜೀವನದ ಮೇಲೆ ದುಷ್ಪರಿಣಾಮಗಳನ್ನು ಬೀರುತ್ತವೆ. ಆರ್ಥಿಕತೆಯ ದೃಷ್ಟಿಕೋನದಿಂದ ನೋಡಿದಾಗ ಸಾಂಸ್ಕೃತಿಕ ಚಟುವಟಿಕೆಗಳೂ ಕೂಡ ಧಾರ್ಮಿಕ ಚಟುವಟಿಕೆಗಳಿಗಿಂತ ಭಿನ್ನವಾಗಿಲ್ಲ. ಸಾವಿರಾರು ಕಲಾವಿದರು ಕಲೆಯನ್ನೇ ನಂಬಿ ಜೀವನವನ್ನು ನಿರ್ವಹಿಸುತ್ತಿದ್ದಾರೆ. ಹಾಗಾಗಿ ಕೊರೋನಾ ಹಾಗು ಲಾಕ್ಡೌನ್‌ನಿಂದ ಆಚರಣೆಗಳಿಗೆ ಆದ ಅಡಚಣೆಗಳನ್ನು ಅರಿಯುವುದರ ಜೊತೆಗೆ ಆ ಅಡಚಣೆಗಳಿಂದ ಆಚರಣೆಗಳನ್ನೇ ನಂಬಿಕೊಂಡ ಸಮುದಾಯಗಳಿಗೆ ಉಂಟಾದ ದುಷ್ಪರಿಣಾಮಗಳನ್ನು ತಿಳಿದುಕೊಳ್ಳುವುದು ಪ್ರಸ್ತುತವಾಗಿ ಬಹಳ ಮುಖ್ಯವಾಗಿದೆ. ಏಕೆಂದರೆ ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಧಾರ್ಮಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಸಂಬಂಧಪಟ್ಟ ವೃತ್ತಿಯಲ್ಲಿರುವವರಿಗೆ ಯಾವುದೇ ಬಗೆಯ ಆರ್ಥಿಕ ಭದ್ರತೆಗಳಿರುವುದಿಲ್ಲ. ಹಾಗೂ ಸಾರ್ವತ್ರಿಕ ವಿಪತ್ತುಗಳ ಸಮಯದಲ್ಲಿ ಸಾಮಾಜಿಕವಾಗಿ ಹಾಗು ಆರ್ಥಿಕವಾಗಿ ಅಭದ್ರವಾಗಿರುವ ವ್ಯಕ್ತಿಗಳು, ಕುಟುಂಬಗಳು ಹಾಗೂ ಸಮುದಾಯಗಳು ಹೆಚ್ಚಿನ ತೊಂದರೆಗೊಳಾಗುತ್ತವೆ. ಹಾಗೆಯೇ ಧಾರ್ಮಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಪ್ರವೃತ್ತರಾಗಿರುವ ವ್ಯಕ್ತಿಗಳು ಹಾಗೂ ಸಮುದಾಯಗಳು ಲಾಕ್ಡೌನ್ ಸಮಯದಲ್ಲಿ ತೊಂದರೆಗೊಳಗಾಗಿರುವ ಹಿನ್ನಲೆಯುಲ್ಲಿ ಲಾಕ್ಡೌನ್ ಸಂದರ್ಭದಲ್ಲಿ ವೈಯುಕ್ತಿಕವಾಗಿ,

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಸಾಮುದಾಯಿಕವಾಗಿ ಮತ್ತು ಸರ್ಕಾರದ ಮಟ್ಟದಲ್ಲಿ ಲಭ್ಯವಿದ್ದ ಪರಿಹಾರ ವ್ಯವಸ್ಥೆಯನ್ನು ಅವಲೋಕಿಸುವುದರ ಜೊತೆಗೆ ವಿಪತ್ತಿನ ಸಾಮಾಜಿಕ ಆಯಾಮಗಳನ್ನು ಅಧ್ಯಯನ ಮಾಡುವುದು ಈ ಅಧ್ಯಯನದ ಉದ್ದೇಶವಾಗಿದೆ. ಕೊನೆಯದಾಗಿ, ವಿಪತ್ತುಗಳು ಮಾನವನಿಗೆ ಅನೇಕ ಪಾಠಗಳನ್ನು ಕಲಿಸುತ್ತವೆ; ಮನುಷ್ಯನ ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ದೃಷ್ಟಿಕೋನಗಳು ವಿಪತ್ತಿನ ಸಮಯದಲ್ಲಿ ಮತ್ತು ವಿಪತ್ತಿನ ನಂತರದಲ್ಲಿ ಬದಲಾಗುವ ಸಂಭವವಿರುತ್ತದೆ. ಹಾಗಾಗಿ ಕೊರೋನಾ ಜನರಲ್ಲಿ ಹಾಗೂ ಒಟ್ಟು ಸಮಾಜದಲ್ಲಿ ಯಾವ ರೀತಿಯ ಬದಲಾವಣೆಗಳನ್ನು ಉಂಟುಮಾಡಿದೆ ಅಥವಾ ಬದಲಾವಣೆಯ ಒತ್ತಡವನ್ನು ಹುಟ್ಟುಹಾಕಿದೆ ಎಂದು ತಿಳಿಯುವುದೂ ಈ ಅಧ್ಯಯನದ ಉದ್ದೇಶವಾಗಿದೆ. ಲಾಕ್ಡೌನ್‌ನಿಂದ ಆಚರಣೆಗಳು ಮತ್ತು ಆಚರಣೆಗಳನ್ನೇ ನಂಬಿಕೊಂಡ ಜನರ ಮೇಲೆ ಯಾವ ರೀತಿಯ ಪರಿಣಾಮಗಳನ್ನು ಉಂಟು ಮಾಡಿದೆ ಎನ್ನುವುದನ್ನು ತಿಳಿಯಬೇಕಾಗಿದೆ. ಪರಿಣಾಮಗಳೆಂದರೆ ಸಾಮಾಜಿಕ ಪರಿಣಾಮಗಳು, ಆರ್ಥಿಕ ಪರಿಣಾಮಗಳು ಹಾಗು ಭಾವನಾತ್ಮಕ ಪರಿಣಾಮಗಳು. ಮತ್ತು ಕೊನೆಯದಾಗಿ ಕೊರೋನಾ ಮತ್ತು ಲಾಕ್ಡೌನ್‌ನಿಂದ ಆದ ದುಷ್ಪರಿಣಾಮಗಳನ್ನು ಎದುರಿಸಲು ಸಮುದಾಯಗಳೇ ಕಂಡುಕೊಂಡು ಅನುಸರಿಸಿದ ಪರಿಹಾರ ಮಾರ್ಗಗಳು ಯಾವುವು? ಕೊರೋನಾ ಕಲಿಸಿದ ಜೀವನ ಪಾಠಗಳೇನು ? ಈ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳುವುದು ಬಹು ಮುಖ್ಯವಾದ ಉದ್ದೇಶವಾಗಿದೆ.

## 1.1. ಕೋವಿಡ್‌ನಿಂದಾಗಿ ಧಾರ್ಮಿಕ ಹಾಗು ಸಾಂಸ್ಕೃತಿಕ ಆಚರಣೆಗಳ ಮೇಲಾದ ಪರಿಣಾಮಗಳು

ಧಾರ್ಮಿಕ ಆಚರಣೆಗಳ ಮೇಲೂ ಕೋವಿಡ್–19 ಪ್ರಭಾವ ಬೀರಿದೆ. ಸಾವಿರಾರು ಜನರು ಸೇರಿ ನಡೆಸುವ ಮತ್ತು ಸ್ಥಳೀಯ ಆರ್ಥಿಕಾಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸುವ ಸಾರ್ವಜನಿಕ ಉತ್ಸವಗಳು ಕೊರೋನಾದಿಂದಾಗಿ ರದ್ದಾಗಿವೆ (Kumar, 2020). ಎಲ್ಲಾ ರೀತಿಯ ಧಾರ್ಮಿಕ ಕಾರ್ಯಕ್ರಮಗಳು, ಉತ್ಸವಗಳು ರದ್ದಾಯಿತು ಮತ್ತು ಎಲ್ಲಾ ಧಾರ್ಮಿಕ ಕ್ಷೇತ್ರಗಳು ಭಕ್ತಾದಿಗಳ ಪ್ರವೇಶವನ್ನು ನಿರ್ಬಂಧಿಸಿದ್ದವು. ಕೆಲವು ದೇವಸ್ಥಾನಗಳು, ಚರ್ಚ್‌ಗಳು ಮತ್ತು ಮಸೀದಿಗಳು ತಂತ್ರಜ್ಞಾನದ ಸಹಾಯದಿಂದ ನೇರಪ್ರಸಾರದ ಮೂಲಕ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡವು (Dhatrak, 2020).ಹಬ್ಬ ಹರಿದಿನಗಳು ಸ್ಥಗಿತಗೊಳ್ಳುವುದೆಂದರೆ, ಹಬ್ಬಗಳ ಸುತ್ತ ಹೆಣೆದುಕೊಂಡಿರುವ ಅನೇಕ ಉತ್ಪನ್ನ ಹಾಗೂ ಸೇವೆಗಳ ಉತ್ಪಾದನೆ ಮತ್ತು ಮಾರಾಟಕ್ಕೆ ಅಡ್ಡಿ ಆತಂಕಗಳು ಉಂಟಾಗುತ್ತವೆ. ಹಾಗಾಗಿ ಧಾರ್ಮಿಕ ಹಾಗೂ ಸಾಂಸ್ಕೃತಿಕ ಉತ್ಸವಗಳು ಸ್ಥಗಿತವಾದದ್ದರಿಂದ ಉದ್ಯೋಗಗಳು ನಷ್ಟವಾದವು ಮತ್ತು ಉತ್ಪನ್ನ ಹಾಗೂ ಸೇವೆಗಳ ಮಾರಾಟ ಕುಂಠಿತವಾಯಿತು (OECD, 2020).

## 1.2. ಕೋವಿಡ್–19ರ ಸಾಮಾಜಿಕ ಮತ್ತು ಆರ್ಥಿಕ ಪರಿಣಾಮಗಳು

ಕೊರೋನಾದಿಂದ ಉಂಟಾದ ಸಾಮಾಜಿಕ ಪರಿಣಾಮಗಳೆಂದರೆ ವ್ಯಾಪಾರ ಸಂಬಂಧಿ ಚಟುವಟಿಕೆಗಳು ಇಲ್ಲದಿರುವುದು, ಉದ್ಯೋಗ ನಷ್ಟ, ಮಾನಸಿಕ ಅನಾರೋಗ್ಯ ಮತ್ತು ಕೌಟುಂಬಿಕ ಹಿಂಸೆ ಮುಂತಾದುವುಗಳು (Aneja & Ahuja, 2021). ಕೋವಿಡ್–19 ಸಾಮಾಜಿಕ ಜೀವನದ ಮೇಲೆ ಗಂಭೀರವಾದ ದುಷ್ಪರಿಣಾಮಗಳನ್ನು ಬೀರಿದೆ. ಮನುಷ್ಯನ ಸ್ವಾಸ್ಥ್ಯದ ಮೇಲೆ, ಮುಖ್ಯವಾಗಿ ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರಿದೆ. ಜನರು ಮಾನಸಿಕ ತೊಂದರೆಗಳಾದ ಭಯ, ಒತ್ತಡ, ಆತಂಕ ಮತ್ತು ಖಿನ್ನತೆ ಮುಂತಾದ ಸಮಸ್ಯೆಗಳಿಂದ ಬಳಲಿದ್ದಾರೆ (Fatima, 2021). ಆತಂಕ, ಒತ್ತಡ ಮತ್ತು ಖಿನ್ನತೆಯ ಲಕ್ಷಣಗಳು ಲಾಕ್ಡೌನ್ ಸಮಯದಲ್ಲಿ ವಯಸ್ಕರಲ್ಲಿ ಹೆಚ್ಚಾಗಿ ಕಂಡುಬಂದಿದೆ. ಅನೇಕ ಕಾರಣಗಳಿಂದಾಗಿ ಈ ರೀತಿಯ ಪ್ರತಿಕೂಲ ಮಾನಸಿಕ ಸ್ಥಿತಿ ಉಂಟಾಗಿರಬಹುದು. ಅವುಗಳಲ್ಲಿ ಮೊದಲನೆಯದೆಂದರೆ ಲಾಕ್ಡೌನ್‌ನಿಂದಾಗಿ ವೃತ್ತಿಜೀವನ ಮತ್ತು ಸಾಮಾಜಿಕ ಜೀವನ ಅಸ್ತವ್ಯಸ್ತಗೊಂಡಿತು. ಎರಡನೆಯದಾಗಿ ದೀರ್ಘಕಾಲಿಕವಾಗಿ ಲಾಕ್ಡೌನ್ ಮುಂದುವರಿದು ಭಾವನಾತ್ಮಕವಾಗಿ ಮತ್ತು ಆರ್ಥಿಕವಾಗಿ ನಷ್ಟವಾಯಿತು (Gopal, Sharma, & Subramanyam, 2020). ಕಲಾ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಕೆಲಸ ಮಾಡುವವರಿಗೆ ಉದ್ಯೋಗ ನಷ್ಟವಾಗುವುದರ ಜೊತೆಗೆ ಕಲಾ ಪ್ರದರ್ಶನವಿಲ್ಲದೆ ಕಲಾವಿದನ ಕಲಾ ಕುಶಲತೆಯು ಕುಂಠಿತವಾಗುವುದರಿಂದ ಕೊರೋನಾ ಕಲಾ ಪ್ರಪಂಚಕ್ಕೆ ಅನೇಕ ದುಷ್ಪರಿಣಾಮಗಳನ್ನುಂಟು ಮಾಡಿದೆ (OECD, 2020)

ಎಲ್ಲಾ ಕ್ಷೇತ್ರಗಳಿಗೆ ಕೋವಿಡ್‌ನಿಂದ ಆರ್ಥಿಕವಾಗಿ ತೊಂದರೆ ಯಾದಂತೆ ಧಾರ್ಮಿಕ ಕ್ಷೇತ್ರಕ್ಕೂ ಆಗಿದೆ. ದೇವಸ್ಥಾನಗಳನ್ನು ಲಾಕ್ಡೌನ್ ಕಾರಣದಿಂದ ಮುಚ್ಚಿದ ನಂತರ ಭಕ್ತಾದಿಗಳಿಗೆ ಪ್ರವೇಶವಿರಲಿಲ್ಲ ಮತ್ತು ಯಾವುದೇ ಸೇವಾದಿಗಳಲ್ಲಿ ಅಥವಾ ಆಚರಣೆಗಳಲ್ಲಿ ಭಾಗವಹಿಸಲು ಸಾರ್ವಜನಿಕರಿಗೆ ಅವಕಾಶವಿರಲಿಲ್ಲ.ಇದರಿಂದಾಗ ದೇವಸ್ಥಾನಗಳಿಗೆ ಯಾವುದೇ ಆದಾಯದ ಮೂಲಗಳು ಇಲ್ಲದಂತಾಯಿತು. ಪ್ರಮುಖ ದೇವಸ್ಥಾನಗಳು ತಮ್ಮ ದೇವಸ್ಥಾನಗಳನ್ನು ನಿರ್ವಹಿಸುವುದರ ಜೊತೆಗೆ ಬೇರೆ ಕಡಿಮೆ ಆದಾಯವಿರುವ ದೇವಸ್ಥಾನಗಳ ನಿರ್ವಹಣೆಯ ಜವಾಬ್ದಾರಿಯನ್ನೂ ಹೊಂದಿರುತ್ತವೆ. ಹಾಗಾಗಿ ಪ್ರಮುಖ ದೇವಸ್ಥಾನಗಳಿಗೆ ಹೆಚ್ಚಿನ ಆರ್ಥಿಕ ಹೊರೆಯಾಗಿ ಪರಿಣಮಿಸಿತು (News 18, 2020)

ಎರಡೂ ಜಿಲ್ಲೆಗಳ ದೇವಸ್ಥಾನಗಳಲ್ಲಿ ನಡೆಯುವ ಜಾತ್ರೆ/ಉತ್ಸವಗಳಲ್ಲಿ ಧಾರ್ಮಿಕ ಪ್ರಕ್ರಿಯೆಗಳಲ್ಲದೆ ಸಾಂಸ್ಕೃತಿಕ, ಆರ್ಥಿಕ, ಪಾರಂಪರಿಕ ಮತ್ತು ಸಾಮಾಜಿಕ ಚಟುವಟಿಕೆಗಳು ಕೂಡ ನಡೆಯುತ್ತವೆ. ಜೊತೆಗೆ ಮೊಸರು ಕುಡಿಕೆ, ಕಂಬಳ, ಕೋಳಿ ಅಂಕ ಮತ್ತು ಗಾಯನ ಸ್ಪರ್ಧೆಯಂತಹ ಸ್ಪರ್ಧಾತ್ಮಕ ಚಟುವಟಿಕೆಗಳು ನಡೆಯುತ್ತವೆ. ಧಾರ್ಮಿಕ ಪ್ರಕ್ರಿಯೆಯ ಅಂಗವಾಗಿ ಡೊಳ್ಳು ಬಾರಿಸುವುದು, ಪಂಚವಾದ್ಯಗಳನ್ನು ನುಡಿಸುವುದು, ಘಂಟೆ ಮೊದಲಾದ ವಾದ್ಯಗಳನ್ನು ಬಾರಿಸುವುದು ಮತ್ತು ಜೀಟಿಕೆ ಹಿಡಿಯುವುದು ಮುಂತಾದ ಪಾರಂಪರಿಕ ಚಟುವಟಿಕೆಗಳು ನಡೆಯುತ್ತವೆ.

ಆರ್ಥಿಕ ಚಟುವಟಿಕೆಗಳು ಈ ಎರಡೂ ಜಿಲ್ಲೆಗಳಲ್ಲಿನ ಎಲ್ಲಾ ದೇವಸ್ಥಾನಗಳ ಜಾತ್ರೆ/ಉತ್ಸವಗಳಲ್ಲಿ ನಡೆಯುತ್ತವೆ. ಮಕ್ಕಳ ಆಟಿಕೆಗಳನ್ನು ಮಾರುವ, ಹೂವು ಮತ್ತು ಹಣ್ಣುಕಾಯಿ ಮಾರುವ, ಕರಕುಶಲ ವಸ್ತುಗಳನ್ನು ಮಾರುವ ಮತ್ತು ತಿಂಡಿತಿನಿಸುಗಳನ್ನು ಮಾರುವ ಹೀಗೆ ಎಷ್ಟೋ ವ್ಯಾಪಾರಿಗಳು ಮತ್ತು ಮನೋರಂಜನೆಯ ಆಟಗಳನ್ನು ಆಡಿಸುವವರು ಮುಂತಾದ ಅನೇಕ ವ್ಯಾಪಾರಿಗಳು ವ್ಯಾಪಾರ ದೃಷ್ಟಿಯಿಂದ ಜಾತ್ರಾ ಮಹೋತ್ಸವದಲ್ಲಿ ಸೇರುತ್ತಾರೆ. ಈ ಜಿಲ್ಲೆಗಳಲ್ಲಿ ಸಂಗ್ರಹಿಸಿದ ಮಾಹಿತಿಗಳ ಪ್ರಕಾರ ಊರಿನ ಜಾತ್ರೆ ಅಥವಾ ಉತ್ಸವಗಳಲ್ಲಿ ಸಾಮಾಜಿಕವಾಗಿ ಅನೇಕ ಚಟುವಟಿಕೆಗಳು ನಡೆಯುತ್ತವೆ, ಅದರಲ್ಲಿ ಪ್ರಮುಖವಾಗಿ ಸಾರ್ವಜನಿಕ ಅನ್ನಸಂತರ್ಪಣೆ. ಉತ್ಸವದ ಸಮಯದಲ್ಲಿ ಬರುವ ಎಲ್ಲಾ ಭಕ್ತಾದಿಗಳಿಗೆ ವಿವಿಧ ಭಕ್ಷ್ಯ ಭೋಜನದ ವ್ಯವಸ್ಥೆಯನ್ನು ಮಾಡುತ್ತಾರೆ. ದೇವರ/ದೈವದ ಆರಾಧನೆಯಂತೆ ಅನ್ನದಾನಕ್ಕೆ ವಿಶೇಷ ಸ್ಥಾನವನ್ನು ಧಾರ್ಮಿಕ ಹಾಗೂ ಸಾಮಾಜಿಕ ನೆಲೆಗಟ್ಟಿನಲ್ಲಿ ನೀಡಲಾಗಿದೆ. ಪ್ರಮುಖ ದೇವಸ್ಥಾನಗಳಲ್ಲಿ ಪ್ರತಿದಿನವೂ ಸಾರ್ವಜನಿಕರಿಗೆ ಅನ್ನಸಂತರ್ಪಣೆ ನಡೆಯುತ್ತದೆ. ಉತ್ಸವದ ಸಮಯದಲ್ಲಿ ಅನ್ನದಾನದ ಜೊತೆಗೆ ಸಾರ್ವಜನಿಕರಿಗೆ ಪಾನೀಯದ ವ್ಯವಸ್ಥೆಯನ್ನೂ ಮಾಡಲಾಗುತ್ತದೆ. ಇನ್ನುಳಿದಂತೆ ಜಾತ್ರೆಯನ್ನು ಸುಗಮವಾಗಿ ಸಂಪನ್ನಗೊಳಿಸಲು ಎಲ್ಲಾ ರೀತಿಯ ವ್ಯವಸ್ಥೆಗಳನ್ನು ಅಂದರೆ ಚಪ್ಪರ ಕಟ್ಟುವುದರಿಂದ ಹಿಡಿದು ಧಾರ್ಮಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಪ್ರಕ್ರಿಯೆಗಳಿಗೆ ಬೇಕಾದ ಸಾಮಾಗ್ರಿಗಳನ್ನು ಒದಗಿಸುವುದು, ಉತ್ಸವದಲ್ಲಿ ಸಾರ್ವಜನಿಕರಿಗೆ ಪಾಲ್ಗೊಳ್ಳಲು ಬೇಕಾದ ವ್ಯವಸ್ಥೆಯನ್ನು ಮಾಡುವುದು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಮತ್ತು ಉತ್ಸವದ ಮೊದಲು ಮತ್ತು ನಂತರದ ಸ್ವಚ್ಛತಾ ಕಾರ್ಯಗಳವರೆಗೆ ಎಲ್ಲಾ ಕಾರ್ಯಗಳನ್ನು ಮಾಡಲಾಗುತ್ತದೆ.

ಧಾರ್ಮಿಕ/ಸಾಂಸ್ಕೃತಿಕ ಆಚರಣೆಗಳು ಲಕ್ಷಾಂತರ ಜನರಿಗೆ ಜೀವನೋಪಾಯದ ಮಾರ್ಗಗಳನ್ನು ಒದಗಿಸಿಕೊಡುತ್ತದೆ. ಧಾರ್ಮಿಕ ವೃತ್ತಿಯಲ್ಲಿರುವವರಿಗೆ, ವ್ಯಾಪಾರಿಗಳಿಗೆ (ಜಾತ್ರೆಗಳಲ್ಲಿ ವ್ಯಾಪಾರಕ್ಕೆಂದು ಬರುವ ವ್ಯಾಪಾರಿಗಳು ಮತ್ತು ದಿನನಿತ್ಯ ಹೂವು, ಹಣ್ಣು ಮತ್ತು ತೆಂಗಿನಕಾಯಿ ಇತ್ಯಾದಿ ಪೂಜಾ ಪರಿಕರಗಳನ್ನು ಮಾರುವ ವ್ಯಾಪಾರಿಗಳು), ಶಾಮಿಯಾನ ಮತ್ತು ವಿದ್ಯುತ್ ಅಲಂಕಾರ ಮಾಡುವವರಿಗೆ, ಡೋಲು, ನಗಾರಿ, ಚೆಂಡೆ, ನಾದಸ್ವರ ಮತ್ತು ಪಂಚವಾದ್ಯಗಳನ್ನು ನುಡಿಸುವವರಿಗೆ/ಭಾರಿಸುವವರಿಗೆ, ಯಕ್ಷಗಾನ, ಭರತನಾಟ್ಯ, ಸಂಗೀತದಂತಹ ಕಲಾಚಟುವಟಿಕೆಗಳಲ್ಲಿ ತೊಡಗಿರುವ ಕಲಾವಿದರಿಗೆ ಮತ್ತು ಕೋಲದಂತಹ ಧಾರ್ಮಿಕ ಪ್ರಕ್ರಿಯೆಗಳಲ್ಲಿ ಭಾಗವಹಿಸುವ ಕಲಾವಿದರಿಗೆ ಹೀಗೆ ಅಸಂಖ್ಯಾತ ಜನರಿಗೆ ಜೀವನ ನಡೆಸಲು ಇರುವ ಪ್ರಮುಖ ಆದಾಯದ ಮೂಲವಾಗಿದೆ.ಸಾಂಸ್ಕೃತಿಕ ಆಚರಣೆಗಳನ್ನು ಕೇವಲ ಮನೋರಂಜನೆಗಾಗಿ ಮಾತ್ರವಲ್ಲದೆ ಧಾರ್ಮಿಕ ಆಚರಣೆಗಳ ಭಾಗವಾಗಿ ಆಚರಿಸುತ್ತಾರೆ. ಮನೋರಂಜನೆ ಸಾಂಸ್ಕೃತಿಕ ಆಚರಣೆಗಳ ಒಂದು ಅಂಶ ಮಾತ್ರ, ಕೇವಲ ಮನೋರಂಜನೆ ಸಾಂಸ್ಕೃತಿಕ ಆಚರಣೆಯ ಉದ್ದೇಶವಲ್ಲ.

### 1.2.1. ಧಾರ್ಮಿಕ ಪ್ರಕ್ರಿಯೆಗಳಲ್ಲಿ ಭಾಗವಹಿಸುವ ಜನರು/ ಸಮುದಾಯಗಳು

ಯಾವುದೇ ಊರಿನ ಧಾರ್ಮಿಕ ಆಚರಣೆಗಳನ್ನು ಗಮನಿಸಿದರೂ ಅದು ಒಂದು ಜಾತಿ ಅಥವಾ ಸಮುದಾಯದ ಆಚರಣೆಯಾಗಿ ಕಾಣುವುದಿಲ್ಲ. ಅದರ ಬದಲಿಗೆ ದೇವಸ್ಥಾನ/ದೈವಸ್ಥಾನಗಳಲ್ಲಿ ನಡೆಯುವ ಧಾರ್ಮಿಕ ಪ್ರಕ್ರಿಯೆಗಳಲ್ಲಿ ಅನೇಕ ಸಮುದಾಯಗಳು ಭಾಗವಹಿಸುತ್ತವೆ. ಬಂಟರು, ಬ್ರಾಹ್ಮಣ, ಬಿಲ್ಲವ, ಮೊಗವೀರ, ಮಡಿವಾಳ, ಶೇರಿಗಾರ, ದೇವಾಡಿಗ, ಮುಂಡಾಲ, ವಿಶ್ವಕರ್ಮ, ಕುಂಬಾರ, ಪರವ, ಪಂಬದ, ನಲಿಕೆ, ಭಂಡಾರಿ, ಮೋಯ್ಲಿ, ಗಾಣಿಗ, ಜೋಗಿ, ಜೈನ, ಗೌಡ, ಹೀಗೆ ಅನೇಕ ಸಮುದಾಯದ ಜನರು ಆಚರಣೆಗಳ ಪ್ರಕ್ರಿಯೆಗಳಲ್ಲಿ ಪ್ರತ್ಯಕ್ಷವಾಗಿಯೇ ಭಾಗವಹಿಸುತ್ತಾರೆ. ಹೀಗೆ ಒಂದು ಊರಿನ ಆಚರಣೆಯು ಕೇವಲ ಒಂದು ಸಮುದಾಯಕ್ಕೆ ಸೀಮಿತವಾಗಿರದೆ ಎಲ್ಲಾ ಸಮುದಾಯದ ಜನರು ಭಾಗವಹಿಸುತ್ತಾರೆ.

### 1.2.2. ಆಚರಣೆಗಳಿಗೆ ಉಂಟಾದ ಅಡಚಣೆಗಳು

ಈ ಹಿಂದೆ ಎಂದಾದರೂ ಆಚರಣೆಗಳಿಗೆ ಈ ಮಟ್ಟದಲ್ಲಿ ಅಡಚಣೆಯಾಗಿತ್ತೇ ಎಂದು. ಮಾಹಿತಿಯನ್ನು ನೀಡಿದ ಒಟ್ಟು ಜನರಲ್ಲಿ 95 ಪ್ರತಿಶತ ಜನರು ಹಿಂದೆ ಎಂದೂ ಕೂಡ ಆಚರಣೆಗಳಿಗೆ ಈ ರೀತಿಯ ಅಡಚಣೆಗಳು ಆಗಿಲ್ಲವೆಂದು ತಿಳಿಸಿದ್ದಾರೆ. ಕೇವಲ ಐದು ಪ್ರತಿಶತದಷ್ಟು ಜನಗಳು ಮಾತ್ರ ಹಿಂದೆ ಈ ರೀತಿಯ ಅಡಚಣೆಗಳನ್ನು ಕಂಡಿರುವುದಾಗಿ ತಿಳಿಸಿದ್ದಾರೆ. ಕೆಲವು ವರ್ಷಗಳ ಹಿಂದೆ ಸುನಾಮಿಯ, ಅತೀವೃಷ್ಟಿ/ಅನಾವೃಷ್ಟಿಯಿಂದಾಗಿ ಮತ್ತು ಕೆಲವೊಮ್ಮೆ ಕರ್ಫ್ಯೂನಿಂದಾಗಿ ಆಚರಣೆಗಳಿಗೆ ಆಡಚಣೆಯಾಗಿದೆ ಎಂದು ಕೆಲವರು ಮಾಹಿತಿಯನ್ನು ನೀಡಿದ್ದಾರೆ. ಇನ್ನೂ ಕೆಲವರು 60 ವರ್ಷಗಳ ಹಿಂದೆ ಬಂದ ಸಾಂಕ್ರಾಮಿಕ ರೋಗದಿಂದ ಮತ್ತು 100 ವರ್ಷಗಳ ಹಿಂದೆ ಬಂದ ಪ್ಲೇಗ್‌ನಿಂದಾಗಿ ಆಚರಣೆಗಳಿಗೆ ಅಡಚಣೆಯಾಗಿದೆ ಎಂದು ಹೇಳಿದ್ದಾರೆ. ಕೆಲವೊಮ್ಮೆ ಸೂತಕದಂತಹ ಆಶೌಚದಿಂದಾಗ ಆಚರಣೆಗಳು ನಿಂತಿವೆ. ಆದರೆ ಹಿಂದೆ ಉಂಟಾದ ಅಡಚಣೆಗಳು ಒಂದು ವಾರದಿಂದ ಕೆಲವು ದಿನಗಳವರೆಗೆ ಮಾತ್ರ ಪರಿಣಾಮವನ್ನು ಬೀರಿದೆ ಎಂದು ನುಡಿದಿದ್ದಾರೆ.

### 1.2.3. ಅಡಚಣೆಗೊಳಗಾದ ಆಚರಣೆಗಳು

ಎರಡು ಜಿಲ್ಲೆಗಳಲ್ಲಿ ಅನೇಕ ಧಾರ್ಮಿಕ ಮತ್ತು ಸಾಂಸ್ಕೃತಿಕ ಪ್ರಕ್ರಿಯಗಳಿಗೆ ಅಡಚಣೆಯಾಗಿದೆ ಎಂಬುದನ್ನು ಸಂದರ್ಶಿಸಲ್ಪಟ್ಟ ಜನರು ಮಾಹಿತಿಯನ್ನು ನೀಡಿದ್ದಾರೆ. ಕೆಲವು ದೇವಸ್ಥಾನಗಳಲ್ಲಿ ನಿತ್ಯಪೂಜೆಗೂ ಅಡಚಣೆಗಳಾಗಿದೆ. ಆದರೆ ಹೆಚ್ಚಿನ ದೇವಸ್ಥಾನಗಳಲ್ಲಿ ನಿತ್ಯಪೂಜೆಗೆ ಯಾವುದೇ ರೀತಿಯ ತೊಂದರೆಯಾಗಿಲ್ಲ.ವಿಶೇಷವಾಗಿ ನಡೆಯುವ ಸೇವೆಗಳು, ಹರಕೆಗಳು, ಹಬ್ಬಹರಿದಿನಗಳ ಆಚರಣೆ ಮತ್ತು ವಾರ್ಷಿಕ ಜಾತ್ರಾ ಮಹೋತ್ಸವಗಳಿಗೆ ಹೆಚ್ಚಿನ ಕ್ಷೇತ್ರಗಳಲ್ಲಿ ಅಡಚಣೆಯಾಗಿದೆ. ವಿಶೇಷವಾಗಿ ನಡೆಯುವ ಅಭಿಷೇಕಗಳು, ಕಲ್ಪೋಕ್ತ ಪೂಜೆ, ಹೋಮ ಹವನಾದಿಗಳು, ಭಜನಾ ಸಪ್ತಾಹ, ತುಲಾ ಭಾರ, ಸಾಮೂಹಿಕ ಪೂಜೆಗಳು, ಪುರಾಣ ಪ್ರವಚನಗಳು, ರಂಗಪೂಜೆ ಮತ್ತು ಸಂಕ್ರಮಣ ಕಾಲದ ಪೂಜೆಗಳಿಗೆ ಹಲವು ದೇವಸ್ಥಾನಗಳಲ್ಲಿ ಅಡಚಣೆಯಾಗಿದೆ. ಧಾರ್ಮಿಕ ಚಟುವಟಿಕೆಗಳ ಜೊತೆಗೆ ಅನೇಕ ಸಾಂಸ್ಕೃತಿಕ ಆಚರಣೆಗಳಿಗೂ ಅಡಚಣೆಯಾಗಿದೆ. ಯಕ್ಷಗಾನ, ತಾಳಮದ್ದಳೆ, ಸಂಗೀತ, ನೃತ್ಯದಂತಹ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಅಡಚಣೆಯಾಗಿದೆ. ಅದೇ ರೀತಿಯಲ್ಲಿ ಸಾಮಾಜಿಕವಾಗಿ ನಡೆಯುವ ನಿತ್ಯ ಅನ್ನದಾನ ಸೇವೆಯನ್ನು ಎಲ್ಲಾ ಕ್ಷೇತ್ರಗಳಲ್ಲೂ ನಿಲ್ಲಿಸಲಾಗಿದೆ. ಲಾಕ್ಡೌನ್ ಮುಗಿದ ನಂತರವೂ ಹಲವು ದಿನಗಳವರೆಗೆ ಅನ್ನ ಸಂತರ್ಪಣೆಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಲಾಗಿತ್ತು.

ದೇವಸ್ಥಾನ/ದೈವಸ್ಥಾನಗಳಿಗೆ ಹೋಗಿ ಸೇವೆಯನ್ನು ಮಾಡಲು ಅನಾನುಕೂಲವಿದ್ದುದರಿಂದ ಭಕ್ತರು ದೇವಸ್ಥಾನದಲ್ಲಿ ನಡೆಸಬೇಕಾದ ವಿಶೇಷ ಪೂಜೆಯ ಬದಲಿಗೆ ಮನೆಯಲ್ಲಿಯೇ ಪ್ರಾರ್ಥನೆ ಮತ್ತು ಹರಕೆಯನ್ನು ಮಾಡಿಕೊಂಡರು. ಹಬ್ಬಹರಿದಿನಗಳನ್ನು ಹೊರಗಡೆ ಎಲ್ಲಿಯೂ ಹೋಗದೆ ಮನೆಯಲ್ಲಿಯೇ ಸರಳವಾಗಿ ಆಚರಿಸಿಕೊಂಡರು. ದೇವಸ್ಥಾನ ಮತ್ತು ದೈವಸ್ಥಾನಗಳಲ್ಲಿ ದೊಡ್ಡ ಪ್ರಮಾಣದಲ್ಲಿ ನಡೆಯಬೇಕಾದ ಆಚರಣೆಗಳನ್ನು ಸಣ್ಣ ಪ್ರಮಾಣದಲ್ಲಿ ನಡೆಸಲಾಯಿತು. ಕೆಲವೊಂದು ಕ್ಷೇತ್ರಗಳಲ್ಲಿ ಗ್ರಾಮಸ್ಥರು ಸೇರಿಕೊಂಡು ಸಾಮೂಹಿಕ ಪ್ರಾರ್ಥನೆ ಮಾಡುವುದರ ಮೂಲಕ ಮತ್ತು ತಪ್ಪು ಕಾಣಿಕೆ ಅರ್ಪಿಸುವುದರ ಮೂಲಕ ದೇವರಲ್ಲಿ ಕ್ಷಮೆ ಕೇಳಲಾಯಿತು. ದೈವಸ್ಥಾನಗಳಲ್ಲಿ ಕೋಲ ಮತ್ತು ನೇಮೋತ್ಸವದ ಬದಲು ದೈವಗಳಿಗೆ ತಂಬಿಲ ಮತ್ತು ಪರ್ವ ಕೊಡುವ ಮೂಲಕ ಆಚರಿಸಲಾಯಿತು.

### 1.2.4. ಧಾರ್ಮಿಕ ಆಚರಣೆಗಳ ಸರಳೀಕರಣ

ಲಾಕ್ಡೌನ್ ಸಮಯದಲ್ಲಿ ಧಾರ್ಮಿಕ ಆಚರಣೆಗಳಿಗೆ ಅಡಚಣೆಯಾದದ್ದರಿಂದ ಪರ್ಯಾಯ ವ್ಯವಸ್ಥೆಯಾಗಿ ಅನೇಕ ಪ್ರಕ್ರಿಯೆಗಳನ್ನು ಸರಳೀಕರಿಸಲಾಯಿತು ಎಂದು ಸಂದರ್ಶನದಿಂದ ಈಗಾಗಲೇ ತಿಳಿದುಬಂದಿದೆ. ಸರಳೀಕರಣವೆಂದರೆ ದೊಡ್ಡಮಟ್ಟದಲ್ಲಿ ಮಾಡುವ ಕಾರ್ಯಕ್ರಮಗಳನ್ನು ಚಿಕ್ಕಮಟ್ಟಿನಲ್ಲಿ ನೆರವೇರಿಸಿದ್ದಾರೆ. ಕೆಲವು ಕ್ಷೇತ್ರಗಳಲ್ಲಿ ಆಡಂಬರವಿಲ್ಲದೆ ಸಂಪ್ರದಾಯದಂತೆ ಕಡಿಮೆ ಜನ ಸೇರಿಕೊಂಡು ಸರಳವಾಗಿ ಆಚರಣೆಗಳನ್ನು ಮಾಡಲಾಗಿದೆ. ಹೆಚ್ಚಿನ ದೇವಸ್ಥಾನಗಳಲ್ಲಿ ಮೆರವಣಿಗೆ, ರಥೋತ್ಸವ, ಜಾತ್ರೆ ಇಲ್ಲದೆ ಕೇವಲ ವೈದಿಕ ಆಚರಣೆಗಳ ಮೂಲಕ ದೇವಸ್ಥಾನದ ಪ್ರಾಗಂಣದ ಒಳಗಡೆಯೇ ವಾರ್ಷಿಕ ಆಚರಣೆಗಳನ್ನು ಆಚರಿಸಲಾಗಿದೆ. ದೈವಸ್ಥಾನಗಳಲ್ಲಿ ವಾರ್ಷಿಕ ಆಚರಣೆಗಳನ್ನು ಹರಕೆ ಮಾಡುವ ಮೂಲಕ ಅಥವಾ ಹೂವಿನ ಪೂಜೆ ಮಾಡುವ ಮೂಲಕ ಆಚರಿಸಲಾಯಿತು.

ದೇವಸ್ಥಾನಗಳಲ್ಲಿ ಪ್ರವೇಶ ನಿರ್ಬಂಧಿಸಿದ್ದರಿಂದ ಜನರ ಧಾರ್ಮಿಕ ಭಾವನೆಗಳ ಮೇಲೆ ಪರಿಣಾಮ ಬೀರಿದೆ. ಧಾರ್ಮಿಕ ಆಚರಣೆಗಳು ಕರ್ತವ್ಯ ದೃಷ್ಟಿಯಿಂದ ವರ್ಷಂಪ್ರತಿಯಾಗಿ ಆಚರಿಸಲ್ಪಡುತ್ತಾ

UGC CARE

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಬಂದಿರುವುದರಿಂದ ಅವುಗಳು ಸ್ಥಗಿತವಾದ ಹಿನ್ನಲೆಯಲ್ಲಿ ಕೆಲವರಿಗೆ ಕರ್ತವ್ಯ ಶೂನ್ಯತೆಯ ಭಾವ ಮೂಡಿದೆ. ಕೆಲವು ದೇವಸ್ಥಾನಗಳಲ್ಲಿ ಉತ್ಸವಕ್ಕಾಗಿ ಎಲ್ಲಾ ಸಿದ್ಧತೆಯನ್ನು ಮಾಡಿಕೊಂಡು ನಂತರದಲ್ಲಿ ಕೊರೋನಾ ಕಾರಣದಿಂದಾಗಿ ಆಚರಣೆಗಳು ಸ್ಥಗಿತವಾದದ್ದರಿಂದ ಜನರ ಮನಸ್ಸಿಗೆ ನೋವಾಗಿದೆ. ಹಾಗೆಯೇ ಈ ರೀತಿಯಲ್ಲಿ ಧಾರ್ಮಿಕ ಆಚರಣೆಗಳಿಗೆ ಅಡಚಣೆ ಹಿಂದೆಂದೂ ಆಗಿರದ ಕಾರಣ ಮತ್ತು ಧೀರ್ಘಕಾಲಿಕವಾಗಿ ಆಚರಣೆಗಳಿಗೆ ತೊಂದರೆಯಾದ ಕಾರಣ ಜನರು ಆತಂಕ್ಕೀಡಾದದ್ದು ಇದೆ. ಒಟ್ಟಾರೆಯಾಗಿ ಜನರ ಭಕ್ತಿ ಮತ್ತು ನಂಬಿಕೆಗಳ ಮೇಲೆ ಪರಿಣಾಮ ಬೀರಿದೆ ಎಂದು ಸಂದರ್ಶನದಿಂದ ತಿಳಿದುಬಂದಿದೆ.

ಹಾಗೆಯೇ ಆಚರಣೆಗಳು ಸ್ಥಗಿತವಾದರೂ ಜನರು ಎದೆಗುಂದದೇ ಸಮಸ್ಯೆಯನ್ನು ಎದುರಿಸಿದ್ದೂ ಕೂಡ ಸಂಶೋಧನೆಯಿಂದ ತಿಳಿದುಬರುತ್ತದೆ. ಇನ್ನೂ ಕೆಲವರು ದೇವರಲ್ಲಿ ಕ್ಷಮೆ ಕೇಳುವ ಮತ್ತು ಪ್ರಾಯಶ್ಚಿತ್ತಗಳನ್ನು ಮಾಡುವ ಮೂಲಕ ತಮಗಾದ ಭಯ ಮತ್ತು ಆತಂಕಗಳನ್ನು ನಿವಾರಿಸಿಕೊಂಡಿದ್ದಾರೆ.

### 1.2.5. ಲಾಕ್ಡೌನ್‌ನಿಂದ ವೃತ್ತಿಯ ಮೇಲಾದ ಪರಿಣಾಮಗಳು

ಧಾರ್ಮಿಕ ಆಚರಣೆಗಳಿಗೆ ಸಂಬಂಧಪಟ್ಟ ಹಾಗೆ ಅನೇಕ ವೃತ್ತಿಗಳು ಹಾಗೂ ಆ ವೃತ್ತಿಗಳನ್ನೇ ನಂಬಿರುವ ಸಾವಿರಾರು ಜನರಿದ್ದಾರೆ. ಹೀಗೆ ಧಾರ್ಮಿಕ ಮತ್ತು ಸಾಂಸ್ಕೃತಿಕ ಆಚರಣೆಗಳಿಗೆ ಸಂಬಂಧಪಟ್ಟ ವಿಭಿನ್ನ ವೃತ್ತಿಯಲ್ಲಿ ತೊಡಗಿರುವವರನ್ನು ಸಂದರ್ಶಿಸಲಾಗಿದೆ. ದೇವಸ್ಥಾನಗಳಲ್ಲಿ ನಡೆಯುವ ಧಾರ್ಮಿಕ ಆಚರಣೆಗಳಿಗೆ ಸಂಬಂಧಪಟ್ಟ ವೃತ್ತಿನಿರತರಾದ ಅರ್ಚಕ – ಪೌರೋಹಿತ್ಯ ವೃತ್ತಿಯವರು, ಉತ್ಸವಗಳಲ್ಲಿ ದೇವರನ್ನು ಹೊರುವವರು, ಜ್ಯೋತಿಷಿಗಳು ಮತ್ತು ಸಹಾಯಕ ಅರ್ಚಕರು ಇದ್ದಾರೆ. ದೈವಸ್ಥಾನಕ್ಕೆ ದೈವ ಚಾಕರಿಯವರು, ಪೂಜಾರಿಗಳು, ದರ್ಶನ ಪಾತ್ರಿಗಳು, ಕೋಲ ಕಟ್ಟುವವರು, ಮುಕ್ಕಾಲ್ತಿ, ಮಧ್ಯಸ್ಥ ಮತ್ತು ಗುರಿಕಾರ ವೃತ್ತಿಯವರು ಇದ್ದಾರೆ. ಹಾಗೆಯೇ ಉತ್ಸವ/ಕೋಲಗಳಲ್ಲಿ ಆಚರಣೆಯ ಅಂಗವಾಗಿ ಭಾಗವಹಿಸುವ ವಾದ್ಯದವರು, ಸುಡುಮದ್ದು ಬಿಡುವವರು, ಜಾಗಟೆ ಮತ್ತು ಡೋಲು ಬಾರಿಸುವವರು, ಮತ್ತು ಜೀಟಿಕೆ ಹಿಡಿಯುವವರು ಹೀಗೆ ವಿವಿಧ ವೃತ್ತಿಯವರು ಇದ್ದಾರೆ. ಹಾಗೆಯೇ ಹಣ್ಣು ಕಾಯಿ ಮತ್ತು ಹೂವು ಮಾರುವ ವ್ಯಾಪಾರಿಗಳು, ಹೋಟೆಲ್ ಮಾಲಿಕರು, ಕ್ಯಾಟರಿಂಗ್‌ನವರು, ಶಾಮಿಯಾನದವರು, ಅಡುಗೆಯವರು ಹೀಗೆ ಅನೇಕರು ಧಾರ್ಮಿಕ ಆಚರಣೆಗಳನ್ನೇ ನಂಬಿಕೊಂಡವರು ಇದ್ದಾರೆ.

ಲಾಕ್ಡೌನ್‌ನಿಂದಾಗಿ ಧಾರ್ಮಿಕ ಮತ್ತು ಸಾಂಸ್ಕೃತಿಕ ಆಚರಣೆಗಳಿಗೆ ಸಂಬಂಧಪಟ್ಟ ವೃತ್ತಿಗಳನ್ನೇ ನಂಬಿ ಜೀವನ ಸಾಗಿಸುತ್ತಿರುವವರಿಗೆ ವೃತ್ತಿಯಲ್ಲಿ ಸಮಸ್ಯೆಗಳಾಗಿದೆ. ಅರ್ಚಕರು, ತಂತ್ರಿಗಳು, ಪೂಜಾರಿಗಳು, ದರ್ಶನದವರು ಮತ್ತು ವಾದ್ಯದವರು ಹೀಗೆ ಧಾರ್ಮಿಕ ಆಚರಣೆಗಳನ್ನೇ ನಂಬಿದವರು ತಮ್ಮ ಮೂಲಕಸಬನ್ನು ಮಾಡುವುದರಿಂದ ವಂಚಿತರಾಗಿದ್ದಾರೆ. ನಮ್ಮ ರಾಜ್ಯದಲ್ಲಿ ಮಾರ್ಚ್, ಏಪ್ರಿಲ್ ಮತ್ತು ಮೇ ಈ ಮೂರು ತಿಂಗಳುಗಳಲ್ಲಿಯೇ ಧಾರ್ಮಿಕ ಕಾರ್ಯಕ್ರಮಗಳು, ಉತ್ಸವಾದಿಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಹೆಚ್ಚಾಗಿ ನಡೆಯುತ್ತವೆ. ಅದೇ ಸಮಯದಲ್ಲಿ ಲಾಕ್ಡೌನ್ ಘೋಷಿಸಿದ್ದರಿಂದ ಈ ಆಚರಣೆಗಳನ್ನು ತಮ್ಮ ಹೊಟ್ಟೆಪಾಡಿಗಾಗಿ ಅವಲಂಬಿಸಿರುವ ಜನರಿಗೆ ತೊಂದರೆಯಾಗಿದೆ. ಆಚರಣೆಗಳಿಗೆ ಸಂಬಂಧಿಸಿದಂತೆ ಮಾಡುವ ವೃತ್ತಿಗಳನ್ನೇ ಪೂರ್ಣ ಪ್ರಮಾಣದಲ್ಲಿ ಅವಲಂಭಿಸಿದ ವ್ಯಕ್ತಿಗಳಿಗೆ ಸಾಕಷ್ಟು ತೊಂದರೆಗಳಾಗಿದೆ. ಪರ್ಯಾಯವಾಗಿ ಯಾವುದಾದರೂ ವೃತ್ತಿಗಳನ್ನು ಅರೆಕಾಲಿಕವಾಗಿ ಮಾಡುತ್ತಿದ್ದವರ ಕೂಡ ಹೆಚ್ಚೇನೂ ಬಾಧಿತರಾಗಲಿಲ್ಲ.

### 1.2.6. ಸಾಮಾಜಿಕ ಪರಿಣಾಮಗಳು

ಅನೇಕರು ಆಚರಣೆಗಳ ಸ್ವರೂಪ ಬದಲಾಗದೇ ಇರುವ ಕಾರಣ ಯಾವುದೇ ರೀತಿಯ ಸಾಮಾಜಿಕ ಪರಿಣಾಮಗಳುಂಟಾಗಿಲ್ಲ ಎಂದು ತಿಳಿಸಿದ್ದಾರೆ. ಇನ್ನು ಕೆಲವರು ಅನೇಕ ರೀತಿಯ ಸಾಮಾಜಿಕ ಪರಿಣಾಮಗಳನ್ನು ತಿಳಿಸಿದ್ದಾರೆ. ಅದರಲ್ಲಿ ಪ್ರಮುಖವಾಗಿ ಧಾರ್ಮಿಕ ಆಚರಣೆಗಳನ್ನೇ ನಂಬಿಕೊಂಡಿದ್ದ ಸಮುದಾಯಗಳು ತಮಗೆ ಪಾರಂಪರಿಕವಾಗಿ ಬಂದ ಮೂಲ ಕಸುಬನ್ನು ತಾತ್ಕಾಲಿಕವಾಗಿ ಕಳೆದುಕೊಳ್ಳುವಂತಾಯಿತು. ಆದರೆ ಕೆಲವರು ಈ ಸಂದರ್ಭದಲ್ಲಿ ಪರ್ಯಾಯ ವೃತ್ತಿಯನ್ನು ಕಂಡುಕೊಂಡರು. ಮುಖ್ಯವಾಗಿ ಒಂದು ವೃತ್ತಿಯನ್ನೇ ಅವಲಂಬಿಸಿ ಎಲ್ಲಾ ಕಾಲದಲ್ಲೂ ಜೀವನ ಸಾಗಿಸುವುದು ಕಷ್ಟವೆಂಬ ಅರಿವಾಗಿದೆ. ಅದರಲ್ಲಿಯೂ ಸಾಮಾಜಿಕ ಹಾಗೂ ಆರ್ಥಿಕ ಭದ್ರತೆಯಿಲ್ಲದ ಕೆಲಸಗಳನ್ನು ಜೀವನೋಪಾಯಕ್ಕಾಗಿ ಅವಲಂಬಿಸಿರುವವರು ಕೇವಲ ಒಂದೇ ವೃತ್ತಿಯನ್ನು ಅವಲಂಬಿಸಿರಲು ಸಾಧ್ಯವಿಲ್ಲವೆಂಬ ಮನವರಿಕೆಯಾಗಿದೆ. ಲಾಕ್ಡೌನ್‌ನಿಂದಾಗಿ ಜನರ ನಡವಳಿಕೆಯಲ್ಲಿಯೂ ಬದಲಾವಣೆಗಳಾಗಿದೆ. ಲಾಕ್ಡೌನ್‌ನಿಂದ ತೊಂದರೆಗೊಳಗಾದ ಜನರು ಮನುಷ್ಯ ಪ್ರಧಾನ ಸಮಾಜದಲ್ಲಿರುವ ಧನಾತ್ಮಕ ಮತ್ತು ಋಣಾತ್ಮಕ ಅಂಶಗಳ ಬಗ್ಗೆ ಯೋಚಿಸಲಾರಂಬಿಸಿದ್ದಾರೆ ಮತ್ತು ಜನರಲ್ಲಿ ನೈತಿಕ ಶಿಸ್ತು ಮೂಡಿದೆ. ಹಾಗೆಯೇ ಧಾರ್ಮಿಕ ಆಚರಣೆಗಳು ಸ್ಥಗಿತವಾದದ್ದರಿಂದ ಜನರಲ್ಲಿ ಭಕ್ತಿ ಹೆಚ್ಚಾಗಿದೆ. ಋಣಾತ್ಮಕವಾಗಿರುವ ಪರಿಣಾಮವನ್ನು ನೋಡಿದಾಗ ಕೊರೋನಾ ನಿವಾರಣೆಯ ಉದ್ದೇಶದಿಂದ ಕೆಲವೆಡೆ ಮೂಢನಂಬಿಕೆಗಳು ಜಾಸ್ತಿಯಾಗಿರುವಂತೆ ತಿಳಿದುಬರುತ್ತದೆ.

ಕೊನೆಯದಾಗಿ, ಧಾರ್ಮಿಕ ಆಚರಣೆಗಳಲ್ಲಿನ ಬದಲಾವಣೆಯ ದೃಷ್ಟಿಯಿಂದ ನೋಡಿದಾಗ ಲಾಕ್ಡೌನ್‌ನಿಂದಾಗಿ ಮದುವೆ, ಗೃಹ ಪ್ರವೇಶ ಮತ್ತು ಉಪನಯನಾದಿ ಧಾರ್ಮಿಕ ಕಾರ್ಯಕ್ರಮಗಳು ಯಾವುದೇ ಆಡಂಬರವಿಲ್ಲದೆ ಸರಳವಾಗಿ ನಡೆದಿದೆ. ದೇವಸ್ಥಾನ ಮತ್ತು ದೈವಸ್ಥಾನದ ಉತ್ಸವಾದಿಗಳು ಯಾವುದೇ ವೈಭವೀಕರಣವಿಲ್ಲದೆ ಶಿಸ್ತುಬದ್ಧವಾಗಿ ಮತ್ತು ಸಂಪ್ರದಾಯಬದ್ಧವಾಗಿ ನಡೆದಿದೆ.

### 1.2.7. ಆರ್ಥಿಕ ಪರಿಣಾಮಗಳು

ಆಚರಣೆಗಳು ಸ್ಥಗಿತವಾಗಿದ್ದರಿಂದ ಅನೇಕರಿಗೆ ತಮ್ಮ ಆರ್ಥಿಕ ಆದಾಯದ ಮೂಲವೇ ಬರಡಾದಂತಾಯಿತು. ಹಲವರಿಗೆ ಧಾರ್ಮಿಕ ಆಚರಣೆಗಳಿಗೆ ಸಂಬಂಧಪಟ್ಟ ವೃತ್ತಿಯನ್ನು ಹೊರತುಪಡಿಸಿ ಬೇರೆ ಯಾವುದೇ ಪರ್ಯಾಯ ವೃತ್ತಿ ಇಲ್ಲದ ಕಾರಣ ಆರ್ಥಿಕವಾಗಿ ಅನೇಕ ಸಮಸ್ಯೆಗಳಾಯಿತು. ಉಳಿತಾಯ ಮಾಡಿಟ್ಟ ಹಣವನ್ನು ಬಳಸಿಕೊಂಡರೂ ಈ ಆಚರಣೆಗಳನ್ನು ನಂಬಿಕೊಂಡಿರುವ ಹೆಚ್ಚಿನ ಜನರು ಕೆಳ ಮತ್ತು ಮಧ್ಯಮ ವರ್ಗದವರಾದ್ದರಿಂದ ಉಳಿತಾಯದ ಹಣವೂ ಬೇಗನೇ ಖಾಲಿಯಾಯಿತು. ಲಾಕ್ಡೌನ್‌ನಿಂದಾಗಿ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದ್ದರಿಂದ ಸಾಲ ಮಾಡಬೇಕಾಗಿ ಬಂದಿದೆ ಮತ್ತು ಸಾಲ ಮಾಡಿದವರಿಗೆ ಸಾಲ ತೀರಿಸಲು ಸಮಸ್ಯೆಯಾಗಿದೆ. ದೇವಸ್ಥಾನಗಳಿಗೆ ಭಕ್ತರು ಬರದೆ ಸೇವೆಗಳು ಸ್ಥಗಿತವಾದದ್ದರಿಂದ ದೇವಸ್ಥಾನದ ಸಿಬ್ಬಂಧಿಗಳಿಗೆ ಸಂಬಳ ಕೊಡುವುದಕ್ಕೆ ಕೆಲವು ದೇವಸ್ಥಾನಗಳಲ್ಲಿ ಸಮಸ್ಯೆಯಾಗಿದೆ. ಹಾಗಾಗಿ ದೇವಸ್ಥಾನದ ಸಿಬ್ಬಂಧಿಗಳ ಸಂಬಳವನ್ನು ಕಡಿತಗೊಳಿಸಿದ್ದಾರೆ. ದೇವಸ್ಥಾನಗಳ ಉತ್ಸವಗಳಿಗೆ ವ್ಯಾಪಾರ ಮಾಡಲು ತರುವ ಸಾಮಗ್ರಿಗಳು ನಷ್ಟವಾದ ಪರಿಣಾಮವಾಗಿ ವ್ಯಾಪಾರಿಗಳಿಗೆ ಆರ್ಥಿಕ ನಷ್ಟವಾಗಿದೆ. ಕೆಲವರು ಉದ್ಯೋಗವನ್ನೂ ಕಳೆದುಕೊಂಡಿದ್ದಾರೆ ಎಂದು ಸಂದರ್ಶನದಲ್ಲಿ ಭಾಗವಹಿಸಿದವರು ತಿಳಿಸಿದ್ದಾರೆ. ಹಾಗೆಯೇ ಸರಳ ಜೀವನ ಶೈಲಿಯನ್ನು ಅಳವಡಿಸಿಕೊಂಡಿರುವವರು ಮತ್ತು ಭವಿಷ್ಯಕ್ಕಾಗಿ ಹಣವನ್ನು ಉಳಿಸಿದ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಮಧ್ಯಮ ವರ್ಗದ ಜನರು ಯಾವುದೇ ರೀತಿಯ ತೊಂದರೆಯಿಲ್ಲದೆ ಸಾಮಾನ್ಯ ಜೀವನ ನಡೆಸಿದ್ದಾರೆಂದು ಅಧ್ಯಯನದಿಂದ ತಿಳಿದುಬಂದಿದೆ.

### 1.2.8. ಧಾರ್ಮಿಕ ಭಾವನೆ/ನಂಬಿಕೆಗಳ ಮೇಲಾದ ವ್ಯತಿರಿಕ್ತ ಪರಿಣಾಮಗಳನ್ನು ನಿವಾರಿಸಿಕೊಳ್ಳಲು ಕಂಡುಕೊಂಡ ಪರಿಹಾರಗಳು

ಲಾಕ್ಡೌನ್‌ನಿಂದ ಧಾರ್ಮಿಕ ನಂಬಿಕೆ/ಭಾವನೆಗಳ ಮೇಲೆ ಉಂಟಾದ ವ್ಯತಿರಿಕ್ತ ಪರಿಣಾಮವನ್ನು ನಿವಾರಿಸಿಕೊಳ್ಳಲು ಹಲವರು ವಿವಿಧ ಪರಿಹಾರಗಳನ್ನು ಸ್ವತಃ ಅಥವಾ ಇನ್ನೊಬ್ಬರಲ್ಲಿ ಕೇಳಿ ಕಂಡುಕೊಂಡಿದ್ದಾರೆ. ಇನ್ನೂ ಕೆಲವು ಭಾಗಗಳಲ್ಲಿ ಊರಿನ ಹತ್ತು ಸಮಸ್ತರು ಸೇರಿಕೊಂಡು ದೇವಸ್ಥಾನಗಳಲ್ಲಿ ಸಾಮೂಹಿಕ ಪ್ರಾರ್ಥನೆ ಮಾಡಿಕೊಳ್ಳುವ ಮೂಲಕ ಮತ್ತು ಆಚರಣೆಗಳನ್ನು ಸಂಕ್ಷಿಪ್ತವಾಗಿ ದೇವಸ್ಥಾನ/ದೈವಸ್ಥಾನಗಳಲ್ಲಿ ಆಚರಿಸುವುದರ ಮೂಲಕ ಪರಿಹಾರವನ್ನು ಕಂಡುಕೊಂಡಿದ್ದಾರೆ. ಇನ್ನೂ ಕೆಲವು ದೇವಸ್ಥಾನಗಳಲ್ಲಿ ಆಚರಣೆಗಳು ಸ್ಥಗಿತವಾದ ಹಿನ್ನಲೆಯಲ್ಲಿ ತಂತ್ರಿಗಳ ಸಲಹೆಯಂತೆ ಪ್ರಾಯಶ್ಚಿತ್ತ ಧಾರ್ಮಿಕ ಪ್ರಕ್ರಿಯಗಳನ್ನು ಮಾಡಿದ್ದಾರೆ.

ಧಾರ್ಮಿಕ ಕ್ಷೇತ್ರಗಳು ಮತ್ತು ಆಚರಣೆಗಳು ಮನುಷ್ಯನ ಮಾನಸಿಕ ಆರೋಗ್ಯದ ಮೇಲೂ ಪ್ರಭಾವವನ್ನು ಬೀರುತ್ತವೆ. ಹಿರಿಯ ನಾಗರೀಕರು ಪ್ರತಿನಿತ್ಯವು ದೇವಸ್ಥಾನಕ್ಕೆ ಭೇಟಿ ನೀಡಿ ದೇವರ ದರ್ಶನ ಮಾಡುವುದು ಮತ್ತು ಅಲ್ಲಿ ನಡೆಯುವ ಪ್ರವಚನ ಅಥವಾ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಮೂಲಕ ಮನಃಶಾಂತಿಯನ್ನು ಹೊಂದುತ್ತಾರೆ. ಇನ್ನು ಉತ್ಸವಾದಿಗಳಿಗೆ ಮೂಲ ಪರಿಕರವೇ ಮನುಷ್ಯನ ಉತ್ಸಾಹ; ಗ್ರಾಮದ ಜನರ ಸುಖ ಮತ್ತು ಕ್ಷೇಮವನ್ನು ಬಯಸಿ ಗ್ರಾಮದ ಒಳಿತಿಗಾಗಿ ದೇವರಲ್ಲಿ ಪ್ರಾರ್ಥಿಸಿ ಸಂಭ್ರಮದಿಂದ ಉತ್ಸವ ನಡೆಸುತ್ತಾರೆ. ಸಮಾಜದಲ್ಲಿನ ಒಗ್ಗಟ್ಟು ಧಾರ್ಮಿಕ ಆಚರಣೆಗಳ ಮೂಲಕ ಪ್ರದರ್ಶಿತವಾಗುತ್ತದೆ. ಉತ್ಸವಾದಿಗಳಲ್ಲಿ ಜನರು ತಮಗೆ ಪಾರಂಪರಿಕವಾಗಿ ಬಂದಿರುವ ಕೆಲಸಗಳನ್ನು ಕರ್ತವ್ಯವೆಂದು ತಿಳಿದು ಒಂದು ಸಮಗ್ರ ಕಾರ್ಯವನ್ನು ಎಲ್ಲರೂ ಒಂದಾಗಿ ಮಾಡುತ್ತಾರೆ.


### ಉಪಸಂಹಾರ

ಲಾಕ್ಡೌನ್ ಸಮಯದಲ್ಲಿ ಮತ್ತು ಲಾಕ್ಡೌನ್ ನಂತರದಲ್ಲಿ ಧಾರ್ಮಿಕ ಆಚರಣೆಗಳಿಗೆ ಅಡಚಣೆಯಾದ ಬಗೆಯಲ್ಲಿ ಹಿಂದೆ ಎಂದೂ ಆಗಿರಲಿಲ್ಲ. ಧಾರ್ಮಿಕ ಕ್ಷೇತ್ರಗಳಲ್ಲಿನ ಆಚರಣೆಗಳು ಸ್ಥಗಿತವಾಗುವುದು ಅತೀ ಅಪರೂಪ. ಕಷ್ಟ ಅಥವಾ ನೋವಿನಲ್ಲಿರುವವರಿಗೆ ಎಲ್ಲಿ ಅವರ ಸಮಸ್ಯೆಗಳಿಗೆ ಪರಿಹಾರಗಳು ಸಿಗುತ್ತವೆಯೋ ಅಂತಹ ಸ್ಥಳ/ ವ್ಯಕ್ತಿಗಳೊಂದಿಗೆ ಭಾವನಾತ್ಮಕವಾದ ಸಂಬಂಧ ಏರ್ಪಟ್ಟಿರುತ್ತದೆ. ಕೊರೋನಾ ಲಾಕ್ಡೌನ್‌ನಿಂದ ಪ್ರಪಂಚದಲ್ಲಿ ಎಲ್ಲಾ ಕ್ಷೇತ್ರಗಳಿಗೆ ಸಮಸ್ಯೆಯಾದಂತೆ ಧಾರ್ಮಿಕ ಹಾಗು ಸಾಂಸ್ಕೃತಿಕ ಕ್ಷೇತ್ರಗಳಿಗೂ ಹೆಚ್ಚಿನ ದುಷ್ಪರಿಣಾಮಗಳನ್ನು ಬೀರಿದೆ. ಲಾಕ್ಡೌನ್‌ನಿಂದ ಸ್ಥಗಿತಗೊಂಡ ಆಚರಣೆಗಳು ನಿಧಾನವಾಗಿ ಪುನರಾರಂಭಗೊಳ್ಳುತ್ತಿವೆ. ಲಾಕ್ಡೌನ್‌ನಿಂದ ಉಂಟಾದ ದುಷ್ಪರಿಣಾಮಗಳಿಂದ ಸಂಪೂರ್ಣವಾಗಿ ಚೇತರಿಸಿಕೊಳ್ಳಲು ಎಷ್ಟು ಸಮಯಬೇಕಾಗಬಹುದು ಎಂಬುದನ್ನು ಹೇಳುವುದು ಮತ್ತು ಲಾಕ್ಡೌನ್‌ನಿಂದ ಉಂಟಾಗಬಹುದಾದ ದೀರ್ಘಕಾಲಿಕ ಪರಿಣಾಮಗಳನ್ನು ಪ್ರಸ್ತುತದಲ್ಲಿ ನಿರ್ಧರಿಸುವುದು ಕಷ್ಟಸಾಧ್ಯವಾಗಬಹುದು. ಕೊರೋನಾದ ನಿಯಂತ್ರಣ ಸಂಪೂರ್ಣವಾಗಿ ಆಗುವವರೆಗೆ ಲಾಕ್ಡೌನ್‌ನಿಂದ ಮುಕ್ತಿ ಹೊಂದುವುದು ಕಷ್ಟವೆಂಬಂತೆ ತೋರುತ್ತದೆ. ಎಲ್ಲದಕ್ಕಿಂತ ಮುಖ್ಯವಾಗಿ ವೈಯಕ್ತಿಕ, ಸಾಮಾಜಿಕ , ಆಡಳಿತಾತ್ಮಕವಾಗಿ ಕೊರೋನಾದಂತಹ ವಿಪತ್ತುಗಳನ್ನು ನಿಯಂತ್ರಿಸುವಲ್ಲಿ ಮತ್ತು ಎದುರಿಸುವಲ್ಲಿ ನಮ್ಮ ಸಮಾಜವು ಎಷ್ಟರ ಮಟ್ಟಿಗೆ ಸಫಲವಾಗುತ್ತದೆ ಹಾಗೂ ಯಾವ ರೀತಿಯ ಯೋಜನೆಗಳನ್ನು ರೂಪಿಸುತ್ತದೆ ಎಂಬುದನ್ನು ವಿಮರ್ಶಿಸುವುದೂ ಕೂಡ ಅನಿವಾರ್ಯವಾಗಿದೆ.

### ಪರಾಮರ್ಶನ ಗ್ರಂಥಗಳು


- **Kumar, R. (2020, September 21) :** Religious festivals in India adapt to pandemic 'new normal' as followers and businesses miss out on celebrations. South China Morning Post. Retrieved July 17, 2021, from
- **Dhatrak, S. P. (2020) :** The Socio- Economic Impact of Covid-19 or Corona Pandemic in India. Shanlax International Journal of Arts, Science and Humanities, 8 (1), 84-88.
- **OECD. (2020). Culture shock :** COVID-19 and the cultural and creative sectors.
- **Aneja, R., & Ahuja, V. (2021) :** An assessment of socio-economic impact of COVID-19 pandemic in India. Journal of Public Affairs.
- **Fatima, H., Oyetunji, T. P., Mishra, S., Sinha, K., Olorunsogbon, O. F., Akande, O. S., et al. (2021):** Religious coping in the time of COVID-19 Pandemic in India and Nigeria: Finding of a cross-national community survey. International Journal of Social Psychiatry .
- **Gopal, A., Sharma, A. J., & Subramanyam, M. A. (2020) :** Dynamics of psychological responses to COVID-19 in India: A longitudinal study. PLoS ONE, 15 (10).
- **News 18. (2020, April) :** Tamil Nadu Temples too Begin to Feel Impact of Covid-19 Lockdown, Lose Crores in Revenue. Retrieved May 2021, from





ವಿದ್ಯಾನಿಧಿ ಪ್ರಕಾಶನ ®
ಶ್ರೀ ಶಿವಕುಮಾರ ಏಜನ್ಸಿ ®
ಶೈಕ್ಷಣಿಕ ಪುಸ್ತಕಗಳ ಪ್ರಕಾಶಕರು ಮತ್ತು ಮಾರಾಟಗಾರರು
ಸ್ಟೇಶನ್ ರೋಡ ಮತ್ತು 'ನನಸು', ಹಳೆ ಸರಕಾರಿ ಆಸ್ಪತ್ರೆ ಎದುರಿಗೆ, ಎಸ್.ಪಿ. ಗದಗ ಕಂಪೌಂಡ,
ಜೆ.ಟಿ. ಮಠ ರೋಡ, ಗದಗ-582 101 ದೂರವಾಣಿ : 08372-200527
e-mail : vidyanidhiprakashana@gmail.com.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರ : ಒಂದು ಅವಲೋಕನ

✍ **ಸಾವಿತ್ರಿ ಕ. ಹಿರೇಮಠ,** ಸಂಶೋಧನಾ ವಿದ್ಯಾರ್ಥಿನಿ, ಸಮಾಜಶಾಸ್ತ್ರ ಅಧ್ಯಯನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಬುಡಕಟ್ಟು ವಿದ್ಯಾರ್ಥಿಗಳ ಆರೋಗ್ಯ ಮತ್ತು ಶೈಕ್ಷಣಿಕ ಅಭಿವೃದ್ಧಿ ಒಂದು ಸವಾಲಾಗಿತ್ತು. ಏಕೆಂದರೆ ಬುಡಕಟ್ಟು ಮಕ್ಕಳ ತಂದೆ ತಾಯಿಯವರು ಶಿಕ್ಷಣವನ್ನು ಹೊಂದದಿರುವುದು ಎಂದು ಹೇಳಬಹುದು. ಉಪಜೀವನ ನಡೆಸುವುದು ಹಾಗೂ ಸಂಪ್ರದಾಯವನ್ನು ಉಳಿಸಿಕೊಂಡು ಹೋಗುವ ಉದ್ದೇಶ ಮಾತ್ರ ಇವರದ್ದಾಗಿದ್ದು ಮಕ್ಕಳಿಗೆ ಶಿಕ್ಷಣವನ್ನು ನೀಡಲು ಬುಡಕಟ್ಟು ವಿಧ್ಯಾರ್ಥಿಗಳ ಪಾಲಕರು ಮುಂದಾಗುವುದಿಲ್ಲ, ಇಂತಹ ಮಕ್ಕಳಿಗೆ ಶಿಕ್ಷಣವನ್ನು ನೀಡುವುದು ಅಷ್ಟೆ ಅಲ್ಲದೆ, ಅವರ ಆರೋಗ್ಯ ಮತ್ತು ಸಂಪೋಷಣೆಯು ಕೂಡಾ ಕಷ್ಟ ಸಾಧ್ಯವಾಗಿತ್ತು. ಈ ಸವಾಲನ್ನು ಯಶಸ್ವಿಗೊಳಿಸುವಲ್ಲಿ ಕಾರಣವಾದಂತಹ ಹಲವಾರು ಸಂಸ್ಥೆಗಳಲ್ಲಿ ಒಂದಾದಂತಹ ಸಂಸ್ಥೆ ಡಾ. ಸುದರ್ಶನ್‌ರವರು ನಿರ್ಮಿಸಿದಂತಹ ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರ. ಇದು ಬುಡಕಟ್ಟು ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ನೀಡುವುದರೊಂದಿಗೆ ವಸತಿ ಸೌಲಭ್ಯ ಮತ್ತು ಉತ್ತಮ ಪೌಷ್ಟಿಕಾಂಶಯುತ ಆಹಾರವನ್ನು ಮತ್ತು ಆರೋಗ್ಯಕ್ಕೆ ಸಂಬಂಧಿಸಿದ ಸೌಲಭ್ಯಗಳನ್ನು ಒದಗಿಸುವುದು ಮುಂದಾಯಿತು. ಬುಡಕಟ್ಟು ಜನರ ಜೀವನದ ಸುಧಾರಣೆಗಾಗಿ 1981 ರಲ್ಲಿ ಈ ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರ (ವಿಜಿಕೆಕೆ) ವನ್ನು ಸ್ಥಾಪಿಸಲಾಯಿತು. ಡಾ. ಸುದರ್ಶನ್ ಅವರು ನೀಡುವಂತಹ ಚಿಕಿತ್ಸೆಯ ಬಿ. ಆರ್. ಬೆಟ್ಟಗಳ ಸೋಲಿಗರಲ್ಲಿ ಮೆಚ್ಚುಗೆಯನ್ನು ಪಡೆದ ನಂತರ, ನೆರೆಹೊರೆಯ ಹಳ್ಳಿಗಳ ಬುಡಕಟ್ಟು ಜನಾಂಗದವರು ಸಹ ಇವರ ಹತ್ತಿರ ಚಿಕಿತ್ಸೆಗೆ ಬರಲು ಪ್ರಾರಂಭಿಸಿದರು. ಡಾ. ಸುದರ್ಶನ್ ಮತ್ತು ಅವರ ತಂಡವು ಎಲ್ಲಾ ಸಣ್ಣ ಕುಗ್ರಾಮಗಳಲ್ಲಿ ಮಾಹಿತಿ ಅಧಿವೇಶನಗಳನ್ನು ನಡೆಸಿ ಸ್ಥಳೀಯ ಜನರಿಗೆ ಆರೋಗ್ಯದ ಅರಿವು ಮೂಡಿಸಿತು. ಅಲ್ಲಿಯ ಸಣ್ಣ ಆಸ್ಪತ್ರೆ ಹಲವಾರು ಕಾಯಿಲೆಗಳಿಗೆ ಚಿಕಿತ್ಸೆ ನೀಡಲು ಪ್ರಾರಂಭಿಸಿ ನಂತರದ ದಿನಗಳಲ್ಲಿ ಉತ್ತಮ ಫಲಿತಾಂಶಗಳನ್ನು ತಂದಿತು ಎಂದು ಹೇಳಬಹುದು.

ಈ ಅಧ್ಯಯನಕ್ಕೆ ಪ್ರಾಥಮಿಕ ಮತ್ತು ಮಾಧ್ಯಮಿಕ ಮಾಹಿತಿ ಸಂಗ್ರಹಣಾ ವಿಧಾನದ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದ್ದು, ಪ್ರಾಥಮಿಕ ಮಾಹಿತಿ ಸಂಗ್ರಹಣೆಯನ್ನು 2023 ಜನೇವರಿ 29 ರಿಂದ 31, ರ ವರೆಗೆ ಕೇಂದ್ರಕ್ಕೆ ಭೇಟಿ ನೀಡಿ ಸಂದರ್ಶನ ಹಾಗೂ ಅವಲೋಕನ ವಿಧಾನದೊಂದಿಗೆ ಮಾಹಿತಿಯನ್ನು ಸ್ಥಳಕ್ಕೆ ಭೇಟಿ ನೀಡಿ ಸಂಸ್ಥೆಯ ಸಂಯೋಜಕರು ಮತ್ತು ಶಾಲೆಯ ಶಿಕ್ಷಕರು ಹಾಗೂ ಹಾಸ್ಟೇಲ್ ವಾರ್ಡನ್‌ನಿಂದ ತಿಳಿದುಕೊಳ್ಳಲಾಯಿತು. ಮಾಧ್ಯಮಿಕ ಮಾಹಿತಿಯನ್ನು ಅಂರ್ತಜಾಲದ ಮೂಲಕ ಸಂಗ್ರಹಿಸಲಾಯಿತು.

## ಆರೋಗ್ಯಕ್ಕೆ ಸಂಬಂಧಿಸಿದಂತಹ ಸೌಲಭ್ಯಗಳು

'ಆರೋಗ್ಯವೇ ಭಾಗ್ಯ' ಎಂಬ ನಾಣ್ಣುಡಿಯಂತೆ ಬುಡಕಟ್ಟು ಜನರ ಆರೋಗ್ಯವನ್ನು ಕಾಪಾಡುವ ಉದ್ದೇಶ ಈ ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರದ್ದಾಗಿದ್ದು, ಬುಡಕಟ್ಟು ಜನರ ಆರೋಗ್ಯದ ಸುಧಾರಣೆಗೆ ಪ್ರಯೋಗಾಲಯ, ಕ್ಷ–ಕಿರಣ ಮತ್ತು ಆಪರೇಷನ್ ಥಿಯೇಟರ್‌ನೊಂದಿಗೆ 20 ಹಾಸಿಗೆಗಳ ಬುಡಕಟ್ಟು ಆಸ್ಪತ್ರೆಯು ಉಚಿತ ವೈದ್ಯಕೀಯ ಸೇವೆ ಮತ್ತು ಟೆಲಿಮೆಡಿಸಿನ್ ಒದಗಿಸಿದೆ. ಸ್ಥಳೀಯ ಆರೋಗ್ಯ ಕಾರ್ಯಕರ್ತರ ಮೂಲಕ ಸಮುದಾಯ ಆಧಾರಿತ ಅನಾರೋಗ್ಯವನ್ನು ತಡೆಗಟ್ಟುವ, ಪ್ರಚಾರ ಮತ್ತು ಪುನರ್ವಸತಿ ಕಾರ್ಯಕ್ರಮಗಳನ್ನು ನಡೆಸಿದರು. ಬುಡಕಟ್ಟು ಕುಗ್ರಾಮಗಳಿಗೆ ಭೇಟಿ ನೀಡುವ ಸಂಚಾರಿ ವೈದ್ಯಕೀಯ ಘಟಕವನ್ನು ನಿರ್ಮಿಸಿದರು. ಇವೆಲ್ಲವನ್ನು ವ್ಯವಸ್ಥಿತವಾಗಿ ನಿರ್ವಹಿಸಲು ಆರೋಗ್ಯ ಕಾರ್ಯಕರ್ತರು ಮತ್ತು ಗೃಹ ಶಸ್ತ್ರಚಿಕಿತ್ಸಕರಿಗೆ ಹಲವಾರು ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದು ಅಧ್ಯಯನದಿಂದ ತಿಳಿದುಬಂದಿದೆ.

ಸ್ಥಳಕ್ಕೆ ಭೇಟಿ ನೀಡಿದಾಗ ಪುಟ್ಟದೊಂದು ಮನೆ (ಗುಡಿಸಲು) ಕಾಣಿಸಿತು ಅದರ ಕುರಿತು ಪ್ರಶ್ನಿಸಿದಾಗ ಅದು ಡಾ. ಸುದರ್ಶನ್‌ರವರ 'ಬಂಡೆಯ ಮೇಲಿನ ಗುಡಿಸಲು' ಎಂದು ಹೇಳಿದರು. ಡಾ. ಸುದರ್ಶನ್‌ರವರು ಮೊದಲು ಇಲ್ಲಿಂದಲೇ ತಮ್ಮ ಸೇವೆಯನ್ನು ಆರಂಭಿಸಿದರು ಅದರ ನೆನಪಿಗಾಗಿ ಇನ್ನು ಅದನ್ನು ಉಳಿಸಿಕೊಂಡಿದ್ದಾರೆ. ಅವರ ಆ ಸೇವೆಯಿಂದ ಇಂದು ಎಲ್ಲಾ ಅಗತ್ಯ ಮೂಲಸೌಕರ್ಯಗಳನ್ನು ಹೊಂದಿದ 20 ಹಾಸಿಗೆಗಳ ಆಸ್ಪತ್ರೆ ನಿರ್ಮಾಣವಾಗಿದೆ. ಇದರಲ್ಲಿ ಪ್ರಯೋಗಾಲಯ, ಎಕ್ಸ್‌ರೇ ಸೌಲಭ್ಯ, ಆಪರೇಷನ್ ಥಿಯೇಟರ್ ಮತ್ತು ಉತ್ತಮ ದಾಸ್ತಾನು ಹೊಂದಿರುವ ಫಾರ್ಮಸಿ ಇದ್ದು, ಈ ಆಸ್ಪತ್ರೆಯು ಹೆಚ್ಚಿನ ಸಂಖ್ಯೆಯ ಬುಡಕಟ್ಟು ಜನಾಂಗದವರಿಗೆ ಸೇವೆ ಸಲ್ಲಿಸುತ್ತಿದೆ. ಮತ್ತು ಇದು ಎಲ್ಲರಿಗೂ ಉಚಿತ ಚಿಕಿತ್ಸೆಯನ್ನು ನೀಡುವಂತಹದ್ದಾಗಿದೆ. ಈ ಆಸ್ಪತ್ರೆಯು ತಾಯಿ ಮತ್ತು ಮಕ್ಕಳ ಆರೋಗ್ಯ, ಸಾಂಕ್ರಾಮಿಕ ರೋಗಗಳು, ಸಾಂಕ್ರಾಮಿಕವಲ್ಲದ ರೋಗಗಳು, ಮಾನಸಿಕ ಆರೋಗ್ಯ, ದಂತ ಆರೋಗ್ಯ ಮತ್ತು ಸಮುದಾಯ ಆಧಾರಿತ ಪುನರ್ವಸತಿ ಕಾರ್ಯಕ್ರಮ. ಮಕ್ಕಳ ಪೋಷಣೆ, ಸುರಕ್ಷಿತ ಕುಡಿಯುವ ನೀರು ಮತ್ತು ನೈರ್ಮಲ್ಯ ಮುಂತಾದ ವ್ಯವಸ್ಥಿತ ಸೇವೆಗಳು ಈ ಕೇಂದ್ರದಡಿಯಲ್ಲಿ ನಡೆಯುತ್ತವೆ. ಇವರಲ್ಲಿ ಸಾಂಪ್ರದಾಯಿಕ ಔಷಧಗಳು ಮತ್ತು ಸ್ಥಳೀಯ ಆರೋಗ್ಯ ಸಂಪ್ರದಾಯಗಳ ಪುನರುಜ್ಜೀವನಕ್ಕೆ ಸಂಬಂಧಿಸಿದಂತೆ ಹಲವಾರು ಯೋಜನೆಗಳಿಗೂ ಇವರು ಪ್ರಾಧಾನ್ಯತೆಯನ್ನು ಕೊಟ್ಟಿದ್ದಾರೆ.

## ಶಿಕ್ಷಣಕ್ಕೆ ಸಂಬಂಧಿಸಿದಂತ ಸೌಲಭ್ಯಗಳು

ಈ ಕೇಂದ್ರದಡಿ 200 ವಿದ್ಯಾರ್ಥಿಗಳಿಗೆ ಉಚಿತ (ಪೌಷ್ಟಿಕ) ಆಹಾರ ಜೊತೆಗೆ ಹಾಸ್ಟೆಲ್ ಸೌಲಭ್ಯವನ್ನು ಒದಗಿಸಿದೆ. 350 ಕ್ಕೂ ಹೆಚ್ಚು ಬುಡಕಟ್ಟು ಹುಡುಗಿಯರು ಮತ್ತು ಹುಡುಗರಿಗೆ ಇಲ್ಲಿ ಬುಡಕಟ್ಟು ಶಾಲೆ ನಿರ್ಮಾಣವಾಗಿದೆ. ಸಧ್ಯದ ಸ್ಥಿತಿಯನ್ನು ನೋಡಿದಾಗ ಇಲ್ಲಿ ಒಟ್ಟು 325 ವಿದ್ಯಾರ್ಥಿಗಳು ಶಾಲೆಯಲ್ಲಿ ಶಿಕ್ಷಣ ಪಡೆದುಕೊಳ್ಳುತ್ತಿದ್ದಾರೆ. 150 ಮಕ್ಕಳು ಇಲ್ಲಿನ ಹಾಸ್ಟೇಲ್ ಸೌಲಭ್ಯವನ್ನು ಪಡೆದುಕೊಳ್ಳುತ್ತಿದ್ದಾರೆ. ದೂರದ ಅರಣ್ಯ ಪ್ರದೇಶಗಳಲ್ಲಿ 4 ಅನೌಪಚಾರಿಕ ಶಾಲೆಗಳು, ಪ್ರಿ–ಯೂನಿವರ್ಸಿಟಿ ಕಾಲೇಜು – ಕಲೆ, ಕೈಗಾರಿಕಾ ತರಬೇತಿ ಸಂಸ್ಥೆ ಎ.ಪಿ.ಜೆ. ಅಬ್ದುಲ್‌ಕಲಾಂ ಸೈನ್ಸ್ ಪಾರ್ಕ್, ಹ್ಯಾಪಿ ಸ್ಕೂಲ್ ಮುಂತಾದವುಗಳನ್ನು ಕಾಣುತ್ತೇವೆ. ಇಲ್ಲಿ ಶಿಕ್ಷಣವನ್ನು ಪಡೆದುಕೊಂಡವರು ಹಲವಾರು ಹುದ್ದೆಗಳಲ್ಲಿದ್ದಾರೆ ಮತ್ತು 6 ವಿದ್ಯಾರ್ಥಿಗಳು ಪಿ.ಎಚ್.ಡಿಯನ್ನು ಪಡೆದಿದ್ದಾರೆ. ಇಲ್ಲಿನ ಶಾಲೆಯು ಸ್ಮಾರ್ಟ ಕ್ಲಾಸ್‌ನ್ನು ಹೊಂದಿದೆ. ಇಲ್ಲಿ ಸಭಾಂಗಣ, ಪ್ರಾರ್ಥನಾ ಮಂದಿರವಿದ್ದು ಮಕ್ಕಳಿಗೆ ವೇಳಾಪಟ್ಟಿಯ ಪ್ರಕಾರ ಎಲ್ಲ ಕಾರ್ಯಗಳನ್ನು ಮಾಡಿಸುತ್ತಾರೆ. ಶಿಕ್ಷಕರಿಗೂ ಕೂಡಾ ವಸತಿ ಗೃಹಗಳು ಇದೆ. ಬುಡಕಟ್ಟು

APPROVED UGC CARE

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಜನರ ಒಡೆತನದಲ್ಲಿ ಹಲವಾರು ವೃತ್ತಿಪರ ತರಬೇತಿಯನ್ನು ನೀಡುವುದು ಮತ್ತು ಉತ್ಪಾದನೆಯ ಕುರಿತು ಮಾರ್ಗದರ್ಶನ ನೀಡುತ್ತಿದ್ದು, ಇಲ್ಲಿ ಬಿದಿರಿನ ಕರಕುಶಲ ವಸ್ತುಗಳ ತಯಾರಿಕೆ, ಕೈಯಿಂದ ಮಾಡಿದ ಕಾಗದದ ಘಟಕ, ಮೇಣದ ಬತ್ತಿ ತಯಾರಿಕೆ, ಜೇನು ಸಂಸ್ಕರಣೆ, ಉಪ್ಪಿನಕಾಯಿ ತಯಾರಿಕೆ, ಹಣ್ಣಿನ ಸೂಪ್ ತಯಾರಿಕೆ, ಆಹಾರ ಸಂಸ್ಕರಣೆ, ಎಲೆ ಕಪ್, ಬಟ್ಟೆ ನೇಯ್ಗೆ ಮುಂತಾದವುಗಳ ಕುರಿತು ಮಕ್ಕಳಿಗೆ ತರಬೇತಿಯನ್ನು ನೀಡಿ ಮಕ್ಕಳಿಗೆ ಔದ್ಯೋಗಿಕ ಒಲವನ್ನು ಮೂಡಿಸುತ್ತಿದ್ದಾರೆ. ಇಲ್ಲಿನ ವಿದ್ಯಾರ್ಥಿಗಳಿಗೆ ಯಾವ ಪ್ರಾಣಿಯಿಂದ ಹೇಗೆ ತಪ್ಪಿಸಿಕೊಳ್ಳಬೇಕು, ಯಾವ ಪ್ರಾಣಿ ಬಂದಿತೆಂಬುದನ್ನು ಶಬ್ದದ ಆಧಾರದ ಮೇಲೆ ಊಹಿಸುವ ಕಲೆ ಕರಗತವಾಗಿದೆ. ಇಲ್ಲಿ ಶಿಕ್ಷಣ ಪಡೆದು ಹೋದ ವಿದ್ಯಾರ್ಥಿಗಳು ಇಂದು ಇಲ್ಲಿಯೇ ಸೇವೆ ಸಲ್ಲಿಸುವಂತಹ ಇಚ್ಛಾಶಕ್ತಿಯನ್ನು ವ್ಯಕ್ತಪಡಿಸುತ್ತಿರುವುದು ತಿಳಿದುಬಂದಿದೆ. ಇಲ್ಲಿನ ಮಕ್ಕಳಿಗೆ ಶಿಕ್ಷಣ ನೀಡುವುದು ಅಷ್ಟು ಸುಲಭವಲ್ಲ ಕಾರಣ ಆ ವಿದ್ಯಾರ್ಥಿಗಳು ಬೆಳೆದುಬಂದ ವಾತಾವರಣ ಎಂದು ಹೇಳಬಹುದು. ಇಲ್ಲಿ ಶಿಕ್ಷಣವನ್ನು ಬುಡಕಟ್ಟು ಜೀವನ ಶೈಲಿಯಲ್ಲಿಯೇ ನೀಡುತ್ತಿದ್ದು, ಮಕ್ಕಳನ್ನು ಶೈಕ್ಷಣಿಕವಾಗಿ ಮಾತ್ರವಲ್ಲದೆ ತಮ್ಮ ಸಮುದಾಯದೊಂದಿಗೆ ಹೇಗೆ ಪ್ರಗತಿ ಹೊಂದಬೇಕು ಎಂಬುದನ್ನು ಸೂಚಿಸುವಂತಹ ಔದ್ಯೋಗಿಕ ಶಿಕ್ಷಣವನ್ನು ಕೂಡಾ ಕಲಿಸುತ್ತಿರುವುದು ಒಂದು ಉತ್ತಮ ಪ್ರಗತಿ ಎಂದು ಹೇಳಬಹುದು. ಇಲ್ಲಿ ಮಕ್ಕಳಿಗೆ ಗದರಿಸಿ ಶಿಕ್ಷಣವನ್ನು ನೀಡಿದರೆ ಧನಾತ್ಮಕ ಪ್ರತಿಕ್ರಿಯೆ ದೊರೆಯುವುದಿಲ್ಲ ಎಂಬುದನ್ನು ಇವರು ಹಲವಾರು ನಿದರ್ಶನಗಳಿಂದ ತಿಳಿದುಕೊಂಡಿದ್ದಾರೆ, ಆದುದರಿಂದ ಮಕ್ಕಳ ದಾರಿಯಲ್ಲಿಯೇ ಹೋಗಿ ಶಿಕ್ಷಣವನ್ನು ನೀಡುತ್ತಿದ್ದಾರೆ. ಹಾಸ್ಟೇಲ್‌ನಲ್ಲಿರುವ ವಿದ್ಯಾರ್ಥಿಗಳು ರಜೆ ಕೇಳಿದರೆ ಶಿಕ್ಷಕರು ಅವರಿಗೆ ರಜೆ ಕೊಡಲೇಬೇಕು ಇಲ್ಲವಾದರೆ ವಿದ್ಯಾರ್ಥಿಗಳು ಎರಡು ದಿನದ ಬದಲಾಗಿ ಒಂದು ವಾರದ ವರೆಗೂ ಶಿಕ್ಷಕರು ಅನುಮತಿ ನೀಡದಿದ್ದರು ಅವರು ಹೋಗಿಬರುತ್ತಾರೆ. ಮತ್ತು ಅವರು ಬಂದಮೇಲೆ ನಾವಾಗಿಯೇ ಅವರನ್ನು ಕರೆದು ವರ್ಗಗಳಿಗೆ ಹಾಜರಾಗುವಂತೆ ಹೇಳಬೇಕು. ಶಹರದ ಮಕ್ಕಳ ರೀತಿಯಲ್ಲಿ ಇವರಿಗೆ ಶಿಕ್ಷಣ ನೀಡಿದರೆ ಉಪಯೋಗಕ್ಕೆ ಬರುವುದಿಲ್ಲ, ಮತ್ತು ನಮ್ಮ ಈ ಮಕ್ಕಳಿಗೆ ಶಿಕ್ಷಣವನ್ನು ನೀಡುತ್ತಿರುವುದು ನಾವು ಅವರನ್ನು ದೊಡ್ಡ ಆಫೀಸರ್‌ನನ್ನಾಗಿ ಮಾಡುವುದಲ್ಲ ಅವರಿಗೆ ಅವರ ಸಮುದಾಯದಲ್ಲಿ ಎದುರಿಸುತ್ತಿರುವ ಸಮಸ್ಯೆಗೆ ಗುರಿಯಾಗದೆ ಉತ್ತಮ ಮಾರ್ಗದಲ್ಲಿ ನಡೆಯುವಂತೆ ಮಾಡುವುದು ಎಂದು ಅಲ್ಲಿನ ಶಿಕ್ಷಕರ ಅಭಿಪ್ರಾಯವಾಗಿದೆ.

ಇಲ್ಲಿನ ಸೋಲಿಗ ಮಕ್ಕಳನ್ನು ನೋಡಿದಾಗ ಅವರು ತಮ್ಮ ಬುಡಕಟ್ಟು ಸಂಪ್ರದಾಯಗಳ ಬಗ್ಗೆ ತಿಳಿದುಕೊಳ್ಳಲು ಮತ್ತು ಅವರ ಸಂಪ್ರದಾಯದ ಬೇರುಗಳೊಂದಿಗೆ ಅವರನ್ನು ಸಂಪರ್ಕದಲ್ಲಿರಿಸಿ ಅವುಗಳನ್ನು ಜೀವಂತವಾಗಿಡಲು ಸಹಾಯ ಮಾಡುವುದು ಅತ್ಯಗತ್ಯ ಎಂದು ಡಾ.ಸುದರ್ಶನ್ ಅರಿತುಕೊಂಡು. ಅದರಿಂದ, ಅಧ್ಯಯನದ ಜೊತೆಗೆ, ವಿದ್ಯಾರ್ಥಿಗಳನ್ನು ಶಾಲೆಯು ಹತ್ತಿರದ ಕಾಡುಗಳಲ್ಲಿ ಹೇರಳವಾಗಿರುವ ಹಲವಾರು ಸಸ್ಯ ಮತ್ತು ಪ್ರಾಣಿ ಪ್ರಭೇದಗಳ ಬಗ್ಗೆ ಜ್ಞಾನವನ್ನು ನೀಡುವುದು ಮತ್ತು ಮಕ್ಕಳಿಗೆ ತರಕಾರಿಗಳು, ಔಷಧೀಯ ಗಿಡಮೂಲಿಕೆಗಳು, ಕೋಳಿ, ಜೇನುನೊಣಗಳು ಮತ್ತು ರೇಷ್ಮೆ ಹುಳುಗಳನ್ನು ಬೆಳೆಸಲು ಕಲಿಸಲಾಗುತ್ತಿದೆ. ಈ ಶಾಲೆಯಲ್ಲಿ ಶಿಕ್ಷಣ ಪಡೆದ ಮಕ್ಕಳು ಜೀವನೋಪಾಯದ ಸಾಧನಗಳಿಂದ ವಂಚಿತರಾಗದಂತೆ ಮತ್ತು ಜೀವನದಲ್ಲಿ ಸಾಕಷ್ಟು ಆಯ್ಕೆಗಳನ್ನು ಹೊಂದಿದ್ದಾರೆ ಎಂದು ಹೇಳಬಹುದು.

ಮೊದಲ ಬ್ಯಾಚ್ನ ವಿದ್ಯಾರ್ಥಿಗಳಲ್ಲಿ ಮೂವರು ತಮ್ಮ ಸ್ನಾತಕೋತ್ತರ ಪದವಿಯನ್ನು ಪೂರ್ಣಗೊಳಿಸಿದ್ದಾರೆ, ಅವರಲ್ಲಿ ಒಬ್ಬರು ಪಿಎಚ್ಡಿ ಹೊಂದಿದ್ದಾರೆ, ಇದು ನಿಜಕ್ಕೂ ಗಮನಾರ್ಹ ಸಾಧನೆಯಾಗಿದೆ. ಈ ಶಾಲೆಯಿಂದ ಪದವಿ ಪಡೆದ ಹೆಚ್ಚಿನ ಮಕ್ಕಳು ವಿಜಿಕೆಕೆ ಪ್ರತಿನಿಧಿಸುವ ಹೆಚ್ಚಿನ ಶಿಕ್ಷಣ ಮತ್ತು ಇತರ ಕಾರಣಗಳಿಗೆ ಸಹಾಯ ಮಾಡಲು ಸಮುದಾಯಕ್ಕೆ ಮರಳುತ್ತಾರೆ.

## ಸಮುದಾಯ ಸಂಘಟನೆ

ಗ್ರಾಮ, ತಾಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಜನರ ಸಂಘಟನೆಗಳಿಗೆ (ಸೋಲಿಗ ಅಭಿವೃದ್ಧಿ ಸಂಘ) ಅನುಕೂಲ ಕಲ್ಪಿಸುವುದು. ಈ 'ಸಂಘ'ವು ತಮ್ಮ ಒಗ್ಗಟ್ಟಿನ ಮೂಲಕ ಸಮಸ್ಯೆಗಳನ್ನು ಪರಿಹರಿಸುತ್ತದೆ. ಸಂಘಗಳು ಸರ್ಕಾರ ಮತ್ತು ಇತರ ಏಜೆನ್ಸಿಗಳ ಮೂಲಕ ಅಭಿವೃದ್ಧಿ ಕಾರ್ಯಕ್ರಮಗಳ ಯೋಜನೆ ಮತ್ತು ಅನುಷ್ಠಾನದಲ್ಲಿ ಭಾಗವಹಿಸುತ್ತವೆ. ಸ್ವ-ಸಹಾಯ ಗುಂಪುಗಳನ್ನು ಉತ್ತೇಜಿಸಿ ಮತ್ತು ಬಲಪಡಿಸುತ್ತದೆ. ವಿಜಿಕೆಕೆ ಇಂದಿಗೂ ಕರ್ನಾಟಕ ಮತ್ತು ಇತರ ರಾಜ್ಯಗಳಲ್ಲಿ ಆದಿವಾಸಿಗಳ ಸಂಶೋಧನೆ, ದಾಖಲೀಕರಣ ಮತ್ತು ಮಾಹಿತಿಯ ಪ್ರಸಾರದಲ್ಲಿ ತೊಡಗಿಸಿಕೊಂಡಿದೆ.

ಉತ್ತಮ ಆರೋಗ್ಯ ಹಾಗೂ ಶಿಕ್ಷಣ ಒದಗಿಸುವುದು, ಜೀವವೈವಿಧ್ಯ ಸಂರಕ್ಷಣೆ ಮತ್ತು ಅರಣ್ಯ ಉತ್ಪನ್ನಗಳ ಸುಸ್ಥಿರ ಕೊಯ್ಲನ್ನು ಉತ್ತೇಜಿಸುವುದು. ಸುಸ್ಥಿರ ಕೃಷಿ, ವೃತ್ತಿಪರ ತರಬೇತಿ ಮತ್ತು ಅರಣ್ಯ ಉತ್ಪನ್ನಗಳ ಮೌಲ್ಯವರ್ಧನೆಯ ಮೂಲಕ ಜೀವನೋಪಾಯದ ಭದ್ರತೆಯನ್ನು ಖಚಿತಪಡಿಸುವುದು. ಸಂಘಗಳು ಮತ್ತು ಮಹಿಳಾ ಸ್ವಸಹಾಯ ಗುಂಪುಗಳ ಮೂಲಕ ಬುಡಕಟ್ಟು ಸಮುದಾಯಗಳನ್ನು ಸಬಲೀಕರಣಗೊಳಿಸುವುದು. ಇವು ಕೇಂದ್ರದ ಮುಖ್ಯ ಉದ್ದೇಶ ಎಂದು ಹೇಳಬಹುದು.

ಸೋಲಿಗರು, ದೇಶಾದ್ಯಂತದ ಇತರ ಬುಡಕಟ್ಟು ಜನಾಂಗದವರಂತೆ, ಸರ್ಕಾರ ಮತ್ತು ಸ್ಥಳೀಯ ಅರಣ್ಯ ಅಧಿಕಾರಿಗಳಿಂದ ಹೆಚ್ಚಾಗಿ ಶೋಷಣೆಗೆ ಒಳಗಾಗಿದ್ದಾರೆ. ಸ್ಪಷ್ಟವಾದ ಭೂ ಮಾಲೀಕತ್ವಗಳಿಲ್ಲದೆ ಮತ್ತು ಔಪಚಾರಿಕ ಶಿಕ್ಷಣವಿಲ್ಲದೆ, ಹೊರಗಿನವರ ಕುತಂತ್ರಕ್ಕೆ ಬಲಿಯಾಗುವುದು ಅವರಿಗೆ ಸುಲಭವಾಗಿತ್ತು. ಈ ಪ್ರದೇಶದಾದ್ಯಂತದ ಎಲ್ಲಾ ಸೋಲಿಗರನ್ನು ಒಂದುಗೂಡಿಸುವುದು ಮತ್ತು ಅವರ ಮನವಿಗಳು ಮತ್ತು ಆಲಿಸಲು ಅವರಿಗೆ ಸಾಮಾನ್ಯ ಧ್ವನಿಯನ್ನು ನೀಡುವುದು ಅತ್ಯಗತ್ಯವಾಗಿತ್ತು.

ವೃತ್ತಿಪರ ತರಬೇತಿ ಕೇಂದ್ರವನ್ನು (ವಿಟಿಸಿ) 1982 ರಲ್ಲಿ ಸ್ಥಾಪಿಸಲಾಯಿತು ಮತ್ತು ಅಂದಿನಿಂದ 700 ಕ್ಕೂ ಹೆಚ್ಚು ಬಾಲಕಿಯರು ಮತ್ತು ಬಾಲಕರಿಗೆ ತರಬೇತಿ ನೀಡಿದೆ. ತರಬೇತಿ ಪಡೆದವರಲ್ಲಿ ಹೆಚ್ಚಿನವರು ನಂತರ ತಮ್ಮ ಹಳ್ಳಿಗಳಿಗೆ ಮರಳಿದ್ದಾರೆ ಮತ್ತು ಸಾಲಗಳ ಲಭ್ಯತೆಯೊಂದಿಗೆ ತಮ್ಮ ಸೂಕ್ಷ್ಮ ಉದ್ಯಮಗಳನ್ನು ಸ್ಥಾಪಿಸಿದ್ದಾರೆ.

ತಮ್ಮ ಹಕ್ಕುಗಳಿಗಾಗಿ ಹೋರಾಡಲು ಸೋಲಿಗ ಪ್ರತಿನಿಧಿಗಳ ಗುಂಪಾಗಿದ್ದ ಪ್ರತಿ ಹಳ್ಳಿಯಲ್ಲಿ ಸಂಘಗಳನ್ನು ಸಂಘಟಿಸುವ ಮೂಲಕ ಇದನ್ನು ಸಾಧಿಸಲಾಯಿತು. ಅವರ ಪರಭಾರೆಯಾದ ಹೆಚ್ಚಿನ ಭೂಮಿಯನ್ನು ಅವರಿಗೆ ಪುನಃಸ್ಥಾಪಿಸಲಾಗಿದೆ ಮತ್ತು ಸೋಲಿಗ ಅಭ್ಯರ್ಥಿಗಳು ಸ್ಥಳೀಯ ಚುನಾವಣೆಗಳಲ್ಲಿಯೂ ಉತ್ತಮ ಸಾಧನೆ ಮಾಡಿದ್ದಾರೆ.

ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರ (ವಿಜಿಕೆಕೆ) ಇದು ಬುಡಕಟ್ಟು ಜನಾಂಗದವರ ಸಾಮಾಜಿಕ-ಸಾಂಸ್ಕೃತಿಕ ಹಿನ್ನೆಲೆ ಮತ್ತು ಅವರ ಹಕ್ಕುಗಳನ್ನು ಗಮನದಲ್ಲಿಟ್ಟುಕೊಂಡು ಅವರ ಸಮಗ್ರ ಹಾಗೂ ಸುಸ್ಥಿರ ಅಭಿವೃದ್ಧಿಗೆ ಬದ್ಧವಾಯಿತು. ಇದು ಕರ್ನಾಟಕದ ಚಾಮರಾಜನಗರ, ಮೈಸೂರು ಜಿಲ್ಲೆಗಳಲ್ಲಿನ ಸೋಲಿಗರು ಮತ್ತು ಇತರ ಬುಡಕಟ್ಟು ಜನಾಂಗದ ಅಭಿವೃದ್ಧಿಯ ಉದ್ದೇಶವನ್ನು ಹೊಂದಿದೆ. ಇದು ಬುಡಕಟ್ಟು ಜನರ ಆರೋಗ್ಯ, ಶಿಕ್ಷಣ, ಜೀವನೋಪಾಯಗಳು ಮತ್ತು ಜೀವವೈವಿಧ್ಯ ಸಂರಕ್ಷಣೆಗಳೊಂದಿಗೆ ಬುಡಕಟ್ಟು ಅಭಿವೃದ್ಧಿ ಹಾಗೂ ಸಮಗ್ರ ವಿಧಾನದಲ್ಲಿ ಸುಸ್ಥಿರ ಅಭಿವೃದ್ಧಿ ಮತ್ತು ಸಬಲೀಕರಣದ ಸಾಧನವಾಗಿದೆ ಎಂದು ಹೇಳಬಹುದು.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ವೈದ್ಯಕೀಯ ಸೌಲಭ್ಯವು ಪ್ರಾರಂಭವಾಗಿ ಭಾರಿ ಯಶಸ್ಸನ್ನು ಗಳಿಸಿದರೂ, ಡಾ. ಸುದರ್ಶನ್ ಸೋಲಿಗರ ನಡುವೆ ವಾಸಿಸುವುದರಿಂದ ಆರೋಗ್ಯ ರಕ್ಷಣೆ ಮಾತ್ರ ಈ ಜನರ ಜೀವನದಲ್ಲಿ ಶಾಶ್ವತ ಬದಲಾವಣೆಗಳನ್ನು ತರುವುದಿಲ್ಲ ಎಂದು ಕಂಡುಕೊಂಡರು. ಹೆಚ್ಚು ಸುಸ್ಥಿರ ಪ್ರಯೋಜನಗಳನ್ನು ಒದಗಿಸುವ ಸಲುವಾಗಿ ಬುಡಕಟ್ಟು ಅಭಿವೃದ್ಧಿಯ ಇನ್ನೂ 3 ಅಂಶಗಳಾದ ಶಿಕ್ಷಣ, ಸಬಲೀಕರಣ ಮತ್ತು ಜೀವನೋಪಾಯದ ಅರಿವನ್ನು ಮೂಡಿಸುವತ್ತ ಗಮನ ಹರಿಸಿತು.

ಸೋಲಿಗರು ಮತ್ತು ಇತರ ಬುಡಕಟ್ಟು ಜನಾಂಗದವರು ಸ್ಥಳೀಯ ಅರಣ್ಯವಾಸಿಗಳಾಗಿದ್ದು, ಇವರು ಪ್ರಕೃತಿ ಚಿಕಿತ್ಸೆ ಮತ್ತು ಔಷಧೀಯ ಗಿಡಮೂಲಿಕೆಗಳ ಬಗ್ಗೆ ವ್ಯಾಪಕ ಜ್ಞಾನವನ್ನು ಹೊಂದಿದ್ದಾರೆ. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಡಾ. ಸುದರ್ಶನ್ ಅವರು ಸಾಂಪ್ರದಾಯಿಕ ಗಿಡಮೂಲಿಕೆ ಚಿಕಿತ್ಸೆಯ ಈ ಅಂಶವನ್ನು ಪೋಷಿಸಲು ನಿರ್ಧರಿಸಿದರು ಮತ್ತು ಅದನ್ನು ತಮ್ಮ ಚಿಕಿತ್ಸೆಗಳಲ್ಲಿ ಅಳವಡಿಸಿಕೊಂಡರು. ಔಷಧೀಯ ಸಸ್ಯಗಳನ್ನು ಗುರುತಿಸಲಾಗಿದೆ ಮತ್ತು ದಾಖಲಿಸಲಾಗಿದೆ, ಮತ್ತು ಚಿಕಿತ್ಸಕ ಉದ್ದೇಶಗಳಿಗಾಗಿ ಪ್ರತ್ಯೇಕವಾಗಿ ಬೆಳೆಯಲಾಗುತ್ತದೆ.

## ವೃತ್ತಿಪರ ತರಬೇತಿ ಮತ್ತು ಜೀವನೋಪಾಯ

ಜೀವನೋಪಾಯದ ಸಾಧನವನ್ನು ಖಾತರಿಪಡಿಸಲು ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವು ಸಾಕಾಗುವುದಿಲ್ಲ ಎಂಬುದು ಸ್ಪಷ್ಟವಾಯಿತು. ಈ ಅಂತರವನ್ನು ಕಡಿಮೆ ಮಾಡುವ ಸಲುವಾಗಿ, ವಿದ್ಯಾರ್ಥಿಗಳು ಮತ್ತು ಸಮುದಾಯದ ಇತರ ಸದಸ್ಯರಿಗೆ ಟೈಲರಿಂಗ್, ಹೆಣಿಗೆ, ನೂಲುವ, ರೇಷ್ಮೆ, ಹತ್ತಿ ಮತ್ತು ಸೆಣಬಿನ ನೇಯ್ಗೆ, ಕಬ್ಬು ಮತ್ತು ಬಿದಿರಿನ ಕೆಲಸಗಳು, ಬೇಕಿಂಗ್, ಮರಗೆಲಸ ಮುಂತಾದ ಇತರ ಕೌಶಲ್ಯಗಳನ್ನು ಕಲಿಸಲಾಯಿತು. ಸ್ಮಿತ್, ಅಗರಬತ್ತಿ ತಯಾರಿಕೆ, ಜೇನು ಸಾಕಾಣಿಕೆ, ಕೈಯಿಂದ ತಯಾರಿಸಿದ ಕಾಗದ ತಯಾರಿಕೆ ಮತ್ತು ಆಹಾರ ಸಂಸ್ಕರಣೆ. ಸ್ಥಳೀಯ ಕಚ್ಚಾ ವಸ್ತುಗಳ ಸುಲಭ ಲಭ್ಯತೆಯ ಆಧಾರದ ಮೇಲೆ ಮತ್ತು ಸಾಕ್ಷರರಾಗಿರಲಿ ಅಥವಾ ಅನಕ್ಷರಸ್ಥರಾಗಿರಲಿ ಸಮಾಜದ ಎಲ್ಲಾ ವರ್ಗಗಳನ್ನು ಒಳಗೊಳ್ಳಲು ವೃತ್ತಿಪರ ತರಬೇತಿಗಳನ್ನು ಆಯ್ಕೆ ಮಾಡಲಾಯಿತು. ಸೋಲಿಗರು ತಮ್ಮ ಆವಾಸಸ್ಥಾನವನ್ನು ಉತ್ತಮವಾಗಿ ಸಂರಕ್ಷಿಸಲು ಅರಣ್ಯ ಮತ್ತು ಅದರ ಉತ್ಪನ್ನಗಳ ಮೇಲೆ ಸಂಪೂರ್ಣವಾಗಿ ಅವಲಂಬಿತರಾಗದಂತೆ ನೋಡಿಕೊಳ್ಳಲು ಕಾಳಜಿ ವಹಿಸಲಾಗಿದೆ. ಈ ಬುಡಕಟ್ಟು ಜನಾಂಗದವರು ತಾವು ಗಳಿಸಿದ ಕೌಶಲ್ಯಗಳಿಂದ ಆದಾಯವನ್ನು ಗಳಿಸಲು ಅನುವು ಮಾಡಿಕೊಡುವ ಸಲುವಾಗಿ, ವಿಜಿಕೆಕೆ ಉತ್ಪಾದನಾ ಮತ್ತು ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಿತು ಮತ್ತು ಅವರನ್ನು ನೇಮಿಸಿಕೊಂಡಿತು. ಯುವಕರಿಗೆ ಹಲವಾರು ಅವಕಾಶಗಳನ್ನು ಒದಗಿಸಲು ವೆಲ್ಡಿಂಗ್, ಮೋಟಾರ್ ರಿವೈಂಡಿಂಗ್ ಮತ್ತು ಗೃಹೋಪಯೋಗಿ ಉಪಕರಣಗಳಂತಹ ಹೆಚ್ಚು ನುರಿತ ತರಬೇತಿ ಕಾರ್ಯಕ್ರಮಗಳನ್ನು ಪ್ರಾರಂಭಿಸಲಾಯಿತು.

ಡಾ. ಸುದರ್ಶನ್ ಅವರು ಬದ್ಧತೆ ಮತ್ತು ನಮ್ರತೆಯ ಅಧ್ಯಯನ. ರೈಟ್ ಲೈವ್ಲಿಹುಡ್ ಅವಾರ್ಡ್ (1994) ಮತ್ತು ಪದ್ಮಶ್ರೀ (2000) ಪ್ರಶಸ್ತಿಗಳನ್ನು ಪಡೆದಿರುವ ಅವರು ತಮ್ಮ ಎಲ್ಲಾ ಸಾಧನೆಗಳನ್ನು ಕೈ ಚಪ್ಪಾಳೆ ಮತ್ತು ನಾಚಿಕೆಯ ನಗುವಿನೊಂದಿಗೆ ಬದಿಗಿಟ್ಟು, ಅವರು ಇನ್ನೂ ಸಾಧಿಸಬೇಕಾದ ಕಾರ್ಯಗಳ ಬಗ್ಗೆ ಮಾತನಾಡುತ್ತಲೇ ಇರುತ್ತಾರೆ.

ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರವು ಮಕ್ಕಳಿಗೆ ಪಠ್ಯ ವಿಷಯವನ್ನು ಮಾತ್ರ ಕಲಿಸದೇ ಹಲವಾರು ಪಠ್ಯೇತರ ಚಟುವಟಿಕೆಗಳನ್ನು ಮಾಡಿಸುತ್ತದೆ. ಸ್ವಾಮಿ ವಿವೇಕಾನಂದರ ಆದರ್ಶಗಳಿಂದ ಪ್ರೇರಿತರಾಗಿ ಸುದರ್ಶನ್ ಅವರು ಬುಡಕಟ್ಟು ಜನರ ಬಳಿಗೆ ಬಂದಾಗ ಶಿಕ್ಷಣ ಮತ್ತು ಆರೋಗ್ಯದ ಆಧುನಿಕ ವ್ಯವಸ್ಥೆಗಳ ಬಗ್ಗೆ ಸೋಲಿಗರಲ್ಲಿ ಯಾವುದೇ ಅರಿವು ಇರಲಿಲ್ಲ ಎಂಬುದು ತಿಳಿಯಿತು. ಅರಿವಿನ ಕೊರತೆಗಿಂತ ಅವರ ಕಡು ಬಡತನವೇ ಹೆಚ್ಚು ಎಂಬುದನ್ನು ಅರಿತರು. ವ್ಯಾಪಕ ಹಸಿವು ಮತ್ತು ಜೀವನಕ್ಕೆ ಮೂಲಭೂತ ಅವಶ್ಯಕತೆಗಳ ಕೊರತೆ ಎದ್ದು ಕಾಣುತ್ತಿತ್ತು. ಸರ್ಕಾರಿ ಶಾಲೆಗಳಲ್ಲಿ ಶಾಲಾ ಶಿಕ್ಷಣದ ಸೀಮಿತ ಸೌಲಭ್ಯವು ಸೋಲಿಗ ಜನರ ಸಾಮಾಜಿಕ–ಸಾಂಸ್ಕೃತಿಕ ಸಂದರ್ಭಕ್ಕೆ ಸಂವೇದನಾಶೀಲವಾಗಿರಲಿಲ್ಲ. ಉದಾಹರಣೆಗೆ, ಹೆಚ್ಚು ಗಂಟೆಗಳ ಕಾಲ ತರಗತಿ ಕೊಠಡಿಗಳಿಗೆ ಸೀಮಿತವಾಗಿರಬೇಕು ಎಂದು ತಿಳಿದಾಗ ಬುಡಕಟ್ಟಿನ ಹೆಚ್ಚಿನ ವಿದ್ಯಾರ್ಥಿಗಳು ಸರ್ಕಾರಿ ಶಾಲೆಗಳಿಂದ ಓಡಿಹೋದರು ಎಂಬುದು ತಿಳಿದುಬಂದಿದೆ. ಆದ್ದರಿಂದ ಶಾಲೆಯ ಹಾಜರಾತಿ ತೀರಾ ಕಡಿಮೆ ಇತ್ತು. ಅದಲ್ಲದೆ ಮಕ್ಕಳು ಕಿಲೋಮೀಟರ್ ಗಟ್ಟಲೆ ನಡೆದುಕೊಂಡು ಶಾಲೆಗೆ ಹೋಗಿ ಮರಳಿ ಕಾಡಿನ ಮನೆಗಳಿಗೆ ಹೋಗಬೇಕಾಗಿತ್ತು. ಇದನ್ನರಿತ ಸುದರ್ಶನ್ ಅವರು ಕಾಡಿನಲ್ಲಿಯೇ ಒಂದು ಶಾಲೆ ಮತ್ತು ಹುಡುಗ ಹುಡುಗಿಯರ ಹಾಸ್ಟೆಲ್ ಅನ್ನು ಪ್ರಾರಂಭಿಸಿದರು. ಸುದರ್ಶನ್ ಅವರು ಆರಂಭಿಸಿದ ವಿಜಿಕೆಕೆ ಮತ್ತು ಕರುಣಾ ಟ್ರಸ್ಟ್ ನಡೆಸುತ್ತಿರುವ ಶಾಲೆ ಮತ್ತು ಹಾಸ್ಟೆಲ್‌ನಲ್ಲಿ ಹುಡುಗರು ಮತ್ತು ಹುಡುಗಿಯರು ಎಷ್ಟು ಸಂತೋಷವಾಗಿದ್ದಾರೆಂಬುದು ಅವಲೋಕನದಿಂದ ತಿಳಿದುಬಂದಿದೆ. ಮಕ್ಕಳು ತಮ್ಮದೇ ಆದ ಸಾಂಸ್ಕೃತಿಕ ಪರಿಸರದಲ್ಲಿ ಮುಕ್ತರಾಗಿರುವಂತೆ ಮಾಡಿದ್ದಾರೆ. 25 ವರ್ಷಗಳ ಹಿಂದೆ ಶಾಲೆ ಆರಂಭವಾದಾಗ ಕೇವಲ ಆರು ವಿದ್ಯಾರ್ಥಿಗಳಿದ್ದಂತಹ ಶಾಲೆ ಇಂದು 500ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಹೊಂದಿದೆ ಇದೊಂದು ಗಮನಾರ್ಹ ಸಾಧನೆಯಾಗಿದೆ ಎಂದು ಹೇಳಬಹುದು. ಬುಡಕಟ್ಟು ಶಾಲೆಯ ಮೊದಲ ಬ್ಯಾಚ್‌ನ ವಿದ್ಯಾರ್ಥಿಗಳ ಕುರಿತು ತಿಳಿದಾಗ ಸೋಲಿಗರಲ್ಲಿ ಶಿಕ್ಷಣದ ಹರಡುವಿಕೆಯ ಯಶಸ್ಸು ಸ್ಪಷ್ಟವಾಗಿ ಕಂಡಿತು. ಜಡೇಗೌಡ (ಜಡೆಯಾ) ಎಂಬುವರು ಬೆಂಗಳೂರಿನಲ್ಲಿರುವ ಕೃಷಿ ವಿಜ್ಞಾನ ವಿಶ್ವವಿದ್ಯಾಲಯದಿಂದ ಪಿಎಚ್‌ಡಿ ಪಡೆದಿದ್ದಾರೆ ಎಂಬ ಮಾಹಿತಿ ತಿಳಿದುಬಂದಿತು. ವಿಜಿಕೆಕೆ ವ್ಯವಸ್ಥಾಪಕ ಸಮಿತಿಯ ಅಧ್ಯಕ್ಷರಾಗಿ ತಮ್ಮ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ. ಸೋಲಿಗರೊಂದಿಗೆ ಕೆಲಸ ಮಾಡಲು ಪಿಎಚ್‌ಡಿ ಪದವಿ ಪಡೆದ ನಂತರ ಅವರು ಹಿಲ್ಸ್‌ಗೆ ಹಿಂತಿರುಗಲು ಯೋಚಿಸಿರುವುದನ್ನು ನೋಡಿದರೆ ಸಂತೋಷವೆನಿಸುತ್ತದೆ. ಅವರು ಉನ್ನತ ಶಿಕ್ಷಣವನ್ನು ಪಡೆದರು ಲಾಭ ಗಳಿಸಬೇಕು ವಿದೇಶಕ್ಕೆ ಹೋಗಬೇಕು ಎಂಬ ಯಾವ ಯೋಚನೆಯು ಅವರಲ್ಲಿ ಕಂಡುಬರಲಿಲ್ಲ ಎಂಬುದನ್ನು ತಿಳಿದರೆ ಇದೊಂದು ಅತ್ಯುತ್ತಮ ಸೇವೆಯೇ ಎಂದು ಹೇಳಬಹುದು.

## ಸಮುದಾಯ ಆರೋಗ್ಯ

ಬುಡಕಟ್ಟು ಪ್ರದೇಶಗಳಲ್ಲಿ ಶಿಕ್ಷಣವನ್ನು ನೀಡಲು ಮುಂದಾದರು ಎಂಬ ಕೆಲಸಕ್ಕಿಂತ ಪ್ರಾಥಮಿಕ ಆರೋಗ್ಯ ಮತ್ತು ಸಮುದಾಯ ಆರೋಗ್ಯಕ್ಕೆ ನೀಡಿರುವ ಅವರ ಅತ್ಯುತ್ತಮ ಕೊಡುಗೆ ಮಹತ್ವದ್ದಾಗಿದೆ. ಅವರ ಈ ಕಾರ್ಯವು ಜನರ ಆರೋಗ್ಯ ಸ್ಥಿತಿಯನ್ನು ಸುಧಾರಿಸುವಲ್ಲಿ ಆಧುನಿಕ ಚಿಕಿತ್ಸಕ ಔಷಧದ ಮಿತಿಗಳನ್ನು ಸ್ಪಷ್ಟವಾಗಿ ಗುರುತಿಸಿದೆ ಎಂದು ಹೇಳಬಹುದು. ಕೃಷಿ, ಆಹಾರ, ನೀರು, ನೈರ್ಮಲ್ಯ, ವಸತಿ ಮತ್ತು ಶಿಕ್ಷಣದಂತಹ ಇತರ ವಲಯಗಳಲ್ಲಿನ ಕೆಲಸಗಳೊಂದಿಗೆ ಆರೋಗ್ಯ ಕಾರ್ಯಕ್ರಮಗಳನ್ನು ಕೂಡಾ ಸಂಯೋಜಿಸುವುದು ಅಗತ್ಯವಾಗಿತ್ತು ಆದುದರಿಂದ ಆರೋಗ್ಯದ ಕಾರ್ಯಕ್ರಮಗಳನ್ನು ಹೆಚ್ಚಾಗಿ ಕೈಗೊಂಡರೆಂದು ಹೇಳಬಹುದು. ಇವರು ಎಲ್ಲಕ್ಕಿಂತ ಹೆಚ್ಚಾಗಿ, ಇತರ ಯಾವುದೇ ಕ್ಷೇತ್ರದಲ್ಲಿರುವಂತೆ ಆರೋಗ್ಯ ಕಾರ್ಯಕ್ರಮಗಳಲ್ಲಿ ಸಮಾನತೆ ಮತ್ತು ಸಾಮಾಜಿಕ ನ್ಯಾಯವನ್ನು ಪರಿಗಣಿಸಿದರು. ಸುದರ್ಶನ್ ಅವರು ಸ್ಥಳೀಯ ಮತ್ತು ಸಾಂಪ್ರದಾಯಿಕ ಔಷಧ ಪದ್ಧತಿಗಳನ್ನು ಪ್ರೋತ್ಸಾಹಿಸಿದರು. ಪ್ರಾಥಮಿಕ

– *77ನೇ ಪುಟಕ್ಕೆ ಮುಂದುವರೆದುದು*

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ವಿಜ್ಞಾನ ನಗರಿಯಾಗಿ ಬೆಂಗಳೂರು : ಒಂದು ಅವಲೋಕನ

✍ ಡಾ. ಸ್ಮಿತಾ ಎಂ. ಭಾವಿಕಟ್ಟಿ, ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿಜಯನಗರ, ಬೆಂಗಳೂರು.

## ಪೀಠಿಕೆ

ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಇಂದು ಜಗತ್ತೇ ಭಾರತದತ್ತ ನೋಡುತ್ತಿದೆ. ಜಾಗತಿಕ ಮಟ್ಟದಲ್ಲಿ ಭಾರತದಲ್ಲಿ ಹೆಚ್ಚು ಹೆಚ್ಚು ಸಂಶೋಧನಾ ಚಟುವಟಿಕೆಗಳು ನಡೆಯುತ್ತಿರುವುದೇ ಇದಕ್ಕೆ ಕಾರಣ. ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ನಡೆಯುತ್ತಿರುವ ಪಿಎಚ್.ಡಿ., ಗಳ ಪೈಕಿ ಭಾರತವುಜಾಗತಿಕ ಮಟ್ಟದಲ್ಲಿ ಮೂರನೇ ಸ್ಥಾನದಲ್ಲಿದೆ. ಮಾಹಿತಿ ತಂತ್ರಜ್ಞಾನ ಉತ್ಪನ್ನಗಳು ಮತ್ತು 'ಫಾರ್ಮಾ ಸೆಕ್ಟರ್'ನ ಉತ್ಪನ್ನಗಳು ದೊಡ್ಡ ಪ್ರಮಾಣದಲ್ಲಿ ಭಾರತದಿಂದ ರಫ್ತಾಗುತ್ತಿವೆ. ಭಾರತದ ಆರ್ಥಿಕ ಪ್ರಗತಿಗೆ ವಿಜ್ಞಾನ ಮತ್ತು ತಂತ್ರಜ್ಞಾನ ತನ್ನದೇ ಆದ ಮಹತ್ತರ ಕೊಡುಗೆ ನೀಡುತ್ತಿದೆ. ಈ ಕ್ಷೇತ್ರದಲ್ಲಿ ಹೆಚ್ಚಿನ ವಿದೇಶಿ ಹೂಡಿಕೆಯೂ ಹರಿದು ಬರುತ್ತಿದ್ದು, ಸಾಕಷ್ಟು ಸಂಖ್ಯೆಯ ಬಹುರಾಷ್ಟ್ರೀಯ ಕಂಪನಿಗಳು (ಎಂಎನ್‌ಸಿ) ಭಾರತದಲ್ಲಿತಮ್ಮ ನೆಲೆ ಕಂಡುಕೊಂಡಿವೆ. ಈ ಮೂಲಕ ಭಾರತದ ಯುವ ಸಮುದಾಯಕ್ಕೆ ಹೆಚ್ಚಿನ ಉದ್ಯೋಗಾವಕಾಶಗಳೂ ದೊರೆಯುತ್ತಿವೆ.

ಭಾರತದ 'ಟೆಕೇಡ್' (ತಂತ್ರಜ್ಞಾನ ಕೇಂದ್ರಿತ ದಶಕ) ಕನಸು ದೇಶದ ಸಂಶೋಧಕರ ಸಾಮರ್ಥ್ಯದಿಂದ ಸಾಕಾರಗೊಳ್ಳಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರುತಮ್ಮ 'ಮನ್ ಕೀ ಬಾತ್' (2023ರ ಜನವರಿ 29) ಕಾರ್ಯಕ್ರಮದಲ್ಲಿ ವಿಶ್ವಾಸ ವ್ಯಕ್ತಪಡಿಸಿದ್ದರು. ವಿದೇಶಗಳಲ್ಲಿ ನೋಂದಣಿಯಾಗುತ್ತಿರುವ ಭಾರತದ ಹಕ್ಕು ಸ್ವಾಮ್ಯಗಳಿಗಿಂತ ಹೆಚ್ಚು ಹಕ್ಕುಸ್ವಾಮ್ಯ ನೋಂದಣಿಗಳು ಭಾರತದೊಳಗೇ ಆಗುತ್ತಿವೆ. ಇದು ವೈಜ್ಞಾನಿಕ ಕ್ಷೇತ್ರದಲ್ಲಿ ದೇಶದ ಸಾಮರ್ಥ್ಯ ವೃದ್ಧಿಸುತ್ತಿರುವುದಕ್ಕೆ ನಿದರ್ಶನ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದರು.

ಮುಂದುವರಿದು, "ಜಾಗತಿಕ ಹಕ್ಕುಸ್ವಾಮ್ಯ ನೋಂದಣಿಯಲ್ಲಿ ಭಾರತ 7ನೇ ಸ್ಥಾನ ಪಡೆದಿದೆ. ಟ್ರೇಡ್‌ಮಾರ್ಕ್ ನೋಂದಣಿಯಲ್ಲಿ ಐದನೇ ಸ್ಥಾನ ಪಡೆದಿದೆ. ಕಳೆದ ಐದು ವರ್ಷಗಳಲ್ಲಿ ಭಾರತದ ಹಕ್ಕುಸ್ವಾಮ್ಯ ನೋಂದಣಿಯು ಶೇ. 50ರಷ್ಟು ಹೆಚ್ಚಳವಾಗಿದೆ. ಜಾಗತಿಕ ಆವಿಷ್ಕಾರ ಸೂಚ್ಯಂಕದಲ್ಲೂ ಭಾರತ ಉತ್ತಮ ಸಾಧನೆ ಮಾಡಿದ್ದು, 2015ರಲ್ಲಿ 80ಕ್ಕಿಂತ ಕಡಿಮೆಇದ್ದ ಸೂಚ್ಯಂಕ ಈಗ 40ಕ್ಕೆ ಏರಿದೆ. ಸಂಶೋಧಕರು ಮತ್ತು ಹಕ್ಕುಸ್ವಾಮ್ಯಗಳಿಂದ ಭಾರತದ 'ಟೆಕೇಡ್' ಕನಸು ನನಸಾಗುತ್ತದೆ ಎಂಬ ವಿಶ್ವಾಸ ನನಗಿದೆ" ಎಂದುಅವರು ಹೇಳಿದ್ದರು.

ಪ್ರಧಾನಿ ನೀಡಿದ ಅಂಕಿ ಅಂಶಗಳನ್ನು ಗಮನಿಸಿದರೆ ಭಾರತವು ವಿಜ್ಞಾನ– ತಂತ್ರಜ್ಞಾನ ಕ್ಷೇತ್ರದಲ್ಲಿ ಅಭಿವೃದ್ಧಿಯ ಪಥದಲ್ಲಿ ಸಾಗುತ್ತಿದೆ ಎಂಬುದು ಸ್ಪಷ್ಟವಾಗಿ ಗೋಚರಿಸುತ್ತದೆ. ದೇಶದ ಈ ಪ್ರಗತಿಗೆ ಕರ್ನಾಟಕದ ರಾಜಧಾನಿಯಾದ ಬೆಂಗಳೂರು ಮಹತ್ವದ ಕೊಡುಗೆ ನೀಡುತ್ತಿದೆ ಎಂಬುದು ಗಮನಾರ್ಹ. 'ಸಿಲಿಕಾನ್ ವ್ಯಾಲಿ', 'ಸಿಲಿಕಾನ್ ಸಿಟಿ' ಎಂದೆಲ್ಲ ಹೆಸರುವಾಸಿಯಾಗಿರುವ ಬೆಂಗಳೂರನ್ನು ಭಾರತದ ವಿಜ್ಞಾನ ಮತ್ತು ತಂತ್ರಜ್ಞಾನ ನಗರಿ ಎಂದೂ ಕರೆಯಲಾಗುತ್ತದೆ. ಬೆಂಗಳೂರು ಕರ್ನಾಟಕದ ರಾಜಧಾನಿ ಆಗಿರುವುದರಿಂದ ಕರ್ನಾಟಕವನ್ನು ದೇಶದ ವಿಜ್ಞಾನ ಮತ್ತು ತಂತ್ರಜ್ಞಾನದ ತವರೂರು ಎಂದೂ ಹೇಳಲಾಗುತ್ತದೆ. ಜಾಗತಿಕ ಸಮೀಕ್ಷೆಯೊಂದರ ಪ್ರಕಾರ ಬೆಂಗಳೂರು ಜಗತ್ತಿನ 100 ವಿಜ್ಞಾನ ನಗರಗಳಲ್ಲಿ ಒಂದು ಎಂಬ ಹಿರಿಮೆ ಹೊಂದಿರುವುದು ಹೆಮ್ಮೆಯ ವಿಷಯ. ಬೆಂಗಳೂರು ವಿಜ್ಞಾನ– ತಂತ್ರಜ್ಞಾನ ನಗರಿಯಾಗಿ ಬೆಳೆದು ನಿಂತಿದ್ದು, ವಿಶ್ವವೇ ಬೆರಗು ಕಣ್ಣಿನಿಂದ ನೋಡುವಂತಾಗಿದೆ. ಬೇರೆ ಬೇರೆ ಕಾಲಘಟ್ಟದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ದೊರೆತ ಪ್ರೋತ್ಸಾಹ, ಸಹಕಾರವೇ ಇದಕ್ಕೆಲ್ಲ ಕಾರಣ. ಈ ನಿಟ್ಟಿನಲ್ಲಿ ಒಂದು ಅವಲೋಕನ ಇಲ್ಲಿದೆ.

## ಹಿನ್ನೋಟ

ವಿವಿಧ ಕಾಲಘಟ್ಟದಲ್ಲಿ ವಿಜ್ಞಾನ– ತಂತ್ರಜ್ಞಾನ ಬಳಕೆಯಿಂದ ಬೆಂಗಳೂರು ನಗರ ಬೆಳೆದು ನಿಂತಿದೆ. ಕ್ರಿ.ಶ. 870ರಲ್ಲಿ ಗಂಗರು ಆಳ್ವಿಕೆ ನಡೆಸುತ್ತಿದ್ದ ಕಾಲದಲ್ಲಿಯೇ ಬೆಂಗಳೂರು ಪರಿಸರದ ಕೆರೆಯಲ್ಲಿ ತೂಬಿನ ತಂತ್ರಜ್ಞಾನ ಪರಿಚಯವಾಗಿತ್ತು. ಸಿರಿಮಯ್ಯ ಎಂಬ ವ್ಯಕ್ತಿಯು ಮಡಿವಾಳ ಮತ್ತುಅಗರದ ಕೆರೆಗಳಿಗೆ ತೂಬನ್ನು ಕಟ್ಟಿಸಿದನು. ಈ ಮೂಲಕ ಕೆರೆಗಳ ನಿರ್ವಹಣೆಗೆ ತಂತ್ರಜ್ಞಾನವನ್ನು ಪರಿಚಯಿಸಿ, ಕುಡಿಯುವ ನೀರು ಮತ್ತು ವ್ಯವಸಾಯಕ್ಕೆ ಬಳಸಿಕೊಂಡು ನಗರದ ಬೆಳವಣಿಗೆಗೆ, ಜನರ ಕ್ಷೇಮಾಭಿವೃದ್ಧಿಗೆ ಕೊಡುಗೆ ನೀಡಿದ್ದನು.

ಬೆಂಗಳೂರಿನ ಪರಿಸರದಲ್ಲಿ 16ನೇ ಶತಮಾನದ ವೇಳೆಗೆ ವಿಜ್ಞಾನ– ತಂತ್ರಜ್ಞಾನ ಬಳಕೆ ಇನ್ನಷ್ಟು ಹೆಚ್ಚಾಗಿತ್ತು. ಗವಿಗಂಗಾಧರೇಶ್ವರದ ಗುಹ ದೇವಾಲಯ ನಿರ್ಮಾಣದಲ್ಲಿ ಇದನ್ನು ಗಮನಿಸಬಹುದು. ವಾಸ್ತುವಿನ ಜತೆಗೆ ವಿಜ್ಞಾನವನ್ನು ಈ ದೇವಾಲಯದಲ್ಲಿ ಅದ್ಭುತವಾಗಿ ಬಳಸಲಾಗಿದೆ. ಗವಿಗಂಗಾಧರೇಶ್ವರ ದೇವಾಲಯವು ಸಂಕ್ರಮಣ ದಿನದಂದು ಗವಿಯ ಒಳಗಡೆ ಗರ್ಭಗುಡಿಯ ಶಿವಲಿಂಗದ ಮೇಲೆ ಬೀಳುವ ಸೂರ್ಯನ ಕಿರಣಗಳಿಂದ ಹೆಸರುವಾಸಿಯಾಗಿದೆ. ಬೆಂಗಳೂರಿನ ಜವಾಹರ್‌ಲಾಲ್ ನೆಹರೂ ತಾರಾಲಯದ ಹಿರಿಯ ವಿಜ್ಞಾನಿ ಶೈಲಜಾ ಅವರು ಇಲ್ಲಿನ ಎರಡು ಫಲಕಗಳ ಬಗ್ಗೆ ಅಧ್ಯಯನ ನಡೆಸಿದ್ದಾರೆ. ಈ ಫಲಕಗಳು ಶಿಲ್ಪ ವೈಭವ ಸೂಚಿಸುವ ಶಿಲಾಫಲಕ ಸ್ಮಾರಕಗಳಾಗಿರದೆ ಸೂರ್ಯನ ಉತ್ತರಾಯಣ ಮತ್ತು ದಕ್ಷಿಣಾಯನ ಪಥ ಸಂಚಲನಗಳನ್ನು ಗುರುತಿಸುವ ಖಗೋಳ ವಿಸ್ಮಯದ ಪ್ರಯೋಗಾಲಯವಾಗಿ ರೂಪುಗೊಂಡಿರುವ ಸಾಧ್ಯತೆಗಳಿವೆ ಎಂದು ಶೈಲಜಾ ಅವರು ತಮ್ಮ ಸಂಶೋಧನಾ ಲೇಖನದಲ್ಲಿ ಉಲ್ಲೇಖಿಸಿದ್ದಾರೆ.

ಬೆಂಗಳೂರು ನಿರ್ಮಾತೃ ಕೆಂಪೇಗೌಡ ಅವರು ಬೆಂಗಳೂರು ನಗರಕ್ಕೆ ಅಳೆದು, ತೂಗಿ ಭೌಗೋಳಿಕವಾಗಿ ಸೂಕ್ತ ಜಾಗವನ್ನುಆಯ್ಕೆ ಮಾಡಿದ್ದರು. ಅಲ್ಲದೆಇಲ್ಲಿ ನೀರಿನ ಸಮಸ್ಯೆ ತಲೆದೂರಬಾರದೆಂದು ಎಲ್ಲೆಲ್ಲಿ ಕೆರೆಗಳು ಬಂದರೆ ಸೂಕ್ತ ಎಂಬುದನ್ನು ವೈಜ್ಞಾನಿಕ ಮತ್ತು ಭೌಗೋಳಿಕವಾಗಿ ಲೆಕ್ಕಾಚಾರ ಮಾಡಿ ಹಲವು ಕೆರೆಗಳನ್ನು ಕಟ್ಟಿಸಿದರು. ಇದು ನಗರದ ಬೆಳವಣಿಗೆಗೆ ಕಾರಣವಾಯಿತು. ಅಂದರೆ ಬೆಂಗಳೂರು ನಗರವು ಆರಂಭದಿಂದಲೇ ಭೌಗೋಳಿಕ ಮತ್ತು ವೈಜ್ಞಾನಿಕ ತಳಹದಿಯ ಮೇಲೆ ಬೆಳೆದು ನಿಂತಿದೆ.

ಮೈಸೂರಿನ ಒಡೆಯರ್ ಮನೆತನದವರು, ದಿವಾನರು, ಕಮಿಷನರ್‌ಗಳು ಶಿಕ್ಷಣಕ್ಕೆ ಒತ್ತು ನೀಡುವುದರ ಮೂಲಕ ಹಲವು ಶಾಲಾ–ಕಾಲೇಜುಗಳು ಆರಂಭಕ್ಕೆ ಕಾರಣ ಕರ್ತರಾಗಿದ್ದಾರೆ. ಈ ಕಾಲಘಟ್ಟದಿಂದ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಕ್ಕೆ ದೊರೆತ ಆದ್ಯತೆ ಮತ್ತು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಕೊಡುಗೆಗಳಿಂದಾಗಿ ಬೆಂಗಳೂರು ಈ ಕ್ಷೇತ್ರದಲ್ಲಿ ಜಾಗತಿಕ ಮನ್ನಣೆ ಪಡೆದ ನಗರವಾಗಿ ಬೆಳೆದಿದೆ. ಸ್ವಾತಂತ್ರ್ಯ ನಂತರ ಇಲ್ಲಿನ ರಾಜ್ಯ ಸರ್ಕಾರ ಮತ್ತುಕೇಂದ್ರ ಸರ್ಕಾರದ ಪ್ರೋತ್ಸಾಹದಿಂದ ಆರಂಭವಾದ ವಿಜ್ಞಾನ–ತಂತ್ರಜ್ಞಾನ ಸಂಶೋಧನಾ ಕೇಂದ್ರಗಳು ಜಗತ್ತನ್ನು ಬೆಂಗಳೂರಿನತ್ತ ನೋಡುವಂತೆ ಮಾಡಿದೆ. ಮಾಹಿತಿ ತಂತ್ರಜ್ಞಾನ ಕ್ರಾಂತಿ ಮತ್ತು ಜೈವಿಕ ತಂತ್ರಜ್ಞಾನದ ಪ್ರಗತಿಯಿಂದಾಗಿ ಬೆಂಗಳೂರಿಗೆ ಸಾಕಷ್ಟು ವಿದೇಶಿ ಹೂಡಿಕೆಗಳು ಹರಿದು ಬಂದಿವೆ ಮತ್ತು ಬರುತ್ತಿವೆ. ಹೀಗಾಗಿ ಜಗತ್ತಿನ ಪ್ರಮುಖ ದೇಶಗಳ ಬಹುರಾಷ್ಟ್ರೀಯ ಕಂಪನಿಗಳು (ಎಂಎನ್‌ಸಿ) ಬೆಂಗಳೂರಿನಲ್ಲಿ ಕಾರ್ಯಾರಂಭಿಸಿವೆ. ಬೆಂಗಳೂರಿನಲ್ಲಿ ಅತ್ಯಧಿಕ ಸಂಖ್ಯೆಯ ವಿಜ್ಞಾನ ಕಾಲೇಜುಗಳು, ಎಂಜಿನಿಯರಿಂಗ್ ಕಾಲೇಜುಗಳು ಇದ್ದು, ಪ್ರತಿ ವರ್ಷ ಲಕ್ಷಾಂತರ ವಿದ್ಯಾರ್ಥಿಗಳಿಗೆ ಪದವಿ ಪಡೆಯುತ್ತಿದ್ದಾರೆ. ಅಲ್ಲದೆತಮ್ಮ ನವೀನ ಸಂಶೋಧನಾ ಚಟುವಟಿಕೆಗಳಿಂದ ಬೆಂಗಳೂರಿನ ವಿಜ್ಞಾನಿಗಳು ವಿಶ್ವವಿಖ್ಯಾತರಾಗಿ, ಮಹತ್ವದ ಪ್ರಶಸ್ತಿಗಳನ್ನೂ ತಮ್ಮ ಮುಡಿಗೇರಿಸಿ ಕೊಂಡಿದ್ದಾರೆ.

## ವಿಶ್ವವಿಖ್ಯಾತ ಸಂಶೋಧನಾ ಸಂಸ್ಥೆಗಳು

ಬೆಂಗಳೂರಿನಲ್ಲಿ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ), ಡಿಆರ್‌ಡಿಒ ದ ಹಲವು ಸಂಶೋಧನಾ ಮತ್ತುಅಭಿವೃದ್ಧಿ ಸಂಸ್ಥೆಗಳು, ಇಸ್ರೊ, ಏರೋನಾಟಿಕಲ್ ಡೆವಲಪ್‌ಮೆಂಟ್ ಎಸ್ಟಾಬ್ಲಿಷ್‌ಮೆಂಟ್, ಎಚ್‌ಎಎಲ್, ಬಿಇಎಲ್, ಸೆಂಟ್ರಲ್ ಸಿಲ್ಕ್ ಬೋರ್ಡ್, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಆಸ್ಟ್ರೋಫಿಸಿಕ್ಸ್, ನಿಮ್ಹಾನ್ಸ್, ವಿಶ್ವೇಶ್ವರಯ್ಯ ತಾಂತ್ರಿಕ ಕಾಲೇಜು, ಕೃಷಿ ವಿಶ್ವವಿದ್ಯಾಲಯ, ಐಟಿ ಕಾರಿಡಾರ್, ಎಲೆಕ್ಟ್ರಾನಿಕ್ ಸಿಟಿಗಳು ಮತ್ತುಇಲ್ಲಿಕಾರ್ಯ ನಿರ್ವಹಿಸುತ್ತಿರುವ ಇನ್ಫೋಸಿಸ್, ವಿಪ್ರೊ, ಸಿಮೆನ್ಸ್, ಎಚ್‌ಸಿಎಲ್, ಮೈಂಡ್‌ಟ್ರೀ, ಎಚ್‌ಪಿ, ಸ್ಯಾಮ್‌ಸಂಗ್, ಫಿಲಿಪ್ಸ್, ಮೋಟೊರೋಲಾ, ಟೆಕ್ಸಾಸ್, ಅನಲಾಗ್‌ಡಿವೈಸಸ್, ಇಂಟೆಲ್ ಸೇರಿದಂತೆ ಹಲವು ಕಂಪನಿಗಳಿಂದ ಬೆಂಗಳೂರು ವಿಜ್ಞಾನ, ತಂತ್ರಜ್ಞಾನ ಮತ್ತು ಸಾಫ್ಟ್‌ವೇರ್ ಕ್ಷೇತ್ರದಲ್ಲಿ ವಿಶ್ವವಿಖ್ಯಾತವಾಗಿ ಬೆಳೆದಿದೆ.

ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತ ಮತ್ತು ವಿಶೇಷವಾಗಿ ಬೆಂಗಳೂರು ಅತ್ಯಂತ ಮಹತ್ವದ ಸ್ಥಾನವನ್ನು ಹೊಂದಿದೆ. ತಂತ್ರಾಂಶಅಭಿವೃದ್ಧಿ, ಸೆಮಿಕಂಡಕ್ಟರ್ ವಿನ್ಯಾಸ, ನೆಟ್‌ವರ್ಕ್‌ತಂತ್ರಜ್ಞಾನ, 3ಡಿ ಪ್ರಿಂಟಿಂಗ್, ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ (ಎಐ) ಮೊದಲಾದ ನವ ಪೀಳಿಗೆಯ ತಂತ್ರಜ್ಞಾನಗಳು, ಬಾಹ್ಯಾಕಾಶ ಉದ್ಯಮ, ದೂರ ಸಂಪರ್ಕ, ರಕ್ಷಣಾ ವ್ಯವಸ್ಥೆ, ಇ–ಆಡಳಿತ, ಬ್ಯಾಂಕು, ವಿಮಾ, ಆರೋಗ್ಯ ಸೇವೆಗಳು, ಶಿಕ್ಷಣ, ಸಂಶೋಧನೆ ಮೊದಲಾದ ಕ್ಷೇತ್ರಗಳಲ್ಲಿ ತಂತ್ರಜ್ಞಾನ ಮತ್ತು ತಂತ್ರಾಂಶಗಳ ಆವಿಷ್ಕಾರಗಳಲ್ಲಿ ಬೆಂಗಳೂರು, ಕನ್ನಡಿಗರ ಸಾಧನೆಅದ್ವಿತೀಯವಾಗಿವೆ. ಈ ನಿಟ್ಟಿನಲ್ಲಿ ಕೆಲವು ಮಹತ್ವದ ಅಂಶಗಳನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

• **ಭಾರತ್‌ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ಸ್ಥಾಪನೆ** : 1954ರಲ್ಲಿ ಬೆಂಗಳೂರಿನಲ್ಲಿ ಸ್ಥಾಪನೆಯಾದ ಭಾರತ್‌ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿಇಎಲ್) 1965ರಿಂದ 1975ರವರೆಗೆ ಕಂಪ್ಯೂಟರ್, ಬಿಡಿಭಾಗಗಳು ಮತ್ತು ಪರಿಕರಗಳ ಉತ್ಪಾದನೆ ಮಾಡುತ್ತಿತ್ತು. ನಂತರ ಅದು ಕಂಪ್ಯೂಟರ್ ಹಾರ್ಡ್‌ವೇರ್ ಮತ್ತು ತಂತ್ರಾಂಶ ಆಧಾರಿತ ಸಿಸ್ಟಮ್‌ಗಳ ಅಭಿವೃದ್ಧಿಗೆ ಮುಂದಾಯಿತು. ಭಾರತದಲ್ಲಿಕಂಪ್ಯೂಟರ್, ಬಿಡಿಭಾಗಗಳು ಮತ್ತು ಪರಿಕರಗಳ ಉತ್ಪಾದನೆ, ಅನ್ವಯಿಕ ತಂತ್ರಾಂಶ ಹಾಗೂ ಹಾರ್ಡ್‌ವೇರ್ ಅಭಿವೃದ್ಧಿಗೆ ಬೆಂಗಳೂರು ಮಹತ್ವದ ಕೊಡುಗೆ ನೀಡಿದೆ. 1962ರಲ್ಲಿ ಜರ್ಮೇನಿಯಮ್ ಸೆಮಿಕಂಡಕ್ಟರ್‌ಗಳ ಉತ್ಪಾದನೆಯನ್ನು ಪ್ರಾರಂಭಿಸಿದ ಭಾರತದ ಮೊದಲ ಉದ್ಯಮ ಎಂಬ ಹಿರಿಮೆ ಹೊಂದಿದೆ. ಭಾರತದಲ್ಲಿ ಉತ್ಪಾದನೆಯಾದ ಬ್ಲಾಕ್‌ಅಂಡ್ ವೈಟ್ ಟಿ.ವಿ.ಗಳಿಗೆ ಅಗತ್ಯವಾದ ಎಲ್ಲ ಇಂಟಿಗ್ರೇಟೆಡ್ ಸರ್ಕ್ಯೂಟ್‌ಗಳನ್ನು ಬೆಂಗಳೂರಿನ ಬಿಇಎಲ್ ಉತ್ಪಾದಿಸಿತ್ತು ಎಂಬುದು ಹೆಮ್ಮೆಯ ವಿಚಾರ.

• ಭಾರತದಲ್ಲಿ ಹೆಚ್ಚಿನ **ಸೆಮಿಕಂಡಕ್ಟರ್ ಸಂಸ್ಥೆ**ಗಳಿರುವುದು ಬೆಂಗಳೂರಿನಲ್ಲಿ. ಪ್ರಮುಖ ಸಂಸ್ಥೆಗಳಾದ ಇಂಟೆಲ್, ಟೆಕ್ಸಾಸ್, ಇನ್‌ಸ್ಟ್ರುಮೆಂಟ್ಸ್, ತೋಷಿಬಾ, ಫ್ರಿಸ್ಕೇಲ್, ಫಿಲಿಪ್ಸ್, ಮೋಟೋರೊಲಾ, ಎ.ಆರ್.ಎಂ, ಹುವಾಯ್ಯೆ ಮೊದಲಾದ ಸಂಸ್ಥೆಗಳು ತಮ್ಮ ಅಭಿವೃದ್ಧಿ ಮತ್ತು ಸಂಶೋಧನಾ ಕೇಂದ್ರಗಳನ್ನು ಬೆಂಗಳೂರಿನಲ್ಲಿ ಯಶಸ್ವಿಯಾಗಿ ನಿರ್ವಹಿಸುತ್ತಿವೆ. ಭಾರತದಲ್ಲಿ ರಾಜ್ಯಮಟ್ಟದಲ್ಲಿ ಪ್ರಥಮವಾಗಿ ಸೆಮಿಕಂಡಕ್ಟರ್ ಪಾಲಿಸಿಯನ್ನು ಕರ್ನಾಟಕ 2013ರಲ್ಲಿ ಘೋಷಿಸಿತು. ಈ ಮೂಲಕ ಈ ಕ್ಷೇತ್ರದ ಬೆಳವಣಿಗೆಗೆ ಅಗತ್ಯ ಪ್ರೋತ್ಸಾಹ ನೀಡಿತು.

• **ಏರ್ ಡಿಫೆನ್ಸ್ ಗ್ರೌಂಡ್ ಎನ್ವಿರಾನ್‌ಮೆಂಟ್ ಸಿಸ್ಟಂ (ಎಡಿಜಿಇಎಸ್)** ಯೋಜನೆಗೆ ಬೆಂಗಳೂರಿನ ಎಲೆಕ್ಟ್ರಾನಿಕ್ಸ್ ಆ್ಯಂಡ್ ರಾಡಾರ್ ಡೆವಲಪ್‌ಮೆಂಟ್ ಎಸ್ಟಾಬ್ಲಿಷ್‌ಮೆಂಟ್ (ಎಲ್‌ಆರ್‌ಡಿಇ) ಸಂಸ್ಥೆ ಅಭಿವೃದ್ಧಿಪಡಿಸಿದ್ದ ರಾಡಾರ್‌ಗಳನ್ನು ಬಳಸಲಾಗಿತ್ತು. 1969ರಿಂದ 1984ರಲ್ಲಿ ಭಾರತದ ವಾಯುಪಡೆಯು ಇಂತಹ 25 ರಾಡಾರ್ ಆಧಾರಿತ ವ್ಯವಸ್ಥೆಗಳನ್ನು ದೇಶದ ವಿವಿಧೆಡೆ ಅನುಷ್ಠಾನಗೊಳಿಸಿತ್ತು.

• ಬೆಂಗಳೂರಿನಲ್ಲಿರುವ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ತನ್ನ ಬಾಹ್ಯಕಾಶ ಯೋಜನೆಗಳಿಂದ ದೊರೆಯುವ ಮಾಹಿತಿ ಸಂಸ್ಕರಣೆ ಮತ್ತು ವಿಶ್ಲೇಷಣೆಗಾಗಿ ಕಂಪ್ಯೂಟರ್‌ಗಳ ಬಳಕೆಯನ್ನು 1970–1975ರ ಅವಧಿಯಲ್ಲಿ ಆರಂಭಿಸಿತು.

• ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ಇಸಿಇ ವಿಭಾಗದಲ್ಲಿದ್ದ **'ಸ್ಕೂಲ್ ಆಫ್ ಆಟೊಮೇಷನ್'ಗೆ** ಸೇರಿದಂತೆ ಸುಸಜ್ಜಿತ ಕಂಪ್ಯೂಟರ್ ತರಬೇತಿ ಕೇಂದ್ರವನ್ನು 1975ರಲ್ಲಿ ಆರಂಭಿಸಿ, ಸಾವಿರಾರು ವಿದ್ಯಾರ್ಥಿಗಳಿಗೆ ಸಿಸ್ಟಮ್ ತಂತ್ರಾಂಶದಲ್ಲಿ ತರಬೇತಿ ನೀಡಿತು. ಅಲ್ಲದೆ ಇಸ್ರೊದ ಉಪಗ್ರಹ ಉಡಾವಣಾ ಯೋಜನೆಗೆ ಅಗತ್ಯದ ತಂತ್ರಾಂಶ ಅಭಿವೃದ್ಧಿ ಮತ್ತು ಪರೀಕ್ಷೆಗೆ ಈ ಕೇಂದ್ರ ಮಹತ್ವದ ಕೊಡುಗೆ ನೀಡಿದೆ.

## ದೂರಸಂಪರ್ಕ ಕ್ಷೇತ್ರದಲ್ಲಿನ ಬೆಳವಣಿಗೆ

• 1882ರ ಜನವರಿ 28ರಂದು ಬ್ರಿಟನ್‌ನ ಓರಿಯಂಟಲ್ ಟೆಲಿಫೋನ್ ಕಂಪನಿಯು ಕೋಲ್ಕತ್ತ, ಮುಂಬೈ, ಅಹ್ಮದಾಬಾದ್ ಮತ್ತು ಮದ್ರಾಸಿನಲ್ಲಿ ದೂರವಾಣಿ ಸೇವೆಗಳನ್ನು ಆರಂಭಿಸಿತ್ತು. ಆಗ ಭಾರತದಲ್ಲಿ ದೂರವಾಣಿ ಸೇವೆಯನ್ನು 93 ಗ್ರಾಹಕರು ಪಡೆದಿದ್ದರು. ನಂತರದ ದಿನಗಳಲ್ಲಿ ಬೆಂಗಳೂರಿನ ದಂಡು ಪ್ರದೇಶದಲ್ಲಿ ದೂರವಾಣಿ ಸೇವೆ ಪ್ರಾರಂಭವಾಗುವುದರ ಮೂಲಕ ಕರ್ನಾಟಕಕ್ಕೆ ದೂರವಾಣಿ ಸೌಲಭ್ಯ ದೊರೆಯಿತು.

1889ರಲ್ಲಿ ಕಾಕನಕೋಟೆಯಲ್ಲಿ ಖೆಡ್ಡಾ ಕಾರ್ಯಾಚರಣೆ ನಡೆದಾಗ ಹುಣಸೂರು ಮತ್ತು ಕಾಕನಕೋಟೆ ನಡುವೆ 36 ಮೈಲಿಗಳಷ್ಟು ಲೈನ್ ಅಳವಡಿಸಿ, ದೂರವಾಣಿ ಸೌಲಭ್ಯ ಕಲ್ಪಿಸಲಾಯಿತು. 1896ರಲ್ಲಿ ಹೆಸರುಘಟ್ಟ ಜಲಾಶಯ ಮತ್ತು ಚಿಕ್ಕಬಾಣಾವರ ನಡುವೆ 17 ಕಿ.ಮೀ. ಲೈನ್ ಅಳವಡಿಸಿ ದೂರವಾಣಿ ಸೌಲಭ್ಯ ಕಲ್ಪಿಸಲಾಯಿತು. 1989ರಲ್ಲಿ ಬೆಂಗಳೂರು ಮತ್ತು ಮೈಸೂರಿನ ಪ್ಲೇಗ್ ಸಾಂಕ್ರಾಮಿಕ ಪಿಡುಗು ನಿಯಂತ್ರಣಕ್ಕಾಗಿ ಬೆಂಗಳೂರಿನಲ್ಲಿ 50 ಸರ್ಕಾರಿ ಕಚೇರಿಗಳಿಗೆ ದೂರವಾಣಿ ಸೌಲಭ್ಯಕಲ್ಪಿಸಲಾಯಿತು.

ಬೆಂಗಳೂರು– ಮೈಸೂರು ನಡುವೆ 1911–12ರಲ್ಲಿ ದೂರವಾಣಿ ಸೌಲಭ್ಯ ಕಲ್ಪಿಸಲಾಯಿತು. 1948ರಲ್ಲಿ ಬೆಂಗಳೂರಿನಲ್ಲಿ ಸ್ಥಾಪನೆಯಾದ ಕೇಂದ್ರ ಸರ್ಕಾರದ ಐ.ಟಿ.ಐ. ಉದ್ಯಮವು ಭಾರತದ ಟೆಲಿಕಾಮ್ ಕ್ಷೇತ್ರದ ಬೆಳವಣಿಗೆಗೆ ಮಹತ್ವದ ಕೊಡುಗೆ ನೀಡಿದೆ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ವಿದೇಶ ಸಂಚಾರ ನಿಗಮ್ ಲಿಮಿಟೆಡ್ (ವಿಎಸ್‌ಎನ್‌ಎಲ್) 1995ರ ಆಗಸ್ಟ್ 15ರಂದು ಬೆಂಗಳೂರು, ದೆಹಲಿ, ಮುಂಬೈ, ಪುಣೆ, ಕೋಲ್ಕತ್ತ ಮತ್ತು ಚೆನ್ನೈಗಳಲ್ಲಿ ಇಂಟರ್‌ನೆಟ್ ಸೇವೆಗಳನ್ನು ನೀಡಲು ಪ್ರಾರಂಭಿಸಿತು. ಆ ಬಳಿಕ ಇ–ಮೇಲ್ ಸೇವೆಗಳು ವಾಣಿಜ್ಯ ಸಂಸ್ಥೆಗಳು, ಉದ್ಯಮಗಳು ಮತ್ತು ಸಾರ್ವಜನಿಕರಿಗೆ ಲಭ್ಯವಾಯಿತು.

## ಖಾಸಗಿ ಕಂಪನಿಗಳ ಕೊಡುಗೆ

ಕರ್ನಾಟಕದಲ್ಲಿ 1982ರ ಸುಮಾರಿಗೆ ಬೆಂಗಳೂರಿನ ವಿಪ್ರೊ ಸಂಸ್ಥೆಯು ಕಂಪ್ಯೂಟರ್ ಮತ್ತು ಪ್ರಿಂಟರ್‌ಗಳ ಉತ್ಪಾದನೆ ಮತ್ತು ಮಾರಾಟವನ್ನು ಆರಂಭಿಸಿತು. ವಿಪ್ರೊ ಸಂಸ್ಥೆಯು ಮೈಸೂರಿನಲ್ಲಿ ಪ್ರಿಂಟರ್ ಉತ್ಪಾದನಾ ಘಟಕ ಆರಂಭಿಸಿತು. ಆಗ ಭಾರತದಲ್ಲಿ ಲಭ್ಯವಿದ್ದ ಪ್ರಿಂಟರ್‌ಗಳು ಇಂಗ್ಲಿಷ್ ಭಾಷೆಯಲ್ಲಿ ಪ್ರಿಂಟಿಂಗ್ ಮಾಡುವ ಸೌಲಭ್ಯವಿತ್ತು. ಭಾರತದಲ್ಲಿ ಮೊದಲ ಬಾರಿಗೆ ಬೆಂಗಳೂರಿನ ವಿಪ್ರೊ ಭಾರತದ ದೇವನಾಗರಿ ಲಿಪಿಯಲ್ಲಿ ಪ್ರಿಂಟ್ ಮಾಡುವ ಪ್ರಿಂಟರ್‌ಗಳನ್ನು ಅಭಿವೃದ್ಧಿಪಡಿಸಿತು. ಆ ನಂತರದ ದಿನಗಳಲ್ಲಿ ಕನ್ನಡ ಸೇರಿದಂತೆ ದೇಶದ ವಿವಿಧ ಭಾಷೆಗಳ ವಿಷಯಗಳನ್ನು ಪ್ರಿಂಟ್ ಮಾಡುವ ಪ್ರಿಂಟರ್‌ಗಳು ಭಾರತದಲ್ಲಿ ದೊರೆಯ ತೊಡಗಿದವು.

ಅಮೆರಿಕದ ಸಿಸ್ಕೋ ಸಂಸ್ಥೆಯು 1995ರಲ್ಲಿ ಬೆಂಗಳೂರಿನಲ್ಲಿ ತನ್ನ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರವನ್ನು ಆರಂಭಿಸಿತು. ಇದು ಅಮೆರಿಕದ ಹೊರಗೆ ಈ ಸಂಸ್ಥೆ ಹೊಂದಿರುವ ಅತಿದೊಡ್ಡ ಸಂಶೋಧನಾ ಮತ್ತು ಅಭಿವೃದ್ಧಿ ಕೇಂದ್ರ.

ಇನ್ಫೋಸಿಸ್, ಸಿಮೆನ್ಸ್, ಎಚ್‌ಸಿಎಲ್, ಮೈಂಡ್‌ಟ್ರಿ, ಎಚ್‌ಪಿ, ಸ್ಯಾಮ್‌ಸಂಗ್, ಫಿಲಿಪ್ಸ್, ಮೋಟೊರೋಲಾ, ಟೆಕ್ಸಾಸ್, ಅನಲಾಗ್‌ಡಿವೈಸಸ್, ಇಂಟೆಲ್ ಸೇರಿದಂತೆ ಹಲವು ಕಂಪನಿಗಳು ಬೆಂಗಳೂರಿನಲ್ಲಿ ಕಾರ್ಯಾರಂಭಿಸಿ, ವಿಜ್ಞಾನ, ತಂತ್ರಜ್ಞಾನ ಮತ್ತು ಸಾಫ್ಟ್‌ವೇರ್ ಕ್ಷೇತ್ರದಲ್ಲಿ ಬೆಂಗಳೂರನ್ನು ವಿಶ್ವವೇ ಗಮನ ಸೆಳೆಯುವಂತೆ ಮಾಡಿವೆ. ಇವುಗಳ ಕಾರಣದಿಂದ ಬೆಂಗಳೂರು ಸಿಲಿಕಾನ್ ವ್ಯಾಲಿ ಎಂದು ಗುರುತಿಸಿಕೊಂಡಿದೆ.

2000ದ ದಶಕದಲ್ಲಿ ಬೆಂಗಳೂರಿನಲ್ಲಿ 'ಕಾಲ್ ಸೆಂಟರ್' ಉದ್ಯಮ ವ್ಯಾಪಕವಾಗಿ ಬೆಳೆಯಿತು. ಬಹುರಾಷ್ಟ್ರೀಯ ಬ್ಯಾಂಕುಗಳು, ಮಾಹಿತಿ ತಂತ್ರಜ್ಞಾನ ಸಂಸ್ಥೆಗಳು ತಮ್ಮ ಗ್ರಾಹಕರಿಗೆ ಮೀಸಲಾದ ಕ್ಯಾಪಿಟಿವ್ ಕಾಲ್ ಸೆಂಟರ್‌ಗಳನ್ನು ಭಾರತದಲ್ಲಿ ಅದರಲ್ಲೂ ಪ್ರಮುಖವಾಗಿ ಬೆಂಗಳೂರಿನಲ್ಲಿ ಪ್ರಾರಂಭಿಸಿ ಯಶಸ್ವಿಯಾದವು.

## ಪ್ರಮುಖ ವಿಜ್ಞಾನಿಗಳು

ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ದೇಶ ಮತ್ತು ವಿಶ್ವಕ್ಕೆ ಅದ್ವಿತೀಯ ಕೊಡುಗೆಯನ್ನು ಬೆಂಗಳೂರು ನೀಡಿದೆ. ಬೆಂಗಳೂರನ್ನು ತಮ್ಮ ಸಂಶೋಧನಾ ಮತ್ತು ಕಾರ್ಯ ಚಟುವಟಿಕೆಯ ಕೇಂದ್ರವನ್ನಾಗಿ ಮಾಡಿಕೊಂಡ ಹಲವು ವಿಜ್ಞಾನಿಗಳು, ತಂತ್ರಜ್ಞರಿಗೆ ಭಾರತರತ್ನ, ಪದ್ಮಶ್ರೀ, ಪದ್ಮ ವಿಭೂಷಣ, ಪದ್ಮಭೂಷಣ ಪ್ರಶಸ್ತಿಗಳು ಸಂದಿವೆ. ದೇಶ, ವಿದೇಶಗಳಲ್ಲಿ ಪ್ರಸಿದ್ಧಿಯಾಗಿದ್ದ ಭೌತವಿಜ್ಞಾನಿ ಸಿ.ವಿ.ರಾಮನ್ (1930) ಅವರಿಗೆ ನೋಬಲ್ ಪ್ರಶಸ್ತಿಯೂ ದೊರೆತಿದೆ. 1955ರಲ್ಲಿ ಸರ್.ಎಂ. ವಿಶ್ವೇಶ್ವರಯ್ಯ ಅವರಿಗೆ 1955ರಲ್ಲಿ ಹಾಗೂ ಸಿ.ಎನ್.ರಾವ್‌ಅವರಿಗೆ 2014ರಲ್ಲಿ ಭಾರತರತ್ನ ಪ್ರಶಸ್ತಿ ಲಭಿಸಿದೆ. ಸಿ.ವಿ.ರಾಮನ್, ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ಅವರಿಗೂ ಭಾರತರತ್ನ ಪ್ರಶಸ್ತಿ ದೊರೆತಿದ್ದು, ಇವರೆಲ್ಲರೂ ಬೆಂಗಳೂರಿನೊಂದಿಗೆ ಅವಿನಾಭಾವ ಸಂಬಂಧ ಹೊಂದಿದವರಾಗಿದ್ದಾರೆ. ವಿಜ್ಞಾನ– ತಂತ್ರಜ್ಞಾನ ಕ್ಷೇತ್ರದಲ್ಲಿ ತಮ್ಮ ಅಸಾಧಾರಣ ಕೆಲಸ, ಕಾರ್ಯಗಳಿಂದ ಬೆಂಗಳೂರನ್ನು ಜಾಗತಿಕ ಮಟ್ಟದಲ್ಲಿ ಗುರುತಿಸುವಂತೆ ಇವರು ಮಾಡಿದ್ದಾರೆ.

ಪದ್ಮವಿಭೂಷಣ, ಪದ್ಮಭೂಷಣ, ಪದ್ಮಶ್ರೀ ಪ್ರಶಸ್ತಿಗಳನ್ನು ಪಡೆದ ನೂರಾರು ವಿಜ್ಞಾನಿಗಳು ಬೆಂಗಳೂರಿನೊಂದಿಗೆ ತಮ್ಮಕಾರ್ಯ ಚಟುವಟಿಕೆಗಳನ್ನು ಬೆಸೆದುಕೊಂಡಿರುವುದು ಹೆಮ್ಮೆಯ ಸಂಗತಿಯಾಗಿದೆ.

## ವಿದ್ಯುನ್ಮಾನ ನಗರ (ಎಲೆಕ್ಟ್ರಾನಿಕ್ ಸಿಟಿ)

ಬೆಂಗಳೂರಿನಲ್ಲಿರುವ ವಿದ್ಯುನ್ಮಾನ ನಗರ (ಎಲೆಕ್ಟ್ರಾನಿಕ್ ಸಿಟಿ) ಭಾರತ ಮತ್ತು ಕರ್ನಾಟಕದಲ್ಲಿರುವ ಮಾಹಿತಿ ತಂತ್ರಜ್ಞಾನ ಮತ್ತು ವಿದ್ಯುನ್ಮಾನ ಸಂಸ್ಥೆಗಳ ಬೃಹತ್‌ತಾಣ. ಇದು ಭಾರತದ ಅತಿದೊಡ್ಡ ವಿದ್ಯುನ್ಮಾನ ಕೈಗಾರಿಕಾ ಪಾರ್ಕ್‌ಗಳಲ್ಲಿ ಒಂದಾಗಿದೆ. ಇದನ್ನು ವಿವಿಧ ಹಂತಗಳಲ್ಲಿ ನಿರ್ಮಿಸಲಾಗಿದೆ.

ಕರ್ನಾಟಕದಲ್ಲಿ ವಿದ್ಯುನ್ಮಾನ ಉದ್ಯಮಗಳಿಗೆ ಪ್ರೋತ್ಸಾಹ ನೀಡಲು ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ (ಕಿಯೋನಿಕ್ಸ್) ಅನ್ನು 1976ರಲ್ಲಿ ಪ್ರಾರಂಭಿಸಲಾಯಿತು. ಅದರ ಮೊದಲ ಸಿಎಂಡಿ (ಅಧ್ಯಕ್ಷ ಮತ್ತು ಮ್ಯಾನೇಜಿಂಗ್ ಡೈರೆಕ್ಟರ್) ಆಗಿ ಆರ್.ಕೆ. ಬಾಳಿಗಾರ ಅವರು ಕಾರ್ಯನಿರ್ವಹಿಸಿದ್ದರು.

ಬೆಂಗಳೂರಿನಿಂದ 18 ಕಿ.ಮೀ ದೂರದ ಕೋನಪ್ಪನ ಅಗ್ರಹಾರ ಮತ್ತು ದೊಡ್ಡ ತೊಗೂರು ಗ್ರಾಮಗಳಲ್ಲಿ 1978ರಲ್ಲಿ ಕಿಯೋನಿಕ್ಸ್ ಸಂಸ್ಥೆಯು 330 ಎಕರೆ ಭೂಮಿ ಖರೀದಿಸಿ, ಕರ್ನಾಟಕದ ಮೊದಲ ವಿದ್ಯುನ್ಮಾನ ಉದ್ಯಮ ವಲಯವನ್ನು ಅಭಿವೃದ್ಧಿಪಡಿಸಿತು. ಇದನ್ನು 'ವಿದ್ಯುನ್ಮಾನ ನಗರ' (ಎಲೆಕ್ಟ್ರಾನಿಕ್ ಸಿಟಿ) ಎಂದು ಕರೆಯಲಾಗುತ್ತದೆ. ಪ್ರಸ್ತುತ ಎಲೆಕ್ಟ್ರಾನಿಕ್ ಸಿಟಿಯು 800 ಎಕರೆಗೂ ಹೆಚ್ಚು ಪ್ರದೇಶದಲ್ಲಿ ನಾಲ್ಕು ಹಂತಗಳಲ್ಲಿ ಅಭಿವೃದ್ಧಿಯಾಗಿದ್ದು, 200ಕ್ಕೂ ಹೆಚ್ಚು ದೇಶ, ವಿದೇಶಗಳ ಉದ್ಯಮಗಳು, ನವೋದ್ಯಮ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ.

ಐಐಐಟಿ – ಬೆಂಗಳೂರು, ಇನ್ಫೋಸಿಸ್, ವಿಪ್ರೊ, ಸೀಮೆನ್ಸ್ ಸೇರಿದಂತೆ ಪ್ರತಿಷ್ಠಿತ ಐಟಿ ಸಂಸ್ಥೆಗಳು, ಬಿಟಿ ಉದ್ಯಮಗಳು ಹಾಗೂ ಸಂಶೋಧನ ಸಂಸ್ಥೆಗಳು ಇಲ್ಲಿವೆ. 1990ರಲ್ಲಿ ಇಲ್ಲಿ ಭಾರತದ ಪ್ರಥಮ ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ (ಎಸ್‌ಟಿಪಿಐ) ಸ್ಥಾಪನೆಯಾಯಿತು. ಎಲೆಕ್ಟ್ರಾನಿಕ್ ಸಿಟಿಯು ಹುಟ್ಟು ಮತ್ತು ಬೆಳವಣಿಗೆಗೆ ಆಗಿನ ಮುಖ್ಯಮಂತ್ರಿಯಾಗಿದ್ದ ದೇವರಾಜ ಅರಸು ಹಾಗೂ ಕಿಯೋನಿಕ್ಸ್ ಸಂಸ್ಥೆಯ ಮೊದಲ ಸಿಎಂಡಿ ಆರ್.ಕೆ. ಬಾಳಿಗಾರ ಕಾರಣಕರ್ತರು.

## ಅಂತರರಾಷ್ಟ್ರೀಯ ತಂತ್ರಜ್ಞಾನ ಪಾರ್ಕ್ (ಐಟಿ ಪಾರ್ಕ್)

1992ರಲ್ಲಿ ಪ್ರಧಾನಿಯಾಗಿದ್ದ ಪಿ.ವಿ. ನರಸಿಂಹರಾವ್ ಅವರು ಪ್ರಯತ್ನದ ಫಲವಾಗಿ ಬೆಂಗಳೂರಿಗೆ ಅಂತರರಾಷ್ಟ್ರೀಯ ಮಟ್ಟದ ಐಟಿ ಪಾರ್ಕ್ ದೊರೆಯಿತು. ಬೆಂಗಳೂರಿನ ವೈಟ್‌ಫೀಲ್ಡ್ ಪ್ರದೇಶದಲ್ಲಿ ಈ ಪಾರ್ಕ್ ನಿರ್ಮಿಸಲಾಯಿತು. ಭಾರತದ ಟಾಟಾ ಸಮೂಹ ಸಂಸ್ಥೆ, ಸಿಂಗಪುರದ ಸಮೂಹ ಸಂಸ್ಥೆಗಳು ಮತ್ತು ಕರ್ನಾಟಕರಾಜ್ಯ ಸರ್ಕಾರದ ಐಎಡಿಬಿ ಪಾಲುದಾರಿಕೆಯಲ್ಲಿ ಸಂಸ್ಥೆಯನ್ನು ರಚಿಸಲಾಯಿತು. 1994ರಲ್ಲಿ ರಚನೆಯಾದ ಈ ಐಟಿ ಪಾರ್ಕ್ ಅನ್ನು ಐಟಿಪಿಎಲ್ (ಇಂಟರ್‌ನ್ಯಾಷನಲ್ ಟೆಕ್ ಪಾರ್ಕ್ ಲಿಮಿಟೆಡ್) ಅಥವಾ ಐಟಿಪಿಬಿ (ಇಂಟ್‌ನ್ಯಾಷನಲ್ ಟೆಕ್ ಪಾರ್ಕ್– ಬೆಂಗಳೂರು) ಎಂದೂ ಕರೆಯಲಾಗುತ್ತದೆ.

45,000 ಚ. ಅಡಿ ವಿಸ್ತೀರ್ಣ ಹೊಂದಿರುವ ಈ ಐಟಿ ಪಾರ್ಕ್‌ನಲ್ಲಿ ಡಿಸ್ಕವರರ್, ಇನ್ನೋವೇಟರ್, ಕ್ರಿಯೇಟರ್, ಎಕ್ಸ್‌ಪ್ಲೋರರ್, ಇನ್‌ವೆಂಟರ್, ನ್ಯಾವಿಗೇಟರ್, ವಾಯೇಜರ್, ಪೋಯಿನಿಯರ್ ಮತ್ತು ವಿಕ್ಟರ್ ಹೆಸರಿನ ಬೃಹತ್ ಕಟ್ಟಡಗಳಲ್ಲಿ ಹಲವಾರು ದೇಶೀಯ ಮತ್ತು ಬಹುರಾಷ್ಟ್ರೀಯ ಐಟಿ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ. ಅಲ್ಲದೆ ಉದ್ಯೋಗಿಗಳಿಗೆ ಕ್ರೀಡಾ ಸಮುಚ್ಚಯ, ಪಂಚತಾರಾ ಹೋಟೆಲ್ ಸಹ ಇಲ್ಲಿದೆ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

## ಬೆಂಗಳೂರಿನಲ್ಲಿರುವ ಪ್ರಮುಖ ಐಟಿ ಪಾರ್ಕ್‌ಗಳು

● **ಮಾನ್ಯತಾಟೆಕ್ ಪಾರ್ಕ್ :** ಇದು ಹೆಬ್ಬಾಳ ಬಳಿಯ ನಾಗವಾರ ಸಮೀಪ ಸುಮಾರು 300 ಎಕರೆ ಪ್ರದೇಶದಲ್ಲಿದ್ದು, 2001ರಲ್ಲಿ ಇದು ಸ್ಥಾಪನೆಯಾಗಿದೆ. ಕಾಗ್ನಿಜೆಂಟ್, ರೋಲ್ಸ್‌ರಾಯ್ಸ್, ಐಬಿಎಂ, ನೋಕಿಯಾ, ಫಿಲಿಪ್ಸ್ ಸೇರಿದಂತೆ ಹಲವು ಕಂಪನಿಗಳು ಇಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, 1.50 ಲಕ್ಷಕ್ಕೂ ಹೆಚ್ಚು ಜನರು ಇಲ್ಲಿ ಕೆಲಸ ಮಾಡುತ್ತಿದ್ದಾರೆ.

● **ಗ್ಲೋಬಲ್ ವಿಲೇಜ್ :** ಬೆಂಗಳೂರಿನ ಮೈಸೂರು ರಸ್ತೆಯಲ್ಲಿ (ಕೆಂಗೇರಿ ಸಮೀಪ) ಗ್ಲೋಬಲ್ ವಿಲೇಜ್ ಸ್ಥಾಪನೆಯಾಗಿದೆ. 120 ಎಕರೆ ವ್ಯಾಪ್ತಿಯಲ್ಲಿ ಇರುವ ಈ ಐಟಿ ಪಾರ್ಕ್‌ನಲ್ಲಿ ಮೈಂಡ್‌ಟ್ರೀ, ಎಂಫೆಸಿಸ್, ಎನ್‌ಟಿಟಿ, ಟೆಕ್ಸಾಸ್ ಇನ್‌ಸ್ಟ್ರುಮೆಂಟ್ಸ್, ಸೊನಾಟಾ ಸಾಫ್ಟ್‌ವೇರ್ ಸೇರಿ ಹಲವು ಕಂಪನಿಗಳು ಕಾರ್ಯ ನಿರ್ವಹಿಸುತ್ತಿವೆ.

● **ಎಂಬೆಸ್ಸಿ ಗೋಲ್ಫ್ ಲಿಂಕ್ಸ್ :** ಇದು ಕೋರಮಂಗಲ ಹತ್ತಿರ 27 ಲಕ್ಷಚದರ ಅಡಿ ಪ್ರದೇಶದಲ್ಲಿ ಸ್ಥಾಪನೆಯಾಗಿದೆ. ಇಲ್ಲಿ ಹಲವು ಡಾಟಾ ಸೆಂಟರ್‌ಗಳು, ಮೊಬೈಲ್ ಸೇವಾ ಸಂಸ್ಥೆಗಳು ಸೇರಿದಂತೆ ಹಲವು ಎಂಎನ್‌ಸಿ (ಬಹುರಾಷ್ಟ್ರೀಯ ಕಂಪನಿಗಳು) ಕಾರ್ಯ ನಿರ್ವಹಿಸುತ್ತಿವೆ.

ಇದೇ ರೀತಿ ಸರ್ಜಾಪುರ ದೇವರಬೀಸನಹಳ್ಳಿ ಬಳಿಯ ಆರ್‌ಎಂಜೆಡ್‌ಇಕೋಸ್ಪೇಸ್, ಸದಾನಂದ ನಗರದ ಬೆನ್ನಿಗಾನಹಳ್ಳಿ ಬಳಿ ಆರ್‌ಎಂಜೆಡ್ ಇನ್ಫಿನಿಟಿ, ವರ್ತೂರು ಹೋಬಳಿಯ ಆರ್‌ಎಂಜೆಡ್ ಇಕೋವರ್ಡ್, ಆಡುಗೋಡಿ ಪ್ರದೇಶದಲ್ಲಿ ಪ್ರೆಸ್ಟೀಜ್ ಬ್ಲೂಚಿಪ್ ಸಾಫ್ಟ್‌ವೇರ್ ಪಾರ್ಕ್, ವೈಟ್‌ಫೀಲ್ಡ್ ಪ್ರದೇಶದಲ್ಲಿ ಬ್ರಿಗೇಡ್‌ಟೆಕ್ ಪಾರ್ಕ್, ಸಿ.ವಿ. ರಾಮನ್ ನಗರ ಸಮೀಪದ ಭಾಗಮಾನೆ ಟೆಕ್‌ಪಾರ್ಕ್, ವೈಟ್‌ಫೀಲ್ಡ್ ಮುಖ್ಯರಸ್ತೆ ಸಮೀಪದ 105 ಎಕರೆ ಪ್ರದೇಶದಲ್ಲಿನ ಪ್ರೆಸ್ಟೀಜ್ ಶಾಂತಿನಿಕೇತನ ಟೆಕ್‌ಪಾರ್ಕ್ ಇದೆ.

ಬೆಂಗಳೂರು ಬೆಳೆದು, ವಿಜ್ಞಾನ ಮತ್ತು ತಂತ್ರಜ್ಞಾನ ನಗರವಾಗುತ್ತಿದ್ದಂತೆ ಹಲವು ಐಟಿ ಪಾರ್ಕ್‌ಗಳು ಇಲ್ಲಿ ನೆಲೆಗೊಂಡಿವೆ. ಈ ಮೂಲಕ ಅವು ಇಲ್ಲಿನ ಲಕ್ಷಾಂತರ ಜನರಿಗೆ ಉದ್ಯೋಗಾವಕಾಶಗಳನ್ನೂ ಒದಗಿಸಿವೆ. ಅದರ ಜತೆಗೆ ಬೆಂಗಳೂರಿನ ನಗರೀಕರಣದ ಬೆಳವಣಿಗೆಗೂ ಅಮೂಲ್ಯವಾದ ಕೊಡುಗೆ ನೀಡಿವೆ. ಈ ಪಾರ್ಕ್‌ಗಳ ಸಲುವಾಗಿ ಬೆಂಗಳೂರಿಗೆ ಬೆಳವಣಿಗೆಯ ವೇಗವೂ ಹೆಚ್ಚಾಗಿ, ಹಲವು ಹೊಸ ಬಡಾವಣೆಗಳು, ರಸ್ತೆಗಳು, ಮೂಲ ಸೌಕರ್ಯಗಳು ನಿರ್ಮಾಣವಾಗಿವೆ.

## ಬೆಂಗಳೂರಿನಲ್ಲಿರುವ ಪ್ರಮುಖ ಸಂಶೋಧನಾ ಸಂಸ್ಥೆಗಳು

### ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ)

ದೇಶದ ಪ್ರತಿಷ್ಠಿತ ವಿಜ್ಞಾನ ಸಂಶೋಧನಾ ಸಂಸ್ಥೆ ಎಂದು ಕರೆಸಿಕೊಂಡಿರುವ, ಅಂತರರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ ಮತ್ತು ಪ್ರಾಮುಖ್ಯತೆಗಳಿಸಿರುವ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ಇರುವುದು ಬೆಂಗಳೂರಿನಲ್ಲಿ. ಇದು ರಾಜಧಾನಿ ಬೆಂಗಳೂರನ್ನು ವಿಜ್ಞಾನ ನಗರವನ್ನಾಗಿಸುವಲ್ಲಿ ಮತ್ತು ಜಾಗತಿಕ ಮಟ್ಟದಲ್ಲಿ ಗುರುತಿಸುವಲ್ಲಿ ಮಹತ್ವದ ಕೊಡುಗೆ ನೀಡಿದೆ. ಜಾಗತಿಕ ವಿಶ್ವವಿದ್ಯಾಲಯಗಳ ಶ್ರೇಯಾಂಕ ಪಟ್ಟಿಯಲ್ಲಿ ಭಾರತದಲ್ಲಿ ಮುಂಚೂಣಿಯಲ್ಲಿರುವ ವಿದ್ಯಾಸಂಸ್ಥೆಯೂ ಆಗಿ ಬೆಳೆದಿದೆ.

ಭಾರತೀಯ ವಿಜ್ಞಾನ ಸಂಸ್ಥೆಯು ಭಾರತ ಸರ್ಕಾರದಿಂದ ಬೆಂಗಳೂರಿನಲ್ಲಿ ಸ್ಥಾಪಿತವಾಗಿರುವ ಶ್ರೇಷ್ಠ ಸಂಶೋಧನಾ ಮತ್ತು ಉನ್ನತ ಮಟ್ಟದ ಅಧ್ಯಯನ ಕೇಂದ್ರ. ಕೈಗಾರಿಕೋದ್ಯಮ ಜಮ್ ಸೇಟ್ ಜಿ ನುಸ್ಸೆರ್ ವಾನ್ ಜಿ ಟಾಟಾ ಅವರು 1898ರಲ್ಲಿ ಈ ಸಂಸ್ಥೆಯನ್ನು ಸ್ಥಾಪಿಸಲು ಯೋಜನೆ ಸಿದ್ಧಪಡಿಸಲು ಸಮಿತಿಯನ್ನು ರಚಿಸಿದ್ದರು. ಆ ಸಮಿತಿ ಆಗಿನ ವೈಸರಾಯ್ ಲಾರ್ಡ್‌ಕರ್ಜನ್ ಅವರಿಗೆ ಕರಡು ಸಲ್ಲಿಸಿತು. ಈ ಸಂಸ್ಥೆಯ ಸಂವಿಧಾನವನ್ನು ಆಗಿನ ವೈಸರಾಯ್ ಲಾರ್ಡ್ ಮಿಂಟೊ ಅವರು ಅನುಮೋದಿಸಿ, ಅದನ್ನು ಸ್ಥಾಪಿಸುವ ಆಜ್ಞೆಯನ್ನು 1909ರ ಮೇ 27ರಂದು ಸಹಿ ಮಾಡಿದರು.

1911ರ ಪ್ರಾರಂಭದಲ್ಲಿ ಮೈಸೂರು ಮಹಾರಾಜರಾದ ನಾಲ್ವಡಿಕೃಷ್ಣರಾಜ ಒಡೆಯರ್ (ಆಗಿನ ದಿವಾನ ಕೆ. ಶೇಷಾದ್ರಿಅಯ್ಯರ್) ಸಂಸ್ಥೆಗೆ ಅಡಿಗಲ್ಲು ಹಾಕಿದರು. ಮೈಸೂರು ಸಂಸ್ಥಾನವು ಐಐಎಸ್‌ಸಿ ಸ್ಥಾಪನೆಗೆ ಬೆಂಗಳೂರಿನಲ್ಲಿ 372 ಎಕರೆ ಭೂಮಿಯನ್ನು ಉಚಿತವಾಗಿ ನೀಡಿತು.

ಐಐಎಸ್‌ಸಿ ವಿಶ್ವವಿದ್ಯಾಲಯದ ಸ್ಥಾನಮಾನವನ್ನು ಹೊಂದಿದೆ ಮತ್ತು ವಿಜ್ಞಾನದ ವಿವಿಧ ಶಾಖೆಗಳ ಅನೇಕ ಪ್ರಕಟಣೆಗಳನ್ನು ಹೊಂದಿದೆ. ಸಂಸ್ಥೆಯ ಸುವರ್ಣ ಮಹೋತ್ಸವ ಮತ್ತು ಪ್ಲಾಟಿನಂ ಮಹೋತ್ಸವ ಸಂದರ್ಭಗಳಲ್ಲಿ ಸರ್ಕಾರ ಇನ್ನಷ್ಟು ಭೂಮಿಯನ್ನು ಐಐಎಸ್‌ಸಿಗೆ ದಾನವಾಗಿ ನೀಡಿತು. ಪ್ರಸ್ತುತ ಐಐಎಸ್‌ಸಿ 443 ಎಕರೆ ಭೂಮಿಯನ್ನು ಹೊಂದಿದೆ.

ಐಐಎಸ್‌ಸಿಯ ಶತಮಾನೋತ್ಸವ ಸಂದರ್ಭದಲ್ಲಿ (2009) ರಾಜ್ಯದ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನಲ್ಲಿ ಸಂಸ್ಥೆಯ ನೂತನ ಕ್ಯಾಂಪಸ್ ಸ್ಥಾಪಿಸಲಾಯಿತು. ಈ ಕ್ಯಾಂಪಸ್ 1,500 ಎಕರೆ ವಿಸ್ತೀರ್ಣ ಹೊಂದಿದ್ದು, ಗ್ರಾಮೀಣ ಭಾಗದ ಶಾಲಾ ಮತ್ತು ಕಾಲೇಜುಗಳ ವಿಜ್ಞಾನ ಮತ್ತು ಗಣಿತ ವಿಷಯಗಳ ಬೋಧಕರಿಗೆ ತರಬೇತಿ ನೀಡುವ ಮಹತ್ವಾಕಾಂಕ್ಷಿ ಯೋಜನೆ ಹೊಂದಿದೆ. ಇದರಡಿಯಲ್ಲಿ 2022ರವರೆಗೆ 11,000ಕ್ಕೂ ಹೆಚ್ಚು ಶಿಕ್ಷಕರಿಗೆ ತರಬೇತಿ ನೀಡಲಾಗಿದೆ. ಈ ಕ್ಯಾಂಪಸ್ ಅನ್ನು ಭಾರತ ಸರ್ಕಾರವು ಉತ್ಕೃಷ್ಟ ಕೇಂದ್ರವೆಂದು ಮಾನ್ಯ ಮಾಡಿದೆ.

ಪ್ರಧಾನಿ ನರೇಂದ್ರ ಮೋದಿ ಅವರು 2023ರ ಜನರಿ 29ರಂದು ನಡೆಸಿಕೊಟ್ಟ 'ಮನದ ಮಾತು' (ಮನ್ ಕೀ ಬಾತ್) ಕಾರ್ಯಕ್ರಮದಲ್ಲಿ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ)ಯನ್ನು ಶ್ಲಾಘಿಸಿದ್ದರು. ಐಐಎಸ್‌ಸಿ 2022ರಲ್ಲಿ 145 ಹಕ್ಕುಸ್ವಾಮ್ಯಗಳನ್ನು ಪಡೆಯುವ ಮೂಲಕ ಅಪರೂಪದ ದಾಖಲೆ ಬರೆದಿದೆ ಎಂದು ಅವರು ತಮ್ಮ ಮಾತುಗಳಲ್ಲಿ ಮೆಚ್ಚುಗೆ ವ್ಯಕ್ತಪಡಿಸಿದ್ದನ್ನು ಸ್ಮರಿಸಬಹುದು.

### ಇಸ್ರೊ (ಐಎಸ್‌ಆರ್‌ಒ)

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಭಾರತದ ಬಾಹ್ಯಾಕಾಶ ಸಂಸ್ಥೆಯಾಗಿದೆ. ಇದು ಭಾರತ ಮತ್ತು ಮನುಕುಲಕ್ಕೆ ಬಾಹ್ಯಾಕಾಶದ ಪ್ರಯೋಜನಗಳನ್ನು ಒದಗಿಸುವ ಮಹತ್ವದ ಕಾರ್ಯದಲ್ಲಿ ತೊಡಗಿದೆ. ಇದು ಕೇಂದ್ರ ಸರ್ಕಾರದ ಬಾಹ್ಯಾಕಾಶ ಇಲಾಖೆಯ ಪ್ರಮುಖ ಘಟಕ.

1962ರಲ್ಲಿ ಕೇಂದ್ರ ಸರ್ಕಾರ ಸ್ಥಾಪಿಸಿದ್ದ ಭಾರತೀಯ ರಾಷ್ಟ್ರೀಯ ಬಾಹ್ಯಾಕಾಶ ಸಂಶೋಧನಾ ಸಮಿತಿಯನ್ನು 1969ರ ಆಗಸ್ಟ್ 15ರಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಆಗಿ ವಿಸ್ತೃತರೂಪದಲ್ಲಿ ರಚಿಸಲಾಯಿತು. ಈ ವೇಳೆ ಇಸ್ರೊ ಕೇಂದ್ರ ಸರ್ಕಾರದ ಅಣುಶಕ್ತಿ ವಿಭಾಗದ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿತ್ತು. ವಿಕ್ರಂ ಸಾರಾಬಾಯಿ ಅವರು ಇಸ್ರೊದ ಪ್ರಥಮ ಅಧ್ಯಕ್ಷರು. ದೇಶಕ್ಕೆ ಉಪಗ್ರಹ ಆಧಾರಿತ ಸೇವೆಗಳನ್ನು ಒದಗಿಸುವುದು ಮತ್ತು ಹೊಸ ತಂತ್ರಜ್ಞಾನದ ಮೂಲಕ ಬಾಹ್ಯಾಕಾಶ ಕ್ಷೇತ್ರದಲ್ಲಿ ಸ್ವಾಯತ್ತತೆ ಸಾಧಿಸುವುದು ಇಸ್ರೊದ ಧ್ಯೇಯವಾಗಿತ್ತು.

1972ರಲ್ಲಿ ಬಾಹ್ಯಾಕಾಶ ಇಲಾಖೆ (ಡಿಎಎಸ್) ಸ್ಥಾಪಿಸಲಾಯಿತು. ಅದರಡಿ 1972ರಲ್ಲಿ ಇಸ್ರೊವನ್ನು ತರಲಾಯಿತು. ಇಲಾಖೆಯ ಬಾಹ್ಯಾಕಾಶ ಕಾರ್ಯಕ್ರಮಗಳನ್ನು ಇಸ್ರೊ ಕಾರ್ಯರೂಪಕ್ಕೆ ತರುವ ಜವಾಬ್ದಾರಿ ಹೊತ್ತಿದೆ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

1972 ರಿಂದ 1989ರವರೆಗೂ ಇಸ್ರೊದ ಕಚೇರಿಗಳು ಬೆಂಗಳೂರಿನ ಮಧ್ಯಭಾಗದಲ್ಲಿರುವ ಕಾವೇರಿ ಭವನದಲ್ಲಿ ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಿತು. 1989ರಲ್ಲಿ ಭಾರತೀಯ ವಿಜ್ಞಾನಮಂದಿರ ಹಾಗೂ ಭಾರತ್ಎಲೆಕ್ಟ್ರಾನಿಕ್ ಲಿಮಿಟೆಡ್ ಸಂಸ್ಥೆಗಳನ್ನು ಸಂಜಯ ನಗರದಲ್ಲಿ ತನ್ನದೇ ಆದ ಸ್ವಂತ ಕಟ್ಟಡಗಳಿಗೆ ಸ್ಥಳಾಂತರಿಸಲಾಯಿತು. ಈ ಕಟ್ಟಡಕ್ಕೆ ಅಂತರಿಕ್ಷ ಭವನ ಎಂದು ಹೆಸರಿಡಲಾಯಿತು. ಇಲ್ಲಿಯೇ ಇಸ್ರೊ ಅಧ್ಯಕ್ಷರು ಮತ್ತು ಅಂತರಿಕ್ಷ ವಿಭಾಗದ ಕಾರ್ಯದರ್ಶಿಗಳು ಕಾರ್ಯ ನಿರ್ವಹಿಸುತ್ತಾರೆ.

1970ರ ದಶಕದಲ್ಲಿ ಭಾರತವು ಪ್ರದರ್ಶನ, ಪ್ರಚಾರ ಹಾಗೂ ದೂರಗ್ರಾಹ್ಯಗಳ ಕಾರ್ಯವನ್ನು ಕೈಗೆತ್ತಿಕೊಂಡು, ಪರೀಕ್ಷಾರ್ಥವಾಗಿ ಉಪಗ್ರಹಗಳಾದ ಆರ್ಯಭಟ, ಭಾಸ್ಕರ, ಆಪಲ್ ಹಾಗೂ ರೋಹಿಣಿ ನಿರ್ಮಾಣ ಮಾಡಿತು. ಅಲ್ಲದೆ ಪರಿಕ್ಷಾರ್ಥ ಉಪಗ್ರಹ ಲಾಂಛನ ವಾಹನಗಳಾದ ಎಸ್ಎಸ್ವಿ–3, ಎಎಸ್ಎಲ್ವಿಗಳ ವಿನ್ಯಾಸ ಮತ್ತು ನಿರ್ಮಾಣವನ್ನು ಮಾಡಿತು.

2008ರ ನವೆಂಬರ್‌ನಲ್ಲಿ ಭಾರತವು ಬಾಹ್ಯಾಕಾಶ ನೌಕೆ ಚಂದ್ರಯಾನ–1 ಅನ್ನು ಯಶಸ್ವಿಯಾಗಿ ಚಂದ್ರನ ಕಕ್ಷೆಗೆ ಕಳುಹಿಸಿತು ಮತ್ತು ಚಂದ್ರನ ಅಂಗಳಕ್ಕೆ ನೌಕೆಯನ್ನು ಕಳುಹಿಸಿದ ದೇಶಗಳಲ್ಲಿ ನಾಲ್ಕನೇ ದೇಶವಾಗಿ ಹೊರಹೊಮ್ಮಿತು.

ರಾಷ್ಟ್ರೀಯ ಅಗತ್ಯಗಳಿಗೆ ಬಾಹ್ಯಾಕಾಶ ತಂತ್ರಜ್ಞಾನದ ಅಭಿವೃದ್ಧಿ ಮತ್ತು ಅಪ್ಲಿಕೇಷನ್‌ಗಳ ಅಭಿವೃದ್ಧಿಪಡಿಸುವ ಕಾರ್ಯವನ್ನು ಇಸ್ರೊ ಮಾಡುತ್ತಿದೆ. ಇದಕ್ಕಾಗಿ ಸಂವಹನ, ದೂರದರ್ಶನ ಪ್ರಸಾರ, ಹವಾಮಾನ ಸೇವೆಗಳಿಗಾಗಿ ಪ್ರಮುಖವಾಗಿ ಬಾಹ್ಯಾಕಾಶ ವ್ಯವಸ್ಥೆಗಳನ್ನು ಸ್ಥಾಪಿಸಿದೆ. ಸಂಪನ್ಮೂಲಗಳ ಮೇಲ್ವಿಚಾರಣೆ ಮತ್ತು ನಿರ್ವಹಣೆ, ಬಾಹ್ಯಾಕಾಶಆಧಾರಿತ ನ್ಯಾವಿಗೇಷನ್ ಸೇವೆಗಳು, ಇಸ್ರೊ ಉಪಗ್ರಹಗಳನ್ನು ಅಗತ್ಯವಿರುವ ಕಕ್ಷೆಗಳಲ್ಲಿ ಇರಿಸಲು ಉಪಗ್ರಹ ಉಡಾವಣಾ ವಾಹನಗಳಾದ ಪಿಎಸ್ಎಲ್ವಿ ಮತ್ತು ಜಿಎಸ್ಎಲ್ವಿಗಳನ್ನು ಅಭಿವೃದ್ಧಿಪಡಿಸಿದೆ.

ಬೆಂಗಳೂರಿನಲ್ಲಿ ಪ್ರಧಾನ ಕಚೇರಿ ಹೊಂದಿರುವ ಇಸ್ರೊ, ದೇಶದ ವಿವಿಧೆಡೆ ತನ್ನ ಚಟುವಟಿಕೆಗಳಿಗೆ ಪೂರಕವಾಗಿ ಕೇಂದ್ರ ಮತ್ತು ಘಟಕಗಳನ್ನು ಹೊಂದಿದೆ.

ಬೆಂಗಳೂರಿನ ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ಶೆಡ್ಡುಗಳಿಂದ ಆರಂಭವಾದ ಕಾರ್ಯಾಗಾರ ಕ್ರಮೇಣ ಅತ್ಯಾಧುನಿಕ ಪ್ರಯೋಗಾಲಯ ಗಳುಳ್ಳ ಇಸ್ರೊ ಉಪಗ್ರಹ ಕೇಂದ್ರ ಎಂಬ ಬೃಹತ್ ಸಂಸ್ಥೆಯಾಗಿ ಮಾರ್ಪಟ್ಟಿತು. ಭಾರತೀಯ ಉಪಗ್ರಹ ತಂತ್ರಜ್ಞಾನದ ಪಿತಾಮಹರಾದ ಪ್ರೊ. ಯು.ಆರ್. ರಾವ್ ಅವರ ಗೌರವಾರ್ಥವಾಗಿ ಈ ಸಂಸ್ಥೆಗೆ ಯು.ಆರ್.ರಾವ್ ಉಪಗ್ರಹ ಕೇಂದ್ರ ಎಂದು ಪುನರ್‌ನಾಮಕರಣ ಮಾಡಲಾಗಿದೆ. ಈ ಕೇಂದ್ರದಲ್ಲಿ ಇಲ್ಲಿಯವರೆಗೆ ನೂರಕ್ಕೂ ಹೆಚ್ಚು ಉಪಗ್ರಹಗಳನ್ನು ತಯಾರು ಮಾಡಲಾಗಿದೆ.

10 ಕಿ.ಗ್ರಾಂ. ತೂಕದ ನ್ಯಾನೊ ಉಪಗ್ರಹಗಳಿಂದ ಹಿಡಿದು ಸುಮಾರು 6000 ಕೆ.ಜಿ. ಭಾರದ ಉಪಗ್ರಹದವರೆಗೆ, ಭೂಮಿಗೆ ಹತ್ತಿರದ ಕಕ್ಷೆಗಳಿಂದ ಹಿಡಿದು ಮಂಗಳ ಗ್ರಹದಕಕ್ಷೆಯವರೆಗೆ ಉಪಗ್ರಹಗಳನ್ನು ಯು.ಆರ್.ರಾವ್ ಉಪಗ್ರಹ ಕೇಂದ್ರವು ನಿರ್ಮಿಸಿದೆ. 50 ವರ್ಷಗಳಿಂದ ದೂರಸಂವೇದಿ, ಸಂವಹನ, ಪಥ ನಿರ್ದೇಶನ, ವೈಜ್ಞಾನಿಕ, ಸಣ್ಣ ಮತ್ತು ನ್ಯಾನೊ ಮೊದಲಾದ ವಿಭಿನ್ನವಾದ ವಿವಿಧ ಉಪಯೋಗಗಳಿಗಾಗಿ ಉಪಗ್ರಹಗಳನ್ನು ಈ ಕೇಂದ್ರದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ.

ಚಂದ್ರಯಾನ–1 ಮತ್ತು 2, ಮಂಗಳಯಾನ ಅಥವಾ ಆರ್ಬಿಟರ್ ಮಿಷನ್, ಆಸ್ಟ್ರೋಸಾಟ್, ಸ್ರಾಸ್ ಮೊದಲಾದ ಎಂಟು ಉಪಗ್ರಹಗಳನ್ನು ಖಗೋಳಶಾಸ್ತ್ರ ಮತ್ತು ವೈಜ್ಞಾನಿಕ ಅಧ್ಯಯನಕ್ಕಾಗಿ ಬಾಹ್ಯಾಕಾಶಕ್ಕೆ ಕಳಿಸಲಾಗಿದೆ. ಸುಮಾರು 100 ಕಿ.ಗ್ರಾಂ. ಭಾರದ ಎರಡು ಮಿನಿ ಉಪಗ್ರಹಗಳು ಹಾಗೂ ಹತ್ತಾರು ಕಿ.ಗ್ರಾಂ. ತೂಕದ ನ್ಯಾನೊ ಉಪಗ್ರಹಗಳೂ ಸೇರಿದಂತೆ ಎಂಟು ಪ್ರಾಯೋಗಿಕ ಉಪಗ್ರಹಗಳನ್ನೂ ತಯಾರಿಸಿದೆ.

ವಿಕ್ರಂ ಸಾರಾಭಾಯಿ, ಪ್ರೊ. ಎಂ.ಜಿ.ಕೆ. ಮೆನನ್, ಪ್ರೊ. ಸತೀಶ್‌ಧವನ್, ಪ್ರೊ. ಯು.ಆರ್.ರಾವ್, ಡಾ. ಕೆ. ಕಸ್ತೂರಿರಂಗನ್, ಮಾಧವನ್ ನಾಯರ್, ಡಾ. ಕೆ. ರಾಧಾಕೃಷ್ಣ, ಎ.ಎಸ್. ಕಿರಣ್‌ಕುಮಾರ್, ಡಾ. ಶಿವನ್, ಎಸ್. ಸೋಮನಾಥ್ ಅವರುಗಳು ಇಸ್ರೊ ಸಂಸ್ಥೆಯ ಸಂಸ್ಕೃತಿಯನ್ನು ವಿಶಿಷ್ಟ ಮತ್ತು ವಿಭಿನ್ನವಾಗಿ ರೂಪಿಸಿ ನಡೆಸಿಕೊಂಡು ಬಂದಿದ್ದಾರೆ. ಇವರುಗಳ ಪ್ರಯತ್ನದ ಫಲವಾಗಿ ಇಸ್ರೊ ಭಾರತದ ವೈಜ್ಞಾನಿಕ ಕ್ಷೇತ್ರದ ಇತಿಹಾಸದ ಪುಟಗಳಲ್ಲಿ ಸುವರ್ಣಾಕ್ಷರಗಳಲ್ಲಿ ದಾಖಲಾಗಿದೆ.

### ರಕ್ಷಣಾ ಸೇವಾ ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆಗಳು

ಕೇಂದ್ರ ಸರ್ಕಾರದ ರಕ್ಷಣಾ ಸಚಿವಾಲಯದಡಿ ಸ್ಥಾಪನೆಯಾಗಿರುವ ಡಿಆರ್‌ಡಿಒ (ಡಿಫೆನ್ಸ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್ ಆರ್ಗನೈಸೇಷನ್) ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆಗಳ ಸಮೂಹವಾಗಿದೆ. ಭೂಸೇನೆ, ವಾಯುಸೇನೆ ಮತ್ತು ನೌಕಾ ಸೇನೆಗಳಿಗೆ ಬೇಕಾಗುವ ಯುದ್ಧ ಸಾಮಗ್ರಿಗಳ ತಂತ್ರಜ್ಞಾನ ಮತ್ತು ಅಭಿವೃದ್ಧಿಕಾರ್ಯವನ್ನು ಈ ಸಂಸ್ಥೆ ನಿರ್ವಹಿಸುತ್ತದೆ. ಡಿಆರ್‌ಡಿಒ ದಲ್ಲಿ ಒಟ್ಟು 46 ವಿವಿಧ ಸಂಶೋಧನಾಲಯಗಳಿದ್ದು, ಅವುಗಳಲ್ಲಿ ಏಳು ಬೆಂಗಳೂರಿನಲ್ಲಿವೆ.

ಅವೆಂದರೆ –

1. ಏರೋನಾಟಿಕಲ್ ಡೆವಲಪ್‌ಮೆಂಟ್ ಎಸ್ಟಾಬ್ಲಿಷ್‌ಮೆಂಟ್ (ಎಡಿಇ)
2. ಸೆಂಟರ್ ಫಾರ್‌ಏರ್ಬೋರ್ನ್ ಸಿಸ್ಟಮ್ಸ್ (ಸಿಎಬಿಎಸ್)
3. ಸೆಂಟರ್ ಫಾರ್ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಅಂಡ್ ರೊಬೊಟಿಕ್ಸ್ (ಸಿಎಐಆರ್)
4. ಡಿಫೆನ್ಸ್ ಏವಿಯಾನಿಕ್ಸ್ ರಿಸರ್ಚ್ ಎಸ್ಟಾಬ್ಲಿಷ್‌ಮೆಂಟ್ (ಡಿಎಆರ್‌ಇ)
5. ಡಿಫೆನ್ಸ್ ಬಯೋ ಎಂಜಿನಿಯರಿಂಗ್ ಅಂಡ್ ಎಲೆಕ್ಟ್ರೋ ಮೆಡಿಕಲ್ ಲ್ಯಾಬೊರೇಟರೀಸ್ (ಡಿಇಬಿಇಎಲ್)
6. ಎಲೆಕ್ಟ್ರಾನಿಕ್ಸ್ ಅಂಡ್ ರಾಡಾರ್ ಡೆವಲಪ್‌ಮೆಂಟ್ (ಜಿಟಿಆರ್‌ಇ)
7. ಗ್ಯಾಸ್ ಟರ್ಬೈನ್ ರಿಸರ್ಚ್ ಎಸ್ಟಾಬ್ಲಿಷ್‌ಮೆಂಟ್

### ಏರೋನಾಟಿಕಲ್ ಡೆವಲಪ್‌ಮೆಂಟ್ ಏಜೆನ್ಸಿ (ಎಡಿಎ)

ದೇಶದ ವೈಮಾನಿಕ ಶಕ್ತಿಯು ಯುದ್ಧ ಗೆಲ್ಲಿಸುವ ಶಕ್ತಿಯನ್ನು ಹೆಚ್ಚಿಸುತ್ತದೆ ಎಂಬುದನ್ನು ಅರಿತ ಕೇಂದ್ರ ಸರ್ಕಾರ ಯುದ್ಧ ವಿಮಾನದ ತಂತ್ರಜ್ಞಾನ ಬೆಳವಣಿಗೆಗೆ 'ಏರೋನಾಟಿಕಲ್ ಡೆವಲಪ್‌ಮೆಂಟ್ ಏಜೆನ್ಸಿ' (ಎಡಿಎ) ಅನ್ನು 1982ರಲ್ಲಿ ಬೆಂಗಳೂರಿನಲ್ಲಿ ಸ್ಥಾಪಿಸಿತು. ವಿಮಾನಗಳನ್ನು ವಿನ್ಯಾಸಿಸುವ, ವೈಮಾನಿಕ ತಂತ್ರಜ್ಞಾನವನ್ನು ಬೆಳೆಸುವ ಮತ್ತು ನಿರ್ದೇಶಿಸುವ ಹಲವು ವೈಮಾನಿಕ ಸಂಸ್ಥೆಗಳ ಸಹಯೋಗದೊಂದಿಗೆ ಕಾರ್ಯ ನಿರ್ವಹಿಸುವುದು ಎಡಿಎ ಉದ್ದೇಶ. ಭಾರತದ ಯುದ್ಧ ವಿಮಾನ ತೇಜಸ್‌ನ ಮುಖ್ಯ ಹರಿಕಾರರು ಎಂದರೆ ಏರೋನಾಟಿಕಲ್ ಡೆವಲಪ್‌ಮೆಂಟ್ ಏಜೆನ್ಸಿ ಆಗಿದೆ.

### ಹಿಂದೂಸ್ತಾನ ಏರೋನಾಟಿಕ್ಸ್ ಲಿಮಿಟೆಡ್ (ಎಚ್ಎಎಲ್)

ದೇಶದ ಪ್ರತಿಷ್ಠಿತ ಕಂಪನಿಗಳಲ್ಲಿ ಒಂದಾಗಿರುವ ಹಿಂದೂಸ್ತಾನ ಏರೋನಾಟಿಕ್ಸ್ ಲಿಮಿಟೆಡ್ ಸ್ವಾತಂತ್ರ್ಯ ಪೂರ್ವದಲ್ಲಿಯೇ ಪ್ರಾರಂಭವಾಗಿದೆ. 1940ರ ಡಿಸೆಂಬರ್ 23ರಂದು ವಾಲಚಂದ್ ಹೀರಾಚಂದ್ ಅವರು ಆಗಿನ ಮೈಸೂರು ಸಂಸ್ಥಾನದ ಜೊತೆಯಲ್ಲಿ ವಿಮಾನಗಳನ್ನು ತಯಾರು

APPROVED BY UGC CARE

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಮಾಡಲು ಹಿಂದೂಸ್ತಾನ್ ಏರ್‌ಕ್ರಾಫ್ಟ್ ಲಿಮಿಟೆಡ್ ಎಂಬ ಹೆಸರಿನಿಂದ ಎಚ್‌ಎಎಲ್ ಅನ್ನು ಬೆಂಗಳೂರಿನಲ್ಲಿ ಪ್ರಾರಂಭಿಸಿದರು.

1951ರಲ್ಲಿ ಎಚ್‌ಎಎಲ್ ಭಾರತ ಸರ್ಕಾರದ ರಕ್ಷಣಾ ಸಚಿವಾಲಯದ ಸ್ವಾಧೀನಕ್ಕೆ ಬಂದಿತು. ಫ್ಲೈಯಿಂಗ್ ಕ್ಲಬ್‌ಗಳಿಗೆ ಪುಷ್ಪಕ್ ವಿಮಾನ, ವೈಮಾನಿಕ ವೀಕ್ಷಣೆಗೆ ಕೃಷಿಕ್ ವಿಮಾನ, ಎಚ್.ಎಫ್ 24 ಫೈಟರ್ ವಿಮಾನ, ಎಚ್.ಜೆ.ಟಿ. ಟ್ರೈನರ್ ವಿಮಾನವನ್ನು ವಿನ್ಯಾಸಿಸಿ ಉತ್ಪಾದನಾ ಕಾರ್ಯವನ್ನೂ ಎಚ್‌ಎಎಲ್ ಮಾಡಿತು. 1963ರಲ್ಲಿ ಆರಂಭಿಸಿದ್ದ ಏರೋನಾಟಿಕ್ಸ್ ಇಂಡಿಯಾ ಲಿಮಿಟೆಡ್ (ಎಐಎಲ್) ಅನ್ನು 1964ರಲ್ಲಿ ಎಚ್‌ಎಎಲ್ ಜೊತೆಗೆ ವಿಲೀನಗೊಳಿಸಿ 'ಹಿಂದೂಸ್ತಾನ್‌ಏರೋನಾಟಿಕ್ಸ್ ಲಿಮಿಟೆಡ್' (ಎಚ್‌ಎಎಲ್) ಎಂದು ಮರುನಾಮಕರಣ ಮಾಡಲಾಯಿತು.

ಭಾರತದಲ್ಲಿ ವಿನ್ಯಾಸಿಸಿ ತಯಾರಾದ ತೇಜಸ್ ಲೈಟ್‌ಕಾಂಬ್ಯಾಟ್ ಏರ್‌ಕ್ರಾಫ್ಟ್ (ಎಲ್‌ಸಿಎ) ಎಚ್‌ಎಎಲ್ ಸಂಸ್ಥೆಯ ಹೆಮ್ಮೆಯ ಕೊಡುಗೆ. ಎಚ್‌ಎಎಲ್ ಒಂದು ಮ್ಯಾನೇಜ್‌ಮೆಂಟ್ ಅಕಾಡೆಮಿಯನ್ನೂ ನಡೆಸುತ್ತಿದ್ದು, ಹಲವು ಪಿ.ಜಿ. ಡಿಪ್ಲೊಮಾ ತರಗತಿಗಳನ್ನು ನಡೆಸುತ್ತಿದೆ.

ಪ್ರಸ್ತುತ ಫೈಟರ್ ಜೆಟ್‌ಗಳು, ಹೆಲಿಕಾಪ್ಟರ್‌ಗಳು, ಜೆಟ್‌ಎಂಜಿನ್, ಸಾಗರಗ್ಯಾಸ್ ಟರ್ಬೈನ್ ಎಂಜಿನ್‌ಗಳು, ಏವಿಯಾನಿಕ್ಸ್ ಸಾಫ್ಟ್‌ವೇರ್ ಅಭಿವೃದ್ಧಿ, ಬಿಡಿಭಾಗಗಳ ತಯಾರಿಕೆ ಮತ್ತು ಪೂರೈಕೆ ಹಾಗೂ ಭಾರತೀಯ ಸೇನಾ ವಿಮಾನಗಳ ನವೀಕರಣ ಮತ್ತು ವಿನ್ಯಾಸ ಕಾರ್ಯದಲ್ಲಿ ಎಚ್‌ಎಎಲ್ ತೊಡಗಿದೆ.

ಸ್ವದೇಶಿ ಲೈಟ್ ಯುಟಿಲಿಟಿ ಹೆಲಿಕಾಪ್ಟರ್ ತಯಾರಿಕೆಗಾಗಿ ಹೊಸ ಸಮಗ್ರ ಸೌಲಭ್ಯವು ಬೆಂಗಳೂರಿನ ಸಮೀಪದ ತುಮಕೂರಿನ ಗುಬ್ಬಿ ಬಳಿ ಆರಂಭವಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರು 2023ರ ಫೆಬ್ರುವರಿ 6ರಂದು ಈ ಘಟಕವನ್ನು ಉದ್ಘಾಟಿಸಿದರು. ಈ ಘಟಕ ಆರಂಭದಲ್ಲಿ ವರ್ಷಕ್ಕೆ 30 ಹೆಲಿಕಾಪ್ಟರ್‌ಗಳನ್ನು ತಯಾರಿಸುವ ಗುರಿ ಹೊಂದಿದೆ. ಸುಮಾರು 615 ಎಕರೆಜಮೀನಿನ ವ್ಯಾಪ್ತಿಯಲ್ಲಿ ಈ ಘಟಕ ತಲೆಯೆತ್ತಿದೆ. 3 ಟನ್‌ನಿಂದ 15 ಟನ್‌ವರೆಗಿನ ಸಾವಿರಕ್ಕೂ ಹೆಚ್ಚು ಹೆಲಿಕಾಪ್ಟರ್ ತಯಾರಿಸುವ ಯೋಜನೆಯನ್ನು ಎಚ್‌ಎಲ್ ಹೊಂದಿದೆ. ಮೊದಲ ಹಂತದಲ್ಲಿ 5000 ಕೋಟಿ ರೂಪಾಯಿ ಬಂಡವಾಳ ಹೂಡಿಕೆಯೊಂದಿಗೆ ಈ ಘಟಕ ಆರಂಭವಾಗಿದೆ. ಹೆಲಿಕಾಪ್ಟರ್ ನಿರ್ಮಾಣ, ಜೋಡಣೆ, ಹೆಲಿಪ್ಯಾಡ್, ಆಡಳಿತ ಕಟ್ಟಡ ಈ ಆವರಣದಲ್ಲಿದೆ.

## ರಾಷ್ಟ್ರೀಯ ವೈಮಾನಿಕ ಪ್ರಯೋಗಾಲಯ (ಎನ್‌ಎಎಲ್)

ಕೌನ್ಸಿಲ್ ಆಫ್ ಸೈಂಟಿಫಿಕ್ ಅಂಡ್ ಇಂಡಸ್ಟ್ರಿಯಲ್ ರಿಸರ್ಚ್ (ಸಿಎಸ್‌ಐಆರ್) ಅಂಗ ಸಂಸ್ಥೆಯಾಗಿ ರಾಷ್ಟ್ರೀಯ ವೈಮಾಂತರಿಕ್ಷ ಪ್ರಯೋಗ ಶಾಲೆಯು 1959ರಲ್ಲಿ ಸ್ಥಾಪಿತವಾಯಿತು. ಡಾ. ಪಿ. ನೀಲಕಂಠನ್‌ಅದರ ಮೊದಲ ನಿರ್ದೇಶಕರಾಗಿದ್ದರು. ಒಂಬತ್ತು ತಿಂಗಳಲ್ಲಿ 1960ರ ಮಾರ್ಚ್‌ನಲ್ಲಿ ಬೆಂಗಳೂರಿನ ಜಯಮಹಲ್ ರಸ್ತೆ ಮತ್ತು ಅರಮನೆ ರಸ್ತೆಯಲ್ಲಿ ಇರುವ ಮೈಸೂರು ಮಹಾರಾಜರ ಅರಮನೆಯ ಅಶ್ವ ಶಾಲೆಯಲ್ಲಿ ತನ್ನ ಕಚೇರಿಯಲ್ಲಿ ರಾಷ್ಟ್ರೀಯ ವೈಮಾನಿಕ ಪ್ರಯೋಗಾಲಯವಾಗಿ ಸ್ಥಾಪಿಸಲಾಯಿತು.

ಮೂಲತಃ ನ್ಯಾಷನಲ್‌ಏರೋನಾಟಿಕಲ್ ಲ್ಯಾಬೊರೇಟರಿ ಎಂದು ಆರಂಭವಾಗಿದ್ದ ಎನ್‌ಎಎಲ್, 1993ರ ಏಪ್ರಿಲ್‌ನಲ್ಲಿ ನ್ಯಾಷನಲ್ ಏರೋಸ್ಪೇಸ್ ಲ್ಯಾಬೊರೇಟರೀಸ್ ಎಂದು ಮರುನಾಮಕರಣ ಮಾಡಲಾಯಿತು. ಇದು ಭಾರತೀಯ ಬಾಹ್ಯಾಕಾಶ ಕಾರ್ಯಕ್ರಮ, ಅದರ ಬಹುಶಿಸ್ತೀಯ ಚಟುವಟಿಕೆಗಳಲ್ಲಿ ಮಹತ್ವದ ಪಾತ್ರವಹಿಸುತ್ತಿದೆ. ಏರೋಸ್ಪೇಸ್ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸುವುದು, ಸಣ್ಣ, ಮಧ್ಯಮ ಗಾತ್ರದ ನಾಗರಿಕ ವಿಮಾನಗಳನ್ನು ವಿನ್ಯಾಸಗೊಳಿಸುವುದು ಮತ್ತು ನಿರ್ಮಿಸುವುದು ಇದರ ಪ್ರಮುಖ ಕಾರ್ಯಗಳಾಗಿವೆ.

## ಭಾರತ್‌ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿಇಎಲ್)

ಬೆಂಗಳೂರಿನ ಜಾಲಹಳ್ಳಿಯಲ್ಲಿ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ 1954ರಲ್ಲಿ ಪ್ರಾರಂಭವಾಯಿತು. ಕೇಂದ್ರ ಸರ್ಕಾರದ ಈ ಉದ್ಯಮವು ಭಾರತದ ವಿದ್ಯುನ್ಮಾನ ತಂತ್ರಜ್ಞಾನ ಕ್ಷೇತ್ರದಲ್ಲಿ ಮಹತ್ವದ ಹೆಜ್ಜೆಯಾಗಿದೆ. ರಕ್ಷಣಾ ಸಚಿವಾಲಯದ ಅಡಿಯಲ್ಲಿ ಕಾರ್ಯ ನಿರ್ವಹಿಸುವ ಇದು ಸೇನಾ ವ್ಯವಸ್ಥೆಗೆ ಬೇಕಾದ ಸಂಪರ್ಕ ಉಪಕರಣಗಳನ್ನು ತಯಾರಿಸುವ ಕಾರ್ಯ ಮಾಡುತ್ತದೆ.

ದೇಶದಲ್ಲಿ ಚುನಾವಣೆ ಸಂದರ್ಭದಲ್ಲಿ ಬಳಸುವ ವಿದ್ಯುನ್ಮಾನ ಮತಯಂತ್ರ (ಇವಿಎಂ) ಅನ್ನು ವಿನ್ಯಾಸಗೊಳಿಸಿ, ತಯಾರಿಸಿದ್ದು ಬಿಇಎಲ್. ಅಲ್ಲದೆ ಕೋವಿಡ್–19ರ ಸಾಂಕ್ರಾಮಿಕದ ಸಂದರ್ಭದಲ್ಲಿ ದೇಶಕ್ಕೆ ಅತ್ಯಗತ್ಯವಿದ್ದ 30,000 ಐಸಿಯು ವೆಂಟಿಲೇಟರ್‌ಗಳನ್ನು ಬಿಇಎಲ್ ದಾಖಲೆ ಸಮಯದಲ್ಲಿ ತಯಾರಿಸಿಕೊಟ್ಟಿತ್ತು.

ಬಿಇಎಲ್ ಸಿವಿಲ್ ಏವಿಯೇಷನ್ ಸೆಕ್ಟರ್, ಆಂಟಿಡ್ರೋನ್ ಸಿಸ್ಟಮ್ಸ್, ಸ್ಯಾಟಲೈಟ್‌ಅಸೆಂಬ್ಲಿ ಮತ್ತು ಇಂಟಿಗ್ರೇಷನ್, ಸೋಲಾರ್, ರೈಲ್ವೆ, ಮೆಟ್ರೊ, ನೆಟ್‌ವರ್ಕ್ ಮತ್ತು ಸೈಬರ್ ಸೆಕ್ಯುರಿಟಿ ಪರಿಹಾರಗಳು, ಎಲೆಕ್ಟ್ರಿಕ್ ವಾಹನಗಳಿಗೆ ಎನರ್ಜಿ ಸ್ಟೋರೇಜ್ ಉತ್ಪನ್ನಗಳನ್ನು ತಯಾರಿಸುತ್ತಿದೆ

ಬೆಂಗಳೂರಿನ ಬಿಇಎಲ್‌ನಲ್ಲಿ ಬಾಹ್ಯಾಕಾಶ ವಿದ್ಯುನ್ಮಾನ ಶಾಖೆ (1982), ನೌಕಾ ಉಪಕರಣ ವಿಭಾಗ (1987), ಸ್ವಿಚಿಂಗ್ ಮತ್ತು ಟ್ರಾನ್ಸ್‌ಮಿಷನ್ ಉಪಕರಣಗಳ ಮತ್ತು ವೋಟಿಂಗ್ ಯಂತ್ರಗಳ ತಯಾರಿಕಾಘಟಕ (1989), ಸೆಂಟ್ರಲ್ ರಿಸರ್ಚ್ ಲ್ಯಾಬ್ (1988) ಸ್ಥಾಪಿಸಲಾಗಿದ್ದು, ಅವು ಕಾರ್ಯ ನಿರ್ವಹಿಸುತ್ತಿವೆ. ಅಕಾಶ್ ನಿರ್ದೇಶಿತ ಕ್ಷಿಪಣಿಯ ಪೂರ್ಣ ಸಂಯೋಜನೆ ಬಿಇಎಲ್‌ನಲ್ಲಿಯೇ ನಡೆಯುತ್ತದೆ.

## ಶಿಕ್ಷಣದ ಮೂಲಕ

ಬೆಂಗಳೂರು ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಜಾಗತಿಕವಾಗಿ ಗಮನ ಸೆಳೆಯಲು ಇಲ್ಲಿದ್ದ ಶೈಕ್ಷಣಿಕ ಸಂಸ್ಥೆಗಳ ಪಾತ್ರವೂ ಮಹತ್ವದ್ದಾಗಿದೆ. ಇಲ್ಲಿನ ಎಂಜಿನಿಯರಿಂಗ್ ಕಾಲೇಜುಗಳು, ವೈದ್ಯಕೀಯ ಕಾಲೇಜುಗಳು ಮತ್ತು ಸಂಶೋಧನಾ ಸಂಸ್ಥೆಗಳು ಇದಕ್ಕೆ ತನ್ನದೇ ಆದ ಕೊಡುಗೆಗಳನ್ನು ನೀಡಿದೆ. 1864ರಲ್ಲಿ ಬೆಂಗಳೂರಿನಲ್ಲಿ ಸೆಂಟ್ರಲ್ ಕಾಲೇಜು ಆರಂಭವಾಯಿತು. ಇಲ್ಲಿನ ಭೌತಶಾಸ್ತ್ರ ವಿಭಾಗದಲ್ಲಿ ಭೌತವಿಜ್ಞಾನಿ ಸಿ.ವಿ.ರಾಮನ್ ಅವರು ಬೋಧಕರಾಗಿ, ಸಂಶೋಧಕರಾಗಿ ಕಾರ್ಯ ನಿರ್ವಹಿಸಿದ್ದರು.

ಬೆಂಗಳೂರಿನಲ್ಲಿ 1917ರಲ್ಲಿ ಎಂಜಿನಿಯರಿಂಗ್‌ಕಾಲೇಜು ಸ್ಥಾಪನೆಯಾಗಿ 1948ರಲ್ಲಿ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು ಎಂದು ಮರುನಾಮಕರಣ ಮಾಡಲಾಗಿತ್ತು. 1924ರಲ್ಲಿ ಬೆಂಗಳೂರು ವೈದ್ಯಕೀಯ ಕಾಲೇಜು ಸ್ಥಾಪಿತಗೊಂಡು 1930ರಲ್ಲಿ ಅದು ಮೈಸೂರಿಗೆ ಸ್ಥಳಾಂತರವಾಯಿತು. ಆನಂತರ 1954ರಲ್ಲಿ ಮತ್ತೆ ಬೆಂಗಳೂರು ಮೆಡಿಕಲ್ ಕಾಲೇಜನ್ನು ಆರಂಭಿಸಲಾಯಿತು. ವೈದ್ಯಕೀಯ ಶಿಕ್ಷಣಕ್ಕಾಗಿ ಇರುವ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ 1996ರಲ್ಲಿ ಬೆಂಗಳೂರಿನಲ್ಲಿ ಆರಂಭವಾಯಿತು.

ತಾಂತ್ರಿಕ ಶಿಕ್ಷಣಕ್ಕಾಗಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವನ್ನು 1994ರಲ್ಲಿ ಸ್ಥಾಪಿಸಲಾಯಿತು. ಇದರ ಕೇಂದ್ರ ಕಚೇರಿ ಬೆಳಗಾವಿಯಲ್ಲಿದ್ದರೆ, ಬೆಂಗಳೂರಿನಲ್ಲಿ ಪ್ರಾದೇಶಿಕ ಕಚೇರಿಕಾರ್ಯ ನಿರ್ವಹಿಸುತ್ತಿದೆ. ಬೆಂಗಳೂರಿನಲ್ಲಿ ಹಲವು ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳು, ವೈದ್ಯಕೀಯ ಕಾಲೇಜುಗಳು ಕಾರ್ಯ ನಿರ್ವಹಿಸುತ್ತಿವೆ. ಇಲ್ಲಿನ ಹಲವು ಪದವಿ ಕಾಲೇಜುಗಳಲ್ಲಿ ವಿಜ್ಞಾನ ವ್ಯಾಸಂಗಕ್ಕೆ ಅವಕಾಶಗಳಿದ್ದು, ಹಲವು ವಿದ್ಯಾರ್ಥಿಗಳನ್ನು ಉನ್ನತ ವ್ಯಾಸಂಗ ಮತ್ತು ಸಂಶೋಧನಾ ಕ್ಷೇತ್ರದತ್ತ ಸೆಳೆಯುವಂತೆ ಮಾಡುತ್ತಿವೆ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

## ಉಪಸಂಹಾರ

ಇವೇ ಅಲ್ಲದೆ ಬಿಎಚ್‌ಇಎಲ್, ಬಿಇಎಂಎಲ್, ಸೆಂಟ್ರಲ್ ಸಿಲ್ಕ್ ಬೋರ್ಡ್, ದಿ ಇನ್‌ಸ್ಟಿಟ್ಯೂಟ್ ಆಫ್ ಬಯೋ ಇನ್ ಫಾರ್ಮ್ಯಾಟಿಕ್ಸ್ ಅಂಡ್ ಅಲೈಡ್ ಬಯೋಟೆಕ್ನಾಲಜಿ ಸಂಸ್ಥೆ ಸೇರಿದಂತೆ ಹಲವು ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ಸಂಶೋಧನಾ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿದ್ದು, ದೇಶದ ಪ್ರಗತಿಗೆ ತನ್ನದೇ ಆದ ಕೊಡುಗೆ ನೀಡುತ್ತಿವೆ. ಈ ಎಲ್ಲ ಸಂಸ್ಥೆಗಳ ಮುಖ್ಯ ಕಚೇರಿಗಳನ್ನು ಹೊಂದಿರುವ ಬೆಂಗಳೂರು ಜಾಗತಿಕ ಮಟ್ಟದಲ್ಲಿ ಗಮನ ಸೆಳೆಯುವ ಮೂಲಕ ವಿಜ್ಞಾನ ಮತ್ತು ತಂತ್ರಜ್ಞಾನ ನಗರಿಯಾಗಿ ಬೆಳೆದು ನಿಂತಿದೆ.

## ಪರಾಮರ್ಶನ ಗ್ರಂಥಗಳು


- **ಕರ್ನಾಟಕ ಕೈಪಿಡಿ – (2011) :** ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು
- **ಬೆಂಗಳೂರು ಗ್ಯಾಸೆಟಿಯರ್ (1990) :** ಸೂರ್ಯನಾಥ ಕಾಮತ್ (ಮುಖ್ಯ ಸಂಪಾದಕರು), ಕರ್ನಾಟಕ ರಾಜ್ಯ ಸರ್ಕಾರ, ಬೆಂಗಳೂರು.
- **ಕರ್ನಾಟಕ ವಿಜ್ಞಾನ ತಂತ್ರಜ್ಞಾನ ದರ್ಶನ (2021) :** ಡಾ. ಎಂ.ಎಸ್. ಸುರೇಶ್ (ಪ್ರಧಾನ ಸಂಪಾದಕರು), ಬೆಂಗಳೂರು ಉದಯಭಾನು ಕಲಾ ಸಂಘ.
- **ಇಸ್ರೊ– ಸಾಧನೆಯ ಹಾದಿಯಲ್ಲಿ (2022) :** ಡಾ. ಬಿ.ರಾ. ನಾಗೇಂದ್ರ, ಯು.ಆರ್.ರಾವ್ ಬೆಂಗಳೂರು ಉಪಗ್ರಹ ಕೇಂದ್ರ.
- **ಬೆಂಗಳೂರಿನ ಸಂಕ್ಷಿಪ್ತ ಇತಿಹಾಸ (2022) :** ಹಂ.ಗು. ರಾಜೇಶ್, ಬೆಂಗಳೂರು ಇತಿಹಾಸ ದರ್ಪಣ ಪ್ರಕಾಶನ.
- **ಬೆಂಗಳೂರು ಪರಂಪರೆ (2019) :** ಎಸ್.ಕೆ. ಅರುಣಿ, ಬೆಂಗಳೂರು ಇತಿಹಾಸ ದರ್ಪಣ ಪ್ರಕಾಶನ.
- https://www.deccanherald.com/specials/what-makes-bengaluru-indias-science-capital-935670.html
- https://www.prajavani.net/india-news/pm-narendra-modi-man-ki-baat-2023-january-1010755.html
- https://dst.gov.in/introduction
- https://www.ibef.org/industry/science-and-technology
- https://ksteps.karnataka.gov.in/info-1/Department+of+Science+and+Technology+ (DST)+ Organization/en
- https://iisc.ac.in/
- https://www.isro.gov.in/profile.html
- https://www.ada.gov.in/
- https://hal-india.co.in/
- https://www.nal.res.in/
- https://bel-india.in/ContentPage.aspx?MId=1& CId=1&LId=1 & link=0


■■

– *19ನೇ ಪುಟದಿಂದ ಮುಂದುವರೆದುದು*

ಅತಿಕ್ರಮಿಸುತ್ತಿರುವಂತೆಯೇ ಜನ ಸಮುದಾಯದಲ್ಲಿ ಒಗ್ಗಟ್ಟು ಮರೆಯಾಗುತ್ತಿದೆ. ಸ್ವಾರ್ಥ, ಅಸೂಯೆ, ಮತ್ಸರ, ದ್ವೇಷ ಮತ್ತು ಅಹಂಕಾರದಂತಹ ಕಲ್ಮಶ ಭಾವಗಳು ಹೆಚ್ಚುತ್ತಿದೆ. ವೈಯಕ್ತಿಕ ಭಿನ್ನಾಭಿಪ್ರಾಯಗಳು ಮತ್ತು ಪರಸ್ಪರ ಸ್ಪರ್ಧೆಗಳು ಒಮ್ಮತ ಮೂಡದಿರಲು ಸಹಕರಿಸುತ್ತಿವೆ. ಇದರಿಂದ ತಂಡ ಸ್ಫೂರ್ತಿಯ ಗುಣ ಕಳೆಗುಂದುತ್ತಿದೆ. ಆರ್ಥಿಕ ಮತ್ತು ಸಾಮಾಜಿಕ ಮಾನದಂಡಗಳು ಸಮಾಜದಲ್ಲಿ ಬಿರುಕು ಸೃಷ್ಟಿಸುತ್ತಿವೆ.

## ರಾಜಕೀಯ ಮತ್ತು ಸಾಮಾಜಿಕ ಸಂಘರ್ಷಗಳು

ರಾಜಕೀಯ ಮತ್ತು ಸಾಮಾಜಿಕ ಸಂಘರ್ಷಗಳು ಜಾನಪದದ ಮೇಲೆ ಅಗಾಧ ಪರಿಣಾಮ ಬೀರುತ್ತಿವೆ. ರಾಜಕೀಯ ಕಾರಣಗಳಿಗೆ ಸಮುದಾಯಗಳ ನಡುವೆ ಕಂದಕ ಸೃಷ್ಟಿಸಲ್ಪಡುತ್ತಿರುವುದು ಜಾನಪದದ ಆಚರಣೆಗಳಲ್ಲಿ ತೊಡಕಾಗುತ್ತಿವೆ. ರಾಜಕೀಯ ಸಿದ್ಧಾಂತಗಳು ಮತ್ತು ಹಿತಾಸಕ್ತಿಗಳೂ ಇಲ್ಲಿ ಪ್ರಮುಖ ಪಾತ್ರಧಾರಿಗಳು. ಸಾಮಾಜಿಕ ಅಸಮಾನತೆಗಳು, ಪಿಡುಗುಗಳು ಸಾಂಸ್ಕೃತಿಕ ಸೌಹಾರ್ದತೆಯನ್ನು ಅರ್ಥಹೀನಗೊಳಿಸುತ್ತಿದೆ. ಸಂಘರ್ಷಗಳ ನೇರ ಪರಿಣಾಮ ಜಾನಪದದ ಮೇಲಾಗುತ್ತಿದೆ.

## ಶ್ರದ್ಧೆ ಮತ್ತು ಭಕ್ತಿ ಕಡಿಮೆ ಆಗಿರುವುದು

ಜಾನಪದ ಆಚರಣೆಗಳ ಮೇಲಿನ ಶ್ರದ್ಧೆ ಮತ್ತು ಭಕ್ತಿ ದಿನೇ ದಿನೇ ಕಡಿಮೆಯಾಗುತ್ತಿದೆ. ಇದರಿಂದಾಗಿ ಜಾನಪದದ ಸಾಂಸ್ಕೃತಿಕ ಮೌಲ್ಯಕ್ಕೆ ಧಕ್ಕೆಯಾಗುತ್ತಿದೆ. ಶ್ರದ್ಧೆ ಮತ್ತು ಭಕ್ತಿಗಳ ಹೊರತಾಗಿ ಜಾನಪದವೆಂದೂ ಅಪೂರ್ಣ. ಆಧುನಿಕ ಬದುಕಿನ ಸವಾಲುಗಳು ಮತ್ತು ಸಂಘರ್ಷಗಳ ನಡುವೆ ಶ್ರದ್ಧೆ ಮತ್ತು ಭಕ್ತಿಗಳ ಹರಣವಾಗುತ್ತಿರುವುದು ವಾಸ್ತವ.

ಈ ಮೇಲೆ ಹೇಳಿದ ಎಲ್ಲಾ ಅಂಶಗಳು ಅಂಟಿಗೆ–ಪಂಟಿಗೆ ಅಳಿವಿನಂಚಿಗೆ ಕಾರಣಗಳಾದರು ವೈಯಕ್ತಿಕವಾಗಿ ಈ ಕಲೆಯನ್ನು ಉಳಿಸಿ ಬೆಳೆಸುವ ಜವಾಬ್ದಾರಿ ಪ್ರತಿಯೊಬ್ಬ ಕಲಾಕಾರನ ಜವಾಬ್ದಾರಿಯಾಗಿದೆ. ಇಷ್ಟೇ ಅಲ್ಲದೇ ಸರ್ಕಾರ ಕೂಡ ಈ ಕಲೆಯನ್ನು ಉಳಿಸಿ ಬೆಳೆಸುವ ಜವಾಬ್ದಾರಿಯನ್ನು ಹೊರಬೇಕಾಗಿದೆ.

## ಪರಾಮರ್ಶನ ಗ್ರಂಥಗಳು


- **ಸಿದ್ಧಗಂಗಪ್ಪ (2008) :** ಜನಪದ ಹಬ್ಬಗಳು, ತುಮಕೂರು ಸಿದ್ಧಗಂಗಾ ಪ್ರಕಾಶನ, ಸಿದ್ಧಗಂಗಾಮಠ.
- **ಡಾ. ಅಂಗಡಿ ಎಸ್.ಎಸ್. (2008) :** ಜನಪದ ಸಾಹಿತ್ಯ ಭಾಷೆ, ಹೊಸಪೇಟೆ ವಿಕಾಸ ಪ್ರಕಾಶನ.
- **Annual Report of the University of Mysore (1973)** India: (N.P.).
- **Kumar S. (2013) :** Role of Traditional Folk Arts as Media of Mass Communication : A Study with Special Reference to Coastal Karnataka. Germany: Lap Lambert Academic Publishing GmbH KG.
- **Mukhopadhyay R. (1988) :** Folk Media and Communication in India :Trends and Perspectives. India: University of North Bengal.
- **Padhi S. (2019) :** Traditional Folk Media in India : A Special Reference to Rajasthan. India: University Book House (P) Limited.
- **Parmar S. (1975) :** Traditional Folk Media in India. India : Gekha Books.
- **South Indian Studies (1990) :** India: Geetha Book House.
- **Usha Rani N. (1996) :** Folk Media for Development : A Study of Karnataka's Traditional Media. India: Karnataka Book Publishers.


■■

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ವಚನ ಸಾಹಿತ್ಯದಲ್ಲಿ ಕೃಷಿ ಕುರಿತ ಚಿಂತನೆಗಳು

✍ **ಡಾ. ಸುನೀಲ್‌ಕುಮಾರ್ ಎಸ್.**, ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಶಾಲನಗರ, ಕೊಡಗು ಜಿಲ್ಲೆ–571234

ಅನ್ನವನ್ನು ಬೆಳೆಯುವ ಭೂಮಿತಾಯಿ ನಮ್ಮ ಜನಪದರಲ್ಲಿ ಮಹತ್ವದ ಸ್ಥಾನವನ್ನು ಪಡೆದಿದೆ. **ಬೆಳಗಾಗಿ ನಾನೆದ್ದುಯಾರ್ಯಾರ ನೆನೆಯಲಿ ಎಳ್ಳು ಜೀರಿಗೆ ಬೆಳೆಯೋಳ ಭೂಮ್ತಾಯ ಎದ್ದೊಂದು ಗಳಿಗೆ ನೆನೆದೇನ** ಎಂಬ ನೆನಕೆಯಿಂದಲೇ ರೈತರ ದಿನ ಶುರುವಾಗುತ್ತದೆ. ತ್ರಿಪದಿಯ ಕವಿ ಕೃಷಿಯಿಂದ ಬೆಳೆದ ಅನ್ನದ ಮಹಿಮೆಯನ್ನು ಇನ್ನಿಲ್ಲದಂತೆ ವರ್ಣಿಸಿದ್ದಾನೆ. **"ಅನ್ನದೇವರ ಮುಂದೆ ಇನ್ನು ದೇವರು ಉಂಟೆ ಅನ್ನವುಂಟಾದರುಣಲುಂಟು ಜಗಕೆಲ್ಲ ಅನ್ನವೇ ಪ್ರಾಣ ಸರ್ವಜ್ಞ"**

ಅನ್ನ (ಆಹಾರ) ಮಾತ್ರವಲ್ಲ ಅದನ್ನು ಬೆಳೆಯುವ ರೈತನೂ ಪರಬ್ರಹ್ಮ ಎಂದ ದೇಶ ನಮ್ಮದು. **'ಕೃಷಿತೋ ನಾಸ್ತಿ ದುರ್ಭಿಕ್ಷಂ'** ಕೃಷಿಯನ್ನು ನಂಬಿ ಶ್ರದ್ಧೆಯಿಂದ ವ್ಯವಸಾಯ ಮಾಡುವವರಿಗೆ ಎಂದಿಗೂ ಬರಗಾಲವಿಲ್ಲ ಎಂದು ಸುಭಾಷಿತ ಹೇಳುತ್ತದೆ. ಕನ್ನಡದ ಮಹಾಕವಿ ಕುಮಾರವ್ಯಾಸನು ತನ್ನ ಮಹಾಕಾವ್ಯವಾದ ಕರ್ಣಾಟ ಭಾರತಕಥಾ ಮಂಜರಿಯಲ್ಲಿ, ನಾರದ–ಯುಧಿಷ್ಠಿರ ಸಂವಾದ ಸಂದರ್ಭದಲ್ಲಿ – ಅಂದಿಗೂ ಇಂದಿಗೂ ಎಂದೆಂದಿಗೂ ಸಲ್ಲುವಂತಹ– ಒಂದು ಅರ್ಥಪೂರ್ಣ ಪದ್ಯವನ್ನು ಬರೆದಿದ್ದಾನೆ.

**"ಕೃಷಿ ಮೊದಲು ಸರ್ವಕ್ಕೆ; ಕೃಷಿಯಿಂ**
**ಪಸರಿಸುವುದಾಕೃಷಿಯನುದ್ಯೋ**
**ಗಿಸುವ ಜನವನು ಪಾಲಿಸುವುದಾಜನಪದದಜನದಿ**
**ವಸು ತೆರಳುವುದು; ವಸುವಿನಿಂ ಸಾ**
**ಧಿಸುವಡಾವುದಸಾಧ್ಯವದರಿಂ**
**ಕೃಷಿವಿಹೀನನ ದೇಶವದುದುರ್ದೇಶ ಕೇಳೆಂದ"**

***(ಕರ್ಣಾಟ ಭಾರತ ಕಥಾಮಂಜರಿ, ಸಭಾ ಪರ್ವ 1–64)***

ದೇಶದ ಸಂಪತ್ತು, ಸಮೃದ್ಧಿಯ ವಿಷಯವಾಗಿ – ಕೃಷಿಯು ಎಲ್ಲಕ್ಕಿಂತಲೂ ಮಿಗಿಲಾದುದು. ಅಂತಹ ಕೃಷಿಯಲ್ಲಿ ತೊಡಗಿರುವವರನ್ನು ಸರಿಯಾಗಿ ಪಾಲಿಸಬೇಕಾದುದು ಆ ದೇಶದ ಅರಸನ ಧರ್ಮ. ಕೃಷಿಕರ ಕುಂದುಕೊರತೆಗಳನ್ನು ತಿಳಿದು ಅವನ್ನು ನಿವಾರಿಸಲು ಏನಾದರೂ ತಕ್ಕ ವ್ಯವಸ್ಥೆ ಮಾಡಬೇಕಾದ ಕರ್ತವ್ಯ ಆ ದೇಶದ ಅರಸನ ಮೇಲಿರುತ್ತದೆ ಹಾಗಲ್ಲವಾದಲ್ಲಿ, ಕೃಷಿಕರು ಆ ದೇಶವನ್ನು ತೊರೆಯಬಹುದು (ಅಥವಾ ಕೃಷಿಯನ್ನೂ ತೊರೆಯಬಹುದು). ಹಾಗೆ, ದೇಶದ ಸುಭಿಕ್ಷೆಗೆ ಮೂಲ ಕಾರಣವಾದ ಕೃಷಿಯನ್ನೇ ಜನರು ತೊರೆದರೆಂದರೆ ಕಾಲಕ್ರಮೇಣ ಆ ದೇಶದ ಐಶ್ವರ್ಯವೂ ಮುರುಟಿ ಹೋಗುತ್ತದೆ.

ಅಲ್ಲ, ದೇಶ ಸಂಪದ್ಭರಿತವಾಗಿದ್ದರೆ ಅಸಾಧ್ಯವಾದದ್ದು ಏನಾದರೂ ಇದ್ದೀತೇ ? ಹಾಗಾಗದೆ ಹೋದಲ್ಲಿ (ದೇಶವು ಕೃಷಿಹೀನವಾದರೆ) ಆ ದೇಶಕ್ಕೆ ದುರ್ಗತಿ ಬರುವುದು ಖಚಿತ. ಹಾಗಾಗಿ, ಕೃಷಿಹೀನವಾದ ದೇಶವು ದುರ್ದೇಶವಲ್ಲದೆ ಮತ್ತೇನು.

ರೈತರ ಬದುಕು ಸಂಕಷ್ಟದಲ್ಲಿದೆ ಎನ್ನುವುದು ನಮ್ಮ ದೇಶದ ಮಟ್ಟಿಗೆ ಹಳೆಯ ಮಾತು. ಇದನ್ನೇ ನೆಪವಾಗಿಸಿಕೊಂಡು ಸೃಜನಶೀಲ ಕಲೆಗಳಲ್ಲಿ ಅನ್ನದಾತನ ಬದುಕು ಹೇಗೆ ಬಿಂಬಿತವಾಗಿದೆ, ಬೇಸಾಯ ಮತ್ತು ರೈತರನ್ನು ಕನ್ನಡ ಪರಂಪರೆ ಕಂಡ ಬಗೆಯ ಬಗ್ಗೆ ಶೋಧಿಸುವ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಲಾಗಿದೆ.

**ತನುವತೋಂಟವ ಮಾಡಿ, ಮನವ ಗುದ್ದಲಿ ಮಾಡಿ**
**ಅಗೆದು ಕಳೆದೆನಯ್ಯಾ ಭ್ರಾಂತಿನ ಬೇರ.**
**ಒಡೆದು ಸಂಸಾರದ ಹೆಂಟೆಯ ಬಗಿದು ಬಿತ್ತಿದೆನಯ್ಯಾ ಬ್ರಹ್ಮಬೀಜವ**
**ಅಖಂಡಮಂಡಲವೆಂಬ ಬಾವಿ, ಪವನವೆ ರಾಟಾಳ**
**ಸುಷುಮ್ನ ನಾಳದಿಂದ ಉದಕವತಿದ್ದಿ**
**ಬಸವಗಳೈವರು ಹಸಗೆಡಿಸಿಹವೆಂದು ಸಮತೆ ಸೈರಣೆ ಎಂಬ ಬೇಲಿಯನಿಕ್ಕಿ**
**ಆವಾಗಳೂ ಈ ತೋಂಟದಲ್ಲಿಜಾಗರವಿದ್ದು**
**ಸಸಿಯ ಸಲುಹಿದೆನುಕಾಣಾಗುಹೇಶ್ವರಾ.**

*– ಅಲ್ಲಮ ಪ್ರಭು*

ಕೃಷಿ ಪರಿಸರದ ಪಾರಿಭಾಷಿಕ ಪದಗಳ ಮುಖಾಂತರ ತಮ್ಮ ವಿಚಾರ ಧಾರೆಯನ್ನು ಪರಿಣಾಮಕಾರಿಯಾಗಿ ವ್ಯಕ್ತಪಡಿಸಲು ನಮ್ಮ ಅನೇಕ ವಚನಕಾರರು ಪ್ರಯತ್ನಿಸಿ ಯಶ ಕಂಡಿದ್ದಾರೆ. ಈ ಪೈಕಿ ಅಲ್ಲಮ ಪ್ರಭುಗಳದು ವಿಶಿಷ್ಟ ಧ್ವನಿ. ಕೃಷಿ ಪರಿಸರ ವ್ಯವಸ್ಥೆ, ಮನುಷ್ಯ ಜೀವನ, ಶರೀರ–ಆತ್ಮವನ್ನು ಒಂದು ನೂಲಿನಲ್ಲಿ ಸಮೀಕರಿಸಿದ, ಮೇಲೆ ಪ್ರಸ್ತಾಪಿಸಿದ ಅವರ ವಚನ ಬಹಳ ಮಾರ್ಮಿಕವಾಗಿದೆ. ಅಲ್ಲಮಪ್ರಭು, ಗೊಗ್ಗಯ್ಯನೆಂಬ ಶರಣನಿಗೆ ಜೀವನ ಸಾಕ್ಷಾತ್ಕಾರದ ಮಾರ್ಗದರ್ಶನ ಮಾಡುತ್ತ ಹೇಳಿದ ವಚನ ಇದಾಗಿದೆ. ದೇಹವೆಂಬ ತೋಟದಲ್ಲಿ ಅಧ್ಯಾತ್ಮದ ಸಸಿಯನ್ನು ನೆಟ್ಟು ಅನುಭಾವದ ಪೈರುತೆಗೆಯುವ ಪರಿಯನ್ನು ಹೇಳುವ ವಚನ ಮನೋಜ್ಞವಾಗಿದೆ.

ಸಾಧಕ ವ್ಯಕ್ತಿಗಳನ್ನು ಅಂತರಂಗದ ಸಾಧನೆಗೆ ತೊಡಗಿಸುವ ಅಲ್ಲಮನ ರೀತಿ ಅಮೋಘವಾಗಿದೆ. ಕೃಷಿ ಯಾವುದೇ ಪ್ರಮಾಣದಲ್ಲಿರಲಿ ಅದು ನಿಸರ್ಗದ ಪ್ರತಿಕೃತಿಯಾಗಿರುತ್ತದೆ ಎಂಬುದನ್ನು ಈ ವಚನವು ಯಶಸ್ವಿಯಾಗಿ ಹೇಳುತ್ತದೆ.

**"ಅಂಗವೆ ಭೂಮಿಯಾಗಿ, ಲಿಂಗವೆ ಬೆಳೆಯಾಗಿ,**
**ವಿಶ್ವಾಸವೆಂಬ ಬತ್ತಬಲಿದುಉಂಡು**
**ಸುಖಿಯಾಗಿರಬೇಕೆಂದಕಾಮಭೀಮ**
**ಜೀವಧನದೊಡೆಯ"**

*– ಒಕ್ಕಲಿಗ ಮುದ್ದಣ್ಣ.*

ಗಾತ್ರದಲ್ಲಿ ಚಿಕ್ಕದಾದರೂ ತುಂಬಾ ಸುಂದರವಾದ ವಚನ ಇದಾಗಿದೆ. ಮೇಲ್ನೋಟಕ್ಕೆ ಸರಳವಾಗಿ ಕಾಣುವ ಇಲ್ಲಿನ ಸಾಲುಗಳು ಆಳವಾದ ಅರ್ಥವನ್ನು ಹೊಮ್ಮಿಸುವಂತಿವೆ.

ಕೃಷಿ ಪರಿಸರದ ಪರಿಭಾಷೆಯಲ್ಲಿ ಜೀವನ ಮೌಲ್ಯಗಳನ್ನು, ತತ್ವ ರಸಾನುಭವಗಳನ್ನು, ಆಧ್ಯಾತ್ಮ ಸಾಧನೆಗಳನ್ನು, ಆತ್ಮಸಾಕ್ಷಾತ್ಕಾರವನ್ನು ನಿರ್ದೇಶಿಸುವುದು ಮುದ್ದಣ್ಣನ ಕಾವ್ಯಶೈಲಿ. ಸ್ವತಃ ಕೃಷಿಕನಾದ ಒಕ್ಕಲಿಗ ಮುದ್ದಣ್ಣ 'ಅಂಗವೆ ಭೂಮಿಯಾಗಿ, ಲಿಂಗವೆ ಬೆಳೆಯಾಗಿ' ಎಂದು ಹೇಳುವಲ್ಲಿ ಅಪಾರವಾದ ಶರಣಪ್ರಜ್ಞೆ ಎದ್ದು ಕಾಣುತಿದೆ. ಅಂಗ, ಭೂಮಿ, ಲಿಂಗ, ಬೆಳೆ ಈ ನಾಲ್ಕು ಸಂಗತಿಗಳು ಐಹಿಕ ಲೋಕದ ವಸ್ತುಗಳು. ಇವೆಲ್ಲಕ್ಕೂ ತನ್ನದೇ ಆದ ಉದ್ದೇಶಗಳಿವೆ. ಅದರೊಂದಿಗೆ ಪರಿಣಾಮಗಳಿವೆ. ಪ್ರಾಪಂಚಿಕ ಬದುಕಿನಲ್ಲಿ ಅವಿರುವಂತೆಯೇ ನೋಡಿದರೆ ಅವು ಕೇವಲ ಮ್ಯಾಟರ್, ದ್ರವ್ಯ ಮಾತ್ರ. ಆದರೆ ಇಲ್ಲಿ ಅಂಗ–ಭೂಮಿ; ಲಿಂಗ–ಬೆಳೆ ಶಬ್ದಗಳು ನುಡಿಗಟ್ಟುಗಳಾಗಿ ಬಂದಾಗ ಪ್ರಾಪ್ತವಾಗುವ ಅರ್ಥ ಸಿರಿವಂತಿಕೆ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಶರಣರ ಭಾಷೆಯಲ್ಲಿಯೇ ಹೇಳುವುದಾದರೆ– ಮಹಾಘನ. ವಚನಕಾರರು ಹೇಳುವ ಲಿಂಗಾಂಗ ಸಾಮರಸ್ಯದ ಧ್ವನಿ ಇಲ್ಲಿ 'ಶಿಲೆಯೊಳಗಣ ಪಾವಕನಂತೆ, ಉದಕದೊಳಗಣ ಪ್ರತಿಬಿಂಬದಂತೆ, ಬೀಜದೊಳಗಣ ವೃಕ್ಷದಂತೆ, ಶಬ್ದದೊಳಗಣ ನಿಶ್ಶಬ್ದದಂತೆ ಅಳವಡಲ್ಪಟ್ಟಿದೆ, ಪಸರಿಸಿದೆ, ಹೊಳೆಯುತಿದೆ, ಬೆಳಗುತಿದೆ. ವಸ್ತು ವಸ್ತುಗಳ ನಡುವಿರುವ ಕಾರ್ಯಕಾರಣ ಸಂಬಂಧವನ್ನು ಇದು ಧ್ವನಿಸುತ್ತದೆ. ಇಲ್ಲಿ ಐನ್‌ಸ್ಟೀನ್ ಸಾಪೇಕ್ಷ ಸಿದ್ಧಾಂತದ ಛಾಯೆ ಇದೆಯೇನೋ ಅನ್ನಿಸುತ್ತದೆ.

ಇಳಿಹಾಳ ಬೊಮ್ಮಯ್ಯನೂ ಕೃಷಿ ಕಾಯಕದ ವಚನಕಾರನಾಗಿದ್ದು ಆತ ವಚನ ರಚಿಸಿದ ಬಗ್ಗೆ ದಾಖಲೆಗಳಿಲ್ಲ. ಬಿತ್ತುವ ಬೀಜವನ್ನು ಜಂಗಮರಿಗೆ ಹಂಚಿದನೆಂಬ ಕಥೆಯಿದೆ. ಆದರೆ ನಗೆಯ ಮಾರಿತಂದೆ, ನಗಿಸುವದನ್ನೇ ತನ್ನ ಕಾಯಕ ಮಾಡಿಕೊಂಡ ಶರಣನಾಗಿದ್ದು ಅಪ್ಪಟ ಕೃಷಿ ವಸ್ತುವನ್ನಿಟ್ಟುಕೊಂಡು ಹೀಗೆ ಹೇಳುತ್ತಾನೆ,

**"ಬೀಜವೊಡೆದು ಮೊಳೆಯಂಕುರಿಸುವಾಗ ಎಲೆ ಎಲ್ಲಿದ್ದಿತ್ತು?**
**ಎಲೆ ಸುಳಿಬಿಟ್ಟು ಕವಲುವಾಗ ಶಾಖೆಯಲ್ಲಿದ್ದಿತ್ತು?**
**ಶಾಖೆ ಒಡೆದು ಕುಸುಮ ತೋರುವಾಗ ಫಲವೆಲ್ಲಿದ್ದಿತ್ತು?**
**ಫಲ ಬಲಿದುರಸತುಂಬುವಾಗ ಸವಿಯಲ್ಲಿದ್ದಿತ್ತು?**
**ಸವಿಯ ಸವಿದು ಪರಿಣತೆಗೊಂಬಾಗಅದೇತರೊದಗು?**
**ಇಷ್ಟರಿ ನೀಲೆಯನರಿ, ಆತುರವೇರಿ ಮಾರೇಶ್ವರಾ."**

**– *ಇಳಿಹಾಳ ಬೊಮ್ಮಯ್ಯ.***

ಪ್ರಶ್ನೆಗಳ ಸರಣಿಯನ್ನೇ ಹೊತ್ತ ಈ ವಚನ ಸಸ್ಯ ಜೀವನ ಚಕ್ರದ ಪ್ರಾತ್ಯಕ್ಷಿಕೆಯಂತಿದೆ. ಇದನ್ನು ಪ್ರಭುದೇವ 'ಬೀಜದೊಳಗಿನ ವೃಕ್ಷದಂತೆ' ಎಂದು ಒಂದೇ ಮಾತಿನಲ್ಲಿ ಹೇಳಿಬಿಡುತ್ತಾನೆ.

ಒಕ್ಕಲುತನ ಮತ್ತು ಗೋ ಸಾಕಾಣಿಕೆ ಕಾಯಕದ' ಕೀಲಾರದ ಭೀಮಣ್ಣ' ತನ್ನ ಮತ್ತೊಂದು ವಚನದ ಮೂಲಕ ಹೇಳುತ್ತಾನೆ,

**"ತೊಗಟೆಯೊಳಗಣ ಬೀಜ**
**ಬೀಜದೊಳಗಣ ಅಂಕುರ**
**ಸಾರಸಸಿ ರೂಪದೋರದೆ ವೇಧಿಸಿಕೊಂಡಿಪ್ಪಂತೆ**
**ಇಂತೀ ಕ್ರಿಯೊಳಗಣ ಭಾವ**
**ಭಾವದೊಳಗಣ ಜ್ಞಾನ**
**ಜ್ಞಾನದೊಳಗಣ ಅರಿವು**
**ಅರಿವಿನೊಳಗಣ ನಿಜದ ಬೆಳಗಿನ**
**ಮಹಾಕಲೆಯನೊಳಕೊಂಡ ಘನಮಹಿಮಂಗೆ**
**ಹಿಡಿದಹೆನೆಂಬ ಭಾವದ ಭ್ರಮೆಯಿಲ್ಲ;**
**ಬಿಟ್ಟಿಹೆನೆಂಬ ಕಟ್ಟಿನ ಸೂತಕವಿಲ್ಲ.**
**ಕಾಲಕರ್ಮವಿರಹಿತತ್ರಿ ಪುರಾಂತಕ ಲಿಂಗವೆಂಬಲ್ಲಿ ತಾನು ತಾನಾದ ಶರಣ."**

**– *ಕೀಲಾರದ ಭೀಮಣ್ಣ***

ಸಿಪ್ಪೆಯೊಳಗೆ ಬೀಜವಿದೆ, ಬೀಜದೊಳಗೆ ಅಂಕುರವಿದೆ. ಅದನ್ನು ಪೋಷಿಸಿ ಬೆಳೆಸುವ ಸಾರಸಸಿ ಕೂಡ ಇದೆ. ಆದರೆ ಮತ್ತೊಂದು ಸಸಿಯಾಗಿ ಬೆಳೆಯುವ ಚೈತನ್ಯ ಹೊರಗಣ್ಣಿಗೆ ಕಾಣುವುದಿಲ್ಲ. ಸೂಕ್ತ ವಾತಾವರಣ ದೊರೆತಾಗ, ಬೀಜದೊಳಗಿನ ಮೂರು ಭಾಗಗಳು ಕ್ರಿಯೆಯೊಳಗಾಗುತ್ತವೆ. ಅವು ಒಂದಕ್ಕೊಂದು ಪೂರಕವಾಗಿ ವರ್ತಿಸಿದಾಗ ಸ್ವಾವಲಂಬಿ, ಪ್ರತ್ಯೇಕ ಸಸ್ಯ ಹುಟ್ಟಿ ಬರುತ್ತದೆ. **"ನೀ ಕೊಟ್ಟ ಭೂಮಿಗೆ ಮುಂದೆಕರಲು, ಹಿಂದೆ ಇಗ್ಗರಲು, ಅಲ್ಲಿಂದ ಆಚೆ ಮಧ್ಯಭೂಮಿ. ಮೂರು ನೆಲದ ಭೂಮಿಯ ಆರೈದು ಬೆಳೆದಿಹನೆಂದಡೆ, ಇದಾರ ವಶವೂ ಅಲ್ಲ, ಕಾಮಭೀಮ ಜೀವಧನದೊಡೆಯ ನೀನೆ ಬಲ್ಲೆ." – *ಒಕ್ಕಲಿಗ ಮುದ್ದಣ್ಣ.*** ಬೆಳೆಯನ್ನು ಯಶಸ್ವಿಯಾಗಿ ಬೆಳೆದು ಫಸಲು ಪಡೆಯಲು ನೆಲ ಮುಖ್ಯವಾದ ಆಧಾರ. ಅದೇರೀತಿ ಭಕ್ತಿಯ ಪೈರನ್ನು ಬೆಳೆಯಲು ಮನುಷ್ಯನ ಮನಸ್ಸು ಮುಖ್ಯ. ದೇವರುಕೊಟ್ಟ ಭೂಮಿ – ಪ್ರಕೃತಿ ದಯಪಾಲಿಸಿದ ಸಂಪನ್ಮೂಲ– ಕರಲಾಗಿ ಬಿಟ್ಟಿದೆ. ಕರಲಾದ ಎರೆಭೂಮಿ ಮೇಲೆ, ಅದೂ ಬೇಸಿಗೆಯಲ್ಲಿ ಬರಿಗಾಲಿನಿಂದ ನಡೆದವರಿಗೆ ಅದರ ಅನುಭವ ಸರಿಯಾಗಿಯೇ ಆಗಿರುತ್ತದೆ. ಅಂಥ ನೆಲವು, ಮುಳ್ಳಿನ ಮೇಲೆ ಓಡಾಡಿದ ಭಾವನೆಯನ್ನು ಮೂಡಿಸುತ್ತದೆ. ಮುದ್ದಣ್ಣ ಹೇಳುತ್ತಾನೆ, ತನಕೆದಕ್ಕಿರುವ ಭೂಮಿ ಇನ್ನೂ ಮುಂದೆ ಹೋಗಿ ನೋಡಿದರೆ ಅದು ಅತೀಕರಲು. ಮತ್ತಿನ್ನುಳಿದ ಭೂಮಿ ಮಧ್ಯಮತರದ್ದು. ಇದರಲ್ಲಿ ಪೈರು ಬೆಳೆಯುವ ಬಗೆಯಾದರೂ ಹೇಗೆ ? ಈ ಮೂರು ಪ್ರಕಾರದ ಭೂಮಿಯನ್ನು ಪರೀಕ್ಷಿಸಿ ಬೆಳೆಯೋಣವೆಂದರೆ ಅದೂ ಸಾಧ್ಯವಾಗದು. ಪಶುಪತಿಯಾದ ದೇವನಿಗೆ ಮಾತ್ರ ಇದರ ಮರ್ಮಗೊತ್ತಿದೆ. ಇಲ್ಲಿ ಮುದ್ದಣ್ಣ ತಾನು ಉಳುವ ಭೂಮಿಯಗುಣವನ್ನು ಮುಂದೆ ಮಾಡಿ ಮನಸ್ಸೆಂಬ ಭೂಮಿಯಲ್ಲಿ ತಾನು ಮಾಡಬೇಕಾದ ಅಧ್ಯಾತ್ಮ ಕೃಷಿಯ ಕುರಿತಾಗಿ ಹೇಳಿದ್ದಾನೆ. ಮನುಷ್ಯ ಅಳವಡಿಸಿಕೊಳ್ಳಬೇಕಾದ ಅಂತರಂಗದ ಬೇಸಾಯದ ಬಗ್ಗೆ ಸೂಚನೆ ನೀಡಿದ್ದಾನೆ.

**"ಒಮ್ಮೆ ನೆಲದಲ್ಲಿ ಬಿತ್ತಿದ ಬಿತ್ತುವಕಿತ್ತಿಕಿತ್ತಿ ಮತ್ತೆ ಬಿತ್ತುತ್ತ ಹೋದಡೆ,**
**ಆ ಬಿತ್ತು ಮೊಳೆತು ಕಳೆಯೇರಿ ಬೆಳೆದು ಬೆಳಸನೀವ**
**ಪರಿಯಿನ್ನೆಂತೊ ಮರಳು ಮಾನವಾ ?**
**ಗುರುವಿತ್ತ ಲಿಂಗವ ತೊರೆತೊರೆದು ಮರಳಿ ಮರಳಿ ಧರಸಿದಡೆ**
**ಆ ಇಷ್ಟಲಿಂಗವುಅನಿಷ್ಟವ ಕಳೆದು ಇಷ್ಟಾರ್ಥವನೀವ ಪರಿಯಿನ್ನೆಂತೊ?**
**ಇದುಕಾರಣಕೂಡಲ ಚೆನ್ನಸಂಗಯ್ಯನಲ್ಲಿ ಮುಕ್ತಿಯನರಸುವಡೆ**
**ಅಂಗನಲ್ಲಿ ಹೆರೆಹಿಂಗದೆ ಲಿಂಗವ ಧರಿಸಬೇಕು."**

**– *ಚೆನ್ನಬಸವಣ್ಣ***

ಮನುಷ್ಯ ಲಿಂಗದಲ್ಲಿ ಇರಿಸಬೇಕಾದ ಅಚಲ ಶ್ರದ್ಧೆ ಎಷ್ಟು ಮುಖ್ಯವೆಂಬುದು ಚೆನ್ನಬಸವಣ್ಣನಿಗಿಂತಲೂ ಹೆಚ್ಚು ಬಲಯುತವಾಗಿ ಬೇರೆ ಯಾರು ಹೇಳಬಲ್ಲರು ? ಒಮ್ಮೆ ನೆಲದಲ್ಲಿ ಊರಿದ ಬೀಜವಿರಬಹುದು, ಸಸಿಯಿರಬಹುದು ಅಥವಾ ಸ್ವತಂತ್ರ ಸಸ್ಯವಾಗಿ ಬೆಳೆಯಬಹುದಾದ ಯಾವುದೇ ಭಾಗವಿರಬಹುದು, ಬಹಳ ಮುಖ್ಯವಾಗಿ ಅದಕ್ಕೊಂದು ಸ್ಥಿರತೆ ಬೇಕು. ಹದವಾದ ಮಣ್ಣಿನ ಸಂಪರ್ಕಕ್ಕೆ ಬಂದು, ನಿರಂತರ ಜೈವಿಕ ಚಟುವಟಿಕೆಗಳು ಕೋಶಕೋಶದಲ್ಲಿ ನಡೆಯಬೇಕು. ತಾತ್ಕಾಲಿಕವಾಗಿ ನಿಶ್ಚಲಗೊಂಡ ಜೀವ, ಮತ್ತೊಂದು ಜೀವನ ಚಕ್ರದಲ್ಲಿ ತಿರುಗುವ ಶಕ್ತಿ ಸಾಮರ್ಥ್ಯವನ್ನು ಪಡೆಯಬೇಕು. ಜೀವ ಸ್ಫುರಿಸಲು ಸಜ್ಜುಗೊಂಡ ಸೂಕ್ತ ವಾತಾವರಣದಲ್ಲಿ 'ಬಿತ್ತುವ' ದೃಢತೆಯಿಂದ ಒಂದಾಗಬೇಕು. ಕ್ರಿಯಾಶೀಲತೆ ಜೊತೆಗೆ ಕ್ರಿಯಾ ಸ್ಥಿರತೆಯೂ ಮುಖ್ಯವಾಗುವ ವಿಶಿಷ್ಟ ಸಂದರ್ಭವಿದು. ಅದಕ್ಕೆ ಹೊರತಾಗಿ ಅದೇ ಬೀಜವನ್ನು ಕಿತ್ತು ಕಿತ್ತು ಎಲ್ಲೆಂದರಲ್ಲಿ ನೆಡುತ್ತ ಹೋದರೆ ಅದು ಬೇರು ಬಿಡುವದಿಲ್ಲ. ಸಸಿಯಾಗಿ ಬೆಳೆಯುವ ಯಾವ ಉದ್ದೇಶಕ್ಕಾಗಿ ಪ್ರಕೃತಿ ಬೀಜಕ್ಕೆ ಪಾತ್ರ ನೀಡಿದೆಯೋ ಆ ಉದ್ದೇಶ ಈಡೇರಿಕೆಯಾಗದು.

**"ಪೈರಿಗೆ ನೀರು ಬೇಕೆಂಬಲ್ಲಿ ಉಚಿತವನರಿದು ಬಿಡಬೇಕು.**
**ಕ್ರಿಯೆಗೆಅರಿವು ಬೇಕೆಂಬಲ್ಲಿ ಉಭಯನರಿದುಘಟಿಸಬೇಕು.**
**ಏರಿ ಹಿಡಿವನ್ನಕ್ಕ ನೀರ ಹಿಡಿದಡೆ ಸುಖವಲ್ಲದೆ ಮೀರಿದರುಂಟೆ?**
**ಕ್ರಿಯೆ ಬಿಡಲಿಲ್ಲ, ಅರಿವ ಮರೆಯಲಿಲ್ಲ.**
**ಬೆಳೆಯ ಕೊಯಿದ ಮತ್ತೆ ಹೊಲಕ್ಕೆ ಕಾವಲುಂಟೆ ?**
**ಫಲವ ಹೊತ್ತ ಪೈರಿನಂತೆ, ಪೈರಿನೊಳಕೊಂಡ ಫಲದಂತೆ**
**ಅರಿವುಆಚರಣೆಯಲ್ಲ ನಿಂದು,**
**ಆಚರಣೆಅರಿವಿನಲ್ಲಿ ಲೇಪನಾದ ಮತ್ತೆಕಾಮಭೀಮ**
**ಜೀವಧನನೊಡೆಯನೆಂಬುದ ಭಾವಿಸಲಿಲ್ಲ."**

**– ಒಕ್ಕಲಿಗ ಮುದ್ದಣ್ಣ**

ಈ ವಚನವು ಅರಿವು ಆಚಾರಗಳ ಅಂದರೆ ಜ್ಞಾನ ಮತ್ತು ಕ್ರಿಯೆಗಳ ಹೊಂದಾಣಿಕೆ ಕುರಿತು ವಿಶ್ಲೇಷಿಸುತ್ತದೆ. ಜ್ಞಾನವು ಕ್ರಿಯೆಯಲ್ಲಿ ಮೂಡಿಬಂದಾಗ ಮಾತ್ರ ಸಾರ್ಥಕ ಎಂಬ ಅಭಿಪ್ರಾಯ ಇಲ್ಲಿದೆ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಬೆಳೆದ ಪೈರಿಗೆ ನೀರು ಬೇಕಾದಾಗ ಉಚಿತವರಿತು ಸರಿಯಾದ ಪ್ರಮಾಣದಲ್ಲಿ ಬಿಡಬೇಕು. ಅದೇ ರೀತಿ ಕ್ರಿಯೆಗೆ ಜ್ಞಾನವು ಬೇಕೆನ್ನುವಾಗ ಎರಡನ್ನೂ ಅರಿತು ಆಚರಿಸಬೇಕು. ಕೆರೆ, ಕಟ್ಟೆ, ಕುಂಟೆ, ಬಾವಿ, ಕಾಲುವೆ ಮುಂತಾದ ನೀರಿನ ಮೂಲಗಳಲ್ಲಿ ಸಾಮರ್ಥ್ಯಕ್ಕೆ ತಕ್ಕಷ್ಟು ನೀರು ಸಂಗ್ರಹಿಸಬೇಕಾಗುತ್ತದೆ. ಅಷ್ಟಿದ್ದರೆ ಮಾತ್ರ ಎಲ್ಲವೂ ಸುಗಮವಾಗಿ ಸಾಗುತ್ತದೆ. ಇಲ್ಲದಿದ್ದರೆ ಅನಾಹುತ ತಪ್ಪಿದ್ದಲ್ಲ. ಭಕ್ತಿ ಸಾಧಕನಾದವನು ಕ್ರಿಯೆಯನ್ನು ಬಿಡದೆ, ಜ್ಞಾನವನ್ನು ಮರೆಯದೆ ಇರಬೇಕು. ಹೊಲದಲ್ಲಿನ ಬೆಳೆಯನ್ನು ಕೊಯ್ದು ಉತ್ಪನ್ನ ಸಾಗಿಸಿದ ಮೇಲೆ ಕಾವಲೇಕೆ ಬೇಕು ? ಬೀಜದಿಂದ ಮೊಳೆತು ಋತುಮಾನ ಪರ್ಯಂತ ಹುಲುಸಾಗಿ ಬೆಳೆದ ಪೈರು ಮಾಗುತ್ತಿದೆ. ಪೈರು ಫಲವನ್ನು ಹೊತ್ತು ನಿಂತಂತೆ ಜ್ಞಾನವು ಆಚರಣೆಯಲ್ಲಿ ಅರಿವನ್ನು ಪಡೆದುಕೊಂಡು ನಿಂತಿದೆ. ಜ್ಞಾನವು ಆಚರಣೆಯಲ್ಲಿ ನಿಂತು, ಆಚರಣೆಯು ಅರಿವಿನಲ್ಲಿ ಒಂದಾಗುವುದೇ ಪರಮಾತ್ಮ.

ಹುಟ್ಟು ಕೃಷಿಕನಾದ ಮುದ್ದಣ್ಣ 'ಪೈರಿಗೆ ನೀರು ಬೇಕೆಂಬಲ್ಲಿ ಉಚಿತವನರಿದು ಬಿಡಬೇಕು' ಎಂದು ಹೇಳುತ್ತಾನೆ. ಪ್ರತಿ ಸಸ್ಯದ ಜೀವನ ಚಕ್ರದಲ್ಲಿ ಕೆಲವು ಸಂದಿಗ್ಧ ಹಂತಗಳು ಅಂತಿರುತ್ತವೆ. ಉದಾಹರಣೆಗೆ ಬೇರು ಹಬ್ಬುವ ಹಂತ, ಕವಲೊಡೆಯುವ ಹಂತ, ಮೊಗ್ಗು, ಹೂ ಬಿಡುವ ಹಂತ, ಕಾಳು ಕಟ್ಟುವ ಹಂತ, ಇತ್ಯಾದಿ. ಬೆಳವಣಿಗೆಯ ಉಳಿದ ಅವಧಿಯಲ್ಲಿ ಏನಾದರಾಗಲಿ ಇಂಥ ಸಂದಿಗ್ಧ ಹಂತಗಳಲ್ಲಿ ತೇವಾಂಶದ ಕೊರತೆಯಾಗಬಾರದು ಎಂದು ಕೃಷಿ ವಿಜ್ಞಾನ ಹೇಳುತ್ತದೆ. ಹಾಗೇನಾದರೂ ಆದಲ್ಲಿ ಇಳುವರಿ ಗಣನೀಯ ಪ್ರಮಾಣದಲ್ಲಿ ನಷ್ಟವಾಗುವುದು ಖಾತ್ರಿ. ಇದರ ಸಂಪೂರ್ಣ ಅರಿವು ಮುದ್ದಣ್ಣನಿಗೆ ಇದ್ದಿರಬೇಕು. ಹಾಗಾಗಿ ಬೆಳೆಗೆ ನೀರುಣಿಸುವ ನೀರಾವರಿಯ ರೂಪಕವನ್ನಿಟ್ಟುಕೊಂಡು ಅರಿವು, ಆಚಾರದಂತಹ ಗಹನವಾದ ಜೀವನ ವಿಧಾನದ ಬಗ್ಗೆ ಹೇಳಲು ಯತ್ನಿಸುತ್ತಾನೆ. ಪೈರಿಗೆ ನೀರು ಬೇಕೆಂಬುದು ಎಷ್ಟು ಸತ್ಯವೋ, ಅದು ಹೆಚ್ಚಾಗಬಾರದೆಂಬುದೂ ಅಷ್ಟೇ ಸತ್ಯ. ಆದ ಕಾರಣ ಹೊಲದೊಳಗಿನ ಬೆಳೆಗೆ ಹದವರಿತು ನೀರು ಹರಿಸಬೇಕಾಗುತ್ತದೆ. ನೀರಿನ ನ್ಯಾಯಯುತ ಬಳಕೆಯೂ ಅಷ್ಟೇ ಮುಖ್ಯವಾಗಿದೆ. ಏಕೆಂದರೆ ಅದೊಂದು ನಿಸರ್ಗದ ಅತ್ಯಮೂಲ್ಯ ಸಂಪನ್ಮೂಲವಾಗಿದ್ದು ಸಂತುಲಿತ ರೀತಿಯಲ್ಲಿ ಉಪಯೋಗ ಪಡೆಯುವುದು ವಿವೇಕ. ಇದನ್ನೇ 'ನೀರೆಚ್ಚರ' ಎಂದು ಇತ್ತೀಚಿಗೆ ಬಹಳ ಚರ್ಚಿಸಲಾಗುತ್ತಿದೆ. ಪ್ರಕೃತಿ ದತ್ತವಾದ ಸಂಪನ್ಮೂಲಗಳನ್ನು ಬಳಸುವಾಗ ನಿಸರ್ಗ ವಿವೇಕವನ್ನು ಹೊಂದಿರಬೇಕೆಂದು ಹೇಳುವುದು ಈ ಚರ್ಚೆಯ ಉದ್ದೇಶ. ರೈತನಾದ ಒಕ್ಕಲಿಗ ಮುದ್ದಣ್ಣ, ಇವೆಲ್ಲದರ ಅರಿವಿರುವ ವಿಜ್ಞಾನಿಯೂ, ತತ್ವಜ್ಞಾನಿಯೂ, ಕವಿಯೂ, ಕಲಾವಿದನೂ ಆಗಿದ್ದಾನೆ. ಇವತ್ತಿನ ರೈತ ಕೇವಲ ಬೆಳೆ ಬೆಳೆದು ತೆಗೆಯುವ ಯಾಂತ್ರಿಕ ಉತ್ಪಾದಕನಾದರೆ ಸಾಲದು. ಅವನು ವಿಜ್ಞಾನಿ, ತತ್ವಜ್ಞಾನಿ, ಕಲಾವಿದನೂ ಆಗಿರಬೇಕಾಗುತ್ತದೆ. ಅವೆಲ್ಲ ಜೀವನದಿಂದ ವಿಮುಖವಾಗುವ ಗುಣ ವಿಶೇಷಗಳೇನಲ್ಲ. ಕೇವಲ ಒಣ ತತ್ವಜ್ಞಾನ, ಉಪದೇಶ ಮಾಡುವುದರಿಂದ ರೈತರಿಗೆ ಹೇಳಿಕೊಳ್ಳುವಂಥ ಲಾಭವೇನಾಗುವುದಿಲ್ಲ. ಇಂದಿನ ವಾಣಿಜ್ಯ ಪರಿಸರದಲ್ಲಿ ಯಶಸ್ವಿಯಾಗಿ ಬದುಕು ಸಾಗಿಸಬೇಕೆಂದರೆ ಆತ ಒಳ್ಳೆಯ ಮಾರಾಟಗಾರನೂ ಆಗಿರಬೇಕು. ಆದರೆ ಹೆಚ್ಚೆಚ್ಚು ಸುಸ್ಥಿರ ಮಾದರಿಯ ಜೀವನವನ್ನು ಆಯ್ದುಕೊಳ್ಳುವುದರಲ್ಲೇ ಅವನ ಜಾಣತನವಿದೆ.

ಆಯ್ದಕ್ಕಿ ಲಕ್ಕಮ್ಮ ಕೂಡ ಬಿತ್ತುವ ಬೆಳೆಯುವ ಸಂಗತಿಯನ್ನಿಟ್ಟುಕೊಂಡು ತನ್ನ ಆರಾಧ್ಯ ದೇವನ ಕೃಪೆಗಾಗಿ ಹೀಗೆ ಬೇಡುತ್ತಿದ್ದಾಳೆ.

**"ಆವ ಬೀಜ ಬೀಳುವಲ್ಲಿ ಮೊಳೆ ಮುಖ ಹಿಂಚು ಮುಂಚುಂಟೆ ?**
**ನೀ ಮರೆದಲ್ಲಿ ನಾನದಲ್ಲಿ ಬೇರೊಂದೂಡಲುಂಟೆ ?**
**ಮೂಲ ನಷ್ಟವಾದಲ್ಲಿ ಅಂಕುರ ನಿಂದಿತ್ತು.**
**ಕೂಟಕ್ಕೆ ಸತಿಪತಿ ಎಂಬ ನಾಮವಲ್ಲದೆ**
**ಅರಿವಿಂಗೆ ಬೇರೊಂದೊಡಲುಂಟೆ ?**
**ಬೇರೊಂದಡಿಯಿಡದಿರು ಮಾರಯ್ಯ**
**ಪ್ರಿಯ ಅಮರೇಶ್ವರ ಲಿಂಗವನರಿಯಬಲ್ಲಡೆ"**

ಹೀಗೆ ಜೀವ ಸ್ಫುರಿಸುವ ಪ್ರಕ್ರಿಯೆಯನ್ನು ವರ್ಣಿಸುವ ಸಾಲುಗಳಲ್ಲಿ ಕೃಷಿಯಲ್ಲಿ ಬಿತ್ತನೆ ಬೀಜಕ್ಕಿರುವ ಮಹತ್ವ ಎದ್ದು ಕಾಣುತ್ತಿದೆ. ಸಸಿಯಾಗಿ, ಗಿಡವಾಗಿ, ಮರವಾಗಿ, ಹೆಮ್ಮರವಾಗಿ, ಹೂಕಾಯಿ, ಹಣ್ಣಾಗುವುದು, ಅದರೊಳಗಿಂದ ಮತ್ತೆ ಬೀಜ ಹೊರಟು ಅಸಂಖ್ಯೆ ಸಸಿಗಳಾಗಿ ಹಸಿರು ಹಬ್ಬುತ್ತ ಹೋಗುವುದು. ಹೀಗೆ ನಿಸರ್ಗದಲ್ಲಿ ನಿರಂತರ ನಡೆಯುವ ಚಲನಶೀಲ ಬದುಕಿನ ಮೂಲವಿರುವುದು ಬೀಜದಲ್ಲಿ. ಅದನ್ನೇ ಅಲ್ಲಮಪ್ರಭು 'ಬೀಜದೊಳಗಣ ವೃಕ್ಷದಂತೆ ನಿಮ್ಮ ಶರಣ ಸಂಬಂಧ' ಎನ್ನುವಾಗ ಸಕಲ ಜೀವರಾಶಿಗಳಲ್ಲಿ ಅದೃಶ್ಯವಾಗಿ, ಅಲಿಪ್ತವಾಗಿ, ಅವ್ಯಕ್ತವಾಗಿ, ಅಭೇದ್ಯವಾಗಿ, ಪರಮಾತ್ಮ ನೆಲೆಸಿದ್ದಾನೆಂದು ಹೇಳುತ್ತಾನೆ.

**"ಭಕ್ತಿಯೆಂಬ ಪೃಥ್ವಿಯ ಮೇಲೆ ಗುರುವೆಂಬ ಬೀಜವಂಕುರಿಸಿ**
**ಲಿಂಗವೆಂಬ ಎಲೆಯ ಮೇಲೆ ವಿಚಾರವೆಂಬ ಹೂವಾಯಿತ್ತು**
**ಆಚಾರವೆಂಬ ಕಾಯಾಯಿತ್ತು ನಿಷ್ಪತ್ತಿಯೆಂಬ ಹಣ್ಣಾಯಿತ್ತು**
**ನಿಷ್ಪತ್ತಿಯೆಂಬ ಹಣ್ಣುತೊಟ್ಟು ಬಿಟ್ಟು ಕಳಚಿ ಬೀಳುವಲ್ಲಿ**
**ಕೂಡಲಸಂಗಮದೇವ ತನಗೆ ಬೇಕೆಂದು ಎತ್ತಿಕೊಂಡ".**

ಬಸವಣ್ಣ ತನ್ನನ್ನು ನಂಬಿ ಬಂದವರಿಗೆ ತೋರಿಸಿದ್ದು ಆಚರಣೆಗೆ ಸರಳವಾದ, ಜಡ ನಿಯಮಗಳಿಲ್ಲದ, ಅನಗತ್ಯ ಕಟ್ಟುಪಾಡುಗಳಿಂದ ಮುಕ್ತವಾದ ಭಕ್ತಿಮಾರ್ಗ, ಈ ಸರಳ ವಚನದಲ್ಲಿ ಆತ ಹೇಳುತ್ತಿರುವುದು ಕೂಡ ಭಕ್ತಿಯೇ ಮುಕ್ತಿಯಾಗುವ ಸರಳ ಸೂತ್ರ. ಇದೇ ಲಿಂಗಾಂಗ ಸಾಮರಸ್ಯದ ಶಾಶ್ವತ ಸೂತ್ರ. ಶರಣರು ಅಂತರಂಗದ ಕೃಷಿಗೆ ದಾರಿತೋರಿದ ಜಗದೋದ್ಧಾರಕರು. ಅಚ್ಚ ಕನ್ನಡದಲ್ಲಿ ಬೇಸಾಯ ನಡೆಸಿ ನಿಷ್ಪತ್ತಿಯೆಂಬ ಫಲ ಹಂಚಿದವರು.

ಪ್ರಶ್ನೆಯೇನೆಂದರೆ ಅಷ್ಟು ಪ್ರಮುಖವಾದ ಜೀವನ ವಿಧಾನವಾದಂತ ಕೃಷಿಗೆ ಸಂಬಂಧಿಸಿದ ವಚನಕಾರರು ಹೆಚ್ಚಿನ ಸಂಖ್ಯೆಯಲ್ಲಿ ಏಕಿರಲಿಲ್ಲ ? ಕಾಯಕದ ವ್ಯಾಪಕತೆ ದೃಷ್ಟಿಯಿಂದ ನೋಡಿದರೆ ಅನುಭವ ಮಂಟಪದಲ್ಲಿನ ಅರ್ಧದಷ್ಟು ಶರಣರು ಕೃಷಿಕರಾಗಿರಬೇಕಿತ್ತು. ಆದರೆ ಒಕ್ಕಲಿಗ ಮುದ್ದಣ್ಣ, ಏಲೇಶ ಕೇತಯ್ಯ, ಕೀಲಾರದ ಭೀಮಣ್ಣ, ಇಳಿಹಾಳ ಬೊಮ್ಮಯ್ಯ ಇಂಥ ಕೆಲವೇ ಕೆಲವು ವ್ಯವಸಾಯಗಾರರು ಸಿಗುತ್ತಾರೆ. ಸಿದ್ಧರಾಮೇಶ್ವರನೂ ಮೂಲತಃ ಕೃಷಿ ಕಾಯಕದವನಾಗಿದ್ದನೆಂದು ಕೆಲವು ಕಡೆ ಕೇಳಿ ಬರುತ್ತದೆ. ಉಳಿದಂತೆ ಗೋರಕ್ಷ, ತುರುಗಾಹಿ ರಾಮಣ್ಣ, ತೆಲುಗೇಶ ಮಸಣಯ್ಯ ಇವರುಗಳು ಗೋವುಗಳನ್ನು ಸಾಕಿಕೊಂಡು ಜೀವನ ನಿರ್ವಹಿಸುತ್ತಿದ್ದರು. ಹೊಡೆಹುಲ್ಲ ಬಂಕಣ್ಣ ಎಂಬುವನು ಮೇವಿನ ಹುಲ್ಲನ್ನು ಮಾರುತ್ತಿದ್ದನೆಂದು ತಿಳಿದುಬರುತ್ತದೆ. ಅವನ ಕುರಿತಾಗಿ ಗುರುರಾಜ ಚರಿತ್ರೆಯಲ್ಲಿ ಒಂದಷ್ಟು ಮಾಹಿತಿಯಿದೆ. ತನ್ನ ಸತ್ಯ ಶುದ್ಧಕಾಯಕದಿಂದ ನಿತ್ಯವೂ ಗುರುಲಿಂಗಜಂಗಮ ಸೇವೆ ಮಾಡುತ್ತಿದ್ದ ಬಂಕಣ್ಣ, ಬಸವಣ್ಣನ ನಿಕಟವರ್ತಿಯಾಗಿದ್ದ. ಕೃಷಿ ಲೋಕದ ಸಂಪೂರ್ಣ ಅರಿವಿದ್ದ ಆತನ ಹಲವು ವಚನಗಳಲ್ಲಿ ಆ ಸಂಗತಿಗಳು ಸಂಕೇತಗೊಂಡಿವೆ.

**"ಧರೆಯ ಮೇಲೆ ಬಿದ್ದ ಬೀಜ,**
**ಧರೆಯಲ್ಲಿಯೆ ಅಳಿದು, ಆಕಾಶದಲ್ಲಿ ಫಲವಾಯಿತ್ತು.**
**ಆ ಫಲವ ಬಯಲ ಕಣದಲ್ಲಿ ಒಕ್ಕಿ, ಮನದ ಹಗಹದಲ್ಲಿತುಂಬಿ,**
**ಬಾಯ ಹಗಹದಲ್ಲಿತೆಗೆದು, ಕಣ್ಣಿನ ಕೊಳಗದಲ್ಲಿ ಅಳೆಯುತ್ತಿರಲಾಗಿ,**
**ಖಂಡುಗವೆಂಬುದಕ್ಕೆ ಮೊದಲೆ ಕೊರಳಡಗಿತ್ತು.**
**ಕುಂಭೇಶ್ವರಲಿಂಗದಲ್ಲಿದ್ದಜಗನ್ನಾಥನನರಿಯಲಾಗಿ".**

ಇವರೆಲ್ಲರೂ ಒಂದಿಲ್ಲೊಂದು ರೀತಿಯಲ್ಲಿ ಕೃಷಿಯಲ್ಲಿ ತೊಡಗಿಕೊಂಡಿದ್ದರೆಂದು ಭಾವಿಸಿಕೊಂಡರೂ ಅನುಭವ ಮಂಟಪದಲ್ಲಿ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಸಂಖ್ಯಾ ದೃಷ್ಟಿಯಿಂದ ಪ್ರಾತಿನಿಧಿತ್ವ ಕಡಿಮೆಯಾಯಿತು. ಆಧುನಿಕ ಕೃಷಿ ಸಾಗುತ್ತಿರುವ ದಾರಿಯ ದಿಕ್ಕು ದೆಸೆ ತಿಳಿಯಬೇಕಾದರೆ ಅಲ್ಲಮ ಪ್ರಭುಗಳ ವಚನವನ್ನು ಗಮನಿಸಬೇಕು.

**"ಬೆವಸಾಯವ ಮಾಡಿ ಮನೆಯ ಬೀಯಕ್ಕೆ ಭತ್ತವಿಲ್ಲದಿದ್ದಡೆ**
**ಆ ಬೆವಸಾಯದ ಘೋರವೇಕಯ್ಯಾ?**
**ಕ್ರಯ ವಿಕ್ರಯವ ಮಾಡಿ ಮನೆಯ ಸಂಚು ನಡೆಯದನ್ನಕ್ಕ**
**ಆ ಕ್ರಯ ವಿಕ್ರಯದ ಘೋರವೇಕಯ್ಯಾ?**
**ಒಡೆಯನ ಓಲೈಸಿ ತನುವಿಂಗೆ ಅಷ್ಟಭೋಗವ ಪಡೆಯದಿದ್ದರೆ**
**ಆ ಓಲಗದ ಘೋರವೇಕಯ್ಯಾ?**
**ಭಕ್ತನಾಗಿ ಭವಂ ನಾಸ್ತಿಯಾಗದಿದ್ದಡೆ ಆ ಉಪದೇಶವ ಕೊಟ್ಟಗುರು,**
**ಕೊಂಡ ಶಿಷ್ಯ ಇವರಿಬ್ಬರ ಮನೆಯಲ್ಲಿ ಮಾರಿ ಹೊಗಲಿ**
**ಗುಹೇಶ್ವರಲಿಂಗವತ್ತಲೆ ಹೋಗಲಿ !"**

ಬಿತ್ತಿ ಬೆಳೆಯುವ ರೈತನ ಮನೆಯಲ್ಲಿಯೇ ಊಟಕ್ಕಾಗಿ ಭತ್ತ ದೊರೆಯದಿದ್ದರೆ, ಅಂತಹ ವ್ಯವಸಾಯವ ಮಾಡುವ ಘೋರವಾದರೂ ಏಕೆ ? ತನ್ನ ಕುಟುಂಬ ಜನ ಜಾನುವಾರುಗಳ ಬೇಡಿಕೆ ಪೂರೈಸಲು ನಮ್ಮ ಪೂರ್ವಜರು ಮಾಡುತ್ತಿದ್ದುದು, ಪರಿಸರ ಸ್ನೇಹಿ ಸುಸ್ಥಿರ ಮಾದರಿಯ ಕೃಷಿ. ಅಂದು ಬಿತ್ತುವುದು ಬೆಳೆಯುವದು ಅವನಿಗೆ ಜೀವನ ವಿಧಾನವಾಗಿತ್ತು. ಹಾಗಾಗಿ ರೈತನ ಮನೆಯಲ್ಲಿ ಉಣ್ಣುವ ಧಾನ್ಯವೂ ಇರುತ್ತಿತ್ತು. ಮೇಯುವ ಸೊಪ್ಪೆಯೂ ಇರುತ್ತಿತ್ತು. ಹಾಲು ಹೈನು ವರ್ಷ ಪೂರ್ತಿ ತೊಟ್ಟಿಕ್ಕುತ್ತಿತ್ತು. ಇಂದು ಹಾಲು ಪಾಕೀಟಿನಲ್ಲಿ ಬಂದರೆ ಧಾನ್ಯವನ್ನು ರೇಷನ್ನಂಗಡಿಯಲ್ಲಿ ಹುಡುಕಬೇಕಾಗಿದೆ. ಹಸಿರು ಕ್ರಾಂತಿಯು ಉಂಟು ಮಾಡಿದ ಅಡ್ಡಪರಿಣಾಮಗಳಲ್ಲಿ ಇದೂ ಒಂದು.

ಹಸಿರು ಕ್ರಾಂತಿಯಿಂದ ಆಹಾರೋತ್ಪಾದನೆಯಲ್ಲಿ ಗಣನೀಯ ಹೆಚ್ಚಳವಾಗಿ ಆಹಾರ ಭದ್ರತೆ ಸಾಧ್ಯವಾಯಿತು. ಜಾಗತೀಕರಣದ ಮುಖಾಂತರ ಸಮಾಜೋಆರ್ಥಿಕ ಸ್ಥಿತ್ಯಂತರವಾಯಿತು. ಜೀವ ವೈವಿಧ್ಯತೆ ತಗ್ಗಿ ಪರಿಸರ ನಾಶಕ್ಕೆ ಎಡೆಯಾಯಿತು. ಕೃಷಿ ಅಭಿವೃದ್ಧಿಯಲ್ಲಿನ ಅಸಮತೋಲನದಿಂದ ಎಲ್ಲ ಪ್ರಮಾದಗಳು 'ಉಳುವ ಒಕ್ಕಲು ಮಗನ ತಪ್ಪಾಗಿ' ಅವನು ತನ್ನನ್ನು 'ಒಪ್ಪಗೊಳ್ಳಲು' ಸರಕಾರವೆಂಬ ಪರಮಾತ್ಮನನ್ನು ಬೇಡುವಂತಾಯಿತು. ಇದೆಲ್ಲದರ ಮೇಲೆ ಒಕ್ಕಲು ಮುದ್ದಣ್ಣನ ಈ ವಚನ ನೋಡಿದರೆ ಎಲ್ಲವೂ ಅರ್ಥವಾಗಿ ಬಿಡುತ್ತದೆ.

**"ವೇದಶಾಸ್ತ್ರವನೋದುವುದಕ್ಕೆ ಹಾರುವನಲ್ಲ,**
**ಇರಿದು ಮೆರೆವುದಕ್ಕೆಕ್ಷತ್ರಿಯನಲ್ಲ,**
**ವ್ಯವಹರಿಸುವದಕ್ಕೆ ವೈಶ್ಯನಲ್ಲ.**
**ಉಳುವ ಒಕ್ಕಲಮಗನ ತಪ್ಪ ನೋಡದೆ ಒಪ್ಪುಗೊಳ್ಳಯ್ಯಾ,**
**ಕಾಮಭೀಮಜೀವಧನದೊಡೆಯ ನೀನೆ ಬಲ್ಲೆ."**

## ಪರಾಮರ್ಶನ ಗ್ರಂಥಗಳು


- **ಡಾ. ಎಂ.ಎಂ. ಕಲಬುರ್ಗಿ (ಸಂ.) :** ಸಮಗ್ರ ವಚನ ಸಂಪುಟಗಳು (1 ರಿಂದ 15)
- **ಎಂ. ಚಿದಾನಂದಮೂರ್ತಿ :** ವಚನ ಸಾಹಿತ್ಯ
- **ಓ. ಎಲ್. ನಾಗಭೂಷಣಸ್ವಾಮಿ :** ವಚನ ಸಾವಿರ
- **ಡಾ. ಎಚ್. ಟಿ. ಪೋತೆ :** ಶರಣ ಸಂಸ್ಕೃತಿ ಸಂವಾದ


■■

*– 36ನೇ ಪುಟದಿಂದ ಮುಂದುವರೆದುದು*

## ನಗರ ಸ್ಥಳೀಯ ಸಂಸ್ಥೆಗಳ ನಗರ ಪ್ರದೇಶದ ಬೀದಿ ದೀಪ ವ್ಯವಸ್ಥೆ.

ನಗರ ಪ್ರದೇಶದಲ್ಲಿ ರಾತ್ರಿಯ ವೇಳೆಯಲ್ಲಿ ನಗರದಲ್ಲಿ ವಾಸಿಸುವ ನಗರಜನರ ಸುರಕ್ಷತೆಗಾಗಿ ಬೀದಿ ದೀಪಗಳ ವ್ಯವಸ್ಥೆಯನ್ನು ಮಾಡುವುದು ನಗರ ಸ್ಥಳೀಯ ಸಂಸ್ಥೆಗಳ ಒಂದು ಕಾರ್ಯವಾಗಿದ್ದು ನಗರ ಪ್ರತಿ ವಾರ್ಡ್‌ಗಳಿಗೆ ಮುಖ್ಯ ರಸ್ತೆಗಳಿಗೆ ಬೀದಿ ದೀಪ ವ್ಯವಸ್ಥೆಯನ್ನು ಮಾಡುವುದು ಕಡ್ಡಾಯವಾಗಿದೆ. ಪುರಸಭೆಗಳ ನಿಯಮದಂತೆ ರಸ್ತೆಗಳಲ್ಲಿ ಪ್ರತಿ ಬೀದಿ ದೀಪಗಳ ನಡುವೆ 35 ಮೀಟರ್ ಅಂತರವಿರಬೇಕು ಎಂದು ನಿಯಮಗಳು ಹೇಳುತ್ತವೆ. ನಗರ ಸಮೀಕ್ಷೆಯನ್ನು ಮಾಡಿದಾಗ ಪ್ರತಿ ಬೀದಿ ದೀಪದ ನಡುವೆ 35 ಮೀಟರ್ ಅಂತರವನ್ನು ಕಾಯ್ದುಕೊಳ್ಳುವ ನಿಯಮದ ನಡುವೆ ವ್ಯತ್ಯಾಸಗಳಿವೆ. ಕೆಲವು ಪ್ರದೇಶದಲ್ಲಿ ಬೀದಿ ದೀಪ ವ್ಯವಸ್ಥೆಯೇ ಇಲ್ಲದಿರುವುದು ಕಂಡು ಬಂದಿದ್ದು ಬೀದಿ ದೀಪಗಳ ನಡುವೆ ಅಂತರ ಮತ್ತು ಮಾನದಂಡಗಳನ್ನು ಸಮರ್ಪಕವಾಗಿ ನಿರ್ವಹಿಸದೇ ಇರುವುದು ಕಂಡು ಬಂದಿದೆ. ಬೀದಿ ದೀಪಗಳು ಉರಿಯುವ ಅವಧಿಗಳಲ್ಲಿ ಸಕಾಲಕ್ಕೆ ಸರಿಯಾಗಿ ಹಾಕುವುದು ಮತ್ತು ಹಾರಿಸುವುದರಲ್ಲಿ ವ್ಯತ್ಯಾಸಗಳಿದ್ದು ಹಗಲು ವೇಳೆಯಲ್ಲಿಯೂ ಬೀದಿ ದೀಪಗಳು ಹೊತ್ತಿ ಉರಿದ ಉದಾಹರಣೆಗಳಿವೆ. ಬೀದಿ ದೀಪ ನಿರ್ವಹಣೆಗೆ ಸ್ವಯಂಚಾಲಿತ ಸ್ವಿಚ್ಚಿಂಗ್ ಪಾಯಿಂಟ್‌ಗಳು ಸ್ವಯಂಚಾಲಿತ ಟೈಮರ್‌ಗಳು ಇಲ್ಲದಿರುವುದು ಕಂಡು ಬಂದಿದ್ದು ಇವುಗಳ ಅಳವಡಿಕೆಗೆ ಹೂಡಿಕೆಯು ಅಗಾಧ ಪ್ರಮಾಣದಲ್ಲಿ ಬೇಕಾಗಿದ್ದು ವಿದ್ಯುತ್ ಉಳಿತಾಯ ಮಾಡುವ ನಿಟ್ಟಿನಲ್ಲಿ ಎಲ್.ಇ.ಡಿ. ಬಲ್ಬ್‌ಗಳ ಅಳವಡಿಕೆ ಇಲ್ಲದಿರುವುದು ವಿದ್ಯುತ್ ಮೇಲಿನ ವೆಚ್ಚವನ್ನು ಹೆಚ್ಚಾಗುವಂತೆ ವಿದ್ಯುತ್ ಬಿಲ್‌ಗಳು ಹೆಚ್ಚಾಗಲು ಕಾರಣವಾಗಿದೆ. ಒಟ್ಟಾರೆಯಾಗಿ ಬೀದಿ ದೀಪವ್ಯವಸ್ಥೆಯ ನಿರ್ವಹಣೆಯಲ್ಲಿ ಎರಡೂ ಪುರಸಭೆಗಳು ಸಾಕಷ್ಟು ಸುಧಾರಣೆಯಾಗಬೇಕಾದ ಅವಶ್ಯಕತೆ ಇದೆ.



**ಛಾಯಾಚಿತ್ರ 1.4. ಮೂಲ : ಕ್ಷೇತ್ರ ಕಾರ್ಯ**

## ಪರಾಮರ್ಶನ ಗ್ರಂಥಗಳು


- **ಗುನ್ನಾರ್ ಮಿರ್ಡಾಲ್ (1968) :** 'ಏಷಿಯನ್ ಡ್ರಾಮಾ'.
- **ಚಾರ್ಲ್ಸ್‌ಟೈಬೂ (1985) :** 'A Theory of Local Public Expendture'
- **ಡಾ. ಎಂ. ಚಂದ್ರಪೂಜಾರಿ (2017) :** 'ಅಭಿವೃದ್ಧಿಯ ಸಿದ್ಧಾಂತಗಳು' ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ.
- **ಮೋಹಿತ್ ಭಟ್ಟಾಚಾರ್ಯ (1997) :** 'ಡೆವಲಪ್‌ಮೆಂಟ್ ಅಡ್ಮಿನಿಸ್ಟ್ರೇಷನ್' ನ್ಯೂಡೆಲ್ಲಿ.
- **ಓಂ ಪ್ರಕಾಶ್ (2017) :** 'ಪಬ್ಲಿಕ್ ಎಕಾನಾಮಿಕ್ಸ್ ಥಿಯರಿ ಅಂಡ್ ಪ್ರಾಕ್ಟೀಸ್' ನ್ಯೂಡೆಲ್ಲಿ ವಿಶಾಲ್ ಪಬ್ಲಿಕೇಷನ್.
- **ಜೋಗಿಂಧರ್ ಸಿಂಗ್ ಅಂಡ್ ಆರ್.ಕೆ. ಲೇಖಿ (2018) :** 'ಪಬ್ಲಿಕ್ ಫೈನಾನ್ಸ್' ನ್ಯೂಡೆಲ್ಲಿ ಕಲ್ಯಾಣಿ ಪಬ್ಲಿಕೇಷನ್ಸ್.
- **ಕ್ಷೇತ್ರಕಾರ್ಯ 2020-21.**
- **ಕ್ಷೇತ್ರಕಾರ್ಯ2021-22.**


■■

APPROVED BY UGC CARE

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ರನ್ನನ ಗದಾಯುದ್ಧದ ನಾಯಕರುಗಳು : ಒಂದು ಅವಲೋಕನ

✍ ಶ್ರೀನಿವಾಸ ಎನ್., ಸಂಶೋಧನಾ ವಿದ್ಯಾರ್ಥಿ ಕನ್ನಡ ಅಧ್ಯಯನ ಕೇಂದ್ರ, ಜ್ಞಾನ ಭಾರತಿ ಆವರಣ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ರನ್ನನ ಗದಾಯುದ್ಧವು ಅನೇಕ ನಾಟಕೀಯ ಅಂಶಗಳನ್ನು ಪ್ರತಿಪಾದಿಸುವ ಒಂದು ವಿಶಿಷ್ಟ ಕೃತಿ. ಹತ್ತನೆಯ ಶತಮಾನದ ನಾಟಕ ಸಾಹಿತ್ಯದ ಕೊರಗನ್ನು ಈ ಕೃತಿ ಸ್ವಲ್ಪಮಟ್ಟಿಗೆ ನಿವಾರಿಸಿದೆ ಎಂದರೆ ತಪ್ಪಾಗಲಾರದು. ಗದಾ ಯುದ್ಧಕ್ಕಿಂತ ಪೂರ್ವದಲ್ಲಿ ರಚನೆಯಾಗಿದ್ದ ಮೂಲಭಾರತದಲ್ಲಿ ಹಾಗೂ ಪಂಪ ಭಾರತದಲ್ಲಿ ಬರುವಂತಹ ಎಷ್ಟೋ ನೀರಸ ಪಾತ್ರಗಳಿಗೆ ಧ್ವನಿಯನ್ನು ಒದಗಿಸಿ ಕನ್ನಡ ಸಾಹಿತ್ಯದಲ್ಲಿ ಅಚ್ಚಳಿಯದಂತೆ ಉಳಿಯುವ ಪಾತ್ರಗಳನ್ನಾಗಿ ರನ್ನ ಸೃಷ್ಟಿಸಿದ್ದಾನೆ. ಅದರಲ್ಲೂ ಗದಾಯುದ್ಧದ ನಾಯಕರಾರೂ ಎಂಬುದರ ಬಗ್ಗೆ ಒಂದು ಶತಮಾನಗಳ ಕಾಲದಿಂದ ವ್ಯಾಪಕವಾದ ಚರ್ಚೆಗಳು ಕನ್ನಡ ಸಾಹಿತ್ಯ ಲೋಕದಲ್ಲಿ ನಡೆದಿವೆ. ನವೋದಯ ಕಾಲಘಟ್ಟದಲ್ಲಿ ವಿವಿಧ ಪ್ರಕಾರಗಳ ಸಾಹಿತ್ಯ ರಚನೆಗಳು ನಡೆಯುತ್ತಿದ್ದರು ಆಕಾಲ ಘಟ್ಟದ ಕವಿಗಳು ಇವುಗಳ ವಿಮರ್ಶೆಗಿಂತ ಹೆಚ್ಚಾಗಿ ಆಧುನಿಕ ಪೂರ್ವ ಸಾಹಿತ್ಯದ ವಿಮರ್ಶೆಗೆ ಒತ್ತುನೀಡಿದರು. ಇದರಿಂದ ಪಂಪನಿಂದ ಮುದ್ದಣ್ಣ ಕವಿಯವರೆಗಿನ ಸಾಹಿತ್ಯ ಕೃತಿಗಳನ್ನು ವಿಮರ್ಶೆ ಮಾಡುವ ಪರಂಪರೆ ನವೋದಯ ಸಾಹಿತ್ಯ ಕಾಲಘಟ್ಟದಲ್ಲಿ ಹುಟ್ಟಿಕೊಂಡಿತು. 1925 ರಲ್ಲಿ ಬಿ.ಎಂ. ಶ್ರೀರವರು ದುರ್ಯೋಧನನಲ್ಲಿ ದುರಂತ ನಾಯಕನ ಗುಣಗಳಿರುವುದನ್ನು ಕಂಡು 'ಗದಾಯುದ್ಧ ನಾಟಕಂ' ಅನ್ನು ರಚಿಸಿ ಅದುವರೆಗೆ ಕನ್ನಡ ಸಾಹಿತ್ಯದಲಿಲ್ಲದ ದುರಂತ ನಾಯಕನನ್ನು ಚಿತ್ರಿಸಿದರು. ನಂತರ ಕನ್ನಡ ಸಾಹಿತ್ಯ ಲೋಕದಲ್ಲಿ ರನ್ನನ ಗದಾಯುದ್ಧ ಕಾವ್ಯದ ಬಗ್ಗೆ ಹೆಚ್ಚಾಗಿ ಅಧ್ಯಯನಗಳು ನಡೆದವು. ಅದರಲ್ಲಿ ಅನೇಕರು ಗದಾಯುದ್ಧ ಕಾವ್ಯದ ನಾಯಕರುಗಳ ಬಗ್ಗೆ ವಾದ–ಪ್ರತಿವಾದಗಳನ್ನು ಮಂಡಿಸಿದ್ದಾರೆ. ಬಿ.ಎಂ.ಶ್ರೀ, ಕುವೆಂಪು, ತೀ.ನಂ.ಶ್ರೀ, ಎ.ಆರ್.ಕೃಷ್ಣಶಾಸ್ತ್ರಿ, ಸಿ.ಕೆ.ವೆಂಕಟರಾಮಯ್ಯ, ಕೆ.ಎಲ್.ಗೋಪಾಲಕೃಷ್ಣಯ್ಯ, ಎಚ್.ತಿಪ್ಪೇರುದ್ರಸ್ವಾಮಿ, ಮ.ಪ್ರ. ಪೂಜಾರ ಮುಂತಾದವರು ದುರ್ಯೋಧನನ ಪರ ವಾದಿಸಿದರೆ, ಇವರ ನಿಲುವುಗಳನ್ನು ವಿರೋಧಿಸಿ ದ.ರಾ.ಬೇಂದ್ರೆ, ಕೀರ್ತಿನಾಥ ಕುರ್ತಕೋಟಿ, ನಾ.ಗೋ.ದೇವಾ, ಜಿ.ಎಚ್.ನಾಯಕ, ಎಚ್.ಜಿ. ಲೋಕೊರ, ಶ್ರೀರಾಮ ಇಟ್ಟಣ್ಣವರ ಮುಂತಾದವರು ಪ್ರತಿವಾದಗಳನ್ನು (ಭೀಮನ ಪರ) ಮಂಡಿಸಿದ್ದಾರೆ. ಇವರುಗಳ ವಾದಗಳನ್ನು ಸರಳೀಕರಿಸಿ ಸಂಕ್ಷಿಪ್ತವಾಗಿ ಗಮನಿಸುವುದಾದರೆ

## ದುರ್ಯೋಧನಪರವಾಗಿರುವ ವಾದಗಳು

1. ಯುದ್ಧ ಭೂಮಿಯಲ್ಲಿ ದ್ರೋಣ, ಭೀಷ್ಮ, ವೃದ್ಧ ತಂದೆ – ತಾಯಿ, ನಿರಂತರ ಸಂಗಾತಿ ಸಂಜಯ, ಮೃತರಾಗಿ ಬಿದ್ದ ಅಭಿಮನ್ಯು, ಲಕ್ಷಣಕುಮಾರ, ದುಶ್ಯಾಸನ, ಕರ್ಣ ಮುಂತಾದವರೊಂದಿಗೆ ನಡೆಸುವ ಅನುಸಂಧಾನದಲ್ಲಿ ದುರ್ಯೋಧನ ತೋರುವ ಪ್ರತಿಕ್ರಿಯೆಗಳಲ್ಲಿ ಅವನ ಘನವಾದ ವ್ಯಕ್ತಿತ್ವ ಪ್ರಕಟಗೊಳ್ಳುವಂತೆ ಕಾವ್ಯಘಟನಾವಳಿಗಳು ಸಂಯೋಜನೆಗೊಂಡಿರುವುದನ್ನು ಗಮನಿಸಿ ದುರ್ಯೋಧನನ ಪರವಾಗಿತಮ್ಮ ವಾದವನ್ನು ಮಂಡಿಸಿದ್ದಾರೆ

2. "ಕಥಾನಾಯಕನಲ್ಲಿ ಇರಬೇಕಾದ ಉದಾತ್ತ ಗುಣಗಳ ಕೊರತೆ ಭೀಮನಲ್ಲಿಗುರುತಿಸಲಾಗಿದೆ. ಅವನು ಕ್ಷಮೆ, ಗಾಂಭೀರ್ಯ, ವಿನಯ, ಆತ್ಮಶ್ಲಾಘಾವಿರತಿ ಮೊದಲಾದಉದಾತ್ತ ಗುಣಗಳು ಅರಿಯದವ"[1] ಮುಂದುವರಿದು ಇನ್ನು ಕೆಲವು ವಿದ್ವಾಂಸರು ಅಣ್ಣನಾದ ಧರ್ಮರಾಯ ಮತ್ತುದೃತರಾಷ್ಟ್ರ–ಗಾಂಧಾರಿಯರಿಗೆ ಸಂಬಂಧಿಸಿದ ವಿಷಯದಲ್ಲಿ ಅಂದರೆ ಗುರು ಹಿರಿಯರ ವಿಷಯದಲ್ಲಿ ತಕ್ಕ ಗೌರವಭಾವವಿಲ್ಲದ ಉದ್ಧಟ, ಧರ್ಮಾಧರ್ಮ ವಿವೇಚನೆ ಇಲ್ಲದ ಅಧರ್ಮಿ ಎಂಬ ವಾದಗಳನ್ನು ಮಂಡಿಸಿದ್ದಾರೆ.

3. ಕುವೆಂಪುರವರು "ಗದಾಯುದ್ಧವನ್ನು ಓದಿ ಪೂರೈಸಿದ ಮೇಲೆ ಯಾವುದೋ ಒಂದು ಮಹಾವಸ್ತುವಿನ ವಿನಾಶದ ಯಾತನೆಯು ಹೃದಯವನ್ನಾವರಿಸುವುದು. ಕಾವ್ಯದ ವಿವಿಧ ವಿಷಯಗಳು ಕ್ರಮಕ್ರಮೇಣ ಮನದಿಂದಜಾರುವುವು. ಕೌರವ ವಿನಾಶದ ಭಾವ ಒಂದೇ ನಮ್ಮನ್ನು ಪೀಡಿಸುವುದು. ಅದೂ ಮಧುರಯಾತನೆ. ಕಾವ್ಯರಂಗವು ಅನೇಕ ಶ್ರೇಷ್ಠತರ ಪಾತ್ರಗಳಿಂದ ಅಲಂಕೃತವಾದದು. ಅನೇಕ ವೀರರುತಮ್ಮ ಶಕ್ತಿ ಪ್ರದರ್ಶನದಿಂದ ಆ ರಂಗದಲ್ಲಿ ಮೆರೆದಿದ್ದಾರೆ. ಒಂದೆಡೆ ಮಾಯಾವಿಯಾದ ಶ್ರೀ ಕೃಷ್ಣ, ಒಂದೆಡೆ ಧರ್ಮಕ್ಕೆ ಆಗರನಾದ ಯುಧಿಷ್ಠಿರ ರಂಗ ಮಧ್ಯದಲ್ಲಿ ತ್ರೈಲೋಕ್ಯವೀರನೆನಿಸಿದ ವೀರ ಪಾರ್ಥ, ಒಂದು ಕಡೆ ಪ್ರಳಯ ಭೈರವನನ್ನು ಹಂಗಿಸುವ ಭೀಮ, ಎದುರಿನಲ್ಲಿ ದುಶ್ಯಾಸನ, ದಾನ ಶೂರ ವೀರಾಗ್ರೇಸರ ಕರ್ಣ, ಇನ್ನು ಗುರು ಸಮುದಾಯದಲ್ಲಿ ಎಂದರೆ ಎಲ್ಲರೂ ಅಸಮಾನ್ಯರು ಎಲ್ಲರೂ ಅನುಪಮ ವೀರರು, ಪಿತಾಮಹ ಬೀಷ್ಮರು, ಚಾಪಾಗಮಾಚಾರ್ಯರಾದ ದ್ರೋಣರು, ರುದ್ರಾವತಾರ ನೆನೆಸಿದ ಅಶ್ವತ್ಥಾಮರು, ಇನ್ನು ಗದಾಯುದ್ಧಕ್ಕೇ ಅಲ್ಲದೆ ಇಡೀ ಮಹಾಭಾರತಕ್ಕೇ ಸೂತ್ರಧಾರನೆನಿಸಿದ ವೈಕುಂಠನನ್ನೇ ತನ್ನ ಕಪಟನಾಟಕ ಸೂತ್ರಕ್ಕೆ ಬಿಗಿದ ದ್ರೌಪದಿ, ಇಷ್ಟು ವ್ಯಕ್ತಿಗಳಿದ್ದರೂ ಒಬ್ಬರಾದರೂ ಕೌರವನಂತೆ ನಮ್ಮನ್ನು ಆಕರ್ಷಿಸುವುದಿಲ್ಲ. ಒಬ್ಬರಾದರೂ ನಮ್ಮನ್ನು ತಳಮಳಿಸರು. ಕೆಲವರು ತಮ್ಮ ಘನತೆಯಿಂದ ನಮ್ಮ ತಾತ್ಕಾಲಿಕ ಮೆಚ್ಚುಗೆಗೆ ಪಾತ್ರರಾಗಬಹುದು. ಆದರೆ ಅವರ ಘನತೆಯು ನೀರಸವಾದಘನತೆ, ಅವರಲ್ಲಿಯೂ ಗಾಂಭೀರ್ಯವಿರಬಹುದು ಆದರೆ ಅದು ಪಣಿಕೇತನನ ಗಾಂಭೀರ್ಯಕ್ಕೆ ಎಣೆಯಾಗದು. ಕೆಲವರದು ತೊರೆಗಳ ಗಾಂಭೀರ್ಯ, ಕೆಲವರದು ವಾಹಿನಿಗಳ ಗಾಂಭೀರ್ಯ ಮತ್ತೆ ಕೆಲವರದು ಶಾಂತಸರೋವರದ ಗಾಂಭೀರ್ಯ ಆದರೆ ದುರ್ಯೋಧನನದು ಗಂಭೀರವಾದ ಮಹೋದಧಿಯ ಗಾಂಭೀರ್ಯ, ಆತನ ವೈಭವವು ಸಾಗರದ ವೈಭವ, ಒಂದು ವೇಳೆ ಅವನ ಸರಿಸಮಾನರಿರಬಹುದು. ಬೇರೊಂದು ದೃಷ್ಟಿಯಿಂದ ಅವನನ್ನು ಮೀರಿಸಿದವರಿರಬಹುದು. ಆದರೂ ಕೌರವನಿಗಾದ ದುಃಖತರವಾದ ಅಂತ್ಯವು ನಮ್ಮ ಹೃದಯದ ಪ್ರೀತಿಕರುಣಾ ಪ್ರವಾಹಗಳನ್ನು ಅವನ ಕಡೆಗೆ ಸೆಳೆಯುವುದು. ಅವನ ಶೋಕದಲ್ಲಿ ನಾವು ಭಾಗಿಗಳಾಗುವೆವು. ಅವನ ಛಲದಲ್ಲಿ ನಾವು ಒಳಗೊಳಗೆ ಗುಟ್ಟಾಗಿಯಾದರೂ ಹಿಗ್ಗುವೆವು. ಗೊಡ್ಡು ಧರ್ಮ ದೃಷ್ಟಿಯಿಂದ ಕೌರವನನ್ನು ಪರೀಕ್ಷೆ ಮಾಡೆವು.ಅವನು ನಮ್ಮ ಸ್ವಂತ ಕಥಾನಾಯಕ, ನಮ್ಮ ವೀರ,ಧರ್ಮದ ದೃಷ್ಟಿಯಿಂದ ಕೌರವನು ಒಂದು ವೇಳೆ ಅನ್ಯಾಯಿ, ಪಾಪಿಯೆಂದು ತೋರಿದರೂ ನಾವು ಕೌರವನೊಡನೆ ಅಧರ್ಮಿಗಳಾಗಲು ಹಿಂತೆಗೆಯುವುದಿಲ್ಲ. ಅಷ್ಟೇ ಏಕೆ ? ವೀರಕೌರವನ ಅಧರ್ಮವನ್ನು ಪ್ರಶಂಸಿಸುವೆವು. ಮಿಲ್ಟನ್ ಕವಿಯ ಪ್ರಸಿದ್ಧ ಪುರಾಣಕಾವ್ಯವಾದ 'ಪ್ಯಾರಡೈಸ್ ಲಾಸ್ಟ್' ನಲ್ಲಿ ಬರುವ ಸೇಟನ್ ನನು ದೈವ ದ್ವೇಷಿಯಾದರೂ ಅವನನ್ನು ಕಂಡು ಹೇಗೆ ಹಿಗ್ಗುವೆವೋ ಹಾಗೆಯೇ ಕೌರವನೊಡನೆ ಸೇರಲು ಇಚ್ಛಿಸುವೆವು"[2] ಎಂದು ಹೇಳಿದ್ದಾರೆ. ಕುವೆಂಪು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ರವರ ಈ ಹೇಳಿಕೆಯಂತೆ ದುರ್ಯೋಧನ ಪರ ವಾದಿಸುವಂತವರು ಹೆಚ್ಚು ಕಡಿಮೆ ಇದೇ ರೀತಿಯಾದ ಹೇಳಿಕೆಗಳನ್ನು ನೀಡಿ, ಕೆಲವರು ಇದಕ್ಕಿಂತ ಭಿನ್ನವಾಗಿ, ವಿವರವಾಗಿ ದುರ್ಯೋಧನನ ಮಹಾನುಭಾವತೆ ಯನ್ನು, ಆತನ ಗುಣಗಳನ್ನು ತಮ್ಮ ಲೇಖನಗಳಲ್ಲಿ ಮಂಡಿಸಿದ್ದಾರೆ.

4. "ಗದಾಯುದ್ಧದಲ್ಲಿ ಹೊಕ್ಕಳ ಕೆಳಗೆ ಹೊಡೆಯಬಾರದೆಂಬ ನಿಯಮವನ್ನು ಉಲ್ಲಂಘಿಸಿ ದುರ್ಯೋಧನನ ಊರುಗಳನ್ನು ಮುರಿದು ಜಯವನ್ನು ಸಂಪಾದಿಸುವನು ಭೀಮ. ಮುಂದೆ ಮೃತಪ್ರಾಯನಾಗಿ ಬಿದ್ದ ಆತನ ರಾಜಮ ಕುಟಕ್ಕೂ ಶಿರಸ್ಸಿಗೂ ಒದೆಯುವನು. ದುರ್ಯೋಧನನು ಮೂರ್ಧಾಭಿಷಕ್ತನಾದ ಚಕ್ರವರ್ತಿಯು ಮಹಾರಾಜಾಧಿರಾಜನು, ಅಂತಹ ಸಾಮ್ರಾಜನಸಾಮ್ರಾಜ್ಯ ಸೂಚಕವಾದ ಕಿರೀಟಕ್ಕೆ ಒದೆಯುವುದು ಅದರಲ್ಲಿಯೂಆತನು ಸಾಯುವ ಅವಸ್ಥೆಯಲ್ಲಿರುವಾಗ ಒದೆಯುವುದು ಯೋಗ್ಯವೇ?"[3] ಎಂದು ಭೀಮನಿಗಿರಬೇಕಾದ ಕಥಾನಾಯಕನ ಗುಣಗಳನ್ನು ಪ್ರಶ್ನಿಸಿ ಉದಾತ್ತ ನಾಯಕನಾದ ದುರ್ಯೋಧನನಿಗಾದ ಅನ್ಯಾಯ ಮತ್ತು ಅವಮಾನಗಳಿಗೆ ಮರುಗಿದ್ದಾರೆ.

5. ದುರ್ಯೋಧನನಲ್ಲಿ ತಾಬಯಸಿಲ್ಲದ ಎಳೆಯ ಮಕ್ಕಳಾದ ಉಪಪಾಂಡವರ ಕೊಲೆ ಆಯ್ತಲ್ಲ ಎಂಬ ತೀವ್ರ ವಿಷಾದ ಮತ್ತು ಕನಿಕರ ಅವನಲ್ಲಿ ವ್ಯಕ್ತವಾಗಿದೆ, ಹಾಗೂ ಸಂಜಯನ ವಿಷಯಕ್ಕೆ ಸಂಭಂದಿಸಿದಂತೆ ದುರ್ಯೋಧನನು ಪಾಂಡವರೈವರನ್ನು ಬಿಟ್ಟರೆ ಉಳಿದ ಯಾವ ವೈರಿಯ ಪರಾಕ್ರಮವನ್ನು ತಲೆದೂಗಿ ಅಭಿನಂದಿಸುವವನು ಹಾಗೂ ಇತರ ಜೀವಗಳಿಗೆ ಮರಗುವವನು

6. ದುರ್ಯೋಧನನ ಗದೆಯ ಏಟಿಗೆ ಭೀಮ ಮೂರ್ಛೆ ಹೋದಾಗಿನ ಸಂದರ್ಭದಲ್ಲಿ ದುರ್ಯೋಧನನ ನಡವಳಿಕೆಯಲ್ಲಿ ಪ್ರಕಟವಾಗುವ ಆತನ ಮಹಾನುಭಾವತ್ವ ಅನುಕರಣೀಯವಾದಂತದ್ದು

7. ಗದಾಯುದ್ಧದ ಹತ್ತು ಆಶ್ವಾಸಗಳಲ್ಲಿ ಭೀಮನಿಗೆ ಮೊದಲ ಎರಡು ಆಶ್ವಾಸಗಳಲ್ಲಿ ಪ್ರತಿಜ್ಞೆ ಮಾಡುವ ನೆವದಲ್ಲಿ ಹಾಗೂ ಕೊನೆಯ ಆಶ್ವಾಸದ ಪಟ್ಟಾಭಿಷೇಕದ ಸಂದರ್ಭದಲ್ಲಿ ತನ್ನ ಪಾತ್ರ ಪೋಷಣೆಯಾಗಿದೆಯೆ ಹೊರತು ಉಳಿದೆಲ್ಲ ಭಾಗಗಳಲ್ಲಿ ದುರ್ಯೋಧನನೇ ತುಂಬಿ ಹೋಗಿದ್ದಾನೆ ಇದು ಕೃತಿಯ ನಾಯಕನಿಗೆ ಮಾಡಿಕೊಂಡ ಸಂದರ್ಭಗಳೆಂದು ವಾದಿಸಿದ್ದಾರೆ.

## ಭೀಮನ ಪರವಾಗಿರುವ ವಾದಗಳು

1. ರನ್ನನೇ ತನ್ನಕಾವ್ಯದಲ್ಲಿ "ಎನಿಸಿದ ಸತ್ಯಾಶ್ರಯದೇವನೆ ಪೃಥ್ವೀವಲ್ಲಭಂ ಕಥಾನಾಯಕನಾಗನಿಲಜನೊಳ್ ಪೋಲಿಸಿ ಪೇಳ್ದನೀ ಗದಾಯುದ್ಧಂ ಮಹಾಕವಿ ರನ್ನಂ"[4] ಎಂದು ತನ್ನ ಕಥೆಯ ನಾಯಕ ಭೀಮನೆಂದು ಸ್ಪಷ್ಟವಾಗೇ ಹೇಳಿರುವಾಗ ದುರ್ಯೋಧನನು ಕಥೆಯ ನಾಯಕನಾಗಲು ಹೇಗೆ ಸಾಧ್ಯವೆಂದು ವಾದಿಸಿದ್ದಾರೆ.

2. ಜಿ.ಎಚ್. ನಾಯಕರವರು ಗದಾಯುದ್ಧವನ್ನು ಕುರಿತು ಸುಧೀರ್ಘ ಲೇಖನಗಳನ್ನು ಬರೆಯುತ್ತಾ, ಭೀಮ ಪರವಾಗಿ "ಸತ್ಯಾಶ್ರಯ ಇರಿವ ಬೆಡಂಗನಿಗೂ ಭೀಮನಿಗೂ ಅಭೇದ ಕಲ್ಪಿಸಿ 'ಸಾಹಸಭೀಮ ವಿಜಯ'ವನ್ನು ಬರೆದಿದ್ದಾನೆ. ಇದು ಭೀಮನ ಸಾಹಸ ಮತ್ತು ವಿಜಯದ ಕಥೆಯಾಗಿರುವುದರಿಂದ ಕಾವ್ಯದಲ್ಲಿ ಉದ್ದಕ್ಕೂ ಭೀಮ ಪ್ರಶಂಸಾಪರವಾದ ದನಿಯ ಘೋಷಣೆ, ಪೋಷಣೆ ಪ್ರಜ್ಞಾಪೂರ್ವಕವಾಗಿ ನಡೆದಿದೆ. ಕಾವ್ಯದ ಹೆಸರು 'ಸಾಹಸಭೀಮ ವಿಜಯ'. ಭೀಮನು ಪ್ರತಿಜ್ಞೆಯನ್ನು ಘೋಷಿಸಿ ಅದನ್ನು ಪೂರೈಸಿ ಕೃತಕೃತ್ಯನಾಗುವುದು ಈ ಕಾವ್ಯದ ವಸ್ತು. ಕಾವ್ಯದ ರಚನಾ ವಿನ್ಯಾಸದಲ್ಲಿ ಪ್ರತಿ ಆಶ್ವಾಸದ ಮೊದಲನೆಯ ಮತ್ತು ಕೊನೆಯ ಪದ್ಯಗಳು ಭೀಮ ಪರವಾದ ದನಿಯನ್ನು ದಟ್ಟವಾಗಿ ಪೋಷಿಸುತ್ತವೆ. ಅಂಥ ಕಡೆಗಳಲ್ಲಿ ಕೆಲವೊಮ್ಮೆ ಕವಿ ಔಚಿತ್ಯ ಪ್ರಜ್ಞೆಗೂ ಎರವಾಗಿ ಸಂಜಯ, ದೃತರಾಷ್ಟ್ರ, ಭೀಷ್ಮರ ಮೂಲಕವೂ ಭೀಮ ಪ್ರಶಂಸೆಯನ್ನು ಮಾಡಿಸಿದ್ದಾನೆ. ಜೊತೆಗೆ ಭೀಮ ಪ್ರಶಂಸೆಗೆ ಅವಕಾಶವಾಗುವ ಸಂದರ್ಭವನ್ನೇ ಕಾಯುತ್ತಿದ್ದ ಆಶ್ವಾಸ ವಿಭಜನೆಗಳನ್ನು ಮಾಡಿಕೊಂಡಿರುವಂತೆಯೂ ತೋರುತ್ತದೆ. ಏಕೆಂದರೆ ಒಂದು ಸನ್ನಿವೇಶ ಮುಗಿಯುವ ಮುನ್ನವೇ ಇನ್ನೊಂದು ಆಶ್ವಾಸ ಆರಂಭವಾಗಿ ಬಿಡುತ್ತದೆ. ಹಾಗಾಗುವುದಕ್ಕೆ ಬೇರೆ ಕಾವ್ಯನಾತ್ಮಕ ಕಾರಣ ಯಾವುದೂ ಇರುವಂತೆ ತೋರುವುದಿಲ್ಲ. ಮರಳುಗಳ ಭೀಮ ಪಕ್ಷಪಾತ ಮತ್ತು ದುರ್ಯೋಧನ ದ್ವೇಷ ಅನಿಮಿತ್ತವಾದುದಾಗಿದೆ. ಪ್ರಕೃತಿಯು ದುರ್ಯೋಧನನ ವಿಷಯದಲ್ಲಿ ಅನಿಮಿತ್ತ ತಾತ್ಸಾರವನ್ನೂ ಭೀಮನ ವಿಷಯದಲ್ಲಿ ಅನಿಮಿತ್ತ ಆದರವನ್ನು ತೋರಿಸುವಂತೆ ವರ್ಣಿತವಾಗಿದೆ. ದುರ್ಯೋಧನನ ಊರು ಭಂಗ ಮುಕುಟ ಭಂಗಗಳಾದ ಮೇಲೆ ನಾರದಾದಿ ದೇವತೆಗಳ ಪ್ರಶಂಸೆಯೂ ಭೀಮನಿಗೇ ಮೀಸಲು. ಕಾವ್ಯದುದ್ದಕ್ಕೂ ಭೀಮನನ್ನು ಕುರಿತಂತೆ ಕವಿ ಬಳಸುವ ವಿಶೇಷಣಗಳು ಮತ್ತು ದುರ್ಯೋಧನ, ಅಶ್ವತ್ಥಾಮ, ಬಲರಾಮ ಇವರನ್ನುಳಿದು ಇತರ ಪಾತ್ರಗಳು ಭೀಮನನ್ನು ಕುರಿತಂತೆ ಬಳಸುವ ವಿಶೇಷಣಗಳು ಸಾಮಾನ್ಯವಾಗಿ ಹೆಚ್ಚು ಪ್ರಶಂಸಾತ್ಮಕವಾಗಿವೆ. ಕಾವ್ಯ ಕೊನೆಯಾಗುವುದು ಭೀಮಸೇನನ ವಿಜಯದ ಸಂಭ್ರಮದಲ್ಲಿ, ವಿಶೇಷವಾದ ಪ್ರಶಂಸೆಯಲ್ಲಿ, ಪಟ್ಟಾಭಿಷೇಕದಲ್ಲಿ, ಈ ಅಂಶಗಳನ್ನೆಲ್ಲ ಗಮನವಿಟ್ಟು ನೋಡಿದಾಗ ಕವಿಯ ದೃಷ್ಟಿಯಲ್ಲಿ ಭೀಮಸೇನನೆ ಕಾವ್ಯದ ನಾಯಕ, ಕೇಂದ್ರ ವ್ಯಕ್ತಿ ಎಂಬುದು ಸ್ಪಷ್ಟವಾಗುತ್ತದೆ"[5].

ಭೀಮಪರ ವಾದಿಸಿದ ಅನೇಕ ವಿದ್ವಾಂಸರ ಅಭಿಪ್ರಾಯಗಳು ಬಹುತೇಕ ಒಂದು ಮತ್ತು ಎರಡನೆಯ ಹೇಳಿಕೆಗಳಂತೆಯೆ ಇವೆ.

3. ಭೀಮ ಗುರು ಹಿರಿಯರನ್ನು ನಿಂದಿಸಿದ ಎಂಬ ದುರ್ಯೋಧನ ಪರವಾದ ವಿಮರ್ಶಕರ ವಾದ ಏಕ ಪಕ್ಷೀಯವಾಗಿದೆ. ಯಾಕೆಂದರೆ ದುರ್ಯೋಧನನ ಮಾತು ಮೊದಲಾಗುವುದೇ ಗುರುನಿಂದನೆಯಿಂದ ಎಂದು ವಾದಿಸಿದ್ದಾರೆ

4. ಭೀಮ ದುರ್ಯೋಧನರ ಗದಾಯುದ್ಧವನ್ನು ವರ್ಣಿಸುವಾಗ ಕವಿ ಹೇಳಿರುವುದನ್ನು ನೋಡಿದರೆ ಕವಿಯ ದೃಷ್ಟಿಯಲ್ಲಿ ತೊಡಗೆ ಹೊಡೆಯುವುದು ಅಧರ್ಮವಲ್ಲ ಎಂಬುದು ಸ್ಪಷ್ಟವಾಗಿದೆ. ಇದರಿಂದ ಭೀಮನನ್ನು ಗುಣಹೀನ ಎಂದು ಹೇಳಲಾಗದು.

5. ದುರ್ಯೋಧನನ ಗದೆಯ ಏಟಿಗೆ ಭೀಮ ಮೂರ್ಛೆ ಹೋದಾಗ ದುರ್ಯೋಧನ ಬಿದ್ದವನನ್ನು ಇರುವುದಿಲ್ಲವೆಂದು ಗದೆ ಬೀಸಲು ಭೀಮನಿಗೆ ಎಚ್ಚರವಾದುದನ್ನು ಕವಿ ವರ್ಣಿಸುವಾಗ "ತಂದೆ ಸುತರ್ಗೆ ಕೂರದರೊಳರೇ"[6] "ದಾನಿಯುಮಂ ಶೂರನುಮಂ ತಾನೆಳ್ಚರಿಕುಂ ಗದಾನೀಲಂ"[7] ಎಂದು ಹೇಳಿರುವುದರಲ್ಲಿ ಭೀಮ ಪರವಾದ ದನಿಯೇ ಇದೆ. ದುರ್ಯೋಧನನನ್ನು ಕುರಿತಂತೆ ಪ್ರಶಂಸಾತ್ಮಕವಾದ ಮಾತುಗಳನ್ನು ಅಲ್ಲಿ ಕವಿ ಬಳಸಿಲ್ಲ ಎಂಬುದು ಗಮನಾರ್ಹ

6. ಕೃಷ್ಣ ತೊಡೆಯನ್ನು ಬಡಿದು ಗಟ್ಟಿಯಾಗಿ ಕೂಗುವ ನೆವದಿಂದ ಅದೇ ದುರ್ಯೋಧನನ ಮರ್ಮ ಸ್ಥಳವೆಂದು ತೋರಿಸಿದ್ದಕ್ಕೆ ಕವಿಯ ಆಕ್ಷೇಪದ ದನಿ ಏನು ಇಲ್ಲ. ಅದರ ಬದಲು, ಭೀಮ ಅದನ್ನು ಅರಿತಿದ್ದನ್ನು ಹೇಳುವಾಗ ಆತನಿಗೆ 'ಪರಮ ಪಂಡಿತಂ' ಎಂಬ ಮೆಚ್ಚುಗೆಯ ವಿಶೇಷಣವನ್ನೇ ಕವಿ ಬಳಸಿದ್ದಾನೆ ಹಾಗೂ ಇಲ್ಲಿ ಬಳಸಿರುವಂತಹ 'ಕಲಿ' ಎಂಬ ವಿಶೇಷಣ ಭೀಮನ ಪರಾಕ್ರಮವನ್ನು ಪ್ರಶಂಸಿಸುವಂಥದಾಗಿದೆ.

7. ಕಾವ್ಯದ ಸಂದರ್ಭದಲ್ಲಿ ದುರ್ಯೋಧನನನ್ನು ಮಹಾನುಭಾವ ಎಂದು ಕರೆದಿರುವುದು ಒಂದೇ ಸಲ. ಆದರೆ ದುರ್ಯೋಧನನ ಪರವಾದಂತ ವಿಮರ್ಶಕರು ದುರ್ಯೋಧನನನ್ನು ಮಹಾನುಭಾವನೆಂದು ರನ್ನ ಕವಿ ಚಿತ್ರಿಸಿದ್ದಾನೆಂದು ವಿಮರ್ಶಿಸಿದ್ದಾರೆ.

8. ಅಶ್ವತ್ಥಾಮ ಉಪಪಾಂಡವರ ತಲೆ ಕತ್ತರಿಸಿ ತಂದ ವಿಷಯದಲ್ಲಿ ದುರ್ಯೋಧನನ 'ಅಕ್ಕಟ' ಎಂಬ ಮಾತು ದುರ್ಯೋಧನನನ್ನು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಸಮರ್ಥಿಸಿಕೊಂಡವರಿಗೆ ಕಾರಣವಾಗಿದೆ. ಇಲ್ಲಿ ದುರ್ಯೋಧನನ 'ಅಕ್ಕಟ' ಎಂಬ ಉದ್ಗಾರದ ಹಿಂದೆತಾ ಬೇಡಿದವರ ಕೊಲೆ ತಪ್ಪಿದೆಂಬ ಅತೃಪ್ತಿ, ಆಗಬೇಕಾಗಿತೆಂಬ ಅದಮ್ಯ ಆಸೆ, ದ್ವೇಷಾಸೂಯೆಗಳ ಜೊತೆಗೆ, ಅದಕ್ಕಿಂತ ಹೆಚ್ಚಾಗಿ ಅಶ್ವತ್ಥಾಮನಿಗೆ ಬಾಲವಧೆಯ ಪಾತಕ ಅಂಟಿಕೊಂಡಿತಲ್ಲಾ ಎಂಬ ವಿಷಾದವಿದೆ ಎಂದು

9. ದ್ರೋಣನ ಶವದ ಮುಂದೆ ದುರ್ಯೋಧನ ವಿಲಾಪಿಸಿ ಆತನನ್ನು ಬಾಯಿ ತುಂಬಾ ಹೊಗಳುತ್ತಾನೆ. ಆದರೆ, ಹಿಂದೆ ಇದೇ ಗುರುವನ್ನು ಇವನು ನಿಂದಿಸಿದ್ದಾನೆ. ದ್ರೋಣನೊಂದಿಗೆ ಈತನಿಗೆ ಅತ್ಯಂತ ಆದರ ಭಾವವಿದ್ದಿದ್ದರೆ ನೇರವಾಗಿಯೊ ಪರೋಕ್ಷವಾಗಿಯೊ ಗುರುನಿಂದೆ ಮಾಡಿದ್ದಕ್ಕಾಗಿ ಪಶ್ಚಾತಾಪದ ಒಂದು ಮಾತನ್ನಾದರೂ ದುರ್ಯೋಧನ ಈ ಸಂದರ್ಭದಲ್ಲಿ ಆಡಬೇಕಿತ್ತು ಎಂದು ವಾದಗಳನ್ನು ಮಂಡಿಸಿದ್ದಾರೆ.

ಈ ಎರಡು ವಾದಗಳನ್ನು ಗಮನಿಸಿದರೆ ಮೊದಲನೆಯ ಗುಂಪಿನವರು ಕಾವ್ಯದ ಒಟ್ಟು ಓದಿನಲ್ಲಿ ದುರ್ಯೋಧನನ ಪಾತ್ರ ಓದುಗನ ಮೇಲೆ ಬೀರುವ ಪರಿಣಾಮ ಮತ್ತು ಕಾವ್ಯದಲ್ಲಿ ದುರ್ಯೋಧನನಿಗೆ ಸಿಕ್ಕ ಪ್ರಾಶಸ್ತ್ಯಗಳನ್ನು ಗಮನಿಸಿ ತಮ್ಮ ವಾದಗಳನ್ನು ಸಮರ್ಥಿಸಿಕೊಂಡರೆ, ಎರಡನೆಯ ಗುಂಪಿನವರು ಕೃತಿಕಾರನೇ ಸ್ಪಷ್ಟವಾಗಿ ಹೇಳಿರುವಂತೆ ಇದು 'ಭೀಮ ಕೇಂದ್ರಿತ ಕಥೆಯಿದು' ಎಂಬ ನಿಟ್ಟಿನಲ್ಲಿ ತಮ್ಮ ವಾದಗಳನ್ನು ಮಂಡಿಸಿರುವುದು ಸ್ಪಷ್ಟವಾಗಿದೆ. ಇಲ್ಲಿ ಮತ್ತೊಂದು ಬಹುಮುಖ್ಯವಾಗಿರುವಂತದ್ದು ಪಠ್ಯವೊಂದರ ಅರ್ಥ 'ಚರವಾಗಿರುತ್ತದೆ' ಮತ್ತು 'ಸ್ಥಿರವಾಗಿರುತ್ತದೆ' ಎಂಬ ಎರಡು ವಿರೋಧಿ ಸಿದ್ಧಾಂತಗಳ ಹಿನ್ನೆಲೆಯಲ್ಲಿ ಈ ಇಬ್ಬರೂ ಈ ತೆರನಾದ ವಾಗ್ವಾದಗಳನ್ನು ನಡೆಸಿರುವುದು ಕಂಡು ಬರುತ್ತದೆ. ಮುಂದುವರೆದು ಕೆಲವು ವಿದ್ವಾಂಸರು ಧರ್ಮದ ದೃಷ್ಟಿಯ ಹಿನ್ನೆಲೆಗಳಿಂದಲೂ, ಈ ಪಾತ್ರದ ಮೇಲೆ ಪೂರ್ವದಿಂದಲೇ ಬಂದಂತ ಅಭಿಪ್ರಾಯಗಳಿಂದಲೂ ವಿಮರ್ಶಿಸಿರುವುದನ್ನು ಕಾಣಬಹುದು. ಈ ಇಬ್ಬರ ವಾದಗಳಲ್ಲಿ ಕೆಲವರದು ತಮ್ಮ ತಮ್ಮ ಪಾತ್ರಗಳ ಪರವಾಗಿ ಏಕಪಕ್ಷೀಯವಾದ ತೀರ್ಮಾನಗಳು, ಕೆಲವೊಮ್ಮೆ ತಪ್ಪು ಗ್ರಹಿಕೆಗಳನ್ನು ತಮ್ಮ ವಾದಗಳಲ್ಲಿ ಮಂಡಿಸಿದ್ದಾರೆ. ನಾವು ಈ ಎರಡು ಅತಿರೇಕಗಳಿಗೆ ಹೋಗದೆ ಕೃತಿಯನ್ನು ಆಳವಾಗಿ ಅಭ್ಯಾಸಿಸಿದಾಗ ರನ್ನ ತನ್ನ ಕಾವ್ಯಕ್ಕೆ ಭೀಮನೆ ನಾಯಕನೆಂದು ಹೇಳಿದ್ದರೂ, ಕಾವ್ಯದ ಅಂತಃಸತ್ವವನ್ನು ಗಮನಿಸಿದಾಗ ದುರ್ಯೋಧನನೇ ಕಾವ್ಯದ ನಾಯಕನಾಗಿ ಹೊರ ಹೊಮ್ಮಿದ್ದಾನೆ. ಏಕೆಂದರೆ ಕಾವ್ಯದ ನಾಯಕ ಇವನೇ ಎಂದು ಮೊದಲೇ ಸೂಚಿಸುವುದಕ್ಕಿಂತ, ಕಾವ್ಯದಲ್ಲಿರುವ ಪಾತ್ರ ಓದುಗನ ಮೇಲೆ ಬೀರುವ ಪ್ರಭಾವವೇ ಬಹುಮುಖ್ಯವಾದದ್ದು.ಇದಕ್ಕೆ ಉದಾಹರಣೆ ರನ್ನನ 'ಗದಾಯುದ್ಧ'ದ ಕಾವ್ಯದ ಪ್ರೇರಣೆಯಿಂದ ದುರ್ಯೋಧನನಿಗೆ ಕನ್ನಡ ಸಾಹಿತ್ಯ ಲೋಕದಲ್ಲಿ ಸಿಕ್ಕಿರುವಂತಹ ಸ್ಥಾನಮಾನವೇ ಸಾಕ್ಷಿ, ರನ್ನನದುರ್ಯೋಧನನ ಪ್ರೇರಣೆಯಿಂದ ಕನ್ನಡ ನಾಟಕ ಸಾಹಿತ್ಯದಲ್ಲಿ ಬಿ.ಎಂ.ಶ್ರೀ. – 'ಗದಾಯುದ್ಧ ನಾಟಕಂ' (1925), 'ಅಶ್ವತ್ಥಾಮನ್' (1929), ಹನುಮಂತರಾವ ಭೀಮರಾವ ಕಂದಗಲ್ಲ – 'ರಕ್ತರಾತ್ರಿ' (1931), ನ. ಸುಬ್ರಹ್ಮಣ್ಯಂ – 'ಗದಾಯುದ್ಧ' (1975), ಎಸ್.ವಿ. ಕೃಷ್ಣಶರ್ಮ– 'ಸುಯೋಧನ' (1986), ರಾ. ಗೌ. –'ದೊರೆದುರ್ಯೋಧನ' (1997), ರಾಜಪ್ಪ ದಳವಾಯಿ – 'ಸುಯೋಧನ' (2002), ಎಸ್.ಎಸ್.ಪುಟ್ಟೇಗೌಡ– 'ಛಲದೊಳ್ ದುರ್ಯೋಧನಂ' (2018) ಮುಂತಾದವುಗಳು ರಚನೆಯಾದರೆ, ಯಕ್ಷಗಾನದಲ್ಲಿಯೂ ಸಹ ಭಾಗವತರಾದ ಜಿ.ಆರ್. ಕಾಳಿಂಗ ನಾವುಡರವರಿಂದ ಹಿಡಿದು ಕಲಾವಿದರ ಯಕ್ಷರಂಗ ಬಳಗ, ಕಲಾಸಂಗಮ ತಂಡ, ಚಿಟ್ಟಾಣಿ ತಂಡ ಮುಂತಾದವರು'ಗದಾಯುದ್ಧ' ಪ್ರಸಂಗವನ್ನು ಪ್ರದರ್ಶಿಸಿ ಅದರಲ್ಲಿ ರನ್ನನ ಈ ದುರ್ಯೋಧನನನ್ನೇ ಕೇಂದ್ರವಾಗಿಟ್ಟುಕೊಂಡು ನಿರೂಪಿಸಿದ್ದಾರೆ. ಮುಂದುವರಿದು ಹರಿಕಥೆಗಳಲ್ಲಿ, ಚಿತ್ರಕಲೆಗಳಲ್ಲಿ, ಸಿನಿಮಾರಂಗ (ಮುನಿರತ್ನರ 'ಕುರುಕ್ಷೇತ್ರ'), ಬಹಳಷ್ಟು ವಿದ್ವಾಂಸರ ವಿಮರ್ಶಾ ಲೇಖನಗಳಲ್ಲಿ ಹೀಗೆ ವಿವಿಧ ಪ್ರಕಾರಗಳಲ್ಲಿ ರನ್ನನ ದುರ್ಯೋಧನ ಕೇಂದ್ರ ಸ್ಥಾನದಲ್ಲಿದ್ದು ತನ್ನ ಪ್ರಭಾವವನ್ನು ಬೀರಿದ್ದಾನೆ. ಆದರೆ ರನ್ನನ ಭೀಮನಿಗೆ ಇಷ್ಟು ವ್ಯಾಪಕತೆ ಸಿಕ್ಕಿಲ್ಲ ಆದ್ದರಿಂದ ಗದಾಯುದ್ಧದ ಅಘೋಷಿತ ನಾಯಕ ದುರ್ಯೋಧನನಾಗಿದ್ದಾನೆ.

## ಕೊನೆ ಟಿಪ್ಪಣಿಗಳು

1. ಮಹಾದೇವ ಪ್ರಭಾಕರ ಪೂಜಾರ : ಗಾದಾಯುದ್ಧದ ನಾಯಕರು, ಪುಸ್ತಕ–ರನ್ನಕವಿ ಪ್ರಶಸ್ತಿ, ಪು.ಸಂ–87,
2. ಕುವೆಂಪು (ಕಿಶೋರಚಂದ್ರವಾಣಿ) : ರನ್ನನ ವೀರಕೌರವ, ಪುಸ್ತಕ–ರನ್ನಕವಿ ಪ್ರಶಸ್ತಿ, ಪು.ಸಂ–129.
3. ಮಹಾದೇವ ಪ್ರಭಾಕರ ಪೂಜಾರ : ಗಾದಾಯುದ್ಧದ ನಾಯಕರು, ಪುಸ್ತಕ–ರನ್ನಕವಿ ಪ್ರಶಸ್ತಿ, ಪು.ಸಂ–90.
4. ಆರ್.ವಿ.ಕುಲಕರ್ಣಿ : ಸಾಹಸ ಭೀಮ ವಿಜಯಂ, ಪದ್ಯ 1–31, ಪು.11.
5. ಜಿ.ಎಚ್.ನಾಯಕ : ರನ್ನನ ಕೃತಿರತ್ನ ಪರೀಕ್ಷೆ, ಪು.ಸಂ–04,05
6. ಆರ್.ವಿ.ಕುಲಕರ್ಣಿ : ಸಾಹಸ ಭೀಮ ವಿಜಯಂ, ಪದ್ಯ 8–32, ಪು.ಸಂ–154
7. ಆರ್.ವಿ.ಕುಲಕರ್ಣಿ : ಸಾಹಸ ಭೀಮ ವಿಜಯಂ, ಪದ್ಯ 8–33, ಪು.ಸಂ–155

## ಪರಾಮರ್ಶನ ಗ್ರಂಥಗಳು


- **ಮಹಾದೇವ ಪ್ರಭಾಕರ ಪೂಜಾರ (2009)** : ಗದಾಯುದ್ಧದ ನಾಯಕರು,ಪುಸ್ತಕ–ರನ್ನಕವಿ ಪ್ರಶಸ್ತಿ, ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತು, ನಾಲ್ಕನೆಯ ಮುದ್ರಣ.
- **ತಿರುಮಲೆ ಶ್ರೀನಿವಾಸಾಚಾರ್ಯ (2009)** : ಗದಾಯುದ್ಧದ ನಾಯಕನನ್ನುಕುರಿತು, ಪುಸ್ತಕ–ರನ್ನಕವಿ ಪ್ರಶಸ್ತಿ, ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತು, ನಾಲ್ಕನೆಯ ಮುದ್ರಣ.
- **ಸಿ. ಕೆ. ವೆಂಕಟರಾಮಯ್ಯ (2009)** : ಗದಾಯುದ್ಧ ಕಾವ್ಯದಲ್ಲಿ ರನ್ನನು ತೋರಿಸಿರುವ ಪಾತ್ರರಚನಾ ಕೌಶಲ, ಪುಸ್ತಕ–ರನ್ನಕವಿ ಪ್ರಶಸ್ತಿ, ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತು, ನಾಲ್ಕನೆಯ ಮುದ್ರಣ.
- **ಕೆ.ವಿ. ಪುಟ್ಟಪ್ಪ (ಕಿಶೋರಚಂದ್ರವಾಣಿ) (2009)** : ರನ್ನನ ವೀರಕೌರವ, ಪುಸ್ತಕ–ರನ್ನಕವಿ ಪ್ರಶಸ್ತಿ, ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತು, ನಾಲ್ಕನೆಯ ಮುದ್ರಣ.
- **ಎಂ.ಆರ್.ಶ್ರೀನಿವಾಸಮೂರ್ತಿ (2009)** : ರನ್ನನ ಪ್ರಾಶಸ್ತ್ಯ,ಪುಸ್ತಕ–ರನ್ನಕವಿ ಪ್ರಶಸ್ತಿ, ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, ನಾಲ್ಕನೆಯ ಮುದ್ರಣ.
- **ಆರ್.ವಿ.ಕುಲಕರ್ಣಿ (2017)** : ಸಾಹಸ ಭೀಮ ವಿಜಯಂ,ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತು.
- **ಜಿ.ಎಚ್.ನಾಯಕ (2018)** : ರನ್ನನ ಕೃತಿ ರತ್ನ ಪರೀಕ್ಷೆ, ಮೈಸೂರು ಚಿಂತನ ಚಿತ್ತಾರ.
- **ಶ್ರೀರಾಮ ಇಟ್ಟಣ್ಣವರ (2015)** : ರನ್ನನ ದುರ್ಯೋಧನ ಪಾತ್ರದ ಉದಾತ್ತತೆ, ಪುಸ್ತಕ–ಶ್ರೀ ಕವಿರತ್ನ, ಮುಧೋಳ ಕವಿ ಚಕ್ರವರ್ತಿ ರನ್ನ ಪ್ರತಿಷ್ಠಾನ.
- **ಚಂದ್ರಶೇಖರ (2015)** : ರನ್ನನ ದುರ್ಯೋಧನ, ಪುಸ್ತಕ–ಶ್ರೀ ಕವಿರತ್ನ, ಕವಿ ಮುಧೋಳ ಚಕ್ರವರ್ತಿ ರನ್ನ ಪ್ರತಿಷ್ಠಾನ.
- **ಚನ್ನಪ್ಪ ಕಟ್ಟಿ (2015)** : ರನ್ನನ ಗದಾಯುದ್ಧ ಮತ್ತು ರುದ್ರ ನಾಟಕಗಳು, ಪುಸ್ತಕ–ಶ್ರೀ ಕವಿರತ್ನ, ಮುಧೋಳ ಕವಿ ಚಕ್ರವರ್ತಿರನ್ನ ಪ್ರತಿಷ್ಠಾನ.


■■

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಜಾನಪದ ಮಹಾಕಾವ್ಯಗಳಲ್ಲಿ ಸ್ತ್ರೀ ಸ್ವಾಯತ್ತತೆ

✍ **ಡಾ. ಆಶಾರಾಣಿ ಕೆ. ಬಗ್ಗನಡು,** ಅಧ್ಯಾಪಕಿ, ವಿಶ್ವವಿದ್ಯಾನಿಲಯ ಕಲಾ ಕಾಲೇಜು, ತುಮಕೂರ ವಿಶ್ವವಿದ್ಯಾನಿಲಯ, ತುಮಕೂರು.

ಭಾರತೀಯ ಸಂದರ್ಭದಲ್ಲಿ ಪಾರಂಪರಿಕ ಮಹಿಳಾ ಬದುಕನ್ನು ಕುರಿತು ಚರ್ಚಿಸುವಾಗ.ಭಾರತದೊಡಲಲ್ಲಿನ ಬಹುತ್ವದ ಅರಿವು ಬಹಳ ಮಹತ್ವದ್ದು.ಭಾರತದಂತ ದೇಶ ಬಹುಮುಖ್ಯ ಸಂಸ್ಕೃತಿಯನ್ನು ಪ್ರತಿನಿಧಿಸುವ ಒಂದು ಸಂಕೀರ್ಣ ಭೂಪ್ರದೇಶವಾಗಿದ್ದು, ಕೆಲವರು ಊಹಿಸುವಂಥ ಒಂದೇ ಸಂಸ್ಕೃತಿ ಇರಲು ಸಾಧ್ಯವಿಲ್ಲ. ಭಾರತವನ್ನು ಭೌಗೋಳಿಕವಾಗಿ ಗಮನಿಸಿದರೆ ದಕ್ಷಿಣ ಭಾಗದಲ್ಲಿ ದ್ರಾವಿಡರ ಪ್ರಾಬಲ್ಯ ಹೊಂದಿದ್ದರೆ ಉತ್ತರದಲ್ಲಿ ಆರ್ಯರನ್ನು ಒಳಗೊಂಡತೆ ಬೇರೆಯದೆ ಆದ ಜನಾಂಗಗಳು ಇವೆ. ಇವರು ಒಂದೇ ಕಾಲದಲ್ಲಿ ಭಾರತವನ್ನು ಪ್ರವೇಶ ಮಾಡಲಿಲ್ಲ. ಬೇರೆ ಬೇರೆ ಕಾಲದಲ್ಲಿ ವಿಭಿನ್ನ ಭೂ ಭಾಗಗಳಿಂದ ಭಾರತವನ್ನು ಪ್ರವೇಶ ಮಾಡಿದರು ಇದರಿಂದ ಭಿನ್ನ ಸಂಸ್ಕೃತಿಗಳು ಹುಟ್ಟಲು ಕಾರಣವಾಗಿ.ಈ ಎಲ್ಲಾ ಸಂಕೀರ್ಣ ಸನ್ನಿವೇಶಗಳೊಂದಿಗೆ ಹೆಣೆದುಕೊಂಡ ಭಾರತೀಯ ಸ್ತ್ರೀಯ ಬದುಕಿನ ಸನ್ನಿವೇಶಗಳು ಕೂಡ ಅಷ್ಟೇ ಸಂಕೀರ್ಣವಾದವು.

ಹಾಗಾಗಿಯೇ ಯಾವುದೇ ಒಂದು ಸಂಸ್ಕೃತಿಯಲ್ಲಿ ಸ್ತ್ರೀಪರ ವಿರೋಧಿ ಏಕಮುಖಿ ಸಿದ್ಧಾಂತಗಳು ಸಾಧ್ಯವಿಲ್ಲ. ಅಲ್ಲಿ ಸ್ತ್ರೀಯ ಶೋಷಿತ ಬದುಕಿನಂತೆ ಸ್ವಾಯತ್ತ ನೆಲೆಗಳು ಗೋಚರಿಸುತ್ತವೆ. ಹಾಗಾಗಿಯೇ ಒಂದು ಸಂಸ್ಕೃತಿ ಮಹಿಳೆಯರನ್ನು ಕುರಿತು ಒಂದೇ ದೃಷ್ಟಿಕೋನವನ್ನು ತಳೆದಿರುತ್ತದೆ ಎಂಬುದನ್ನು ಪ್ರತಿ ಸಂಸ್ಕೃತಿಯು ನಿರಾಕರಿಸುತ್ತದೆ. “ವೈದಿಕ ಶಾಹಿ ಹೆಣ್ಣನ್ನ ತೀರಾ ತುಚ್ಚೀಕರಿಸಿದೆ ಎಂದು ಹೊರಟರೆ, ಅಲ್ಲಿ ಅನೇಕ ಕಡೆ ಸ್ತ್ರೀ ಶಕ್ತಿಯ ಸಮೃದ್ಧತೆ ಕಾಣುತ್ತದೆ.ಇಂತಹ ಸಿಡಿ ಮದ್ದುಗಳ ಹುಡುಕಾಟವನ್ನು ಪ್ರತಿ ಸಾಂಸ್ಕೃತಿಕತೆ ಬಹಳ ಮುಖ್ಯವಾಗಿ ಸ್ವೀಕರಿಸಿದೆ.”ಇಲ್ಲಿ ಮಿತಿಗಳಿಲ್ಲವೆಂದಲ್ಲ ಅದರಾಚೆಗೂ ಸ್ವಾಯತ್ತ ಮಹಿಳಾ ಮಾದರಿಗಳ ತಡಕಾಟಕ್ಕೆ ಬಹಳ ಮಹತ್ವವಿದೆ.

ಭಾರತೀಯ ಪಾರಂಪರಿಕ ಮಹಿಳಾ ಬದುಕಿನ ಕುರಿತು ಚರ್ಚಿಸುವಾಗ ಇಲ್ಲಿನ ಸಾಂಸ್ಕೃತಿಕ ಸಂದರ್ಭವು ತುಂಬಾ ಸಂಕೀರ್ಣವಾದುದು ಎಂಬುದನ್ನು ಮರೆಯಬಾರದು ಎನ್ನುತ್ತಾರೆ.ಡಿ.ಆರ್ ನಾಗರಾಜ್. ಮುಂದುವರಿದು “ವೈದಿಕಶಾಹಿ ಚಿಂತನಾ ನೆಲೆಯಲ್ಲಿ ಶೋಷಣೆಗೊಳಗಾದ ಮಹಿಳೆಯರ ಮಾದರಿಗಳನ್ನೇ ಮುಖ್ಯವಾಗಿ ಪರಿಭಾವಿಸುವ ಆಲೋಚನಾ ಕ್ರಮಗಳು ಭಾರತೀಯ ಮಹಿಳಾ ಪರಂಪರೆಯಲ್ಲಿ ಹೆಣ್ಣಿನ ಶೋಷಿತ ಚಿತ್ರಣವನ್ನೇ ಕಟ್ಟಿಕೊಡುವ ಅಪಾಯಗಳಿರುತ್ತವೆ. ಭಾರತದೊಳಗೆ ಕಾಣಸಿಗುವಷ್ಟು ಮಾತೃ ಪ್ರಧಾನ ಸಮಾಜಗಳು, ಮತ್ತು ಮಾತೃ ದೇವತೆಗಳು ಜಗತ್ತಿನ ಯಾವ ಭಾಗದಲ್ಲೂ ಕಾಣಸಿಗುವುದಿಲ್ಲ. ಈ ಕಾರಣದಿಂದಲೇ ಜಗತ್ತಿನ ಯಾವ ಭಾಗದಲ್ಲೂ ಕಾಣ ಸಿಗದ ಸ್ತ್ರೀಸ್ವಾಯತ್ತ ಶಕ್ತಿಯೊಂದು ಭಾರತದಲ್ಲಿ ಕಂಡುಬರುತ್ತದೆ. ವೈದಿಕಶಾಹಿ ಪಿತೃ ಚಿಂತನೆಗಳನ್ನೆ ಮುಖ್ಯವಾಗಿ ಪರಿಭಾವಿಸುವ ಆಲೋಚನೆಗಳು ಹೆಣ್ಣಿನ ಶೋಷಿತ ಸ್ಥಿತಿಯನ್ನೇ ಮುಖ್ಯ ಮಾಡಿಕ್ಕೊಳ್ಳುತ್ತಿರುವುದು ದುರಂತ.ಭಾರತವನ್ನು ಆಕ್ರಮಿಸಿದ ವಸಾಹತುಶಾಹಿಗಳ ಹುನ್ನಾರಗಳೊಳಗೆ ಸ್ತ್ರೀ ಸ್ವಾಯತ್ತ ಶಕ್ತಿಯೊಂದು ವಿಸ್ಮೃತಿಗೆ ಸರಿದಿದ್ದು ಅದನ್ನು ಹೆಕ್ಕಿ ತೆಗೆಯುವ ಮೂಲಕ ಪಿತೃ ವ್ಯವಸ್ಥೆಯ ಹುನ್ನಾರಗಳನ್ನು ಬಯಲುಗೊಳಿಸಿ ಮಹಿಳಾ ಬದುಕನ್ನು ಸಶಕ್ತಗೊಳಿಸಬೇಕಿದೆ” ಎನ್ನುತ್ತಾರೆ. ಹಾಗಾಗಿಯೇ ಪಾರಂಪರಿಕ ಮಹಿಳಾ ಬದುಕನ್ನು ಕುರಿತು ಚರ್ಚಿಸುವಾಗ ಶಿಷ್ಟ ಕಾವ್ಯ, ಪುರಾಣಗಳು ಕಟ್ಟಿ ಕೊಟ್ಟ ಶೋಷಿತ ಚಿತ್ರಣವನ್ನೇ ಕುರಿತು ಚರ್ಚಿಸುವುದಾರಾಚೆ, ಅವೈದಿಕ ನೆಲೆಯ ಸ್ತ್ರೀ ಸಮೃದ್ಧತೆಯ ಹುಡುಕಾಟ ಮಹಿಳಾ ಬದುಕಿನ ಸಶಕ್ತತೆಯ ಸಂಧರ್ಭ ಮುಖ್ಯವೆನಿಸುತ್ತದೆ.

ಭಾರತೀಯ ಸಂದರ್ಭದಲ್ಲಿ ಆರ್ಯಪೂರ್ವಯುಗವೊಂದು ಸ್ತ್ರೀ ಸ್ವಾಯತ್ತ ಶಕ್ತಿಯ ಪ್ರತಿರೂಪವಾಗಿತ್ತೆಂಬ ಅಭಿಪ್ರಾಯವನ್ನು ಹಲವು ವಿದ್ವಾಂಸರು ಇತಿಹಾಸಕಾರರು ವ್ಯಕ್ತಪಡಿಸುತ್ತಾರೆ.ಇದಕ್ಕೆ ಮುಖ್ಯ ಕಾರಣ ಭಾರತದಲ್ಲಿ ಮಾತೃದೇವತೆಗಳ,ಮಾತೃ ಪ್ರಧಾನ ಸಮಾಜಗಳ ಕುರುಹುಗಳಾಗಿದ್ದು ಇವು ಭಾರತದಲ್ಲಿ ಸ್ತ್ರೀಯರಿಗೆ ಇದ್ದರಿಬಹುದಾದ ವಿಶಿಷ್ಟ ಶಕ್ತಿಯನ್ನು ಹೇಳುತ್ತವೆ. ಭಾರತದಲ್ಲಿ ಮಾತೃ ಪ್ರಧಾನ್ಯತೆ ಕೃಷಿಮೂಲದ ದ್ರಾವಿಡರಲ್ಲಿ ಹೆಚ್ಚು ಕಂಡುಬರುತ್ತದೆ. ಒಂದು ಕಾಲದಲ್ಲಿ ಹೆಣ್ಣಿನ ಫಲವಂತಿಕೆಯನ್ನು, ಭೂಮಿಯ ಫಲವಂತಿಕೆಯನ್ನು ಒಂದೇ ರೀತಿಯಲ್ಲಿ ನೋಡಲಾಗುತ್ತಿದ್ದು, ಮಕ್ಕಳನ್ನು ಹೆರುವ ಹೊರುವ ಕಾರಣ ಸ್ತ್ರೀಯನ್ನು ಇಡೀ ಮಾನವ ಕುಲದ ಸ್ವರೂಪವನ್ನಾಗಿ ಕಾಣಲಾಗಿತ್ತು. ತನ್ನ ಜೈವಿಕ ಕಾರಣಗಳಿಗಾಗಿ ಮನೆಯಲ್ಲಿ ಉಳಿಯಬೇಕಾದ ಸಂಧರ್ಭದಲ್ಲಿ ಸಸ್ಯ ಜನ್ಯ ಆಹಾರ ಉತ್ಪಾದನೆಗೆ ತೊಡಗಿ ತನ್ನ ಪರಿವಾರವನ್ನು ಸಲಹಲು ತೊಡಗಿದಳು, ಈ ಕಾರಣದಿಂದಲೇ ಅವಳನ್ನು ಕೃಷಿಗೆ ಮೊದಲಿಗಳಾಗಿ ಗುರುತಿಸಲಾಗುತ್ತದೆ.

ಮುಂದುವರಿದು ಮಹಿಳೆಯ ಸ್ಥಾನ ಹಿರಿದಾಗಿದ್ದರ ಜೊತೆಯಲ್ಲಿಯೇ ಭೂಮಿಯ ಒಡೆತನವು ಅವಳಿಗೆ ದೊರಕಿತು. “ಸಹಜವಾಗಿಯೇ ಹೆಣ್ಣು ಕೃಷಿಯನ್ನು ಮಾಡುತ್ತಿದ್ದರಿಂದ ಆರ್ಥಿಕವಾದ ಅಂಶಗಳನ್ನು ತನ್ನ ವಶದಲ್ಲಿಟ್ಟುಕೊಳ್ಳಲು ಸಹಾಯಕವಾಗಿರಬಹುದು.ರೀತಿ ರಿವಾಜುಗಳನ್ನು ನಿರ್ಧರಿಸುವುದು ಅವಳೇ. ಹಾಗಾಗಿ ಮಹಿಳಾ ಪ್ರಧಾನವಾದ ಸಮಾಜದ ನಿರ್ಮಾಣವಾಗಿರಬಹುದು.”ಈ ಹಿನ್ನಲೆಯಲ್ಲಿಯೇ ಭಾರತದ ಮಟ್ಟಿಗೆ ಮಾತೃ ಪ್ರಧಾನ ಸಮಾಜಗಳು ರೂಪುಗೊಂಡು ಮಾತೃ ಪ್ರಧಾನ ಆಚರಣೆಗಳು ಹುಟ್ಟಿರಬಹುದೆಂಬ ಊಹೆಯನ್ನು ಹಲವು ವಿದ್ವಾಂಸರು ಮಂಡಿಸುತ್ತಾರೆ.

ಸ್ತ್ರೀ ಪ್ರಧಾನವಾದ ಸಮಾಜವನ್ನು ಹೊಂದಿದ್ದ ಭಾರತದ ಸಂದರ್ಭದಲ್ಲಿ ಮಾತೃಮೂಲೀಯ ಕುಟುಂಬ ಪದ್ಧತಿ ಸ್ತ್ರೀಯ ಸ್ವಾಯತ್ತ ಶಕ್ತಿಯ ಪ್ರತಿರೂಪವಾಗಿದೆ. ಭಾರತದ ಆರ್ಯಪೂರ್ವ ಸಮಾಜದ ಸ್ಥಿತಿಗತಿಗಳನ್ನು ಅಧ್ಯಯನ ಮಾಡಲು ಯಾವುದೇ ಆಕಾರಗಳಿಲ್ಲ. ಹಿಂದಿನ ಹಲವಾರು ಬುಡಕಟ್ಟುಗಳ ಸಮಾಜವನ್ನು ನೋಡಿದಾಗ ಮಾತೃ ಪ್ರಧಾನ ಸಮಾಜದ ಹಲವಾರು ಅಂಶಗಳು ಕಂಡುಬರುತ್ತವೆ. ಆರ್ಯ ಅಥವಾ ವೈದಿಕ ಪ್ರಭಾವ ಇದ್ದಾಗಲೂ ಸಹ ಇಂದಿಗೂ ಮಾತೃ ಪ್ರಧಾನ ಸಮಾಜದ ಬೇರುಗಳನ್ನು ಹಲವಾರು ಬುಡಕಟ್ಟುಗಳು ಉಳಿಸಿಕೊಂಡು ಬಂದಿರುವ ಹಾಗೆ ಕಂಡುಬರುತ್ತದೆ.

ಉತ್ತರ ಭಾರತಕ್ಕಿಂತ ದಕ್ಷಿಣ ಭಾರತದ ಹಲವಾರು ಜನಾಂಗಗಳಲ್ಲಿ ಈ ಮಾತೃ ಪ್ರಧಾನತೆಯನ್ನು ಕಾಣಬಹುದಾಗಿದೆ.“ಕೇರಳಕ್ಕೆ ಹೊಂದಿಕೊಂಡಂತೆ ಇರುವ ರಾಜ್ಯಗಳಲ್ಲಿ ಈ ಬಗೆಯ ಸ್ತ್ರೀ ಪ್ರಧಾನ ಸಮಾಜಗಳು ಹಾಗೂ ಅವರಿಂದಲೇ ಆಡಳಿತ ನಡೆಯುತ್ತದೆ ಎಂದು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಮೆಗಸ್ತನಿಸ್ ಕೂಡ ಉಲ್ಲೇಖಿಸುತ್ತಾನೆ. ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಈ ಮಾತೃ ಪ್ರಧಾನವಾದ ಸಮಾಜವು ಆಳವಾಗಿ ಬೇರು ಬಿಟ್ಟಿರುವುದು ಇಂದಿಗೂ ಕಂಡುಬರುತ್ತದೆ. ಇಲ್ಲಿ ಕಂಡುಬರುವ ಮದುವೆಯ ಆಚರಣೆಗಳು, ಕುಟುಂಬ ವ್ಯವಸ್ಥೆಗಳು, ಹಬ್ಬದ ಆಚರಣೆಗಳು, ಸಾಬೀತುಪಡಿಸುತ್ತವೆ. ಅಲ್ಲದೆ ಗ್ರಾಮ ದೇವತೆಗಳು ಇದನ್ನು ಪುಷ್ಟೀಕರಿಸುತ್ತವೆ. ಆದಾಗಿಯೂ ಆನಂತರದಲ್ಲಿ ಭಾರತವನ್ನು ಪ್ರವೇಶಿಸಿದ ವಸಾಹತುಶಾಹಿಗಳು ಭಾರತದಲ್ಲಿಯ ಮಾತೃ ಪ್ರಾಧಾನ್ಯತೆಯ ಮೇಲೆ ದಾಳಿ ಮಾಡಿ ಪುರುಷ ಪ್ರಧಾನ್ಯ ವ್ಯವಸ್ಥೆಯನ್ನು ಸ್ಥಾಪಿಸಿರುವುದು ಹಲವಾರು ಸಂಶೋಧನೆಗಳು ಮತ್ತು ವಿದ್ವಾಂಸರ ಹೇಳಿಕೆಗಳ ಹಿನ್ನೆಲೆಯಲ್ಲಿ ಗೋಚರಿಸುತ್ತದೆ.

ಆರ್ಯ ಪೂರ್ವಯುಗದಲ್ಲಿ ಬೇಟೆ ಕೃಷಿಯಾಧಾರಿತ ಕುಟುಂಬ ವ್ಯವಸ್ಥೆಯಲ್ಲಿ ಕೇಂದ್ರವಾಗಿದ್ದ ಹೆಣ್ಣು ನಾಗರೀಕತೆಯ ವಿಕಾಸದ ಹಾದಿಯಲ್ಲಿ, ಪುರುಷ ಪ್ರಧಾನ್ಯತೆಯ ಪಶುಪಾಲಕರಾದ ಆರ್ಯರ ಪ್ರಭಾವಳಿಗಳೊಳಗೆ, ಪಶುಪಾಲನೆ ಆಸ್ತಿ–ಪಾಸ್ತಿ ಸಂಗ್ರಹ ಶುರುವಾದ ನಂತರದಲ್ಲಿ ತನ್ನ ಸ್ಥಾನಮಾನಗಳನ್ನು ಕಳೆದುಕೊಂಡಳು. ಇದರ ಪರಿಣಾಮ ಹೊರಗಿನ ಆರ್ಥಿಕ, ಸಾಮಾಜಿಕ ಅಧಿಕಾರ ಪುರುಷ ಸಾಮ್ಯಕ್ಕೆ ಒಳಪಟ್ಟಿತು.ಈ ಹಿನ್ನೆಲೆಯಲ್ಲಿ ಆರ್ಥಿಕ, ಸಾಮಾಜಿಕ ಸ್ಥಾನಮಾನ ಕಳೆದುಕೊಂಡ ಹೆಣ್ಣು ಗೃಹಬಂಧಿಯಾದಳು.

ಮುಂದುವರಿದು ಅಪಾರ ದುಡಿಮೆಯ ಶಕ್ತಿ ಮತ್ತು ಸಂತಾನ ಸಾಧ್ಯತೆಯ ಸಾಧನವಾಗಿರುವ ಮಹಿಳೆಯರು ತಮ್ಮ ಅಧೀನದಲ್ಲಿಯೇ ಶಾಶ್ವತವಾಗಿ ಉಳಿಯುವಂಥಾಗಲು ಪುರುಷ ಪ್ರಧಾನ ಸಂಸ್ಕೃತಿಯು ವಿವಿಧ ಸಾಮಾಜಿಕ ಮತ್ತು ಧಾರ್ಮಿಕ ಮಜಲುಗಳನ್ನು ಅಭಿವೃದ್ಧಿಪಡಿಸಿತು.ನಾಗರಿಕ ಬದುಕಿನ ಉಚ್ಚ ಪ್ರತಿಭೆಯು ಆವಿಷ್ಕಾರವೆನಿಸಿಕೊಂಡಿರುವ ಧರ್ಮ, ಸಾಹಿತ್ಯ, ಕಲೆ, ರಾಜಕೀಯ, ಎಲ್ಲೆಲ್ಲೂ ಪುರುಷ ಪ್ರಧಾನತೆಯನ್ನು ವಿಜೃಂಭಿಸಲಾಯಿತು.ಪುರುಷ ಪ್ರಧಾನತೆ ಸಂಸ್ಕೃತಿಯ ನಂಬಿಕೆಗಳನ್ನು ಪೋಷಿಸುವಂತಹ ತತ್ವ–ಸಿದ್ಧಾಂತಗಳನ್ನು ಕಟ್ಟಲಾಯಿತು.ಕಟ್ಟುನಿಟ್ಟಿನ ಸಂಪ್ರದಾಯಗಳನ್ನು ಅವಳ ಮೇಲೆ ಹೇರಲಾಯಿತು.ಮತ್ತು ಇವುಗಳನ್ನು ಹಲವಾರು ಶಾಸ್ತ್ರ, ಧರ್ಮಗ್ರಂಥಗಳಲ್ಲಿ, ಕಾವ್ಯ–ಪುರಾಣಗಳಲ್ಲಿ ಬೆರೆಸಲಾಯಿತು. ಹೀಗೆ ವಸಾಹತುಶಾಹಿ ಹುನ್ನಾರಗಳು ನಮ್ಮ ಬಹುರೂಪಿ ಸಾಂಸ್ಕೃತಿಕ ವಿನ್ಯಾಸವನ್ನು ಮುಚ್ಚಿ ಹಾಕಿದ್ದಾಗ್ಯೂ ಬೇರೆ ಬೇರೆ ಸಮಾಜಗಳ ಸ್ತರಗಳಲ್ಲಿ ಸ್ತ್ರೀ ಸ್ವಾಯತ್ತತೆ ಜೀವಂತವಾಗಿದ್ದು ಅದು ವೈದಿಕ ನೆಲೆಯ ವೇದ, ಕಾವ್ಯ ಪುರಾಣ, ಮತ್ತು ಅವೈದಿಕ ನೆಲೆಯ ಜಾನಪದ, ತತ್ವಪದಗಳ ಸಾಹಿತ್ಯ ನಿರ್ಮಿತಿಯಲ್ಲಿ ಕ್ವಚಿತ್ತಾಗಿ ಕಾಣಸಿಗುತ್ತದೆ. ಭಾರತೀಯ ಮಹಿಳಾ ಪರಂಪರೆಯನ್ನು ಕುರಿತು ಚರ್ಚಿಸುವ ಸಂದರ್ಭ ಇಂತಹ ಸ್ವಾಯತ್ತ ನೆಲೆಗಳ ಹುಡುಕಾಟ ಮುಖ್ಯವೆನಿಸುತ್ತದೆ, ಹಿಡಿಯುತ್ತದೆ.

ಯಾರಾದರೂ ಭಾರತೀಯ ಮಹಿಳೆಯರನ್ನು ಕುರಿತು ಅಧ್ಯಯನ ಮಾಡಬೇಕೆಂದಿದ್ದರೆ ಮತ್ತು ಅವರ ಧ್ವನಿಗಳನ್ನು ಕೇಳಬೇಕೆಂದಿದ್ದರೆ ಅವರು ಹೆಂಗಸರು ಹೇಳುವ ಕಥೆಗಳು ಹಾಡು ಹಸೆಗಳು ಒಡಪುಗಳು ಮತ್ತು ತೊಂಡಿ ಸಂಪ್ರದಾಯದಲ್ಲಿ ಜೀವಂತವಾಗಿ ಉಳಿದುಕೊಂಡಿರುವ ಜಾಣ್ನುಡಿ, ಆಟಗಳು ಮತ್ತು ಜಾನಪದ ಪರಂಪರೆಯ ದೇವತೆಗಳ ಪೌರಾಣಿಕತೆ ಇವು ಎಲ್ಲವುಗಳತ್ತ ತಮ್ಮ ಗಮನ ಕೇಂದ್ರೀಕರಿಸಬೇಕಾಗುತ್ತದೆ. ಎನ್ನುತ್ತಾರೆ ಎ.ಕೆ. ರಾಮಾನುಜನ್. ಭಾರತದ ಬಹುರೂಪಿ ಸಂಸ್ಕೃತಿ ಮಾತೃರೂಪಿಯಾಗಿದ್ದು ಸಾಮಾಜಿಕ ಸಾಂಸ್ಕೃತಿಕ ಸ್ತರದಲ್ಲಿ ಅದು ಈ ಹೊತ್ತಿಗೂ ಜೀವಂತವಾಗಿದ್ದು, ಮೌಖಿಕವಾಗಿ ಹರಿದು ಬಂದ ಜಾನಪದ ಸಾಹಿತ್ಯದಲ್ಲಿ ಸ್ತ್ರೀ ಶಕ್ತಿಯ ಗಾಢವಾದ ಚಹರೆಯನ್ನು ಗುರುತಿಸಬಹುದಾಗಿದೆ. ವಸಾಹತುಶಾಹಿಗಳು ಕಟ್ಟಿಕೊಟ್ಟ ಸಂಸ್ಕೃತಿಗಳ ಆಚೆಗೂ ಒಂದು ಪ್ರತಿ ಸಾಂಸ್ಕೃತಿಕ ದೃಷ್ಟಿಯೊಂದು ಭಾರತೀಯ ಸಂದರ್ಭದಲ್ಲಿ ಮಹಿಳಾ ಸಶಕ್ತತೆಯ ಸಂದರ್ಭ ಬಹಳ ಮುಖ್ಯವೆನಿಸುತ್ತದೆ. ಆ ಮೂಲಕ ಅನೇಕ ಬುಡಕಟ್ಟು ಜಾತಿ ಜನಾಂಗಗಳ ಮೌಖಿಕ ಸಾಹಿತ್ಯವನ್ನು ಪರಿಶೀಲಿಸುವುದರ ಮೂಲಕ ಇಂದು ಕಳೆದು ಹೋಗಿರುವ ಮಹಿಳಾ ಅಸ್ಥಿತ್ವವನ್ನು ಕಂಡುಕೊಳ್ಳಬೇಕಾಗಿದ್ದು ಆ ಮೂಲಕ ಮಹಿಳಾ ಬದುಕನ್ನ ಸ್ವಶಕ್ತಗೊಳಿಸಬೇಕಿದೆ.

ವೈದಿಕ ಪುನರುತ್ಥಾನದ ಕಲ್ಪನೆ ಆಗಲಿ ಜಾನಪದಕ್ಕೆ ಮರಳಬೇಕೆಂಬ ವಾದವಾಗಲಿ ಅಸಮಗ್ರ ಗ್ರಹಿಕೆಯಾಗಿದ್ದು, ಮಾತ್ರ ಪ್ರಧಾನ ಸಮಾಜದ ಕೆಲವು ಎಳೆಗಳಾಗಲಿ ಪುರಾಣ ಮೌಕಿಕ ಪರಂಪರೆಗಳ ವೈಭವೀಕರಣಗಳಾಗಲಿ, ರಾಜಕೀಯ ಹೇಳಿಕೆ ಭಾಷಣಗಳು ಆಗುತ್ತದೆಯೇ ಹೊರತು ಅದರಿಂದ ಸ್ತ್ರೀವಾದ ಚಳುವಳಿಗೆ ಬೇಕಾದ ಆಲೋಚನಾ ಕ್ರಮಗಳು ಸಿಗಲಾರವು ಎಂಬ ಪೂರ್ವ ಗ್ರಹಗಳೊಟ್ಟಿಗೆ ಇಂತಹ ನಿರ್ಧಾರಗಳಿಗೆ ಕಾರಣವಾಗಿ, ಇದುವರೆಗೂ ಜನಪದ ಜಗತ್ತು ಅಲಕ್ಷಕ್ಕೆ ಒಳಗಾಗಿತ್ತು". ಎನ್ನುವ ಗಾಯತ್ರಿ ನಾವಡ ಲಿಖಿತವನ್ನಷ್ಟೇ ಪ್ರಮಾಣ ಎಂದು ನಂಬುವ ಚಿತ್ತ ಭ್ರಮೆ ಯಿಂದ ಬಿಡುಗಡೆ ಪಡೆದು ಇಂತಹ ಮಿತಿಗಳ ಆಚೆಗೆ ಪ್ರತಿ ಸಾಂಸ್ಕೃತಿಕ ದೃಷ್ಟಿಯನ್ನು ಕಟ್ಟಿಕೊಳ್ಳುವ ತುರ್ತು ಇಂದಿನದು ಎನ್ನುತ್ತಾರೆ..

ಪ್ರತಿ ಸಾಂಸ್ಕೃತಿಕ ಹುಡುಕಾಟ ಲಿಖಿತ ಸಾಹಿತ್ಯದಷ್ಟೇ ಮೌಖಿಕ ಆಧಾರಗಳಿಗೂ ಪ್ರಾಮುಖ್ಯತೆ ನೀಡುತ್ತದೆ. ಶಿಷ್ಟ ಸಾಹಿತ್ಯ ಕಂಡದ್ದಕಿಂತ ಬಹಳ ಭಿನ್ನವಾದ ಸ್ತ್ರೀ ಲೋಕವೊಂದು ನಮಗೆ ಜನಪದ ಮಹಾಕಾವ್ಯಗಳಲ್ಲಿ ಕಾಣಸಿಗುತ್ತದೆ. ಅದರಲ್ಲೂ ವಿಶೇಷವಾಗಿ ಮಲೆ ಮಹದೇಶ್ವರ, ಮಂಟೇಸ್ವಾಮಿ, ಜುಂಜಪ್ಪ ಮಹಾ ಕಾವ್ಯಗಳಲ್ಲಿ ಶ್ರೀ ಸ್ವಾಯತ್ತ ಸ್ತ್ರೀ ಸಮೃದ್ಧತೆಯ ನೆಲೆಗಳು ಗೋಚರಿಸುತ್ತವೆ. ಮಂಟೇಸ್ವಾಮಿ ಕಾವ್ಯದಲ್ಲಿ ಶಿಷ್ಟ ಕಾವ್ಯಕ್ಕೆ ವಿರುದ್ಧವಾಗಿ ಹೆಣ್ಣನ್ನು ಜಗತ್ ಸೃಷ್ಟಿಯ ಮೂಲವನ್ನಾಗಿ ಕಾಣಲಾಗಿದೆ. "ಜನಪದ ಮಹಾಕಾವ್ಯಗಳನ್ನು ಸ್ವೀಕರಿಸಬೇಕಾಗಿರುವುದು ಅದನ್ನ ಸಂಪೂರ್ಣ ನಿಜವೆಂದು ಅಥವಾ ಸುಳ್ಳೆಂದು ಭಾವಿಸುವ ರೀತಿಯಲ್ಲಲ್ಲ ಬದಲಾಗಿ ಈ ರೀತಿಯ ಸಂಗತಿಗಳನ್ನು ಯಾಕೆ ಒಂದು ಸಮುದಾಯ ನಿರ್ಮಿಸಿತು ಎನ್ನುವುದರ ಅನ್ವೇಷಣೆಯ ರೂಪದಲ್ಲಿ. ಹೀಗಾಗಿ ಇಂತಹ ಇತಿಹಾಸದ ಸಂಶೋಧನೆಯಲ್ಲಿ ಅಧ್ಯಯನದ ಗುರಿಯು ಘಟನೆಗಳ ಸತ್ಯದ ಶೋಧ ಆಗುವುದಿಲ್ಲ ಬದಲಾಗಿ ಸಮುದಾಯದ ಮನೋಧರ್ಮ ಯೋಜನೆಗಳ ಅನ್ವೇಷಣೆ ಆಗುತ್ತದೆ. ಇಲ್ಲಿ ಸತ್ಯದ ಹುಡುಕಾಟದ ದೃಷ್ಟಿ ಚರಿತ್ರೆಯಲ್ಲಿ ಇದು ಸಂಭವಿಸಿದೆಯೇ ಇಲ್ಲವೇ ಎನ್ನುವ ಚರ್ಚೆಯ ಕಡೆಗಲ್ಲ ಸಮುದಾಯ ಒಂದು ಇಂತಹ ಸಂಗತಿಗಳನ್ನು ಏಕೆ ಹುಟ್ಟು ಹಾಕಿದೆ. ಮತ್ತು ಅವು ವರ್ತಮಾನದ ಬದುಕಿಗೆ ಎಷ್ಟರ ಮಟ್ಟಿಗೆ ಪ್ರಸ್ತುತ ಎನ್ನುವುದು ಮುಖ್ಯವಾಗುತ್ತದೆ. ಅಮೌಖಿಕ ಆಕರಗಳ ಬಗೆಗೆ ಇರುವ ನಿರಾಕರಣೆಯಾಚೆಗೂ ಇಂತಹ ಪ್ರತಿ ಸಾಂಸ್ಕೃತಿಕ ಹುಡುಕಾಟ ಲಿಖಿತ ಸಾಹಿತ್ಯದಷ್ಟೇ ಮೌಖಿಕ ಆಧಾರಗಳಿಗೂ ಪ್ರಾಮುಖ್ಯತೆ ನೀಡುತ್ತದೆ. ಮಧ್ಯಮ ಮತ್ತು ಮೇಲ್ಮಧ್ಯಮ ಜನರನ್ನ ಮಾತ್ರ ಕೇಂದ್ರಿಸಿಕೊಳ್ಳದೆ ವಿಶೇಷವಾಗಿ ಕೆಳ ವರ್ಗದ ಸ್ತ್ರೀ ಚೈತನ್ಯಗಳನ್ನ ಕುರಿತು ಚಿಂತಿಸುತ್ತದೆ." ಹಾಗಾಗಿ ಭಾರತದ ಬಹುಸ್ತರಿಯ ಸಾಂಸ್ಕೃತಿಕ ನೆಲೆಯಲ್ಲಿ ವೇದಕಾಲಿನ, ಗರತಿಯ ಹಾಡಿನ ಮಹಿಳೆಯರಷ್ಟೇ. ಸಂಕಮ್ಮ, ಬೇವಿನಹಟ್ಟಿ ಕಾಳಮ್ಮ, ಚಿನ್ನಮ್ಮ, ದೊಡ್ಡಮ್ಮಂದಿರು ಮುಖ್ಯರಾಗಬೇಕಿದೆ.

ಜುಂಜಪ್ಪನ ಕಾವ್ಯದ ಗೌರಸಂದ್ರದ ಮಾರಿ ಜುಂಜಪ್ಪನ ಅಸ್ತಿತ್ವವನ್ನು ಸ್ಥಾಪಿಸುವ ನಿಟ್ಟಿನಲ್ಲಿ ಬಹಳ ಮುಖ್ಯವೆನಿಸುತ್ತಾಳೆ. ಜುಂಜಪ್ಪ ದೈವವಾಗಲು ಹೊರಟ ಪುರುಷ ಆತನನ್ನ ದೈವವಾಗಿಸುವಲ್ಲಿ ಈಕೆಯ ಪಾತ್ರ ಹಿರಿದು. ಕಣಿ ಹೇಳುವ ಕೊರವಂಜಿಯಾಗಿ ಕಾವ್ಯದಲ್ಲಿ ಕಾಣ ಸಿಗುವ ಗೌರಸಂದ್ರದ ಮಾರಿ, ಹಟ್ಟಿಯ ಗೌಡ ಮತ್ತು ಪೂಜಾರಿಗೆ ಕಣೆ ಹೇಳಲು ಹೋದದ್ದು ಗೌಡ ಮತ್ತು ಪೂಜಾರಿ ಕೊರವಂಜಿ ವೇಷದ ಮಾರಿಗೆ ಏಳು ಹಿಡಿಯವನ್ನು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಕೊಡುತ್ತಾರೆ. ಆದರೆ ಮಾರಿ ಮಾತ್ರ ಇದನ್ನು ಒಲ್ಲಳು ಆಕೆಗೆ ಬೇಕಾಗಿರುವುದು ಮೂರು ತೂತುಬಟ್ಲು ಹಾಗಾಗಿ ಆಕೆ ಹೇಳುತ್ತಾಳೆ.

ಎ ದಗಡಿ ಮಕ್ಕಳ್ರಾ ನಿಮ್ಮ ಹೊನ್ನು ನನ್ನ ಅರಮನೆ ಒಳಗೆ ತಗ್ಗುಲ್ಲುಳ್ಳಿ ಮಗ್ಗಲು ರಾಗಿ ಆಗಿ ಬಿತ್ತೈತೆ, ಬಂಗಾರದ ಹೊನ್ನು ನನಗೇನು ಬೇಕು ಹೋಗ್ರಾಲಾ ತಾಂಬ್ರದವು ಮೂರು ತೂತು ಬಟ್ಲು ತಂದು ಕಣಿ ಕೇಳ ಲಿಕ್ಕಿದರೆ ಹೇಳ್ತೀನಿ ಕಣೇಯ. "ಗೌರಸಂದ್ರದ ಮಾರಿಯ ಈ ಮಾತುಗಳು ಇಡೀ ಒಂದು ವ್ಯವಸ್ಥೆಯ ತಿಳುವಳಿಕೆಯನ್ನೇ ಬಿತ್ತರಿಸುತ್ತದೆ.ಸ್ತ್ರೀ ಮನಸ್ಸಿಗೆ ಅವಳ ಚೈತನ್ಯಕ್ಕೆ ಬೆಲೆ ಕಟ್ಟುವುದನ್ನು ವಿರೋಧಿಸುವ ಆಕೆ ನೀವು ಕೊಡುವ ಹಣ ನನ್ನ ಹತ್ತಿರವು ಇದೆ.ಅದು ಬಳಸಲಾಗದೆ ಮುಕ್ಕು ಹಿಡಿದಿದೆ ಎನ್ನುವ ಮಾತಿನಲ್ಲಿ ಆರ್ಥಿಕ ವ್ಯವಸ್ಥೆಯ ಮೇಲೆ ವ್ಯಕ್ತವಾದ ಸ್ತ್ರೀಯ ಅಧಿಕಾರವನ್ನು ಸೂಚಿಸುತ್ತದೆ. ಹಾಗೆಯೇ ತೂತು ಬಟ್ಲು ಕೇಳುವಲ್ಲಿ ಕೆಳ ವರ್ಗಗಳ ಆರ್ಥಿಕ ವ್ಯವಸ್ಥೆಯನ್ನು ಮೌಲಿಕರಿಸುವ ಪ್ರಯತ್ನವಿದೆ. ಜೊತೆಗೆ ಹೆಣ್ಣಿಗೆ ಇರಬಹುದಾದ ಸಮಷ್ಟಿ ಪ್ರಜ್ಞೆಯು ಇಲ್ಲಿ ಗೋಚರಿಸುತ್ತದೆ.

ಇದೇ ಕಾವ್ಯದಲ್ಲಿ ಕಂಡು ಬರುವ ತಾಳೆದುರ್ಗಿ ಮತ್ತಷ್ಟು ಪ್ರಬಲಳಾಗಿ ಜುಂಜಪ್ಪನನ್ನ ಮುಖಾಮುಖಿಯಾಗುತ್ತಾಳೆ. ಇಡೀ ಕಾವ್ಯದಲ್ಲಿ ಕಾಣ ಸಿಗುವ ಎಲ್ಲಾ ಹೆಣ್ಣು ದೇವತೆಗಳಿಗಿಂತ ಬಹಳ ಶಕ್ತಿಶಾಲಿಯಾದ ಈಕೆಗೆ ಜುಂಜಪ್ಪ ಹೆದರಿ ಬಿಡುತ್ತಾನೆ. ಕಾವ್ಯದಲ್ಲಿ ಧೀಮಂತ ಸೋಲಿಲ್ಲದ ಸರದಾರನಾಗಿ ಕಂಡುಬರುವ ಆತ ಈಕೆಗೆ ಹೆದರಿ ಮರವನ್ನೇರಿ ಕುಳಿತುಕೊಳ್ಳುತ್ತಾನೆ.

ಆಗ ಜುಂಜಪ್ಪನನ್ನ ಕುರಿತು ತಾಳೆ ದುರ್ಗಿ ಹೇಳುವ ಈ ಮಾತುಗಳು ಮಾರ್ಮಿಕವಾಗಿವೆ. "ನಿನ್ನೊಂಬತ್ತು ಜನ ರಂಗಪ್ಪಗಳವುರ ವುರ ಗುಡಿಯೊಳಗೆ ಎತ್ತೆತ್ತ ಮಕ ನಾಗಿ ಕುಂತವರೋ. ಅತ್ತ ಮಕನಾಗಿ ನನ್ನ ಪಾದಕ್ಕೆ ಅಡ್ಡ ಬಿದ್ದವರೇ ಯಾಕವರ ಪಾದಗಳನ್ನೆಲ್ಲ ನೆನೆಸುತ್ತೀಯಾ ಕಾಡುಗೊಲ್ಲ ನೆನೆಸ್ ನನ್ನ ಪಾದ ಮೂರುಗಳಿಗೆ ಬಿಡ್ತೀನಿ." ಎಲ್ಲಾ ಪುರುಷದೈವಗಳನ್ನು ತನ್ನ ಅಧೀನದಲ್ಲಿ ಇಟ್ಟುಕೊಂಡಿರುವ ಪ್ರಚನ್ನ ಶಕ್ತಿಯಾಗಿ ತಾಳಿದುರ್ಗಿಯಲ್ಲಿ ಪ್ರಸ್ತುತ ಕಾವ್ಯದಲ್ಲಿ ಕಾಣಿಸುತ್ತಾಳೆ. ಸ್ತ್ರೀ ದೇವತೆಯೊಬ್ಬಳ ಅಸ್ತಿತ್ವದ ಗಟ್ಟಿತನ, ಪ್ರಭಾವದ ವ್ಯಾಪ್ತಿ ಇಲ್ಲಿ ಸ್ಪಷ್ಟವಾಗುತ್ತದೆ. ಕೊನೆಗೆ ಪುರ್ಲಳ್ಳಿ ಭೂತಪ್ಪನ ಸಹಾಯದಿಂದ ತಾಳದುರ್ಗಿಯನ್ನ ಮಣಿಸುವ ಜುಂಜಪ್ಪ. ಅವಳನ್ನ ಸುಟ್ಟು ಹಾಕುತ್ತಾನೆ. ಸ್ತ್ರೀ ದೇವತೆಯಾದ ತಾಳೆದುರ್ಗಿಯನ್ನು ಮಣಿಸುವ ಕೊಲ್ಲುವ ಮೂಲಕ, ಪುರುಷ ಶಕ್ತಿಗಳು ತಮ್ಮ ಹಿತಾಸಕ್ತಿಯನ್ನು ಸ್ಥಾಪಿಸಿಕೊಂಡಿರುವುದನ್ನ ಆ ಮೂಲಕ ಪುರುಷಾಧಿಪತ್ಯವನ್ನು ಅಸ್ತಿತ್ವಕ್ಕೆ ತಂದಿರುವುದನ್ನು ಪ್ರಸ್ತುತ ಪ್ರಸಂಗದಲ್ಲಿ ಕಾಣಬಹುದು.ಸ್ತ್ರೀ ಪ್ರಾಧಾನ್ಯತೆ ಕಳಚಿ ಹೋದುದರ ಸಂಕೇತವಾಗಿ ದುರ್ಗಿಯ ಸಾವನ್ನಿಲ್ಲಿ ಕಾಣಬಹುದು. ಇಂಥದ್ದೇ ಸ್ತ್ರೀ ಸ್ವಾಯತತೆಯನ್ನು ನಾಶ ಮಾಡುವ ಪ್ರಸಂಗ ಮಲೆಮಾದೇಶ್ವರ ಕಾವ್ಯದಲ್ಲಿಯೂ ಬರುತ್ತದೆ.

ಮಹದೇಶ್ವರ ಕಾವ್ಯದಲ್ಲಿ ಬರುವ ಬೇವಿನಹಟ್ಟಿ ಕಾಳಮ್ಮನಲ್ಲಿ ಗಂಡಿನ ಪ್ರಾಮುಖ್ಯತೆ ಏನೂ ಇಲ್ಲ ಎಂಬಷ್ಟರ ಮಟ್ಟಿಗೆ ಮಾತೃ ಮೂಲ ಕುಟುಂಬದ ಲಕ್ಷಣಗಳು ಎದ್ದು ಕಾಣುತ್ತವೆ. "ಬೇವಿನ ಹಟ್ಟಿ ಕಾಳಮ್ಮ ನಮ್ಮ ಇಡೀ ದಕ್ಷಿಣ ಭಾರತದಲ್ಲಿ ಚಾಲ್ತಿಯಲ್ಲಿದ್ದ ಮಾತೃ ಪ್ರಧಾನತೆಯ ಪ್ರತೀಕವಾಗಿ ಇಲ್ಲಿ ವಿಜೃಂಭಿಸುತ್ತಾಳೆ. ಕೃಷಿ ಸ್ತ್ರೀಯ ಅನ್ವೇಷಣೆ ಎಂದು ಹೇಳುತ್ತಾರೆ ಈ ಮಾತಿನ ಯಥಾರ್ಥತೆ ಕಾಳಮ್ಮನಲ್ಲಿ ಕಾಣಿಸುತ್ತದೆ ಎನ್ನುತ್ತಾರೆ ಜಾನಪದ ವಿದ್ವಾಂಸರು. ಗಂಡನಾದ ಗೆಂಡೆಗೌಡ ಕಾಳಮ್ಮನ ದನ ಕುರಿ ಹಾಡು ಎಮ್ಮೆಗಳನ್ನು ಮೇಯಿಸಿಕೊಂಡು ಸದಾ ಹೊರಗೆ ಬಿದ್ದಿರುವ ಜೀತಗಾರನಂತೆ ಕಂಡುಬರುತ್ತಾನೆ. ಅವನು ನೆಪ ಮಾತ್ರಕ್ಕೆ ಕಾಳಮ್ಮನ ಗಂಡ ಎಂಬಂತೆ ಆಗೀಗ ಕಾಳಮ್ಮನ ಬಾಯಿಂದಲೇ ನಮಗೆ ಗೊತ್ತಾಗುತ್ತದೆ ಹೊರತು ನೇರವಾಗಿ ಪಾತ್ರವಾಗಿ ಗೋಚರಿಸುವುದೇ ಇಲ್ಲ. ಹಾಗೆಯೇ ಕಾಳಮ್ಮನ ಸೊಸೆಯರ ಪಾತ್ರವೂ ಇಲ್ಲಿ ಮುಖ್ಯವಾಗಿ ಬರುತ್ತದೆ. ಆದರೆ ಅವರ ಗಂಡಂದಿರ ಹೆಸರು ಕೂಡ ಪ್ರಸ್ತಾಪವಾಗುವುದಿಲ್ಲ ಇಡೀ ವಹಿವಾಟು ಹೆಂಗಸರದ್ದೆ ವರ್ಷದ ಬಹುತೇಕ ಭಾಗವನ್ನು ಅಲೆಮಾರಿಗಳಂತೆ ಕಳೆಯುತ್ತಿದ್ದ ಗಂಡಸರು ಬೇಟೆಯಾಡಿ ಆಹಾರ ಸಂಗ್ರಹಣೆಯಲ್ಲಿ ಮಾತ್ರ ತೊಡಗಿಸಿಕೊಳ್ಳುತ್ತಿದ್ದು ಕಾಣುತ್ತದೆ.

ಭೂಮಿಯ ಒಡೆತನವನ್ನು ಹೊಂದಿ ಎಳ್ಳನ್ನು ಬಿತ್ತಿ ಬೆಳೆಯುವ ಮೂಲಕ ಅಪಾರ ವಹಿವಾಟಿನ ಮೂಲಕ ಆರ್ಥಿಕ ಸಬಲತೆಯನ್ನು ಸಾಧಿಸಿದ ಹೆಣ್ಣಾದ ಕಾಳಮ್ಮ.ತನ್ನ ಕುಟುಂಬದಲ್ಲಿ ಗೌರವದ ಸ್ಥಾನಕ್ಕೆ ಏರಿದವಳು. ಇಂಥ ಅಪಾರ ವಹಿವಾಟಿನ ಕಾಳಮ್ಮ ಕೃಷಿಯನ್ನು ಆ ಮೂಲಕ ತನ್ನ ಕಾಯಕವನ್ನು ದೈವ ಎಂದು ನಂಬಿದವಳು. ಮಹಾಸ್ವಾಭಿಮಾನಿಯಾದ ಕಾಳಮ್ಮನ ಕೆಣಕುವ ಗಂಡುಗಳು ಉಂಟೆ ಎಂಬ ಸಂದರ್ಭದಲ್ಲಿ ಮಾದೇವನಿಗೂ ಕಾಳಮ್ಮನಿಗೆ ಸಂಘರ್ಷ ಆರಂಭವಾಗುತ್ತದೆ. ಅಪಾರ ಪ್ರಮಾಣದ ವ್ಯಾಪಾರ ವಹಿವಾಟುಳ್ಳ ಕಾಳಮ್ಮನನ್ನ ತನ್ನ ಒಕ್ಕಲಾಗಿಸಿಕೊಳ್ಳುವ ಮೂಲಕ ತನ್ನ ಪಂಥವನ್ನು ಬಲಪಡಿಸಿಕೊಳ್ಳುವ ಇರಾದೆ ಉಳ್ಳ ಮಾದೇಶ್ವರನನ್ನು ಕಾಳಮ್ಮ ತೀವ್ರವಾಗಿ ಎದುರಾಗುತ್ತಾಳೆ.

ತನ್ನ ಗಂಡನಾದ ಕೆಂಡೇಗೌಡನನ್ನು ಹುಲಿ ಹಿಡಿದು ರಕ್ತ ಕುಡಿದು ಅವನ ಖಂಡವನ್ನು ತುಂಡು, ತುಂಡು ಮಾಡಿ ಎಸೆವಂತೆ ಮಾಡುವ ಮೂಲಕ ತಾನು ಮುಂಡೆ ಆದರೂ ಅವಳು ಭಿಕ್ಷೆ ಕೊಡಲು ತಯಾರಿಲ್ಲ ಅಷ್ಟೇ ಅಲ್ಲ. "ಆನೆ ಗಾತ್ರದ ಕಿಡಿ ಹಾರ್ಬಂದು ನನ್ನ ಅರವತ್ಮಳದ ಗರಿ ಸೀರೆ ಮೇಲೆ ಕೂತರು ಸರಿಯೇ. ಕುದುರೆ ಗಾತ್ರ ಕಿಡಿ ಕುಪ್ರಸಿ ಬಂದು ನನ್ನ ಕುಪ್ಪಸ ಸುಟ್ಟೋದ್ರು ಸರಿಯೇ. ನಾನು ಉಟ್ಟ ಸೀರೆ ಸುಟ್ಟು ಹೋಗಿ ಸೀರೆ ಇಲ್ದೆ ಹುಟ್ಟದ ನಿರ್ವಾಣದಲ್ಲಿ ನಾನು ದಾರಿಯಲ್ಲಿ ಕೂತ್ಕೊಂಡ್ರು ಸರಿಯೇ ನಿನಗೆ ಬಿಕ್ಷೆ ಕೊಡುವಂತ ಮಗಳಲ್ಲ ಕಣಪ್ಪ." ಹೀಗೆ ತಾನು ಮುಂಡೆ ಆದರೂ ತನ್ನ ಜೀವ ಹೋದರು ಭಿಕ್ಷೆ ನೀಡುವವಳು ತಾನಲ್ಲ ಎನ್ನುತ್ತಾಳೆ.

ಗಂಡನ ಪ್ರಾಣಕ್ಕಾಗಿ ಸಕಲವನ್ನು ನಗಣ್ಯವಾಗಿ ಕಾಣುವ ಮೂಲಕ, ಅವನ ಪ್ರಾಣವನ್ನು ಮರಳಿ ಪಡೆದ ಸತಿ ಸಾವಿತ್ರಿಯ ಆದರ್ಶ ಮಾದರಿಯನ್ನು ಕಟ್ಟಿಕೊಟ್ಟ ಶಿಷ್ಟ ಪರಂಪರೆಯ ಆಚೆ, ತಾನು ನಂಬಿದ ಬೆಳೆ ಮತ್ತು ಅದರ ರಕ್ಷಣೆಯೇ ಮುಖ್ಯ. ಅದರ ಆಚೆ ಈ ಪುರುಷ ಜಗತ್ತು ಕಟ್ಟಿ ಕೊಟ್ಟಿರುವ ಮಾನದ ರಕ್ಷಣೆಯನ್ನು ಅಮುಖ್ಯವನ್ನಾಗಿಸಿ ಕಾಣುವ ಕಾಳಮ್ಮ ಯಾವ ಕಾರಣಕ್ಕೂ ತನ್ನ ಅಸ್ತಿತ್ವವನ್ನು, ತನ್ನ ಒಡೆತನವನ್ನು, ಆಡಳಿತದ ಶಕ್ತಿಯನ್ನು ಬಿಟ್ಟುಕೊಡದೆ, ಸ್ವಾಯತ್ತತೆಯನ್ನು ಸ್ವಾಭಿಮಾನವನ್ನು ಮೆರೆಯುತ್ತಾಳೆ. ಬಿತ್ತಿ ಬೆಳೆಯುವ ದುಡಿದು ಗಳಿಸುವ ಮೂಲಕ ತನ್ನನ್ನ ನಂಬಿದವರನ್ನ ಕಾಪಿಡುವ ಅವಳ ಜಿಗಟುತನವನ್ನು ಕುಟಿಲ ತಂತ್ರಗಳನ್ನ ಬಳಸಿ ಮಾದೇಶ್ವರ ಕಸಿದುಕೊಳ್ಳುತ್ತಾನೆ. "ಈ ಎರಡು ಪ್ರಸಂಗಗಳಲ್ಲಿ ಮಾತೃಮೂಲದ ಪ್ರತೀಕಗಳಾದ ಗ್ರಾಮ ದೇವತೆಯ ಆರಾಧಕರ ನಾಶ ಇದಕ್ಕೆ ಪೂರಕವೆಂಬತೆ ಮಾದೇಶ್ವರನ ಇಡೀ ಕಾವ್ಯದಲ್ಲಿ ಮಾರಿಗೆ ಸಂಬಂಧಿಸಿದ ದೇವತೆಗಳನ್ನು ಅತ್ಯಂತ ನಿಕೃಷ್ಟವಾಗಿ ಕಾಣಲಾಗಿದೆ. ತನ್ನ ಕೆಲಸಗಳಿಗಾಗಿ ಮಾದೇವ ಮಾರಿಯರ ಜುಟ್ಟು ಹಿಡಿದು ಎಳೆ ತರುತ್ತಾನೆ. ಇದರ ಆಶಯ ಮಾತ್ರ ಸಂಸ್ಕೃತಿ ಮಾದೇವನಿಗೆ ಅಧೀನವಾಗಿರಬೇಕು ಎಂಬುದೇ ಹೊರತು ಬೇರೆನಲ್ಲ. ಇದೇ ತರಹದ ಪ್ರಸಂಗ ಮಂಟೇಸ್ವಾಮಿ ಜುಂಜಪ್ಪನ ಕಾವ್ಯಗಳಲ್ಲಿಯೂ ಬರುತ್ತದೆ".

ಪ್ರಸ್ತುತ ಕಾವ್ಯಗಳಲ್ಲಿ ಕಂಡುಬರುವ ಸ್ತ್ರೀ ದೇವತೆಗಳಿಗೂ ಮತ್ತು ಅಲ್ಲಿಯ ಸಾಂಸ್ಕೃತಿಕ ನಾಯಕರಿಗೂ ಬಹಳ ದೊಡ್ಡ ಹೋರಾಟಗಳು ನಡೆದಿದ್ದು. ಈ ಹೋರಾಟದಲ್ಲಿ ಸೋಲನ್ನೊಪ್ಪಿದ ಸ್ತ್ರೀ ದೇವತೆಗಳು ಸಾಂಸ್ಕೃತಿಕ ನಾಯಕರ ಅಧೀನವಾಗಿರುವುದು ಕಂಡು ಬರುತ್ತದೆ. ಪಶುಪಾಲಕರಾದ ಮಾದಪ್ಪ ಮತ್ತು ಜುಂಜಪ್ಪರು ಕೃಷಿ ಪ್ರಧಾನವಾದ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಮಾತೃ ಮೂಲಿಯ ಸಮಾಜದ ಮೇಲೆ ಸಾಧಿಸಿದ ಗೆಲುವಿನ ಸಂಕೇತವಾಗಿ ವಿದ್ವಾಂಸರು ಈ ಪ್ರಸಂಗಗಳನ್ನು ಗುರುತಿಸುತ್ತಾರೆ. ಸ್ತ್ರೀ ಕೇಂದ್ರಿತವಾದ ಮಾತೃ ಪ್ರಧಾನ ಸಮಾಜದ ಹೆಣ್ಣಿನ ಸ್ಥಾನಮಾನ ಪುರುಷ ಕೇಂದ್ರದ ಸಮಾಜಕ್ಕಿಂತ ತೀರ ಭಿನ್ನವಾಗಿ ಇಲ್ಲಿಲ್ಲ ಕಂಡುಬರುವುದು ಬಹಳ ವಿಶೇಷ.

ಭಾರತೀಯ ಸಂಸ್ಕೃತಿಗೆ ದ್ರಾವಿಡ ಪರಂಪರೆ ನೀಡಿದ ಅಮೋಘ ಕೊಡುಗೆ ಗುರು ಸಂಪ್ರದಾಯ. "ವೈದಿಕ ಪರಿಭಾಷೆಯಲ್ಲಿ ಹೇಳುವುದಾದರೆ ನೆಲ ಕಚ್ಚಿದ ಶೂದ್ರ ಮೂಲದ ದ್ರಾವಿಡ ಸಂಸ್ಕೃತಿ ಪರಂಪರೆಯ ಉದಾತ್ತ ಪರಿಕಲ್ಪನೆಯಾದ ಗುರು ಸಂಪ್ರದಾಯದಲ್ಲಿ ಹೆಣ್ಣು ಗಂಡು ಎಂಬ ಲಿಂಗ ಭೇದಕ್ಕೆ ಆಸ್ಪದವಿಲ್ಲ. ನಿರ್ದಿಷ್ಟ ಗುರು ವರ್ಗಕ್ಕೆ ತನ್ನದೇ ಆದ ದೈವವಿರುತ್ತದೆ. ಅದು ಪುರುಷ ಅಥವಾ ಸ್ತ್ರೀ ದೈವ. ದೀಕ್ಷೆಯ ಮೂಲಕ ಈ ದೈವಕ್ಕೆ ಅರ್ಪಿಸಿಕೊಂಡು ಗುರುಗಳಾಗುವವರು ಸಾಕ್ಷಾತ್ ದೈವ ಸ್ವರೂಪಿಗಳಾಗುತ್ತಾರೆ. ಈ ಪದ್ಧತಿ ಗ್ರಾಮೀಣ ಬುಡಕಟ್ಟು ಕುಲ ಜಾತಿಗಳಲ್ಲಿ ಗುರು ಸಂಪ್ರದಾಯವಾಗಿ ಉಳಿದು ಬಂದಿತು.ಅಂತೆಯೇ ಇದಕ್ಕೆ ದೀಕ್ಷೆ ಕಡ್ಡಾಯ.ವಿಧಿ, ಜಾತಿ, ಲಿಂಗ, ವರ್ಗ ತಾರತಮ್ಯವನ್ನು ನಾಶ ಮಾಡುವ ದೀಕ್ಷೆ ವ್ಯಕ್ತಿಯನ್ನು ಸಾಕ್ಷತ್ ದೈವವನ್ನಾಗಿ ಮಾಡುತ್ತದೆ.ಈ ಪದ್ಧತಿ ಕೇವಲ ದಕ್ಷಿಣ ಭಾರತದ ದ್ರಾವಿಡ ಜನಕುಲಗಳಲ್ಲಿ ಮಾತ್ರವಲ್ಲ ಉತ್ತರ ಭಾರತದ ಅಸಂಖ್ಯ ಕೆಳ ಜಾತಿಗಳಲ್ಲಿದೆ. ಈ ಜಾತಿಗಳು ಆರ್ಯ ಮೂಲದ ವೈದೀಕರಣಕ್ಕೆ ಒಳಗಾದರೂ ತಮ್ಮ ಸಾಂಸ್ಕೃತಿಕ ಅಂಶಗಳನ್ನು ಉಳಿಸಿಕೊಂಡು ಬಂದಿರುವುದು ವಿಶೇಷ. ಪ್ರಸ್ತುತ ಮಂಟೇಸ್ವಾಮಿ ಕಾವ್ಯದಲ್ಲಿಯು ಕೂಡ ಈ ಗುರುಪರಂಪರೆಯನ್ನು ಕಾಣಬಹುದು. ಮುಟ್ಟನ್ನ ಮುಖ್ಯ ಮಾಡದ ಈ ಪರಂಪರೆಯಲ್ಲಿ ಹೆಣ್ಣು ಮಕ್ಕಳು ಸಲೀಸಾಗಿ ಆಧ್ಯಾತ್ಮಿಕತೆಯನ್ನು ಪ್ರವೇಶಿಸುವ, ಶಿಶು ಮಕ್ಕಳಾಗಿ ದೀಕ್ಷೆ ಸ್ವೀಕರಿಸುವ ಸಂಪ್ರದಾಯವನ್ನು ಕಾಣಬಹುದಾಗಿದೆ. ದೊಡ್ಡಮ್ಮತಾಯಿ ಚನ್ನಜಮ್ಮರು ಇದಕ್ಕೆ ಉದಾಹರಣೆ. ಇಡೀ ಕಾವ್ಯದಲ್ಲಿ ದೊಡ್ಡಮ್ಮತಾಯಿ ಸ್ತ್ರೀ ಕುಲದ ಸಂಕೇತವಾಗಿ ಕಾಣುತ್ತಾಳೆ.ಕಾವ್ಯದಲ್ಲಿ ಹೆಣ್ಣು ಮಕ್ಕಳು ಸ್ವೀಕರಿಸುವ ದೀಕ್ಷೆ ಸಾಂಸ್ಕೃತಿಕವಾಗಿ ಮಹತ್ವವುಳ್ಳದ್ದಾಗಿದೆ. ಸಿದ್ದಪ್ಪಾಜಿಗೆ ದೀಕ್ಷೆ ನೀಡಿದ ರೀತಿಯಲ್ಲಿ ಒಕ್ಕಲಿನ ಜನ ದೀಕ್ಷೆ ಪಡೆಯುತ್ತಾರೆ. ಮಂಟೇಸ್ವಾಮಿ ಜಾತ್ರೆಯ ಎರಡನೆಯ ದಿನ ದೊಡ್ಡಮ್ಮ ತಾಯಿ ಸೇವೆ ನಡೆಯುತ್ತದೆ. ಆ ದಿನ ಭಕ್ತರು ದೊಡ್ಡಮ್ಮ ತಾಯಿಯನ್ನು ವಿವಿಧ ರೀತಿಯಲ್ಲಿ ಪೂಜಿಸಿ ಹರಕೆಗಳನ್ನು ಸಲ್ಲಿಸುತ್ತಾರೆ. ಈ ಹರಕೆಗಳಲ್ಲಿ ಒಕ್ಕಲಿನ ಮಹಿಳೆಯರ ಪಾತ್ರ ದೊಡ್ಡದ್ದಾಗಿದ್ದು ಅವರು ದೊಡ್ಡಮ್ಮತಾಯಿ ಹೆಸರು ಹೇಳಿ ಹರಕೆಗಳನ್ನು ಒಪ್ಪಿಸುತ್ತಾ, ದೊಡ್ಡಮ್ಮತಾಯಿಯನ್ನು ಕುರಿತು ಹಾಡುತ್ತಾರೆ. ಹೀಗೆ ಮಂಟೇಸ್ವಾಮಿ ಪರಂಪರೆಯಲ್ಲಿ ಆಧ್ಯಾತ್ಮಿಕ ನೆಲೆಯಲ್ಲಿ ಹೆಣ್ಣಿನ ಶಕ್ತಿ ಗೋಚರಿಸುತ್ತದೆ.

ವೈದಿಕ ಶಾಹಿ ಹೆಣ್ಣಿನ ಮುಟ್ಟನ್ನು ಮೈಲಿಗೆಯನ್ನಾಗಿ ದೌರ್ಬಲ್ಯವನ್ನಾಗಿ ಗುರುತಿಸಿದರೆ.ಕೃಷಿ ಮೂಲದ ಸಮುದಾಯಗಳಲ್ಲಿ ಮುಟ್ಟು ಫಲವಂತಿಕೆಯ ಸಂಕೇತವಾಗಿ ಗೌರವಾರ್ಹವಾಗಿದೆ. ಹಾಗಾಗಿಯೇ ಪ್ರಸ್ತುತ ಕಾವ್ಯ ಸೃಷ್ಟಿಕ್ರಿಯೆ ಬ್ರಹ್ಮನದಲ್ಲ ಬದಲಾಗಿ ಅವನ ತಂಗಿಯಾದ ವಿಧಿಯಮ್ಮದನೆಂದು ದನಿಸುವುದು ವಿಶೇಷ. "ಅವೈದಿಕ ಭೌತವಾದಿ ದರ್ಶನಗಳಲ್ಲಿ ದ್ರಾವಿಡ ಸಂಸ್ಕೃತಿಗಳಲ್ಲಿ ಮುಟ್ಟಿನ ರಕ್ತವನ್ನು ಹೊಲಗಳಿಗೆ ಉಗ್ಗುವ ಮೂಲಕ ಸಮೃದ್ಧಿಯನ್ನು ಹಾರೈಸಲಾಗುತ್ತದೆ. ಭೂಮಿಯಿಂದ ಸಸ್ಯ ಹುಟ್ಟುವುದು ಮತ್ತು ಯೋನಿಯಿಂದ ಶಿಶು ಹುಟ್ಟುವುದು ಒಂದೇ ಆಗಿರುವುದರಿಂದ ಕೃಷಿ ಮೂಲದ ಸಂಸ್ಕೃತಿಗಳು ಹೆಣ್ಣನ್ನು ಮೈಲಿಗೆ ಎಂದು ತಿಳಿಯುವುದಿಲ್ಲ. ಈ ಮಾತುಗಳಿಂದ ಕೃಷಿ ಮೂಲದ ಸಮುದಾಯಗಳಲ್ಲಿ ಮುಟ್ಟು ಫಲವಂತಿಕೆಯು ಗೌರವದ ಪ್ರತೀಕವಾಗಿಯು ಕೃಷಿಯೇತರ ಸಮುದಾಯಗಳಲ್ಲಿ ಮೈಲಿಗೆಯ ವಿಷಯವಾಗಿಯೂ ಕಾಣಲಾಗಿದೆ ಎಂಬ ಅಂಶ ತಿಳಿಯುತ್ತದೆ. ಪ್ರಸ್ತುತ ಮಂಟೇಸ್ವಾಮಿ ಕಾವ್ಯ ಕೂಡ ಹೆಣ್ಣಿನ ಮುಟ್ಟನ್ನು ಗೌರವಿಸುತ್ತಾ ಜಗತ್ ಸೃಷ್ಟಿಯ ಗುಟ್ಟಾಗಿ ಗೌರವಿಸುತ್ತದೆ.

ಶಿಷ್ಟ ಸಮಾಜ ಯಾವುದನ್ನು ಕೀಳು, ಅಸಹ್ಯ, ಕೊಳಕು, ಅನಿಷ್ಟ, ಕನಿಷ್ಠ ಎಂದು ತಿರಸ್ಕರಿಸುತ್ತದೆಯೋ, ಅವುಗಳನ್ನೆ ತಮ್ಮ ಪ್ರತಿಭಟನೆಯ ಸಂಕೇತಗಳನ್ನಾಗಿಸಿಕೊಂಡು ಅವುಗಳನ್ನು ಶ್ರೇಷ್ಠ ಪವಿತ್ರ ಉನ್ನತ ಮೌಲ್ಯಗಳೆಂದು ಪ್ರತಿ ಸ್ಥಾಪಿಸಿರುವುದನ್ನು ಪ್ರಸ್ತುತ ಕಾವ್ಯದಲ್ಲಿ ಕಾಣಬಹುದು. ಹಾಗಾಗಿ ಈ ಕಾವ್ಯದಲ್ಲಿ ಮುಟ್ಟು ಕೂಡ ಜಗತ್ ಸೃಷ್ಟಿಯ ನೆಲೆಯಲ್ಲಿ ಶ್ರೇಷ್ಠವಾಗಿ ನಿಲ್ಲುತ್ತದೆ. ಮಂಟೇಸ್ವಾಮಿ ಮಡಿವಾಳ ಮಾಚಯ್ಯನ ಮನೆಗೆ ಭಿಕ್ಷೆಗೆ ಹೋದಾಗ ಮಾಚಯ್ಯ ಮುಟ್ಟಿನ ಸ್ಥಳಕ್ಕೆ ಯಾಕಾಗಿ ಬಂದಿರಿ ಗುರುದೇವ ಎನ್ನುತ್ತಾನೆ ಆಗ ಮಂಟೆಸ್ವಾಮಿ, ಹುಟ್ಟು ಮೈಲಿಗೆ ಅಲ್ಲ ಎಂದು ಮಾಚಪ್ಪನಿಗೆ ಬೋಧನೆ ಮಾಡುತ್ತಾನೆ.

"ಮುಟ್ಟು ತಟ್ಟಿನ ವಿಚಾರ ನಿನಗೇನು ಗೊತ್ತು ಮಾಚಯ್ಯ ಮುಟ್ಟಿನ ವಿಚಾರ ನಿನಗಿನ್ನು ತಿಳಿದಿಲ್ಲ ಮಗನೇ ಮುಟ್ಟಿನ ವಿಚಾರ ಗುಟ್ಟಿನಲ್ಲಿ ಹೇಳ್ತೀನಿ ಕೇಳು ಮಾಚಪ್ಪ ಮಾಚಯ್ಯ ಲೋ ಮುಟ್ಟಿನಿಂದಲೇ ಮಗನೇ ಈ ಭೂಮಿ ಹುಟ್ಟಿದ್ದಲ್ಲ ಲೋ ಮುಟ್ಟಿನಿಂದಲೇ ಕಂದ ಈ ಲೋಕವೇ ಬೆಳೆತಲ್ಲ" ಎನ್ನುತ್ತಾ ಒಟ್ಟು ಮುಟ್ಟಿನಿಂದಲೇ ಹಗಲು, ರಾತ್ರಿ, ಸೂರ್ಯ, ಚಂದ್ರ, ಬೆಳಕು, ಕತ್ತಲು ಎಲ್ಲವೂ ಆಯಿತು ಎಂದು ಹೇಳುತ್ತಾನೆ. ನಿಮ್ಮ ತಾಯಿ ಹೊಟ್ಟೆಯಿಂದ ನೀನು ತಡೆಗೆ ಬರುವಾಗ ಮುಟ್ಟು ತಟ್ಟು ನಿನಗೆ ಆಗಲಿಲ್ಲವ ಮಾಚಯ್ಯ ಲೋ, ಮುಟ್ಟಿನ ಬಟ್ಟೆ ಒಗೆಯುತ್ತಿದ್ದರು.... ಎನ್ನುವ ಮಾತುಗಳು ಮುಟ್ಟನ್ನು ಮೈಲಿಗೆ ಎಂದು ಭಾವಿಸಿರುವ ಮಾಚಯ್ಯನಂತಹ ಕಾಯಕ ಜೀವಿಗಳಿಗೆ ಆತ್ಮಸ್ಥೈರ್ಯ ಕೊಡುವ ದಿಶೆಯಲ್ಲಿದೆ. ಇದೆಲ್ಲಕ್ಕಿಂತ ಹೆಚ್ಚಾಗಿ ಮಂಟೇಸ್ವಾಮಿಯಲ್ಲಿ ಮುಟ್ಟಿನ ಬಗ್ಗೆ ಒಂದು ಸೈದ್ಧಾಂತಿಕವಾದ ಮೌಲ್ಯಯುತವಾದ ನಂಬಿಕೆ ಎದ್ದು ಕಾಣುತ್ತದೆ. ಮುಟ್ಟಿನ ಬಗೆಗೆ ಮಂಟೆಸ್ವಾಮಿಯವರಿಗೆ ಇರುವಂತಹ ದೃಷ್ಟಿ ಇಡೀ ಪಂಥದ ತುಂಬಾ ಉಸಿರಾಡುತ್ತದೆಯಾದರೂ ಇದಕ್ಕೆ ವಿರುದ್ಧವಾದ ಮುಟ್ಟನ್ನು ಕುರಿತ ಮೈಲಿಗೆಯ ಭಾವಗಳು ಕಂಡು ಬರುತ್ತವೆ. ಇಂತಹ ವಿರೋಧಿ ಭಾವಗಳಿಗೆ ನಂತರದಲ್ಲಿ ನುಸುಳಿರುವ ವೈದಿಕಶಾಹಿ ಚಿಂತನೆಗಳೇ ಮುಖ್ಯ ಕಾರಣವಾಗಿದ್ದು ಮುಟ್ಟನ್ನು ಕುರಿತ ಮಂಟೇಸ್ವಾಮಿಯವರ ನಿಲುವು ಗಟ್ಟಿಯಾದುದು.

ಈ ಮೂರು ಮೌಕಿಕ ಮಹಾಕಾವ್ಯಗಳಲ್ಲಿಯೂ ಮಾತೃಮೂಲೀಯ ಸಮಾಜದ ಕುರುಹುಗಳಿದ್ದು ಹೆಣ್ಣಿನ ಅನನ್ಯತೆಯ, ಸ್ವಾಯತ್ತ ಶಕ್ತಿಯ ಅನಾವರಣವಿದೆ.ಕ್ರಮೇಣ ಪುರುಷ ಹಿತಾಸಕ್ತಿಯೊಂದು ಹೆಣ್ಣಿನ ಸ್ವಾಯತ್ತತೆಯನ್ನು ಕಸಿದ ಹುನ್ನಾರದ ಜೊತೆಗೆ ಅವಳ ಪ್ರಬಲ ಪ್ರತಿರೋಧವು ವ್ಯಕ್ತವಾಗಿದೆ.ಅವೈದಿಕ ನೆಲೆಯ ಕೆಲವು ಪಂಥಗಳಲ್ಲಿ, ಮೌಖಿಕ ಮಹಾಕಾವ್ಯಗಳಲ್ಲಿ ಕೆಲವು ಮಿತಿಗಳು ಇದ್ದು, ಇದಕ್ಕೆ ವೈದಿಕಶಾಹಿಯ ಚಿಂತನೆಯ ಪ್ರಭಾವಳಿಯೇ ಮುಖ್ಯ ಕಾರಣವಾಗಿದೆ. ಸ್ತ್ರೀ ಸಮೃದ್ಧತೆ ಸ್ತ್ರೀ ಸ್ವಾಯತ್ತ ಶಕ್ತಿಯು ಭಾರತೀಯ ಸಂಸ್ಕೃತಿಯ ಭಾಗವಾಗಿದ್ದು, ಇವು ವೈದಿಕಶಾಹಿ ಚಿಂತನೆಗಳ ಹುನ್ನಾರದೊಳಗೆ ಪ್ರಧಾನ ಸಂಸ್ಕೃತಿಯಲ್ಲಿ ಹರಿದು ಬರದೆ, ಪಿತೃ ಪ್ರಧಾನ ಸಮಾಜದ ಆಲೋಚನೆಯನ್ನು ಸ್ತ್ರೀಗೆ ವಿರುದ್ಧವಾಗಿ ನಿರೂಪಿಸಿದ ವೈದಿಕಶಾಹಿ ಲಿಂಗಗಳ ಪ್ರತ್ಯೇಕದಿಂದಾಗಿ ಸೃಷ್ಟಿಸಿದ ಕ್ರೌರ್ಯಗಳ ರೂಪಗಳೇ ಪರಂಪರೆಯಲ್ಲಿ ಹರಿದು ಬಂದವು. "ಜನಪದ ಕಾವ್ಯ ಬಹಳಷ್ಟು ಹಿಂದೆಯೇ ಶಿಷ್ಟ ಸಂಸ್ಕೃತಿಯೊಂದಿಗೆ ಬೆರೆತುಕೊಂಡಿದ್ದು. ಸ್ವತಂತ್ರವಾದ ಜನಪದ ಕಾವ್ಯದ ಮನೋಧರ್ಮವನ್ನು ಗುರುತಿಸಲು ಸಾಧ್ಯವಿಲ್ಲವಾಗಿದೆ. ಈಗಿರುವ ಜನಪದ ಕಾವ್ಯದಲ್ಲಿ ಅಭಿವ್ಯಕ್ತಿಗೊಂಡಿರುವ ಬಹುಪಾಲು ಮೌಲ್ಯಗಳೆಲ್ಲವೂ ಶಿಷ್ಟ ಸಂಸ್ಕೃತಿಯ ಪ್ರಭಾವದಿಂದ ಮೂಡಿರುವಂತವಾಗಿವೆ." ಅವೈದಿಕ ನೆಲೆಯ ಧಾರೆಗಳೊಳಗೂ, ಹೆಣ್ಣನ್ನು ಕುರಿತ ಪಾರಂಪರಿಕ ಆಲೋಚನೆಯ ವೈದಿಕ ಚಿಂತನೆಗಳು ನುಸುಳಿರುವ ಕಾರಣ ಇಲ್ಲೂ ಪಾರಂಪರಿಕ ಮಹಿಳಾ ಚಿತ್ರಣವೇ ಹೆಚ್ಚು ಕಾಣಸಿಗುತ್ತದೆಯಾದರೂ, ಅದರಾಚೆಗೂ ಅವಳ ಸ್ವಾಯತ್ತ ಶಕ್ತಿಯು ಉಳಿದು ಬಂದಿದೆ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

## ಪರಾಮರ್ಶನ ಗ್ರಂಥಗಳು


- **ಡಾ. ಕೇಶವನ್ ಪ್ರಸಾದ್ ಕೆ. (1997) :** ಮಲೆ ಮಹದೇಶ್ವರ ಕಾವ್ಯ, ಹಂಪಿ ಕನ್ನಡ ವಿಶ್ವ ವಿದ್ಯಾನಿಲಯ.
- **ಡಾ. ವೆಂಕಟೇಶ ಇಂದ್ವಾಡಿ (ಸಂ) (2000) :** ಮಲೆಯ ಮಾದಪ್ಪನ ಮಹಾಕಾವ್ಯ. ಹಂಪಿ ಕನ್ನಡ ವಿಶ್ವ ವಿದ್ಯಾನಿಲಯ.
- **ಪ್ರೊ. ಹಿ.ಚಿ. ಬೋರಲಿಂಗಯ್ಯ(ಸಂ) (1997) :** ಮಂಟೇಸ್ವಾಮಿ, ಹಂಪಿ ಕನ್ನಡ ವಿಶ್ವ ವಿದ್ಯಾನಿಲಯ.
- **ಪ್ರೊ. ಅರವಿಂದ ಮಾಲಗತ್ತಿ(ಸಂ) :** ಸೀಮಾತೀತ ಕನ್ನಡ ಸಾಹಿತ್ಯ ಚರಿತ್ರೆ. (ಜಾನಪದ, ಶಾಸನ, ಕೈಫಿಯತ್ತು) ಮೈಸೂರು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ.
- **ಡಾ. ವೀರಣ್ಣ ದಂಡೆ (ಸಂ) (1997) :** ಜಾನಪದ ಶಾಸ್ತ್ರ ಸಿದ್ಧಾಂತಗಳು, ಶ್ರೀರಂಗ ಪಟ್ಟಣ ನೆಲಮನೆ ಪ್ರಕಾಶನ.
- **ಡಾ. ಚೆಲುವರಾಜು (1997) :** ಜುಂಜಪ್ಪ ಮಹಾಕಾವ್ಯ, ಬುಡಕಟ್ಟು ಮಹಾಕಾವ್ಯ ಮಾಲೆ, ಹಂಪಿ ಕನ್ನಡ ವಿಶ್ವವಿದ್ಯಾನಿಲಯ.
- **ಗಾಯತ್ರಿ ನಾವಡ (2003) :** ಮಹಿಳಾ ಸಂಕಥನ, ಬೆಂಗಳೂರು ಕನ್ನಡ ಪುಸ್ತಕ ಪ್ರಾಧಿಕಾರ.
- **ಡಾ. ಸಿ. ವೀರಣ್ಣ (1999) :** ಕನ್ನಡ ಕಾವ್ಯ ಕಂಡ ಹೆಣ್ಣು, ಬೆಂಗಳೂರು ಕಾವ್ಯ ಕಲಾ ಪ್ರಕಾಶನ, ವಿಜಯನಗರ.


■■

*– 6ನೇ ಪುಟದಿಂದ ಮುಂದುವರೆದುದು*

ಕೈಯ್ಯನ್ನೊಡ್ಡರು; ಸಮಾಜವನ್ನು ವಂಚಿಸಿ ಅರ್ಥಾರ್ಜನೆಗೈಯ್ಯುವ ವಾಮಮಾರ್ಗದಲ್ಲಿ ನಡೆಯರು; ಅಬಲೆಯೊಬ್ಬಳ ಮೇಲೆ ಅತ್ಯಾಚಾರವೆಸಗುವ ಹೀನ ಕೆಲಸಕ್ಕೆ ಕೈಹಾಕರು; ಅವರೆಂದೂ ತಮ್ಮ ತತ್ವವೊಂದೇ ಸತ್ಯವೆಂದು ಬಗೆದು ಇತರರ ಮಂದಿರ–ಮಸೀದಿ–ಚರ್ಚುಗಳನ್ನು ಧ್ವಂಸಗೊಳಿಸುವ ಸಂಕುಚಿತ ಮನೋಭಾವನೆ ತಾಳರು ಹಾಗೂ ಸಾಮಾಜಿಕ ಹಿತಾಸಕ್ತಿಗಳಿಗೆ ಧಕ್ಕೆಯೊದಗಿ ಬಂದಾಗ ಅದನ್ನು ಸರಿಯಾದರೀತಿಯಲ್ಲಿ ಪ್ರತಿಭಟಿಸಿ, ಅದಕ್ಕೆ ಸಮರ್ಪಕ ಪರಿಹಾರವನ್ನು ಕಂಡುಕೊಳ್ಳುವರು. ಅಲ್ಲವೇ ? ಮಕ್ಕಳಿಗೆ ನೈತಿಕ ಶಿಕ್ಷಣವನ್ನು ನೀಡಿ ಅವರನ್ನು ತೇಜಸ್ವಿಗಳನ್ನಾಗಿಸಿ, ತನ್ಮೂಲಕ ಅದ್ಭುತ ಸತ್ಕಾರ್ಯಗಳನ್ನೆಸಗಬಲ್ಲ ಸಮಾಜನಿರ್ಮಾಣಕ್ಕೆ ನಾವೆಲ್ಲರೂ ಶ್ರಮಿಸೋಣವೇ ? "ವಿದ್ಯಾರ್ಥಿಗಳು ಭತ್ತವನ್ನು ತುಂಬುವ ಚೀಲಗಳಾಗಬಾರದು; ಅದನ್ನು ಬೆಳೆಯುವ ಗದ್ದೆಗಳಾಗಬೇಕು". **– *ಕುವೆಂಪು***

ಇಂದಿನ ಶಿಕ್ಷಣ ವ್ಯವಸ್ಥೆ ಖಂಡಿತವಾಗಿಯೂ ಸಮರ್ಪಕವಾಗಿಲ್ಲ. ಬದಲಾಗಿ ಮಗುವಿಗೆ ಹೊರೆಯಾಗಿದೆ. ನಿರಂತರ ಒತ್ತಡವನ್ನು ತಂದೊಡ್ಡುತ್ತಿದೆ. ವಿದ್ಯೆ ನೀಡುವುದಕ್ಕಿಂತ ಆಡಂಬರವೇ ಇದ್ದು, ಮಂತ್ರಕ್ಕಿಂತ ಉಗುಳೇ ಜಾಸ್ತಿ ಎನ್ನುವಂತಾಗಿದೆ. ತ್ರಿಭಾಷಾ ಸೂತ್ರಜಾರಿಗೆ ಬರಬೇಕು. ನೂರೆಂಟು ವಿವಿಧ ಪಠ್ಯಕ್ರಮ ಸುಲಭೀಕರಣಗೊಂಡು 7ನೇ ತರಗತಿವರೆಗೆ ಒಂದೇ ತೆರನಾಗಿರಬೇಕು. ಮಗುವಿನ ಸಂಕಲನ, ವ್ಯವಕಲನ, ಗುಣಕಾರ, ಭಿನ್ನರಾಶಿಗಳ ವ್ಯತ್ಯಾಸ ಸುಲಭವಾಗಿ ಮನದಟ್ಟಾಗಬೇಕು. ಹಿಂದೆ ಇರುತ್ತಿದ್ದ ಮಾರಲ್ ಎಜುಕೇಷನ್ ತರಗತಿಗಳು ಇಂದೂ ಕಡ್ಡಾಯವಾದರೆ ಮುಂದೆ ಸಮಾಜ ಸುಧಾರಿಸುವುದರಲ್ಲಿಯಾವುದೇಅನುಮಾನವಿಲ್ಲ.

## ಪರಿಸಮಾಪ್ತಿ

ಶಿಕ್ಷಣದ ವ್ಯವಸ್ಥೆ ಬದಲಾಗಬೇಕೆಂದರೆ ಪೋಷಕರ ಮನೋಭಾವವು ಕೂಡ ಬದಲಾಗಬೇಕು. ತಮ್ಮ ಮಕ್ಕಳು 1 ಲಕ್ಷಡೊನೇಷನ್ ಕೊಟ್ಟು ಓದಿದರೆ ಮಾತ್ರ ಮುಂದೆ ಬರುತ್ತಾರೆ ಎಂಬ ಅಭಿಪ್ರಾಯ ಬದಲಾಗಬೇಕು. ಶಿಕ್ಷಕರ ಬಗ್ಗೆ ಇಂದು ಜನಗಳಲ್ಲಿ ಬಹಳ ಕೆಟ್ಟ ಅಭಿಪ್ರಾಯವಿದೆ. ಬಹುಶಃ ಇದಕ್ಕೆ ಇಂದಿನ ದಿನಗಳಲ್ಲಿ ನಡೆದಿರಬಹುದಾದ ಕೆಲವೊಂದು ಘಟನೆಗಳು ಕಾರಣವಾಗಿವೆ. ಕಲಿಕೆಯ ಜವಾಬ್ದಾರಿಯನ್ನು ಸಂಪೂರ್ಣ ಶಿಕ್ಷಕರಿಗೇ ಬಿಟ್ಟುಬಿಡಬೇಕು. ಈಗ ನೋಡಿ ನಾವೇನಾದರೂ ಮಕ್ಕಳಿಗೆ ಬೇರೇನಾದರೂ ಹೇಳಿಕೊಡೋಣವೆಂದರೆ 'ಬಿಡಿ ಮ್ಯಾಮ್ಇಂಟರ್ನೆಟ್ನಲ್ಲಿ ನೋಡಿ ಕೊಳ್ಳುತ್ತೇವೆ' ಎನ್ನುತ್ತಾರೆ. ಬ್ಯಾನ್ ಮಾಡಿದ್ರೂ ಕೂಡ ಶಾಲೆಗಳಿಗೆ ಮೊಬೈಲ್ತಂದು ಬೇಕಾದ್ದು, ಬೇಡಾದ್ದೆಲ್ಲ ನೋಡುತ್ತಿರುತ್ತಾರೆ. ಪೋಷಕರಿಗೆ ಹೇಳಿದರೆ ನಮ್ಮಕ್ಳು ಕಂಪ್ಯೂಟರ್, ಮೊಬೈಲ್ ಆಪರೇಟ್ ಮಾಡೋದ್ನ ಕಲೀದಿದ್ರೆ ಮುಂದೆ ಹೇಗೆ ಜೀವ್ನ ಮಾಡ್ತಾರೆ ? ನೀವೇ ಇದ್ನೆಲ್ಲಾ ಶಾಲೆಗಳಲ್ಲಿ ಹೇಳಿಕೊಡಿ ಎಂದು ಹೇಳ್ತಾರೆ. ಈ ರೀತಿಯ ಅತಿಶಯೋಕ್ತಿಗಳ ಬೇಡಿಕೆ–ಪೂರೈಕೆಯಲ್ಲಿ ಶಿಕ್ಷಣ, ಶಿಕ್ಷಕ, ಸಮಾಜ ಮತ್ತು ಪೋಷಕ ಇವರುಗಳು ತಮ್ಮಕಾಯಕ ನಿಷ್ಠೆಯನ್ನು ರೂಡಿಸಿಕೊಳ್ಳುವುದು ಅನಿವಾರ್ಯವಾಗಿದೆ.

## ಪರಾಮರ್ಶನ ಗ್ರಂಥಗಳು


- **ಹೆಚ್.ಎಂ. ಶೈಲಜ, ರಾಜೀವ್ ಪಿ ಗುಂಡಾಳೆ :** ಭಾರತೀಯ ತಾತ್ವಿಕ ಪರಂಪರೆ ಮತ್ತು ಶಿಕ್ಷಣ.
- **ಸಿ.ಹೆಚ್ ಮರಿದೇವರು :** ಶಿಕ್ಷಣ ತತ್ವಶಾಸ್ತ್ರ ತುಮಕೂರು ಉದಯಭಾನು ಪ್ರಕಾಶನ, .
- **ಡಾ. ಹಾಲೇಶಪ್ಪ ಟಿ (2013) :** ಮೌಲ್ಯ ಶಿಕ್ಷಣ. ದಾವಣಗೆರೆ ಮೈತ್ರಿ ಪಬ್ಲಿಕೇಷನ್ಸ್.
- **ಪ್ರಚಲಿತ ವಿದ್ಯಮಾನಗಳು :** 07–11–2021
- **H. M. Kashinath :** Trends and Innovates in Indian Education.
- **Haseen Taj :** Current Challenges in Education.
- **Kohlberg L., Wasserman E., & Richardson N. (1975) :** The ideology of the Just Community School. In Recent papers on moral education, Kohlberg, L. (Ed.)., Cambridge, MA: Harvard University Press.
- **Thornberg R. (2008) :** The lack of professional knowledge in values education. Teaching and Teacher Education, 24, 1791–98.
- **Thornberg R. (2009) :** The moral construction of the good pupil embedded in school rules. Education, Citizenship and Social Justice, 4, 245–61.
- **Frelin, A. & Grannäs, J. (2010) :** Negotiations left behind: In-between spaces of teacher-student negotiation and their significance for education. Journal of Curriculum Studies, 42, 353–69.
- **T.V. Magalada(2018) :** article : need of value education in elementary and secondary school setup Prajavaani. (2018)


■■

APPROVED BY UGC CARE

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಆಧುನಿಕ ವಚನ ಅಧ್ಯಯನಗಳ ವೈಧಾನಿಕತೆ

✍ **ಡಾ. ಅಂದಯ್ಯ ಅರಟವಗಿಮಠ,** ಉಪನ್ಯಾಸಕರು, ಕನ್ನಡ ವಿಭಾಗ, ಕೆ.ಎಲ್.ಇ ಸಂಸ್ಥೆಯ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಗದಗ.

ವಚನಗಳ ಕುರಿತಾದ ಅಧ್ಯಯನಗಳನ್ನು ಗಮನಿಸಿದಾಗ ಬೇರೆ ಬೇರೆ ಲೇಖಕರು ವಿಭಿನ್ನ ಒಲವುಗಳಿಂದ, ಕೌಶಲ್ಯಗಳಿಂದ, ಸಾಮರ್ಥ್ಯಗಳಿಂದ ಮತ್ತು ಸಂಪ್ರದಾಯಗಳನ್ನು ಹಿನ್ನಲೆಯಾಗಿರಿಸಿಕೊಂಡು ಅಧ್ಯಯನ ನಡೆಸಿರುವುದನ್ನು ಕಾಣಬಹುದು. ಇಲ್ಲಿ ಕೆಲವರು ಕೃತಿಗೆ ನಿಷ್ಠರಾದರೆ, ಇನ್ನು ಕೆಲವರು ಕೃತಿಕಾರನಿಗೆ ನಿಷ್ಠರಾಗಿದ್ದಾರೆ, ಇನ್ನೂ ಕೆಲವರ ಅಧ್ಯಯನಗಳು ಓದುಗ ನಿಷ್ಠವಾಗಿವೆ. ಕೆಲವರಲ್ಲಿ ಧಾರ್ಮಿಕ ತತ್ವ ಮುಖ್ಯವಾಗಿದ್ದರೆ ಇನ್ನು ಕೆಲವರಲ್ಲಿ ಸಾಹಿತ್ಯ, ಸಮಾಜ, ಸ್ತ್ರೀವಾದ, ಆರ್ಥಿಕ ಸಿದ್ಧಾಂತಗಳು ಮುಖ್ಯವಾಗಿವೆ. ಅಂತಹ ತತ್ವಗಳ ಮುಖಾಂತರವೇ ವಚನಗಳನ್ನು ವಿವಿಧ ರೀತಿಯಲ್ಲಿ ವಿಮರ್ಶಕರು ವ್ಯಾಖ್ಯಾನಿಸಿದ್ದಾರೆ.

ಒಬ್ಬ ವಿಮರ್ಶಕನ ಗ್ರಹಿಕೆಗೂ ಮತ್ತೊಬ್ಬರ ಗ್ರಹಿಕೆಗೂ ಭಿನ್ನವಾಗಿರುತ್ತದೆ. ಇದರಿಂದ ಎಲ್ಲಾ ವ್ಯಾಖ್ಯಾನಗಳು ಏಕರೂಪಿಯಾಗಿರುವುದಿಲ್ಲ. ಏಕರೀತಿಯ ಅರ್ಥವನ್ನು ಸಾಧಿಸಲು ಲೇಖಕರು ಬಯಸಿದರೂ ವ್ಯಾಖ್ಯಾನದಲ್ಲಿ ಅವರವರ ಕಾಲ, ಒಲವು ಮತ್ತು ಸಾಮರ್ಥ್ಯದ ಮೇರೆಗೆ ಬಿನ್ನತೆಯನ್ನು ಹೊಂದಿರುತ್ತವೆ. ಪ್ರತಿಯೊಬ್ಬ ವಿಮರ್ಶಕ ಒಂದು ದೃಷ್ಟಿಕೋನದಿಂದ ಅಥವಾ ಪೂರ್ವಗ್ರಹಿಕೆಯಿಂದ ಕೃತಿಯನ್ನು ಪ್ರವೇಶ ಮಾಡುತ್ತಾನೆ. ಒಬ್ಬ ವಿಮರ್ಶಕನ ಗ್ರಹಿಕಾ ಕ್ರಮವೂ ಯಾವಾಗಲೂ ಒಂದೇ ರೀತಿಯಲ್ಲಿ ಇರುವುದಿಲ್ಲ. ಕಾಲಾನುಘಟ್ಟ, ವ್ಯಕ್ತಿ ಸಂದರ್ಭ, ಸಮಾಜಕ್ಕನುಗುಣವಾಗಿ ಗ್ರಹಿಕೆ ಕೂಡ ಭಿನ್ನವಾಗಿರುತ್ತದೆ. ಇದಕ್ಕೆ ಹಲವಾರು ನಿದರ್ಶನಗಳನ್ನು ವಚನಗಳ ಅಧ್ಯಯನದಲ್ಲಿ ಗುರುತಿಸಬಹುದು. ಹೀಗೆ ವಚನಗಳಿಗೆ ಸ್ಥಿರ ಅಥವಾ ಸಿದ್ಧ ಅರ್ಥವು ಸಾಧ್ಯವಾಗಿಲ್ಲ. ವಚನಗಳು ಹಲವಾರು ಸಂವಾದ, ಅನುಸಂಧಾನಗಳಿಗೆ ಒಳಪಟ್ಟು ಭಿನ್ನ ಅರ್ಥವನ್ನು ಹೊಂದಿವೆ. ವಚನಗಳನ್ನು ಆಯಾ ಕಾಲದ ಪ್ರಶ್ನೆ ಮತ್ತು ಅಗತ್ಯಗಳೊಂದಿಗೆ ಮುಖಾಮುಖಿಗೊಳಿಸುವ ಹಾಗೂ ಅನುಸಂಧಾನ ನಡೆಸುವ ಪ್ರಯತ್ನಗಳು ನಡೆದಿವೆ.

ವಸಾಹತುಶಾಹಿ ಸಂದರ್ಭದಲ್ಲಿ ದೇಸಿ ಜನ ಮತ್ತು ಪಠ್ಯಗಳು ನಿರ್ಲಕ್ಷ್ಯಕ್ಕೆ ಒಳಗಾಗುತ್ತಿದ್ದಾಗ ಮುಖ್ಯವಾಗಿ ಎರಡು ರೀತಿಯ ವಿದ್ಯಮಾನಗಳನ್ನು ಗುರುತಿಸಬಹುದು. ಒಂದೆಡೆ, ಅವುಗಳನ್ನು ಶ್ರದ್ಧೆಯಿಂದ ಹುಡುಕಿ ಸಂಗ್ರಹಿಸಿದರೆ, ಇನ್ನೊಂದೆಡೆ ಅವುಗಳನ್ನು ಧಾರ್ಮಿಕ ಪಠ್ಯವನ್ನಾಗಿ ಪರಿಗಣಿಸಲಾಯಿತು. ಅಂದರೆ, ಸಾಂಸ್ಕೃತಿಕ ಅನನ್ಯತೆಗೆ ವಚನಗಳನ್ನು ಬಳಸಲಾಯಿತು. ಕ್ರಮೇಣ ಇಂಗ್ಲೀಷ್ ಸಾಹಿತ್ಯ ಪ್ರವೇಶದಿಂದ ಧರ್ಮಾತೀತ ಮನೋಭಾವ ಬೆಳೆಯುತ್ತಿದ್ದಾಗ ನವೋದಯ ಪಂಥದವರು ರಮ್ಯಪಂಥದ ಭಾವಪ್ರಧಾನ ಕಾವ್ಯಪ್ರಕಾರವನ್ನು ವಚನಗಳಲ್ಲಿ ಗುರುತಿಸಿದರೆ, ನವ್ಯದವರು ಕೃತಿಕೇಂದ್ರಿತ ಓದಿಗೆ ಮಾದರಿಗಳಾಗಿ ವಚನಗಳನ್ನು ಬಳಸಿದರು. ಈ ಎರಡು ಮಾದರಿಗಳು ಆತ್ಯಂತಿಕವಾದಾಗ ಬಂಡಾಯ ಪಂಥದವರು ಅವುಗಳನ್ನು ವರ್ಗದ ಹಿನ್ನೆಲೆಯಲ್ಲಿ ಓದಿದರೆ ಮಹಿಳಾವಾದಿ ಚಿಂತಕರು ಸ್ತ್ರೀ ಸಂವೇದನೆಯ ಓದನ್ನು ದಲಿತಪಂಥದ ಚಿಂತಕರು ಜಾತಿಯ ಪ್ರಶ್ನೆಗಳನ್ನು ವಚನಗಳ ಓದಿಗೆ ಸೇರಿಸಿದರು.

## ಅಧುನಿಕ ಸಂಶೋಧನೆ ಮತ್ತು ವಚನ ಸಾಹಿತ್ಯ

ಕನ್ನಡ ಸಾಹಿತ್ಯದ ಪರಂಪರೆಯಲ್ಲಿ ವಿಮರ್ಶಾ ಪ್ರಜ್ಞೆಯನ್ನು ಗುರುತಿಸುವುದಾದರೆ ಎಲ್ಲ ಸಾಹಿತ್ಯ ಕೃತಿಗಳ ಪ್ರಥಮ ಗುರಿಯು ಸಹೃದಯನನ್ನು ತಲುಪುವುದು. ಹೀಗಾಗಿ ಇಲ್ಲಿ ಸಿಗುವ ಅಭಿಪ್ರಾಯಗಳನ್ನೇ ವಿಮರ್ಶೆ ಎನ್ನುವುದಾದರೆ ಪ್ರಾಚೀನ ಕನ್ನಡ ಕೃತಿಗಳಲ್ಲಿಯೂ ವಿಮರ್ಶಾ ಪ್ರಜ್ಞೆಯನ್ನು ಕಾಣಬಹುದು. ಪ್ರಾಚೀನ ಕೃತಿಗಳಲ್ಲಿ ಕಾಣಸಿಗುವ ಕೃತಿಕಾರರ ಕುರಿತ ಹೊಗಳಿಕೆ ಮತ್ತು ನಿಂದನೆಯ ಮಾತುಗಳು ವಿಮರ್ಶೆಯ ಉದಾಹರಣೆಗಳಾಗುತ್ತವೆ. ಮುಂದುವರೆದು ವಿಮರ್ಶೆ ಎಂಬ ಶಾಸ್ತ್ರೀಯ ಶಿಸ್ತು ನಮ್ಮಲ್ಲಿ ಯಾಕೆ ಬೆಳೆದು ಬರಲಿಲ್ಲ ಎಂಬ ಪ್ರಶ್ನೆಗೆ ಹಲವು ವಿದ್ವಾಂಸರು ಕಾರಣ ನೀಡುತ್ತಾರೆ. ಪುಸ್ತಕ ಪ್ರಕಟನೆಯ ಕ್ಲಿಷ್ಟತೆ, ಓದುಗ ವರ್ಗದ ಪ್ರಮಾಣ ಕಡಿಮೆ, ಕಾವ್ಯವು ದೈವೀ ಪ್ರಸಾದ ಎಂಬ ಕಲ್ಪನೆಗಳು ಕಾವ್ಯಾಧ್ಯಯನವನ್ನು ಬಹುಪಾಲು ಧಾರ್ಮಿಕ ವಿಧಿವಿಧಾನ ಎಂಬಂತೆ ಪರಿಗಣಿಸಲಾಗಿತ್ತು. ಹೀಗಾಗಿ ವಚನಗಳ ಅಧ್ಯಯನವು ಏಕರೂಪಿಯಾಗಿತ್ತು.

ಪಾಶ್ಚಾತ್ಯರ ಸಂಪರ್ಕದ ನಂತರದಿಂದಲೇ ಕನ್ನಡದಲ್ಲಿಯೂ ಶಾಸ್ತ್ರಬದ್ಧ ವಿಮರ್ಶೆಯ ಪ್ರಜ್ಞೆ ಕಾಣಿಸಿಕೊಂಡಿತು. ಮತೀಯ ಕಾರಣ ಹಾಗೂ ಆಳುವ ವರ್ಗಕ್ಕೆ ಜನಸಂಪರ್ಕ ಅನಿವಾರ್ಯ ಎಂಬುದನ್ನು ಅರಿತು ಕ್ರಿಶ್ಚಿಯನ್ ಮಿಶನರಿಗಳ ಮೂಲಕ ಕನ್ನಡ ಭಾಷೆಯ ಹಾಗೂ ಸಾಹಿತ್ಯದ ಅಧ್ಯಯನಕ್ಕೆ ಬ್ರಿಟಿಷರು ಶುರುವಾಯಿತಿ ಇಟ್ಟರು. ಹಳೆಯ ಸಾಹಿತ್ಯ ಕೃತಿಗಳ ಗ್ರಂಥ ಸಂಪಾದನೆ, ವ್ಯಾಕರಣ ಮತ್ತು ಕೋಶಗಳ ಸೃಷ್ಟಿಗಳೇ ಮೊದಲ ಹಂತದ ರಚನೆಗಳಾದವು. ಸಾಹಿತ್ಯ ಅಧ್ಯಯನದ ಮೊದಲ ಹಂತವಾಗಿ ಹರಡಿ ಹೋಗಿದ್ದ ಹಸ್ತಪ್ರತಿಗಳನ್ನು ಸಂಗ್ರಹಿಸಿ ಪಾಠ ಪರಿಷ್ಕರಣದಂತಹ ವೈಜ್ಞಾನಿಕ ಅಂಶಗಳನ್ನು ಮೇಳೈಸಿಕೊಂಡು ಹೊಸ ರೂಪ ಪಡೆದುಕೊಂಡಿತು. ಮುಖ್ಯವಾಗಿ ಇಂತಹ ಸಂಪಾದಿತ ಕೃತಿಗಳ ಮುನ್ನುಡಿ ರೂಪದಲ್ಲಿನ ಪರಿಚಯಾತ್ಮಕ ಸ್ವರೂಪದ ಬರಹಗಳು ವಿಮರ್ಶೆಯ ಮೊದಲ ಹೆಜ್ಜೆಗಳಾದವು.

ಕನ್ನಡ ಸಾಹಿತ್ಯ ವಿಮರ್ಶೆಯು ಕನ್ನಡ ಸಾಹಿತ್ಯ ಪಡೆದುಕೊಂಡ ತಿರುವುಗಳೊಂದಿಗೆ ಅತ್ಯಂತ ನಿಕಟವಾದ ಸಂಪರ್ಕವನ್ನು ಇಟ್ಟುಕೊಳ್ಳುತ್ತಾ ಬಂದಿದೆ. ಇಲ್ಲಿನ ಹಲವಾರು ಪಂಥಗಳು ವಿಮರ್ಶೆಯಾಗಿ ರೂಪುಗೊಂಡಿವೆ. ಹೀಗೆ ಪಂಥಾದಾರಿತವಾಗಿ ಕನ್ನಡ ವಿಮರ್ಶೆ ಗುರುತಿಸಿಕೊಂಡಿರುವ ಕಾರಣ ನಿರ್ಲಿಪ್ತ ವಿಮರ್ಶೆಗಳು ಎನ್ನುವ ಹಾಗಿಲ್ಲ. ಪ್ರಾಚೀನ ಸಾಹಿತ್ಯದ ಕುರಿತಾಗಿ ಬಂದ ಕನ್ನಡ ವಿಮರ್ಶೆಯು ಹಲವಾರು ಸಾಹಿತ್ಯಿಕ ಮತ್ತು ತಾತ್ವಿಕ ಸಿದ್ಧಾಂತಗಳಿಗೆ ಬದ್ಧವಾಗಿ ಬೆಳೆದುಬಂದಿದ್ದರೂ ಅದು ಎರಡು ಪ್ರಧಾನ ನಿಲುವುಗಳನ್ನು ಪ್ರತಿಪಾದಿಸುತ್ತಾ ಬಂದಿದೆ. ಒಂದು. ಧರ್ಮ ಸಾಪೇಕ್ಷವಾದ ತಾತ್ವಿಕ ನಿಲುವು, ಎರಡು. ಧರ್ಮ ನಿರಪೇಕ್ಷವಾದ ತಾತ್ವಿಕ ನಿಲುವು. ಅಂತೆಯೇ ವಚನ ಸಾಹಿತ್ಯದ ಕುರಿತಾದ ತೀರ್ಮಾನಗಳೂ ಕೂಡ ಎರಡು ನೆಲೆಯಲ್ಲಿ ವಿಸ್ತರಿಸುತ್ತಾ ಬಂದಿವೆ. ಧರ್ಮ ಸಾಪೇಕ್ಷವಾದ ವಿಮರ್ಶೆಗಳು ವಚನಕಾರರ ತಾತ್ವಿಕತೆಯನ್ನು ವಿಶ್ವಧರ್ಮವೆಂಬ ಅತ್ಯಂತ ವಿಸ್ತಾರವಾದ ನೆಲೆಯಲ್ಲಿ ಅರ್ಥೈಸುತ್ತಾ ಅವುಗಳ ಕಾವ್ಯ ಸ್ವರೂಪ, ಸೌಂದರ್ಯ ಇತ್ಯಾದಿ ನೆಲೆಯ ಚರ್ಚೆಗಳಲ್ಲಿ ತೊಡಗಿದ್ದರೆ, ಧರ್ಮ ನಿರಪೇಕ್ಷವಾದ ವಿಮರ್ಶೆಗಳು ಅವುಗಳ ತಾತ್ವಿಕತೆಯನ್ನ ಧರ್ಮಾತೀತವಾದ ನೆಲೆಯಲ್ಲಿ ಅರ್ಥೈಸುತ್ತಾ ವಚನಗಳಲ್ಲಿನ ಬಂಡಾಯ ಧೋರಣೆ, ಸಮಾನತೆ, ಪ್ರತಿಭಟನೆ, ಇತ್ಯಾದಿ ನೆಲೆಯ ಚರ್ಚೆಗಳಲ್ಲಿ ತೊಡಗಿವೆ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಹೀಗೆ ಆರಂಭಗೊಂಡ ವಚನವಿಮರ್ಶೆಗಳು ನಂತರ ಮಾರ್ಕ್ಸವಾದಿ ವಿಚಾರಧಾರೆಗೆ ತನ್ನನ್ನು ಒಡ್ಡಿಕೊಂಡರೂ, ಸಂಪೂರ್ಣ ಧರ್ಮನಿರಪೇಕ್ಷಿತವಾಗಲಿಲ್ಲ. ವಚನ ಸಾಹಿತ್ಯಕ್ಕಿದ್ದ ಕಾವ್ಯೇತರ ಬದ್ಧತೆಗಳು ಮುಂದೆ ಬಂದವಾದರೂ ವಿಶೇಷವಾದ ಅಭಿಪ್ರಾಯಗಳು ರೂಪುಗೊಳ್ಳಲಿಲ್ಲ. ಆದರೆ ಬರಹಗಾರರ ಒಕ್ಕೂಟ ಮತ್ತು ಬಂಡಾಯ ಸಾಹಿತ್ಯ ಸಂಘಟನೆಗಳು ಹುಟ್ಟಿಕೊಂಡ ನಂತರದಲ್ಲಿ ಸಾಹಿತ್ಯವನ್ನು ಸಾಮಾಜಿಕ ಸ್ಥಿತಿಗತಿಗಳ ಹಿನ್ನಲೆಯಲ್ಲಿ ಗ್ರಹಿಸುವಿಕೆ ಶುರುವಾಯಿತು. ಇದರಂತೆಯೇ ವಚನ ಸಾಹಿತ್ಯವನ್ನು ಕೂಡ ವಚನ ಚಳುವಳಿಯ ಉಪಉತ್ಪನ್ನವಾಗಿ ಪರಿಗಣಿಸಿದ ಕಾರಣಕ್ಕೆ ಅಲ್ಲಿನ ಚರ್ಚೆಯ ವಿಷಯಗಳು ಬೇರೆಯಾದವು. ಅದುವರೆಗೂ ನಡೆದು ಬಂದಿದ್ದ ಧರ್ಮಾದಾರಿತ ಕಾವ್ಯಾತ್ಮಕ ಚರ್ಚೆಗಳು ಧರ್ಮಾತೀತ ಕಾವ್ಯೇತರ ಚರ್ಚೆಯಾಗಿ ಪಲ್ಲಟಗೊಂಡವು. ವಚನ ಚಳುವಳಿಯಲ್ಲಿ ಭಾಗವಹಿಸಿದ್ದ ಬೇರೆ ಬೇರೆ ಜಾತಿಗಳ, ಕಸುಬುಗಳ ಜನ ಹಾಗೂ ಅವರ ನಡುವಿನ ಸಂಬಂಧದ ಹಿನ್ನಲೆಯಲ್ಲಿ ವಚನ ಸಾಹಿತ್ಯದ ನಿಲುವುಗಳನ್ನು ವಿಶ್ಲೇಷಣೆಗೆ ಒಳಪಡಿಸುವ ಮಾದರಿ ರೂಪುಗೊಂಡಿತು. ನಾಯಕ ಪ್ರಧಾನವಾದ ವಚನ ಚಳುವಳಿಯ ಅಧ್ಯಯನ ಮಾದರಿಯು ಸಮುದಾಯ ಪ್ರಧಾನವಾಗಿ ವರ್ಗಾವಣೆಗೊಂಡಿತು. ಬಸವಣ್ಣ ಮತ್ತು ಅಲ್ಲಮ ಇವರ ಜೊತೆಗೆ ನೂರಾರು ಜನ ವಚನಕಾರರು ಚರ್ಚೆಯ ನೆಲೆಗಳನ್ನು ಪ್ರಭಾವಿಸತೊಡಗಿದರು. ಪರಿಣಾಮವಾಗಿ ಅದುವರೆಗೂ ಕಾವ್ಯತತ್ವ, ಪ್ರತಿಮಾತ್ಮಕತೆ, ವಿಶ್ವಧರ್ಮ ಇತ್ಯಾದಿಯಾಗಿ ನಡೆಯುತ್ತಿದ್ದ ಚರ್ಚೆಗಳು ಇಲ್ಲಿ ಬಂಡಾಯ, ಪ್ರತಿಭಟನೆ ಇತ್ಯಾದಿ ನೆಲೆಗೆ ತಿರುಗಿತು. ಸಾಹಿತ್ಯ ವಿಮರ್ಶೆ ಎನ್ನುವುದು ಸಾಂಸ್ಕೃತಿಕ ವಿನ್ಯಾಸದ ಸ್ವರೂಪವನ್ನು ಪಡೆದುಕೊಂಡಿತು.

ವಚನಗಳ ವಿವಿಧ ಓದುಗಳು ಒಂದು ಮುಖ್ಯ ವಿಷಯವನ್ನು ಪ್ರಸ್ತುತಪಡಿಸುತ್ತದೆ. ಈ ಓದುಗಳೊಡನೆ. ವಚನಗಳನ್ನು ವಿವಿಧ ರೀತಿಯಲ್ಲಿ ದಾಖಲಿಸಿದ ರೀತಿಯನ್ನೂ ನಾವು ಗಮನಿಸಬಹುದು. ಬಸವನಾಳರ ನಂತರ ಹೆಚ್ಚಿನವರು ಪದ್ಯ ಶೈಲಿಯಲ್ಲಿ ದಾಖಲಿಸಿದರೂ ಕೆಲವರು ಪುನ: ಗದ್ಯ ಶೈಲಿಯಲ್ಲಿ ವಚನಗಳನ್ನು ದಾಖಲಿಸುತ್ತಾರೆ. ಇವೆಲ್ಲವನ್ನು ವೈರುಧ್ಯದಲ್ಲಿ ಗೃಹಿಸುವುದಕ್ಕಿಂತ ಸಮನ್ವಯದ ನೆಲೆಯಲ್ಲಿಯೂ ಗೃಹಿಸಬಹುದು. ಯಾವುದೇ ಚಾರಿತ್ರಿಕ ಘಟನೆ ಒಂದು ಕಾಲದಲ್ಲಿ ಮುಗಿದು ಹೋಗುವುದಿಲ್ಲ. ಅದು ನೆನಪು, ವಿಶ್ಲೇಷಣೆ, ಶೋಧನೆಗಳೊಡನೆ ಮರುರಚನೆಗೊಳ್ಳುತ್ತಾ ಹೋಗುತ್ತದೆ. ಒಂದು ಮೂಲಘಟನೆ ಅಥವಾ ಇತರ ಘಟನೆ ಅಥವಾ ಪಠ್ಯಗಳನ್ನು ರಚಿಸುತ್ತಾ ಹೋಗುತ್ತದೆ. ಆದುದರಿಂದ ಅವುಗಳಲ್ಲಿ ತಪ್ಪುಒಪ್ಪುಗಳನ್ನು ಹುಡುಕುವುದಕ್ಕಿಂತ ಮೂಲ ಪಠ್ಯದ ಬೇರೆ ಬೇರೆ ಓದುಗಳು, ದಾಖಲೆಗಳು ಮತ್ತು ವಿವರಣೆಗಳು ಎಂದು ಗುರುತಿಸಿ ಅವುಗಳ ಹಿಂದಿನ ಪ್ರಭಾವ, ಪ್ರೇರಣೆಗಳನ್ನು ವಿವರಿಸುವುದು ಒಳಿತು. ಯಾಕೆಂದರೆ, ಮೂಲಘಟನೆಗೆ ಸಂಬಂಧಿಸಿದ ಸಮುದಾಯದ ಆಚಾರ, ವಿಚಾರಗಳು ಬದಲಾದಂತೆ ಅದರ ನೆನಪು ರೂಪಾಂತರಗೊಂಡು ಒಂದು ವಿಶಿಷ್ಟ ರೀತಿಯ ಓದಿಗೆ ದಾರಿ ಮಾಡಿಕೊಡುತ್ತದೆ. ಇದನ್ನು ಸಂಘರ್ಷದ ನೆಲೆಯಲ್ಲಿ ಗ್ರಹಿಸುವುದಕ್ಕಿಂತ ಪಠ್ಯ ಹೊಸ ಅರ್ಥವನ್ನು ಪಡೆಯುವ ಕ್ರಮವೆಂದು ಗುರುತಿಸುವುದು ಉಚಿತವಾಗಿದೆ.

## ಪರಾಮರ್ಶನ ಗ್ರಂಥಗಳು


- **ಅಮರೇಶ ನುಗಡೋಣಿ (2004)** : ಬಸವಣ್ಣನ ವಚನಗಳು : ಸಾಂಸ್ಕೃತಿಕ ಮುಖಾಮುಖಿ ಹಂಪಿ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ.
- **ಅಮರೇಶ ನುಗಡೋಣಿ (2002)** : ಶೂನ್ಯ ಸಂಪಾದನೆಗಳು, ಸಾಂಸ್ಕೃತಿಕ ಮುಖಾಮುಖಿ, ಹಂಪಿ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ.
- **ಅರವಿಂದ ಮಾಲಗತ್ತಿ** : ಕನ್ನಡ ವಿಮರ್ಶೆಯ ಮಾರ್ಗ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ,
- **ಆಶಾದೇವಿ ಎಂ. ಎಸ್. (2006)** : ವಚನ ಪ್ರವೇಶ (ಕೆ. ವಿ. ಸುಬ್ಬಣ್ಣ ನೆನಪಿನ ಮೊದಲ ಓದು ಪುಸ್ತಕ ಮಾಲೆ) (ಸಂ), ಹೆಗ್ಗೋಡು, ಸಾಗರ ಅಕ್ಷರ ಪ್ರಕಾಶನ.
- **ಕೃಷ್ಣಮೂರ್ತಿ ಎಚ್. ಟಿ.** : ಅಧುನಿಕ ಕನ್ನಡ ವಿಮರ್ಶೆ, ಶಿವಮೊಗ್ಗ ಡಿ.ವಿ.ಎಸ್ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ
- **ಗಿರಡ್ಡಿ ಗೋವಿಂದರಾಜ (1997)** : ವಚನ ವಿನ್ಯಾಸ, 1997, ಹೆಗ್ಗೋಡು, ಸಾಗರ ಅಕ್ಷರ ಪ್ರಕಾಶನ.
- **ಚಂದ್ರಶೇಖರ ನಂಗಲಿ (ಸಂ.) (2005)** : ಹೊಸತು ವಾಚಿಕೆ : ವಚನ ಸಾಹಿತ್ಯ, ನವಕರ್ನಾಟಕ ಪ್ರಕಾಶನ.


■■





ವಿದ್ಯಾನಿಧಿ ಪ್ರಕಾಶನ®
ಶ್ರೀ ಶಿವಕುಮಾರ ಏಜನ್ಸಿ®
ಶೈಕ್ಷಣಿಕ ಪುಸ್ತಕಗಳ ಪ್ರಕಾಶಕರು ಮತ್ತು ಮಾರಾಟಗಾರರು
ಸ್ಟೇಶನ್ ರೋಡ ಮತ್ತು 'ನನಸು', ಹಳೆ ಸರಕಾರಿ ಆಸ್ಪತ್ರೆ ಎದುರಿಗೆ,
ಎಸ್.ಪಿ. ಗದಗ ಕಂಪೌಂಡ, ಜೆ.ಟಿ. ಮಠ ರೋಡ, ಗದಗ-582 101
ದೂರವಾಣಿ : 08372–200527
e-mail : vidyanidhiprakashana@gmail.com.
APPROVED BY UGC CARE

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಹೈದರ್ ಮತ್ತು ಟಿಪ್ಪು ಕಾಲದ ನಾಣ್ಯ ವ್ಯವಸ್ಥೆ : ಚಾರಿತ್ರಿಕ ವಿಶ್ಲೇಷಣೆ

✍ **ಡಾ. ಬಿ. ಜಯಮ್ಮ,** ಸಹ ಪ್ರಾಧ್ಯಾಪಕರು ಮುಖ್ಯಸ್ಥರು, ಇತಿಹಾಸ ವಿಭಾಗ ಹೆಚ್.ಪಿ.ಪಿ.ಸಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಳ್ಳಕೆರೆ.

ನಾಣ್ಯಗಳು ಮಾನವನ ವ್ಯಾಪಾರ-ವಾಣಿಜ್ಯದ ಅತೀ ಮುಖ್ಯವಾದ ಸಂಕೇತ. ಹಣವಿಲ್ಲದೆ ಯಾವುದೇ ತೆರನಾದ ಆರ್ಥಿಕ ವ್ಯವಹಾರವನ್ನು ಕಲ್ಪಿಸಿಕೊಳ್ಳಲೂ ಆಗದು. ಆರ್ಥಿಕ ಸ್ಥಿತಿಗತಿ, ಸಾಂಸ್ಕೃತಿಕ ಬಂಧುತ್ವ, ಚರಿತ್ರೆಯ ಭವ್ಯತೆಯನ್ನು ಮುಂದಿನ ಪೀಳಿಗೆಗೆ ವ್ಯವಸ್ಥಿತವಾಗಿ ಕಟ್ಟಿಕೊಡುವ ಕೆಲಸವನ್ನು ನಾಣ್ಯಗಳು ಸಹಜವಾಗಿ ಮಾಡಿವೆ. ಮೇಲ್ನೋಟಕ್ಕೆ ನಾಣ್ಯ ಲೋಹದ ಚೂರಾಗಿ ಕಂಡರೂ ಅದು ಲೋಹದ ಚೂರಲ್ಲ. ಜೀವಂತ ಸಮಾಜದ ಆರ್ಥಿಕ ವ್ಯವಸ್ಥೆಯ ಸಂಬಂಧದ ಕೊಂಡಿಯಾಗಿದೆ. ಸಿರಿಸಂಪತ್ತಿನ ಸಾಕ್ಷಿ. ಭಾರತೀಯರಿಗೆ ಧನಲಕ್ಷ್ಮಿ. ಅಲಂಕಾರ ಹಾಗೂ ಕಲಾತ್ಮಕತೆಯ ಪ್ರಭುತ್ವದ ವೈವಿಧ್ಯತೆಯ ದಾಖಲೆ, ಧರ್ಮ, ಸಾಹಿತ್ಯ, ಕಲೆ ಮತ್ತು ಬದುಕಿನ ನೈಜ ಅಂಶಗಳ ಪ್ರತಿಬಿಂಬ. ಆರ್ಥಿಕ ವಲಯದ ಸಮಷ್ಟೀ ಚಾಲಕ ಚಿಹ್ನೆ ಎಂದೇ ಹೇಳಬಹುದು. ಕರ್ನಾಟಕವನ್ನಾಳಿದ ರಾಜಮನೆತನಗಳು ತಮ್ಮದೇ ಆದ ನಾಣ್ಯಗಳನ್ನು ಚಲಾವಣೆಗೆ ತಂದಿರುವುದನ್ನು ಚರಿತ್ರೆಯ ಪುಟಗಳಲ್ಲಿ ಕಾಣಬಹುದು.

ಇಂತಹ ನಾಣ್ಯಗಳ ವ್ಯವಸ್ಥೆಯಲ್ಲಿ ಹೈದರಾಲಿ ಟಿಪ್ಪುಸುಲ್ತಾನರು ತನ್ನದೇ ವೈಶಿಷ್ಟ್ಯತೆಯನ್ನು ಗುರುತಿಸಿಕೊಂಡಿದ್ದರು. ನಾಣ್ಯಶಾಸ್ತ್ರದ ದೃಷ್ಟಿಯಿಂದ ಇವರ ಕಾಲವನ್ನು ಗಮನಾರ್ಹವಾದ ಕಾಲವೆಂದೇ ಹೇಳಬಹುದು. ಹೈದರ್ ಕ್ರಿ. ಶ. 1761ರಲ್ಲಿ ರಾಜ್ಯವನ್ನಾಳಲು ಆರಂಭಿಸಿದನು, ಅವನು ನಗರದಲ್ಲಿ ಟಂಕಸಾಲೆಯನ್ನು ಸ್ಥಾಪಿಸಿದ್ದು ಎರಡು ವರ್ಷಗಳ ನಂತರ, ಅಂದರೆ 1763ರಲ್ಲಿ ತನ್ನ ಪ್ರಾಬಲ್ಯವನ್ನು ಸ್ಥಿರಪಡಿಸಿಕೊಂಡ ನಂತರವೇ ಹೈದರ್ ಅಲಿಯು ತನ್ನದೇ ಆದ ನಾಣ್ಯಗಳನ್ನು ಮುದ್ರಿಸಲು ಆರಂಭಿಸಿದನು.

ಹೈದರ್ ಮತ್ತು ಟಿಪ್ಪು ಸುಲ್ತಾನರು ನಾಣ್ಯ ತಯಾರಿಕೆಗೆ ಟಂಕಸಾಲೆಗಳನ್ನು ಸ್ಥಾಪಿಸಿ ವಿವಿಧ ಬಗೆಯ ನಾಣ್ಯಗಳನ್ನು ಚಲಾವಣೆಗೆ ತಂದರು. ಅವರ ನಾಣ್ಯಗಳು ಚಿನ್ನ, ಬೆಳ್ಳಿ, ತಾಮ್ರಗಳಿಂದ ತಯಾರಿಸಲ್ಪಟ್ಟಿದ್ದು, ದೇವತೆಗಳ ಚಿತ್ರ, ಪ್ರಾಣಿಯ ಚಿತ್ರ, ಸಂಖ್ಯೆಗಳು, ಅರೇಬಿಕ್ ಭಾಷೆಯ ಲಿಪಿ ಮೊದಲಾದ ಅಂಶಗಳನ್ನು ಹೊಂದಿದ್ದವು. ಹೈದರ್ ಮತ್ತು ಟಿಪ್ಪುಸುಲ್ತಾನರು ವಿಜಯನಗರ ಹಾಗೂ ಕೆಳದಿ ಅರಸರುಗಳ ಕಾಲದಲ್ಲಿದ್ದ ನಾಣ್ಯಗಳ ಮಾದರಿಯನ್ನು ಅನುಸರಿಸಿದರು. ಆದರೆ ಟಿಪ್ಪು ಅಚ್ಚುಹಾಕಿಸಿದ ನಾಣ್ಯಗಳಲ್ಲಿದ್ದ ತಾಂತ್ರಿಕ ಕೌಶಲ್ಯ ಆಧುನಿಕ ನಾಣ್ಯಶಾಸ್ತ್ರಜ್ಞರನ್ನು ಆಶ್ಚರ್ಯಗೊಳಿಸುವಂತದ್ದಾಗಿತ್ತು. ಹೈದರಾಲಿಯು ಶ್ರೀರಂಗಪಟ್ಟಣ, ನಗರ, ಬಳ್ಳಾರಿಯಲ್ಲಿ ಟಂಕಸಾಲೆಯನ್ನು ಸ್ಥಾಪಿಸಿದ್ದನು. ಟಿಪ್ಪು ಬಿದನೂರು, ನಗರ, ಚಿತ್ರದುರ್ಗ, ಗುರ್ರಂಕೊಂಡ, ಹೊಳೆಹೊನ್ನೂರು, ಧಾರವಾಡ, ಸತಾರ, ಅಬರ್‌ಫರ್, ಗುತ್ತಿ, ಚಿತ್ರದುರ್ಗ ಮುಂತಾದ ಪ್ರದೇಶಗಳಲ್ಲಿ ಟಂಕಸಾಲೆಗಳನ್ನು ಸ್ಥಾಪಿಸಿದ್ದನು. ಇಲ್ಲಿ ಟಂಕಿಸಿದ ನಾಣ್ಯಗಳು ಸುಂದರವಾಗಿದ್ದುದಲ್ಲದೆ ತಮ್ಮ ಇತರ ಗುಣಲಕ್ಷಣಗಳಿಂದ ನಾಣ್ಯಶಾಸ್ತ್ರಜ್ಞರನ್ನು ತಮ್ಮತ್ತ ಸೆಳೆದಿವೆ. ಹಾಗಾಗಿ ಹೈದರ್ ಮತ್ತು ಟಿಪ್ಪುವಿನ ನಾಣ್ಯಗಳ ವಿಷಯದಲ್ಲಿ ಹಲವಾರು ನಾಣ್ಯಶಾಸ್ತ್ರಜ್ಞರು ಪರಿಶೋಧನೆಗಳನ್ನು ನಡೆಸಿದ್ದಾರೆ.

ಮೊಹಿಬ್ಬುಲ್ ಹಸನ್‌ರವರು ತಮ್ಮ ಕೃತಿಯಲ್ಲಿ ಶ್ರೀರಂಗಪಟ್ಟಣದಲ್ಲಿ ಐದು ಟಂಕಸಾಲೆಗಳಿದ್ದವು. ಬೆಳ್ಳಿ ಮತ್ತು ಬಂಗಾರದ ನಾಣ್ಯಗಳನ್ನು ಟಂಕಿಸುತ್ತಿದ್ದ ಟಂಕಸಾಲೆಯು ಅರಮನೆಯ ಆವರಣದಲ್ಲಿದ್ದಿತೆಂದು, ತಾಮ್ರದ ನಾಣ್ಯಗಳನ್ನು ಮಾಡುತ್ತಿದ್ದ ಟಂಕಸಾಲೆಗಳು ಅರಮನೆಯ ಹೊರಗಿದ್ದವು, ಪ್ರತಿಯೊಂದು ಒಬ್ಬ ದರೋಗನ ಕೈ ಕೆಳಗಿದ್ದು, ಖಜಾನೆಯ ಇಲಾಖೆಗೆ ಸೇರಿದ್ದಿತು. ಮುಖ್ಯನಾದ ದರೋಗನು ಟಂಕಸಾಲೆಗಳಿಗೆ ಬೆಳ್ಳಿ, ಬಂಗಾರ, ಮತ್ತು ತಾಮ್ರಗಳನ್ನೊದಗಿಸಿ ಅವುಗಳನ್ನು ಟಂಕಿಸಿದ ಮೇಲೆ ಬೊಕ್ಕಸದಲ್ಲಿಡುತ್ತಿದ್ದನು ಎಂದು ವಿವರಿಸಿದ್ದಾರೆ.

ಎಡ್ವರ್ಡ್ ಮೂರ್ ಎಂಬಾತನು ಕ್ರಿ.ಶ. 1794ರಲ್ಲಿ ರಚಿಸಿದ "ನರೋಟಿವ್ಸ್" ಎಂಬ ಗ್ರಂಥದಲ್ಲಿ ಟಿಪ್ಪುವಿನ ನಾಣ್ಯಗಳ ಕುರಿತು ತಿಳಿಸಿದ್ದಾನೆ. ಮಾರ್ಸ್‌ಟೆನ್ ಮತ್ತು ಹಾಕ್ಸ್ ಅವರ ಗ್ರಂಥಗಳಲ್ಲಿ ಹೈದರ್ ಮತ್ತು ಟಿಪ್ಪು ಅವರ ಹೇರಳವಾದ ನಾಣ್ಯಗಳ ಬಗ್ಗೆ ತಿಳಿಸಿದ್ದಾರೆ. ಕಿರ್ಕ್ ಪ್ಯಾಟ್ರಿಕ್ ಎಂಬಾತನು ತನ್ನ "ಸೆಲೆಕ್ಟ್ ಲೆಟರ್ಸ್ ಆಫ್ ಟಿಪ್ಪುಸುಲ್ತಾನ್" ಎಂಬ ಗ್ರಂಥದಲ್ಲಿ ಟಿಪ್ಪುವಿನ ನಾಣ್ಯಗಳ ಬಗ್ಗೆ ಮಾಹಿತಿ ನೀಡಿದ್ದಾರೆ. ಥರ್ಸ್ಟನ್ ಎಂಬಾತ ಮದ್ರಾಸಿನ ಸರ್ಕಾರಿ ವಸ್ತು ಸಂಗ್ರಹಾಲಯದಲ್ಲಿದ್ದ ಟಿಪ್ಪುಸುಲ್ತಾನನ ನಾಣ್ಯಗಳ ಬಗ್ಗೆ ವಿವರಿಸಿದ್ದಾನೆ. ಹಾಗೆಯೇ ಟಫೆನೆಲ್ ಎಂಬುವವನು ಬೆಂಗಳೂರಿನ ಸರ್ಕಾರಿ ವಸ್ತು ಸಂಗ್ರಹಾಲಯದಲ್ಲಿದ್ದ ಹೈದರಾಲಿ ಮತ್ತು ಟಿಪ್ಪುಸುಲ್ತಾನನ ನಾಣ್ಯಗಳು ಬಹು ಅಪರೂಪದ ನಾಣ್ಯಗಳೆಂದು ಹೇಳಿದ್ದಾನೆ. ಜಾಕ್‌ಸನ್ ಎನ್ನುವವರು ಕಾಯಿನ್ ಕಲೆಕ್ಟಿಂಗ್ ಇನ್ ಮೈಸೂರ್ ಎಂಬ ಗ್ರಂಥದಲ್ಲಿ ಹೈದರಾಲಿ ಮತ್ತು ಟಿಪ್ಪುವಿನ ನಾಣ್ಯಗಳ ಗುಣಮಟ್ಟತೆಯ ಕುರಿತು ವಿವರಿಸಿದ್ದಾರೆ. ಕಾಯಿನ್ಸ್ ಆಫ್ ಟಿಪ್ಪುಸುಲ್ತಾನ್ ಎಂಬ ಟೈಲರ್ ರವರ ಚಿಕ್ಕ ಗ್ರಂಥವು ಟಿಪ್ಪುವಿನ ನಾಣ್ಯಗಳಲ್ಲಿ ಟಂಕಿಸಲಾಗಿದ್ದ ವರ್ಷಗಳನ್ನು ವಿವರಿಸುವಲ್ಲಿ ಹೆಚ್ಚು ಮಹತ್ವಪೂರ್ಣದ್ದಾಗಿದೆ. ಈ ಮೇಲ್ಕಂಡ ಗ್ರಂಥಗಳಲ್ಲಿದ್ದ ಎಲ್ಲಾ ವಿಷಯಗಳನ್ನು ಹಂಡರ್‌ಸನ್ ಅರ್ಥಮಾಡಿಕೊಂಡು ಒಗ್ಗೂಡಿಸಿ ತನ್ನ "ಕಾಯಿನ್ಸ್ ಆಫ್ ಟಿಪ್ಪುಸುಲ್ತಾನ್" ಎಂಬ ಗ್ರಂಥದಲ್ಲಿ ಯಾವ ಸ್ಥಳದ ಟಂಕಸಾಲೆಯಿಂದ ಯಾವ ಹೆಸರಿನ ನಾಣ್ಯ, ಅವುಗಳ ತೂಕ, ವಿಸ್ತೀರ್ಣ ಮತ್ತು ಯಾವ ವರ್ಷದಲ್ಲಿ ಅದು ಅಚ್ಚಾಯಿತು ಎಂಬ ವಿಷಯದ ಮಾಹಿತಿಯನ್ನು ಈ ಗ್ರಂಥವು ವಿವರಿಸುತ್ತದೆ.

## ಹೈದರಾಲಿಯ ನಾಣ್ಯಗಳ ವ್ಯವಸ್ಥೆ

ಹೈದರಾಲಿಯು ಅನಕ್ಷರಸ್ತನಾದರೂ ತನ್ನ ಚತುರತೆಯಿಂದ ಕ್ರಿ.ಶ. 1762ರಲ್ಲಿ ಮೈಸೂರಿನ ದಳವಾಯಿ ನಂಜರಾಜಯ್ಯನನ್ನು ಅಧಿಕಾರದಿಂದ ಕೆಳಗಿಳಿಸಿ ಮೈಸೂರಿನ ಒಡೆಯರನ್ನು ತನ್ನ ಅಧಿಕಾರದ ಕೈ ಮುಷ್ಟಿಯಲ್ಲಿ ಹಿಡಿದುಕೊಂಡು ನಂತರ ತನ್ನ ನಾಣ್ಯಗಳನ್ನು ಕ್ರಿ.ಶ.1763ರಲ್ಲಿ ಟಂಕಿಸಲು ಆರಂಭಿಸಿದನು.

## ಟಂಕಸಾಲೆಯ ಸ್ಥಳಗಳು

**ನಗರ** : ಹೈದರಾಲಿಯು ಕ್ರಿ.ಶ.1763ರಲ್ಲಿ ಪ್ರಪ್ರಥಮವಾಗಿ ಬಿದನೂರಿನಲ್ಲಿ ಟಂಕಸಾಲೆಯನ್ನು ಆರಂಭಿಸಿದನು. ಶ್ರೀ ಎಂದು ಮುದ್ರಿಸುವ ಪದ್ಧತಿಯನ್ನು ನಿಲ್ಲಿಸಿದನು.

ಇಲ್ಲಿ 3.4 ಗ್ರಾಂಗಳ ತೂಕವಿರುವ ನಾಣ್ಯಗಳನ್ನು ಟಂಕಿಸಲಾಗಿದೆ. ಇವುಗಳು ಕೆಳದಿಯ ಅರಸ ಸದಾಶಿವ ನಾಯಕನ ನಾಣ್ಯಗಳ ಲಕ್ಷಣಗಳಂತೆ ಟಂಕಿಸಲಾಗಿತ್ತು. ನಾಣ್ಯಗಳ ಮುಮ್ಮುಖದಲ್ಲಿ ಶಿವಪಾರ್ವತಿಯರ ಚಿತ್ರವಿದ್ದು,

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಹಿಂಬದಿಯಲ್ಲಿ ಪರ್ಷಿಯನ್ ಭಾಷೆಯ 'ಹೈ' ಎಂಬ ಅಕ್ಷರವಿರುವುದು ಕಂಡುಬಂದಿದೆ. ಈ ನಾಣ್ಯವನ್ನು ಹೈದಾರಿಹುನ್, (ಬಹಾದೂರಿ ಪಗೋಡ) ಎನ್ನುತ್ತಾರೆ. ಈ ನಾಣ್ಯದ ಹಿಂಭಾಗದಲ್ಲಿರುವ ಪರ್ಷಿಯನ್ 'ಹೈ' ಸಂಕೇತಾಕ್ಷರವು ಅರ್ಧಚಂದ್ರನನ್ನು ಹೋಲುವುದರಿಂದ ಈ ನಾಣ್ಯಗಳನ್ನು 'ಚಂದ್ರಪಡಿ' ಎಂದು ಸಾಗರ, ನಗರದ ಆಸುಪಾಸಿನ ಹಳೆಯ ತಲೆಮಾರಿನವರು ಈಗಲೂ ಹೆಸರಿಸುತ್ತಾರೆ.

**ಗುತ್ತಿಪಟ್ಟಣ** : ಹೈದರನು ಗುತ್ತಿಪಟ್ಟಣದಲ್ಲಿ ಒಂದು ಟಂಕಸಾಲೆಯನ್ನು ಆರಂಭಿಸಿ ಇಲ್ಲಿ 3.4 ಗ್ರಾಂ. ತೂಕವಿರುವ ನಾಣ್ಯವನ್ನು ಟಂಕಿಸಲಾಗಿದ್ದು ಇದನ್ನು ಹಿಜಿರಾ ವರ್ಷ 1196ರಲ್ಲಿ ಮುದ್ರಿಸಿರುವುದು ತಿಳಿದುಬರುತ್ತದೆ.

**ಪಟ್ಟಣ** : ಪಟ್ಟಣದಲ್ಲಿ ಹೈದರಾಲಿಯು ಒಂದು ಟಂಕಸಾಲೆಯನ್ನು ಸ್ಥಾಪಿಸಿದ್ದು, 1 ಪೈಸೆ ಎಂಬ ನಾಣ್ಯದ ತೂಕ 191.5 ಗ್ರೇನ್ ಹಾಗೂ ಮತ್ತೊಂದು ನಾಣ್ಯ 183.2 ಗ್ರೇನ್ ತೂಕದ ನಾಣ್ಯವು ಕಂಡುಬಂದಿದ್ದು, ನಾಣ್ಯದ ಮುಮ್ಮುಖದಲ್ಲಿ ಆನೆಯು ಬಲಕ್ಕೆ ಚಲಿಸುತ್ತಿರುವ ಹಾಗೂ ಬಾಲವನ್ನು ಮೇಲೆತ್ತಿಕೊಂಡಿರುವ ಚಿತ್ರ ಕಂಡುಬಂದಿದ್ದು, ಹಿಮ್ಮುಖದಲ್ಲಿ ಹಿಜಿರಾ ವರ್ಷವನ್ನು 1195 ಎಂಬ ಸಂಖ್ಯೆಯನ್ನು ಮುದ್ರಿಸಲಾಗಿದೆ.

**ಕ್ಯಾಲಿಕಟ್** : ಕೇರಳದ ಕ್ಯಾಲಿಕಟ್‌ನಲ್ಲಿ ಕ್ರಿ.ಶ. 1773ರಲ್ಲಿ ಟಂಕಸಾಲೆಯನ್ನು ಆರಂಭಿಸಿದ್ದನು. ಇಲ್ಲಿ ಪಣಮ್ ಚಿನ್ನದ ನಾಣ್ಯವನ್ನು ಟಂಕಿಸಲಾಗುತ್ತಿತ್ತು.

**ಬಳ್ಳಾರಿ** : ಹೈದರ್ ಬಳ್ಳಾರಿಯಲ್ಲಿ ಒಂದು ಟಂಕಸಾಲೆಯನ್ನು ಸ್ಥಾಪಿಸಿದ್ದನು. ಅಲ್ಲಿಯೂ ಸಹ ನಾಣ್ಯಗಳನ್ನು ಟಂಕಿಸಲಾಗುತ್ತಿತ್ತು. 187.5 ಗ್ರೇನ್‌ನ ತಾಮ್ರದ ನಾಣ್ಯವನ್ನು ತಯಾರಿಸಿದ್ದು, ಅದರ ಮುಮ್ಮುಖದಲ್ಲಿ ಆನೆಯು ಬಲಕ್ಕೆ ಮುಖಮಾಡಿ ಚಲಿಸುತ್ತಿದ್ದು, ಬಾಲವನ್ನು ಮೇಲೆತ್ತಿಕೊಂಡಿರುವ ಚಿತ್ರವನ್ನು ನೋಡಬಹುದು.

## ಹೈದರಾಲಿಯ ಚಿನ್ನದ ನಾಣ್ಯಗಳು

**ಪಗೋಡ** : ಹೈದರಾಲಿಯ ಪಗೋಡ ಮೌಲ್ಯದ ಚಿನ್ನದ ನಾಣ್ಯದ ತೂಕ 51.5 ಗ್ರೇನ್ ತೂಕ ಇದ್ದು, ಇದನ್ನು ಬಹದೂರಿ ಪಗೋಡ ಎಂದು ಕರೆಯಲಾಗುತ್ತಿತ್ತು. ಮುಮ್ಮುಖದಲ್ಲಿ ಕಣಮುತ್ತದ ಮೇಲ್ಮೈಯಲ್ಲಿ 'ಹೈ' ಎಂಬ ಪರ್ಷಿಯನ್ ಅಕ್ಷರವಿರುವುದು ಕಂಡುಬಂದಿದೆ. ಹಾಗೂ ಹಿಮ್ಮುಖದಲ್ಲಿ ಕುಳಿತಿರುವ ಶಿವ ಮತ್ತು ಪಾರ್ವತಿ ಚಿತ್ರವಿದ್ದು, ಶಿವನ ಬಲಗೈಯಲ್ಲಿ ತ್ರಿಶೂಲ ಮತ್ತು ಎಡಗಡೆ ಜಿಂಕೆ ಚಿತ್ರವಿರುವುದು ಕಂಡುಬಂದಿದೆ. ಮತ್ತೊಂದು 41 ಗ್ರೇನ್ ಇರುವ 1194 ಎಂದು ದಿನಾಂಕವನ್ನು ಮುದ್ರಿಸಿರುವ ಮತ್ತೊಂದು ಪಗೋಡ ನಾಣ್ಯವು ಗುತ್ತಿಯ ಟಂಕಸಾಲೆಯಲ್ಲಿ ಮುದ್ರಿಸಿದ್ದು ಕಂಡುಬಂದಿದೆ. ಇದರ ಮುಮ್ಮುಖದಲ್ಲಿ ಹೆಚ್ಚು ಚುಕ್ಕೆಗಳಿಂದ ಕೂಡಿರುವುದು ಕಂಡುಬಂದಿದೆ.

**ಅರ್ಧಪಗೋಡ** : ಹೈದರಾಲಿಯ ಅರ್ಧಪಗೋಡ ಕೂಡ ಒಂದು ನಾಣ್ಯ. ಇದರ ತೂಕ 26.5 ಗ್ರೇನ್ 0.35 ಅಗಲವಿದೆ. ಮುಂಭಾಗದಲ್ಲಿ ಪರ್ಷಿಯನ್ ಭಾಷೆಯ 'ಹೈ' ಎಂಬ ಅಕ್ಷರವಿದ್ದು, ಹಿಂಭಾಗದಲ್ಲಿ ಶಿವ ಪಾರ್ವತಿಯರ ಚಿತ್ರವಿದ್ದು ಶಿವ ಬಲಗೈಯಲ್ಲಿ ತ್ರಿಶೂಲ ಹಿಡಿದಿರುವುದು ಪಾರ್ವತಿಯ ಎಡಭಾಗದಲ್ಲಿ ಜಿಂಕೆಯ ಚಿತ್ರವಿರುವುದನ್ನು ನೋಡಬಹುದು. ಹೈದರಾಲಿಯ ಅರ್ಧಪಗೋಡ ಮತ್ತೊಂದು ನಾಣ್ಯದ ತೂಕ 26 ಗ್ರೇನ್ ಆಗಿದ್ದು, ಮುಮ್ಮುಖದಲ್ಲಿ 'ಹೈ' ಎಂಬ ಪರ್ಷಿಯನ್ ಅಕ್ಷರವಿರುವುದು ಕಂಡುಬಂದಿದೆ. ಹಿಮ್ಮುಖದಲ್ಲಿ ಕುಳಿತಿರುವ ವಿಷ್ಣುವಿನ ಚಿತ್ರವಿದ್ದು ಅವನ ಬಲಗೈಯಲ್ಲಿ ಚಿತ್ರ ಹಾಗೂ ಎಡಗೈಯಲ್ಲಿ ಶಂಖವಿರುವುದನ್ನು ನೋಡಬಹುದಾಗಿದೆ.

**ಪಣಮ್** : ಹೈದರಾಲಿಯ ಪಣಮ್ ಮೌಲ್ಯದ ಒಂದು ಚಿನ್ನದ ನಾಣ್ಯದ ತೂಕ 5.5 ಗ್ರೇನ್. ಇದರ ಅಗಲ 0.2 ಇದೆ. ಇದರ ಮುಖ್ಯ ಲಕ್ಷಣವೆಂದರೆ ಮುಮ್ಮುಖ ಹಾಗೂ ಹಿಮ್ಮುಖಗಳೆರಡನ್ನು ವೀಕ್ಷಿಸಿದರೆ ಪಗೋಡ ಮೌಲ್ಯದ ನಾಣ್ಯಗಳನ್ನು ಹೋಲುತ್ತದೆ. ಮುಮ್ಮುಖದಲ್ಲಿ 'ಹೈ' ಎಂಬ ಪರ್ಷಿಯನ್ ಅಕ್ಷರವಿದ್ದರೆ, ಹಿಮ್ಮುಖದಲ್ಲಿ ಶಿವ ಕುಳಿತಿರುವ ಚಿತ್ರ ಎಡಭಾಗದಲ್ಲಿ ಪಾರ್ವತಿ ಇರುವುದು ಹಾಗೂ ಜಿಂಕೆಯ ಚಿತ್ರವನ್ನು ಕಾಣಬಹುದಾಗಿದೆ. ಕೆಲವು ಪಣಮ್ ಚಿನ್ನದ ನಾಣ್ಯಕ್ಕೆ ಹೆಸರಿರುವುದಿಲ್ಲ. ಆದರೆ ಅವುಗಳಲ್ಲಿ ಹಿಜರಿ ವರ್ಷವನ್ನು ಟಂಕಿಸಿರುವುದನ್ನು ನೋಡಬಹುದು. ಹಾಗೂ ವೃತ್ತಾಕಾರದಲ್ಲಿ ಸುಂದರವಾಗಿ ಟಂಕಿಸಲಾಗಿದೆ. 27 ಗ್ರೇನ್ ತೂಕವಿರುವ ನಾಣ್ಯದ ಮುಮ್ಮುಖದಲ್ಲಿ ಹೈದರಾಲಿಯ 'ಹೈ' ಎಂಬ ಪರ್ಷಿಯನ್ ಅಕ್ಷರವಿದೆ ಹಿಮ್ಮುಖದಲ್ಲಿ 1189 ಎಂಬ ದಿನಾಂಕವನ್ನು ಟಂಕಿಸಿರುವುದನ್ನು ಕಾಣಬಹುದಾಗಿದೆ.

## ತ್ರಾಮದ ನಾಣ್ಯಗಳು

**ಪೈಸೆ** : ಹೈದರ್ ಅಲಿಯು ಒಂದುಪೈಸೆ ಎಂಬ 1919.5 ಗ್ರೇನ್ ತೂಕವಿರುವ ಚಿನ್ನದ ನಾಣ್ಯವನ್ನು ಟಂಕಿಸಿದ್ದನು. ಇದರ ಮುಮ್ಮುಖದಲ್ಲಿ ಒಂದು ಆನೆಯು ಬಲಭಾಗಕ್ಕೆ ಹೋಗುತ್ತಿರುವುದು ಹಾಗೂ ಬಾಲವನ್ನು ಮೇಲೆತ್ತಿಕೊಂಡಿರುವ ಚಿತ್ರವನ್ನು ಮುದ್ರಿಸಲಾಗಿದೆ. ಹಿಮ್ಮುಖದಲ್ಲಿ ದಿನಾಂಕವನ್ನು ಮುದ್ರಿಸಲಾಗಿದೆ.

**ಕಾಲು ಪೈಸೆ** : 39.0 ಗ್ರೇನ್ ತೂಕವಿರುವ ಕಾಲು ಪೈಸೆಯ ತಾಮ್ರದ ನಾಣ್ಯದಲ್ಲಿ ಮುಮ್ಮುಖ ಭಾಗದಲ್ಲಿ 93.5 (ಅರ್ಧಪೈಸೆ) ತಾಮ್ರದ ನಾಣ್ಯವನ್ನು ಟಂಕಿಸಲಾಗಿದ್ದು, ನಾಣ್ಯದ ಮುಮ್ಮುಖದಲ್ಲಿ ಹುಲಿಯ ಚಿತ್ರವಿದ್ದು, ಹುಲಿ ಬಲಭಾಗಕ್ಕೆ ನಿಂತಿದ್ದು ಮುಖವನ್ನು ನೋಡುಗರ ಕಡೆ ತಿರುಗಿಸಿದ್ದು ಬಾಲವನ್ನು ಮೇಲೆತ್ತಿಕೊಂಡಿದೆ. ಸುತ್ತಲೂ ಎರಡು ವೃತ್ತಾಕಾರದ ಗೆರೆಗಳಿದ್ದು ಗೆರೆಗಳ ಒಳಗೆ ಚುಕ್ಕೆಗಳು ಇರುವುದನ್ನು ಗಮನಿಸಬಹುದಾಗಿದೆ. ಹಿಮ್ಮುಖದಲ್ಲಿ ಆಯುಧ ಚಿತ್ರವಿದ್ದು, ಸುತ್ತಲೂ 2 ವೃತ್ತಗಳ ಗೆರೆಗಳಿದ್ದು ಎರಡು ಗೆರೆಗಳ ಒಳಗೆ ಚುಕ್ಕಿಗಳು ಇರುವ ಹಾಗೆ ಟಂಕಿಸಲಾಗಿದೆ.

43.5 ಗ್ರೇನ್ ಇರುವ ಕಾಲು ಪೈಸೆಯ ತಾಮ್ರದ ನಾಣ್ಯದ ಮುಮ್ಮುಖ ಭಾಗದಲ್ಲಿ ಹುಲಿಯ ಚಿತ್ರವಿದ್ದು ಬಲಭಾಗಕ್ಕೆ ನಿಂತಿರುವುದು. ತನ್ನ ಮುಖವನ್ನು ನೋಡುಗರ ಕಡೆ ತಿರುಗಿಸಿದ್ದು ಬಾಲವನ್ನು ಮೇಲಕ್ಕೆ ಎತ್ತಿಕೊಂಡಿದೆ. ಸುತ್ತಲೂ ಎರಡು ವೃತ್ತಾಕಾರದ ಗೆರೆಗಳಿದ್ದು, ಮಧ್ಯ ಚುಕ್ಕಿಗಳಿರುವುದು ಹಿಮ್ಮುಖದಲ್ಲಿ ಆಯುಧ ಚಿತ್ರವಿದ್ದು ಅದರ ಸುತ್ತಲೂ ಎರಡು ವೃತ್ತಾಕಾರದ ಗೆರೆಗಳಿದ್ದು, ಈ ಗೆರೆಗಳ ಮಧ್ಯದಲ್ಲಿ ಚುಕ್ಕಿಗಳಿರುವ ಹಾಗೆ ಮುದ್ರಿಸಿದೆ. ಆದರೆ ಕೆಲವೊಂದು ನಾಣ್ಯಗಳಲ್ಲಿ ಹಿಮ್ಮುಖದ ಚಿತ್ರಗಳಲ್ಲಿ ಆಯುಧ ಬಲಭಾಗಕ್ಕೆ ಇರುವುದು ಕಂಡುಬಂದಿದೆ.

**1/8 ಪೈಸೆ (Eight Paise)** : 11.2 ಗ್ರೇನ್ ಇರುವ ತಾಮ್ರದ ನಾಣ್ಯವು ದೊರೆತಿದ್ದು. ಮುಮ್ಮುಖ ಭಾಗದಲ್ಲಿ ಹುಲಿಯ ಚಿತ್ರವಿದ್ದು, ಅದು ಬಲಭಾಗಕ್ಕೆ ನಿಂತಿದ್ದು, ಮುಖವನ್ನು ನಾಣ್ಯ ವೀಕ್ಷಕರ ಕಡೆ ತಿರುಗುವುದು ಕಂಡುಬಂದಿದೆ. ಹಾಗೂ ಬಾಲವನ್ನು ಮೇಲಕ್ಕೆ ಎತ್ತಿಕೊಂಡಿದೆ. ಹಿಮ್ಮುಖದಲ್ಲಿ ಆಯುಧದ ಮುಖಭಾಗವು ಬಲಭಾಗಕ್ಕೆ ಮುದ್ರಿಸಿರುವುದು ಕಂಡು ಬಂದಿದ್ದು, ಆಯುಧದ ಸುತ್ತಲೂ ಎರಡು ವೃತ್ತಾಕಾರದ ಗೆರೆಗಳಿದ್ದು ಎರಡು ವೃತ್ತಾಕಾರದ ಗೆರೆಗಳ ಮಧ್ಯೆ ಚುಕ್ಕಿಗಳು ಇರುವಂತೆ ಟಂಕಿಸಲಾಗಿದೆ.

ಈ ಮೇಲ್ಕಂಡ ವಿವಿಧ ಬಗೆಯ ನಾಣ್ಯಗಳನ್ನು ಹೈದರಾಲಿಯು ಮುದ್ರಿಸಿ ಚಲಾವಣೆಗೆ ತಂದನು. ಈತನು ಹಿಂದೂ ನಾಣ್ಯ ಪದ್ಧತಿಯನ್ನೇ ಬಹುತೇಕವಾಗಿ ಅನುಸರಿಸಿದನು.

## ಟಿಪ್ಪುವಿನ ನಾಣ್ಯವ್ಯವಸ್ಥೆ

ಟಿಪ್ಪು ಸುಲ್ತಾನ್ ತನ್ನ ತಂದೆಗಿಂತ ಹೆಚ್ಚು ಹೆಚ್ಚು ನಾಣ್ಯಗಳನ್ನು ಟಂಕಿಸಲು ಶ್ರಮಿಸಿದ. ಕ್ರಿ.ಶ. 1782ರಿಂದ 1799ರವರೆಗಿನ ಅವಧಿಯಲ್ಲಿ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ತಾನು ಗೆದ್ದುಕೊಂಡಂತಹ ಪ್ರದೇಶಗಳಲ್ಲಿ, ಆಯಕಟ್ಟಿನ ಸ್ಥಳಗಳಲ್ಲಿ ಟಂಕಸಾಲೆಗಳನ್ನು ಸ್ಥಾಪಿಸಿ ತನ್ನ ತಂದೆಗಿಂತ ಹೆಚ್ಚಿನ ನಾಣ್ಯಗಳನ್ನು ಟಂಕಿಸಿದನು. ಇವನು ಟಂಕಿಸಿದ ನಾಣ್ಯಗಳು ನೋಡಲು ಸುಂದರ ಮತ್ತು ಆಕರ್ಷಣೀಯವಾಗಿದ್ದವು. ಅವನು ಟಂಕಿಸಿದ ನಾಣ್ಯಗಳಲ್ಲಿ ಪರ್ಷಿಯನ್ ಭಾಷೆಯ ಲಿಪಿ ಇರುತ್ತಿತ್ತು. ಅಲ್ಲದೇ ನಾಣ್ಯಗಳಲ್ಲಿ ತಾರೀಖುಗಳಿರುವಂತೆ ಚಿನ್ನ, ಬೆಳ್ಳಿ, ತಾಮ್ರದ ಲೋಹಗಳಿಂದ ಅಚ್ಚು ಹಾಕಿಸಲಾಗುತ್ತಿತ್ತು. 19 ಸ್ಥಳಗಳಲ್ಲಿ ಟಂಕಸಾಲೆಗಳನ್ನು ಸ್ಥಾಪಿಸಿ ತನ್ನ ತಂದೆಗಿಂತ ಹೆಚ್ಚಿನ ನಾಣ್ಯಗಳನ್ನು ಟಂಕಿಸಲಾಗಿದೆ ಎಂದು ತಿಳಿದುಬರುತ್ತದೆ. ಈತನು ತನ್ನ ನಾಣ್ಯಗಳ ಮುದ್ರಣದಲ್ಲಿ ಪರ್ಷಿಯನ್ ಭಾಷೆಯ ಮಾದರಿಯನ್ನೇ ಅನುಸರಿಸಿದನು. ಇವನ ನಾಣ್ಯಗಳಲ್ಲಿ ವೈವಿಧ್ಯತೆ ಮತ್ತು ಕಲಾತ್ಮಕತೆ ಎದ್ದು ಕಾಣುತ್ತದೆ. ರಾಜ್ಯದ ವಿವಿಧ ಸ್ಥಳಗಳಲ್ಲಿ ಟಂಕಸಾಲೆಗಳನ್ನು ಸ್ಥಾಪಿಸಿ, ನಾಣ್ಯಗಳ ಉತ್ಪಾದನೆ ಹೆಚ್ಚಾಗಿ ಚಲಾವಣೆಗೆ ಅನುಕೂಲವಾಗುವಂತೆ ಮಾಡಿದನು. ಪ್ರತಿಯೊಂದು ಟಂಕಸಾಲೆಗೂ ಪರ್ಷಿಯನ್ ಹೆಸರನ್ನು ಕೊಟ್ಟನು. ಅದೇ ರೀತಿ ಪ್ರತಿಯೊಂದು ನಾಣ್ಯಕ್ಕೂ ಖಲೀಫರ ಹಾಗೂ ಗ್ರಹಗಳ ಹೆಸರನ್ನು ಕೊಟ್ಟನು. ಇವನು ಚಿನ್ನ, ಬೆಳ್ಳಿ ಮತ್ತು ತಾಮ್ರಗಳಲ್ಲಿ ನಾಣ್ಯಗಳನ್ನು ಟಂಕಿಸಿದನು. ಇವುಗಳ ಮೇಲೆ ಪರ್ಷಿಯನ್ ಪದ್ಯಗಳು, ಟಂಕಸಾಲೆಯ ಹೆಸರು, ಹಿಜಿರಾ ಮತ್ತು ಮೌಲೂದಿ ಕಾಲ ಮತ್ತು ಹಿಮ್ಮುಖದಲ್ಲಿ ಆನೆಯ ಚಿತ್ರ ಕಂಡುಬರುತ್ತದೆ. ಟಿಪ್ಪುವಿನ ನಾಣ್ಯಗಳು ತಾಂತ್ರಿಕ ದೃಷ್ಟಿಯಿಂದಲೂ ಉತ್ತಮವೆನಿಸಿವೆ. ನಾಣ್ಯಗಳ ಪರಿಧಿಯಲ್ಲಿ 'ಮಿಲ್ಲಿಂಗ್' ಕೂಡ ಕಂಡುಬರುತ್ತದೆ.

## ಟಿಪ್ಪುವಿನ ಟಂಕಸಾಲೆಯ ಸ್ಥಳಗಳು

### ಪಟ್ಟಣ ಅಥವಾ ಶ್ರೀರಂಗಪಟ್ಟಣ

ಶ್ರೀರಂಗಪಟ್ಟಣದಲ್ಲಿ ಐದು ಟಂಕಸಾಲೆಗಳಿದ್ದವು ಎಂದು ಮೊಹಿಬ್ಬುಲ್ ಹಸನ್ ತನ್ನ ಗ್ರಂಥವಾದ 'ಹಿಸ್ಟರಿ ಆಫ್ ಟಿಪ್ಪುಸುಲ್ತಾನ್'ನಲ್ಲಿ ಬರೆದಿದ್ದಾನೆ. ಬೆಳ್ಳಿ ಮತ್ತು ಬಂಗಾರದ ನಾಣ್ಯಗಳನ್ನು ಅರಮನೆಯ ಆವರಣದಲ್ಲಿ ಟಂಕಿಸಲಾಗುತ್ತಿತ್ತು. ತಾಮ್ರದ ನಾಣ್ಯಗಳನ್ನು ಟಂಕಿಸುವ ಟಂಕಸಾಲೆಯು ಅರಮನೆಯ ಹೊರಗಡೆ ಇರುತ್ತಿದ್ದವು ತನ್ನ ಪಟ್ಟಾಭಿಷೇಕದ ಆರಂಭದ ವರ್ಷದಿಂದ ನಾಣ್ಯಗಳನ್ನು ಅಚ್ಚು ಹಾಕಿಸಿದನು.

### ನಜರಾಬಾದ್ ಅಥವಾ ಮೈಸೂರು

ನಜರ್‌ಬಾದ್‌ನಲ್ಲಿದ್ದ ಹಳೆಯ ಕೋಟೆಯನ್ನು ನಾಶಪಡಿಸಿ ಕ್ರಿ.ಶ. 1787ರಲ್ಲಿ ಹೊಸಕೋಟೆಯನ್ನು ನಿರ್ಮಿಸಿ ಅಲ್ಲಿ ಹೊಸದಾಗಿ ಟಂಕಸಾಲೆಯನ್ನು ಸ್ಥಾಪಿಸಿದನು. ಈ ಪ್ರದೇಶಕ್ಕೆ ತನಗೆ ಇಷ್ಟವಾದ ನಜರ್‌ಬಾದ್ ಎಂಬ ಹೆಸರನ್ನು ನೀಡಿದನು. ಇಲ್ಲಿ ಕೇವಲ ತಾಮ್ರದ ನಾಣ್ಯಗಳನ್ನು ಟಿಪ್ಪು ಟಂಕಿಸಲಾಗುತ್ತಿತ್ತು. ಅವುಗಳಲ್ಲಿ ಅರ್ಧ ಪೈಸೆ, ಕಾಲು ಪೈಸೆ ಎಂಬ ನಾಣ್ಯಗಳೂ ಇವೆ.

### ನಗರ ಅಥವಾ ಬಿದನೂರು

ಈ ಪ್ರದೇಶಗಳಲ್ಲಿ ಪಣಂ ಎರಡು ರೂಪಾಯಿ ನಾಣ್ಯ, ರೂಪಾಯಿ, ಅರ್ಧರೂಪಾಯಿ, ಎರಡು ಪೈಸೆಯ ನಾಣ್ಯ, ಪಣಂ ನಾಣ್ಯಗಳನ್ನು ಟಂಕಿಸಲಾಗುತ್ತಿತ್ತು.

ಬೆಂಗಳೂರು : ಬೆಂಗಳೂರು ಪ್ರದೇಶದಲ್ಲಿ ತಾಮ್ರ ನಾಣ್ಯಗಳಾದ 'ಕುತ್ಬ್' ಎಂಬ ಹೆಸರಿನಲ್ಲಿ ಎಂಟನೆಯ ಒಂದು ಪೈಸೆಯ ನಾಣ್ಯ ತಯಾರಿಸಲಾಗುತ್ತಿದ್ದು ಕ್ರಿ.ಶ. 1781ರ ನಂತರ ಇಲ್ಲಿ ಟಂಕಿಸುವುದನ್ನು ನಿಲ್ಲಿಸಲಾಯಿತು.

**ಧಾರವಾಡ** : ಧಾರವಾಡ ಪ್ರದೇಶದಲ್ಲಿ ಟಂಕಸಾಲೆಯನ್ನು ಸ್ಥಾಪಿಸಿದ್ದನು. ಇಲ್ಲಿಂದ 'ಖುರ್ಷಿದ್ ಸವಾದ್' ಎಂಬ ನಾಣ್ಯವನ್ನು ಹೊರಡಿಸಿದನು. ಚಿನ್ನದ ಲೋಹದ ಪಣಂ, ಪಗೋಡ ಎಂದು ಬೆಳ್ಳಿಯ ಲೋಹದಲ್ಲಿ ರೂಪಾಯಿ ಎಂದು ತಾಮ್ರದ ಲೋಹದಲ್ಲಿ ಪೈಸ ಎಂಬ ಹೆಸರಿನಿಂದ ನಾಣ್ಯಗಳನ್ನು ಟಂಕಿಸಿ ಚಲಾವಣೆಗೆ ತರಲಾಗುತ್ತಿತ್ತು.

**ಚಿತ್ರದುರ್ಗ** : ಚಿತ್ರದುರ್ಗದಲ್ಲಿ 'ಟಂಕಸಾಲೆ' ಎಂಬುದು ಆರಂಭಗೊಂಡಿದ್ದರೆ ಅದು ಟಿಪ್ಪುಸುಲ್ತಾನನ ಆಳ್ವಿಕೆಯಲ್ಲಿ ಮಾತ್ರ ಎಂದು ಪ್ರೊ.ಲಕ್ಷ್ಮಣ್ ತೆಲಗಾವಿಯವರು ತಮ್ಮ "ಚಿತ್ರದುರ್ಗ ಇತಿಹಾಸದಲ್ಲಿ ಬಿಳಿಚೋಡು ವಿರೂಪಾಕ್ಷ ಜೋಯಿಸರು ಹಾಗೂ ಚಿನ್ನದ ಮನೆಯವರು" ಎಂಬ ಗ್ರಂಥದಲ್ಲಿ ತಿಳಿಸಿದ್ದಾರೆ. ನಾಣ್ಯ ಮತ್ತು ಶಸ್ತ್ರ ತಯಾರಿಕಾ ಘಟಕಕ್ಕೆ 'ತಾರಾಮಂಡಲ' ಎಂದು ಕರೆಯುತ್ತಿದ್ದರು. ಅಲ್ಲದೇ ಇವುಗಳನ್ನು 'ಮಿನಿಟೌನ್ಸ್'ಗಳೆಂದು ಕರೆಯುತ್ತಿದ್ದರು.

ಚಿತ್ರದುರ್ಗದಲ್ಲಿದ್ದ ಟಂಕಸಾಲೆಗೆ ಟಿಪ್ಪುಸುಲ್ತಾನ್ 'ಪರೂಕ್ ಯಾಬ್ ಹಿಸಾರ್' ಎಂಬ ಹೆಸರನ್ನು ನೀಡಿ, ಇಲ್ಲಿ 13 ವಿಧದ ತಾಮ್ರದ ನಾಣ್ಯಗಳು ಮುದ್ರಿತವಾಗಿದ್ದವು. ಎರಡು ಪೈಸ ನಾಣ್ಯದಿಂದ ಆರಂಭವಾಗಿ ಎಂಟನೆಯ ಒಂದು ಭಾಗದ ಪೈಸದವರೆಗೆ ಟಂಕಿಸಲಾಗುತ್ತಿದ್ದು. ಈ ನಾಣ್ಯಗಳು ಕ್ರಿ.ಶ.1787ರಿಂದ ಕ್ರಿ.ಶ.1791ರವರೆಗೆ ಟಂಕಿಸಲಾದಂತಹ ನಾಣ್ಯಗಳು ಎಂದು ತಿಳಿದುಬರುತ್ತದೆ.

**ಆಂಧ್ರಪ್ರದೇಶದ ಗುತ್ತಿ** : ಈ ಪ್ರದೇಶದಲ್ಲಿ ಪೈಸ ಮತ್ತು ಕಾಲು ಪೈಸ ನಾಣ್ಯಗಳನ್ನು ಇಲ್ಲಿನ ಟಂಕಸಾಲೆಯಲ್ಲಿ ಅಚ್ಚುಹಾಕಿಸಿದನು.

**ಗುರ್ರಂಕೊಂಡ** : ಇದು ಆಂಧ್ರಪ್ರದೇಶದ ಕಡಪ ಜಿಲ್ಲೆಯಲ್ಲಿದ್ದು 'ಜಪಾರ್‌ಖಾದ್' ಎಂಬ ಹೆಸರಿನಲ್ಲಿ ಟಂಕಸಾಲೆ ಇದ್ದಿತು. ಇದು ತಾಮ್ರದ ಪೈಸೆ, ಅರ್ಧ ಪೈಸೆ, ಮತ್ತು ಕಾಲು ಪೈಸೆ ನಾಣ್ಯಗಳನ್ನು ಇಲ್ಲಿನ ಟಂಕಸಾಲೆಯಲ್ಲಿ ಮುದ್ರಿಸಲಾಗುತ್ತಿತ್ತು.

**ದಿಂಡಿಗಲ್** : ತಮಿಳುನಾಡು ಪ್ರದೇಶದ ದಿಂಡಿಗಲ್‌ನಲ್ಲಿ ಒಂದು ಟಂಕಸಾಲೆಯನ್ನು ಸ್ಥಾಪಿಸಿ ಇದಕ್ಕೆ 'ಕಾಲಿಕಾಬಾದ್' ಎಂಬ ಹೆಸರನ್ನು ನೀಡಿದ್ದನು. ಕಾಲಿಕಾಬಾದ್ ಎಂದರೆ ದೇವರನಗರ ಎಂಬ ಅರ್ಥವನ್ನು ನೀಡಲಾಗಿದ್ದು, ಇಲ್ಲಿ ಚಿನ್ನದ ಪಣ ತಾಮ್ರದ ಪೈಸೆ ಮತ್ತು ಕಾಲು ಪೈಸೆಯ ನಾಣ್ಯಗಳನ್ನು ಕ್ರಿ.ಶ.1787ರಿಂದ ಕ್ರಿ.ಶ.1790ರವರೆಗೆ ಟಂಕಿಸಲಾಗಿತ್ತು ಎಂದು ತಿಳಿಯಬಹುದಾಗಿದೆ.

**ಸಲಾಮಾಬಾದ್** : ಇದು ತಮಿಳುನಾಡಿನ ಸತ್ಯಮಂಗಲದ ಸಲಾಮಾಬಾದ್‌ನಲ್ಲಿ ಟಂಕಸಾಲೆಯನ್ನು ಸ್ಥಾಪಿಸಿ ಇಲ್ಲಿ ತಾಮ್ರದ ಪೈಸ, ಅರ್ಧಪೈಸೆ, ಕಾಲು ಪೈಸೆ, ಮತ್ತು ಎಂಟನೆಯ ಒಂದು ಪೈಸೆಯ ನಾಣ್ಯಗಳನ್ನು ಮಾತ್ರ ಅಚ್ಚು ಹಾಕಲಾಗುತ್ತಿತ್ತು. ಈ ನಾಣ್ಯಗಳನ್ನು ಅತೀ ವಿರಳ ಸಂಖ್ಯೆಯಲ್ಲಿ ಮುದ್ರಿಸಲಾಗುತ್ತಿತ್ತು.

**ಫಿರೋಕ್** : ಕ್ಯಾಲಿಕಟ್‌ನಿಂದ 7 ಮೈಲಿ ದೂರದಲ್ಲಿನ ಫಿರೋಕ್‌ನಲ್ಲಿ ಒಂದು ಟಂಕಸಾಲೆಯನ್ನು ಸ್ಥಾಪಿಸಿ ಅದಕ್ಕೆ ಫರೋಕಿ ಎಂಬ ಹೆಸರನ್ನು ಇಡಲಾಗಿತ್ತು. ಇದರರ್ಥ ಏಳಿಗೆಯನಗರ ಎಂಬುದಾಗಿದೆ. ಇಲ್ಲಿ ಚಿನ್ನದ ಪಣಂ, 2 ಪೈಸೆ, 1/2ಪೈಸೆ 1/4 ಪೈಸೆಯನ್ನು ಅಚ್ಚುಹಾಕಲಾಗುತ್ತಿತ್ತು.

**ಕಲ್ಲಿಕೋಟೆ** : ಕೇರಳದ ಕಲ್ಲಿಕೋಟೆಯಲ್ಲಿ ಒಂದು ಟಂಕಸಾಲೆಯನ್ನು ಸ್ಥಾಪಿಸಿ ಇಲ್ಲಿ ಚಿನ್ನ, ಬೆಳ್ಳಿ, ತಾಮ್ರದ ಫಣಂ, 2ರೂ, ಮತ್ತು 1 ಪೈಸೆಯನ್ನು ಅಚ್ಚುಹಾಕಲಾಗುತ್ತಿತ್ತು.

ಟಿಪ್ಪು ತನ್ನ ಟಂಕಸಾಲೆಗಳಲ್ಲಿ ವಿವಿಧ ರೀತಿಯ ನಾಣ್ಯಗಳನ್ನು ಕಾಲಮಾನಕ್ಕೆ ಅನುಗುಣವಾಗಿ ಟಂಕಿಸುತ್ತಿದ್ದನು. ಟಿಪ್ಪು ತನ್ನ ಆಡಳಿತದ ಅಧಿಕಾರದ ಮೊದಲ ನಾಲ್ಕು ವರ್ಷಗಳಲ್ಲಿ ಹಿಜಿರಾ ಕಾಲವನ್ನು ಅಳವಡಿಸಿಕೊಂಡು ನಾಣ್ಯಗಳನ್ನು ಮುದ್ರಿಸಿದನು. ತನ್ನ ಆಡಳಿತದ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಅವಧಿಯಲ್ಲಿ ವರ್ಷಗಳಿಗೆ ಕೊಟ್ಟ ಕಾಲಮಾನದ ಹೆಸರು ಮತ್ತು ವರ್ಷವನ್ನು ಈ ಕೆಳಗಿನ ಕೋಷ್ಟಕದ ಮೂಲಕ ತೋರಿಸಲಾಗಿದೆ.

| ಟಿಪ್ಪುವಿನ ಆಳ್ವಿಕೆಯ ವರ್ಷ | ಕಾಲಮಾನದ ವರ್ಷ | ಕಾಲಮಾನದ ಹೆಸರು | ಕಾಲಮಾನದ ಹೆಸರಿನ ಅರ್ಥ |
|---|---|---|---|
| 1 | 37 | ಜಕಿ | ಶುದ್ಧ |
| 2 | 38 | ಅಜಲ್ | ಶಾಶ್ವತ |
| 3 | 39 | ಜಲನ್ | ಉಜ್ವಲ |
| 4 | 40 | ದಲ್ವ್ | ಕುಂಭರಾಶಿ |
| 5 | 41 | ಷಾ | ದೊರೆ |
| 6 | 42 | ಸಾರಾ | ಸುವಾಸನೆ |
| 7 | 43 | ಸರಾಬ್ | ಮರೀಚಿಕೆ |
| 8 | 44 | ಶಿತಾ | ಶಿಶಿರ |
| 9 | 45 | ಜಬರ್‌ಜದ್ | ಗೋಮೇಧಿಕ |
| 10 | 46 | ಸಹರ | ಉದಯ |
| 11 | 47 | ಸಾಹರ್ | ಮಂತ್ರವಾದಿ |
| 12 | 48 | ರಾಸಿಖಾ | ಸ್ಥಿರ |
| 13 | 49 | ಷಾದ | ಸಂತೋಷ |
| 14 | 50 | ಹಿರಾಸತ್ | ರಕ್ಷಣೆ |
| 15 | 51 | ಸಾಜ್ | ಹೊಂದಾಣಿಕೆ |
| 16 | 52 | ಷಾದಾಬ್ | ತೇವ |
| 17 | 53 | ಬಾರಿಷ್ | ಮಳೆ |

ಟಿಪ್ಪುವು ಚಿನ್ನದ ಮತ್ತು ಬೆಳ್ಳಿಯ ನಾಣ್ಯಗಳನ್ನು ಹೊಸದಾಗಿ ಹೊರಡಿಸಿದನು. ಇವನ ಚಿನ್ನದ ನಾಣ್ಯಗಳು 210,26,12,6,3 ಹಾಗೂ ಒಂದೂವರೆ ಗುಲಗಂಜಿ ತೂಕದವಾಗಿದ್ದವು. ಇವುಗಳನ್ನು ಪಣ ಎಂದೂ, ಬೆಳ್ಳಿಯ ನಾಣ್ಯಗಳನ್ನು ಇಮಾಮಿ ರೂಪಾಯಿಗಳೆಂದು ಕರೆಯಲಾಗುತ್ತಿತ್ತು. ಆರಂಭದಲ್ಲಿ 'ನಗರೀ' ಹಣ ವ್ಯವಸ್ಥೆಯನ್ನು ಮುಂದುವರೆಸಿದ್ದ ಈತನು ಅದರ ದಕ್ಷತೆಯು ರಾಜ್ಯಾಭಿವೃದ್ಧಿಯಲ್ಲಿ ಉಪಯುಕ್ತವಾಗದೇ ಇದ್ದುದಕ್ಕೆ ಪಗೋಡ ಹಣ ವ್ಯವಸ್ಥೆಯನ್ನು ಹೊರಡಿಸಿದನು. 210 ಕಾಳು ತೂಕದ ನಾಣ್ಯ ಬಹುಶಃ ಸನ್ಮಾನದ ಅಥವಾ ಸಂಸ್ಮರಣೆಯ ಉದ್ದೇಶಕ್ಕಾಗಿ ಅಚ್ಚುಹಾಕಿಸಿರಬೇಕು. ಉಳಿದಂತೆ ಚಿನ್ನದ ನಾಣ್ಯಗಳು ಹಾಗೂ ಬೆಳ್ಳಿಯ ನಾಣ್ಯಗಳು ಮಾರುಕಟ್ಟೆಯ ಅಗತ್ಯಕ್ಕಾಗಿ ಬಳಕೆಯಾಗಿರಬೇಕು ಎಂದು ಇತಿಹಾಸಕಾರರು ಅಭಿಪ್ರಾಯಪಟ್ಟಿದ್ದಾರೆ. ಚಿನ್ನದ ಹಾಗೂ ಬೆಳ್ಳಿಯ ನಾಣ್ಯಗಳು ಮಾತ್ರವಲ್ಲದೇ ಕಡಿಮೆ ಬೆಲೆಯ ತಾಮ್ರದ ನಾಣ್ಯಗಳೂ ಸಹ ಅಚ್ಚಾಗಿವೆ. ಉಸ್ಮಾನಿ, ಜೋಹ್ರಾ, ಬಹರಮ್, ಅಖ್ತರ್ ಹಾಗೂ ಖುತ್‌ಬಿಪಣಮ್ ಎನ್ನುವ ಈ ನಾಣ್ಯಗಳು ಹಲವಾರು ಸಂಶೋಧಕರಿಗೆ ದೊರಕಿವೆ. ಅದೇ ರೀತಿ ಟಂಕ, ಕಾಸುಗಳೆಂಬ ಕಡಿಮೆ ಬೆಲೆಯ ನಾಣ್ಯಗಳೂ ಲಭ್ಯವಾಗಿವೆ. ಇವನ ರಾಜ್ಯಭಾರದ ಆರಂಭದಲ್ಲಿ ಟಂಕಿಸಿದ ನಾಣ್ಯಗಳು ಹಿಜರಿಶಕೆಯಲ್ಲಿದ್ದು ನಂತರದ ನಾಣ್ಯಗಳು ಮೌಲಾದಿ ಶಕೆಯಲ್ಲಿವೆ. ಸುಲ್ತಾನನ ನಾಣ್ಯಗಳ ಮೇಲೆ ಆನೆಯ ಚಿತ್ರ ಹಾಗೂ ಪರ್ಷಿಯನ್ ಲಿಪಿಯಲ್ಲಿ ಬರಹಗಳು ಕಂಡುಬರುತ್ತವೆ. ಕೆಲವು ನಾಣ್ಯಗಳಲ್ಲಿ ಆನೆಯ ಮೇಲೆ ಧ್ವಜವಿರುವುದು ಕಂಡುಬರುತ್ತದೆ. ಸೊಂಡಿಲನ್ನು ಮೇಲೆತ್ತಿ ಸಲಾಮಿ ನೀಡುವ ಆನೆಯ ಚಿತ್ರವನ್ನು ಸುಂದರವಾಗಿ ಚಿತ್ರಿಸಲಾಗಿದೆ. ಹೆಚ್ಚಿನ ನಾಣ್ಯಗಳಲ್ಲಿ ಟಂಕಸಾಲೆಯ ಸ್ಥಳವನ್ನು ಹೆಸರಿಸಲಾಗಿದೆ. ಟಿಪ್ಪುಸುಲ್ತಾನ್ ಪಗೋಡ ವ್ಯವಸ್ಥೆಯಲ್ಲಿ ಎಲ್ಲಾ ನಾಣ್ಯಗಳಿಗೂ ಸ್ಪಷ್ಟ ಮೌಲ್ಯ ವಿಭಜನೆ ಮಾಡಿ ಅವುಗಳಿಗೆ ಅರ್ಥಪೂರ್ಣ ಹೆಸರುಗಳನ್ನು ನೀಡಿದ್ದನು. 210–215 ಕಾಳು ತೂಕದ ಇವನ ನಾಣ್ಯವೇ ಕರ್ನಾಟಕದ ಅತೀ ಹೆಚ್ಚು ಬೆಲೆ ಬಾಳುವ ನಾಣ್ಯವಾಗಿದೆ. ಇದನ್ನು ಅಹಮದಿ (ಪ್ರವಾದಿಯ ಸಮರಣೆಯ ನಾಲ್ಕು ಪಗೋಡಗಳ ಬೆಲೆಯ ಚಿನ್ನದ ನಾಣ್ಯ) ನಾಣ್ಯ ಎಂದೇ ಕರೆಯುತ್ತಾರೆ. ಈ ಅಹಮದಿಯನ್ನು ಶ್ರೀರಂಗಪಟ್ಟಣ ಹಾಗೂ ಬಿದನೂರಿನ ಟಂಕಸಾಲೆಯಲ್ಲಿ ಟಂಕಿಸಲಾಗುತ್ತಿತ್ತು.

## ಚಿನ್ನದ ನಾಣ್ಯಗಳು

**ಅಹ್ಮದೀ :** ಇದನ್ನು ಟಿಪ್ಪು ಪ್ರವಾದಿಯ ಗೌರವಾರ್ಥವಾಗಿ ಟಂಕಿಸಿದನು. 210ರಿಂದ 215 ಕಾಳು ತೊರೆದ ನಾಣ್ಯವಾಗಿದ್ದು, ಇದನ್ನು ಶ್ರೀರಂಗಪಟ್ಟಣ ಮತ್ತು ಬಿದನೂರಿನ ಟಂಕಸಾಲೆಯಲ್ಲಿ ಮುದ್ರಿಸಲಾಗುತ್ತಿತ್ತು. ಇವುಗಳನ್ನು ಕ್ರಿ. ಶ. 1783, 1784, 1787, 1788, 1789 ಮತ್ತು 1790ರಲ್ಲಿ ಮುದ್ರಿಸಲಾಗಿದೆ. ಇವುಗಳು ವೃತ್ತಾಕಾರದಲ್ಲಿದ್ದು ಅದರೊಳಗೆ ಚುಕ್ಕಿಗಳು ಕಂಡುಬರುತ್ತವೆ.

**ಸಿದ್ಧಿಕಿ :** ಇದು ಎರಡು ಪಗೋಡದ ಚಿನ್ನದ ನಾಣ್ಯವಾಗಿದ್ದು ಇದನ್ನು ಶ್ರೀರಂಗಪಟ್ಟಣದಲ್ಲಿ ಮಾತ್ರ ಟಂಕಿಸಲಾಗುತ್ತಿತ್ತು. ಇದು ಮೊದಲನೆಯ ಖಲೀಫನಾದ 'ಅಬುಬಕರ್ ಸಿದ್ಧಿಕಿಯ ಗೌರವಾರ್ಥವಾಗಿ ಟಂಕಿಸಲಾಗಿದ್ದು, ಇದನ್ನು ಸಾಮಾನ್ಯ ಜನತೆ ಚಲಾವಣೆಗೆ ಬಳಸಲು ಅವಕಾಶವಿರಲಿಲ್ಲ. ಕೆಲವು ಸಿದ್ಧಿಕಿ ನಾಣ್ಯಗಳು 6.8 ಗ್ರೇನ್ ಹಾಗೂ ಇನ್ನು ಕೆಲವು 6.9 ಗ್ರೇನ್ ಇರುವುದು ತಿಳಿದುಬಂದಿದೆ. ಇದರ ಅಗಲ 0.75 ಆಗಿತ್ತು. ಇದರ ವಿಶೇಷತೆ ಏನೆಂದರೆ ನಾಣ್ಯದ ಎರಡೂ ಬದಿಯಲ್ಲಿ ಅಕ್ಷರಗಳನ್ನು ಮುದ್ರಿಸಲಾಗಿದೆ.

**ಫರೂಕಿ ಅಥವಾ ಪಗೋಡ :** ಫರೂಕಿಯನ್ನು ಸುಲ್ತಾನಿ ಪಗೋಡ ಎಂದು ಕರೆಯುತ್ತಿದ್ದರು. ಇದು ಚಿನ್ನದ ನಾಣ್ಯವಾಗಿದ್ದು 52 ಗ್ರೈನ್ ತೂಗುತ್ತಿದ್ದು 3 ರೂ. 8 ಆಣೆಗೆ ಸಮವಾಗಿತ್ತು. ಎರಡನೆಯ ಖಲೀಫನಾದ ಹಜರತ್ವಿಮರ್ ಫರೂಕಿಯ ಹೆಸರನ್ನು ಇದು ಹೊಂದಿತ್ತು. ಫರೂಕಿ ನಾಣ್ಯಗಳಲ್ಲಿ ಮೂರು ರೀತಿಯ ನಾಣ್ಯಗಳನ್ನು ಗುರುತಿಸಬಹುದಾಗಿದೆ. 1. ನಾಣ್ಯದ ಮುಮ್ಮುಖದಲ್ಲಿ 'ಹೈ' ಎಂಬ ಅಕ್ಷರವಿರುವುದು ಹಾಗೂ ಆಳ್ವಿಕೆಯ ವರ್ಷ, ಟಂಕಸಾಲೆಯ ಹೆಸರು ಇರುತ್ತಿತ್ತು. ಹಿಮ್ಮುಖದಲ್ಲಿ ಅವನೇ ಸುಲ್ತಾನ್ ನ್ಯಾಯವಾದಿ ಎಂಬ ಪದವಿರುತ್ತಿತ್ತು. 2. ಕೆಲವು ನಾಣ್ಯಗಳ ಹಿಮ್ಮುಖದಲ್ಲಿ ಮುಹಮದ್ ಎಂಬ ಪದ ಬರಹದ ಮೊದಲಿನಲ್ಲಿರುತ್ತದೆ. ಹಿಮ್ಮುಖದಲ್ಲಿ 'ಹೈ' ಎಂಬ ಅಕ್ಷರವಿದ್ದು, ಅದರ ಸುತ್ತ ಚುಕ್ಕಿಗಳ ವೃತ್ತವಿರುವಂತೆ ಟಂಕಿಸಲಾಗಿದೆ.

**ಪಣಮ್ :** ಇದು ಟಿಪ್ಪುಸುಲ್ತಾನ್‌ನ ತೀರಾ ಕಡಿಮೆ ಬೆಲೆಯ ಚಿನ್ನದ ನಾಣ್ಯವಾಗಿದ್ದು 5ರಿಂದ 6ಕಾಳು ತೂಕವಿರುತ್ತಿತ್ತು. ಇದನ್ನು ಕಲ್ಲಿಕೋಟೆ, ಬಿದನೂರು, ದಿಂಡಿಗಲ್, ಧಾರವಾಡ ಮತ್ತು ಶ್ರೀರಂಗಪಟ್ಟಣದಲ್ಲಿ ಮುದ್ರಿಸಲಾಗುತ್ತಿತ್ತು. ಈ ನಾಣ್ಯಗಳಲ್ಲಿ ವರ್ಷ ಮತ್ತು ಟಂಕಸಾಲೆಯ ಹೆಸರನ್ನು ಮುದ್ರಿಸಲಾಗುತ್ತಿತ್ತು.

## ಟಿಪ್ಪುವಿನ ಬೆಳ್ಳಿ ನಾಣ್ಯಗಳು

ಟಿಪ್ಪುಸುಲ್ತಾನನು ತನ್ನ ಆಡಳಿತದ ಅವಧಿಯಲ್ಲಿ ತನ್ನ ಟಂಕಸಾಲೆಯಲ್ಲಿ 7 ರೀತಿಯ ಬೆಳ್ಳಿ ನಾಣ್ಯಗಳನ್ನು ಟಂಕಿಸಿ ಅವುಗಳಿಗೆ ತನ್ನದೇ ಆದಂತಹ ಹೆಸರುಗಳನ್ನು ಇಟ್ಟಿದ್ದನು. ಅವುಗಳೆಂದರೆ

**ಹೈದರೀ :** ಇದು ಎರಡು ರೂಪಾಯಿ ಮೌಲ್ಯದ ನಾಣ್ಯವಾಗಿದೆ. ಇದನ್ನು 4ನೇ ಖಲೀಫನ ಗೌರವಾರ್ಥವಾಗಿ ಹೈದರ್ ಎಂದು ನಾಮಕರಣ ಮಾಡಿದನು. ಇದರ ತೂಕ 21.5ರಿಂದ 23.5 ಗ್ರೈನ್ ಇದ್ದು, 1.4 ಅಗಲವನ್ನು ಹೊಂದಿದೆ. ಇದರಲ್ಲಿ ಹಿಜಿರಾ ವರ್ಷವನ್ನು ಮುದ್ರಿಸಲಾಗಿದೆ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

**ಇಮಾಮಿ :** ಇದು ಇಮಾಮಿಗಳ ಗೌರವಾರ್ಥವಾಗಿ ನಾಣ್ಯಕ್ಕೆ ಇದ್ದಂತಹ ಹೆಸರಾಗಿದೆ. ಈ ನಾಣ್ಯದ ತೂಕವು 10.7 ಗ್ರಾಂಗಳಿಂದ 11.60 ಗ್ರಾಂಗಳನ್ನು ಒಳಗೊಂಡಿದೆ. 1.1 ಅಗಲ ಹೊಂದಿದೆ. ಇದನ್ನು ಬಿದನೂರು, ಶ್ರೀರಂಗಪಟ್ಟಣ, ಕಲ್ಲಿಕೋಟೆ, ಧಾರವಾಡ ಪ್ರದೇಶಗಳಲ್ಲಿ ಟಂಕಿಸಲಾಗಿತ್ತು.

**ಅಬಿದಿ :** ಇದು ಅರ್ಧಭಾಗ ಅಥವಾ ಅರ್ಧ ರೂಪಾಯಿಯ ನಾಣ್ಯವಾಗಿದೆ. ಇದನ್ನು 4ನೆಯ ಮಾಮ್ ಅಲಿಜೈನ್ ಅಲ್ ಅಬೀದಿನ್ ಅವರ ಸ್ಮರಣಾರ್ಥವಾಗಿ ಹೆಸರಿಡಲಾಗಿದೆ. 5.35ರಿಂದ 5.8 ಗ್ರೇನ್ ತೂಕವಿರುವ ನಾಣ್ಯವಾಗಿದ್ದು, 08 ಅಗಲವನ್ನು ಒಳಗೊಂಡಿದೆ. ಈ ನಾಣ್ಯಗಳನ್ನು ನಗರ ಹಾಗೂ ಶ್ರೀರಂಗಪಟ್ಟಣದಲ್ಲಿನ ಟಂಕಸಾಲೆಯಲ್ಲಿ ಟಂಕಿಸಲಾಗಿದೆ.

**ಬಾಖರಿ :** ಬಾಖರಿ ನಾಣ್ಯವು ರೂಪಾಯಿಯ ನಾಣ್ಯವಾಗಿದ್ದು, 5ನೇ ಇಮಾಮ್ ಮಹಮದ್ ಅಲ್ ಬಾಖೀರ್‌ರವರ ನೆನಪಿಗಾಗಿ ಈ ಹೆಸರಿಟ್ಟಿದ್ದನು. 2.68 ಗ್ರೇನ್‌ನಿಂದ 2.90 ಗ್ರೇನ್‌ವರೆಗೂ ತೂಕವಿದ್ದು 0.6 ಅಗಲವಿದೆ. ಇದನ್ನು ಶ್ರೀರಂಗಪಟ್ಟಣದ ಟಂಕಸಾಲೆಯಲ್ಲಿ ಮುದ್ರಿಸಲಾಗುತ್ತಿತ್ತು.

**ಜಾಫರೀ :** ಇದು ರೂಪಾಯಿ ಎಂಟನೆಯ ಪಾಲಿನ ನಾಣ್ಯ (ಎರಡು ಆಣೆ ಬೆಲೆಯ) ಜಾಫರೀ ನಾಣ್ಯ. 6ನೆಯ ಜಾಫರ್ ಅಲ್ ಸದೀಕ್‌ರವರ ಗೌರವಾರ್ಥವಾಗಿ ಹೆಸರನ್ನಿಟ್ಟಿದ್ದನು. ಇದರ ತೂಕ 20 ಗ್ರೇನ್, ಅಗಲ 0.4 ಆಗಿದೆ. ಈ ನಾಣ್ಯಗಳನ್ನು ಶ್ರೀರಂಗಪಟ್ಟಣದಲ್ಲಿ ಮಾತ್ರ ಟಂಕಿಸಲಾಗುತ್ತಿತ್ತು. ಮುಮ್ಮುಖದಲ್ಲಿ ಮಹಮದಿ ವರ್ಷವನ್ನು ಮುದ್ರಿಸಿದ್ದು ಹಿಮ್ಮುಖದಲ್ಲಿ ನಾಣ್ಯದ ಹೆಸರನ್ನು ಮುದ್ರಿಸಲಾಗಿದೆ.

**ಖಾಸಿಮೀ :** ಇದು ಹದಿನಾರನೆಯ ಒಂದು ರೂಪಾಯಿ ನಾಣ್ಯವಾಗಿದ್ದು, 2ನೇ ಇಮಾಮ್ ಮುಸ್ ಅಲ್ ಖಾಜೀಂರವರ ಸ್ಮರಣಾರ್ಥವಾಗಿ ಇದಕ್ಕೆ ಈ ಹೆಸರು ಇಟ್ಟಿದ್ದನು. ಇದು 1.34 ಗ್ರೇನ್‌ರಿಂದ 1.40 ಗ್ರೇನ್ ತೂಕದ್ದಾಗಿದೆ. 0.3 ಅಗಲವನ್ನು ಹೊಂದಿದೆ. ಇದರ ಮುಮ್ಮುಖದಲ್ಲಿ ಸನ್ 1220 ಮುಹಮ್ಮದ್ ಜರ್ಬ್ ಇಪಟನ್ ಎಂದೂ ಹಿಮ್ಮುಖದಲ್ಲಿ ಕಾಜಿಮೀ ಜುಲೂಸ್ 10 ಎಂದು ಟಂಕಿಸಲಾಗಿದೆ.

**ಖಿಜ್ರಿ ಅಥವಾ ಕೈಸರೀ :** ಇದು ಮೂವತ್ತೆರಡನೇ ಒಂದು ಭಾಗದ ರೂಪಾಯಿ ನಾಣ್ಯವಾಗಿದೆ. ಇದು ಅತ್ಯಂತ ಕನಿಷ್ಠ ಗ್ರೈನ್ ಆಗಿದೆ. ಇದರ ಮುಮ್ಮುಖದಲ್ಲಿ ಜರ್ಬ್ ಇ ದರುಸ/ಸುಲ್ತಾನತ್ ಎಂದೂ ಹಿಮ್ಮುಖದಲ್ಲಿ ಖಿಜ್ರಿ 12 ಎಂದು ಅಚ್ಚು ಹಾಕಲಾಗಿದೆ.

## ತಾಮ್ರದ ನಾಣ್ಯಗಳು

ಟಿಪ್ಪುವಿನ ತಾಮ್ರದ ನಾಣ್ಯಗಳನ್ನು 5 ರೀತಿಯ ಹೆಸರುಗಳಿಂದ ಗುರುತಿಸಲಾಗಿದೆ. ಟಿಪ್ಪುವಿನ ತಾಮ್ರದ ನಾಣ್ಯಗಳನ್ನು ಚಿತ್ರದುರ್ಗ ಪ್ರದೇಶ ಹಾಗೂ ಬಿದನೂರು, ಶ್ರೀರಂಗಪಟ್ಟಣದಲ್ಲಿ ಟಂಕಿಸುತ್ತಿದ್ದರು.

**ಉಸ್ಮಾನಿ ಅಥವಾ ಮುಷ್ತರಿ :** ಇದು 2 ಪೈಸೆ ಮೌಲ್ಯದ ನಾಣ್ಯವಾಗಿದ್ದು ಇದನ್ನು 3ನೇ ಖಲೀಫರ ಹೆಸರಾದ ಒಟಮಾನ್ ಎಂಬ ಹೆಸರಿನಲ್ಲಿ ಅಚ್ಚುಹಾಕಿಸಿದನು. ಹಾಗೂ ಗ್ರಹಗಳ ಹೆಸರನ್ನು ಹೋಲುವಂತೆ ಮುಷ್ತರಿ(ಬೃಹಸ್ಪತಿ) ಹೆಸರನ್ನುಟ್ಟಿದ್ದನು. ಈ ನಾಣ್ಯವು 21.5 ಗ್ರೇನ್‌ನಿಂದ 23.5 ಗ್ರೈನ್ ತೂಕ ಹೊಂದಿದೆ. ಈ ನಾಣ್ಯಗಳನ್ನು ತಾರಾಮಂಡಲಗಳಿಂದು ಹೆಸರಾದಂತಹ ಚಿತ್ರದುರ್ಗ, ಬಿದನೂರು, ಶ್ರೀರಂಗಪಟ್ಟಣ, ಫರೂಕ್, ಮುಂತಾದ ಕಡೆಗಳಲ್ಲಿ ಟಂಕಿಸಲಾಗುತ್ತಿತ್ತು. ಫರೂಕ್‌ಯಾಬ್ ಹಿಸಾರ್ ಎಂದು ಕರೆಯುವ ಚಿತ್ರದುರ್ಗದಲ್ಲಿ ಪ್ರಸ್ತುತ ಈ ಟಂಕಸಾಲೆಯ ಅವಶೇಷವನ್ನು ನೋಡಬಹುದಾಗಿದೆ.

**ಜೋಹ್ರಾ :** ಒಂದು ಪೈಸೆಯ ನಾಣ್ಯವಾಗಿದ್ದು ಇದು ಗ್ರಹಗಳಲ್ಲಿ ಒಂದಾದ ಶುಕ್ರ ಗ್ರಹದ ಹೆಸರಾಗಿದೆ. ಇದನ್ನು ಶ್ರೀರಂಗಪಟ್ಟಣ ನಗರದಲ್ಲಿ ಟಂಕಿಸಲಾಗುತ್ತಿತ್ತು. 10.5 ಗ್ರೇನ್‌ನಿಂದ 12.50 ಗ್ರೇನ್ಸ್ ತೂಕವನ್ನು ಒಳಗೊಂಡಿದೆ. 0.9 ಅಗಲವಿದೆ. ಇದರಲ್ಲಿ 3 ರೀತಿಯ ನಾಣ್ಯಗಳನ್ನು ನೋಡಬಹುದಾಗಿದೆ.

**ಬಹ್ರಾಂ :** ಇದು ಅರ್ಧ ಪೈಸ ಮುಖಬೆಲೆಯ ನಾಣ್ಯವಾಗಿದ್ದು. ಇದು ಅಂಗಾರದ ಗ್ರಹದ ಹೆಸರಿನ ನಾಣ್ಯವಾಗಿದೆ. ಈ ನಾಣ್ಯಗಳು 5.51 ಗ್ರೇನ್‌ರಿಂದ 5.77 ಗ್ರೇನ್ ತೂಕವನ್ನು ಹೊಂದಿರುತ್ತವೆ. ಇವುಗಳನ್ನು ಪಟ್ಟಣ, ಬೆಂಗಳೂರು, ಬಿದನೂರು, ಫರೂಕಿ, ಗುರ್ರಂಕೊಂಡ ಸತ್ಯಮಂಗಲ, ಮೈಸೂರು, ಧಾರವಾಡ ಮತ್ತು ದಿಂಡಿಗಲ್ ಟಂಕಸಾಲೆಗಳಲ್ಲಿ ಮುದ್ರಿಸುತ್ತಿದ್ದರು.

**ಅಖ್ತರ್ :** ಇದು ಕಾಲು ಪೈಸೆ ಮುಖಬೆಲೆಯ ಮೌಲ್ಯವುಳ್ಳ, ನಾಣ್ಯವಾಗಿದ್ದು, ನಕ್ಷತ್ರ ಎಂಬ ಹೆಸರಿನಿಂದ ಗುರುತಿಸಿಕೊಂಡಿದೆ. ಇದರ ತೂಕ 2.66 ಗ್ರೇನ್‌ನಿಂದ 2.92 ಗ್ರೇನ್ ಇದೆ. 0.5 ಅಗಲವನ್ನು ಹೊಂದಿದೆ. ಈ ನಾಣ್ಯಗಳಲ್ಲಿ ಹಲವು ದೋಷಗಳಿವೆ ಎಂದು ತಿಳಿಯುತ್ತದೆ.

**ಕುತ್ಬ್ :** ಇದು ತಾಮ್ರದ ನಾಣ್ಯವಾಗಿದ್ದು, ಅರೇಬಿಕ್ ಭಾಷೆಯಲ್ಲಿ ಧೃವನಕ್ಷತ್ರದ ಹೆಸರಿನ ಮೂಲಕ ಗುರುತಿಸಿಕೊಂಡಿದೆ. ಈ ನಾಣ್ಯ 1.3 ಗ್ರೇನ್‌ನಿಂದ 1.5 ಗ್ರೇನ್ ತೂಕ ಹೊಂದಿದೆ. 0.4 ಅಗಲವನ್ನು ಹೊಂದಿದೆ. ಇದನ್ನು ಶ್ರೀರಂಗಪಟ್ಟಣ, ಬಿದನೂರು, ಬೆಂಗಳೂರು, ಸತ್ಯಮಂಗಲ, ಫರೂಕ ಯಾಬ್ ಹಿಸಾರ್ (ಚಿತ್ರದುರ್ಗ) ಟಂಕಸಾಲೆಗಳಲ್ಲಿ ಮುದ್ರಿಸಲಾಗುತ್ತಿತ್ತು. ಈ ನಾಣ್ಯದ ಹಿಂಭಾಗದಲ್ಲಿ ಟಂಕಸಾಲೆಯ ಹೆಸರು ಹಾಗೂ ದಿನಾಂಕವನ್ನು ಟಂಕಿಸಲಾಗಿದೆ.

ಈ ಮೇಲಿನ ವಿವರಗಳಂತೆ ಹೈದರ್ ಮತ್ತು ಟಿಪ್ಪುಸುಲ್ತಾನ್ ನಾಣ್ಯವ್ಯವಸ್ಥೆಯಲ್ಲಿ ತಮ್ಮದೇ ವಿಶಿಷ್ಟ ಬದಲಾವಣೆಗಳನ್ನು ತಂದು ವಿನಿಮಯ ಮಾಧ್ಯಮವಾಗಿ ನಾಣ್ಯಗಳ ಚಲಾವಣೆಗೆ ಸಹಕರಿಸಿದರು. ಪ್ರಸ್ತುತ ಅಧ್ಯಯನ ವ್ಯಾಪ್ತಿಗೆ ಸೇರಿದ ಚಿತ್ರದುರ್ಗ ಪ್ರದೇಶವು ಸಹ ಟಿಪ್ಪುವಿನ ಕಾಲದಲ್ಲಿ ಒಂದು ಟಂಕಸಾಲೆಯಾಗಿದ್ದು. ಇಲ್ಲಿ ಅನೇಕ ತಾಮ್ರದ ನಾಣ್ಯಗಳನ್ನು ಅಚ್ಚು ಹಾಕಿಸಿದ್ದನೆಂಬುದು ಅನೇಕ ಹಿರಿಯ ಸಂಶೋಧಕರ ಬರಹಗಳಿಂದ ತಿಳಿಯುತ್ತದೆ. ಟಿಪ್ಪುವಿನ ತಾರಾಮಂಡಲಗಳಲ್ಲಿ ಚಿತ್ರದುರ್ಗ (ಪರೂಕ್ ಯಾಬ್ ಹಿಸ್ಸಾರ್) ಸಹ ಒಂದಾಗಿದ್ದು, ಇಲ್ಲಿ ಶಸ್ತ್ರಗಳ ಜೊತೆಗೆ ನಾಣ್ಯಗಳನ್ನು ಸಹ ಟಂಕಿಸುತ್ತಿದ್ದರು.

## ಪರಾಮರ್ಶನ ಗ್ರಂಥಗಳು


- **ಖಂಡೋಬರಾವ್ ಎಸ್., (2002) :** ನಾಣ್ಯ ಕರ್ನಾಟಕ, ಶಿವಮೊಗ್ಗ; ಮಗರ್ ಪಬ್ಲಿಕೇಷನ್ಸ್
- **ಗೋಪಾಲ್ ಆರ್., (ಸಂ)., (2010) :** ಟಿಪ್ಪು ಸುಲ್ತಾನ್ ದಿ ಟೈಗರ್ ಆಫ್ ಮೈಸೂರ್, ಮೈಸೂರು; ಡೈರೆಕ್ಟರೇಟ್ ಆಫ್ ಆರ್ಕಿಯಾಲಜಿ ಅಂಡ್ ಮ್ಯೂಸಿಯಮ್
- **ಗುರುಪ್ರಸಾದ್, (2013) :** ಹವ್ಯಾಸಿ ನಾಣ್ಯ ಸಂಗ್ರಹಕಾರರಲ್ಲಿ ದೊರೆತ ಇಂಡೋ–ಗ್ರೀಕ್, (ಬ್ಯಾಕ್ಟ್ರಿಯನ್ ದೊರೆ) ಮತ್ತು ಟೀಪು ಸುಲ್ತಾನ್ ಕಾಲದ ತಾಮ್ರದ ನಾಣ್ಯಗಳು, ಇತಿಹಾಸ ದರ್ಶನ ಸಂ–2
- **ಗೋಪಾಲ್ ಎಂ.ಹೆಚ್., (1971) :** ಟೀಪು ಸುಲ್ತಾನ್ಸ್ ಮೈಸೂರ್ ಆ್ಯನ್ ಎಕಾನಾಮಿಕ್ ಸ್ಟಡಿ, ಬಾಂಬೆ; ಪಾಪ್ಯುಲರ್ ಪ್ರಕಾಶನ
- **ಜಯಂತಿ ಮೆಸ್ತ (2014) :** ನಾಣ್ಯಗಳು, ಮೈಸೂರು; ಲಕ್ಷ್ಮಿ ಪ್ರಿಂಟಿಂಗ್ ಪಬ್ಲಿಷಿಂಗ್ ಹೌಸ್
- **ಟೇಲರ್ ಪಿ., (1989) :** ದಿ ಕಾಯಿನ್ಸ್ ಆಫ್ ಟಿಪ್ಪು ಸುಲ್ತಾನ್, ನ್ಯೂಡೆಲ್ಲಿ; ಏಷಿಯನ್ ಎಜುಕೇಷನಲ್ ಸರ್ವೀಸ್

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712


- **ನರಸಿಂಹಮೂರ್ತಿ ಎ.ವಿ., (2008) :** ಭಾರತೀಯ ನಾಣ್ಯ ಪರಂಪರೆ, ಮೈಸೂರು; ಮೈಸೂರು ವಿಶ್ವವಿದ್ಯಾಲಯ
- **ನಿಖಿಲೇಶ್ ಗುಹ (1985) :** ಪ್ರಿ–ಬ್ರಿಟಿಶ್ ಸ್ಟೇಟ್ ಸಿಸ್ಟಮ್ ಇನ್ ಸೌತ್ ಇಂಡಿಯಾ: ಮೈಸೂರ್ 1761–1799, ಕಲ್ಕತ್ತ; ರತ್ನ ಪ್ರಕಾಶನ
- **ಫ್ರಾನ್ಸಿಸ್ ಬುಕಾನನ್ (1989) :** ಎ ಜರ್ನಿ ಫ್ರಮ್ ಮದ್ರಾಸ್ ಥ್ರೂ ದಿ ಕಂಟ್ರೀಸ್ ಆಫ್ ಮೈಸೂರ್ ಕೆನರಾ ಆ್ಯಂಡ್ ಮಲಬಾರ್ ಸಂ–2, ನ್ಯೂಡೆಲ್ಲಿ, ಮದ್ರಾಸ್; ಏಷ್ಯನ್ ಎಜುಕೇಷನಲ್ ಸರ್ವಿಸ್
- **ಮಂದರ್ಕೆ ನಿತ್ಯಾನಂದ ಪೈ, (2013) :** ಹೈದರಾಲಿಯ ಬಹು ಅಪರೂಪದ ಬಹದೂರಿ ಪಗೋಡ, ಇತಿಹಾಸ ದರ್ಶನ ಸಂ–28
- **ಷೇಕ್ ಅಲಿ ಬಿ., (2018) :** ಕರ್ನಾಟಕ ಚರಿತ್ರೆ (ಸಂ–5), ಹಂಪಿ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ
- **ಸ್ಟೀವನ್ ಕ್ವಾಡ್ರಸ್ (2016) :** ಟಿಪ್ಪು ಸುಲ್ತಾನ, ಮೈಸೂರು; ಅಖಿಲಾ ಏಜೆನ್ಸಿಸ್
- **ಹೆಂಡರ್‌ಸನ್ ಜೆ.ಆರ್., (1991) :** ದಿ ಕಾಯಿನ್ಸ್ ಆಫ್ ಹೈದರ್ ಅಲಿ ಆ್ಯಂಡ್ ಟಿಪ್ಪು ಸುಲ್ತಾನ್, ಮದ್ರಾಸ್; ಗೌರ್ನಮೆಂಟ್ ಪ್ರೆಸ್.


■■

*– 8ನೇ ಪುಟದಿಂದ ಮುಂದುವರೆದುದು*

ರಚನಾತ್ಮಕ ಬೋಧನೆ, ಪರಿಕಲ್ಪನೆ ಹಾಗೊ ನೈಪುಣ್ಯಗಳನ್ನು ಬೆಳೆಸುವದರ ಜೊತೆಗೆ, ರಚಿಸಲ್ಪಟ್ಟ ಜ್ಞಾನವನ್ನು ನೈಜ ಸನ್ನಿವೇಶಗಳಿಗೆ ಅನ್ವಯಿಸುವ ಸಾಮರ್ಥ್ಯವನ್ನು ಬೆಳೆಸುವದಕ್ಕೆ ಪ್ರಾಮುಖ್ಯತೆ ನೀಡುತ್ತದೆ.ಅದಕ್ಕಾಗಿ ಶಿಕ್ಷಕರು, ವಿದ್ಯಾರ್ಥಿಗಳ ಕಲಿಕೆಯನ್ನುದೃಢಪಡಿಸುವದಕ್ಕಾಗಿ ವಿಚಾರ ಪ್ರಚೋದಕ ಪ್ರಶ್ನೆಗಳನ್ನು ಕೇಳಬೇಕು ಮತ್ತುಅದನ್ನುಅನ್ವಯಿಸಲು ಹೊಸ ಸನ್ನೀವೇಶಗಳನ್ನು ಒದಗಿಸಬೇಕು.

## 5. ಮೌಲ್ಯಮಾಪನ (Evaluate)

ವಿದ್ಯಾರ್ಥಿಗಳಿಗೆ ಕಲಿಕೆಯಲ್ಲಿ ಸ್ವಾಯತ್ತತೆಯನ್ನು ನೀಡುವದು ರಚಾನಾತ್ಮಕ ಬೋಧನೆಯ ಉದೇಶವಾಗಿದೆ. ಅದ್ದರಿಂದ ಅವರಿಗೆ ತಾವು ಕಲಿತ ಜ್ಞಾನವನ್ನು ಮೌಲ್ಯಮಾಪನ ಮಾಡಲು ಅವಕಾಶ ನೀಡುವದು ಅವಶ್ಯವಾಗಿದೆ. ಶಿಕ್ಷಕರು ವಿವಿಧ ಮೌಲ್ಯಮಾಪನ ತಂತ್ರಗಳನ್ನು ಉಪಯೋಗಿಸಬೇಕು. ಮೌಖಿಕ ಪರೀಕ್ಷೆ, ಲಿಖಿತ ಪರೀಕ್ಷೆ, ಅಥವಾ ಕಾರ್ಯ ನಿರ್ವಾಹಕ ಪರೀಕ್ಷೆಯ ಮೂಲಕ ವಿದ್ಯಾರ್ಥಿಗಳು ತಮ್ಮ ಕಲಿಕೆಯನ್ನು ಮೌಲ್ಯಮಾಪನ ಮಾಡಲು ಅವಕಾಶ ನೀಡಬೇಕು. ನಿರಂತರ ಮೌಲ್ಯಮಾಪನ ಕಲಿಕೆಯನ್ನು ಸದೃಢಗೊಳಿಸುವದು.

**ಸಮಾರೋಪ :** ರಚನಾತ್ಮಕ ಕಲಿಕೆಯ ಸಿದ್ಧಾಂತ ಆಧಾರಿತ 5 ಇ ಮಾದರಿಯು ಕಲಿಕೆಗೆ ಪ್ರಚೋದನೆಯನ್ನು ನೀಡುತ್ತದೆ ಹಾಗೂ ವಿದ್ಯಾರ್ಥಿಗಳಲ್ಲಿ ವಿಚಾರ ಶಕ್ತಿಯನ್ನು ಬೆಳೆಸುತ್ತದೆ. ಇದಕ್ಕಾಗಿ ಪಾಠ ಯೋಜನೆಯನ್ನು ಸಮಯೋಚಿತವಾಗಿ ರಚಿಸಬೇಕಾಗುವದು ಮತ್ತು ವ್ಯವಸ್ಥಿತವಾಗಿ ಅನ್ವಯಿಸಬೇಕು.

## ಪರಾಮರ್ಶನ ಗ್ರಂಥಗಳು


- **Brooks J.G. and Brooks M. (2005) :** In search of Understanding: The case for Constructivist Classrooms-chapter 9- Becoming a Constructivist Teacher. (Revised Edition) Alexandria, V.A: Association for supervision and curriculum Development.
- **Beverlee Jobrack :** Educational consultant . The 5 E Instructional model- Engage, Explore, Explain, Evaluate, Extend.
- **Cooperstien Susan E. & Kocevar - Widinger E. (2004):** Beyond active learning: a constructivist approach to learning-An article- Reference Services Review, Emerald, vol-32, No-2-2004, pp-141-148
- **Doolittle Peter E. & David Hicks (2003) :** Constructivism as a Theoretical Foundation for the Use of Technology in Social Studies. Theory and Research in Social Education
- **David Palmer :** University of New Castle, Australia.A motivational review of Constructivist-informed teaching: Research report- Journal- International Journal of Science Education Volume 27, No. 15, 16 December 2005, pp. 1853-1881.
- **Glaserfeld E.V. (1995) :** Constructivist g A.
- **Gail Jonens M. and Laure Brader Araje :** The impact of constructivism on education, American communication journal (spring 2002)
- **Fosnot C. T. (2006) Constructivism :** Theory, perspective and practice. New York : N Y : Teachers college press. Approach to Teaching
- **NCERT (2005) :** National Curriculum Framework for School Education, New Delhi NCERT.
- **NCERT :** Position Paper on Teaching of Social Science, New Delhi.
- **Good T. & Brophy J. (1994) :** Looking in classrooms (6thed) Newyork : Harper Collins.
- **The Courage to be Constructivist :** M.G. Brooks and Jacqueline .G. Brooks.
- **Dr. Murat :** The use of 5 E model in secondary Geography Education- The International Journal of Social Sciences-
- **Ismat Ergin :** Constructivist approach based 5 model and usability instructional physics- www.lajpe.org.
- **Research for Teachers :** Jerome Bruner's constructivist model and the spiral curriculum for teaching and learning- www.gtce.org.uk.
- **YiaseminaKaragiorgi and Loizossymeou :** Translating constructivism into instructional design: Potential and limitations - Educational Technology and society
- **Peggy A. Ertmer and Timothy J. Newby :** Behaviorism, Cognitivism, constructivism : Comparing critical features from and Instructional Design perspective- Constructivist Pedagogy- Virginia Richardson- University of Michigan.


■■

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಸಾಂಸ್ಕೃತಿಕ ಮತ್ತು ಧಾರ್ಮಿಕ ಆಚರಣೆಗಳು

✍ ಡಾ. ಧರಣೇಂದ್ರಯ್ಯ ಡಿ., ಮುಖ್ಯಸ್ಥರು ಸಮಾಜಶಾಸ್ತ್ರ ವಿಭಾಗ, ವಾಣಿ ಸಕ್ಕರೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಿರಿಯೂರು, ಚಿತ್ರದುರ್ಗ ಜಿಲ್ಲೆ.

ಚಿತ್ರದುರ್ಗ ಜಿಲ್ಲೆಯ ಚಳ್ಳಕರೆ ಹಾಗೂ ಮೊಳಕಾಲ್ಮೂರು ತಾಲ್ಲೂಕುಗಳಲ್ಲಿ ಕೇಂದ್ರಿಕೃತವಾಗಿರುವ ಮ್ಯಾಸಬೇಡರ ಸಾಂಸ್ಕೃತಿಕ ಹಾಗೂ ಧಾರ್ಮಿಕ ಆಚರಣೆಗಳು ಇಂದಿಗೂ ಪ್ರಸ್ತುತವಾಗಿವೆ. ಮ್ಯಾಸಬೇಡರು ಮೂಲತಃ ಅಡವಿಗಳಲ್ಲಿ ಅಲೆದಾಡುತ್ತಾ ಅಲ್ಲಿಯೇ ತಮ್ಮದೆ ಆದ ಹಟ್ಟಿಗಳನ್ನು ಕಟ್ಟಿಕೊಂಡು ಪಶುಸಂಗೋಪನೆ ಹಾಗೂ ಕೃಷಿಯನ್ನು ಜೀವನದ ವೃತ್ತಿಯನ್ನಾಗಿ ಮಾಡಿಕೊಂಡಿದ್ದಾರೆ, ಇವರು ನಾಗರೀಕ ಪ್ರಪಂಚದಿಂದ ದೂರವಿದ್ದು ತಮ್ಮ ಬುಡಕಟ್ಟು ಸಂಸ್ಕೃತಿ ಮತ್ತು ಧಾರ್ಮಿಕ ಆಚರಣೆಗಳನ್ನು ಅಳವಡಿಸಿಕೊಂಡು ಜೀವಿಸುತ್ತಿರುವುದನ್ನು ನೋಡಬಹುದಾಗಿದೆ.

ಮ್ಯಾಸಬೇಡರ ಸಾಂಸ್ಕೃತಿಕ ಮತ್ತು ಧಾರ್ಮಿಕ ಆಚರಣೆಗಳನ್ನು ತಿಳಿದುಕೊಳ್ಳಬೇಕಾದರೆ ಅವರ ಜೀವನ ವಿಧಾನ, ಉಡುಗೆ–ತೊಡುಗೆ, ಆಹಾರ ಪದ್ಧತಿ, ವೃತ್ತಿ, ಸಂಪ್ರದಾಯ, ಆಚರಣೆಗಳು, ಆಚಾರ–ವಿಚಾರ, ಅವರ ಸಾಹಿತ್ಯ , ಭಾಷೆ, ನಂಬಿಕೆ, ದೇವರುಗಳು, ನಿಷೇದಗಳು ಮತ್ತು ಸಾಮಾಜಿಕ ಜೀವನದ ಜನನದಿಂದ ಹಿಡಿದು ಮರಣದವರೆಗಿನ ಸಂಸ್ಕಾರಗಳಿಗೆ ಸಂಬಂಧಿಸಿದಂತೆ ಮಾಹಿತಿದಾರರಿಂದ ಸಂಗ್ರಹಿಸಲಾದ ಮಾಹಿತಿಗಳನ್ನು ಸಮಾಜಶಾಸ್ತ್ರೀಯುವಾಗಿ ಈ ಕೆಳಕಂಡಂತೆ ವಿವರಿಸಲಾಗಿದೆ.

## ಮ್ಯಾಸಬೇಡರು ಆಚರಿಸುವ ಹಬ್ಬಗಳು

ಮ್ಯಾಸಬೇಡ ಬುಡಕಟ್ಟು ಜನಾಂಗದಲ್ಲಿ ಹಬ್ಬಗಳು ಸಾಮಾಜಿಕವಾಗಿ ಹಾಸುಹೊಕ್ಕಾಗಿದ್ದು ಜನಾಂಗದ ಐಹಿಕ ಸುಖ ಸಾಧನೆಯಲ್ಲಿ ಹಬ್ಬಗಳು ಬಹಳ ಮಹತ್ವವಾಗಿವೆ. ಹಬ್ಬವನ್ನು ಆಚರಿಸಿದರೆ ಧರ್ಮವನ್ನು ಪಾಲಿಸಿದಂತೆ. ಮಾನವ ಜೀವನವನ್ನು ರೂಪಿಸುವಲ್ಲಿ ಸಂಸ್ಕೃತಿಯನ್ನು ಪೋಷಿಸುವಲ್ಲಿ ನಾಗರೀಕತೆಯನ್ನು ಬೆಳೆಸುವಲ್ಲಿ, ಸಂಘಟನೆ, ಸಹಬಾಳ್ವೆ, ಶಾಂತಿ, ನಂಬಿಕೆಯನ್ನು ಮೂಡಿಸುವಲ್ಲಿ ಹಬ್ಬಗಳಿಗೆ ವಿಶೇಷ ಮಹತ್ವವಿದೆ.

ಕೃಷಿ ಮತ್ತು ಪಶುಸಂಗೋಪನೆ ಪ್ರಮುಖವಾಗಿರುವ ಮ್ಯಾಸಬೇಡರಲ್ಲಿ ನೈಸರ್ಗಿಕ ಶಕ್ತಿಯನ್ನು ವೃದ್ಧಿಸುವ, ನಿಸರ್ಗದೊಡನೆ ಅವಿನಾಭಾವ ಸಂಬಂಧವನ್ನು ಬೆಳೆಸುವ ಹಬ್ಬಗಳ ಆಚರಣೆಯನ್ನು ರೂಢಿಸಿಕೊಂಡು ಬಂದಿದ್ದಾರೆ.

ಮ್ಯಾಸಬೇಡರು ತಮ್ಮ ದೇವರು ಸೂರ್ಯ, ಚಂದ್ರ ಮತ್ತು ಭೂಮಿ ಎಂದು ನಂಬಿದವರು. ಸೂರ್ಯ– ಚಂದ್ರರ ಚಲನೆಯಿಂದ ಬದಲಾಗುವುದೇ 'ಪರ್ವ'. ಪರ್ವ ಎಂದರೆ 'ಹಬ್ಬ' ಈ ಸಂಪ್ರದಾಯಗಳೇ ಮುಂದೆ ಹಬ್ಬಗಳಾಗಿವೆ.

ಪ್ರತಿಯೊಂದು ಹಬ್ಬಗಳು ಮಾನಸಿಕ, ಆಧ್ಯಾತ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ಅಂಶಗಳಿಂದ ಕ್ರೂಢಿಕೃತವಾಗಿದ್ದು ಆರೋಗ್ಯಕ್ಕೆ ದಾರಿಮಾಡುತ್ತವೆ. ಎಂಬುವುದರ ಬಗ್ಗೆ ಹಬ್ಬಗಳನ್ನು ವೈಜ್ಞಾನಿಕ ಹಿನ್ನೆಲೆಯಲ್ಲಿ ಅಧ್ಯಯನ ಮಾಡಿದಾಗ ಸತ್ಯಾಂಶಗಳು ಕಂಡುಬರುತ್ತವೆ. ಹಬ್ಬಗಳು ಹಿರಿಯರಿಗೆ, ಪಶುಗಳಿಗೆ, ಬೆಳೆಗಳಿಗೆ, ಗ್ರಾಮ, ಹಟ್ಟಿ, ಜಮೀನಿಗೆ, ಪ್ರಕೃತಿಗೆ, ಸಾಂಸ್ಕೃತಿಕ ವೀರರಿಗೆ, ಶಾಂತಿ ದೊರೆಯಲಿ ಮತ್ತು ಹುಲುಸು ಮೊಳಗಲಿ ಎಂಬ ಮನೋದೃಷ್ಟಿ ಇಟ್ಟುಕೊಂಡು ಹಬ್ಬಗಳನ್ನು ಆಚರಿಸುತ್ತಾ ಬಂದಿದ್ದಾರೆ.

ನಂಬಿಕೆ ಹಾಗೂ ಸಂಪ್ರದಾಯಗಳ ಕ್ರಿಯಾರೂಪಗಳೇ ಹಬ್ಬಗಳು, ನಿಸರ್ಗವನ್ನು ನಿಯಂತ್ರಿಸುವ ಮತ್ತು ದೇವರನೊಲಿಸಿಕೊಳ್ಳುವ ಸತತ ಪ್ರಯತ್ನಗಳ ಫಲವಾಗಿ ಹಬ್ಬಗಳು ಉಗಮಗೊಂಡವು. ಸಮಾಜದ ಸ್ಥಿತ್ಯಂತರದಿಂದಾಗಿ ಇಂದು ಧಾರ್ಮಿಕ, ಸಾಮಾಜಿಕ, ರಾಷ್ಟ್ರೀಯ ಮತ್ತು ವೈಯಕ್ತಿಕ ನೆಲೆಯ ಆಧಾರದ ಮೇಲೆ ನಾಲ್ಕು ಬಗೆಯ ಹಬ್ಬಗಳನ್ನು ಆಚರಿಸುವುದುಂಟು ಇಲ್ಲಿ ಯಾವುದೋ ಒಂದು ಉನ್ನತ ಧ್ಯೇಯ, ಸಾಧನೆ, ಆತ್ಮಸಂಸ್ಕಾರ, ಮನರಂಜನೆ, ಕ್ರೀಡೆ ಮತ್ತು ಆರೋಗ್ಯ ದೃಷ್ಟಿಯಿಂದ ಹಬ್ಬಗಳನ್ನು ಆಚರಿಸುವುದುಂಟು.

ಹಬ್ಬಗಳು ಸಾಮಾಜಿಕ ಪ್ರಯೋಜನವನ್ನು ಒಳಗೊಂಡಿದ್ದು ನೆಂಟರಿಷ್ಟರು ಒಂದು ಕಡೆ ಸೇರಿ ಸಂತೋಷ ಹಂಚಿಕೊಳ್ಳಲು, ಭಾವನಾತ್ಮಕತೆ ಮೂಡಲು ವಿಚಾರ ವಿನಿಮಯ ಮಾಡಿಕೊಳ್ಳಲು ಸಹಾಯಕ "ಬಂಧುಗಳ ದರ್ಶನ ಸಂಬಂಧ ಗಟ್ಟಿಗೊಳಿಸುತ್ತವೆ" ಎಂಬ ಉದ್ದೇಶದಿಂದ ಮಾಧ್ಯಮಗಳು ಇಲ್ಲದ ದಿನಗಳಲ್ಲಿ ಹಬ್ಬಗಳೇ ಸಮರ್ಥ ಜ್ಞಾನಪ್ರಸಾರ ಮಾಧ್ಯಮಗಳಾಗಿದ್ದವು. ಹಟ್ಟಿಗೆ ಸಂಬಂಧಿಸಿದಂತೆ ಅಲ್ಲಿನ ಸಂಸ್ಕಾರಗಳಿಗೆ ಸಂಬಂಧಿಸಿದಂತೆ ವ್ಯಕ್ತಿ ವ್ಯಕ್ತಿಗಳಿಗೆ ಸಂಬಂಧಿಸಿದ ಸಮಸ್ಯೆಗಳೆಲ್ಲ ಹಬ್ಬಗಳಲ್ಲಿ ತೀರ್ಮಾನವಾಗುತ್ತಿದ್ದವು.

ಹಬ್ಬಗಳ ಮೂಲ ಉದ್ದೇಶವೇನೆ ಇರಲಿ, ಅವುಗಳ ಸಾಂಸ್ಕೃತಿಕ ಹಾಗೂ ಸಾಮಾಜಿಕ ಸಾರ್ಥಕತೆಯನ್ನು ಮೆಚ್ಚುವಂತಹದು ಅನೇಕ ರೀತಿಯ ಸಾಂಸ್ಕೃತಿಕ, ಸಾಮಾಜಿಕ, ಪದ್ಧತಿಗಳ ವಿನಿಮಯ, ಬದಲಾವಣೆ, ಹೊಸತನ, ಸಂಸ್ಕೃತೀಕರಣ, ಆಧುನೀಕರಣ, ಪಾಶ್ಚಾತೀಕರಣಕ್ಕೆ ಹಬ್ಬಗಳು ರಹದಾರಿಯನ್ನು ಕಲ್ಪಿಸುತ್ತವೆ. ಇವರುಗಳು ಮುಸ್ಲಿಂ ಹಬ್ಬವಾದ 'ಮೊಹರಂ' ಆಚರಿಸುವುದನ್ನು ನೋಡಿದರೆ ಕೋಮು ಸೌಹಾರ್ದತೆಯು ದ್ಯೋತಕವಾಗಿದೆ.

**ಕೋಷ್ಟಕ : ಮ್ಯಾಸಬೇಡರು ಆಚರಿಸುವ ಹಬ್ಬಗಳು**

| ಮ್ಯಾಸಬೇಡರು ಆಚರಿಸುವ ಹಬ್ಬಗಳು | ಗ್ರಾಮ | ಶೇಕಡ | ನಗರ | ಶೇಕಡ | ಒಟ್ಟು |
|---|---|---|---|---|---|
| ಹಿಂದೂ | 174 | 87.00 | 182 | 91.00 | 356 |
| ಮುಸ್ಲಿಂ/ಹಿಂದೂ | 26 | 13.00 | 18 | 09.00 | 44 |
| ಒಟ್ಟು | 200 | 100.00 | 200 | 100.00 | 400 |

ಈ ಮೇಲಿನ ಕೋಷ್ಟಕದಲ್ಲಿ ತಿಳಿಸಿರುವಂತೆ ಹಬ್ಬಗಳು ಮ್ಯಾಸಬೇಡರ ಬೇಸರ ಕಳೆಯುವ ಒಂದು ಮಾಧ್ಯಮವಾಗಿವೆ. ಹಾಗೂ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನಲೆಯ ಉದ್ದೇಶದ ಆಧಾರದ ಮೇಲೆ ರಚನೆಯಾಗಿರುವ ಹಾಗೂ ಇವುಗಳು ಧಾರ್ಮಿಕತೆಯ ಆಧಾರವಾಗಿರುತ್ತವೆ ಹಬ್ಬದ ಆಚರಣೆಗಳಿಗೆ ಸಂಬಂಧಿಸಿದಂತೆ ಗ್ರಾಮದ 200 ಸೂಚನಾದಾರರಲ್ಲಿ 174 ಸೂಚನಾದಾರರು ಹಿಂದೂಧರ್ಮಕ್ಕೆ ಸಂಬಂದಿಸಿದಂತಹ ಹಬ್ಬಗಳನ್ನು ಆಚರಣೆ ಮಾಡಿದರೆ ಇನ್ನುಳಿದ 26 ಸೂಚನಾದಾರರು ಹಿಂದೂ ಧರ್ಮದ ಹಬ್ಬಗಳ ಜೊತೆಯಲ್ಲಿ ಮುಸ್ಲಿಂ ಧರ್ಮದ ಕೆಲವು ಹಬ್ಬಗಳನ್ನೂ ಸಹ ಆಚರಿಸುತ್ತಿರುವುದು ಕಂಡುಬರುತ್ತದೆ. ಉಳಿದಂತೆ ನಗರದ 200 ಮಾಹಿತಿದಾರರ 182 ಜನ ಹಿಂದೂ ಧರ್ಮದ ಆಚರಣೆ ಬಿಟ್ಟರೆ ಬೇರೆ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಯಾವುದೇ ಆಚರಣೆ ಮಾಡುತ್ತಿಲ್ಲದಿರುವುದು ಕಂಡುಬರುತ್ತದೆ, ಮತ್ತುಳಿದ 18 ಮಾಹಿತಿದಾರರು ಫೀರ್ಲಾ ಹಬ್ಬವನ್ನು ಮುಸ್ಲಿಮರ ಜೊತೆ ಸೇರಿ ಆಚರಿಸುವುದು ಕಂಡುಬರುತ್ತದೆ, ಕಾರಣ ಈಗಾಗಲೇ ತಿಳಿದಂತೆ ಮ್ಯಾಸಬೇಡರ ದೊರೆಯ ಒಪ್ಪಂದದಂತೆ **ನನ್ನೆಮ್ಮ** ಎಂಬ ಮುಸ್ಲಿಂ ಕನ್ಯೆಯನ್ನು ಮದುವೆಯಾದಾಗ ಅವಳ ಷರತ್ತುಗಳಿಗೆ ಬದ್ದವಾಗಿ ಈ ಧರ್ಮಗಳ ಮಧ್ಯೆ ಸಾಮರಸ್ಯತೆ ಬೆಳೆದುಕೊಂಡು ಬಂದಿರುವುದು ಮನವರಿಕೆಯಾಗುತ್ತದೆ. ಈ ಹಿನ್ನೆಲೆಯಿಂದಾಗಿ ಈ ಎರಡು ಧರ್ಮಿಯರ ಮಧ್ಯ ಹಬ್ಬದ ಆಚರಣೆಗಳು ಇಂದಿಗೂ ರೂಡಿಗತದಲ್ಲಿವೆ.

ಹಬ್ಬಗಳು ಹಿಂದಿನಿಂದಲೂ ಆಚರಿಸುವ ಉದ್ದೇಶ ಹೋಗುವುದರಿಂದ ರುಚಿರುಚಿಯಾದ ದೈಹಿಕ ಪುಷ್ಠತೆ ಕೊಡುವ ಆಹಾರವನ್ನು ಸ್ವೀಕರಿಸುವುದಕ್ಕೆ ಆರೋಗ್ಯದಾಯಕವಾಗಿವೆ. ಹಬ್ಬಗಳಲ್ಲಿ ಕಾಲಕ್ಕೆ ತಕ್ಕ ಆಹಾರವನ್ನು ಕಂಡುಕೊಂಡಿದ್ದಾರೆ. ಬೇಸಿಗೆಯಲ್ಲಿ ಸಾಂಕ್ರಾಮಿಕ ರೋಗಗಳ ಹಾವಳಿ ತೀವ್ರವಾಗಿರುವುದನ್ನು ಗಮನಿಸಿ ಅದರ ನಿಯಂತ್ರಣಕ್ಕೆ ಹಬ್ಬದ ಸೋಗಿನಲ್ಲಿ "ಬೇವು-ಬೆಲ್ಲ" ತಿನ್ನುವುದು ಮನೆಯಲ್ಲಿ ಧೂಪ ಹಾಕುವುದು, ಮನೆಗೆ ಮಾವು-ಬೇವಿನ ಸೊಪ್ಪಿನಿಂದ ಅಲಂಕರಿಸುವುದು ಇದರಿಂದ ನೊಣಗಳು ಪ್ರವೇಶಿಸುವುದಿಲ್ಲ, ಮನೆ ಸ್ವಚ್ಚತೆ ಮತ್ತು, ಹೊಸಬಟ್ಟೆ ಧರಿಸುವುದನ್ನು ಕಾಣಬಹುದು ಇದೆಲ್ಲವೂ ಆರೋಗ್ಯದ ಸಂಕೇತವಾಗಿದೆ.

ಮ್ಯಾಸಬೇಡರು ಪ್ರತಿ ಅಮಾವಾಸ್ಯೆ ಹಾಗೂ ಹುಣ್ಣಿಮೆಗಳಿಗೆ ಹೆಚ್ಚಿನ ಪ್ರಾಶಸ್ಥ್ಯ ಕೊಟ್ಟಿರುವುದು ಸಹ ಕಂಡುಬರುತ್ತದೆ. ಆದರೆ ಅಮಾವಾಸ್ಯೆಗೆ ವಿಶೇಷ ಪ್ರಾಶಸ್ತ್ಯವಿದೆ ಇವುಗಳ ಆಧಾರದ ಮೇಲೆ ಹಬ್ಬಗಳ ದಿನವನ್ನು ನಿಗದಿಗೊಳಿಸಿಕೊಳ್ಳುತ್ತಾರೆ. ಇದರ ಹಿಂದಿನ ಸಮಾಜಶಾಸ್ತ್ರೀಯ ಸತ್ಯಾಂಶಗಳನ್ನು ಅನುಭವದ ಆಧಾರದ ಮೇಲೆ ಕಂಡುಕೊಂಡಿದ್ದಾರೆ.

## ಯುಗಾದಿ ಹಬ್ಬ

ಹಿಂದೂ ಕ್ಯಾಲೆಂಡರ್ ಪ್ರಕಾರ ವರ್ಷದ ಪ್ರಥಮ ತಿಂಗಳಾದ ಚೈತ್ರಮಾಸದಲ್ಲಿ ಬರುವ ಯುಗಾದಿಯನ್ನು ಹರ್ಷದಿಂದ ಸ್ವಾಗತಿಸಿಕೊಂಡು ಮೂರು ದಿನಗಳ ಕಾಲ ನಡೆಯುವ ಹಬ್ಬವು ಸಂತೋಷ ಹಾಗೂ ಸಡಗರದ ಸಾಂಸ್ಕೃತಿಕ ಹಾಗೂ ಸಾಮಾಜಿಕ ಆಚರಣೆಯಾಗಿ ಪ್ರತಿಬಿಂಬಿಸುತ್ತದೆ.

ಹಬ್ಬದ ಮೊದಲ ದಿನ ಪಶು ಆರಾಧಕರಾದ ಇವರುಗಳು ದೇವರ ಎತ್ತಿನ ಗೂಡಿಗೆ ಹೋಗಿ ಕಾಸು ಮೀಸಲು ಅರ್ಪಿಸಿ ಬೇವು-ಬೆಲ್ಲವನ್ನು ಸ್ವೀಕರಿಸಿ ಬರುತ್ತಾರೆ. ಮನೆಯಲ್ಲಿ ತಯಾರು ಮಾಡಿದ ಸಿಹಿ ಭೋಜನವಾದ 'ಕರಿಗಡಬು', ಇನ್ನು ಕೆಲವರು ಹೋಳಿಗೆ, ಬೇವುಬೆಲ್ಲ ತೆಗೆದುಕೊಂಡು ಮನೆಯಲ್ಲಿ ಮಾಡಿದ ಎಲ್ಲಾ ಆಹಾರವನ್ನು ಹಿರಿಯರ ಸಮಾದಿ (ಗುಡ್ಡೆ)ಗಳಿಗೆ ಹೋಗಿ ಪೂಜೆ ಮಾಡಿಕೊಂಡು ಬಂದು ಮನೆಯಲ್ಲಿ ಎಲ್ಲರೂ ಸೇರಿ ಊಟ ಮಾಡುತ್ತಾರೆ.

ಹಬ್ಬದ ಎರಡನೆ ದಿನ ಅಥವಾ ಮೂರನೆ ದಿನ ಊರಿಗೆ ಹುಲುಸು ಅಥವಾ ಶಾಂತಿ ದೊರೆಯಲಿ ಎಂಬ ಭಾವನೆಯಿಂದ ಹಾಗೂ ವರ್ಷದ ಪ್ರಾರಂಭದ ದಿನ ತಮ್ಮ ಸಂಸ್ಕ್ರತಿಯಾದ ಬೇಟೆ ಸಂಸ್ತ್ರತಿಯ ದ್ಯೋತಕವಾಗಿ 'ರಾಣ್ಯದ ಬೇಟೆ' ಗೆ ಹೋಗಿ ಮೊಲ ಅಥವಾ ಹಂದಿ ಬೇಟೆಯೊಂದಿಗೆ ಬರುವುದು ಖಚಿತ ನಂತರ ಇಲ್ಲಿಯ ದೊರೆಯನ್ನು ಅಲಂಕಾರ ಮಾಡಿ ಮೆರವಣಿಗೆ ಮೂಲಕ ಕಟ್ಟೆಮನೆಗೆ ಕರೆತಂದು ಸಿಂಹಾಸನವನ್ನು ಏರಿಸಿ ದೊರೆಗೆ ಸಲಾಮು ಮಾಡಿ ದೊರೆಯ ಅಧಿಕಾರವನ್ನು ಒಪ್ಪಿ ನಡೆಯುವ ಮೂಲಕ ವಿಶಿಷ್ಟವಾದ ಸಂಸ್ಕೃತಿಯನ್ನು ಇಂದಿಗೂ ಉಳಿಸಿಕೊಂಡು ಬಂದಿರುವುದನ್ನು ನನ್ನಿವಾಳದ ಭಾಗದಲ್ಲಿ ನೋಡಬಹುದಾಗಿದೆ. ಅಂದೇ 'ಕರಿ' ಮಾಡಿ ಊಟಮಾಡುವುದುಂಟು.

## ಕಾರಹಬ್ಬ (ಮಳೆಹಬ್ಬ)

ಜನಪದದಲ್ಲಿ 'ದೇವರಗೊಡಿನಹಬ್ಬ' ಎಂದು ಕರೆಯುತ್ತಾರೆ. ಇದನ್ನು ಜೇಷ್ಠಮಾಸದಲ್ಲಿ ಆಚರಿಸುವುದುಂಟು (ಮೇ) ಇತರರು ಈ ಭಾಗದಲ್ಲಿ ಬಸವನಹಬ್ಬ ಎಂದು ಕರೆಯುತ್ತಾರೆ. 'ಕಾರ' ಎಂದರೆ 'ಮಳೆ' ಎಂದರ್ಥ, ಮಳೆಗಾಲದ ಆರಂಭದ ಹುಣ್ಣಿಮೆ ಎಂದೇ ಇದಕ್ಕೆ 'ಕಾರಹುಣ್ಣಿಮೆ' ಎಂದು ಕರೆಯುತ್ತಾರೆ. ಅಂದು ಬಸವನ(ಎತ್ತು) ಮೈ ತೊಳೆದು ಕೊಂಬಿಗೆ ಬಣ್ಣ ಹಚ್ಚಿ ಪೂಜೆಮಾಡಿ ಮನೆಯಲ್ಲಿ ತಯಾರಿಸಿದ ಸಿಹಿ ಅಡಿಗೆ, ಅನ್ನ, ಪಲ್ಯೆವನ್ನು ಮೊದಲು ಬಸವನಿಗೆ ತಿನ್ನಿಸಿ, ಬಂಗಾರವನ್ನು ಅದರ ಪಾದಕ್ಕೆ ಮುಟ್ಟಿಸುತ್ತಾರೆ. ಬಸವ ಇಡುವ ಹೆಜ್ಜೆಯೆಲ್ಲ ಬಂಗಾರವಾಗಲಿ ಎಂಬ ನಂಬಿಕೆ ಮ್ಯಾಸಬುಡಕಟ್ಟುಗಳಲ್ಲಿ ಉಂಟು.

## ಉದಿ-ಪದಿ ಆಚರಣೆ

ಮ್ಯಾಸಬೇಡರ ಸಂಸ್ಕೃತಿಯಲ್ಲಿ ಪಶುಗಳು ದೈವಸ್ವರೂಪ ಎಂದು ಭಾವಿಸಿ 'ಕಿಲಾರಿ'ಗಳು ಈ ಹಬ್ಬದ ದಿನ ತಂಗಟಿಸೊಪ್ಪು, ಲಕ್ಕಿಸೊಪ್ಪು, ಬಂದ್ರೆಸೊಪ್ಪು, ತುಗ್ಗಿಸೊಪ್ಪಿನ ಪೌಳಿಗಳನ್ನು ನಿರ್ಮಿಸುತ್ತಾರೆ. ಇದನ್ನು 'ಉದಿ' ಎಂಬುದಾಗಿ ಕರೆಯುತ್ತಾರೆ. ಇದರ ಮುಂದೆ ಸಗಣಿಕುರುಳು ತಂದು ಹೊಗೆಯನ್ನು ಹಾಕುತ್ತಾರೆ, ಇದನ್ನು "ಪದಿ" ಎಂಬುದಾಗಿ ಕರೆಯುತ್ತಾರೆ. ಇಲ್ಲಿಯ ನೂರಾರು (ನಾನು ಹೋದಾಗ 250 ದನಗಳು ಇದ್ದವು) ದನಗಳನ್ನು ಉದಿ-ಪದಿಯ ಸುತ್ತಾ ಸುತ್ತರಿಸುತ್ತಾರೆ. ಇದು ವೈಜ್ಞಾನಿಕವಾಗಿ ತುಂಬ ಆರೋಗ್ಯದಾಯಕವಾದುದು, ಈ ಹೊಗೆ ಬೆಳೆಗಳಿಗೂ ಜನರಿಗೂ ಒಳ್ಳೆಯದು ಇದರ ಧೂಪವನ್ನು ಹಣೆಗೆ ಇಟ್ಟುಕೊಳ್ಳುವುದುಂಟು ಇಲ್ಲಿಯ ದನಗಳಿಗೆ ಇಂದಿಗೂ ಒಂದು ಇಂಜೆಕ್ಷನ್ ಮಾಡಿಸುವುದಿಲ್ಲ ಇದನ್ನು ಗಮನಿಸಿದಾಗ ಆರೋಗ್ಯ ಪುಷ್ಟಿದಾಯಕಗಳು ಈ ಹೊಗೆಯಿಂದ ದೊರೆಯುತ್ತದೆ. ಬಂದ ಭಕ್ತರುಗಳು ಮನೆಯಿಂದ ಉಪ್ಪು ಹಾಕದೆ ತಯಾರಿಸಿದ ರೊಟ್ಟಿಗಳನ್ನು ದೇವರ ಎತ್ತುಗಳಿಗೆ ತಿನ್ನಿಸಿ ಅದರಲ್ಲಿ ಸ್ವಲ್ಪ ಪ್ರಸಾದ ಎಂದು ಭಾವಿಸಿ ಮನೆಗೆ ತೆಗೆದುಕೊಂಡು ಹೋಗಿ ಮನೆ ಮಂದಿಯೆಲ್ಲ ಪ್ರಸಾದವೆಂದು ಸ್ವೀಕರಿಸುತ್ತಾರೆ.

## ವಾಸೆ ಕೊಯ್ಯುವುದು

ಕಾರಹಬ್ಬದಂದು ಮೀಸಲು ಹಾಲನ್ನು ಮತ್ತೇಗಾರ ಎತ್ತಿನಗುಡ್ಡೆಗೆ ಅರ್ಪಿಸಿ ನಚಿತರ ಸಮಾದಿಗೆ ಕುರಿಯನ್ನು ವಾಸೆ(ಬಲಿ)ಕೊಯುತ್ತಾರೆ. ಇದರ ಉದ್ದೇಶ ಗಾದ್ರಿಪಾಲನಾಯಕನ ಕಾಲದಲ್ಲಿ ದೇವರ ಎತ್ತೊಂದನ್ನು ಹುಲಿಯು ಬೇಟೆಯಾಡಿ ಕೊಂದಿದ್ದರಿಂದ ಇಲ್ಲಿ ಎತ್ತಿನ ಸಮಾದಿ ಮಾಡಿ ಕಲ್ಲಿನ ರಾಶಿಯನ್ನು ಹಾಕಲಾಗಿದೆ. ಇದಕ್ಕೆ ಪ್ರತಿವರ್ಷ ಕಾರಹುಣ್ಣಿಮೆಯೆಂದು ಕುರಿ ಬಲಿಕೊಟ್ಟು ಶ್ರದ್ದಾಕರ್ಮವನ್ನು ಆಚರಿಸುತ್ತಾರೆ. ಇದನ್ನು 'ನೆಲಗಾವು' ಎಂಬುದಾಗಿ ಸಹ ಕರೆಯುತ್ತಾರೆ. ಇಲ್ಲಿ ಅವರ ಎರಡು ದೈವಸ್ವರೂಪಗಳು ಗೋಚರಿಸುತ್ತವೆ. ಎತ್ತು ದೈವಸಮಾನ ಹುಲಿ ಕ್ರೂರಪ್ರಾಣಿಯಾಗಿದ್ದು ಅದರ ಶಾಂತತೆ ಗೊಳಿಸಲು ಈ ಪ್ರಯತ್ನ ಮಾಡಲಾಗುತ್ತದೆ. ಎಂಬುದು ಅವರ ಆಚರಣೆಯಿಂದ ವಿಶ್ಲೇಷಿಸಬಹುದಾಗಿದೆ.

## ಹರಕೆ

ಮ್ಯಾಸಬೇಡರು ಹರಕೆ ಕೋರಿಕೆಯನ್ನು ದೇವರು ಭಕ್ತನ ಬೇಡಿಕೆಯನ್ನು ಈಡೇರಿಸಿದ ಸವಿ ನೆನಪಿಗಾಗಿ ಮಾಡುವ ವಿಧಿ ವಿಧಾನವಾಗಿದೆ, ಹರಕೆಗಳಲ್ಲಿ ವಿವಿಧ ರೀತಿ ಇವೆ. ಉರುಳು ಸೇವೆ, ಪ್ರಾಣಿಬಲಿ, ಬೇವಿನ ಸೀರೆ ಉಡುವುದು, ಬಾಯಿಬೀಗ, ಸಿಡಿಯಾಡುವುದು, ಕಾಯಿಹೊಡೆಯುವುದು ಕೊಬ್ಬರಿಸುಡುವುದು, ನಮ್ಮ ತೂಕದಷ್ಟು ನಾಣ್ಯನೀಡುವುದು, ಶಿರಸಾಷ್ಟಾಂಗ (ಉದುಂಡು) ನಮಾಸ್ಕಾರ ಹಾಕುವುದು, ದೇವತೆಗೆ ಸೀರೆಉಡಿಸುವುದು,

ಬಳೆಹಾಕಿಸುವುದು, ಚರ ಅಥವಾ ಸ್ಥಿರ ಆಸ್ತಿಯನ್ನು ನೀಡುವುದು. ಮತ್ತು 'ಪರವು' (ಕುರಿ ಹಾಗೂ ಮೇಕೆ ಎರಡನ್ನೂ ಕೊಯ್ಯುವುದು) ಹೀಗೆ ಆನೇಕ ರೀತಿಯಲ್ಲಿ ಹಬ್ಬಗಳಲ್ಲಿ ಹರಕೆಯನ್ನು ತೀರಿಸುವ ಪದ್ಧತಿಗಳನ್ನು ಮ್ಯಾಸಬೇಡರಲ್ಲಿ ಕಾಣಬಹುದು.

## ನಾಗಪ್ಪನ ಹಬ್ಬ

ಶ್ರಾವಣಮಾಸ (ಆಗಸ್ಟ್)ದಲ್ಲಿ ತಮಗೆ ಅನುಕೂಲವಾದ ದಿನದಂದು ಆಚರಿಸಿಕೊಳ್ಳುತ್ತಾರೆ. ವಿಶೇಷವಾಗಿ ಹೆಣ್ಣುಮಕ್ಕಳನ್ನು ತವರು ಮನೆಗಳಿಗೆ ಕರೆಯುವ ವಾಡಿಕೆಯುಂಟು ಹಣ್ಣು, ಹೊಸಬಟ್ಟೆ ಹಾಗೂ ಕೈಗೆ ಬಳೆಗಳನ್ನು ಇರುವಂತಹವರು ಕೊಡುವುದುಂಟು ಈ ಹಬ್ಬದಂದು ಎಳ್ಳುಂಡೆ, ತೊಮಟ,(ಅಕ್ಕಿಹಿಟ್ಟು, ಬೆಲ್ಲ, ರುಬ್ಬಿ ಮಾಡುವುದು) ಹುರುಳಿಕಾಳು, ಸಜ್ಜೆಕಡುಬು, ಪೆಡಲು, (ಜೋಳ ಹುರಿದಾಗ ಬರುತ್ತದೆ) ಮಾಡಿಕೊಂಡು ಆಯಾ ಹಟ್ಟಿಯವರು ಒಂದೇ ಹುತ್ತಕ್ಕೆ ಹೋಗಿ ಹಾಲು ಎರೆದು ಭಯಭಕ್ತಿಯಿಂದ ಪೂಜಿಸುವುದುಂಟು, ವಿಷಜಂತುಗಳು ಯಾವುದೇ ರೀತಿ ತೊಂದರೆ ಕೊಡದೆ ಇರಲಿ ಎಂದು ಭಾವಿಸಿರುವುದು ಅವರ ಪ್ರಕೃತಿ ಪೂಜೆಯನ್ನು ಪ್ರತಿಬಿಂಬಿಸುತ್ತದೆ. ಇದರ ಬಗ್ಗೆ ವೈಜ್ಞಾನಿಕವಾಗಿ ಚಿಂತಿಸುವುದಾದರೆ ಈ ಹುತ್ತವನ್ನು ಗೆದ್ದಲು ಹುಳಗಳು ತನ್ನ ಎಂಜಲು (ಉಗುಳು) ಮೂಲಕ ಈ ಹುತ್ತ ಕಟ್ಟುತ್ತವೆ. ಈ ಭಾಗದಲ್ಲಿ ಬಾವಿ ತೋಡಿದರೆ, ಅಥವಾ ಬೋರ್‌ಕೊರೆಸಿದರೆ ನೀರು ಬೀಳುತ್ತದೆ ಎನ್ನುವ ವೈಜ್ಞಾನಿಕ ಸತ್ಯಾಂಶಗಳನ್ನು ಭೂಗರ್ಭತಜ್ಞರು ವ್ಯಕ್ತಪಡಿಸುತ್ತಾರೆ. ಹಾಗೆಯೇ ಆಯುರ್‌ವೇದಿಕ್ ಮತ್ತು ಪ್ರಕೃತಿ ಚಿಕಿತ್ಸೆಯಲ್ಲಿ ಹುತ್ತವನ್ನು ಮುಟ್ಟುವುದರಿಂದ ಅದರ ಮಣ್ಣನ್ನು ಲೇಪಿಸಿಕೊಳ್ಳುವುದರಿಂದ ಚರ್ಮರೋಗ ಹಾಗೂ ದೇಹದ ಯಾವುದಾದರು ಭಾಗ ಹುಣಕು ನೋವು ಇದ್ದರೆ ನಿವಾರಣೆಯಾಗುತ್ತದೆ ಎನ್ನುವುದು ಹಟ್ಟಿಗಳಲ್ಲಿ , ಹಳ್ಳಿಗಳಲ್ಲಿ ಮತ್ತು ಪಟ್ಟಣಗಳಲ್ಲಿ ಇಂದಿಗೂ ನಂಬಿಕೆ ಉಂಟು ಈ ಎಲ್ಲಾ ಹಿನ್ನೆಲೆಯನ್ನು ಇಟ್ಟುಕೊಂಡು ಈ ರೀತಿಯಾದ ಪೂಜೆಯನ್ನು ಪೂರ್ವಜರು ಕಂಡು ಕೊಂಡಿದ್ದಾರೆ ಎಂದು ಬಾಸವಾಗುತ್ತದೆ.

## ದಸರಾ (ಮಹಾನವಮಿ, ಬನ್ನಿಪೂಜೆ)

ಈ ಹಬ್ಬದ ಪೌರಾಣಿಕ ಹಿನ್ನೆಲೆಯನ್ನು ನೋಡಿದಾಗ ಮಹಾಭಾರತದಲ್ಲಿ ಪಾಂಡವರು ಕೌರವರ ವಿರುದ್ಧ ವಿಜಯ ಸಾಧಿಸಿದ ಸಂಕೇತವಾಗಿ ಈ ಹಬ್ಬವನ್ನು ಆಚರಿಸಲಾಗುತ್ತದೆ.

ಕೌರವರು ವಿರಾಟರಾಯನ ಪಶುಗಳನ್ನು ಸೆರೆ ಹಿಡಿದ ವಿಷಯ ತಿಳಿದ ಮರುದಿವಸ ಅರ್ಜುನನು ಕೌರವರ ಮೇಲೆ ಯುದ್ಧಕ್ಕೆ ಹೊರಡುವಾಗ ಜೊತೆಗೆ ವಿರಾಟರಾಯನ ಆಸ್ಥಾನದಲ್ಲಿ ಪಶುಪಾಲಕರಾಗಿದ್ದ ಮ್ಯಾಸಬೇಡರು ಅರ್ಜುನನ ಜೊತೆಗೆ ಯುದ್ಧಕ್ಕೆ ಹೋಗಿ ಜಯಸಾಧಿಸುತ್ತಾರೆ. ಜಯದ ನೆನಪಿಗಾಗಿ ಈ ಹಬ್ಬವನ್ನು ಆಚರಿಸಿಕೊಂಡು ಬರುತ್ತಾರೆ.

ಈ ಹಬ್ಬವು ಅಶ್ವಿಜಮಾಸ (ಅಕ್ಟೋಬರ್)ದಲ್ಲಿ ನಡೆಯುತ್ತದೆ. ಮ್ಯಾಸಬೇಡರು ಈ ಹಬ್ಬವನ್ನು ದಸರಾಹಬ್ಬ, ಬನ್ನಿಹಬ್ಬ, ಪಿತೃಪಕ್ಷ, ಹಿರಿಯರ ಹಬ್ಬ ಮತ್ತು ಆಯುಧ ಪೂಜೆ ಹೀಗೆ ವಿವಿಧ ಹೆಸರಿನಡಿಯಲ್ಲಿ ಕರೆಯುವುದುಂಟು.

ಈ ಹಬ್ಬವು ಎರಡು ದಿನಗಳು ನಡೆಯುವ ಹಬ್ಬವಾಗಿದ್ದು ಮೊದಲ ದಿನ ಸತ್ತು ಸ್ವರ್ಗ ಸೇರಿದ ಪೂರ್ವಿಕರಿಗೆ 'ಪಿತೃಪಕ್ಷ' ಆಚರಿಸುತ್ತಾರೆ. ಹಿಂದೆ ತಮ್ಮ ಪೂರ್ವಜರು ಉಪಯೋಗಿಸುತ್ತಿದ್ದ ಆಯುಧಗಳಾದ ಕತ್ತಿ, ಮಚ್ಚು, ಬರ್ಜಿ, ಕೊಡಲಿ ಮುಂತಾದವುಗಳನ್ನು ಇಟ್ಟು, ಎಡೆ ಇಟ್ಟು ಪೂಜೆಮಾಡುತ್ತಾರೆ. ಈ ಸಂದರ್ಭದಲ್ಲಿ ಸಸ್ಯಹಾರ ಹಾಗೂ ಮಾಂಸಹಾರವನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಮಾಡುತ್ತಾರೆ.

ಹಬ್ಬದ ಎರಡನೆ ದಿನ 'ಬನ್ನಿ' ಮರಕ್ಕೆ ಹೋಗಿ ಪ್ರದಕ್ಷಿಣೆ ಹಾಕಿ ಅಲ್ಲಿಯ ದೊರೆ ಮರದ ಬುಡದಲ್ಲಿಟ್ಟ ಬಿಲ್ಲು ಬಾಣಗಳನ್ನು ಹೆಗಲಿಗೇರಿಸಿ ಬಾಣವನ್ನು ಹೂಡಿ ಬನ್ನಿ ಮರದ ಬುಡಕ್ಕೆ ನಾಟಿಕೊಳ್ಳುವಂತೆ ನಾಲ್ಕು ಬಾಣಗಳನ್ನು ನಾಲ್ಕು ದಿಕ್ಕಿಗೆ ಪ್ರಯೋಗ ಮಾಡುತ್ತಾನೆ. ನಂತರ ದೊರೆ ಬನ್ನಿ ಮರ ಹತ್ತಿ ಅದರ ಎಲೆಯನ್ನು ಕಿತ್ತುಕೊಂಡು ಬಂದು ಅಲ್ಲಿರುವವರಿಗೆ ಹಂಚುತ್ತಾರೆ. ಇದನ್ನು ಮನೆಗೆ ತೆಗೆದುಕೊಂಡು ಹೋದವರು ಗುರು–ಹಿರಿಯರಿಗೆ ಕೊಟ್ಟು ಕಾಲಿಗೆ ಬಿದ್ದು ಆಶೀರ್ವಾದ ಪಡೆಯುತ್ತಾರೆ.

## ದೀಪಾವಳಿ ಹಬ್ಬ

ಕಾರ್ತಿಕಮಾಸದಲ್ಲಿ ಬರುವ ಈ ಹಬ್ಬದ ಮ್ಯಾಸಬೇಡರ ವೈಶಿಷ್ಟತೆ ಕುತೂಹಲಕಾರಿಯಾಗಿದೆ. ದೀಪಾವಳಿ ಹಿಂದಿನ ಹುಣ್ಣಿಮೆಯಿಂದ ಅಮಾವಾಸೆಯವರೆಗೆ ತೊಗರಿಕಾಳು ಸಾರು ಅಡಿಗೆ ಮಾಡುವಂತಿಲ್ಲ, ಸ್ನಾನವಿಲ್ಲ, ಬಟ್ಟೆ ಹೊಗೆಯುವಂತಿಲ್ಲ, ತಲೆಬಾಚುವಂತಿಲ್ಲ, ಚಪಾತಿ, ರೊಟ್ಟಿ, ಸಿಹಿ ಅಡಿಗೆ ಮಾಡುವಂತಿಲ್ಲ, ಹಸು ಹಾಲುಕರಿಯುವಂತಿಲ್ಲ ಹಸು–ಕರು ಇದ್ದರೆ ಉಣುಬೀಡುವುದು ಹದಿನೈದು ದಿವಸ ತೊಗರಿ ಹೊಲಕ್ಕೆ ಹೋಗುವಂತಿಲ್ಲ, ನವಣೆ ಹೊಲಕ್ಕೆ ಹೋಗುವುದಿಲ್ಲ, ಅದನ್ನು ಬೆಳೆಯಬಾರದು ಒಳ್ಳೆಯದಾಗುವುದಿಲ್ಲ ಎಂಬ ನಂಬಿಕೆ ಇಟ್ಟುಕೊಂಡು ಈ ಹಬ್ಬ ಆಚರಿಸುವುದುಂಟು.

ಈ ಹಬ್ಬಕ್ಕೆ ಮುಂಚೆ ಮೂರು ದಿವಸ ಪ್ರತಿ ಮನೆಗಳಿಗೆ, ದೇವಸ್ಥಾನಗಳಿಗೆ ಮ್ಯಾಸರ ಪವಿತ್ರ ಹೂವಾದ ತಂಗಟೆ ಹೂವನ್ನು ಮನೆ ಮನೆ ಬಾಗಿಲಿಗೆ ಚೆಲ್ಲುತ್ತಾರೆ. ರಾತ್ರಿ ಹೊತ್ತು ದೀವಟಿಗೆ ಹಿಡಿದುಕೊಂಡು ಮನೆ ಮನೆಗೆ ಬಂದು ಹೊಲಿಗ–ಹೊಲಿಗ ಎಂದು ಜನಪದಿಯ ಹಾಡುಗಳನ್ನು ಹಾಡುತ್ತಾರೆ. ಹಬ್ಬದ ದಿವಸ ಬೆಳಿಗ್ಗೆ ಮನೆ ಮನೆಗೆ ಬಂದು ಅಕ್ಕಿ–ನುಚ್ಚು ತೆಗೆದುಕೊಂಡು ಹೋಗಿ ಸಂಜೆಗೆ ಎಡೆ ಮಾಡಿ 'ಮುಸರೆ' ತಯಾರು ಮಾಡುತ್ತಾರೆ. ನಂತರ ಗೋಮಾಳದಲ್ಲಿ "ಈಡು" ಸಿದ್ದತೆ ಮಾಡಿ ಹಟ್ಟಿಯ ಎಲ್ಲಾ ದನಕರುಗಳನ್ನು ಅಲಂಕಾರಿಸಿ "ಈಡಿಗೆ" ವಾದ್ಯಗಳೊಂದಿಗೆ ಕುಣೆಯುತ್ತ, ಕುಪ್ಪಳಿಸುತ್ತ, ಹಾಡು ಹೇಳುತ್ತ ಹೋಗಿ ಈಡಿಗೆ ಬೆಂಕಿ ಇಟ್ಟು ಅದರ ಸುತ್ತಾ ಮೂರು ಬಾರಿ ದನಕರು ಸುತ್ತಾರಿಸಿಕೊಂಡು ಬರುತ್ತಾರೆ. ಹಿರಿಯರು ಆ ಎಲ್ಲಾ ದನಗಳಿಗೆ ಮುಸರೆಯನ್ನು ಎಸೆಯುತ್ತಾರೆ. ಇದರಿಂದ ದನಗಳಿಗೆ ಶಾಂತಿ ದೊರೆಯುತ್ತದೆ ಎಂಬ ನಂಬಿಕೆ, ಇದರ ಹಿಂದೆ ಆರೋಗ್ಯದ ಗುಟ್ಟು ಅಡಗಿದೆ, ಇದಕ್ಕೆ ಸಂಬಂಧಿಸಿದಂತೆ ಪಶುವೈದ್ಯಕೀಯ ಸಂಶೋಧನೆಗಳ ಅಗತ್ಯವಿದೆ.

ಈ ತಿಂಗಳಲ್ಲಿ ದನಗಳು ಹಸಿಹುಲ್ಲನ್ನು ತಿಂದು ಮೈತುಂಬಿ ಕೊಂಡಿರುತ್ತವೆ. ಅದಕ್ಕೆ ಒಂದು ಗಾದೆ ಉಂಟು "ದೀವಳಿಗೆಯಲ್ಲಿ ಎತ್ತು ನೋಡುವುದಕ್ಕೆ (ಕೊಂಡುಕೊಳ್ಳುವುದಕ್ಕೆ) ಹೋಗಬಾರದು ಗೌರಮ್ಮನ ಹಬ್ಬದಲ್ಲಿ ಹೆಣ್ಣನ್ನು ನೋಡುವುದಕ್ಕೆ ಹೋಗಬಾರದು" ಎನ್ನುತ್ತಾರೆ. ಈ ಸಂದರ್ಭದಲ್ಲಿ ಅನೇಕ ರೀತಿಯ ಮೋಸಗಳಾಗುವ ಸಂದರ್ಭಗಳು ಇರುತ್ತವೆ, ಮ್ಯಾಸರು ಈ ಈಡು ಸುತ್ತರಿಸುವುದನ್ನು ಉದಿ– ಪದಿ ಎಂದು ಕರೆಯುತ್ತಾರೆ.

ಈ ಹಬ್ಬವು ಪಶುಗಳಿಗೆ ಸಂಬಂಧಿಸಿದ್ದು ಇವುಗಳು ಸಹ ಸಂತೋಷಕರವಾಗಿರಲಿ, ಅವುಗಳೆಲ್ಲವು ಒಂದು ಕಡೆ ಸೇರಲಿ ಆನಂದಿಸಲಿ ಎಂಬ ಬಯಕೆಯನ್ನು ಇಟ್ಟು ಪಶುಪಾಲನೆ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ದ್ಯೋತಕವಾಗಿ ತುಂಬ ವಿಶೇಷವಾಗಿ ಆಚರಿಸುವುದುಂಟು.

## ಗುಗ್ಗರಿಹಬ್ಬ

ಈ ಹಬ್ಬ ಫೆಬ್ರವರಿ ತಿಂಗಳಲ್ಲಿ ಮಾಡುವ ಹಬ್ಬವಾಗಿದ್ದು ಇದನ್ನು ಕಾಳೇಹಬ್ಬ ಎಂದು ಸಹ ಕರೆಯುತ್ತಾರೆ. ಗುಗ್ಗರಿ ಎಂದರೆ, ದ್ವಿದಳಧಾನ್ಯವನ್ನು ಬೇಯಿಸಿದಾಗ ಗುಗ್ಗರಿ ಎನ್ನುತ್ತಾರೆ. ತಮ್ಮ ಜಮೀನುಗಳಲ್ಲಿ ಬೆಳೆದ ಗುಗ್ಗರಿ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಹುರುಳಿಕಾಳನ್ನು ತಮ್ಮ ಮನೆದೇವರುಗಳಿಗೆ ಮಡಿವಂತಿಕೆಯಿಂದ ಅರ್ಪಿಸಿದಾದ ಮೇಲೆ ತಮ್ಮ ಮನೆಯೊಳಗೆ ತೆಗೆದುಕೊಂಡು ಹೋಗಿ ಅಡಿಗೆ ತಯಾರಿಸುತ್ತಾರೆ. ನನ್ನಿವಾಳದ ಕಟ್ಟೆಮನೆಯಲ್ಲಿ ಪ್ರತಿ ಮೂರು ವರ್ಷಕ್ಕೊಮ್ಮೆ ಆರು ದಿನಗಳ ಕಾಲ ನಡೆಯುವ ದೊಡ್ಡ ಹಬ್ಬವಾಗಿದೆ.

ಈ ಹಬ್ಬಕ್ಕಿಂತ ಮೊದಲು ಹುರುಳಿಕಾಳು ಸರಿಯಾಗಿ ಬೇಯುವುದಿಲ್ಲ ಹಾಗೂ ಮೊಳಕೆ ಬರುವುದಿಲ್ಲ. ಹಬ್ಬದ ತರುವಾಯ ಅಡಿಗೆಗೆ ಬಳಸಬಹುದು. ಇಲ್ಲಿ ಕಾಳಿಗೆ ಮತ್ತು ಕಾಲಕ್ಕೆ ಸಂಬಂಧ ಉಂಟು ಎಂಬುದು ತಿಳಿದು ಬರುತ್ತದೆ.

## ಡಿಕ್ಕಿಹಬ್ಬ

ಈ ಹಬ್ಬದ ವಿಶೇಷತೆ ಎಂದರೆ ಅತ್ತೆ–ಸೊಸೆಯರು ಬಂಗಾರುದೇವರ ಮುಂದೆ ಬಂದು ಎದುರು–ಬದರು ಕುಳಿತು ಒಬ್ಬರಿಗೊಬ್ಬರು ತಲೆ 'ಡಿಕ್ಕಿ' ಕೊಟ್ಟುಕೊಳ್ಳುವುದಕ್ಕೆ ಡಿಕ್ಕಿ ಎಂಬುದಾಗಿ ಕರೆಯುತ್ತಾರೆ. ಇದು ಮಾಗಿ ಮಾಸದಲ್ಲಿ ಅಮಾವಾಸೆಯ ಅವದಿಯಲ್ಲಿ ನಡೆಯತ್ತದೆ, ಕ್ಷೇತ್ರಧ್ಯಯನಕ್ಕೆ ಹೋದಾಗ ಎರಡು ಕಡೆಯವರು ಕಿತ್ತಾಡುತ್ತಾರೆಯೆ ಎನ್ನುವ ರೀತಿಯಲ್ಲಿ ಭಾಸವಾಯಿತು. ಅಲ್ಲಿರುವ ಪೂಜಾರು, ತಳವಾರ ನಾಯಕರು ಮತ್ತು ಹಿರಿಯರು ಶಾಂತಗೊಳಿಸುತ್ತಾರೆ ನಂತರ ಖುಷಿಯಲ್ಲಿ ಡಿಕ್ಕಿಗೆ ತೆರೆಬೀಳುತ್ತದೆ. ಬಂಗಾರುದೇವರಿಗೆ ಕಾಯಿ ಹೊಡೆಯುವುದಿಲ್ಲ ತಲೆಯನ್ನು ಡಿಕ್ಕಿ ಹೊಡೆದು ಕೊಳ್ಳುವುದೇ ಕಾಯಿ ಹೊಡೆದಂತೆ ಎಂದು ನಂಬುತ್ತಾರೆ.

ಮತ್ತೊಬ್ಬ ವಕ್ತೃ ಹೇಳುವಂತೆ ಆಧುನಿಕ ಕಾಲದಲ್ಲಿ ನೂತನವಾಗಿ ವಿವಾಹವಾಗಿ ಬಂದ ಸೊಸೆಯಂದಿರು ಡಿಕ್ಕಿ ಹಬ್ಬದಲ್ಲಿ ಭಾಗವಹಿಸಿ ಅತ್ತೆಯರೊಂದಿಗೆ ಹಣೆಗೆ ಡಿಕ್ಕಿ ಕೊಡುವುದಕ್ಕೆ ಸಿದ್ದರಾಗಿ ಎಂದು ಹಿರಿಯರು ಹೇಳಿದಾಗ ತಿರಸ್ಕರಿಸಿದ್ದರು, ಅಂತಹ ಸೊಸೆಯರಿಗೆ ವರ್ಷದುದ್ದಕು ತಲೆನೋವು ಕಾಡಿದಾಗ ಕೊನೆಗೆ ದೈವಿಕ ಸಂಪ್ರದಾಯಿಕ ವ್ಯವಸ್ಥೆಗೆ ಬದ್ದರಾಗಿ ಡಿಕ್ಕಿ ಹೊಡೆವ ಹಬ್ಬದಲ್ಲಿ ಭಾಗವಹಿಸಿ ಅತ್ತೆ ಸೊಸೆಯರು ಹಣೆ–ಹಣೆಗೆ ಡಿಕ್ಕಿ ಹೊಡೆದುಕೊಳ್ಳುವ ಸಂಪ್ರದಾಯವನ್ನು ರೂಡಿಸಿಕೊಂಡು ಬಂದಿದ್ದಾರೆ, ಅಂದಿನಿಂದ ಸೊಸೆಯಂದಿರಿಗೆ ತಲೆನೋವು ಬರುತ್ತಿಲ್ಲ ಎಂಬ ಪ್ರತೀತಿ ಉಂಟು. ಇಂದಿಗೂ ಸಹ 50–60 ವರ್ಷ ಮೇಲ್ಪಟ್ಟ ಹಿರಿಯರು ನಗರ, ಪಟ್ಟಣಗಳಿಗೆ ಹೋಗಿ ಬಂದಿರುವುದು ಅಪರೂಪ ಇಲ್ಲಿಯ ಪ್ರದೇಶದ ಹಿಂದಿನ ದಿನಗಳಲ್ಲಿ ತೆಂಗಿನಗಿಡ ಮತ್ತು ಕಾಯಿ ಇಲ್ಲದ ಸ್ಥಿತಿಇದ್ದಾಗ, ತಮ್ಮ ತಲೆಗಳೇ ಕಾಯಿಯೆಂದು ಭಾವಿಸಿಕೊಂಡು ದೇವರಿಗೆ ಅರ್ಪಣೆ ಮಾಡುವ ಸಂಪ್ರದಾಯ ಬೆಳೆದು ಬಂದಿರಬಹುದು ಎಂಬುದು ನನ್ನ ಅಭಿಪ್ರಾಯ.

ಐತಿಹಾಸಿಕ ಹಿನ್ನೆಲೆಯನ್ನು ನೋಡುವುದಾದರೆ ಸಾಂಸ್ಕೃತಿಕ ನಾಯಕನಾದ ಗಾದ್ರಿಪಾಲ ನಾಯಕನ ಚರಿತ್ರೆಯಲ್ಲಿ ಹೇಳುವಂತೆ, ಇವನ ಮೇಲೆ ಸೇಡು ತೀರಿಸಿಕೊಳ್ಳಲು ಹೊರಟ ಹುಲಿಗಳಲ್ಲಿ ಮೊದಲು ಗಂಡು ಹುಲಿಯು ನದಿಯ ನೀರಿಗೆ ಸಿಕ್ಕಿ ಸಾಯುತ್ತದೆ. ನಂತರ ಹೆಣ್ಣು ಹುಲಿಯು(ಗಾದ್ರಿ) ಪಾಲನಾಯಕನೊಂದಿಗೆ ಹೋರಾಡಿ ಸಾವಿನ ಸ್ಥಿತಿಗೆ ಬಂದಾಗ ಬಾಯಿಗೆ ಹಾಕಿದ 'ಜನ್ನಿಗೆ' ಹಾಲನ್ನು ಸೇವಿಸದೆ ಗಂಟಲಿನಲ್ಲಿ ಇಟ್ಟುಕೊಂಡು ಸಾವನ್ನಪ್ಪುತ್ತದೆ. ಹುಲಿಯರೂಪದಲ್ಲಿರುವ ಬಂಗಾರುದೇವರಿಗೆ ನೀರು ಮತ್ತು ದ್ರವ ರೂಪದಲ್ಲಿರುವ ಪದಾರ್ಥವನ್ನು ಬಂಗಾರುದೇವರಿಗೆ ಅರ್ಪಿಸುವುದಿಲ್ಲ ನೀರು ಮತ್ತು ದ್ರವ ರೂಪವನ್ನು ಹೊಂದಿರುವ ತೆಂಗಿನಕಾಯಿ ಹೊಡೆಯುವುದು ಈ ದೇವರಿಗೆ ನಿಷೇದವಾಗಿದೆ ಎಂದು ತಿಳಿಸುತ್ತಾರೆ.

## ಬಹುದೇವತಾ ಆರಾಧನೆ

ವಿಶೇಷವಾಗಿ ತಮ್ಮ ಸಾಂಸ್ಕೃತಿಕ ವೀರರನ್ನೆ ದೇವರು ಎಂದು ಆರಾಧಿಸುವ ವಾಡಿಕೆಯುಂಟು. ಜೊತೆಗೆ ಪೌರಾಣಿಕ ವ್ಯಕ್ತಿಗಳನ್ನು ಸಹ ದೈವಸ್ವರೂಪ ಎಂದು ಆರಾಧಿಸುವುದುಂಟು. ಬುಡಕಟ್ಟು ಜನಾಂಗದವರಾದ ಇವರುಗಳು 'ಪೆಟ್ಟಿಗೆ ದೇವರು'ಗಳನ್ನು ಹೊಂದಿದ್ದಾರೆ. ಪಶುಪಾಲಕರಾದ ಇವರುಗಳು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಹೋಗಲು ಅನುಕೂಲವಾಗಲಿ ಎಂಬ ದೃಷ್ಟಿಯಿಂದ ಈ ರೀತಿ ದೇವರುಗಳನ್ನು ಹೊಂದಿದ್ದಾರೆ. ಕುಲದೇವತೆ ಹಾಗೂ ಮನೆದೇವರುಗಳಾಗಿ ತಮ್ಮ ಸಾಂಸ್ಕೃತಿಕ ವೀರರನ್ನು ಪೂಜಿಸುತ್ತಾರೆ.

## ಅವರುಗಳೆಂದರೆ –

1. ಜಗಳೂರು ಪಾಪನಾಯಕ
2. ಗಾದ್ರಿಪಾಲನಾಯಕ
3. ಯರಮಂಚಿನಾಯಕ
4. ಕೋಕಿಲ ಮಲ್ಲಿನಾಯಕ
5. ಕಾಟೀಮಲ್ಲನಾಯಕ

ಇವರುಗಳು 'ಕಿಲಾರಿ'ಗಳಾಗಿದ್ದುಕೊಂಡು ಪಶುಪಾಲನೆಯೊಂದಿಗೆ ಬುಡಕಟ್ಟಿನ ಏಳಿಗೆಗೆ ದುಡಿದು ಒಂದು ರೀತಿ ಪವಾಡಪುರುಷರಂತೆ ಕಂಡುಬರುತ್ತಾರೆ, ಹಾಗಾಗಿ ಇವರನ್ನು ಮ್ಯಾಸಬೇಡರು ದೈವಸಮಾನವಾದ ಸಾಂಸ್ಕೃತಿಕ ವೀರರೆಂದು ಆರಾಧಿಸುತ್ತಾರೆ. ಮನೆಯಲ್ಲಿ ಮಕ್ಕಳು, ದನಕರುಗಳು, ಆರೋಗ್ಯ ಚೆನ್ನಾಗಿಲ್ಲ ಅಂದರೆ ಇಲ್ಲಿಯ ದೇವಸ್ಥಾನದಲ್ಲಿನ ದೂಳ್ಳವನ್ನು ಧರಿಸಿದರೆ ಆರೋಗ್ಯ ಸುಧಾರಿಸುತ್ತದೆ. ಎಂದು ನಂಬಿಕೆ ಇಟ್ಟುಕೊಂಡಿದ್ದಾರೆ. ಇಲ್ಲಿ ಒಟ್ಟಾರೆ ನಂಬಿಕೆಯೇ ದೃಢಸಂಕಲ್ಪ ಎಂಬುದರಲ್ಲಿ ಎರಡು ಮಾತಿಲ್ಲ ಎಂಬ ಸ್ವಭಾವದವರಾಗಿದ್ದಾರೆ.

## ಮ್ಯಾಸಬೇಡರ ಪೆಟ್ಟಿಗೆ ದೇವರುಗಳು

1. ಕಂಪಳ ದೇವರು – ಚಿಕ್ಕುಂತಿ
2. ಭೋಸೆದೇವರು – ನಲಜಾಮನಹಟ್ಟಿ
3. ಓಬಳದೇವರು – ಬೋರಪ್ಪನಹಟ್ಟಿ
4. ಚಿತ್ರದೇವರು – ಬಾಲೇನಹಳ್ಳಿ
5. ಮತ್ತೇಗಾರು – ನೆಲಗೇತಿ
6. ಕಾಟಪ್ಪ – ಕಾಟಪ್ಪನಹಟ್ಟಿ –ಚಳ್ಳಕೆರೆ
7. ಬೊಮ್ಮದೇವರು – ಕರೆಕಾಟ್ಲಹಟ್ಟಿ
8. ದಡ್ಲ ಮಾರಮ್ಮ – ದೇವರಹಳ್ಳಿ
9. ನನ್ನಿವಾಳದ ಮತ್ತೇಗಾರು – ನನ್ನಿವಾಳ

ಅಲೆಮಾರಿಗಳಾದ ಇವರುಗಳು ಆಂದ್ರದ ಶ್ರೀಶೈಲದಿಂದ ಬಂದಂತಹ ಸಂದರ್ಭದಲ್ಲಿ ಪ್ರಕೃತಿಯ ಆರಾಧಕರಾಗಿಯೂ ತಮ್ಮ ಶೈವ ಮತ್ತು ವೈಷ್ಣವ ದೈವ ಭಕ್ತಿಯನ್ನು ವ್ಯಕ್ತಪಡಿಸುತ್ತಾರೆ. ಅವೆ ಮುಂದೆ ತಮ್ಮ ದೇವರುಗಳಾದವು. ಮ್ಯಾಸಬೇಡರ ಜನಾಂಗದ ಮೇಲೆ ಮೊದಲು ಶೈವ ಪಂಥದ ಪ್ರಭಾವವಿದ್ದು ನಂತರ ವೈಷ್ಣವ ಪಂಥದ ಪ್ರಭಾವ ಸಹ ಆಗಿದೆ.

ಕಂಪಳರಂಗ, ಓಬಳದೇವರು, ನಲಜವರ, ಅಲಕೋಬಳದೇವರು, ಆಹೋಬಲನರಸಿಂಹ ಇವು ವಿಷ್ಣುವಿನ ಸ್ವರೂಪಗಳಾಗಿವೆ. ಇವರಲ್ಲಿ ಪೆಟ್ಟಿಗೆ ದೇವರುಗಳು ವಿಶೇಷವಾಗಿದ್ದು ಪೆಟ್ಟಿಗೆಯಲ್ಲಿ ಈಶ್ವರಲಿಂಗ ಇರುವುದರಿಂದ ಕಾಟಲಿಂಗೇಶ್ವರ ಮತ್ತು ಶ್ರೀ ಶೈಲ ಮಲ್ಲಿಕಾರ್ಜುನಂತಹ ಶೈವ ದೇವರುಗಳ ಆರಾಧನೆಯನ್ನು ಮಾಡುವುದುಂಟು.

ಭೂಲೋಕದಲ್ಲಿ ಬ್ರಹ್ಮನಿಗೆ ಪೂಜೆಯಿಲ್ಲ ಎಂದು ಹೇಳುವುದುಂಟು. ಆದರೆ ಮ್ಯಾಸರು ಬೊಮ್ಮದೇವರನ್ನು ಪೂಜಿಸುತ್ತಾರೆ. ಇದು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಬ್ರಹ್ಮದೇವರಾಗಿದೆ. ಹೀಗಾಗಿ ಇವರು ತ್ರಿಮೂರ್ತಿಗಳಾರಾಧಕರು. ಜೊತೆಗೆ ಗೌರಸಂದ್ರಮಾರಮ್ಮ ಗಾಳಿಮಾರಮ್ಮ ದುರುಗಮ್ಮ, ಉಡುಚಲಮ್ಮ, ಚಳ್ಳಕೆರಮ್ಮ, ಕರಿಯಮ್ಮ ಮತ್ತು ಎಲ್ಲಮ್ಮ ಇತ್ಯಾದಿ ಸ್ತ್ರೀದೇವತೆಗಳ ಆರಾಧಕರಾಗಿದ್ದಾರೆ.

ಸ್ತ್ರೀದೇವತೆಗಳು ಕ್ಷುದ್ರದೇವತೆಗಳು ಎಂಬ ಭಯದಿಂದ ತಮ್ಮ ಹರಕೆಯನ್ನು ತೀರಿಸುವುದರ ಮೂಲಕ ಶಾಂತಪಡಿಸುವುದುಂಟು. ಹರಕೆಯಾಗಿ ಕೋಣ, ಕುರಿ, ಮೇಕೆ ಮತ್ತು ಹೋತಗಳನ್ನು ಬಲಿಕೊಡುತ್ತಾರೆ. ಬೇವಿನಸೀರೆ ಉಡುವುದು, ಮಡ್ಲಕ್ಕಿ ಕೊಡುವುದು ಮತ್ತು ಬಳೆ-ಸೀರೆ ಅರ್ಪಿಸುವುದುಂಟು ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ, ಹೊಸಪೇಟೆ ಭಾಗದಲ್ಲಿ ಮತ್ತು ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕು ಭಾಗದಲ್ಲಿ ಹಿಂದುಳಿದ ಜಾತಿಗಳಲ್ಲಿ ತಮ್ಮ ಹಿರಿಯ ಅಥವಾ ಕಿರಿಯ ಹೆಣ್ಣು ಮಕ್ಕಳನ್ನು ಗೆಜ್ಜೆಪೂಜೆ ಮಾಡಿ ದೇವತೆಯ ಹೆಸರಿನಲ್ಲಿ ದೇವದಾಸಿಯರನ್ನಾಗಿ ಬಿಡುವಂತೆ ಪ್ರೇರಣೆ ನೀಡುತ್ತಾರೆ, ಈಗಾಗಲೇ ಕರ್ನಾಟಕದಲ್ಲಿ ಮಾನ್ಯ ಹೆಚ್.ಡಿ. ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದಾಗ ಸರ್ಕಾರದ ಆದೇಶದಂತೆ ದೇವದಾಸಿಗಳ ಪಟ್ಟಿ ತಯಾರಿಸಿದಾಗ ಕರ್ನಾಟಕದಲ್ಲಿ ಒಟ್ಟು 21000 ದೇವದಾಸಿಯರು ಇರುವುದು ತಿಳಿದು ಬಂದಿದೆ. ಚಳ್ಳಕೆರೆ ತಾಲ್ಲೂಕಿನಲ್ಲಿ ಸಾವಿರಾರು ದೇವದಾಸ ಹಾಗೂ ದೇವದಾಸಿಯರು ಪಿಂಚಣಿಗಾಗಿ ಹೋರಾಟ ಮಾಡಿದ್ದನ್ನು ನೆನಪು ಮಾಡಿಕೊಂಡರೆ ಸರ್ಕಾರಿ ಸೌಲಭ್ಯಗಳು ದೊರೆಯುವುದಕ್ಕೆ ಪ್ರಾರಂಭಿಸಿದರೆ ಆತ್ಮಗೌರವವನ್ನು ಬಿಟ್ಟು ಇದರಿಂದಾಗಿ ದೇವದಾಸಿಯರಾಗಿ ಗುರುತಿಸಿಕೊಳ್ಳಲು ಬಯಸುತ್ತಾರೆ. ಇಂತಹ ಸಾಮಾಜಿಕ ಪಿಡುಗುಗಳು ದ್ವಿಗುಣಗೊಳ್ಳಲು ದಾರಿಯಾಗುತ್ತದೆ.

ಗಾಳಿಮಾರಮ್ಮನನ್ನು ಆಷಾಡಮಾಸದಲ್ಲಿ ಮ್ಯಾಸಬೇಡರು ಆಚರಿಸುತ್ತಾರೆ. ಇದರ ವೈಶಿಷ್ಟ್ಯತೆ ಏನೆಂದರೆ ಹುತ್ತದ ಮಣ್ಣನ್ನು ತಂದು ಮಾರಮ್ಮನ ಪ್ರತಿಮೆಯನ್ನು ಮಾಡಿ ಬೇವಿನ ಸೊಪ್ಪಿನ ಗುಡಿಸಲನ್ನು ಕಟ್ಟಿ ಇದರೊಳಗೆ ಮಣ್ಣಿನ ಗಾಳಿಮಾರಮ್ಮ ಪ್ರತಿಮೆಯನ್ನು ಮಾಡಿ, ಪೂಜಿಸಿ ಹಟ್ಟಿಗಳಲ್ಲಿರುವವರು ಸಿಹಿ ಎಡೆ ಮಾಡಿ ದೇವತೆಗೆ ಅರ್ಪಿಸಿದ ನಂತರ ಅವರವರ ಮನೆಗಳಲ್ಲಿ ಭೋಜನ ನಡೆಯುತ್ತದೆ. ಇದರಿಂದ ಊರುಗಳಲ್ಲಿ ಮಕ್ಕಳಿಗೆ ಬರುವ ಹಾಗೂ ಬಂದ ಕಾಯಿಲೆಗಳನ್ನು ಗಾಳಿಮಾರಮ್ಮ ಹೊತ್ತುಕೊಂಡು ಹೋಗುತ್ತಾಳೆ ಎಂಬ ನಂಬಿಕೆ ಉಂಟು. ಅಲ್ಲದೆ ಮನೆಯಲ್ಲಿನ ಹಳೆಯ ಪೊರಕೆ, ಪುಟ್ಟಿ, ಹಳೆಮರ ಮತ್ತು ಗಾಳಿಮಾರಮ್ಮನ ಪ್ರತಿಮೆಯನ್ನು ಊರ ಹೊರಗೆ ಕರೆದುಕೊಂಡು ಹೋಗಿ ವಿಸರ್ಜಿಸಿ ಬರುತ್ತಾರೆ. ಒಟ್ಟಾರೆಯಾಗಿ ಮಾರಮ್ಮನ ಹಬ್ಬ ಮಾಡುವುದು ಮಾತೃದೇವತಾ ಪೂಜೆಯಾಗಿದ್ದು ಇದು ದ್ರಾವಿಡ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ.

## ಜಾತ್ರೆಗಳು

### ಮಾರಮ್ಮನ ಜಾತ್ರೆ

ಭಾದ್ರಪದ ಮಾಸದಲ್ಲಿ ಮ್ಯಾಸಬೇಡರು ತುಂಬಾ ಹಣವನ್ನು ಖರ್ಚು ಮಾಡುವ ಹಬ್ಬವಾಗಿದೆ. ಗೌರಸಮುದ್ರ ಮಾರಮ್ಮ ಜಾತ್ರೆ ಚಳ್ಳಕೆರೆ ತಾಲ್ಲೂಕಿನಲ್ಲಿ ಪ್ರಭಾವಿತವಾಗಿದ್ದು, ಇದಕ್ಕೆ ಭಯಭಕ್ತಿಯಿಂದ ನಡೆದುಕೊಳ್ಳುತ್ತಾರೆ. ತಮಗೆ ಅನುಕೂಲವಾದ ಮಂಗಳವಾರದಂದು ಬಾದ್ರಪದ ತಿಂಗಳಲ್ಲಿ ವಿವಿಧ ಹಟ್ಟಿ, ಹಳ್ಳಿ ಇತರೆ ಭಾಗಗಳಲ್ಲಿ ಬಂಧುಬಳಗ ನೆಂಟರಿಷ್ಟರು, ಸ್ನೇಹಿತರು ಸೇರಿಕೊಳ್ಳುವ ವಿಶೇಷ ಹಬ್ಬವಾಗಿದೆ, ಮನೆಗೆ ಒಂದು, ಎರಡು ಬೇಟೆ ಕೊಯ್ಯುದು, ಪಂಕ್ತಿ ಬೋಜನ ಮಾಡುವ ವಾಡಿಕೆಯುಂಟು. ಹಾಗೆಯೆ ಕೆಲವರು "ಮುರುಗಿ"ಮಾಡಿ(ಒಣಗಿಸಿ ಇಟ್ಟುಕೊಳ್ಳುವ ಮಾಂಸ) ಇದನ್ನು ಒಂದು ವರ್ಷದವರೆಗೆ ಇಟ್ಟುಕೊಳ್ಳುತ್ತಾರೆ. ಹಾಗೂ ವರ್ಷದುದ್ದಕೂ ಆಹಾರವಾಗಿಯೂ ಸಹ ಬಳಸುತ್ತಾರೆ.

ಬುಡಕಟ್ಟು ಜನಾಂಗವಾದ ಮ್ಯಾಸಬೇಡರು ಆಷಾಡ ಮತ್ತು ಶ್ರಾವಣಮಾಸದಲ್ಲಿ ರೈತನಾದವನು ಮತ್ತು ಶ್ರಮಿಕನಾದವನು ಆಷಾಡದ ಗಾಳಿಗೆ ದೇಹ ಕರಗಿಹೋಗಿರುತ್ತದೆ, ಶ್ರಾವಣದಲ್ಲಿ ಕೃಷಿ ಚಟುವಟಿಕೆ ಇತ್ಯಾದಿ ಶ್ರಮದ ಕೆಲಸದಿಂದ ದಣಿದು ಹೋಗಿರುತ್ತಾನೆ. ಅವನಿಗೆ ದೈಹಿಕ ಶಕ್ತಿಗಾಗಿ ಪೌಷ್ಟಿಕ ವಿಟಮಿನ್ ಆಹಾರ ಬೇಕಾಗಿರುತ್ತದೆ. ಹಾಗಾಗಿ ಭಾದ್ರಪದ ಮಾಸದಲ್ಲಿ ಮಾರಮ್ಮನ ಹೆಸರಿನಲ್ಲಿ ಉತ್ತಮ ಮಾಂಸ ಆಹಾರ ತಿನ್ನುವುದರಿಂದ ಶಕ್ತಿವರ್ದನೆಗೆ ಸಹಾಯಕವಾಗುತ್ತದೆ.

ಈ ಹಬ್ಬದ ಸಂದರ್ಭದಲ್ಲಿ ಬೇವಿನ ಸೀರೆ ಉಡುವುದು ವಾಡಿಕೆ ದೇವಸ್ಥಾನದ ಸುತ್ತಾಮುತ್ತಾ ರಾಶಿರಾಶಿ ಬೇವಿನ ಸೊಪ್ಪಿನ ಸೀರೆ ಬಿದ್ದಿರುತ್ತದೆ. ದೇವಸ್ಥಾನದ ಬಾಗಿಲಲ್ಲಿ ಇದನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಬೆತ್ತಲೆಯಾಗಿ ಬೇವಿನ ಸೊಪ್ಪನ್ನು ಮೈಗೆ ಸಂಪೂರ್ಣವಾಗಿ ಹಗ್ಗಾ ಅಥವಾ ದಾರದ ಸಹಾಯದಿಂದ ಕಟ್ಟಿಕೊಂಡಿರುತ್ತಾರೆ. ಇಲ್ಲಿ ಮಕ್ಕಳು ಹಾಗೂ ಎಲ್ಲಾ ವಯೋಮಾನದ ಸ್ತ್ರೀಯರು ಇರುತ್ತಾರೆ. ಈ ಕ್ರಮ ಅವೈಜ್ಞಾನಿಕವಾಗಿ ಕಂಡುಬಂದರೂ, ಇದರ ಹಿಂದೆ ವೈಜ್ಞಾನಿಕತೆಯಿದೆ ಎಂದು ಸಂಶೋಧನೆಯ ಮೂಲಕ ಹೇಳಬಹುದು, ಹಾಗೂ ಇದು ದೇವತೆಯ ಹರಕೆ ಎಂದು ಬಿಂಬಿಸಿಕೊಳ್ಳುತ್ತಾರೆ.

ಇನ್ನು ಕೆಲವರು ಮಾರಮ್ಮನ ಜಾತ್ರೆಯಲ್ಲಿ ಕೋಳಿಮರಿ ತೂರಿ ಬಿಡುವುದು ಮತ್ತು ಈರುಳ್ಳಿ ತೂರಿಬಿಡುವುದು ಕಂಡುಬರುತ್ತದೆ. ಇಲ್ಲಿ ಎಲ್ಲಾ ವರ್ಗದ ಜನರು ಕಂಡು ಬರುತ್ತಾರೆ. ಧಾರ್ಮಿಕ ಸಾಂಪ್ರದಾಯಿಕ ಆಚರಣಾ ವೃತ್ತಿಗಳಾದ ಪೋತರಾಜರು, ಗೊರಪ್ಪಗಳು, ಜೋಗಿಗಳು, ಊರು ಮಾರಮ್ಮನವರು, ದೇವದಾಸಿಯರು, ಪೂಜಾರಿಗಳು, ಜೋಗತಿಗಳು ಮತ್ತು ಮೊಂಡರು ತಮ್ಮ ಹರಕೆಗಳನ್ನು ತೀರಿಸುವುದನ್ನು ಈ ಜಾತ್ರೆಯಲ್ಲಿ ಕಾಣಬಹುದು. ಈ ರೀತಿ ಸಾಂಪ್ರದಾಯಿಕ ವೃತ್ತಿ ಅನುಸರಿಸುವುದು ಕಾನೂನು ಬಾಹಿರ ಹಾಗೂ ಅಜ್ಞಾನವನ್ನು ಸೂಚಿಸುತ್ತದೆ. ಇದರಿಂದ ಹೊರಬಂದು ಅಧುನಿಕ ಜಗತ್ತಿಗೆ ಸ್ಪಂದಿಸಬೇಕು ಹಾಗೂ ಇವರಿಗೆ ಸರ್ಕಾರಿ ಸೌಲಭ್ಯಗಳನ್ನು ತಕ್ಷಣವೆ ನೀಡಿ ಸಮಾಜದ ಮುಖ್ಯವಾಹಿನಿಗೆ ಸೇರ್ಪಡಿಸಬೇಕಾಗಿದೆ.

### ಕಂಪಳರಂಗಸ್ವಾಮಿ ಜಾತ್ರೆ

ಮ್ಯಾಸಬೇಡರ ಪ್ರಮುಖ ಜಾತ್ರೆಯಾಗಿದ್ದು ಮೊಳಕಾಲ್ಮೂರು ತಾಲ್ಲೂಕು ಚಿಕ್ಕುಂತಿ ಗ್ರಾಮದಲ್ಲಿ ನಡೆಯುತ್ತದೆ. ಪ್ರತಿವರ್ಷ ಮಾಘಶುದ್ಧ, ಚತುರ್ಥಿಯಂದು ಪ್ರಾರಂಭವಾಗುತ್ತದೆ. ಮೊದಲನೆ ದಿನ ಕಂಪಳರಂಗಸ್ವಾಮಿಯು ಹೊರ ಪೌಳಿಗೆ ಬಂದು ನೆಲೆನಿಲ್ಲುತ್ತದೆ. ಎರಡನೇ ದಿನ ಶನಿವಾರದ ಕಾರ್ಯಕ್ರಮ ನಡೆಯುತ್ತದೆ. ಮೂರನೇ ದಿನ ಮಹಾಪೂಜೆ ನಡೆದ ನಂತರ ಪ್ರಸಾದ ವಿನಿಯೋಗ ಕಾರ್ಯಕ್ರಮವಿರುತ್ತದೆ. ಏಳನೇ ದಿನ ಸಂಜೆ ಗುಗ್ಗರಿ(ಹುರುಳಿ)) ಕಾಳು, ಬೆಣ್ಣೆ ಮೀಸಲು ಅಷ್ಟೆ ಇರುತ್ತದೆ. ಅಂದು ರಾತ್ರಿ ಪಂಜು ನುಂಗುವ ಕಾರ್ಯಕ್ರಮ ಇರುತ್ತದೆ. ಎಂಟನೇ ದಿನ ಬೆಳಿಗ್ಗೆ ಮಹಾಪೂಜೆಯ ನಂತರ ಅನ್ನಸಂತರ್ಪಣೆ ಇರುತ್ತದೆ. ಮಧ್ಯಾಹ್ನ ಸಮಯದೊಷ್ಟಿತ್ತಿಗೆ ಕೂಡ್ಲಿಗಿ ತಾಲ್ಲೂಕಿನ 'ಹೂಡೇಂ'ನಿಂದ ಕುದರೆ ಆಗಮನವಾಗುತ್ತಿದ್ದಂತೆ ನದಿಗಳ ಸುತ್ತಮುತ್ತ ದೇವರ ಎತ್ತುಗಳನ್ನು ಓಡಿಸುವ ಕಾರ್ಯಕ್ರಮ ನಡೆಯುತ್ತದೆ. ಒಂಭತ್ತನೆ ದಿನದಲ್ಲಿ ಸಂಜೆ ಮರುದೀಪ, ಮಹಾಪೂಜಾ ಕಾರ್ಯಕ್ರಮ ಇರುತ್ತದೆ. ಹತ್ತನೆಯ ದನ ಹೊರಪೌಳಿಯಿಂದ ಸ್ವಾಮಿಯನ್ನು ಗುಡಿದುಂಬಿಸುವ ಮೂಲಕ ಜಾತ್ರೆಗೆ ತೆರೆಬೀಳುತ್ತದೆ.

ಈ ಜಾತ್ರೆಯ ಸಂದರ್ಭದಲ್ಲಿ ತಾತ್ಕಾಲಿಕ ಪದಿಯನ್ನು ನಿರ್ಮಿಸಿ ಒಂದರಲ್ಲಿ ಕಂಪಳಸ್ವಾಮಿ, ಅಲ್ಲಿಯೇ ಬೇರೆ ಬೇರೆ ಪದಿಯಲ್ಲಿ ಜಗಳೂರು ಪಾಪನಾಯಕ, ಗಾದ್ರಿಪಾಲನಾಯಕ, ಬಳ್ಳಾರಿ ಜಿಲ್ಲೆಯ ಗುಡೇಕೋಟೆ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಭಾಗದ ಜೋಗಿ ದೇವರಗುಡ್ಡದ ಜೋಗೇಶ್ವರ ದೇವರುಗಳು ಸಹ ಪದಿಯಲ್ಲಿ ಕರೆತಂದು ಪ್ರತಿಷ್ಠಾಪಿಸಲಾಗಿರುತ್ತದೆ. ಇವುಗಳಿಗೆ ವಿವಿಧ ಕಡೆಯಲ್ಲಿ ನೆಲೆಸಿರುವ ಮ್ಯಾಸಬೇಡರ ಬಂಧುಗಳು ಆಗಮಿಸಿ ವಿಶೇಷ ಪೂಜೆ ಸಲ್ಲಿಸಿ ದೇವರ ಕೃಪೆಗೆ ಪಾತ್ರರಾಗುತ್ತಾರೆ.

## 🎬 ಗೋಸಿಡ್ಲು ಜಾತ್ರೆ

ನನ್ನಿವಾಳ ಕಟ್ಟೆಮನೆಯಲ್ಲಿ ಕಂಡುಬರುವ ಮ್ಯಾಸಬೇಡರ ಪ್ರಮುಖ ಜಾತ್ರೆಯಾಗಿದ್ದು, ತಮ್ಮ ದೇವರುಗಳು ಹಾಗೂ ದೇವರಎತ್ತುಗಳನ್ನು ಸುಮಾರು ನನ್ನಿವಾಳ 45 ಕಿ.ಮೀ. ದೂರದಲ್ಲಿರುವ ಗೋಸಿಕೆರೆಯ ಹತ್ತಿರ ವೇದಾವತಿ ನದಿಯ ದಂಡೆಯ ಮೇಲೆ ಹುಲಿಯ ಸಮಾಧಿ ಇದ್ದು ಇದನ್ನು 'ಗೋಸಿಡ್ಲು' ಎಂದು ಕರೆಯುತ್ತಾರೆ. ಈ ಪ್ರದೇಶಕ್ಕೆ ತನ್ನದೇ ಐತಿಹಾಸಿಕ ಹಿನ್ನೆಲೆ ಇದ್ದು ಗಾದ್ರಿ ಪಾಲನಾಯಕನ ಮೇಲೆ ದಾಳಿ ಮಾಡಲು ಹೊರಟ ಗಂಡು ಹುಲಿ ನದಿ ದಾಟಲು ಹೋಗಿ ಮುಳುಗಿ ಪ್ರಾಣ ಬಿಟ್ಟ ಸ್ಥಳವಾಗಿದೆ. ಎಂಬ ಪ್ರತೀತಿ ಉಂಟು. ಇಲ್ಲಿಗೆ ಬಂದು ಹುಲಿಯ ಸಮಾಧಿಗೆ ತಿಥಿಕರ್ಮವನ್ನು ಮಾಡಿ ಪೂಜೆ ಸಲ್ಲಿಸುತ್ತಾರೆ.

ಈ ಜಾತ್ರೆಯನ್ನು ಮೂರು ವರ್ಷಗಳಿಗೊಮ್ಮೆ ಜನವರಿ–ಫೆಬ್ರವರಿ ತಿಂಗಳಲ್ಲಿ ಆಚರಿಸುವುದುಂಟು. ಈ ಜಾತ್ರೆಯ ಖರ್ಚನ್ನು ದೊಡ್ಡೇರಿ, ಪುರ್ಲಹಳ್ಳಿ, ಗೊಲ್ಲರಹಟ್ಟಿ ಜನರು ಭರಿಸುತ್ತಾರೆ.

## 🎬 ಮ್ಯಾಸಬೇಡರ ಒಡಲೇಶ್ವರ ಜಾತ್ರೆ

ಮ್ಯಾಸಬೇಡರ ಜಾತ್ರೆ ಉತ್ಸವಗಳಲ್ಲಿ ಈ ಒಡಲೇಶ್ವರನ ಜಾತ್ರೆಯು ಸಹ ಪ್ರಮುಖವಾಗಿ ಕಂಡುಬರುತ್ತದೆ, ಇದು ಶೈವಪಂಥದ ದೇವರಾಗಿದ್ದು ಇಂದು ಮುಂದುವರಿಸಿಕೊಂಡು ಬರುತ್ತಿದ್ದಾರೆ, ಮ್ಯಾಸಬೇಡ ಬುಡಕಟ್ಟಿನ ನೂರೊಂದು ಅಣ್ಣತಮ್ಮಂದಿರ ದೇವರಾದ ಒಡಲೇಶ್ವರಸ್ವಾಮಿಯ ಪೂಜಾಮಹೋತ್ಸವವನ್ನು ಜಿನಗಿ ನದಿ ತೀರದಲ್ಲಿ ಆಚರಿಸಲಾಗುತ್ತದೆ, ಹಾಗೂ ಇಲ್ಲಿ 43 ಹಳ್ಳಿಯಿಂದ ಸಾವಿರಾರು ಭಕ್ತರು ಬರುತ್ತಾರೆ, ಒಡಲೇಶ್ವರಸ್ವಾಮಿಯ ಎತ್ತುಗಳಿಗೆ ಇಲ್ಲಿ ಪೂಜಿಸಲಾಗುತ್ತದೆ, ಕೆಲವರು ಇಲ್ಲಿ ಹಣ್ಣು ಕಾಯಿ ಸಮರ್ಪಿಸಿದರೆ ಮತ್ತಲವರು ಮುಡಿಕೊಟ್ಟು ಭಕ್ತಿ ಸಮರ್ಪಿಸುತ್ತಾರೆ.

■■

– *44ನೇ ಪುಟದಿಂದ ಮುಂದುವರೆದುದು*

ಆರೋಗ್ಯ ಸೇವೆಯು ಗರಿಷ್ಠ ಸಮುದಾಯದ ಭಾಗವಹಿಸುವಿಕೆ, ಸಕ್ರಿಯ ಒಳಗೊಳ್ಳುವಿಕೆ ಮತ್ತು ಜನರ ಸಬಲೀಕರಣವನ್ನು ಆಧರಿಸಿರಬೇಕು ಎಂಬುದನ್ನು ಅವರು ಸ್ಪಷ್ಟವಾಗಿ ಗುರುತಿಸಿದರು. ಸಂಕ್ಷಿಪ್ತವಾಗಿ ಹೇಳುವುದಾದರೆ, ಸುದರ್ಶನ್ ಆರೋಗ್ಯದ ಹಲವು ಮಾರ್ಗಸೂಚಿಗಳನ್ನು ಅನುಸರಿಸಿದರು ಎಂದು ಹೇಳಬಹುದು (1978), ಅವುಗಳೆಂದರೆ (1) ಸಮಾನ ವಿತರಣೆ, (2) ಸಮುದಾಯ ಭಾಗವಹಿಸುವಿಕೆ, (3) ಸೂಕ್ತವಾದ ಆರೋಗ್ಯ ತಂತ್ರಜ್ಞಾನ ಮತ್ತು (4) ಬಹು–ವಲಯ ವಿಧಾನ . ವಾಸ್ತವವಾಗಿ, ಕರ್ನಾಟಕ ಸರ್ಕಾರವು ಬಿ ಆರ್ ಹಿಲ್ಸ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕರುಣಾ ಟ್ರಸ್ಟ್‌ನ ನಿರ್ವಹಣೆಯಿಂದ ಪ್ರಭಾವಿತವಾಗಿದೆ, ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಯೋಜನೆಯಡಿಯಲ್ಲಿ 27 ಪಿಎಚ್‌ಸಿಗಳನ್ನು ಕರುಣಾ ಟ್ರಸ್ಟ್‌ಗೆ ಹಸ್ತಾಂತರಿಸಿದರು. ಪಿಎಚ್‌ಸಿಗಳನ್ನು ನಡೆಸಲು ಟ್ರಸ್ಟ್‌ಗೆ ಅನುದಾನವು ಪ್ರತಿ ಪಿಎಚ್‌ಸಿಗೆ ಸರ್ಕಾರದ ಬಜೆಟ್‌ನ ಶೇಕಡಾ 75 ರಷ್ಟು ದೊರೆಯುತ್ತಿತ್ತು ಎಂಬುದು ಅಧ್ಯಯನದಿಂದ ತಿಳಿದುಬಂದಿದೆ.

ಸುದರ್ಶನ್ ಅವರು ಟೆಲಿಮೆಡಿಸಿನ್ ಆಧಾರಿತ ಅತ್ಯಂತ ಆಧುನಿಕ ವೈದ್ಯಕೀಯ ಆರೈಕೆಯ ಫಲವನ್ನು ಬುಡಕಟ್ಟು ಜನಾಂಗದವರಿಗೆ ತಲುಪಿಸುವ ಕನಸು ಕಂಡರು. ಅದೇ ರೀತಿ ಸಾಕಷ್ಟು ಪ್ರಯತ್ನಗಳನ್ನು ಪಟ್ಟರು. ಕರ್ನಾಟಕದ ಚಾಮರಾಜನಗರ ಜಿಲ್ಲೆಯಲ್ಲಿರುವ ಬಿ.ಆರ್. ಹಿಲ್ಸ್ ಯಾವುದೇ ಉಪಯುಕ್ತ ತುರ್ತು ಆರೈಕೆಗೆ ಪ್ರವೇಶವನ್ನು ಹೊಂದಿಲ್ಲ. ಹೃದ್ರೋಗಿ ಕೂಡ ತುರ್ತು ಚಿಕಿತ್ಸೆ ಪಡೆಯಲು ಕನಿಷ್ಠ 60 ಕಿ.ಮೀ. ದೂರದವರೆಗೂ ಹೋಗಬೇಕಿತ್ತು, ಸುದರ್ಶನ್ ಅವರು ಅತ್ಯುತ್ತಮ ಹೃದಯ ಶಸ್ತ್ರಚಿಕಿತ್ಸಕ ಮತ್ತು ಬೆಂಗಳೂರಿನ ನಾರಾಯಣ ಹೃದಯಾಲಯದ ಅಧ್ಯಕ್ಷರಾದ ದೇವಿಶೆಟ್ಟಿ ಅವರೊಂದಿಗೆ ಸಹಕರಿಸುವಲ್ಲಿ ಯಶಸ್ವಿಯಾದರು. ಇದರಿಂದಾಗಿ ಬಾಹ್ಯಾಕಾಶ ವಿಜ್ಞಾನಿ, ಕಸ್ತೂರಿರಂಗನ್, ಇಸ್ರೋ ಅಧ್ಯಕ್ಷರು ಇಂಟಿಗ್ರೇಟೆಡ್ ಟೆಲಿಕಾರ್ಡಿಯಾಲಜಿ ಮತ್ತು ಟೆಲಿಹೆಲ್ತ್ ಪ್ರಾಜೆಕ್ಟ್ (ಐಟಿಟಿಪಿ) ಯನ್ನು ಏಪ್ರಿಲ್ 2002 ರಲ್ಲಿ ಬಿ ಆರ್ ಹಿಲ್ಸ್‌ನಲ್ಲಿ ಪ್ರಾರಂಭಿಸಲಾಯಿತು. ಗ್ರಾಮೀಣ ಬಡವರ ಅನುಕೂಲಕ್ಕಾಗಿ ಬಾಹ್ಯಾಕಾಶ ತಂತ್ರಜ್ಞಾನವನ್ನು ಬಳಸಲು ಇಸ್ರೋ ಟೆಲಿಮೆಡಿಸಿನ್ ಯೋಜನೆಯನ್ನು ರೂಪಿಸಿತು. ಇದು ಉಪಗ್ರಹದ ಮೂಲಕ ಮಹಾನಗರದಲ್ಲಿರುವ ಆಸಕ್ತ ಮೂಲ ಆಸ್ಪತ್ರೆಗಳಿಗೆ ಮತ್ತು ಈ ಸಂದರ್ಭದಲ್ಲಿ ಬೆಂಗಳೂರಿನ ನಾರಾಯಣ ಹೃದಯಾಲಯಕ್ಕೆ ಸಂಪರ್ಕಿಸಲಾದ ಟೆಲಿಮೆಡಿಸಿನ್ ಸೌಲಭ್ಯವನ್ನು ಒಳಗೊಂಡಿದೆ ಎಂದು ಹೇಳಬಹುದು.

## ಸಮಾರೋಪ

ಒಟ್ಟಾರೆಯಾಗಿ ಈ ಅಧ್ಯಯನವನ್ನು ನೋಡಿದಾಗ ವಿಜಿಕೆಕೆಯ ದೂರದೃಷ್ಟಿ ಏನಿದೆ ಎಂಬುದು ತಿಳಿಯುತ್ತದೆ. ಇದು ಬುಡಕಟ್ಟು ಜನರನ್ನು ಸ್ವಾವಲಂಬಿ ಮತ್ತು ಸಶಕ್ತರನ್ನಾಗಿಸುವುದು. ಬುಡಕಟ್ಟು ಸಮಾಜವು ತನ್ನ ಸಂಸ್ಕೃತಿಯಲ್ಲಿ ಬೇರೂರಿದೆ ಮತ್ತು ಪ್ರಕೃತಿಯೊಂದಿಗೆ ಸಾಮರಸ್ಯದಿಂದ ಬದುಕುವ ಸಂಪ್ರದಾಯವನ್ನು ಹೊಂದಿದೆ ಆದುದರಿಂದ ಅದರಲ್ಲಿಯೆ ಅವರ ಪ್ರಗತಿ ದೊರೆಯುವಂತೆ ಮಾಡುವ ಉದ್ದೇಶ ಹೊಂದಿದ್ದರು. ಬುಡಕಟ್ಟು ಜನರ ಸಮಗ್ರ, ಸುಸ್ಥಿರ ಅಭಿವೃದ್ಧಿಯು ಇದರ ಮಂತ್ರವಾಗಿದೆ. ಹಕ್ಕುಗಳ ಆಧಾರಿತ ವಿಧಾನದ ಮೂಲಕ ಜನರು ಆರೋಗ್ಯ, ಶಿಕ್ಷಣ, ಜೀವನೋಪಾಯ ಭದ್ರತೆ ಮತ್ತು ಜೀವವೈವಿಧ್ಯ ಸಂರಕ್ಷಣೆ ಹೊಂದಬೇಕೆಂಬುದಾಗಿದೆ. ಆರೋಗ್ಯ ಸೇವಾ ವಿತರಣಾ ಕಾರ್ಯವಿಧಾನದಲ್ಲಿ ನೈತಿಕತೆಯನ್ನು ತರುವಲ್ಲಿ ಅಪಾರ ಕೊಡುಗೆ ಸಲ್ಲಿಸಿದ್ದಾರೆ. ಡಾ. ಸುದರ್ಶನ್ ಅವರು ಪ್ರಾರಂಭಿಸಿದ ಸೇವೆಗಳು ಕಾರ್ಯವಿಧಾನದಲ್ಲಿ ಹಲವಾರು ಬದಲಾವಣೆಗೆ ಕಾರಣವಾಗಿದೆ ಎಂಬುದು ಇಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ.

## ಪರಾಮರ್ಶನ ಗ್ರಂಥಗಳು


- **Bose A. (2006) :** Empowering Soliga Tribes: "Sudarshan Model" of Karnataka. Economic and Political Weekly, 41(7), 564–566. http://www.jstor.org/stable/4417816
- https://www.karunatrust.org/vivekananda-girijana-kalyana-kendra-vgkk/
- https://vgkk.in/
- https://www.thebetterindia.com/326/vivekananda-girijana-kalyana-kendra-vgkk/
- https://www.ambitionbox.com/overview/vivekananda-girijana-kalyana-kendra-vgkk-overview


■■

APPROVED BY UGC CARE

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಬಸವೇಶ್ವರರ ರಾಜಕೀಯ ಚಿಂತನೆಗಳು : ದೃಷ್ಟಿ ಮತ್ತು ಧೋರಣೆ

✍ **ಡಾ. ಸಂಗೀತಾ ಯಲ್ಲಪ್ಪ**, ಅತಿಥಿ ಉಪನ್ಯಾಸಕರು, ಸರಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಬೀದರ,
ಸಲಂಗ್ನತೆ ಕರ್ನಾಟಕ ರಾಜ್ಯ ಅಕ್ಕ ಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ವಿಜಯಪೂರ.

## ಪೀಠಿಕೆ

ಬಸವೇಶ್ವರರ ರಾಜಕೀಯ ಕೊಡುಗೆ ಅನನ್ಯ ಮತ್ತು ಅಪ್ರತಿಮ. ಸಮಾಜದ ಸಕಲ ಮನುಜರು ಸರ್ವ ಸಮಾನರು ಎಂದು ಬೋಧಿಸುವ ಮೂಲಕ ಸಕಲ ಜೀವಾತ್ಮರಿಗೆ ಲೇಸನ್ನು ಬಯಸಿದ ನಿಜ ಶರಣರಾಗಿದ್ದಾರೆ. ಯಾವುದೇ ಜಾತಿ, ಮತ, ಪಂಥ ಎನ್ನದೆ ಎಲ್ಲರೂ ಸಮಾನರು ಎನ್ನುವುದರ ಜೊತೆಗೆ 12ನೇ ಶತಮಾನದಲ್ಲಿ ಸಮಾಜೋ–ಆರ್ಥಿಕ, ಧಾರ್ಮಿಕ ಮತ್ತು ರಾಜಕೀಯ ಕ್ರಾಂತಿ ಮಾಡಿ,ಸಂಕ್ರಾತಿಯನ್ನು ಸಾಧಿಸಿದ ಭಾರತದ ಏಕೈಕ ಸಮಾಜ ಸುಧಾರಕ ಬಸವೇಶ್ವರರಾಗಿದ್ದಾರೆ. ಬ್ರಿಟನ್ ದೇಶದ ಶ್ರೇಷ್ಠ ಸಾಮಾಜಿಕ ಚಿಂತಕರಾದ ಅರ್ಥರ್ ಮಿಲ್ಸ್ ಅವರ "ದಿ ಲ್ಯಾಂಡ್ ಆಫ್ ಲಿಂಗಮ್" (ಲಿಂಗಮ ಭೂಮಿ) ಎಂಬ ಕೃತಿಯಲ್ಲಿ ಬಸವೇಶ್ವರರು ಭಾರತದ ಸ್ವತಂತ್ರ ಹಾಗೂ ಸರ್ವಶ್ರೇಷ್ಠ ಚಿಂತಕರು ಎಂದು ಅಭಿಪ್ರಾಯ ಪಟ್ಟಿರುವುದು ಶ್ಲಾಘನೀಯವಾದದ್ದು. ಅವರು ಮನುವಾದಿ ಮತ್ತು ಪುರೋಹಿತಶಾಹಿಯ ವಿರುದ್ಧ ನಿರಂತರವಾಗಿ ಹೋರಾಡಿದರು. ಜಾತಿ ಪದ್ಧತಿಯನ್ನು ನಿರ್ಮೂಲನೆ ಮಾಡಲು ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ರಕ್ಷಿಸಲು ಅವಿರತವಾಗಿ ಶ್ರಮಿಸಿದರು. ಮಹಿಳೆಯರು ಮತ್ತು ಪುರುಷರು ಎನ್ನದೆ ಎಲ್ಲರೂ ಹುಟ್ಟಿನಿಂದಲೇ ಸಮಾನರು ಎಂದು ಬೋಧಿಸಿದರು. ಅವರು ವಿಶೇಷವಾಗಿ ಲಿಂಗವನ್ನು ಧರಿಸಿದವರೆಲ್ಲರೂ ಸಮಾನರು ಎಂದು ಪ್ರತಿಪಾದಿಸಿದರು. ಜೊತೆಗೆ ಸಹಪಂಕ್ತಿ ಭೋಜನ ಹಾಗೂ ಸಾಮೂಹಿಕ ವಿವಾಹವನ್ನು ಸಮಾಜದಲ್ಲಿ ಸಿಂಧುಗೊಳಿಸಿದರು. ಅವರು ವಚನಗಳ ಮೂಲಕ ಸಮಾನತೆಯನ್ನು ಸಾಧಿಸಿದ, ಆ ಮೂಲಕ ಒಬ್ಬ ಪ್ರಖರ ರಾಜಕೀಯ ಚಿಂತಕರು ಎಂಬುದನ್ನು ಸಾಬೀತುಪಡಿಸಿರುವರು. ಅವರ ಪ್ರಕಾರ ರಾಜಕೀಯ ಎಂಬುದು ಸಮಾಜ ಸುಧಾರಣೆಗಾಗಿಯೇ ಹೊರತು ಸ್ವ ಸುಧಾರಣೆಗಾಗಿ ಅಲ್ಲ ಎಂಬುದನ್ನು ಪ್ರತಿಪಾದಿಸಿ ಅದನ್ನು ಅಳವಡಿಸಿಕೊಳ್ಳುವುದರ ಜೊತೆಗೆ ಅನುಷ್ಠಾನಗೊಳಿಸಿದರು. ಸರಕಾರದ ಭಂಡಾರವನ್ನು(ಹಣಕಾಸನ್ನು) ಸಮಾಜದ ಕಲ್ಯಾಣಕ್ಕಾಗಿ ಬಳಸಿದರೆ ವಿನಾಃ ಸ್ವ ಕಲ್ಯಾಣಕ್ಕಾಗಿ ಎಂದೂ ಬಳಸಲಿಲ್ಲ. ಅವರು ನುಡಿದಂತೆ ನಡೆದಿದ್ದಾರೆ ಮತ್ತು ನಡೆದಂತೆ ನುಡಿದಿದ್ದಾರೆ. ನಡೆ ಮತ್ತು ನುಡಿಗಳನ್ನು ಸಮನ್ವಯಿಸಿಕೊಂಡು ಬದುಕಿರುವುದು ಅರ್ಥಪೂರ್ಣವಾದದ್ದು. ಅಂದರೆ ವಚನವನ್ನು ಸರಿಯಾಗಿ ಪಚನ ಮಾಡಿಕೊಂಡಿರುವುದರಿಂದಲೇ ಸಕಲ ಶರಣ ಸಂಕುಲವನ್ನು ಒಳಗೊಂಡಿರುವ ಶರಣ ಚಳುವಳಿ ಅತ್ಯಂತ ವಿಶಿಷ್ಠ ಹಾಗೂ ವಿಶೇಷವಾದ ಚಳುವಳಿಯಾಗಿತ್ತು. ಚಿಂತನೆಯಿಲ್ಲದ ಚಳುವಳಿ ಹಾಗೂ ಚಳವಳಿಗೆ ಒದಗಿಬರದ ಚಿಂತನೆ ಎರಡೂ ನಿಷ್ಪ್ರಯೋಜಕ ಮತ್ತು ನಿರರ್ಥಕ ಎಂದು ಪ್ರತಿಪಾದಿಸಿದ್ದಾರೆ. ಚಿಂತನೆ ಮತ್ತು ಚಳುವಳಿ ಒಟ್ಟೊಟ್ಟಿಗೆ ನಡೆದಾಗ ಮಾತ್ರ ಸಮ–ಸಮಾಜವನ್ನು, ಸೌಹಾರ್ದ ಸಮಾಜವನ್ನು ಸೃಷ್ಟಿ ಮಾಡಲು ಸಾಧ್ಯ ಎಂದು ಸಾಧಿಸಿ ತೋರಿಸಿದರು.ಒಟ್ಟಾರೆಯಾಗಿ ಅವರು ಒಬ್ಬ ರಾಜಕೀಯ ಮಹಾ ಮುತ್ಸದ್ದಿ ಮಾತ್ರವಲ್ಲ ಮಹಾ ಮಾನವತವಾದಿಯಾಗಿದ್ದರು ಎನ್ನುವುದು ಸ್ಫಟಿಕದಷ್ಟೇ ಸ್ಪಷ್ಟ.

## ಬಸವೇಶ್ವರರ ವಿವಿಧ ಚಿಂತನೆಗಳು

1. ಪ್ರಜಾಪ್ರಭುತ್ವ
2. ಸಮಾನತೆ
3. ಸ್ವಾತಂತ್ರ್ಯ
4. ಜಾತ್ಯಾತೀತತೆ

## ಕಿರು ಪ್ರಬಂಧದ ಪ್ರಮುಖ ಉದ್ದೇಶಗಳು

ಕಿರು ಪ್ರಬಂಧದ ಕೆಲವು ಪ್ರಮುಖ ಗುರಿ–ಉದ್ದೇಶಗಳನ್ನು ಈ ಕೆಳಗಿನಂತೆ ಉಲ್ಲೇಖಿಸಲಾಗಿದೆ.

1. ಬಸವೇಶ್ವರರ ಚಿಂತನೆಗಳನ್ನು ಅರಿತುಕೊಳ್ಳುವುದು.
2. ಬಸವೇಶ್ವರರ ವಿವಿಧ ಚಿಂತನೆಗಳನ್ನು ವಿಶ್ಲೇಷಣೆ ಮಾಡುವುದು.
3. ಅವರ ಚಿಂತನೆಗಳನ್ನು ಇಂದಿನ ಸಮಾಜಕ್ಕೆ ಅಳವಡಿಸಿಕೊಳ್ಳುವುದು.

## ಅಧ್ಯಯನದ ಕ್ರಮ

ಈ ಕಿರು ಪ್ರಬಂಧವು ಅನುಷಾಂಘಿಕ ಮೂಲದ ಮೇಲೆ ಆಧಾರವಾಗಿದೆ. ಪ್ರಸಕ್ತ ಪ್ರಬಂಧವನ್ನು ಜರ್ನಲ್ಸ್, ಮ್ಯಾಗ್ಜಿನ್ಸ್, ಸರಕಾರದ ವರದಿಗಳು ಹಾಗೂ ದಿನಪತ್ರಿಕೆಗಳಿಂದ ವಿಷಯವನ್ನು ಸಂಗ್ರಹಿಸಲಾಗಿದೆ. ವಿಷಯ ವಿಶ್ಲೇಷಣೆಗೆ ವಿವರಣಾತ್ಮಕ ಹಾಗೂ ವಿಶ್ಲೇಷಣಾತ್ಮಕ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ.

## ಅಧ್ಯಯನದ ವ್ಯಾಪ್ತಿ ಮತ್ತು ವಿಷಯ ವಿಶ್ಲೇಷಣೆ

ಪ್ರಸ್ತುತ ಕಿರು ಪ್ರಬಂಧವು ಸಮಾಜದಲ್ಲಿ ಬಸವೇಶ್ವರರ ರಾಜಕಿಯ ಚಿಂತನೆಗಳ ಪಾತ್ರ ಮತ್ತು ಪ್ರಸ್ತುತತೆಯನ್ನು ಕುರಿತು ವಿಶ್ಲೇಷಿಸಲಾಗಿದೆ. ಮುಂದುವರೆದು, ಅವರು ಪ್ರತಿಪಾದಿಸಿದ ತತ್ವಗಳಾದ ಪ್ರಜಾಪ್ರಭುತ್ವ, ಸಮಾನತೆ, ಸ್ವಾತಂತ್ರ್ಯ ಹಾಗೂ ಸಮಾಜವಾದವನ್ನು ಕುರಿತು ವಿವರಿಸಲಾಗಿದೆ. ಪ್ರಸ್ತುತ ಪ್ರಬಂಧವನ್ನು ನಾಲ್ಕು ವಿಭಾಗಗಳಲ್ಲಿ ವರ್ಗೀಕರಿಸಲಾಗಿದೆ. ಮೊದಲನೆಯ ಭಾಗದಲ್ಲಿ ಬಸವೇಶ್ವರರು ಪ್ರತಿಪಾದಿಸಿದ ಪ್ರಜಾಪ್ರಭುತ್ವ, ಎರಡನೆಯ ಭಾಗದಲ್ಲಿ ಸಮಾನತೆಯ ತತ್ವ, ಮೂರನೆಯ ಭಾಗದಲ್ಲಿ ಸ್ವಾತಂತ್ರ್ಯ ಹಾಗೂ ನಾಲ್ಕನೆಯ ಭಾಗದಲ್ಲಿ ಜಾತ್ಯಾತೀತತೆಯ ತತ್ವವನ್ನು ಕುರಿತು ಸ್ಪಷ್ಟವಾಗಿ ವಿವರಿಸಲಾಗಿದೆ. ಬಸವೇಶ್ವರರ ವಿಭಿನ್ನ ದೃಷ್ಟಿ–ಧೋರಣೆ, ಕೈಗೊಂಡ ಕಾರ್ಯಗಳ ಆಳ–ಅಗಲ, ಅವರ ಚಿಂತನೆಗಳ ಹಿನ್ನೋಟ ಮತ್ತು ಮುನ್ನೋಟಗಳನ್ನು ಕುರಿತು ಸ್ಥೂಲವಾಗಿ ವಿಶ್ಲೇಷಿಸಲಾಗಿದೆ.

## 1. ಪ್ರಜಾಪ್ರಭುತ್ವದ ತತ್ವ

ಬಸವೇಶ್ವರರು ಸಮ–ಸಮಾಜದ ಕುರಿತು ಹಲವು ವಿಚಾರಗಳನ್ನು ಅಭಿವ್ಯಕ್ತಗೊಳಿಸಿದ್ದಾರೆ. ಬಸವೇಶ್ವರರು ಸಂವಾದ ಹಾಗೂ ಚರ್ಚೆಯ ಸಂಪ್ರದಾಯವನ್ನು ಪ್ರಾರಂಭಿಸಿದ ಭಾರತದ ಪ್ರಥಮ ರಾಜಕೀಯ ಚಿಂತಕರಾಗಿದ್ದಾರೆ. ಅವರು ಸ್ಥಾಪಿಸಿದ ಅನುಭವ ಮಂಟಪವು ಆಧುನಿಕ ಶಾಸನ ಸಭೆಗೆ ಉತ್ತಮ ಉದಾಹರಣೆಯಾಗಿದೆ. ಬದುಕಿನ ಎಲ್ಲಾ ಹಂತಗಳಲ್ಲಿ ಜನರು ಅನುಭವ ಮಂಟಪದ ಸಾಮಾನ್ಯ ಸದಸ್ಯರಾಗಿದ್ದರು. ಅವರನ್ನು ನಾವು ಶುದ್ಧ ಹಗೂ ನೈಜ ನಾಗರಿಕರಾದ ಶರಣರು ಎಂದು ಕರೆಯುತ್ತೇವೆ. ಅನುಭವ ಮಂಟಪದಲ್ಲಿ ಶರಣರು ವಾದ ಮತ್ತು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಸಂವಾದದಲ್ಲಿ ಮುಕ್ತವಾಗಿ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳುತ್ತಿದ್ದರು. ಎಲ್ಲಾ ಶರಣರು ಅನುಭವ ಮಂಟಪದಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತಿದ್ದರು. ಬಸವೇಶ್ವರರು ಆ ಅನುಭವ ಮಂಟಪದ ಮುಂಚೂಣಿ ನಾಯಕರಾಗಿದ್ದರು. ಯಾವುದೇ ವಿಷಯವನ್ನು ಸಮಾಪ್ತಿಗೊಳಿಸುವ ಪೂರ್ವದಲ್ಲಿ ಸಕಲ ಶರಣರ ವಿಚಾರಗಳನ್ನು ಶಾಂತ ಚಿತ್ತದಿಂದ ಆಲಿಸುತ್ತಿದ್ದರು ಎಂಬುದನ್ನು ಅಧ್ಯಯನದಿಂದ ಅರಿತು ಕೊಳ್ಳಬಹುದಾಗಿದೆ. ಇದು ಪ್ರಜಾಪ್ರಭುತ್ವವಾದಿ ನಾಯಕನ ನೈಜ ಗುಣ ಎಂಬುದು ನಮಗೆ ತೋರಿಸುತ್ತದೆ.

ಅನುಭವ ಮಂಟಪದಲ್ಲಿ ಬಸವೇಶ್ವರರು ರೀತಿ ಮತ್ತು ನೀತಿಗಳ ಪ್ರಕಾರ ನಡೆದುಕೊಳ್ಳುತ್ತಿದ್ದರು. ಅದು ಸಂವಿಧಾನಾತ್ಮಕ ಹಾಗೂ ಪ್ರಾತಿನಿಧಿಕ ಸಮಿತಿಯಾಗಿತ್ತು. ಎಲ್ಲಾ ಸದಸ್ಯರು ಆ ನೀತಿ ನಿಯಮಗಳಿಗೆ ಬದ್ಧರಾಗಿದ್ದರು. ಅನುಭವ ಮಂಟಪದಲ್ಲಿ ತೆಗೆದುಕೊಂಡಂತಹ ನಿರ್ಣಯ ಬಹುಮತದಿಂದ ಹಾಗೂ ಸಹಮತದಿಂದ ಕೂಡಿರುತ್ತಿತ್ತು. ಆದರೆ ಹಾಗಂತ ಹೇಳಿ ಅಲ್ಪಸಂಖ್ಯಾತರನ್ನು ಯಾವತ್ತಿಗೂ ಕಡೆಗಣಿಸುತ್ತಿರಲಿಲ್ಲ ಹಾಗೂ ದಬ್ಬಾಳಿಕೆಗೆ ಒಳಪಡಿಸುತ್ತಿರಲಿಲ್ಲ. ಅದೇ ಅನುಭವ ಮಂಟಪದ ಕಾನೂನು ಆಗಿತ್ತು. ರಂಗನಾಥ ದಿವಾಕರ ಅವರ ಪ್ರಕಾರ ಅನುಭವ ಮಂಟಪದ ಸರ್ವ ಸದಸ್ಯರು ಸಹಕಾರದಿಂದ ಮತ್ತು ಸೌಹಾರ್ದತೆಯಿಂದ ಬಸವಣ್ಣನವರ ಸಂಗಡ ಇರುತ್ತಿದ್ದುದು ವಿಶೇಷವಾಗಿತ್ತು. ಬಸವಣ್ಣನವರು ಚರ್ಚೆಯ ಕೇಂದ್ರ ಬಿಂದುವಾಗಿದ್ದರು ಜೊತೆಗೆ ನೈಜ ನಾಯಕರಾಗಿದ್ದರು. ಅದು ಅವರ ಪ್ರಜಾಸತ್ತಾತ್ಮಕ ಸಾಮೂಹಿಕ ನಾಯಕತ್ವದ ಸಂಕೇತವಾಗಿತ್ತು. ಅವರು ತಮ್ಮ ವಿಚಾರಗಳನ್ನು ಬೇರೆಯವರ ಮೇಲೆ ಒತ್ತಾಯಪೂರ್ವಕವಾಗಿ ಹೇರುತ್ತಿರಲಿಲ್ಲ. ಅಂತಿಮ ನಿರ್ಣಯವನ್ನು ತೆಗೆದುಕೊಳ್ಳುವಾಗ ಸರ್ವ ಸದಸ್ಯರ ಸಹಮತಿಯನ್ನು ಪಡೆದುಕೊಳ್ಳುತ್ತಿದ್ದರು. ಅವರು ಪ್ರತಿಯೊಬ್ಬರ ಒಳಿತಿನ ಬಗ್ಗೆ ಚಿಂತನೆ ಮಾಡುತ್ತಿದ್ದರು. 12ನೇ ಶತಮಾನದಲ್ಲಿ 'ಕಲ್ಯಾಣ ರಾಜ್ಯ' ಎನ್ನುವ ಪರಿಕಲ್ಪನೆ ಪ್ರವರ್ಧಮಾನಕ್ಕೆ ತಂದರು. ಯಾವುದೇ ಜಾತಿ, ಮತ, ಪಂಥ, ಹಾಗೂ ಲಿಂಗ ಎನ್ನದೆ ಸರ್ವ ಸದಸ್ಯರ ಏಳ್ಗೆಗಾಗಿ ಚಿಂತನೆ ಮಾಡುವವರ ಮೂಲಕ ಒಂದು ಹೊಸ ರಾಜಕೀಯ ಸಮಾಜವನ್ನು ನಿರ್ಮಾಣ ಮಾಡಲು ಪ್ರಯತ್ನಿಸಿರುವುದು ಪ್ರಶಂಸನೀಯವಾದದ್ದು.ಜೊತೆಗೆ ಪ್ರಜಾಪ್ರಭುತ್ವದ ಜೀವಸತ್ವವಾದ ಸಾಮೂಹಿಕ ತೀರ್ಮಾನ ಹಾಗೂ ವೈಯಕ್ತಿಕ ಜಾರಿಯ ಜವಾಬ್ದಾರಿ ಎನ್ನುವುದನ್ನು ಮೈಗೂಡಿಸಿಕೊಂಡಿರುವುದು ಬಹು ವಿಶೇಷವಾಗಿತ್ತು, ಅದು ಇಂದಿಗೂ ಪ್ರಸ್ತುತವಾಗಿದೆ.

## 2. ಸಮಾನತೆಯ ತತ್ವ

ಬಸವೇಶ್ವರರ ಸಮಾನತೆಯ ತತ್ವವು ಬಹಳ ಸ್ಪಷ್ಟವಾದ ಹಾಗೂ ಖಚಿತವಾದ ಪರಿಕಲ್ಪನೆಯಾಗಿದೆ. ಯಾರೂ ಹುಟ್ಟಿನಿಂದಲೇ ಕನಿಷ್ಠರು ಅಲ್ಲ ಹಾಗೂ ಶಿವಭಕ್ತರಿಗಿಂತ ಶ್ರೇಷ್ಠರೂ ಅಲ್ಲ. ಅಂದರೆ 'ಎನಗಿಂತ ಕಿರಿಯರಿಲ್ಲ ಶಿವಭಕ್ತಿರಿಗಿಂತ ಹಿರಿಯರಿಲ್ಲ' ಎಂದರ್ಥ. ಇದು ಅವರಿಗೆ ಸಮಾನತೆ ಕುರಿತು ಇರುವ ಕಾಳಜಿ ಹಾಗೂ ಬದ್ಧತೆಯನ್ನು ತೋರಿಸುತ್ತದೆ. ಅವರು ವಚನಗಳ ಮೂಲಕ ಸಮಾನತೆಯ ಸಮಾಜ ಸ್ಥಾಪಿಸುವ ಗುರಿಯನ್ನು ಹೊಂದಿದ್ದರು. ಇದರಿಂದಾಗಿ ಪುರೋಹಿತಶಾಹಿ ವರ್ಗದಿಂದ ಪ್ರತಿರೋಧ ಹಾಗೂ ಪ್ರತಿಭಟನೆಯನ್ನು ಎದುರಿಸಬೇಕಾಗಿ ಬಂದಿದ್ದು ಒಂದು ದುರಂತ ಅಷ್ಟೇ ಅಲ್ಲ ದುರದೃಷ್ಟಕರ ಸಂಗತಿಯಾಗಿದೆ.

ಇದಕ್ಕೆ ಪೂರಕವಾಗಿ ಅವರ ಒಂದು ವಚನದಲ್ಲಿ 'ಇವನಾರವ ಇವನಾರವ ಎನ್ನದಿರಯ್ಯ, ಇವ ನಮ್ಮವ ಇವ ನಮ್ಮವ ಎನ್ನಿರಯ್ಯ' ಎಂದು ಹೇಳುವ ಮೂಲಕ ಎಲ್ಲ ಸಕಲ ಕುಲಜರು ನಮ್ಮವರೆ ಎಂಬುದನ್ನು ಪ್ರತಿಪಾದಿಸಿದ್ದಾರೆ. ಅಂದರೆ ಜನಸಾಮಾನ್ಯರ ಇರುವಿಕೆಯನ್ನು ಒಪ್ಪಿಕೊಳ್ಳುವುದರ ಜೊತೆಗೆ ಅಪ್ಪಿಕೊಂಡರು. ಹಾಗಾಗಿ ಅವರ ಸಮ–ಸಮಾಜದ ಬಗ್ಗೆ ಇರುವ ಕಾಳಜಿ ಮತ್ತು ಉದ್ದೇಶ ಅರ್ಥವಾಗದೆ ಇರದು. ಆದ್ದರಿಂದ ಅನುಭವ ಮಂಟಪದಲ್ಲಿರುವ ಶರಣರನ್ನು ಅಯ್ಯ, ಅಕ್ಕ, ಅವ್ವೆ (ಕಕ್ಕಯ್ಯ, ಹರಳಯ್ಯ, ಮಾದಯ್ಯ, ಮುಕ್ತಾಯಕ್ಕ, ಸೂಳೆ ಸಂಕವ್ವೆ) ಎಂದು ಸಂಬೋಧಿಸಿ ಅವರನ್ನು ಅತ್ಯಂತ ಗೌರವ ಹಾಗೂ ಘನತೆಯಿಂದ ಕಾಣುತ್ತಿದ್ದರು. ಅಂದರೆ ವ್ಯಕ್ತಿ ಗೌರವ ಮತ್ತು ಘನತೆಯನ್ನು ಕಾಪಾಡುತ್ತಿದ್ದರು. ಮಹಿಳೆಯರಿಗೆ ಸಮಾನತೆ ಹಾಗೂ ಸಮಾನ ಅವಕಾಶವನ್ನು ಕೊಟ್ಟಂತಹ ಪ್ರ ಪ್ರಥಮ ಚಿಂತಕರಾಗಿದ್ದಾರೆ. ಅಂದಿನ ಕಾಲಘಟ್ಟದಲ್ಲಿ ಮಹಿಳೆಯರನ್ನು ಕೇವಲ ನಾಲ್ಕು ಗೋಡೆಗಳಿಗೆ ಸೀಮಿತಗೊಳಿಸಲಾಗಿತ್ತು. ಆದರೆ, ಅವರು ಮಹಿಳೆಯರನ್ನು ಅನುಭವ ಮಂಟಪದಲ್ಲಿ ಸಂವಾದ ಮತ್ತು ಚರ್ಚೆಯಲ್ಲಿ ಭಾಗವಹಿಸುವಂತೆ ಪ್ರೇರೇಪಿಸುತ್ತಿದ್ದರು. ಆ ಮೂಲಕ ಬಸವೇಶ್ವರರು ಮಹಿಳೆಯರಿಗೆ ತನ್ನದೆ ಆದ ಸ್ವಂತ ವ್ಯಕ್ತಿತ್ವ ಮತ್ತು ಸ್ವಯಂ ಅಸ್ತಿತ್ವ ಅವರಿಗೂ ಇದೆ ಎನ್ನುವುದನ್ನು ಸಾಬೀತುಪಡಿಸಿದರು. ಹಾಗಾಗಿ ಅನುಭವ ಮಂಟಪದ ಕಾರ್ಯ–ಕಲಾಪಗಳಲ್ಲಿ 35ಕ್ಕಿಂತ ಹೆಚ್ಚು ಮಹಿಳೆಯರು ಭಾಗವಹಿಸುತ್ತಿದ್ದದ್ದು ವಿಶೇಷವಾಗಿತ್ತು. ಜೊತೆಗೆ ಆ ಅನುಭವ ಮಂಟಪವೇ ಇಂದಿನ ಸಂಸತ್ತು ಭವನವಾಗಿರುವುದು ಬಹಳ ವಿಶೇಷವಾದ ಸಂಗತಿಯಾಗಿದೆ. ಅಂದರೆ ಪ್ರಜಾಪ್ರಭುತ್ವದ ಬುಡ ಮತ್ತು ಬೇರು 12ನೇ ಶತಮಾನದಲ್ಲೇ ಸೃಷ್ಟಿಯಾಗಿದ್ದು ಎಂಬುದು ಸ್ಪಷ್ಟವಾಗಿದೆ. ಅಕ್ಕ ಮಹಾದೇವಿ, ಗಂಗಾಂಬಿಕೆ, ನೀಲಾಂಬಿಕೆ, ಮುಕ್ತಾಯಕ್ಕ, ಕದಿರೆ ರೆಮ್ಮವ್ವೆ, ಕೊತ್ತಂದ ಸೋಮವ್ವ, ಸೂಳೆ ಸಂಕವ್ವೆ ಇನ್ನಿತರರು ಅಂದಿನ ಅನುಭವ ಮಂಟಪದ ಅಂದಿನ ಗೌರವಾನ್ವಿತ ಸದಸ್ಯರಾಗಿದ್ದರು. ಜಾತಿಯಿಂದಲೇ ಯಾರೂ ಶ್ರೇಷ್ಠರಲ್ಲ ಎನ್ನುವ ಅವರ ಸರ್ವಶ್ರೇಷ್ಠವಾದ ವಿಚಾರ ಎಲ್ಲರೂ ಒಪ್ಪುವಂತಹದ್ದೆ ಆಗಿತ್ತು.ಹಾಗಾಗಿ 'ಜಾತಿ ಹೀನನ ಮನೆಯ ಜ್ಯೋತಿ ತಾ ಹೀನವೇ' ಎಂಬಂಥ ಮಾತುಗಳನ್ನು ಮಥಿಸುವುದರ ಮೂಲಕ ಜಾತಿಯ ಭೂತದಿಂದ ಹೊರಗೆ ಬರಲು ನಿರಂತರವಾಗಿ ಪ್ರಯತ್ನಿಸಿದರು. ಇದಕ್ಕೆ ಪೂರಕವಾಗಿ 12ನೇ ಶತಮಾನದ ಶ್ರೇಷ್ಠ ಸಾಮಾಜಿಕ ಸುಧಾರಕ ಮತ್ತು ಚಿಂತಕ ಕನಕದಾಸರು ಭಾರತೀಯ ಸಮಾಜ ಉಚ್ಚ–ನೀಚ ವ್ಯಸನದಿಂದ ಹೊರ ಬಂದಿಲ್ಲ ಎಂದಿರುವುದು ಇಂದಿಗೂ ಭಾರತೀಯ ಸಮಾಜ ತನ್ನ ಜಾತಿ ವ್ಯವಸ್ಥೆಯ ಕಪಿಮುಷ್ಠಿಯಿಂದ ಹೊರ ಬಂದಿಲ್ಲ ಎಂಬುದನ್ನು ಸೂಚಿಸುತ್ತದೆ.

## 3. ಸ್ವಾತಂತ್ರ್ಯದ ತತ್ವ

ನಿರಂಕುಶತೆಯಲ್ಲಿ ಮಾತ್ರ ಅಂಜಿಕೆಯ ಭಾವ ಬೇರೂರಿರುತ್ತದೆ. ಹಾಗಾಗಿ ನಿರಂಕುಶತೆಯನ್ನು ಅಳಿಸುವುದರ ಜೊತೆಗೆ ಕಾನೂನನ್ನು ಗೌರವಿಸುವುದರ ಮೂಲಕ ಶರಣರು ಪ್ರತಿಪಾದಿಸಿದ ವ್ಯಕ್ತಿ ಸ್ವತಂತ್ರ್ಯವನ್ನು ಸಂರಕ್ಷಿಸುವುದೇ ಆಗಿದೆ. ಅವರು ವೈಯುಕ್ತಿಕ ಸ್ವಾತಂತ್ರ್ಯದ ಕಟ್ಟಾ ಬೆಂಬಲಿಗರಾಗಿದ್ದರು. ಪ್ರತಿಯೊಬ್ಬರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವಲ್ಲಿ ಸಂಪೂರ್ಣ ಸ್ವತಂತ್ರರು ಎಂದು ಸಾರಿದರು. ಅನುಭವ ಮಂಟಪದಲ್ಲಿ ಮುಕ್ತವಾಗಿ ಅಭಿಪ್ರಾಯ ವ್ಯಕ್ತಪಡಿಸುವ ಸ್ವಾತಂತ್ರ್ಯ ಸಾಮಾನ್ಯವಾಗಿತ್ತು. ಅನುಭವ ಮಂಟಪದಲ್ಲಿ ಜಾತಿ ಮತ್ತು ಲಿಂಗ ಬೇಧವಿಲ್ಲದೇ, ಎಲ್ಲರೂ ಕಾನೂನು ಮಾಡುವ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುತ್ತಿದ್ದರು. ಯಾವುದೇ ವಿಷಯವನ್ನು ಸಮಾಪ್ತಿಗೊಳಿಸುವ ಪೂರ್ವದಲ್ಲಿ ಸರ್ವರ ಅಭಿಪ್ರಾಯವನ್ನು ಪರಿಗಣಿಸಲಾಗುತ್ತಿತ್ತು. ಅಂದರೆ, ಅನುಭವ ಮಂಟಪದ ಮಹಿಳಾ ಸದಸ್ಯರಾದ, ಸೂಳೆ ಸಂಕವ್ವೆ, ಆಯ್ದಕ್ಕಿ ಲಕ್ಕಮ್ಮ ಮುಂತಾದವರು ತಮ್ಮ ಪತಿಯಂದಿರರ ಅಭಿಪ್ರಾಯಗಳನ್ನು ಸಹ ವಿಮರ್ಶೆಗೆ ಒಳಪಡಿಸುವುದಲ್ಲದೆ ಅವರಿಗೆ ಸೂಕ್ತ ಸಲಹೆಗಳನ್ನು ಸಹ ನೀಡಿರುವುದನ್ನು ಕಾಣಬಹುದಾಗಿದೆ. ಕೆಲವು ಸಂದರ್ಭಗಳನ್ನು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಅವಲೋಕನ ಮಾಡಿದಾಗ ಇದನ್ನು ಗುರುತಿಸಬಹುದಾಗಿದೆ. ಲಕ್ಕಮ್ಮನ ಪತಿ ಆಯ್ದಕ್ಕಿ ಮಾರಯ್ಯ ಅಗತ್ಯಕ್ಕಿಂತ ಹೆಚ್ಚು ಅಕ್ಕಿಯನ್ನು ಮನೆಗೆ ಆರಿಸಿಕೊಂಡು ಬಂದಾಗ ಹೆಚ್ಚುವರಿ ಅಕ್ಕಿಯನ್ನು ಮರಳಿ ಕೊಟ್ಟಿರುವುದನ್ನು ಅವರ ಕೆಲವು ವಚನಗಳಿಂದ ವೇದ್ಯವಾಗುತ್ತದೆ.

## 4. ಜಾತ್ಯಾತೀತತೆಯ ತತ್ವ

ಬಸವೇಶ್ವರರು ಸ್ಥಾಪಿಸಿದ ಅನುಭವ ಮಂಟಪವು ಒಂದು ಜಾತ್ಯಾತೀತ ತತ್ವದ ಪ್ರತೀಕವಾಗಿದೆ. ವಿವಿಧ ಜಾತಿ ಮತ್ತು ಸಮುದಾಯದ ಶರಣರು ಅನುಭವ ಮಂಟಪದಲ್ಲಿ ಸಭೆ ಸೇರುತ್ತಿದ್ದರು. ವರ್ಣಾಶ್ರಮ ವ್ಯವಸ್ಥೆಯಲ್ಲಿ ಕೆಳ ಜಾತಿಗೆ ಸೇರಿದ್ದ ಅಲ್ಲಮಪ್ರಭು ಅವರು ಅನುಭವ ಮಂಟಪದ ಮುಖ್ಯಸ್ಥರಾಗಿದ್ದರು. ಎಲ್ಲಾ ನೀತಿ–ನಡಾವಳಿಗಳು ಅವರ ನಾಯಕತ್ವದಲ್ಲೇ ನಡೆಯುತ್ತಿದ್ದವು. ಕೆಳಜಾತಿಯ ಕಕ್ಕಯ್ಯ ಹಾಗೂ ಚೆನ್ನಯ್ಯ ಅವರು ಅನುಭವ ಮಂಟಪದಲ್ಲಿ ಭಾಗವಹಿಸಿದ್ದು, ಬಹಳ ವಿಶೇಷವಾಗಿತ್ತು. ಬ್ರಾಹ್ಮಣ ಜಾತಿಯ ಮಧುವರಸ, ಅಕ್ಕಮಹಾದೇವಿ, ಗಂಗಾಂಬಿಕೆ, ನೀಲಾಂಬಿಕೆ, ಮುಕ್ತಾಯಕ್ಕ ಮತ್ತು ಸೂಳೆ ಸಂಕವ್ವೆ ಮುಂತಾದವರು ಭಾಗವಹಿಸುತ್ತಿದ್ದು, ಬಹಳ ಅನುಪಮವಾದ ಸಂಗತಿಯಾಗಿತ್ತು. ನಾವು ಯಾವುದೇ ಅನುಮಾನ ಮತ್ತು ಹೆದರಿಕೆ ಇಲ್ಲದೆ 12ನೇ ಶತಮಾನದಲ್ಲಿ ಸ್ಥಾಪಿಸಿದ ಅನುಭವ ಮಂಟಪವನ್ನು ಒಂದು 'ಜಾತ್ಯಾತೀತ ಸಂಸ್ಥೆ' ಎಂದು ಹೆಮ್ಮೆಯಿಂದ ಹೇಳಬಹುದಾಗಿದೆ. ಸಮಾಜದಲ್ಲಿ ವಿವಿಧ ಧರ್ಮದ ಜನರಿಗೆ ಸಮಾನ ಗೌರವ ಹಾಗೂ ಘನತೆಯನ್ನು ನೀಡುತ್ತಿದ್ದುದು,ಸರ್ವ ಜನರನ್ನು ಸಮಾನತೆಯಿಂದ ಕಾಣುತ್ತಿದ್ದುದು ಬಹು ವಿಶೇಷವಾಗಿತ್ತು.


## ಸಮಾರೋಪ

ಒಟ್ಟಾರೆಯಾಗಿ ಬಸವೇಶ್ವರರು ಪ್ರತಿಪಾದಿಸಿದ ಹಲವು ಅಂಶಗಳನ್ನು ಅವಲೋಕಿಸಿದಾಗ, ಬಸವೇಶ್ವರರ ರಾಜಕೀಯ ಕೊಡುಗೆ ಅಮೂಲ್ಯವಾದದ್ದು ಅಷ್ಟೇ ಅನುಪಮವಾದದ್ದಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಅವರು ಪ್ರಜಾಪ್ರಭುತ್ವ, ಸ್ವಾತಂತ್ರ್ಯ ಸಮಾನತೆ, ಸಮಾಜವಾದ ಮತ್ತು ಜಾತ್ಯಾತೀತತೆಯ ತತ್ವಗಳಿಗೆ ಹೊಸ ಅರ್ಥ ಹಾಗೂ ಭಾಷ್ಯವನ್ನು ಬರೆದಿದ್ದಾರೆ. ಆ ಮೂಲಕ ಸಂವಿಧಾನದ ಮೌಲ್ಯಗಳ ಸೆಲೆಯಾಗಿದ್ದಾರೆ. ಅವರು ಪ್ರತಿಪಾದಿಸಿದ ಪ್ರೀತಿ ಹಾಗೂ ಪರೋಪಕಾರದ ಸಂಗತಿಗಳು ಇಂದಿನ ರಾಜಕಾರಣಿಗಳು ಅನುಸರಿಸಲು ಯೋಗ್ಯವಾಗಿವೆ. ಇದು ಮಾನವ ಜನಾಂಗಕ್ಕೆ ಕೊಟ್ಟಂತಹ ಮಹತ್ವದ ಕೊಡುಗೆ. ಒಂದು ವೇಳೆ ಸರಕಾರದ ಹಣವು ಸಾರ್ವಜನಿಕರ ಕಲ್ಯಾಣಕ್ಕಾಗಿ ಎನ್ನುವ ಪರಿಕಲ್ಪನೆ ನಿಜ ಬದುಕಿನಲ್ಲಿ ಪಾಲಿಸಿದ್ದೇ ಆದರೇ, ಸಮಸಮಾಜ ಹಾಗೂ ಸೌಹಾರ್ದ ಸಮಾಜವನ್ನು ಸ್ಥಾಪಿಸಬಹುದಾಗಿದೆ. ನಿಜವಾಗಿಯೂ ಬಸವೇಶ್ವರರು ವಿಶ್ವದಲ್ಲೇ ಒಬ್ಬ ಮಹಾ ಮಾನವತಾವಾದಿ ಹಾಗೂ ಮಹಾನ್ ಮೇಧಾವಿಯೆಂದು ಗುರುತಿಸಬಹುದಾಗಿದೆ. ಅಂತಿಮವಾಗಿ, ಬಸವೇಶ್ವರರು ಸಮಾಜದ ಅಂಚಿನಲ್ಲಿರುವ ಹಾಗೂ ವಂಚನೆಗೊಳಗಾಗಿರುವ ಜನ ಸಮುದಾಯಕ್ಕೆ ಜನಮನ್ನಣೆ ದೊರೆಯುವಂತೆ ಮಾಡುವಲ್ಲಿ ಮತ್ತು ಧ್ವನಿಯಿಲ್ಲದವರ ಧ್ವನಿಯಾಗಿ ನಿರ್ವಹಿಸಿದ ಪಾತ್ರ ಪ್ರಧಾನವಾದದ್ದು, ಅಷ್ಟೇ ಅಲ್ಲ ಪ್ರಯೋಜನಕಾರಿಯಾದದ್ದಾಗಿದೆ. ಹಾಗಾಗಿ ಬಸವೇಶ್ವರರು ಜನಕಲ್ಯಾಣಕ್ಕೆ ಕೊಟ್ಟಂತಹ ಕೊಡುಗೆ ಅಪಾರ ಹಾಗೂ ಅಗಾಧವಾದ ಸಂಗತಿಯೆಂಬುದು ಯಾರೂ ಮರೆಯುವಂತಿಲ್ಲ.

## ಪರಾಮರ್ಶನ ಗ್ರಂಥಗಳು


- **ದೇ. ಜವರೇಗೌಡ** : ಬಸವದರ್ಶನ
- **ಬಿ.ವಿ. ವಸಂತಕುಮಾರ** : ಕಾರ್ಯ ಮೀಮಾಂಶೆ
- **ಕೆ. ಚನ್ನಬಸಪ್ಪ** : 'ದೀನ ಬಂಧು' ಬಸವಣ್ಣ
- **ಡಾ. ವಸಂತ ಪಾಟೀಲ** : ಮಹಾಮಾನವತಾವಾದಿ ಬಸವಣ್ಣ.
- **ಬಸವೇಶ್ವರ ಪೀಠ (ಕೆ.ಯು.ಡಿ.)** : ಬಸವಣ್ಣನವರ ಪ್ರಮುಖ ಚಿಂತನೆಗಳು.
- **ಬಸವೇಶ್ವರ ಪೀಠ (ಕೆ.ಯು.ಡಿ.)** : ಬಸವ ಮಾರ್ಗ
- **ಬಸವೇಶ್ವರರ ಪೀಠ (ಕೆ.ಯು.ಡಿ.)** : ಶಿವಶರಣರ ಕಾಯಕ ಸಿದ್ಧಾಂತ.
- **ಬಿ.ಜಿ. ಪಾಟೀಲ್** : ಬಸವೇಶ್ವರರ ರಾಜಕಿಯ ತತ್ವಶಾಸ್ತ್ರ.


■■


ವಿದ್ಯಾನಿಧಿ ಪ್ರಕಾಶನ®
ಶ್ರೀ ಶಿವಕುಮಾರ ಏಜನ್ಸಿ®
ಶೈಕ್ಷಣಿಕ ಪುಸ್ತಕಗಳ ಪ್ರಕಾಶಕರು ಮತ್ತು ಮಾರಾಟಗಾರರು
ಸ್ಟೇಶನ್ ರೋಡ ಮತ್ತು 'ನನಸು', ಹಳೆ ಸರಕಾರಿ ಆಸ್ಪತ್ರೆ ಎದುರಿಗೆ,
ಎಸ್.ಪಿ. ಗದಗ ಕಂಪೌಡ, ಜೆ.ಟಿ. ಮಠ ರೋಡ, ಗದಗ-582 101
ದೂರವಾಣಿ : 08372–200527
e-mail : vidyanidhiprakashana@gmail.com.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಸ್ಮಾರಕ ಶಿಲ್ಪಗಳಲ್ಲಿ ಜೀವನ ಮೌಲ್ಯಗಳು

## (ಹಾವೇರಿ ಜಿಲ್ಲೆಯನ್ನು ಅನುಲಕ್ಷಿಸಿ)

✍ **ಡಾ. ವೈ. ಮದ್ದಾನಸ್ವಾಮಿ,** ಸಹಾಯಕ ಪ್ರಾಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ಹಾವೇರಿ.

ಹಾವೇರಿ ಜಿಲ್ಲೆಯು ಕರ್ನಾಟಕದ ಮಧ್ಯ ಭಾಗದಲ್ಲಿದ್ದು, ಉತ್ತರ ಕರ್ನಾಟಕದ ಹೆಬ್ಬಾಗಿಲು ಎಂದು ಗುರುತಿಸಿಕೊಂಡಿದೆ. ಇದು ದಕ್ಷಿಣೋತ್ತರವಾಗಿ 95 ಕಿ.ಮೀ. ಮತ್ತು ಪೂರ್ವ–ಪಶ್ಚಿಮವಾಗಿ 84 ಕಿ.ಮೀ. ವಿಸ್ತಾರವಾಗಿದ್ದು, 4,82,300 ಹೆಕ್ಟೇರ್‌ಗಳಷ್ಟು ವಿಸ್ತೀರ್ಣವನ್ನು ಹೊಂದಿದೆ. ಹಾವೇರಿ ಜಿಲ್ಲೆಯು ಉತ್ತರ ಅಕ್ಷಾಂಶದ $14^{0}$ 16 ನಿಮಿಷ ಮತ್ತು $15^{0}$ 9 ನಿಮಿಷಗಳ ಮಧ್ಯದಲ್ಲಿ ಹಾಗೂ ಪೂರ್ವ ರೇಖಾಂಶದ $75^{0}$ 01 ನಿಮಿಷ ಮತ್ತು $75^{0}$ 49 ನಿಮಿಷಗಳ ಮಧ್ಯದಲ್ಲಿದೆ. ಹಾವೇರಿ ಜಿಲ್ಲೆಯು ಉತ್ತರಕ್ಕೆ ಧಾರವಾಡ ಮತ್ತು ಗದಗ, ದಕ್ಷಿಣಕ್ಕೆ ಶಿವಮೊಗ್ಗ ಮತ್ತು ದಾವಣಗೆರೆ, ಪಶ್ಚಿಮಕ್ಕೆ ಉತ್ತರ ಕನ್ನಡ (ಕಾರವಾರ) ಹಾಗೂ ಪೂರ್ವಕ್ಕೆ ದಾವಣಗೆರೆ ಮತ್ತು ವಿಜಯನಗರ ಜಿಲ್ಲೆಗಳೊಂದಿಗೆ ತನ್ನ ಗಡಿಯನ್ನು ಹಂಚಿಕೊಂಡಿದೆ.[1]

**ಅಧ್ಯಯನದ ಸಮೀಕ್ಷೆ ಮತ್ತು ವಿಧಾನ :** ಈವರೆಗೆ ಸ್ಮಾರಕ ಶಿಲ್ಪಗಳನ್ನು ಕುರಿತು ನಡೆದ ಪ್ರಮುಖ ಅಧ್ಯಯನಗಳೆಂದರೆ ಡಾ. ಆರ್. ಶೇಷಶಾಸ್ತ್ರಿಯವರ "ಕರ್ನಾಟಕದ ವೀರಗಲ್ಲುಗಳು", ಡಾ.ಎಂ. ಚಿದಾನಂದಮೂರ್ತಿಯವರ "ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ", ಡಾ. ಡಿ.ವಿ. ಪರಮಶಿವಮೂರ್ತಿಯವರ "ಕನ್ನಡ ಶಾಸನಶಿಲ್ಪ", ಡಾ. ಎಂ.ಜಿ. ಮಂಜುನಾಥರವರ "ನಿಸಿದಿ ಶಾಸನಗಳ ಸಾಂಸ್ಕೃತಿಕ ಅಧ್ಯಯನ", ಡಾ. ಬಿ.ಎಸ್. ಶೇತೆಯವರ "ಕರ್ನಾಟಕದಲ್ಲಿ ಸತಿಪದ್ಧತಿ", ಡಾ. ಬಸವರಾಜ ಕಲ್ಗುಡಿಯವರ "ಮಹಾಸತಿ ಆಚರಣೆ ಒಂದು ಅಧ್ಯಯನ". ಡಾ. ಜೆ. ಎಂ. ನಾಗಯ್ಯನವರ "ಆತ್ಮಬಲಿದಾನ", ಡಾ. ಎಂ. ಎಂ, ಕಲಬುರ್ಗಿಯವರ "ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು" ಮುಂತಾದವುಗಳನ್ನು ಹೆಸರಿಸಬಹುದು. ಲೇಖನವನ್ನು ತಯಾರಿಸುವ ಪೂರ್ವದಲ್ಲಿ ಅಧ್ಯಯನ ವಿಷಯಕ್ಕೆ ಸಂಬಂಧಿಸಿದ ಪ್ರಾಥಮಿಕ ಆಕರಗಳಾದ ಶಾಸನಗಳನ್ನು ಬೇರೆ ಬೇರೆ ಶಾಸನ ಸಂಪುಟಗಳಿಂದ ಪಡೆದು ನಕಲು ಮಾಡಿಟ್ಟುಕೊಳ್ಳಲಾಯಿತು. ಅವುಗಳಿಗೆ ಸಂಬಂಧಿಸಿದಂತೆ ಕ್ಷೇತ್ರಕಾರ್ಯ ಕೈಗೊಂಡು ಪೂರಕವಾಗಿ ಮಾಹಿತಿಯನ್ನು ಸಂಗ್ರಹಿಸಲಾಯಿತು. ಪ್ರಸ್ತುತ ಸಂದರ್ಭದಲ್ಲಿ ಈಗಾಗಲೆ ಸ್ಮಾರಕ ಶಿಲ್ಪಗಳನ್ನು ಕುರಿತು ನಡೆದ ಅಧ್ಯಯನಗಳನ್ನು ಮತ್ತು ಅವುಗಳಿಂದ ಹೊರಹೊಮ್ಮಿದ ಫಲಿತಗಳನ್ನು, ರೂಪಗೊಂಡ ಸಿದ್ಧಾಂತಗಳನ್ನು ಹಾಗೂ ವಿದ್ವಾಂಸರು ನೀಡಿದ ಅಭಿಪ್ರಾಯಗಳನ್ನು ಬಳಸಿಕೊಂಡು ಪ್ರಸ್ತುತ ಪ್ರಬಂಧವನ್ನು ರಚಿಸಲಾಗಿದೆ.

**ಪೀಠಿಕೆ :** ಸಾವು ಎಂಬುದು ಮನುಷ್ಯನ ಜೀವನದಲ್ಲಿ ಆಕಸ್ಮಿಕವಾಗಿ ಜರುಗುವ ಒಂದು ಘಟನೆ. ಸಾವು ದೇಹಕ್ಕೆ ಹೊರತು ಆತ್ಮಕ್ಕಲ್ಲ ಎಂಬ ಭಾವನೆ ಸತ್ತ ನಂತರವೂ ಅವನ ಅಸ್ತಿತ್ವವನ್ನು ಉಳಿಸಿಕೊಳ್ಳುವ ಮನೋಭಾವನೆಗೆ ಕಾರಣವಾಯಿತು. ಇಂಥ ಮನೋಭಾವನೆ ಮುಂದಿನ ದಿನಮಾನಗಳಲ್ಲಿ ಸತ್ತ ದೇಹದ ಅಂತ್ಯಸಂಸ್ಕಾರ ವಿಧಿ–ವಿಧಾನಗಳಿಗೆ ದಾರಿ ಮಾಡಿಕೊಟ್ಟಿತು. ಸತ್ತ ವ್ಯಕ್ತಿಯೊಂದಿಗಿನ ಭಾವನಾತ್ಮಕ ಸಂಬಂಧಗಳು ಆತನಲ್ಲಿ ಪ್ರೀತಿಯನ್ನು ಹುಟ್ಟಿಸಿದರೆ, ಅವನ ಕಳೇಬರ ಭೀತಿಯನ್ನು ಹುಟ್ಟಿಸುತ್ತಿತ್ತು. ಈ ಭಯ ಮಿಶ್ರಿತ ಪ್ರೀತಿಯು ಮಾನವನ ಇತಿಹಾಸದಲ್ಲಿ ಶವ ಸಂಸ್ಕಾರ ಪದ್ಧತಿ ಹಾಗೂ ಸತ್ತ ವ್ಯಕ್ತಿಯ ಜ್ಞಾಪಕಾರ್ಥರವಾಗಿ ಸ್ಮಾರಕಗಳನ್ನು ನಿರ್ಮಿಸುವ ಪರಿಪಾಠಕ್ಕೆ ನಾಂದಿಯಾಯಿತು. ಪ್ರಧಾನವಾಗಿ ಯುದ್ಧದಲ್ಲಿ ವೀರಮರಣ ಹೊಂದಿದ ವೀರನ ಶೌರ್ಯವನ್ನು ಮೆಚ್ಚಿ ಆತನ ಒಡೆಯ ಅಥವಾ ಆತನ ಸಂಬಂಧಿಗಳು, ಗ್ರಾಮಸ್ಥರು, ಆಶ್ರಯದಾತರು ಅವನ ಸ್ಮರಣೆಗಾಗಿ ಹಾಕಿಸುತಿದ್ದ ವೀರಗಲ್ಲುಗಳು, ಮೃತ ಪತಿಯನ್ನು ಏಕೈಕ ನಿಷ್ಠೆಯಿಂದ ಹಿಂಬಾಲಿಸಿ ಚಿತೆ ಏರಿದ ಸತಿಯ ಸ್ಮರಣೆಗಾಗಿ ನಿಲ್ಲಿಸಿದ ಮಹಾಸತಿಕಲ್ಲುಗಳನ್ನು, ತನ್ನ ಒಡೆಯನ ಜೋಳವಾಳಿ ಋಣವನ್ನು ತೀರಿಸಲು ಅಥವಾ ತನ್ನನ್ನು ಸಲುಹಿದ ಅರಸನ ಒಳಿತನ್ನು ಬಯಸಿ ತನ್ನನ್ನು ತಾನು ಬಲಿದಾನಗೈದುಕೊಂಡವರ ಸ್ಮರಣೆಗಾಗಿ ನೆಟ್ಟ ಲೌಕಿಕ ಆತ್ಮಬಲಿದಾನ ಶಿಲ್ಪಗಳನ್ನು ಮತ್ತು ಯಾವುದೋ ಘನ ಉದ್ದೇಶಕ್ಕಾಗಿ ಅಥವ ಸಮಾಜದ ಒಳಿತಿಗಾಗಿ ತಮ್ಮ ಪ್ರಣವನ್ನೇ ನೀಡಿದ ಹಿಂದೂ ಧಾರ್ಮಿಕ ಆತ್ಮಬಲಿದಾನ ಶಿಲ್ಪಗಳನ್ನು ಅಲ್ಲದೆ ಜೈನ ಧರ್ಮೀಯರು ಕಠೋರ ವ್ರತವನ್ನಾಚರಿಸಿ ಮೋಕ್ಷವನ್ನು ಪಡೆದ ನೆನಪಿಗಾಗಿ ನಿಲ್ಲಿಸಿದ ನಿಷಿದಿಕಲ್ಲುಗಳನ್ನು ಇಲ್ಲಿ ಹೆಸರಿಸಬಹುದು. ಇವುಗಳನ್ನು ಸ್ಮಾರಕ ಶಿಲ್ಪಗಳು ಎಂದು ಕರೆಯುತ್ತಾರೆ.

ಪ್ರತಿಯೊಂದು ದೇಶದ ಜನತೆ ಆಯಾ ಕಾಲಕ್ಕೆ ತಕ್ಕಹಾಗೆ ಕೆಲವೊಂದು ಜೀವನ ಮೌಲ್ಯಗಳನ್ನು ಮತ್ತು ಆದರ್ಶಗಳನ್ನು ಪರಿಪಾಲಿಸಿಕೊಂಡು ಬಂದಿರುತ್ತಾರೆ. ಈ ಮೌಲ್ಯಗಳು ಒಂದು ನಿರ್ದಿಷ್ಟ ಪ್ರದೇಶಕ್ಕೆ ನಿರ್ದಿಷ್ಟ ಕಾಲಕ್ಕೆ, ನಿರ್ದಿಷ್ಟ ಜನಾಂಗಗಳಿಗೆ ಮಾತ್ರ ಸೀಮಿತವಾಗಿರುತ್ತವೆ. ಉದಾಹರಣೆಗೆ ಹೇಳಬೇಕೆಂದರೆ ಮಹಾಸತಿ ಆಚರಣೆ ಭಾರತದಲ್ಲಿ ಒಂದು ಕಾಲಕ್ಕೆ ಸಾಮಾಜಿಕ ಮೌಲ್ಯವಾಗಿತ್ತು. ಆದರೆ ಅದನ್ನು ಇಂದು ಮೌಲ್ಯವೆಂದು ಒಪ್ಪಿಕೊಳ್ಳಲಾಗದು, ಅದು ಇಂದು ಶಿಕ್ಷಾರ್ಹ ಅಪರಾಧವಾಗಿದೆ. ಇಂಥ ಮೌಲ್ಯಗಳು ಕೆಲವುಬಾರಿ ಆದರ್ಶಗಳಾಗಿ ಮಾರ್ಪಾಡಾಗಿವೆ. ಮೌಲ್ಯಗಳಿಗೂ ಆದರ್ಶಗಳಿಗೂ ಇರುವ ಅಂತರವನ್ನು ಹೇಳತ್ತಾ ಡಾ. ಎಂ. ಎಂ. ಕಲಬುರ್ಗಿಯವರು "ಸರ್ವದೇಶ, ಸರ್ವಕಾಲ ವ್ಯಾಪ್ತವಾದ ಆದರ್ಶಗಳೂ, ಒಂದು ದೇಶ, ಒಂದು ಕಾಲ ಪರಿಮಿತವಾದ ಮೌಲ್ಯಗಳೂ, ಆ ದೇಶ, ಆ ಕಾಲಗಳ ಅರೆಮೌಲ್ಯಗಳೆನಿಸಿದ ನಂಬಿಕೆಗಳೂ ಜನಾಂಗಗಳನ್ನು ಮುನ್ನಡೆಸುವ ಸೂತ್ರಗಳಾಗಿವೆ" ಎಂದಿದ್ದಾರೆ.[2] ಅಂದರೆ ಮೌಲ್ಯಗಳು ಕಾಲಕಾಲಕ್ಕೆ, ಜನಾಂಗದಿಂದ ಜನಾಂಗಕ್ಕೆ ಬದಲಾಗುತ್ತಿರುತ್ತವೆ. ಆದರೆ ಆದರ್ಶಗಳು ಬದಲಾಗದೆ ಸರ್ವಕಾಲಿಕವಾಗಿರುತ್ತವೆ. ಒಬ್ಬ ವ್ಯಕ್ತಿ ತನ್ನ ಒಡೆಯನ, ತನ್ನ ದೇಶದ, ತನ್ನ ಜನಾಂಗದ ಮತ್ತು ತನ್ನ ಸಮಾಜದ ಹಿತಕ್ಕಾಗಿ ಕೈಗೊಂಡ ಕಾರ್ಯವು ಇತರರ ಮೇಲೆ ಪ್ರಭಾವ ಬೀರಿ, ಅವರೂ ಸಹ ಅಂತಹ ಕಾರ್ಯಕ್ಕೆ ಮುಂದಾಗುತ್ತಾರೆ. ಇದು ಹೆಚ್ಚುತ್ತಾ ಹೋಗಿ ಸಮಕಾಲೀನ ಸಮಾಜದಲ್ಲಿ ಪ್ರಚಾರಗೊಳ್ಳುತ್ತ ಹೋಗುತ್ತದೆ. ಹೀಗೆ ಈ ಆಚರಣೆಯನ್ನು ಒಂದು ಕಾಲಘಟ್ಟದಲ್ಲಿ ಸಮಾಜದ ಬಹುಸಂಖ್ಯಾತರು ಒಪ್ಪಿಕೊಂಡಾಗ ಅದು ಮೌಲ್ಯವಾಗಿ, ಬೆಳೆದು ನಿಲ್ಲುತ್ತದೆ.[3]

ಪ್ರಾಚೀನ ಕರ್ನಾಟಕದ ಜನಪದ ಸಾಹಿತ್ಯವನ್ನು, ಶಾಸನಗಳನ್ನು ಮತ್ತು ಇತರೆ ಸಾಹಿತ್ಯ ಕೃತಿಗಳನ್ನು ಅವಲೋಕಿಸಿದಾಗ ಕೆಲವು ಮೌಲ್ಯಗಳು ಎದ್ದುಕಾಣುತ್ತವೆ. ಅವುಗಳಲ್ಲಿ ವೀರಗುಣ, ಸತಿಸಹಗಮನ, ಆತ್ಮಬಲಿದಾನ, ಶರಣಾಗತ ರಕ್ಷಣೆ, ವೀರವ್ರತ, ದಾನಗುಣ, ಶೌಚಗುಣ, ಸ್ವಾಭಿಮಾನ, ಅಭಿಮಾನ ಮುಂತಾದವು ಪ್ರಮುಖವೆನಿಸುತ್ತವೆ. ಇಂಥ ಮೌಲ್ಯಗಳು ಶಾಸನ ಮತ್ತು ಸಾಹಿತ್ಯ ಕೃತಿಗಳಿಗಿಂತ ವೀರಗಲ್ಲುಗಳಲ್ಲಿ, ಮಹಾಸತಿ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಕಲ್ಲುಗಳಲ್ಲಿ, ನಿಸಿದಿ ಕಲ್ಲುಗಳಲ್ಲಿ ಮತ್ತು ಆತ್ಮ ಬಲಿದಾನದ ಶಿಲ್ಪಗಳಲ್ಲಿ ಅತ್ಯಂತ ಸೊಗಸಾಗಿ ಮೂಡಿ ಬಂದಿರುವುದನ್ನು ಕಾಣಬಹುದು. ಈ ಮೌಲ್ಯಗಳ ಪರಿಪಾಲನೆಗಾಗಿ ಅನೇಕ ಸಂದರ್ಭಗಳಲ್ಲಿ ನಮ್ಮ ಪೂರ್ವಜರು ತಮ್ಮ ಪ್ರಾಣವನ್ನೇ ನೀಡಿದ ಉದಾಹರಣೆಗಳಿವೆ. ಇಂತಹ ಮೌಲ್ಯಗಳನ್ನು ಎತ್ತಿ ಹಿಡಿಯುವುದಕ್ಕಾಗಿ ಹೋರಾಡಿ ಮಡಿದ ವೀರರ, ಪತಿಯೊಂದಿಗೆ ಚಿತೆ ಏರಿದ ಮಹಾಸತಿಯರ, ಧಾರ್ಮಿಕ ಕಾರಣಗಳಿಗಾಗಿ ಆತ್ಮಬಲಿದಾನಗೈದವರ ಅನೇಕ ಸ್ಮಾರಕಶಿಲ್ಪಗಳು ಕರ್ನಾಟಕದಲ್ಲಿ ದೊರೆಯುತ್ತವೆ. ಇಲ್ಲಿಯ ಸ್ಮಾರಕ ಶಿಲ್ಪಗಳಲ್ಲಿರುವ ಶಾಸನಪಾಠ ಮತ್ತು ಶಿಲ್ಪಗಳನ್ನು ಬಳಸಿಕೊಂಡು ಪ್ರಸ್ತುತ ಮೌಲ್ಯಗಳು ಹಾವೇರಿ ಜಿಲ್ಲೆಯಲ್ಲಿಯೂ ಅಂದು ಜೀವಂತವಾಗಿದ್ದವು ಎಂಬುದನ್ನು ಇಲ್ಲಿ ನಿರೂಪಿಸಲು ಪ್ರಯತ್ನಿಸಲಾಗಿದೆ.

## ವೀರಗುಣ : ಒಂದು ಮೌಲ್ಯ

ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದ ಅನೇಕ ಕೃತಿಗಳು, ಶಾಸನಗಳು, ವಿಶೇಷವಾಗಿ ಸ್ಮಾರಕಶಿಲ್ಪಗಳು ವೀರಗುಣವು ಒಂದು ಮೌಲ್ಯವಾಗಿತ್ತು ಎಂಬುದನ್ನು ನಿರೂಪಿಸುತ್ತವೆ. ಪಂಪ, ರನ್ನರ ಕಾವ್ಯಗಳಲ್ಲಿ ವೀರಗುಣದ ಪ್ರಸ್ತಾಪ, ವೀರತನದ ಸಿದ್ಧಾಂತ, ವೀರನ ನಡೆ–ನುಡಿ ಇವುಗಳನ್ನು ಕಾಣುತ್ತೇವೆ. ವೀರಗುಣವು ಒಂದು ಮೌಲ್ಯವಾಗಿ ಬೆಳೆದುಬರಲು ಅಂದಿನ ಅರಸರ, ಸಾಮಂತರ, ಮಹಾಮಂಡಳೇಶ್ವರರ, ಪ್ರಭುಗಾವುಂಡರ ಮತ್ತು ಇತರೆ ಅಧಿಕಾರಿಗಳ ಪ್ರತಿಷ್ಠೆ, ಸಾಮ್ರಾಜ್ಯ ವಿಸ್ತಾರದ ಆಶೆ, ಐಶ್ವರ್ಯ ಮತ್ತು ಭೂದಾಹದ ಅಂಶಗಳೇ ಕಾರಣವಾಗಿವೆ. ಇವುಗಳಿಗಾಗಿ ಆಗಾಗ ಯುದ್ಧಗಳು ಜರುಗುತ್ತಿದ್ದವು. ಹಾಗಾಗಿ ಪ್ರಭುವರ್ಗದವರು ತಮ್ಮ ರಕ್ಷಣೆಗಾಗಿ ಮತ್ತು ರಾಜ್ಯದ ಪ್ರಜೆಗಳ ರಕ್ಷಣೆಗಾಗಿ ಸೈನ್ಯವನ್ನು ಹೊಂದುವುದು ಅವಶ್ಯಕವಾಗಿತ್ತು. ಈ ಸೈನಿಕರು ಶತ್ರುಗಳ ದಾಳಿಯ ಸಮಯದಲ್ಲಿ ತಮ್ಮ ಪ್ರಾಣದ ಹಂಗು ತೊರೆದು ಹೋರಾಡುತ್ತಿದ್ದರು. ಇವರಿಗೆ ತಮ್ಮ ಒಡೆಯನಿಂದ ಉಂಬಳಿ ಅಥವಾ ಸಂಬಳ ದೊರೆಯುತ್ತಿತ್ತು. ಇವರನ್ನು ಜೋಳವಾಳಿಗಳೆಂದು ಕರೆಯುತ್ತಿದ್ದರು. ಇವರು ತಮಗೆ ಅನ್ನವನ್ನಿಟ್ಟ ಒಡೆಯನಿಗಾಗಿ ಹೋರಾಡುತ್ತಾ ಪ್ರಾಣ ತ್ಯಾಗ ಮಾಡಿದರೆ ವೀರಸ್ವರ್ಗ ಲಭ್ಯವಾಗುತ್ತದೆ ಎಂಬ ನಂಬಿಕೆ ಇತ್ತು. ವೀರನಾದವನಿಗೆ ತನ್ನ ವೀರಗುಣವನ್ನು ಪ್ರದರ್ಶನ ಮಾಡಲು ಇರುವಂತಹ ಅವಕಾಶಗಳನ್ನು ರನ್ನನು ಹೀಗೆ ಹೇಳುತ್ತಾನೆ.

> **"ತುಱುಗೋಳೊಳ್ ಪೆಣ್ಬುಯ್ಯಲೊ**
> **ಳೆಱಿವೆಸದೊಳ್ ನೆಣ್ಟನೆಡಱೊಳೂರಳಿವಿನೊಳಂ**
> **ತಱಿಸಂದು ಗಂಡುತನಮನೆ**
> **ನೆಱಪದವಂ ಗಂಡನಲ್ಲನೆಂತುಂ ಷಂಡಂ ॥"[4]**

ಅಂದರೆ ಗೋಗ್ರಹಣ ಪ್ರಸಂಗದಲ್ಲಿ, ಹೆಣ್ಣುಮಕ್ಕಳು ಹುಯ್ಯಲಿಟ್ಟಾಗ, ಒಡೆಯನು ಆಜ್ಞೆ ಇತ್ತಾಗ, ನೆಂಟರು ತೊಂದರೆಯಲ್ಲಿದ್ದಾಗ, ಊರಳಿವಿನ ಸಂದರ್ಭದಲ್ಲಿ ವೀರನಾದವನು ತನ್ನ ವೀರಗುಣವನ್ನು ಪ್ರದರ್ಶಿಸಬೇಕು. ಇಲ್ಲದಿದ್ದರೆ ಆತನು ವೀರನಾಗದೆ ಷಂಡನಾಗುತ್ತಾನೆ ಎಂಬ ರನ್ನನ ಈ ನುಡಿ ವೀರಗುಣದ ಮೌಲ್ಯವನ್ನು ತಿಳಿಸುತ್ತದೆ. ಹಾಗಾಗಿಯೇ ವೀರನಾದವನು ಇಂತಹ ಸಂದರ್ಭದಲ್ಲಿ ತಪ್ಪದೇ ಹೋರಾಡುತ್ತಿದ್ದನು.

> **"ತುರುಗಳುಗುಳ್ದ ಪುಯ್ಯಲೊ**
> **ಳೆರೆಯನ ಕಾರ್ಯದೊಳಮುಣ್ಮಿ ಸತ್ತವನಂ ಕಂ**
> **ಡೆರಗಿ ಬಳಿಕವನ ನೆತ್ತರೊ**
> **ಳ್ಳರಿವಿದೆ ಬೊಟ್ಟನಿಟ್ಟುಕೊಳುವಮೂರ್ಖರ್"**

ಬ್ರಹ್ಮಶಿವನ 'ಸಮಯ ಪರೀಕ್ಷೆ'ಯ ಈ ವಿಚಾರವನ್ನು ಉಲ್ಲೇಖಿಸಿ ಡಾ. ಆರ್. ಶೇಷಶಾಸ್ತ್ರಿಯವರು ಬ್ರಹ್ಮಶಿವನ ಪ್ರಕಾರ ಈ ರೀತಿ ವೀರರಿಗೆ ನಮಸ್ಕಾರ ಮಾಡುವುದು, ಅವರ ರಕ್ತದಿಂದ ತಿಲಕವನ್ನಿಟ್ಟುಕೊಳ್ಳುವುದು ಮೂರ್ಖತನದ ಪರಮಾವಧಿ ಎಂದು ಹೇಳುತ್ತಾ, ಪ್ರಾಚೀನ ಕರ್ನಾಟಕದಲ್ಲಿ ತುರುಗಾಳಗದಲ್ಲಿ ಮಡಿದ ವೀರನಿಗೆ ಅಂದಿನ ಸಮಾಜ ನೀಡುತ್ತಿದ್ದ ಗೌರವ ಭಾವನೆ, ಅವನ ನೆತ್ತರಿನಿಂದ ಬೊಟ್ಟು ಇಟ್ಟುಕೊಳ್ಳುವ ಮೂಲಕ ಅವನನ್ನು ಪ್ರಶಂಸಿಸುವ ಮನೋಭಾವಗಳನ್ನು ತಿಳಿಸುತ್ತಾರೆ.[5] ಇದು ಸಮಕಾಲೀನ ಸಮಾಜವು ವೀರಗುಣವನ್ನು ಒಂದು ಮೌಲ್ಯವೆಂದು ಬಗೆದು, ಆ ಮೌಲ್ಯಕ್ಕೆ ಜನರು ನೀಡುತ್ತಿದ್ದ ಸ್ಪಂದನೆಯನ್ನು ಪ್ರತಿಬಿಂಬಿಸುತ್ತದೆ.

ಹಾವೇರಿ ಜಿಲ್ಲೆಯ ಅನೇಕ ವೀರಗಲ್ಲುಗಳು ವೀರನಾದವನು ತನ್ನ ಒಡೆಯನ ಜೋಳವಾಳಿ ಋಣ ತೀರಿಸಲು, ತುರುಗಳ ರಕ್ಷಣೆಗಾಗಿ, ಸ್ತ್ರೀಯರ ರಕ್ಷಣೆಗಾಗಿ, ಶತ್ರುಗಳಿಂದ ಮತ್ತು ಕಳ್ಳರಿಂದ ಗ್ರಾಮವನ್ನು ರಕ್ಷಿಸಲು, ಕಾಡುಪ್ರಾಣಿಗಳಿಂದ ಜನರನ್ನು ಕಾಪಾಡಲು ಮತ್ತು ಅಪಾಯದಲ್ಲಿದ್ದವರ ನೆರವಿಗಾಗಿ ಹೋರಾಡಿ ಮಡಿದ ಪ್ರಸಂಗಗಳನ್ನು ನಿರೂಪಸುತ್ತವೆ.

> **"ಜಿತೇನ ಲಭ್ಯತೇ ಲಕ್ಷ್ಮೀ ಮೃತೇನಾಪಿ ಸುರಾಂಗನಾ**
> **ಕ್ಷಣ ವಿಧ್ವಂಸಿನೀ ಕಾಯೇ ಕಾ ಚಿಂತಾ ಮರಣೇರಣೇ ॥"**

ಅಂದರೆ ಯುದ್ಧದಲ್ಲಿ ಗೆದ್ದರೆ ಲಕ್ಷ್ಮೀ ಲಭಿಸುತ್ತಾಳೆ, ಮರಣ ಹೊಂದಿದರೆ ದೇವತಾ ಸ್ತ್ರೀಯರು ಸಿಗುತ್ತಾರೆ. ಕ್ಷಣ ಮಾತ್ರದಲ್ಲಿ ಅಳಿದುಹೋಗುವ ಈ ದೇಹ ಅದಕ್ಕಾಗಿ ಏಕೆ ಚಿಂತೆ ಮಾಡುತ್ತೀಯ ಎಂಬ ಈ ಶ್ಲೋಕ ವೀರಗುಣವು ಒಂದು ಮೌಲ್ಯವಾಗಿತ್ತು ಎಂಬುದನ್ನು ತಿಳಿಸುತ್ತದೆ. ಕರ್ನಾಟಕದ ಅನೇಕ ವೀರಗಲ್ಲುಗಳಲ್ಲಿ ಕಂಡುಬರುವ ಈ ಶ್ಲೋಕವು ಹಾವೇರಿ ಜಿಲ್ಲೆಯ ಗುಡ್ಡದಆನ್ವೇರಿ,[6] ಬೆಳವಿಗಿ,[7] ಹೊಮ್ಮರಡಿ,[8] ಗುತ್ತಲ,[9] ಕಡಕೋಳ,[10] ಕಲಕೇರಿಯ[11] ವೀರಗಲ್ಲುಗಳಲ್ಲಿ ಕಂಡುಬಂದಿದ್ದು, ವೀರಗುಣವು ಒಂದು ಮೌಲ್ಯವಾಗಿತ್ತು ಎಂಬುದರ ನಿದರ್ಶನವಾಗಿದೆ.

> **"ದ್ವಾಮಿಮೌ ಪುರುಷ ಲೋಕೇ ಸೂರ್ಯಮಂಡಲ ಭೇದಿನೌ**
> **ಪರಿವ್ರಾಡ್ಯೋಗ ಯುಕ್ತಾಶ್ವರಣೇ ಚಾಭಿಮುಖೇ ಹತಃ"**

ಸೂರ್ಯಮಂಡಲವನ್ನು ಈರ್ವರು ಮಾತ್ರ ಭೇದಿಸಬಲ್ಲರು. ಒಬ್ಬ ಯೋಗ ಸಾಧನೆ ಮಾಡಿದ ಪಾರಿವ್ರಾಜಕನಾದರೆ; ಮತ್ತೊಬ್ಬ ರಣರಂಗದಲ್ಲಿ ಹೋರಾಡಿ ಮಡಿದ ಯೋಧ. ಮಹಾಭಾರತದ ವಿರಾಟಪರ್ವದಲ್ಲಿರುವ ಈ ಕಾವ್ಯವನ್ನು ಪ್ರಸ್ತುತ ಅಧ್ಯಯನ ಪ್ರದೇಶದ ತಿಳವಳ್ಳಿ[12] ಮತ್ತು ಎಮ್ಮಿಗನೂರಿನ[13] ಶಾಸನಗಳು ಉಲ್ಲೇಖಿಸುತ್ತಿದ್ದು, ಇಲ್ಲಿಯ ವೀರರ ವೀರಗುಣದ ಮೌಲ್ಯವನ್ನು ಪ್ರಶಂಸಿಸುತ್ತವೆ. ಹತ್ತಿಮತ್ತೂರಿನ[14] ಶಾಸನವೊಂದು ಶಿವದಾಸನ ವೀರತನವನ್ನು ಈ ರೀತಿ ಹೊಗಳುತ್ತದೆ. 'ಪರಿವ ನೆತ್ತರ ತೋಕೆಯು ಮುಱಿದ ತೊಡೆ ಪರಿದ ಕರುಳು ಸುಱಿವವಬ್ರಣಮುಮಾಯ್ತದೇನಚ್ಚರಿ, ಪುದಿದುಕೊಳೆ ಕಣೆಗಳೆತ್ತಂ ಬೆದರದೆ ನಡೆದಿದಿರನಾಂತರ ತವೆ ಕೊಲುತ ಬಿಧಿರ ಪೊದೆಯೊಳಗೆ ಸಿಂಘಂ ಮುದದಿಂದೊಱಗುವವೊತೊಱಗಿದಂ ಸಿವದಾಸ' ಇಲ್ಲಿ ವೀರನು ಗಾಯಗೊಂಡಿದ್ದರೂ ಸಿಂಹದಂತೆ ವೈರಿಗಳೊಂದಿಗೆ ಹೋರಾಡುವ ಪರಿ ವೀರಗುಣದ ಪರಾಕಾಷ್ಠತೆಯ ಧ್ಯೋತಕವಾಗಿದೆ. ದೇವಿಹೊಸೂರಿನ[15] ವೀರಗಲ್ಲೊಂದರ ಶಾಸನ ಪಾಠದಲ್ಲಿಯ 'ವಯಿರಿಶಿರಂಗಳಂ ನಿಕ್ಕಿ, ಮೆಟ್ಟಿ ವೀರರಾ ಸಿರಂ ಕಳಚಿ ಬಿಸುನೆತ್ತರ ಧಾರೆಯ ಮಿದುಳಂ ತೆರಳ್ಚಿ' ಎಂಬ ವೀರನ ಶೌರ್ಯವನ್ನು ಹೊಗಳುವ ಈ ಸಾಲುಗಳಲ್ಲಿ ವೀರಗುಣದ ಸೊಗಸನ್ನು ಕಾಣಬಹುದು.

'ತುಱುಗೊಳ್' ಯುದ್ಧದಲ್ಲಿ ಹೋರಾಡಿ ಮಡಿದವರ ಅನೇಕ ವೀರಗಲ್ಲುಗಳು ದೊರೆಯುತ್ತವೆ. ಅಂದು ಗೋವುಗಳು ಸಂಪತ್ತೆನಿಸಿದ್ದು, ಕಳೆದುಕೊಳ್ಳಲಾರದ ಆಸ್ತಿ ಎನಿಸಿದ್ದವು. ಯಾರಾದರೂ ಇವುಗಳನ್ನು ಅಪಹರಿಸಿದರೆ ಕಳೆದುಕೊಂಡ ಊರಿಗೆ ಅಥವಾ ನಾಡಿಗೆ ಅಪಮಾನವೆಂದು ಭಾವಿಸಿ ಅವುಗಳ ರಕ್ಷಣೆಗೆ ಪ್ರಾಣದ ಹಂಗು ತೊರೆದು ಹೋರಾಡುತ್ತಿದ್ದರು.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಮಹಾಗ್ರಾಮ ತಿಳವಳ್ಳಿಯ ತುಱುಗಳನ್ನು ಮನ್ನೆಯ ಮಹಾರಾಜನವರು ಕೊಂಡು ಹೋಗುವಾಗ ಸಾಸಿರ್ವರ ಆಜ್ಞೆಯ ಮೇರೆಗೆ ಮಸಳೆಯ ಬಂಮನು ತುಱುವ ಹಿಂತಿರುಗಿಸಲು ಹೋರಾಡಿ ಸುರಲೋಕ ಪ್ರಾಪ್ತನಾಗುತ್ತಾನೆ.[16] ತೈಲಹದೇವನು ಬಂದು ಬಳ್ಳರಬೀಡನ್ನು ಇರಿದು ಊರಳಿವಿನ ಹೆಂಡಿರುಡೆ ಉಚ್ಚಲು ತುಱುವರಿಯುವ ಸಂದರ್ಭದಲ್ಲಿ ಬಸವ ಎನ್ನುವವನು ಓಡಿ ಬಂದು ಹೆಬ್ಬಾಗಿಲಲ್ಲಿ ಅಡ್ಡ ನಿಂತು ಆಳುಗಳನ್ನು ತರುಬಿ ಅವರೊಡನೆ ಹೋರಾಡಿ ವೀರಮರಣವನ್ನು ಹೊಂದುತ್ತಾನೆ.[17] ದಂಡನಾಯಕ ಕೇಸಿಮಯ್ಯನು ಮುತ್ತುರ ತುಱುಗಳನ್ನು ಕೊಳ್ಳುವಾಗ ಅಸಗರ ಕಾಳೆಯ ತುಱುಗಳನ್ನು ಮಗುರ್ಚ್ಚಿ ಮೇಲಾಳನ್ನು ತಿವಿದು ಸುರಲೋಕ ಪ್ರಾಪ್ತನಾಗುತ್ತಾನೆ.[18] ತುರುಗಳನ್ನು ರಕ್ಷಿಸುವುದು ವೀರಗುಣದ ಒಂದು ಲಕ್ಷಣವಾಗಿದ್ದು, ಅಂಥ ಮೌಲ್ಯಕ್ಕಾಗಿ ಹೋರಾಡಿದ ವೀರರನ್ನು ಮೇಲಿನ ವೀರಗಲ್ಲುಗಳಲ್ಲಿ ಕಾಣಬಹುದು. ಮೇಲಿನ ಪ್ರಸಂಗಗಳಲ್ಲಿ ವೀರನಾದವನು ಯಾವುದೇ ಫಲಾಪೇಕ್ಷೆಯಿಲ್ಲದೆ ಮೌಲ್ಯಕ್ಕಾಗಿ ಹೋರಾಡಿ ಪ್ರಾಣಾರ್ಪಣೆ ಮಾಡಿರುವುದನ್ನು ಗಮನಿಸಿದರೆ ವೀರಗುಣವು ಒಂದೊ ಮೌಲ್ಯವಾಗಿತ್ತು ಎಂದು ಹೇಳಬಹುದು.

ಕಲಕೇರಿಯ[19] ಕೋಟೆಕಾಳಗದ ವೀರಗಲ್ಲೊಂದರಲ್ಲಿ ವೀರನು ಕೋಟೆಯನ್ನು ಮುತ್ತಿಗೆ ಹಾಕುವ ಬಗೆ ಈ ರೀತಿ ಇದೆ 'ಗಿಳಿಯಂತೆ ತೆನೆಯನೇರು ಭಟರ್ಬ್ಬೊಬ್ಬಿರಿಯೆ ಶೌರ್ಯಶೂದ್ರುಕಾಂಕಂ ಸಂಕನು'. ಇಲ್ಲಿಯ ಎರಡು ವೀರಗಲ್ಲು ಶಿಲ್ಪಗಳಲ್ಲಿ ಕೋಟೆಗೆ ಮುತ್ತಿಗೆ ಹಾಕಿದ ವೀರರು ತಮ್ಮ ಕೈಯಲ್ಲಿ ಶತ್ರುವಿನ ರುಂಡವನ್ನು ಹಿಡಿದಿರುವ ದೃಶ್ಯಗಳಿವೆ. ಮಂತಗಿ[20] ಶಾಸನವೊಂದು ಊರಳಿವಿನಲ್ಲಿ ನೀತಿಗ ಮತ್ತು ಪರಶುರಾಮ ಎಂಬ ವೀರರು ಹೋರಾಡಿ ಮಡಿದ ಬಗ್ಗೆ ತಿಳಿಸುತ್ತದೆ. ಕಳ್ಳಿಹಾಳ[21] ವೀರಗಲ್ಲೊಂದು 'ಅಜ್ಜಡಿಯ ಸಮರ್ತ್ತ್‌ಸ್ತ ಪ್ರಜೆ ಹೆಗ್ಗಡೆ ಗೌಂಡು ಮುಖ್ಯವಾಗಿ... ಹುಲಿಯ ಮೇಱ್ ಕಾದಿ ತಱುತಿರಿದು ಕುಱಿಯ ಹೊಲನಂ ತಲೆಗೊಟ್ಟು ಹರದಮಾನ್ಯದ ಮಮೇಱ್ ಸುರಲೋಕ ಪ್ರಾಪ್ತನಾದ' ಎಂದು ಉಲ್ಲೇಖಿಸುತ್ತದೆ. ಇಲ್ಲಿ ವೀರನು ಪ್ರಜೆಗಳ ಸಮಕ್ಷಮದಲ್ಲಿ ಊರಿಗೆ ನುಗ್ಗಿದ ಹುಲಿಯೊಂದಿಗೆ ಹೋರಾಡಿ ಮರಣಿಸಿದ ಬಗ್ಗೆ ಮಾಹಿತಿ ಇದೆ. ಇದು ಸಹ ವೀರಗುಣದ ಒಂದು ಮೌಲ್ಯವಾಗಿತ್ತು.

## ಸ್ತ್ರೀಯರ (ಅಬಲೆಯರ) ರಕ್ಷಣೆ : ಒಂದು ಮೌಲ್ಯ

ಶತ್ರುಗಳು, ಕಳ್ಳರು ಗ್ರಾಮಗಳ ಮೇಲೆ ದಾಳಿ ಮಾಡಿ ಅಲ್ಲಿಯ ಗೋವುಗಳನ್ನು ಮತ್ತು ಸ್ತ್ರೀಯರನ್ನು ಅಪಹರಿಸುತ್ತಿದ್ದರು. ಇಲ್ಲವೇ ಅವರ ಮಾನಭಂಗಕ್ಕೆ ಪ್ರಯತ್ನಿಸುತ್ತಿದ್ದರು. ಇಂಥ ಸಂದರ್ಭದಲ್ಲಿ ಸ್ತ್ರೀಯರು ತಮ್ಮ ರಕ್ಷಣೆಗಾಗಿ ಹುಯ್ಯಲಿಡುತ್ತಿದ್ದರು (ಕೂಗಿಕೊಳ್ಳುವುದು), ಸ್ತ್ರೀಯರು ಪುಯ್ಯಲಿಡುವುದನ್ನು ಕೇಳಿದ ಯಾವೊಬ್ಬ ವೀರನೂ ಅವರ ರಕ್ಷಣೆಗೆ ಧಾವಿಸುವುದು ಒಂದು ಮೌಲ್ಯವಾಗಿತ್ತು. ಇಂಥ ಸಂದರ್ಭದಲ್ಲಿ ವೀರನಾದವನು ಶತ್ರುಗಳೊಂದಿಗೆ ಹೊರಾಡಿ, ಸ್ತ್ರೀಯರನ್ನು ಕಾಪಾಡುತ್ತಿದ್ದನು. ಕ್ರಿ.ಶ. 1135ರ ಕಾಗಿನೆಲ್ಲಿ[22] ಶಾಸನವೊಂದು ಮಹಾಮಂಡಳೇಶ್ವರನಾದ ಬಿಟ್ಟಿಯರಸನು ಹಾವನೂರಿನ ಕೋಟೆಯನ್ನು ಮುತ್ತಿ ಅಲ್ಲಿಯ 'ಪೆಂಡಿರುಡೆಯುಚ್ಚುವಲ್ಲಿ ಜಿಡಗೂರಿನ ರಾಜಣ್ಣ ಎಂಬ ವೀರನು ಸ್ತ್ರೀಯರ ರಕ್ಷಣೆಗಾಗಿ ಹೋರಾಡಿ ಮಡಿದ ಬಗ್ಗೆ ತಿಳಿಸುತ್ತದೆ. ಮುತ್ತೂರು[23] ವೀರಗಲ್ಲೊಂದು 'ಮುತ್ತೂರ ಕಮ್ಮನವಳ್ಳಿಯ ಜಕಿಸೆಟ್ಟಿ ಊರನಳಿದು ಪೆಂಡಿರುಡೆಯುರ್ಚ್ಚಲು ಕಮ್ಮಾರ ಮಾಚತಱುತಿರಿದು ಸುರಲೋಕ ಪ್ರಾಪ್ತನಾದ' ಎಂದು ಉಲ್ಲೇಖಿಸುತ್ತದೆ. ಚಿಕ್ಕಣಗಿಯಲ್ಲಿ[24] ಕಂಡುಬರುವ ಎರಡು ಪೆಣ್ಬುಯ್ಯಲ್ ಶಿಲ್ಪಗಳಲ್ಲಿ ಅರನಗ್ನ ಸ್ತ್ರೀಯರ ಶಿಲ್ಪಗಳಿದ್ದು, ಕೆಳ ಹಂತದಲ್ಲಿ ಯುದ್ಧ ನಡೆಯುತ್ತಿರುವಂತೆ ಕಂಡರಿಸಲಾಗಿದೆ. ಈ ಯುದ್ಧಗಳು ಸ್ತ್ರೀಯರ ರಕ್ಷಣೆಗಾಗಿ ನಡೆದಿರುವುದರಲ್ಲಿ ಸಂಶಯವಿಲ್ಲ. ಅಬ್ಬಲೂರಿನ[25] ವೀರಗಲ್ಲೊಂದು ಅಬಲೆಯರ ರಕ್ಷಣೆಗಾಗಿ ಹೋರಾಡುತ್ತಿರುವ ಸನ್ನಿವೇಶವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದೆ. ಬೆಳವಟ್ಟಿಯ ಈಶ್ವರದೇವನು ಹಲವು ಅರಸರೊಡನೆ ಕೂಡಿಕೊಂಡು ಸಾಂತಳಿಗೆ ನಾಡಿನ ನಾಯಕರೊಂದಿಗೆ ಹತ್ತು ಸಾವಿರ ಸೈನಿಕರು ಒಂದು ಸಾವಿರ ಕುದುರೆಗಳ ಸಮೇತ ಅಬ್ಬಲೂರಿನ ಮೇಲೆ ದಾಳಿ ಮಾಡುತ್ತಾನೆ. ಈ ದಾಳಿಯಲ್ಲಿ ಅಬ್ಬಲೂರಿನ ಬಡಗಿ ಕೇತೋಜನ ಮಕ್ಕಳಾದ ಮಾಚ ಮತ್ತು ಗೋಮ ಎಂಬ ಸಹೋದರರು ಶತ್ರುಗಳೊಂದಿಗೆ ಹೊರಾಡಿ ಸ್ತ್ರೀಯರನ್ನು, ಗೋವುಗಳನ್ನು ರಕ್ಷಿಸಿ ಮಡಿಯುತ್ತಾರೆ. ಈ ವೀರಗಲ್ಲಿನ ಹೋರಾಟದ ಹಂತದಲ್ಲಿ ವೀರರ ಹಿಂದೆ ಅರೆನಗ್ನ ಸ್ತ್ರೀಯರು ತಮ್ಮ ಮರ್ಮಾಂಗಗಳನ್ನು ಕೈಗಳಿಂದ ಮುಚ್ಚಿಕೊಂಡು ನಿಂತಿರುವುದನ್ನು ಗಮನಿಸಬಹುದು. ಇದೇ ಗ್ರಾಮದ ಇನ್ನೊಂದು ಪೆಣ್ಬುಯ್ಯಲ್ ಶಿಲ್ಪದ ಹೋರಾಟದ ಹಂತದಲ್ಲಿ ತಲೆ ಕೆದರಿಕೊಂಡು ತಮ್ಮ ಮರ್ಮಾಂಗಗಳನ್ನು ಕೈಗಳಿಂದ ಮುಚ್ಚಿಕೊಂಡು ನಿಂತಿರುವ ಸ್ತ್ರೀಯರ ಚಿತ್ರಣವಿದೆ. ಇವುಗಳಲ್ಲದೆ ಹಾವೇರಿ ಜಿಲ್ಲೆಯ ಅಂತರವಳ್ಳಿ,[26] ಸರ್ವಂದ,[27] ಹಿರೇಹುಲ್ಲಾಳ, ಹೊಸಳ್ಳಿ, ವೀರಗಲ್ಲುಗಳಲ್ಲಿ ಸ್ತ್ರೀಯರನ್ನು ರಕ್ಷಿಸಲು ಅವರನ್ನು ಹಿಂದಿಕ್ಕಿಕೊಂಡು ಶತ್ರುಗಳೊಂದಿಗೆ ಹೋರಾಡಿ ಅವರ ಮಾನರಕ್ಷಣೆಯನ್ನು ಮಾಡಿ ತಮ್ಮ ಪ್ರಾಣವನ್ನೇ ನೀಡಿದ ಸನ್ನಿವೇಶಗಳನ್ನು ಕಾಣಬಹುದು. ಇದನ್ನು ಗಮನಿಸಿದರೆ ಅಬಲೆಯರ (ಸ್ತ್ರೀಯರ) ರಕ್ಷಣೆ ಅಂದಿನ ಸಮಾಜದಲ್ಲಿ ಒಂದು ಮೌಲ್ಯವಾಗಿತ್ತು ಎಂಬುದರಲ್ಲಿ ಸಂಶಯವಿಲ್ಲ. ಮೇಲಿನ ವೀರಗಲ್ಲುಗಳನ್ನು ಪೆಣ್ಬುಯ್ಯಲ್ ವೀರಗಲ್ಲುಗಳು ಎಂದು ಕರೆಯುತ್ತಿದ್ದರು. ಇಲ್ಲಿ ವೀರನಾದವನು ಸ್ತ್ರೀಯರ ರಕ್ಷಣೆ ತನ್ನ ಕರ್ತವ್ಯ ಎಂಬ ಮೌಲ್ಯಕ್ಕೆ ಬದ್ಧನಾಗಿ ಪ್ರಾಣವನ್ನೇ ಪಣಕ್ಕಿಟ್ಟು ಹೋರಾಡಿದ್ದನ್ನು ಗಮನಿಸಬಹುದು.

## ನುಡಿದಂತೆ ನಡೆ : ಒಂದು ಮೌಲ್ಯ

ಪ್ರಾಚೀನ ಕಾಲದಲ್ಲಿ ಮಾತು ಕೊಟ್ಟಂತೆ ನಡೆದುಕೊಳ್ಳುವುದು ಒಂದು ಮೌಲ್ಯವಾಗಿತ್ತು. ಕೊಟ್ಟ ಮಾತಿಗೆ ತಪ್ಪಬಾರದೆಂಬುದೇ ಈ ಮೌಲ್ಯದ ಹಿಂದಿನ ಉದ್ದೇಶವಾಗಿದೆ. ಆತ್ಮಬಲಿದಾನ ಮಾಡಿಕೊಳ್ಳುವವರು ಈ ಮೌಲ್ಯವನ್ನು ಕಟ್ಟುನಿಟ್ಟಾಗಿ ಪಾಲಿಸಿದ್ದಾರೆ. ವೇಟವಾಳಿಗಳು, ಕಿಬ್ಬುಂಟೆಯಾದವರು, ಲೇಂಕರು ತಾವು ನುಡಿದಂತೆ ನಡೆಯುವವ ರಾಗಿದ್ದಾರೆ. 'ಗೋವಿನಹಾಡು' ಕಥನಗೀತೆಯನ್ನು ಇಲ್ಲಿ ಸ್ಮರಿಸಬಹುದು. ಡಾ. ಎಂ. ಚಿದಾನಂದಮೂರ್ತಿಯವರು 'ವೇಳವಾಳಿ'ತನವು ಕೃತಜ್ಞತೆಯ ಪರಾಕಾಷ್ಠೆಯಾಗಿದ್ದು, ತನಗೆ ಅನ್ನವನ್ನಿಟ್ಟ ಒಡೆಯನು ಮರಣಹೊಂದಿದರೆ ತಾವೂ ಸಹ ಮಡಿಯುವುದಾಗಿ ಆತನ ಸೇವಕರು ಪ್ರತಿಜ್ಞೆಗೈಯುತ್ತಿದ್ದರು. ಹೀಗೆ ಪ್ರತಿಜ್ಞೆಗೈಯುವವನನ್ನು 'ವೇಳೆವಡಿಚ' ಎಂದು ಪ್ರತಿಜ್ಞೆಯನ್ನು ಕೈಗೊಳ್ಳುವುದನ್ನೇ 'ವೇಳೆಗೊಳ್' ಎಂದು ಕರೆಯುತ್ತಿದ್ದರೆಂದು ಹೇಳುತ್ತಾ ಒಡೆಯನು ಮಡಿದಾಗ ಅವನ ವೇಳೆವಡಿಚರು ಆತ್ಮಹತ್ಯೆ ಮಾಡಿಕೊಳ್ಳುವುದೇ 'ವೇಳೆವಾಳಿ' ಎಂದು ಹೇಳಿದ್ದಾರೆ. ಬೆನಕನಕೊಂಡದ[28] ಆತ್ಮಬಲಿದಾನ ವೀರಗಲ್ಲೊಂದು 'ಜಗದಾಳ ಬೋಮಿದೇವ ಜಂಗುಳಿಮಂನೆಯರಗಂಡಗೆ ಎಕಟಿಗ ಚಟಯ ನಾಯಕನು ತಂನ ಹೆಂಡತಿಸಹಿತ ಯಿಬರುಂ ವೊಡೆಯಂಗೆ ಕೊಟ್ಟಬಾಸೆಗೆ ತಲೆಗೊಟ್ಟರು' ಎಂದು ಉಲ್ಲೇಖಿಸುತ್ತದೆ. ಇಲ್ಲಿ ಎಕಟಿಗ ಎಂಬುವವನು ತನ್ನ ಒಡೆಯನಿಗೆ ಕೊಟ್ಟ ಭಾಷೆಯಂತೆ ತನ್ನ ಹೆಂಡತಿಯ ಜೊತೆಯಲ್ಲಿ ತಲೆಗೊಟ್ಟ ಪ್ರಸಂಗವಿದೆ.

## ವೀರವ್ರತ : ಒಂದು ಮೌಲ್ಯ

ಉಗ್ರಭಕ್ತಿಯ ಮೂಲಕ ಶಿವನನ್ನು ಆರಾಧಿಸುವ ಶೈವವೀರ ವ್ರತಧಾರಿಗಳು ಅಂದು ಇರುತ್ತಿದ್ದರು. 'ಕಣ್ಣ ಕಳದೇಱಿಸಿ ಕಣ್ಣಂ ಪಡೆವ, ಜಿಹ್ವೆಯಂ ಸಮರ್ಪಿಸಿ ಜಿಹ್ವೆಯಂ ಪಡೆವ, ಶಿರವಂ ಕಡಿದಾರತಿಯನೆತ್ತಿ

ಶಿರವಂ ಪಡೆವ ವೀರಗಣಂಗಳ್' ಎಂದು ಎಸ್.ಎಸ್. ಹಿರೇಮಠ ಅವರು ವೀರವ್ರತದ ಬಗ್ಗೆ ವಿವರಿಸಿದ್ದಾರೆ.[29] ಇಂಥ ಉಗ್ರವ್ರತಧಾರಿಯ ಬಗ್ಗೆ ವಿವರಿಸುವ ಶಾಸನವೊಂದು ಅಬ್ಬಲೂರಿನಲ್ಲಿ[30] ಕಂಡುಬರುತ್ತದೆ. ಶಾಸನವು ಉಲ್ಲೇಖಿಸುವಂತೆ ಏಕಾಂತರಾಮಯ್ಯನೆಂಬುವವನು ಆಳಂದದಲ್ಲಿ ಜನಿಸಿ ಶೈವ ಕ್ಷೇತ್ರಗಳನ್ನು ಸಂದರ್ಶಿಸುತ್ತಾ ಅಬ್ಬಲೂರಿಗೆ ಬರುತ್ತಾನೆ. ಇಲ್ಲಿರುವ ಬ್ರಹ್ಮೇಶ್ವರ ದೇವಾಲಯದಲ್ಲಿ ಏಕಾಂತರಾಮಯ್ಯನಿಗೂ, ಜೈನರಿಗೂ ಶಿವಪಾರಮ್ಯದ ಬಗ್ಗೆ ವಾಗ್ವಾದ ಉಂಟಾಗುತ್ತದೆ. ಜೈನರು ಏಕಾಂತರಾಮಯ್ಯನಿಗೆ ಒಂದು ಸವಾಲು ಹಾಕುತ್ತಾರೆ. ಅದರ ಪ್ರಕಾರ ರಾಮಯ್ಯನು ತನ್ನ ಶಿರವನ್ನು ಕತ್ತರಿಸಿ ಮತ್ತೆ ಮರುಜೀವವನ್ನು ಪಡೆದರೆ, ಅಬ್ಬಲೂರಿನಲ್ಲಿರುವ ಜಿನಮೂರ್ತಿಯನ್ನು ಒಡೆದು ಶಿವನನ್ನು ಪ್ರತಿಷ್ಠಾಪಿಸಲಿ ಎಂದು ಓಲೆ ಬರೆದು ಕೊಡುತ್ತಾರೆ. ಅದರಂತೆ ರಾಮಯ್ಯನು ತನ್ನ ಶಿರವನ್ನು ಕತ್ತರಿಸಿ ವೀರವ್ರತವನ್ನು ಮೆರೆದು ಪುನಃ ಮರುಜೀವವನ್ನು ಪಡೆದು ಜಿನಮೂರ್ತಿಯನ್ನು ಒಡೆಯಲು ಮುಂದಾದಾಗ ಸಂಕಗಾವುಂಡನೆಂಬುವವನು ಸೈನ್ಯದೊಂದಿಗೆ ರಾಮಯ್ಯನನ್ನು ತಡೆಯುತ್ತಾನೆ. ರಾಮಯ್ಯನು ಸಂಕಗಾವುಂಡನನ್ನು ಯುದ್ಧದಲ್ಲಿ ಸೋಲಿಸಿ ಜಿನಮೂರ್ತಿಯನ್ನು ಒಡೆದು ಅಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸುತ್ತಾನೆ. ಅಬ್ಬಲೂರಿನ ಸೋಮೇಶ್ವರ ದೇವಾಲಯದ ಕಟಾಂಜನದ ಹೊರಭಾಗದಲ್ಲಿ ಮತ್ತು ದೇವಾಲಯದ ಭಿತ್ತಿಯ ಮೇಲೆ ಮೇಲಿನ ಸನ್ನಿವೇಶವನ್ನು ಹೊಂದಿರುವ ಶಿಲ್ಪಗಳಿವೆ. ಅವುಗಳ ತಳಭಾಗದಲ್ಲಿ –

**'ಶ್ರೀಮದ್ ಏಕಾಂತ ರಾಮಯ್ಯನಿಗೆ ಸಂಕಗೌಂಡನ ಓಲೆಯ ಕುಡುವ ಠಾವು', 'ಶ್ರೀಬ್ರಹ್ಮೇಶ್ವರ ದೇವರಲ್ಲಿ ಏಕಾಂತ ರಾಮಯ್ಯ ಬಸದಿಯ ಜಿನನೊಡ್ಡವಾಗಿ ತಲೆಯ ನರಿದು ಹಡೆದ ಠಾವು.. ಸಂಕಗಾವುಂಡ ಬಸದಿಯ ನೊಡೆಯಲೀಯದೆ ಆಳು ಕುದುರೆಯನೊಡ್ಡಿರಲು ಏಕಾಂತ ರಾಮಯ್ಯ ಕಾದಿಗೆಲ್ದು ಜಿನನೊಡನೆ ಲಿಂಗಪ್ರತಿಷ್ಠೆ ಮಾಡಿದಂ'**

ಎಂಬ ಮತ್ತು 'ಏಕಾಂತ ರಾಮಯ್ಯಂಗಳ ಜಿನನ ಒಡೆದು ಲಿಂಗ ಪ್ರತಿಷ್ಠೆಯಂ ಮಾಡಿದ ಠಾವು'.[31] ಎಂಬ ಶಾಸನ ಸಾಲುಗಳನ್ನು ಕಾಣಬಹುದು. ಹೀಗೆ ವೀರವ್ರತವನ್ನು ಕೈಗೊಂಡು ಅದರಂತೆ ನಡೆದು ಪವಾಡವನ್ನು ಮೆರೆದ ಸನ್ನಿವೇಶವನ್ನು ಮೇಲಿನ ಶಾಸನದಲ್ಲಿ ಕಾಣಬಹುದು.

ಕರ್ನಾಟಕದ ಅನೇಕ ಭೈರವ ಮತ್ತು ನಾಥಕೇಂದ್ರಗಳಲ್ಲಿ ಕತ್ತರಿಸಿದ ರುಂಡಗಳನ್ನು ಕಾಣಬಹುದು. ಇವರು ಕಾಪಾಲಿಕ ಸಂಪ್ರದಾಯದವರಾಗಿದ್ದು, ವೀರವ್ರತ ಆಚರಣೆಗೆ ಹೆಸರುವಾಸಿಯಾಗಿದ್ದರು. ರಟ್ಟಿಹಳ್ಳಿಯ ವೀರಭದ್ರ ದೇವಾಲಯದಲ್ಲಿ ಶಿಲೆಯಲ್ಲಿ ಮಾಡಿದ ಒಂದು ರುಂಡದ ಶಿಲ್ಪವಿದೆ ಮತ್ತು ಈ ವ್ರತಾಚರಣೆಗೆ ಬೇಕಾಗುವ ಕಬ್ಬಿಣದ ಗಂಡುಕತ್ತರಿಯನ್ನು ಅಲ್ಲಿ ಕಾಣಬಹುದು.[32] ಬ್ಯಾಡಗಿ ತಾಲೂಕಿನ ಶಿಡೇನೂರು ಗ್ರಾಮದ ವೀರಭದ್ರ ದೇವಾಲಯದ ಹೊರ ಆವರಣದಲ್ಲಿ, ಹಾವೇರಿ ತಾಲೂಕಿನ ಯಲಗಚ್ಚ ಗ್ರಾಮದ ಲಕ್ಷ್ಮೀವೇಂಕಟೇಶ್ವರ ದೇವಾಲಯದಲ್ಲಿರುವ ಗರ್ಭಗೃಹವೊಂದರಲ್ಲಿ ಹಾಗೂ ಇದೇ ತಾಲೂಕಿನ ಕೊಳೂರು ಗ್ರಾಮದ ಮಾರ್ಕಂಡೇಶ್ವರ ದೇವಾಲಯದ ಬಲಬದಿಯಲ್ಲಿರುವ ಚಿಕ್ಕ ಕೋಣೆಯಲ್ಲಿ ಇಂತಹ ರುಂಡಗಳ ಶಿಲ್ಪಗಳಿವೆ. ಈ ರುಂಡಗಳು ವೀರವ್ರತವನ್ನು ಕೈಗೊಂಡು ಆತ್ಮಬಲಿದಾನಗೈದ ವೀರರ ಸ್ಮಾರಕಶಿಲ್ಪಗಳಾಗಿದ್ದು, ವೀರವ್ರತವು ಅಂದಿನ ಸಾಮಾಜಿಕ ಮೌಲ್ಯಗಳಲ್ಲಿ ಒಂದಾಗಿತ್ತು ಎಂಬುದರ ಸಂಕೇತಗಳಾಗಿವೆ. ಉಗ್ರರೂಪದ ಹರಕೆಯ ಆತ್ಮಬಲಿದಾನಗಳಲ್ಲಿ ಕರುಳು ಕತ್ತರಿಸಿಕೊಂಡು ಆತ್ಮಬಲಿದಾನಗೈಯುವುದು ಒಂದಾಗಿದೆ. ಹಿರೇಕೆರೂರು ತಾಲೂಕಿನ ಸಾತನೂರು ಗ್ರಾಮದ ಪುರಾತನ ರಾಮಲಿಂಗೇಶ್ವರ ದೇವಾಲಯದಲ್ಲಿರುವ ಭೈರವನ ಶಿಲ್ಪದ ಬಲಬದಿಯಲ್ಲಿ ವ್ಯಕ್ತಿಯೊಬ್ಬ ಮುಂಗಾಲಲ್ಲಿ ಕುಳಿತುಕೊಂಡು ತನ್ನ ಉಧರವನ್ನು ಸೀಳಿ ಕರುಳುಗಳನ್ನು ಕತ್ತರಿಸಿಕೊಳ್ಳುತ್ತಿರುವ ದೃಶ್ಯವಿದೆ. ಇದು ವೀರವ್ರತಿಯೊಬ್ಬ ಮೌಲ್ಯವೊಂದರ ಪಾಲನೆಗಾಗಿ ಭೈರವನಿಗೆ ಆತ್ಮಬಲಿದಾನಗೈದುದನ್ನು ತಿಳಿಸುತ್ತದೆ.

ತಮ್ಮ ಹಿರಿಯರು ಪಾಲಿಸಿಕೊಂಡ ಬಂದ ಮೌಲ್ಯಗಳನ್ನು ಎತ್ತಿಹಿಡಿಯುವುದರ ಸಲುವಾಗಿ ವೀರವ್ರತವನ್ನು ಕೈಗೊಂಡು ಆತ್ಮಬಲಿದಾನಗೈದ ಅನೇಕ ಉದಾಹರಣೆಗಳನ್ನು ಕರ್ನಾಟಕದಾದ್ಯಂತ ಕಾಣಬಹುದು. ಇಂತ ಆಚರಣೆಗಳಲ್ಲಿ ಸಿಡಿತಲೆ ಸಹ ಒಂದು. ಹಿರೇಕೆರೂರು ತಾಲೂಕು ಅಬ್ಬಲೂರಿನ ಸರಸ್ವತಿ ದೇವಾಲಯದ ಹಿಂದೆ ವ್ಯಕ್ತಿಯೊಬ್ಬ ತನ್ನ ಇಬ್ಬರು ಪತ್ನಿಯರೊಂದಿಗೆ ಸಿಡಿತಲೆ ಕೊಟ್ಟು ಮೌಲ್ಯ ಮೆರೆದ ಸ್ಮಾರಕಶಿಲ್ಪವಿದೆ. ಇಂಥಹ ಮೌಲ್ಯಕ್ಕಾಗಿ ವೀರವ್ರತವನ್ನು ಕೈಗೊಂಡು ತಮ್ಮ ರುಂಡವನ್ನು ಬೇರೊಬ್ಬರಿಂದ ಕತ್ತರಿಸಿಕೊಳ್ಳುತ್ತಿರುವ ಸ್ಮಾರಕ ಶಿಲ್ಪಗಳು ಹಾನಗಲ್ಲು ತಾಲೂಕಿನ ಕಲಕೇರಿಯ ಕಾಳಿಕಾದೇವಾಲಯದ ಮುಂದೆ ಮತ್ತು ಸವಣೂರು ತಾಲೂಕಿನ ಚಿಲ್ಲೂರು ಗ್ರಾಮದ ಚಿಕ್ಕ ಗುಡಿಯ ಮುಂದೆ ಕಂಡುಬರುತ್ತವೆ. ದೇವರು ತನ್ನ ಕೋರಿಕೆಗಳನ್ನು ಈಡೇರಿಸಿದಾಗ ಹರಕೆಯನ್ನು ಒಪ್ಪಿಸುವುದು ಈಗಲೂ ಪ್ರಚಲಿತದಲ್ಲಿರುವ ವಿಷಯವಾಗಿದೆ. ಅದು ಹಣ, ಶ್ರಮದಾನ ಅಥವಾ ಮಾನಸಿಕ ದಂಡನೆಯ ರೂಪದಲ್ಲಿರುತ್ತಿತ್ತು. ಪ್ರಾಚೀನ ಕಾಲದಲ್ಲಿ ದೇವರಿಗೆ ತಮ್ಮ ಪ್ರಾಣವನ್ನೇ ಅರ್ಪಿಸುವ ಪದ್ಧತಿಗಳು ರೂಢಿಯಲ್ಲಿದ್ದವು. ತಮ್ಮ ಪ್ರಾಣವನ್ನು ಬಲಿಕೊಡಲು ಅವರು ಹಲವಾರು ವಿಧಾನಗಳನ್ನು ಅನುಸರಿಸುತ್ತಿದ್ದರು. ಅಂತಹ ಆತ್ಮಬಲಿದಾನ ಪದ್ಧತಿಗಳಲ್ಲಿ 'ಶೂಲಬಲಿ'ಯೂ ಒಂದು. ಎತ್ತರವಾದ ಕಂಭವನ್ನು ಏರಿ ನೆಲದಲ್ಲಿ ಚುಚ್ಚಿರುವ ಖಡ್ಗ, ಶೂಲ ಅಥವಾ ಬಾಣಗಳ ಮೇಲೆ ಬಿದ್ದು ಪ್ರಾಣಾರ್ಪಣೆಗೈಯ್ಯುವ ಪದ್ಧತಿಯನ್ನು 'ಶೂಲಬಲಿ' ಎಂದು ಕರೆಯುವರು. ಹಿರೇಕೆರೂರು ತಾಲೂಕಿನ ಆಲದಗೇರಿಯಲ್ಲಿ ಬಹಳ ಅಪರೂಪದ ಒಂದು ಶೂಲಬಲಿಯ ಸ್ಮಾರಕ ಶಿಲ್ಪವಿದೆ. ನಾಲ್ಕು ಹಂತಗಳನ್ನು ಒಳಗೊಂಡ ಈ ಶಾಸನಶಿಲ್ಪವು ಶೂಲದ ಮೇಲೆ ಬಿದ್ದು ಬಲಿಯಾಗುವ ವಿಶೇಷ ಸನ್ನಿವೇಶವನ್ನು ಕಣ್ಣಿಗೆ ಕಟ್ಟುವಂತೆ ಬಿಂಬಿಸುತ್ತದೆ.

## ಶರಣಾಗತರ ರಕ್ಷಣೆ : ಒಂದು ಮೌಲ್ಯ

ಶರಣಾದವರನ್ನು ಅಥವಾ ತನ್ನನ್ನು ಕಾಪಾಡೆಂದು ಮೊರೆಹೊಕ್ಕವರನ್ನು ಕಾಪಾಡುವುದು ಒಂದು ಮೌಲ್ಯವಾಗಿತ್ತು. ಈ ಸಂದರ್ಭದಲ್ಲಿ ವೀರನಾದವನು ತನ್ನ ಪ್ರಾಣವನ್ನು ಪಣಕ್ಕಿಟ್ಟಾದರೂ ಮೊರೆಹೊಕ್ಕವರನ್ನು ಕಾಪಾಡುತ್ತಿದ್ದನು. ಹುತ್ತವನ್ನೇರಿ ನಿಂತವನನ್ನು, ಹುಲ್ಲುಕಚ್ಚಿ ನಿಂತವನನ್ನು, ಜಲಪ್ರವೇಶ ಮಾಡಿದವನನ್ನು ಮತ್ತು ರಣರಂಗದಲ್ಲಿ ತನ್ನನ್ನು ನಂಬಿದವರನ್ನು ಬಿಟ್ಟು ಬೆನ್ನು ತೋರಿಸಿ ಭಯದಿಂದ ಓಡಿಹೋದವನನ್ನು ಕೊಲ್ಲಬಾರದೆಂಬ ಆದರ್ಶಕ್ಕೆ ಅಂದಿನ ಜನ ಬದ್ಧರಾಗಿದ್ದರು. ಪ್ರಸ್ತುತ ಪ್ರಸಂಗಗಳಲ್ಲಿ ವೈರಿಯಾದವನು ಶರಣಾಗತನಾಗಿ ತನ್ನ ಪ್ರಾಣ ರಕ್ಷಿಸಲು ವೀರನಲ್ಲಿ ಮೊರೆಹೊಕ್ಕ ಅಂಶವನ್ನು ಕಾಣಬಹುದು. ಒಟ್ಟಾರೆಯಾಗಿ ತನಗೆ ಶರಣಾಗತನಾಗಿ ಬಂದಂತವರನ್ನು ರಕ್ಷಿಸಬೇಕು ಎಂಬುದು ಈ ಮೌಲ್ಯದ ಉದ್ದೇಶವಾಗಿತ್ತು.[33] ಇಂಥ ಮೌಲ್ಯ ಪರಿಪಾಲನೆಗಾಗಿ ಅನೇಕ ಯುದ್ಧಗಳು ಜರುಗಿರುವುದನ್ನು ಇತಿಹಾಸದಿಂದ ತಿಳಿಯಬಹುದು. ಪ್ರಾಚೀನ ಗ್ರಂಥಗಳಲ್ಲಿ, ಶಾಸನಗಳಲ್ಲಿ ಅಲ್ಲದೇ ಸ್ಮಾರಕಶಿಲ್ಪಗಳಲ್ಲಿಯೂ ಇಂತಹ ಪ್ರಸಂಗಗಳನ್ನು ಕಾಣಬಹುದು.

ದೇವಿಹೊಸುರಿನ[34] ವೀರಗಲ್ಲೊಂದು ಮಹಾಮಂಡಳೇಶ್ವರನಾದ ಕೀರ್ತಿದೇವರಸನನ್ನು 'ಶರಣಾಗತ ವಜ್ರಪಂಜರ' ಎಂದು ಹೊಗಳಿದೆ. ಇದು ಶರಣಾಗತರ ರಕ್ಷಣೆಯ ಮೌಲ್ಯವನ್ನು ಸೂಚಿಸುತ್ತದೆ. ಕಾಗಿನೆಲ್ಲಿಯ[35] ವೀರಗಲ್ಲೊಂದು 'ಜಿಡುಗೂರ ಮಲ್ಲೆಯನಾಯಕನ ತಮ್ಮ ನೆಕ್ಕಟಿಗ ರಾಜಣಂ ಕಂಡು ಬಪ್ಪ ಕುದುರೆಯಂ ಕರದು ಮೂದಲಿಸಿ ಪರಿದು ತಾಗಿಯಮ್ರ್ಮಿದರಂ

ಕೊಂದು ಅಂಜಿದರಂ ಕಾಯ್ದು ಕಳಿಪಿ' ಎಂದು ಉಲ್ಲೇಖಿಸುತ್ತದೆ. ಇಲ್ಲಿ 'ಅಂಜಿದರಂ ಕಾಯ್ದು ಕಳಿಪಿ' ಎಂಬ ನುಡಿಯು ಶರಣಾಗತರನ್ನು ರಕ್ಷಿಸಿ ಅವರನ್ನು ಸುರಕ್ಷಿತವಾಗಿ ಕಳುಹಿಸಿದ ಅಂಶವನ್ನು ಬಿಂಬಿಸುತ್ತದೆ. ಅದೇ ರೀತಿ ಸರ್ವಂದದ[36] ವೀರಗಲ್ಲೊಂದರಲ್ಲಿ ಬರುವ 'ಊರಳುವಿನ ಸೆಱೆಯ ಮರದ ತುಱುವ ಹಿಂದಿಕ್ಕಿಕೊಂಡು ಕೋಲಾಳ ಕೊಲುತಂ ಬರಲು ಕೀಳಾಳು ಕಾಣಲೊಡಂ ಕೈಮುಗಿಯಲಾ' ಎಂಬ ಉಲ್ಲೇಖವು ಬೈರಡಿಯ ಮಾದಯ್ಯನ ಮಗನಾದ ಜಕ್ಕಯ್ಯನು ರಣರಂಗದಲ್ಲಿ ಕೈಮುಗಿದು ಶರಣಾಗತರಾದವರನ್ನು ಕಾಪಾಡಿದ ವಿಷಯವನ್ನು ಕಾಣಬಹುದು.

ಗುಂಡ-ಬ್ರಹ್ಮಯ್ಯರದೂ ವೀರವ್ರತವಾಗಿದ್ದು, ಶಿವಭಕ್ತರ ರಕ್ಷಣೆಗಾಗಿ ಶೂಲಕ್ಕೇರುವ ಮೂಲಕ ಆತ್ಮಬಲಿದಾನಗೈದವರಿವರು. ಗುಂಡ-ಬ್ರಹ್ಮಯ್ಯರ ಶಿಲ್ಪಗಳ ಲಕ್ಷಣವೆಂದರೆ ಇವರು ಶೂಲಗಳ ಮೇಲೆ ಕುಳಿತಿರುತ್ತಾರೆ. ಇಲ್ಲವೆ ಶೂಲಗಳನ್ನು ತಮ್ಮ ಒಂದು ಕೈಯಲ್ಲಿ ಹಿಡಿದು ಇನ್ನೊಂದು ಕೈಯಲ್ಲಿ ಲಿಂಗ ಹಿಡಿದುಕೊಂಡಿರುತ್ತಾರೆ. ಕೆಲವೊಮ್ಮೆ ಇವರೀರ್ವರು ಇಷ್ಟಲಿಂಗ ಹಿಡಿದು ಕುಳಿತಿದ್ದು, ಸಾಂಕೇತಿಕವಾಗಿ ಇವರ ಪಕ್ಕದಲ್ಲಿ ಅಥವಾ ಕೆಳಗೆ ಎರಡು ಶೂಲಗಳನ್ನು ಕೆತ್ತಿರುತ್ತಾರೆ. ಇವರು ಶರಣಾಗತರಾಗಿ ಬಂದವರನ್ನು ಕಾಪಾಡಲು ಶಿವನನ್ನು ಬೇಕಾದರೆ ಎದುರು ಹಾಕಿಕೊಳ್ಳಬಲ್ಲರು ಎಂಬ ನಂಬಿಕೆ ಇದೆ. ಇಂಥ ಸ್ಮಾರಕ ಶಿಲ್ಪಗಳು ಸಾಮಾನ್ಯವಾಗಿ ವೀರಭದ್ರ ದೇವಾಲಯದ ಆವರಣದಲ್ಲಿ ಕಂಡುಬರುತ್ತವೆ. ಮೂಲತಃ ಹಾವೇರಿಯ ವೀರಭದ್ರ ದೇವಾಲಯದ ಹಿಂಬದಿಯಲ್ಲಿದ್ದ, ಸದ್ಯ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನಾ ಸಂಸ್ಥೆಯಲ್ಲಿರುವ ಶಿಲ್ಪವೊಂದರಲ್ಲಿ ಗುಂಡ-ಬ್ರಹ್ಮಯ್ಯರು ಶೂಲದ ಮೇಲೆ ಕುಳಿತಿದ್ದಾರೆ. ಎಡಗೈಯಲ್ಲಿ ಇಷ್ಟಲಿಂಗವನ್ನು ಹಿಡಿದು ಬಲಗೈಯಿಂದ ಅದನ್ನು ಮುಚ್ಚಿದ್ದಾರೆ. ಇವರು ಕೊರಳಿಗೆ, ಮುಂಗೈಗೆ, ರಟ್ಟೆಗಳಿಗೆ ಮತ್ತು ತಲೆಗೆ ರುದ್ರಾಕ್ಷಿ ಸರ ಧರಿಸಿದ್ದಾರೆ. ಕಿವಿಗಳಲ್ಲಿ ಕುಂಡಲಗಳಿವೆ. ಇವುಗಳಲ್ಲಿ ಒಂದಕ್ಕೆ ಮೀಸೆ ಇಲ್ಲ (ಗುಂಡಯ್ಯ) ಇನ್ನೊಂದಕ್ಕೆ ಮೀಸೆ ಮತ್ತು ಗಡ್ಡ (ಬ್ರಹ್ಮಯ್ಯ) ಇದೆ. ಬ್ಯಾಡಗಿ ತಾಲೂಕಿನ ಗುಂಡೇನಹಳ್ಳಿ ಎಂಬ ಗ್ರಾಮದಲ್ಲಿ ಗುಂಡ-ಬ್ರಹ್ಮಯ್ಯರ ದೇವಾಲಯವಿದ್ದು, ಈ ದೇವಾಲಯದಿಂದಲೇ ಗ್ರಾಮಕ್ಕೆ ಗುಂಡೇನಹಳ್ಳಿ ಎಂಬ ಹೆಸರು ಬಂದಿತೆಂದು ಗ್ರಾಮಸ್ಥರು ಹೇಳುತ್ತಾರೆ.

## ಅಡಿಟಿಪ್ಪಣಿಗಳು

1. Govt. Of India, 2011, Census of India, District Census Hand Book, Dharwad District, p -1
2. ಕಲಬುರ್ಗಿ ಎಂ. ಎಂ., 1980, ಸಮಾದಿ-ಬಲಿದಾನ-ವೀರಮರಣ ಸ್ಮಾರಕಗಳು, ಬೆಂಗಳೂರು ಐ.ಬಿ.ಎಚ್. ಪ್ರಕಾಶನ. ಪು. 67.
3. ನಾಗಯ್ಯ ಜೆ.ಎಂ., 1917, ಆತ್ಮಬಲಿದಾನ, ವಿಜಯ ವಿಕ್ರಮ ಪ್ರಕಾಶನ, ಹುಬ್ಬಳ್ಳಿ. ಪು. 1-5.
4. ಸುಬ್ರಾಯ ಭಟ್ಟ ಪಿ., 1975, ರನ್ನ : ಗದಾಯುದ್ಧ ದರ್ಪಣ ವ್ಯಾಖ್ಯಾನ, ಪು. 53.
5. ಶೇಷಶಾಸ್ತ್ರಿ ಆರ್., 2004, ಕರ್ನಾಟಕದ ವೀರಗಲ್ಲುಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ಪು. 188.
6. ಎಸ್.ಐ.ಐ. (South Indian Inscriptions) ಸಂ. 18, ಶಾ.ಸಂ. 225, ಗುಡ್ಡದಾನ್ವೇರಿ, ತಾ: ರಾಣೆಬೆನ್ನೂರು, ಪು. 298-99.
7. ಅದೇ, ಶಾ.ಸಂ. 236, ಬೆಳವಿಗಿ, ತಾ: ಹಾವೇರಿ, ಪು. 312.
8. ಅದೇ, ಶಾ.ಸಂ. 266, ಹೊಮ್ಮರಡಿ, ತಾ: ಹಾವೇರಿ, ಪು. 348.
9. ಅದೇ, ಶಾ.ಸಂ. 298, ಗುತ್ತಲ, ತಾ: ಹಾವೇರಿ, ಪು. 398-99.
10. ಅದೇ, ಶಾ.ಸಂ. 412, ಕಡಕೋಳ, ತಾ: ಸವಣೂರು, ಪು. 478.
11. ಎಸ್.ಐ.ಐ. ಸಂ. 20, ಶಾ.ಸಂ. 126,169,330, ಕಲಕೇರಿ, ತಾ: ಹಾನಗಲ್ಲು, ಪು. 163-64,212, 13,351.
12. ಕೆ.ಐ. (Karnataka Inscriptions) ಸಂ. 5, ಶಾ.ಸಂ. 97, ತಿಳವಳ್ಳಿ, ತಾ: ಹಾನಗಲ್ಲು, ಪು.295-96.
13. ಕೆ.ಐ. ಸಂ. 4, ಶಾ.ಸಂ. 17, ಎಮ್ಮಿಗನೂರು, ತಾ: ಹಿರೇಕೆರೂರು,
14. ಎಸ್.ಐ.ಐ. ಸಂ. 18, ಶಾ.ಸಂ. 126, ಹತ್ತಿಮತ್ತೂರು, ತಾ: ಸವಣೂರು, ಪು. 157-59.
15. ಅದೇ, ಶಾ.ಸಂ. 337, ದೇವಿಹೊಸೂರು, ತಾ: ಹಾವೇರಿ, ಪು. 433-34.
16. ಕೆ.ಐ. 2, ಶಾ.ಸಂ. 17, ತಿಳವಳ್ಳಿ, ತಾ: ಹಾನಗಲ್ಲು,
17. ಎಸ್.ಐ.ಐ. ಸಂ. 20, ಶಾ.ಸಂ. 250, ಬಾಳಂಬೀಡು, ತಾ: ಹಾನಗಲ್ಲು,
18. ಕೆ.ಐ. 6, ಶಾ.ಸಂ. 36, ಮೂತ್ತೂರು, ತಾ: ಹಿರೇಕೆರೂರು, ಪು. 88-89.
19. ಎಸ್.ಐ.ಐ. ಸಂ. 20, ಶಾ.ಸಂ. 126, ಕಲಕೇರಿ, ತಾ: ಹಾನಗಲ್ಲು, ಪು. 163-64.
20. ಕಲಬುರ್ಗಿ ಎಂ.ಎಂ.(ಸಂ.), 1975, ಧಾರವಾಡ ಜಿಲ್ಲೆಯ ಶಾಸನ ಸೂಚಿ, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ಪು. 66.
21. ಎಸ್.ಐ.ಐ. ಸಂ. 18, ಶಾ.ಸಂ. 254, ಕಳ್ಳಿಹಾಳ, ತಾ: ಹಾವೇರಿ, ಪು. 339.
22. ಅದೇ, ಶಾ.ಸಂ. 169, ಕಾಗಿನೆಲೆ, ತಾ: ಬ್ಯಾಡಗಿ, ಪು. 231.
23. ಕೆ.ಐ. 6, ಶಾ.ಸಂ. 26, ಮೂತ್ತೂರು, ತಾ: ಹಿರೇಕೆರೂರು, ಪು. 58-59.
24. ಕಲಬುರ್ಗಿ ಎಂ.ಎಂ.(ಸಂ.), 1975, ಧಾರವಾಡ ಜಿಲ್ಲೆಯ ಶಾಸನ ಸೂಚಿ, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ಪು. 61.
25. ಎ.ಇ. (Epigraphia Indica) ಸಂ. 5, ಅಬ್ಬಲೂರು, ತಾ: ಹಿರೇಕೆರೂರು, ಪು. 261-65.
26. ಎಸ್.ಐ.ಐ. ಸಂ. 18, ಶಾ.ಸಂ. 215, ಅಂತರವಳ್ಳಿ, ತಾ: ರಾಣೆಬೆನ್ನೂರು, ಪು. 291-92.
27. ಅದೇ, ಶಾ.ಸಂ. 217, ಸರ್ವಂದ, ತಾ: ರಾಣೆಬೆನ್ನೂರು, ಪು. 293-94.
28. ಎಸ್.ಐ.ಐ. ಸಂ. 18, ಶಾ.ಸಂ. 262, ಬೆನಕನಕೊಂಡ, ತಾ: ರಾಣೆಬೆನ್ನೂರು, ಪು. 344-45.
29. ಹಿರೇಮಠ ಎಸ್.ಎಸ್., 1980, ವೀರವ್ರತ-ವೀರಭಕ್ತಿ, ಸಾಧನೆ ಸಂಪುಟ-9/1, ಪು.21-26.
30. ಎ.ಇ. 5, ಶಾ.ಸಂ. 245, ಅಬ್ಬಲೂರು, ತಾ: ಹಿರೇಕೆರೂರು.
31. ಎ.ಇ. 29, ಶಾ.ಸಂ. 19, ಅಬ್ಬಲೂರು, ತಾ: ಹಿರೇಕೆರೂರು.
32. ನಾಗಯ್ಯ ಜೆ.ಎಂ., 1917, ಆತ್ಮಬಲಿದಾನ, ಹುಬ್ಬಳ್ಳಿ ವಿಜಯ ವಿಕ್ರಮ ಪ್ರಕಾಶನ, ಪು. 573.
33. ಅದೇ, ಪು. 39.
34. ಎಸ್.ಐ.ಐ. ಸಂ. 18, ಶಾ.ಸಂ. 353, ದೇವಿಹೊಸೂರು, ತಾ: ಹಾವೇರಿ, ಪು. 444.
35. ಅದೇ, ಶಾ.ಸಂ. 169, ಕಾಗಿನೆಲೆ, ತಾ: ಬ್ಯಾಡಗಿ, ಪು. 231.
36. ಅದೇ, ಶಾ.ಸಂ. 217, ಸರ್ವಂದ, ತಾ: ರಾಣೆಬೆನ್ನೂರು, ಪು. 293-94.

■■

APPROVED BY UGC CARE

ISSN : 2249-2429 ಸಂಶೋಧನೆ RNI REG.NO.KARKAN/2011/38712

# ಕರ್ನಾಟಕದಲ್ಲಿ ಇ–ಆಡಳಿತ : ಕರ್ನಾಟಕ–ಒನ್ ಯೋಜನೆಯ ಒಂದು ಅಧ್ಯಯನ

✍ **ಡಾ. ಜಗದೀಶ ಹೆಚ್.**, ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಗೌರಿಬಿದನೂರು, ಚಿಕ್ಕಬಳ್ಳಾಪುರ ಜಿಲ್ಲೆ, ಕರ್ನಾಟಕ.

✍ **ಡಾ. ಸಂದೀಪ್ ಜಿ. ತಿವಾರಿ**, ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮನಹಳ್ಳಿ, ಬೀದರ್, ಕರ್ನಾಟಕ.

*ಸಾರಾಂಶ*

*ಕರ್ನಾಟಕದಲ್ಲಿ ಇ–ಆಡಳಿತ ಇಲಾಖೆಯು ಮಾಹಿತಿ ಸಂವಹನ ಮತ್ತು ತಂತ್ರಜ್ಞಾನದ ಮೂಲಕ ಆಡಳಿತ ಸೇವೆಗಳನ್ನು ಜನರಿಗೆ ತಲುಪಿಸಲು ವಿವಿಧ ಉಪಕ್ರಮಗಳಲ್ಲಿ ಕರ್ನಾಟಕ–ಒನ್ ಕೂಡ ಒಂದಾಗಿದೆ. ಕರ್ನಾಟಕ ಸರ್ಕಾರದ ಈ ಉಪಕ್ರಮವು, ಒಂದೇ ವೇದಿಕೆಯ ಮೂಲಕ ನಾಗರಿಕ–ಕೇಂದ್ರಿತ ಸೇವೆಗಳನ್ನು ಒದಗಿಸುವ ಗುರಿಯನ್ನು ಹೊಂದಿದೆ. ಇದು ವಿವಿಧ ಸರ್ಕಾರಿ ಸೇವೆಗಳು ಮತ್ತು ಮಾಹಿತಿಯನ್ನು ಸಂಯೋಜಿಸುವ ಡಿಜಿಟಲ್ ವೇದಿಕೆಯಾಗಿದ್ದು, ನಾಗರಿಕರು ಅವುಗಳನ್ನು ಅನುಕೂಲಕರವಾಗಿ ಮತ್ತು ಪರಿಣಾಮಕಾರಿಯಾಗಿ ಪ್ರವೇಶಿಸಲು ಅನುವು ಮಾಡಿಕೊಡುತ್ತದೆ. ಈ ಲೇಖನದಲ್ಲಿ ಕರ್ನಾಟಕ–ಒನ್ ಯೋಜನೆಯ ಮೂಲಕ ನೀಡುತ್ತಿರುವ ಸೇವೆಗಳು, ಪರಿಣಾಮಕಾರಿತ್ವ, ಸವಾಲುಗಳ ಮತ್ತು ಪರಿಹಾರವನ್ನು ತಿಳಿಯಬಹುದಾಗಿದೆ.*

*ಮುಖ್ಯ ಪದಗಳು : ಇ–ಆಡಳಿತ, ಮಾಹಿತಿ, ಸಂವಹನ, ತಂತ್ರಜ್ಞಾನ,ಕರ್ನಾಟಕ–ಒನ್.*

## 1. ಇ–ಆಡಳಿತ

ಇ–ಆಡಳಿತವು ಸಾರ್ವಜನಿಕ ಸೇವೆಗಳ ವಿತರಣೆಯನ್ನು ಸುಧಾರಿಸಲು ಮತ್ತು ಸರ್ಕಾರ ಮತ್ತು ನಾಗರಿಕರ ನಡುವಿನ ಸಂಬಂಧವನ್ನು ಬಲಪಡಿಸಲು ಮಾಹಿತಿ ಮತ್ತು ಸಂವಹನ ತಂತ್ರಜ್ಞಾನಗಳ (ICT) ಬಳಕೆಯನ್ನು ಸೂಚಿಸುತ್ತದೆ. ಇದು ದಕ್ಷ, ಪರಿಣಾಮಕಾರಿ, ಪಾರದರ್ಶಕ ಮತ್ತು ಸಹಭಾಗಿತ್ವದ ಆಡಳಿತವನ್ನು ಒದಗಿಸಲು ಡಿಜಿಟಲ್ ತಂತ್ರಜ್ಞಾನಗಳ ಬಳಕೆಯನ್ನು ಒಳಗೊಂಡಿರುತ್ತದೆ.

## 2. ಕರ್ನಾಟಕದಲ್ಲಿ ಇ–ಆಡಳಿತ

ಇ–ಆಡಳಿತವನ್ನು ಅನುಷ್ಠಾನಗೊಳಿಸುತ್ತಿರುವ ಮುಂಚೂಣಿಯ ರಾಜ್ಯಗಳಲ್ಲಿ ಕರ್ನಾಟಕವೂ ಒಂದಾಗಿದೆ, ಕರ್ನಾಟಕ ರಾಜ್ಯವು ಕಳೆದ ಕೆಲವು ದಶಕಗಳಿಂದ ಮಾಹಿತಿ ತಂತ್ರಜ್ಞಾನ ಕ್ರಾಂತಿಯ ಕೇಂದ್ರ ಬಿಂದುವಾಗಿದ್ದು, ಕರ್ನಾಟಕದ ರಾಜಧಾನಿ ಬೆಂಗಳೂರು ಸಿಲಿಕಾನ್ ವ್ಯಾಲಿ ಎಂದು ಪ್ರಖ್ಯಾತಿ ಪಡೆದಿದೆ. ಇಲ್ಲಿ ಮಾಹಿತಿ ತಂತ್ರಜ್ಞಾನ ದೈತ್ಯ ಕಂಪನಿಗಳಾದ ಟಿಸಿಎಸ್, ಇನ್ಫೋಸಿಸ್, ವಿಪ್ರೋ, ಅಸ್ಸೆಂಚರ್, ಐಬಿಎಂ ಮುಂತಾದ ಕಂಪನಿಗಳ ಸ್ಥಾಪನೆಯಿಂದಾಗಿ ಕರ್ನಾಟಕ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದೆ. ಕರ್ನಾಟಕದ ಮುಖ್ಯ ಮಂತ್ರಿಗಳಾಗಿದ್ದ ಶ್ರೀಯುತ ಎಸ್. ಎಂ. ಕೃಷ್ಣ ನೇತೃತ್ವದ ಸರ್ಕಾರವು ಇ–ಆಡಳಿತವನ್ನು ಕರ್ನಾಟಕದಲ್ಲಿ ಜಾರಿಗೆ ತಂದಿತು. ನಂತರ, ಕರ್ನಾಟಕ ಇ–ಆಡಳಿತದಲ್ಲಿ ಯಶಸ್ಸು ಹೊಂದಿ ಭಾರತದಲ್ಲಿ ಇ–ಆಡಳಿತಕ್ಕೆ ಒಳಪಟ್ಟ ರಾಜ್ಯವಾಗಿ ಬೆಳೆಯುತ್ತಿದೆ. ಇ–ಆಡಳಿತದ ಮೂಲಕ ಸರ್ಕಾರಿ ವ್ಯವಸ್ಥೆಯನ್ನು ಬಲಗೊಳಿಸುವುದು, ಸಾರ್ವಜನಿಕರಿಗೆ ಸರಳ, ನೈತಿಕ ಹೊಣೆಗಾರಿಕೆಯುಳ್ಳ ಆಡಳಿತ ಸೇವೆಗಳನ್ನು ಒದಗಿಸುವಲ್ಲಿ ಕರ್ನಾಟಕ ರಾಜ್ಯವು ಈಗಾಗಲೇ ಯಶಸ್ಸು ಸಾಧಿಸಿದೆ. ಅವುಗಳಲ್ಲಿ ಇ–ಸಂಗ್ರಹಣಾ, ಆಧಾರ್, ನೇರ ನಗದು ವರ್ಗಾವಣೆ (ಡಿಬಿಟಿ), ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶ (ಎಸ್‌ಎಸ್‌ಪಿ) ಮಾನವ ಸಂಪನ್ಮೂಲ ನಿರ್ವಹಣಾ ಯೋಜನೆ (ಹೆಚ್‌ಆರ್‌ಎಂಎಸ್), ಇ–ಆಫೀಸ್ ಮುಂತಾದವುಗಳು.

ಈ ಎಲ್ಲಾ ಯೋಜನೆಗಳು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರಿತಿಸಲ್ಪಟ್ಟವೆ. ಇದಲ್ಲದೆ, ಗ್ರಾಮೀಣ ದೂರಸಂಪರ್ಕ ಕೇಂದ್ರಗಳ ಸ್ಥಾಪನೆ ಸರ್ಕಾರಿ ಇಲಾಖೆ ಹಾಗೂ ರಾಜ್ಯ ಸರ್ಕಾರಗಳ ಉದ್ದಿಮೆಗಳಿಗೆ ಇ–ಯಂತ್ರಗಳ ಖರೀದಿ ಮತ್ತು ರಾಜ್ಯಾದ್ಯಂತ ಕಂಪ್ಯೂಟರ್ ಜಾಲ ಸ್ಥಾಪಿಸುವ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರ ಕಾರ್ಯಪ್ರವೃತ್ತವಾಗಿದೆ. ಇ–ಆಡಳಿತ ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಸರ್ಕಾರಿ ಮತ್ತು ಖಾಸಗಿ ಸಹಭಾಗಿತ್ವದಂತಹ ನೂತನ ಮಾದರಿಗಳನ್ನು ಜಾರಿಗೆ ತರಲಾಗಿದೆ.

ಕರ್ನಾಟಕದಲ್ಲಿ ಇ–ಆಡಳಿತದ ಕೇಂದ್ರವು ಕರ್ನಾಟಕ ಸಂಘ–ಸಂಸ್ಥೆಗಳ ಕಾಯಿದೆ 1960ರ ಅಡಿಯಲ್ಲಿ ಕರ್ನಾಟಕ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಭಾಗವಾಗಿದೆ. ಅದನ್ನು 2003ರಲ್ಲಿ ಸ್ಥಾಪಿಸಲಾಯಿತು. ಕರ್ನಾಟಕದಲ್ಲಿ ಇ–ಆಡಳಿತ ಕೇಂದ್ರವು ಕರ್ನಾಟಕ ವಿವಿಧ ಇಲಾಖೆಗಳ ಆಡಳಿತವನ್ನು ಸಾಕಾರಗೊಳಿಸಿ ಅನುಷ್ಠಾನಗೊಳಿಸಿ ಸಮನ್ವಯಗೊಳಿಸಿದೆ. ಸರ್ಕಾರದ ಪ್ರಕ್ರಿಯೆಗಳಲ್ಲಿ ಮಾಹಿತಿ ತಂತ್ರಜ್ಞಾನದ ಸಲಕರಣೆಗಳನ್ನು ಅಳವಡಿಸುವುದನ್ನು ಅನುವು ಮಾಡುವುದರ ಮೂಲಕ ಆಡಳಿತದಲ್ಲಿ ಪಾರದರ್ಶಕತೆ ಮತ್ತು ದಕ್ಷತೆಯನ್ನು ಹೆಚ್ಚಿಸುವುದು ಇದರ ಉದ್ದೇಶವಾಗಿರುತ್ತದೆ.

ಇ–ಆಡಳಿತದ ಅನುಷ್ಠಾನದ ಅಧೀನ ಕಛೇರಿಯಿಂದ ಜಾರಿಗೊಳ್ಳುತ್ತಿರುವ ಯೋಜನೆಗಳು ಈ ಮುಂದಿನಂತಿವೆ. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ–ಆಡಳಿತ) ಗೆ ಸಂಬಂಧಿಸಿದ ಕರ್ನಾಟಕ ಸರ್ಕಾರ ಸಚಿವಾಲಯದ ಸ್ಥಳೀಯ ನಿಸ್ತಂತು ಜಾಲ (ಸೆಕ್ಲಾನ್) ರಾಜ್ಯ ದತ್ತಕೇಂದ್ರ, ಕರ್ನಾಟಕ ವಿಸ್ತೃತ ಜಾಲ (ಕೆಸ್ವಾನ್) ಇ–ಸಂಗ್ರಹಣಾ, ಮಾನವ ಸಂಪನ್ಮೂಲ ನಿರ್ವಹಣಾ ಯೋಜನೆ (ಹೆಚ್‌ಆರ್‌ಎಂಎಸ್), ಆಧಾರ್, ಕರ್ನಾಟಕ ರಾಜ್ಯ ವೆಬ್‌ಪೋರ್ಟ್‌ಲ್ ಇತ್ಯಾದಿ ಯೋಜನೆಗಳನ್ನು ಇ–ಆಡಳಿತ ಕೇಂದ್ರದ ಮೂಲಕ ಜಾರಿಗೊಳಿಸಲಾಗುತ್ತಿದೆ. ವಿದ್ಯುನ್ಮಾನ ನಾಗರೀಕ ಸೇವಾ ವಿತರಣಾ ನಿರ್ದೇಶನಾಲಯದ ಮೂಲಕ, ಬೆಂಗಳೂರು–ಒನ್, ಸಮಗ್ರ ನಾಗರೀಕ ಸೇವಾ ಕೇಂದ್ರಗಳ ಯೋಜನೆ, ಕರ್ನಾಟಕ–ಒನ್ ಯೋಜನೆ, ಇ–ಜಿಲ್ಲಾ ಯೋಜನೆ, ಗ್ರಾಮ ಮಟ್ಟದಲ್ಲಿ ಸಾಮಾನ್ಯ ಸೇವಾ ಕೇಂದ್ರಗಳು ಮತ್ತು ಮೊಬೈಲ್ ಆಡಳಿತ ಯೋಜನೆಗಳನ್ನು ಜಾರಿಗೊಳಿಸುತ್ತಿದೆ.

ಕರ್ನಾಟಕ ಸರ್ಕಾರದ ಇ–ಆಡಳಿತದ ಉದ್ದೇಶಗಳು ಈ ಮುಂದಿನಂತಿವೆ, ಅವುಗಳೆಂದರೆ: ವಿಶ್ವದಾದ್ಯಂತ ಇರುವ ಉತ್ಕೃಷ್ಟ ಇ–ಆಡಳಿತ ವಿಷಯಗಳನ್ನು ಅಭ್ಯಸಿಸಿ ಮತ್ತು ಸಂಕಲಿಸಿ ಅವುಗಳಿಗೆ ಸಂಬಂಧಿಸಿದಂತೆ ಸರ್ಕಾರಕ್ಕಾಗಿ ಮಾನದಂಡ ನಿಗದಿಪಡಿಸುವುದು. ದತ್ತಾಂಶ ಸಂಗ್ರಹಣೆ, ಭದ್ರತೆ, ಪಾವತಿ, ಸ್ಥಳೀಯ ಭಾಷೆಯಲ್ಲಿ ಅಳವಡಿಕೆ (ಕನ್ನಡ ಭಾಷೆ), ಆನ್‌ಲೈನ್ ಸಂಗ್ರಹಣೆ, ಭೌಗೋಳಿಕ ಮಾಹಿತಿ ಸೇವೆ ಇತ್ಯಾದಿಗಳು

ISSN : 2249-2429 ಸಂಶೋಧನೆ RNI REG.NO.KARKAN/2011/38712

ಸೇರಿದಂತೆ ಮಾನದಂಡಗಳನ್ನು ಅಭಿವೃದ್ಧಿಪಡಿಸುವುದು. ವಿವಿಧ ಇಲಾಖೆಗಳಲ್ಲಿ ಇ–ಆಡಳಿತ ಚಟುವಟಿಕೆಗಳ ಅಭಿವೃದ್ಧಿಯನ್ನು ಅನುವು ಮಾಡುವುದು.

ಇ–ಆಡಳಿತದ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ಒಂದಕ್ಕಿಂತ ಹೆಚ್ಚಿನ ಇಲಾಖೆಗಳನ್ನು ಸೇರಿಸಿ ಅನುಷ್ಠಾನಗೊಳಿಸುವುದು ಮತ್ತು ಸಮಗ್ರಗೊಳಿಸುವುದು. ಇ–ಆಡಳಿತಕ್ಕೆ ಅಗತ್ಯವಿರುವ ಸಾಮಾನ್ಯ ಮಾಹಿತಿ ತಂತ್ರಜ್ಞಾನ ಸೌಲಭ್ಯವನ್ನು ಸೃಷ್ಟಿಸುವುದು ಮತ್ತು ನಿರ್ವಹಿಸುವುದು. ಕರ್ನಾಟಕ ರಾಜ್ಯಾದ್ಯಂತ ಮಾಹಿತಿ ತಂತ್ರಜ್ಞಾನದ ನೈಪುಣ್ಯತೆಯನ್ನು ಅಭಿವೃದ್ಧಿಗೊಳಿಸಲು ಒಂದು ಸುಸ್ಥಿರ ತಂತ್ರವನ್ನು ರೂಪಿಸುವುದು.

ಕರ್ನಾಟಕ ಇ–ಆಡಳಿತ ಕೇಂದ್ರವು ಸಂಘಗಳ ನೋಂದಣಿ ಅಧಿನಿಯಮದಡಿ ನೋಂದಾಯಿಸಲಾದ ಸಂಸ್ಥೆಯಾಗಿದೆ. ಈ ಕೆಳಗಿನ ಯೋಜನೆಗಳನ್ನು ಸೇರಿದಂತೆ ಹಲವಾರು ಯೋಜನೆಗಳನ್ನು ಕರ್ನಾಟಕ ಇ–ಆಡಳಿತ ಕೇಂದ್ರದ ಮೂಲಕ ಜಾರಿಗೊಳಿಸಲಾಗುತ್ತಿದೆ. ಅವುಗಳೆಂದರೆ ಇ–ಸಂಗ್ರಹಣಾ, ಕರ್ನಾಟಕ ವಿಸ್ತೃತ ಜಾಲ ಯೋಜನೆ, ಆಧಾರ್, ಕರ್ನಾಟಕ ರೆಸಿಡೆಂಟ್ ಡೇಟಾ ಹಬ್, ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶ, ನೇರ ನಗದು ವರ್ಗಾವಣೆ, ರಾಜ್ಯ ದತ್ತಾಂಶ ಕೇಂದ್ರ, ಮಾನವ ಸಂಪನ್ಮೂಲ ನಿರ್ವಹಣಾ ಯೋಜನೆ, ಕರ್ನಾಟಕ ಸರ್ಕಾರ ಸಚಿವಾಲಯದ ಸ್ಥಳೀಯ ನಿಸ್ತಂತು ಚಾಲನೆ, ಸಾಮರ್ಥ್ಯ ವರ್ಧನೆ, ಕನ್ನಡ ಕಂಪ್ಯೂಟಿಂಗ್, ಬಿಗ್ ಡಾಟಾ, ಇ–ಆಫೀಸ್, ಕರ್ನಾಟಕ ರಾಜ್ಯ ವೆಬ್ ಪೋರ್ಟಲ್, ರೈತರ ನೋಂದಣಿ ಮತ್ತು ಏಕೀಕೃತ ಫಲಾನುಭವಿ ಮಾಹಿತಿ ವ್ಯವಸ್ಥೆ, ಆರ್ ಟಿ ಐ ಆನ್‌ಲೈನ್, ಡಿಜಿಲಾಕರ್, ಮಾಹಿತಿ ಕಣಜ, ಕುಟುಂಬ ಗುರುತಿನ ಸಂಖ್ಯೆ, ಮೈಗವ್ ಕರ್ನಾಟಕ, ರಾಜ್ಯ ಮುಕ್ತ ದತ್ತಾಂಶ ಉಪಕ್ರಮ, ಸಾರ್ವಜನಿಕ ಕುಂದು ಕೊರತೆಗಳ ನಿರ್ವಹಣೆ, ಇನ್ಫೋನಾಮಿಕ್ಸ್.

ವಿದ್ಯುನ್ಮಾನ ನಾಗರಿಕ ಸೇವಾ ವಿತರಣಾ ನಿರ್ದೇಶನಾಲಯದ (ಇಡಿಸಿಎಸ್) ಮೂಲಕ ಈ ಮುಂದಿನ ಯೋಜನೆಗಳನ್ನು ಜಾರಿಗೊಳಿಸಲಾಗುತ್ತಿದೆ. ಬೆಂಗಳೂರು–ಒನ್ ಯೋಜನೆ, ಕರ್ನಾಟಕ–ಒನ್ ಯೋಜನೆ, ಸೇವಾ ಸಿಂಧು ಯೋಜನೆ, ಜನಸೇವಕ ಯೋಜನೆ, ಗ್ರಾಮ ಒನ್ ಯೋಜನೆ, ಮೊಬೈಲ್ ಒನ್ ಯೋಜನೆಯಾಗಿವೆ.

ಕರ್ನಾಟಕ ಸರ್ಕಾರದ ಅಧೀನದಲ್ಲಿ ಬರುವ ಇಲಾಖೆ/ಸಂಸ್ಥೆಗಳ ತಂತ್ರಾಂಶ ಅಭಿವೃದ್ಧಿ ಕಾರ್ಯಕ್ರಮಗಳನ್ನು ನಿರ್ವಹಿಸಲು 'ಸೆಂಟರ್ ಫಾರ್ ಸ್ಮಾರ್ಟ್ ಗವರ್ನೆನ್ಸ್' (ಸಿಎಸ್‌ಜಿ)ಅನ್ನು ರಾಜ್ಯದ ಇ–ಆಡಳಿತ ಇಲಾಖೆಯಡಿ ಸ್ಥಾಪಿಸಲಾಗಿದೆ.

ಕರ್ನಾಟಕ ಸರ್ಕಾರವು ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರವನ್ನು ದೂರ ಸಂವೇದಿ (ಪ್ರೋಗ್ರಾಮೆಟ್ರಿ ಸೇರಿದಂತೆ) ಮತ್ತು ಜಿ.ಐ.ಎಸ್ (ಭೌಗೋಳಿಕ ಮಾಹಿತಿ ಕೇಂದ್ರ) ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಸ್ಥಾಪಿಸಿದೆ.

ವಿವಿಧ ಇಲಾಖೆಗಳ ಇ–ಆಡಳಿತ ಯೋಜನೆಗಳ ಸಮರ್ಪಕ ರಚನೆ, ಅನುಮೋದನೆ ಮತ್ತು ಅನುಷ್ಠಾನಗಳ ಬಗ್ಗೆ ಕಾರ್ಯವಿಧಾನವನ್ನು ನಿಗದಿಪಡಿಸಲಾಗಿದೆ. ಈ ಕಾರ್ಯ ವಿಧಾನದನ್ವಯ ಪ್ರತಿ ಇಲಾಖೆಯು, ಆಯಾ ವರ್ಷದಲ್ಲಿ ಕೈಗೊಳ್ಳುವ ಗಣಕೀಕರಣ ಯೋಜನೆಗಳನ್ನು ಒಳಗೊಂಡ ಇ–ಆಡಳಿತ ವಾರ್ಷಿಕ ಕ್ರಿಯಾ ಯೋಜನೆಯನ್ನು ತಯಾರಿಸಬೇಕಾಗಿರುತ್ತದೆ. ಈ ಕ್ರಿಯಾ ಯೋಜನೆಗಳನ್ನು ಅನುಮೋದಿಸುವ ಅಧಿಕಾರವನ್ನು, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು ಸಿಆಸುಇ (ಇ–ಆಡಳಿತ) ಮತ್ತು ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿಗಳಿಗೆ ನೀಡಲಾಗುತ್ತದೆ.ಈ ಮೂಲಕ ಕರ್ನಾಟಕದಲ್ಲಿ ಇ–ಆಡಳಿತ ಇಲಾಖೆಯು ವಿವಿಧ ಇಲಾಖೆಗಳಿಗೆ ಮತ್ತು ನಾಗರಿಕರಿಗೆ ಆಡಳಿತ ಸೇವೆಗಳನ್ನು ನೀಡುವುದರ ಜೊತೆಗೆ ಪ್ರಸ್ತುತವಾಗಿ, ಭವಿಷ್ಯದಲ್ಲಿ ಇಲಾಖೆಗಳಿಂದ ಹಾಗೂ ನಾಗರಿಕರಿಂದ ಬರಬಹುದಾದ ದೂರುಗಳನ್ನು ಸ್ವೀಕರಿಸಿ ಉತ್ತರಿಸಲು ಜವಾಬ್ದಾರಿಯಾಗಿರುತ್ತದೆ.

## 3. ಕರ್ನಾಟಕ–ಒನ್ ಯೋಜನೆ

ಬೆಂಗಳೂರು–ಒನ್ ಯೋಜನೆಯ ಯಶಸ್ಸನ್ನು ಮನಗಂಡು ಬೆಂಗಳೂರು–ಒನ್ ಮಾದರಿಯಲ್ಲಿಯೇ ರಾಜ್ಯದ ಉಳಿದ ನಗರಗಳಲ್ಲಿ ನಾಗರಿಕ ಸೇವಾ ಕೇಂದ್ರಗಳನ್ನು ಸ್ಥಾಪಿಸಿ ವಿವಿಧ ಸರ್ಕಾರಿ ಹಾಗೂ ಖಾಸಗಿ ಕಂಪನಿಗಳ ಸೇವೆಗಳನ್ನು ಒಂದೇ ಸೂರಿನಡಿ ನೀಡುವ ಉದ್ದೇಶದಿಂದ ಕರ್ನಾಟಕ ಸರ್ಕಾರವು ಕರ್ನಾಟಕ ಒನ್ ಯೋಜನೆಯನ್ನು ಕೈಗೆತ್ತಿಗೊಂಡಿತು. ಕರ್ನಾಟಕಒನ್ ಯೋಜನೆಯನ್ನು ಈಗಾಗಲೇ 24 ನಗರಗಳಾದ ಬಳ್ಳಾರಿ, ಗದಗ, ದಾವಣಗೆರೆ, ಕಲಬುರ್ಗಿ, ಹುಬ್ಬಳ್ಳಿ–ಧಾರವಾಡ, ಮಂಗಳೂರು, ಮೈಸೂರು, ಶಿವಮೊಗ್ಗ, ತುಮಕೂರು, ಬಾಗಲಕೋಟ್, ಕಾರವಾರ, ಉಡುಪಿ, ವಿಜಯಪುರ, ಬೀದರ್, ದಂಡೇಲಿ, ಹಾವೇರಿ, ಹಾಸನ, ಮಂಡ್ಯ, ಕೊಪ್ಪಳ, ಚಿತ್ರದುರ್ಗ, ಬೆಳಗಾವಿಯಲ್ಲಿ, ಸಮಗ್ರ ನಾಗರಿಕ ಸೇವಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಕರ್ನಾಟಕ ಒನ್ ಸೇವೆಗಳನ್ನು ಕೇಂದ್ರಗಳ ಜೊತೆಗೆ, ಕರ್ನಾಟಕಒನ್ ವೆಬ್ಸೈಟ್ (www. karnatakaone.gov.in) ಮೂಲಕ ಕೂಡ ಆನ್ಲೈನ್ ಸೇವೆಗಳನ್ನು ಒದಗಿಸಲಾಗುತ್ತಿದೆ. ಬೆಂಗಳೂರು ನಗರವನ್ನು ಹೊರತು ಪಡಿಸಿ ಕರ್ನಾಟಕ ರಾಜ್ಯದ ಉಳಿದ ನಗರಗಳಲ್ಲಿ ಸ್ಥಾಪಿಸಿರುವ ಕೇಂದ್ರಗಳನ್ನು "ಕರ್ನಾಟಕ–ಒನ್" ಎಂದು ಹೆಸರಿಸಲಾಗಿದೆ.

### 3.1. ಕರ್ನಾಟಕ–ಒನ್ ಯೋಜನೆಯ ಆಕಾಂಕ್ಷೆ

ಒಂದೇ ವೇದಿಕೆಯಡಿ ವಿವಿಧ ಸರ್ಕಾರಿ ಹಾಗೂ ಖಾಸಗಿ ಸೇವೆಗಳನ್ನು, ಮಾಹಿತಿ ತಂತ್ರಜ್ಞಾನ ಉಪಕರಣಗಳನ್ನು ಬಳಸಿ, ವಿವಿಧ ವಿತರಣಾ ವಾಹಿನಿಗಳ ಮೂಲಕ, ಯಾವಾಗಲಾದರೂ, ಎಲ್ಲಿಯಾದರೂ ಸೇವೆಗಳನ್ನು ಲಭಿಸುವಂತೆ ಮಾಡುವುದರ ಜೊತೆಗೆ ಸಮಗ್ರ, ಅನುಕೂಲಕರ, ನ್ಯಾಯೋಚಿತ, ಪರಿಣಾಮಕಾರಿ, ಸುರಕ್ಷಿತ, ಸಮರ್ಥನೀಯ ಹಾಗೂ ನಾಗರಿಕ ಸ್ನೇಹಿ ರೀತಿಯಲ್ಲಿ ಸೇವೆ ಒದಗಿಸುವ ಆಕಾಂಕ್ಷೆಯನ್ನು ಹೊಂದಿರುತ್ತದೆ.

### 3.2. ಕರ್ನಾಟಕ–ಒನ್ ಯೋಜನೆಯ ಧ್ಯೇಯೋದ್ದೇಶ

ಕರ್ನಾಟಕ ಒನ್ ಯೋಜನೆ ವಿವಿಧ ಸರ್ಕಾರಿ ಹಾಗೂ ಖಾಸಗಿ ಸೇವೆಗಳನ್ನು ಒಂದೇ ಸೂರಿನಡಿ ನೀಡುವ ಗುರಿಯನ್ನು ಹೊಂದಿದೆ.

- ವಿವಿಧ ಸರ್ಕಾರಿ ಹಾಗೂ ಖಾಸಗಿ ಸೇವೆಗಳನ್ನು ಒಂದೇಸೂರಿನಡಿ ನಾಗರಿಕ ಸ್ನೇಹಿ ರೀತಿಯಲ್ಲಿ ನೀಡುವುದು.
- ನಾಗರಿಕರ ಅಗತ್ಯ ಅನುಸಾರ ಹೊಣೆಗಾರಿಕೆ, ಪಾರದರ್ಶಕತೆ, ಜವಾಬ್ದಾರಿತನ ವೃದ್ಧಿಸುವುದು.
- ವಿವಿಧ ಸರ್ಕಾರಿ ಇಲಾಖೆಗಳಿಗೆ ಪರಿಣಾಮಕಾರಿ ವೆಚ್ಚದಲ್ಲಿ ಸೇವೆ ಒದಗಿಸುವಂತಹ ಒಂದು ವೇದಿಕೆಯನ್ನು ನೀಡುವುದು.
- ವಿವಿಧ ಸರ್ಕಾರಿ ಇಲಾಖೆಗಳಿಗೆ ದಕ್ಷತೆಯುಳ್ಳ ಆನ್‌ಲೈನ್ ಎಂ.ಐ.ಎಸ್ ಹಾಗೂ ಇ.ಐ.ಎಸ್ ಒದಗಿಸುವುದು.
- ವಿವಿಧ ಸರ್ಕಾರಿ ಇಲಾಖೆಗಳು ತಮ್ಮಮುಖ್ಯ ಕಾರ್ಯಗಳಲ್ಲಿ ಕೇಂದ್ರೀಕರಿಸಲು ಅನುಕೂಲಮಾಡುವುದು.

### 3.3. ಕರ್ನಾಟಕ ಒನ್ ಯೋಜನೆಯ ವೈಶಿಷ್ಟ್ಯತೆಗಳು

- ವಿವಿಧ ಸರ್ಕಾರಿ ಹಾಗೂ ಖಾಸಗಿ ಸೇವೆಗಳನ್ನು ಒಂದೇಸೂರಿನಡಿ ನೀಡಲಾಗುತ್ತಿದೆ.

ISSN : 2249-2429 ಸಂಶೋಧನೆ RNI REG.NO.KARKAN/2011/38712

- ಸೇವೆಗಳನ್ನುಬೆಳಿಗ್ಗೆ 08 ರಿಂದ ಸಂಜೆ 07.00 ರವರೆಗೆ ವರ್ಷದ ಎಲ್ಲಾ ದಿನಗಳು ನೀಡಲಾಗುತ್ತದೆ (ಕಾರ್ಮಿಕರ ದಿನಾಚರಣೆ, ಸ್ವತಂತ್ರ ದಿನಾಚರಣೆ, ಗಣರಾಜ್ಯೋತ್ಸವ, ಚುನಾವಣೆ ಮತ ಚಲಾಯಿಸುವ ದಿನ, ಗಾಂಧಿ ಜಯಂತಿ, ಮತ್ತು ಕನ್ನಡ ರಾಜ್ಯೋತ್ಸವ ಹೊರತುಪಡಿಸಿ).
- ಯಾವುದೇ ಕೇಂದ್ರದ ಯಾವುದೇ ಕೌಂಟರ್‌ಗಳಲ್ಲಿ ಎಲ್ಲಾ ಸೇವೆಗಳನ್ನು ನಾಗರಿಕರು ಪಡೆಯಬಹುದು.
- ನಾಗರಿಕರು ನಗದು/ಚೆಕ್/ಡಿಡಿ/ಕ್ರೆಡಿಟ್/ಡೆಬಿಟ್ ಕಾರ್ಡ್ ಮೂಲಕ ಹಣ ಪಾವತಿಸಬಹುದಾಗಿದೆ.
- ಕರ್ನಾಟಕ ಒನ್ ಕೇಂದ್ರಗಳಲ್ಲಿ ಲಭ್ಯವಿರುವ ಸೇವೆಗಳನ್ನು ಸೇವಾವಾರು ನಿಗಧಿತ ಅವಧಿಯೊಳಗೆ ವಿತರಿಸಬೇಕೆಂದು ಕಡ್ಡಾಯಗೊಳಿಸಿರುವುದರಿಂದ ನಾಗರಿಕರು ಸರದಿ ಸಾಲುಗಳಲ್ಲಿ ವ್ಯಯಿಸುವ ವೇಳೆಯನ್ನು ಉಳಿಸಬಹುದಾಗಿದೆ.
- **ನಾಗರಿಕ ಸ್ನೇಹಿ ಕೇಂದ್ರಗಳು :** ಸಮಗ್ರನಾಗರಿಕ ಕೇಂದ್ರಗಳು ಹವಾನಿಯಂತ್ರಿತ ಕೇಂದ್ರಗಳಾಗಿದ್ದು ಕುಡಿಯುವ ನೀರು, ಟೆಲಿವಿಷನ್, ದಿನಪತ್ರಿಕೆಗಳು ಇತ್ಯಾದಿಗಳ ಸೌಲಭ್ಯಗಳನ್ನು ಹೊಂದಿರುತ್ತವೆ.
- ನಾಗರಿಕರು ಕೇಂದ್ರಗಳಲ್ಲಿ ವ್ಯಯಿಸಬಹುದಾದ ವೇಳೆಯ ನಿಯಂತ್ರಣಕ್ಕಾಗಿ ವಿದ್ಯುನ್ಮಾನ ಸಾಲು ನಿರ್ವಾಹಣಾ ಪದ್ಧತಿಯನ್ನು ಅಳವಡಿಸಲಾಗಿದೆ.
- ಕೇಂದ್ರಗಳಲ್ಲಿ ಲಭ್ಯವಿರುವ ಕೆಲವೇ ಸೇವೆಗಳನ್ನು ಹೊರತುಪಡಿಸಿ ಬೇರೆ ಯಾವುದೇ ಸೇವೆಗೆ ನಾಗರಿಕರು ಸೇವಾ ಶುಲ್ಕವನ್ನು ಪಾವತಿಸಬೇಕಾಗಿರುವುದಿಲ್ಲ.
- ಕರ್ನಾಟಕ ಒನ್ ವೆಬ್ಸೈಟ್ ಮೂಲಕ ಆನ್ ಲೈನ್ ಸೇವೆಗಳನ್ನು ಒದಗಿಸಲಾಗುತ್ತಿದೆ.

### 3.4. ಕರ್ನಾಟಕ ಒನ್ ಯೋಜನೆಯ ಮೂಲಕ ನೀಡುತ್ತಿರುವ ಸೇವೆಗಳು

- **ಆಧಾರ್ :** ಇ–ಆಧಾರ್‌ನ್ನು ಸೃಜಿಸುವುದು, ಆಧಾರ್ ವಿವರಗಳನ್ನು ಆಧುನಿಕರಿಸುವುದು, ಆಧಾರ್ ನೋಂದಣಿ ಮಾಡುವುದು, ಇ–ಕೆವೈಸಿ ಮೂಲಕ ಆಧಾರ್‌ನ್ನು ಹುಡುಕುವುದು.
- **ಸಾರ್ವಜನಿಕ ಶಿಕ್ಷಣ ಇಲಾಖೆ :** ಶಿಕ್ಷಣದ ಹಕ್ಕು (ರೈಟ್ ಟು ಎಜುಕೇಶನ್) ಅಡಿಯಲ್ಲಿ ನೋಂದಣಿಗೆ ಅರ್ಜಿ ಲಭ್ಯವಿದೆ.
- **ಇ–ಸ್ಟಾಂಪ್ :** ಕರ್ನಾಟಕ–ಒನ್ ಕೇಂದ್ರಗಳಲ್ಲಿ ಇ–ಸ್ಟಾಂಪ್ ಪೇಪರ್ ಲಭ್ಯವಿದೆ.
- **ವ್ಯಾಪಾರ :** ಪ್ರಧಾನ ಮಂತ್ರಿ ಬೀದಿ ವ್ಯಾಪಾರಿಗಳಿಗೆ ಆತ್ಮ ನಿರ್ಭರ ನಿಧಿಗೆ ಅರ್ಜಿ ಲಭ್ಯವಿದೆ.
- **ಆಹಾರ ಮತ್ತು ನಾಗರಿಕ ಸರಬರಾಜು:** ರೇಷನ್ ಕಾರ್ಡ್‌ನ ಪ್ರಿಂಟ್ ಲಭ್ಯವಿದೆ.
- **ಅರ್ಜಿ ನಮೂನೆ :** ಸರ್ಕಾರಿ ಇಲಾಖೆಗಳ ಅರ್ಜಿ ನಮೂನೆಯ ವಿತರಣೆ ಮಾಡಲಾಗುತ್ತದೆ.
- **ವಿಮೆ :** ಪ್ರಧಾನ ಮಂತ್ರಿ ಕಿಸಾನ್ ಮಂದಾನ್ ಯೋಜನೆಯ ಅರ್ಜಿ ಲಭ್ಯವಿದೆ.
- **ಕೆಲಸ :** ಕೆಲಸಕ್ಕಾಗಿ ನೋಂದಣಿ ಮಾಡಿಕೊಳ್ಳಬಹುದು.
- **ಎಸ್.ಎಸ್.ಎಲ್.ಸಿ. :** ಮರು ಮೌಲ್ಯಮಾಪನ/ ಮರು ಏಣಿಕೆ/ ಸ್ಕ್ಯಾನ್ ಕಾಪಿಗಾಗಿ ಅರ್ಜಿ ಲಭ್ಯವಿದೆ.
- **ಮಹಾನಗರ ಪಾಲಿಕೆ/ನಗರಸಭೆ/ಪುರಸಭೆ :** ಆಸ್ತಿ ತೆರಿಗೆ ಪಾವತಿ, ಬಿಬಿಎಂಪಿಯಲ್ಲಿ ಖಾತಾ ವರ್ಗಾವಣೆ ಅರ್ಜಿ,ಖಾತಾ ವರ್ಗಾವಣೆಯ ಅರ್ಜಿ, ಖಾತಾ ಪ್ರಮಾಣ ಪತ್ರ ಮತ್ತು ಅನುಮೋದನೆ ಅರ್ಜಿ, ಬಿಬಿಎಂಪಿಯಲ್ಲಿ ಖಾತೆಯ ವಿಭಜನೆಗೆ ಅರ್ಜಿ, ಬಿಬಿಎಂಪಿಯಲ್ಲಿ ಖಾತಾ ನೋಂದಣಿಗಾಗಿ ಅರ್ಜಿ, ಬಿಬಿಎಂಪಿಯಲ್ಲಿ ಖಾತಾ ಸಮ್ಮಿಲನಕ್ಕೆ ಅರ್ಜಿ, ಯುಜಿಡಿಯ ತೆರಿಗೆ ಪಾವತಿ, ಅಕ್ರಮ ಸಕ್ರಮದ ಅರ್ಜಿಗಳು, ಕಟ್ಟಡದ ನಕಾಶೆಯ ಸಮ್ಮತಿಗಾಗಿ ಅರ್ಜಿ, ಜಾಹೀರಾತಿಗಾಗಿ ತೆರಿಗೆ ಪಾವತಿ ಲಭ್ಯವಿದೆ.
- **ಪಾಸ್ ಪೋರ್ಟ್ :** ಪಾಸ್ ಪೋರ್ಟ್ ಅರ್ಜಿಯನ್ನು ಹಾಕಬಹುದು.
- **ಕರ್ನಾಟಕ ರಾಜ್ಯ ಪೊಲೀಸ್ :** ದಾಖಲೆಗಳ ದೃಢೀಕರಣದ ಶುಲ್ಕ, ಸಂಚಾರ ಉಲ್ಲಂಘನೆ ಶುಲ್ಕ ಪಾವತಿ, ಫಿಂಗರ್ ಪ್ರಿಂಟ್ ಪರಿಶೀಲನೆ ಮತ್ತು ಹೋಲಿಕೆಗಾಗಿ ಪೊಲೀಸ್ ಪರಿಶೀಲನೆ ಶುಲ್ಕ, ವಾಹನ ವಿಚಾರಣೆ ವರದಿಗಾಗಿ ಶುಲ್ಕ ಪಾವತಿಸಬಹುದು.
- **ಪದವಿಪೂರ್ವ ಶಿಕ್ಷಣ ಇಲಾಖೆ:** ಮರು ಎಣಿಕೆ / ಮರು ಮೌಲ್ಯಮಾಪನ /ಸ್ಕ್ಯಾನ್ ಪ್ರತಿಗಾಗಿ ಬೋರ್ಡ್ ಅರ್ಜಿ ಹಾಕಬಹುದು.
- **ನಾಡ ಕಚೇರಿಯ ಸೇವೆಗಳು :** ಎಲ್‌ಇಡಿ ಬಲ್ಬಗಳ ಮಾರಾಟ, ಎಲ್‌ಇಡಿ ಟ್ಯೂಬಗಳ ಮಾರಾಟದ ವ್ಯವಸ್ಥೆ ಕಲ್ಪಿಸಲಾಗಿದೆ.
- **ಸೇವಾ ಸಿಂಧು :** ಸೇವಾ ಸಿಂಧು ಸೇವೆಗಳನ್ನು ಪಡೆಯಬಹುದು.
- **ಸಾರಿಗೆ ಇಲಾಖೆ :** ವಾಹನ ನೋಂದಣಿ ಪ್ರಮಾಣಪತ್ರ, ಕಲಿಕೆ ಪರವಾನಗಿಗಾಗಿ ಅರ್ಜಿ ಸಲ್ಲಿಸುವುದು, ಕಲಿಕಾ ಪರವಾನಗಿಗೆ ಸಂಬಂಧಿಸಿದ ಸೇವೆಗೆ ಶುಲ್ಕ, ಸಾರಿಗೆಯೇತರ ವಾಹನದ ಕಲಿಕಾ ಪರವಾನಗಿಯ ಮುದ್ರಣ ಶುಲ್ಕ ಕೆಎಸ್‌ಆರ್‌ಟಿಸಿಬಸ್ ಟಿಕೆಟ್ ಬುಕಿಂಗ್, ಕೆಎಸ್‌ಆರ್‌ಟಿಸಿ ಮಾಸಿಕ ಪಾಸ್‌ನ ವಿತರಣೆ, ವಿದ್ಯಾರ್ಥಿಗಳಿಗೆ ಪಾಸ್ ವಿತರಣೆ, ಟ್ರಿನ್ ಟ್ರಿನ್‌ಗೆ ನೋಂದಣಿ, ಟ್ರಿನ್ ಟ್ರಿನ್‌ಗೆ ರಿಚಾರ್ಜ್ ಮಾಡುವುದಕ್ಕೆ ಅವಕಾಶ ಕಲ್ಪಿಸಲಾಗಿದೆ.
- **ನಗರಾಭಿವೃದ್ಧಿ ಪ್ರಾಧಿಕಾರ :** BUDA ಗಾಗಿ ಶುಲ್ಕ ಪಾವತಿ, RGRHCL ಗಾಗಿ ಅರ್ಜಿ ನಮೂನೆಯ ಸಲ್ಲಿಕೆ, ವಸತಿ ನೋಂದಣಿ ಯೋಜನೆಗಾಗಿ ನೋಂದಣಿ ಶುಲ್ಕವನ್ನು ಸಂಗ್ರಹಿಸುವುದು.
- **ಉಪಯುಕ್ತತೆಗಳು (ವಿದ್ಯುತ್/ನೀರು/ದೂರವಾಣಿ) :** ನೀರಿನ ಬಿಲ್ ಪಾವತಿ (ಬೆಂಗಳೂರು–ಬಿಡಬ್ಲ್ಯೂಎಸ್ಎ ಬೆಳಗಾವಿ, ಕಲಬುರಗಿ, ಶಿವಮೊಗ್ಗ, ತುಮಕೂರು, ವಿಜಯಪುರ), ನೀರು ಸರಬರಾಜಿನ ಖಥಾ/ಉದ್ದೇಶ/ಗಾತ್ರದ ಬದಲಾವಣೆಗಾಗಿ ಅರ್ಜಿ, ಹೊಸ ನೀರಿನ ಸಂಪರ್ಕ/ಕಡಿತ, ವಿದ್ಯುತ್ ಬಿಲ್ ಪಾವತಿ, ದೂರಸಂಪರ್ಕ ಕಂಪೆನಿಗಳ ಬಿಲ್ ಪಾವತಿ ಮಾಡಬಹುದಾಗಿದೆ.

### 3.5. ಕರ್ನಾಟಕ ಒನ್‌ನ ಪ್ರಯೋಜನಗಳು

ಕರ್ನಾಟಕಒನ್ ಉಪಕ್ರಮವು ನಾಗರಿಕರಿಗೆ ಹಲವಾರು ಪ್ರಯೋಜನಗಳನ್ನು ಹೊಂದಿದೆ, ಅವುಗಳೆಂದರೆ,

**ಸಮಯ ಉಳಿತಾಯ :** ಸೇವೆಗಳನ್ನು ಪಡೆಯಲು ವಿವಿಧ ಸರ್ಕಾರಿ ಕಚೇರಿಗಳಿಗೆ ಭೇಟಿ ನೀಡಲು ಅಗತ್ಯವಿರುವ ಸಮಯ ಮತ್ತು ಶ್ರಮವನ್ನು ಕರ್ನಾಟಕ ಒನ್ ನಾಗರಿಕರಿಗೆ ಉಳಿಸುತ್ತದೆ. ಕರ್ನಾಟಕ ಒನ್‌ನೊಂದಿಗೆ, ನಾಗರಿಕರು ತಮ್ಮ ಮನೆಯ ಸೌಕರ್ಯದಿಂದ ಆನ್‌ಲೈನ್‌ನಲ್ಲಿ ಸೇವೆಗಳಿಗೆ ಅರ್ಜಿ ಸಲ್ಲಿಸಬಹುದು.

ISSN : 2249-2429 ಸಂಶೋಧನೆ RNI REG.NO.KARKAN/2011/38712

**ವೆಚ್ಚ-ಉಳಿತಾಯ :** ಸರ್ಕಾರಿ ಕಚೇರಿಗಳಿಗೆ ಭೇಟಿ ನೀಡಲು ನಾಗರಿಕರು ಸಾರಿಗೆ ವೆಚ್ಚವನ್ನು ಪಾವತಿಸುವ ಅಗತ್ಯವನ್ನು ಕರ್ನಾಟಕಒನ್ ತೆಗೆದುಹಾಕುತ್ತದೆ. ಇದು ನಾಗರಿಕರು ಫೋಟೊಕಾಪಿಗಳು ಮತ್ತು ಇತರ ಸಂಬಂಧಿತ ವೆಚ್ಚಗಳಿಗೆ ಪಾವತಿಸುವ ಅಗತ್ಯವನ್ನು ನಿವಾರಿಸುತ್ತದೆ.

**ಪಾರದರ್ಶಕತೆ :** ಕರ್ನಾಟಕ ಒನ್ ನಾಗರಿಕರಿಗೆ ಸರ್ಕಾರಿ ಸೇವೆಗಳನ್ನು ಪ್ರವೇಶಿಸಲು ಪಾರದರ್ಶಕ ಮತ್ತು ಜವಾಬ್ದಾರಿಯುತ ವ್ಯವಸ್ಥೆಯನ್ನು ಒದಗಿಸುತ್ತದೆ. ನಾಗರಿಕರು ತಮ್ಮ ಅಪ್ಲಿಕೇಶನ್‌ಗಳ ಸ್ಥಿತಿಯನ್ನು ಟ್ರ್ಯಾಕ್ ಮಾಡಬಹುದು ಮತ್ತು ಅವರ ಅಪ್ಲಿಕೇಶನ್‌ಗಳ ಪ್ರಗತಿಯ ಕುರಿತು ನವೀಕರಣಗಳನ್ನು ಪಡೆಯಬಹುದು.

**ದಕ್ಷತೆ :** ಕರ್ನಾಟಕಒನ್ ಅಪ್ಲಿಕೇಶನ್ ಪ್ರಕ್ರಿಯೆಯನ್ನು ಸರಳೀಕರಿಸುವ ಮೂಲಕ ಮತ್ತು ಪ್ರಕ್ರಿಯೆಯ ಸಮಯವನ್ನು ಕಡಿಮೆ ಮಾಡುವ ಮೂಲಕ ಸರ್ಕಾರಿ ಸೇವೆಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡುತ್ತದೆ.

**ಪ್ರವೇಶಿಸುವಿಕೆ :** ಕರ್ನಾಟಕಒನ್ ದೂರದ ಪ್ರದೇಶಗಳಲ್ಲಿ ವಾಸಿಸುವವರೂ ಸೇರಿದಂತೆ ಎಲ್ಲಾ ನಾಗರಿಕರಿಗೆ ಸರ್ಕಾರಿ ಸೇವೆಗಳನ್ನು ಪ್ರವೇಶಿಸುವಂತೆ ಮಾಡುತ್ತದೆ. ಆಫ್‌ಲೈನ್ ಕರ್ನಾಟಕ ಒನ್ ಕೇಂದ್ರಗಳು ಇಂಟರ್ನೆಟ್ ಪ್ರವೇಶವಿಲ್ಲದ ನಾಗರಿಕರು ಸರ್ಕಾರಿ ಸೇವೆಗಳನ್ನು ಸಹ ಪಡೆಯಬಹುದು ಎಂದು ಖಚಿತಪಡಿಸುತ್ತದೆ.

## 3.6. ಕರ್ನಾಟಕ-ಒನ್‌ನ ಪರಿಣಾಮ

ಕರ್ನಾಟಕ ಒನ್ ಉಪಕ್ರಮವು ಕರ್ನಾಟಕದ ನಾಗರಿಕರ ಜೀವನದ ಮೇಲೆ ಗಮನಾರ್ಹ ಪರಿಣಾಮ ಬೀರಿದೆ. ಉಪಕ್ರಮದ ಕೆಲವು ಪ್ರಮುಖ ಪರಿಣಾಮಗಳು:

**ಹೆಚ್ಚಿದ ದಕ್ಷತೆ :** ಕರ್ನಾಟಕಒನ್ ವಿವಿಧ ಸೇವೆಗಳ ಸಂಸ್ಕರಣೆಯ ಸಮಯವನ್ನು ಕಡಿಮೆ ಮಾಡುವ ಮೂಲಕ ಸರ್ಕಾರಿ ಸೇವೆಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡಿದೆ. ಇದು ಸೇವೆಗಳ ತ್ವರಿತ ವಿತರಣೆಗೆ ಕಾರಣವಾಗಿದೆ ಮತ್ತು ನಾಗರಿಕರಲ್ಲಿ ತೃಪ್ತಿಯನ್ನು ಹೆಚ್ಚಿಸಿದೆ.

**ವೆಚ್ಚ ಉಳಿತಾಯ :** ಸೇವೆಗಳನ್ನು ಪಡೆಯಲು ವಿವಿಧ ಸರ್ಕಾರಿ ಕಚೇರಿಗಳಿಗೆ ಪ್ರಯಾಣಿಸುವ ಅಗತ್ಯವನ್ನು ತೆಗೆದುಹಾಕುವ ಮೂಲಕ ಕರ್ನಾಟಕಒನ್ ನಾಗರಿಕರಿಗೆ ಹಣವನ್ನು ಉಳಿಸಲು ಸಹಾಯ ಮಾಡಿದೆ. ಇದರಿಂದ ನಾಗರಿಕರಿಗೆ ಗಣನೀಯ ವೆಚ್ಚ ಉಳಿತಾಯವಾಗಿದೆ.

**ಪಾರದರ್ಶಕತೆ :** ಕರ್ನಾಟಕಒನ್ ಪ್ರಕ್ರಿಯೆಗೆ ಪಾರದರ್ಶಕತೆ ತಂದಿದೆ

## 3.7. ಕರ್ನಾಟಕ-ಒನ್ ಉಪಕ್ರಮಕ್ಕೆ ಇರುವ ಕೆಲವು ಸವಾಲುಗಳು

**ಡಿಜಿಟಲ್ ವಿಭಜನೆ :** ಕರ್ನಾಟಕ ಒನ್‌ನ ಅತಿದೊಡ್ಡ ಸವಾಲು ಎಂದರೆ ಡಿಜಿಟಲ್ ವಿಭಜನೆ, ಅಂದರೆ ಎಲ್ಲಾ ನಾಗರಿಕರು ಇಂಟರ್ನೆಟ್ ಮತ್ತು ಡಿಜಿಟಲ್ ಸಾಧನಗಳಿಗೆ ಪ್ರವೇಶವನ್ನು ಹೊಂದಿಲ್ಲ. ಇದು ಕರ್ನಾಟಕ ಒನ್‌ನ ವ್ಯಾಪ್ತಿಯನ್ನು ಮಿತಿಗೊಳಿಸುತ್ತದೆ ಮತ್ತು ಇಂಟರ್ನೆಟ್‌ಗೆ ಪ್ರವೇಶವನ್ನು ಹೊಂದಿರದವರಿಗೆ ಈ ಉಪಕ್ರಮದಿಂದ ಲಾಭ ಪಡೆಯಲು ಸಾಧ್ಯವಾಗುತ್ತಿಲ್ಲ.

**ಸೀಮಿತ ಅರಿವು :** ಕರ್ನಾಟಕ ಒನ್ ಅನ್ನು ಉತ್ತೇಜಿಸಲು ಸರ್ಕಾರವು ಪ್ರಯತ್ನಿಸುತ್ತಿದ್ದರೂ, ಅನೇಕ ನಾಗರಿಕರಿಗೆ ಈ ಉಪಕ್ರಮದ ಬಗ್ಗೆ ಇನ್ನೂ ತಿಳಿದಿಲ್ಲ. ಇದು ಅದರ ವ್ಯಾಪ್ತಿಯನ್ನು ಮಿತಿಗೊಳಿಸುತ್ತದೆ ಮತ್ತು ವೇದಿಕೆಯನ್ನು ಬಳಸುವ ನಾಗರಿಕರ ಸಂಖ್ಯೆಯನ್ನು ಕಡಿಮೆ ಮಾಡುತ್ತದೆ.

**ತಾಂತ್ರಿಕ ಸಮಸ್ಯೆಗಳು :** ಕರ್ನಾಟಕ ಒನ್ ವೆಬ್‌ಸೈಟ್ ಮತ್ತು ಮೊಬೈಲ್ ಅಪ್ಲಿಕೇಶನ್ ನಿಧಾನಗತಿಯ ಲೋಡಿಂಗ್, ಪ್ರತಿಕ್ರಿಯಿಸದ ಪುಟಗಳು ಅಥವಾ ದೋಷಗಳಂತಹ ತಾಂತ್ರಿಕ ಸಮಸ್ಯೆಗಳನ್ನು ಎದುರಿಸಬಹುದು, ಇದು ನಾಗರಿಕರಿಗೆ ವೇದಿಕೆಯನ್ನು ಬಳಸಲು ಕಷ್ಟವಾಗಬಹುದು. ಇದು ನಾಗರಿಕರಲ್ಲಿ ಹತಾಶೆಗೆ ಕಾರಣವಾಗಬಹುದು, ಇದು ಅಂತಿಮವಾಗಿ ಉಪಕ್ರಮದ ವಿಶ್ವಾಸಾರ್ಹತೆಗೆ ಹಾನಿ ಮಾಡುತ್ತದೆ.

**ಭದ್ರತಾ ಕಾಳಜಿಗಳು :** ನಾಗರಿಕರ ವೈಯಕ್ತಿಕ ಮಾಹಿತಿ ಮತ್ತು ಡೇಟಾದ ಸುರಕ್ಷತೆ ಮತ್ತು ಗೌಪ್ಯತೆಯ ಬಗ್ಗೆ ಕಳವಳಗಳು ಇರಬಹುದು, ವಿಶೇಷವಾಗಿ ಅವರು ಆಧಾರ್ ಮತ್ತು ಪ್ಯಾನ್ ವಿವರಗಳಂತಹ ಸೂಕ್ಷ್ಮ ಮಾಹಿತಿಯನ್ನು ಒದಗಿಸಿದಾಗ. ಪ್ಲಾಟ್‌ಫಾರ್ಮ್‌ನ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳುವುದು ಮತ್ತು ಅದು ಸಂಗ್ರಹಿಸುವ ಡೇಟಾವು ನಾಗರಿಕರಲ್ಲಿ ನಂಬಿಕೆಯನ್ನು ಬೆಳೆಸಲು ನಿರ್ಣಾಯಕವಾಗಿದೆ.

**ಸೀಮಿತ ಸೇವೆಗಳು :** ಕರ್ನಾಟಕಒನ್ ಹಲವಾರು ಸರ್ಕಾರಿ ಸೇವೆಗಳನ್ನು ನೀಡುತ್ತಿರುವಾಗ, ನಾಗರಿಕರಿಗೆ ಅಗತ್ಯವಿರುವ ಎಲ್ಲಾ ಸೇವೆಗಳನ್ನು ಇದು ಒಳಗೊಂಡಿರುವುದಿಲ್ಲ. ಇದು ಅದರ ಪರಿಣಾಮಕಾರಿತ್ವವನ್ನು ಮಿತಿಗೊಳಿಸುತ್ತದೆ ಮತ್ತು ಅದರ ಒಟ್ಟಾರೆ ಪರಿಣಾಮವನ್ನು ಕಡಿಮೆ ಮಾಡುತ್ತದೆ.

**ಮೂಲ ಸೌಕರ್ಯ ಸವಾಲುಗಳು :** ದೂರದ ಅಥವಾ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಿನ ವೇಗದ ಇಂಟರ್ನೆಟ್ ಸಂಪರ್ಕ ಮತ್ತು ಡಿಜಿಟಲ್ ಮೂಲಸೌಕರ್ಯಗಳ ಲಭ್ಯತೆಯು ಒಂದು ಮಹತ್ವದ ಸವಾಲಾಗಿದೆ, ಈ ಪ್ರದೇಶಗಳಲ್ಲಿನ ಜನರಿಗೆ ವೇದಿಕೆಯನ್ನು ಪ್ರವೇಶಿಸಲು ಕಷ್ಟವಾಗುತ್ತದೆ.

## 4. ಉಪಸಂಹಾರ

ಸರ್ಕಾರಿ ಸೇವೆಗಳ ವಿತರಣೆಗೆ ಪಾರದರ್ಶಕತೆ ಮತ್ತು ದಕ್ಷತೆಯನ್ನು ತರಲು ಕರ್ನಾಟಕಒನ್ ಅನ್ನು ವಿನ್ಯಾಸಗೊಳಿಸಲಾಗಿದೆ, ನಾಗರಿಕರಿಗೆ ಅವುಗಳನ್ನು ಸುಲಭವಾಗಿ ಪ್ರವೇಶಿಸಲು ಮತ್ತು ಸರ್ಕಾರಿ ಕಚೇರಿಗಳಿಗೆ ಭೌತಿಕ ಭೇಟಿಯ ಅಗತ್ಯವನ್ನು ಕಡಿಮೆ ಮಾಡುತ್ತದೆ. ಈ ಉಪಕ್ರಮವು ಕರ್ನಾಟಕ ಸರ್ಕಾರದ ದೊಡ್ಡ ಇ-ಆಡಳಿತ ಕಾರ್ಯಕ್ರಮದ ಭಾಗವಾಗಿದೆ, ಆಡಳಿತ ಮತ್ತು ಸಾರ್ವಜನಿಕ ಸೇವೆಯ ವಿತರಣೆಯನ್ನು ಸುಧಾರಿಸಲು ತಂತ್ರಜ್ಞಾನವನ್ನು ಬಳಸಿಕೊಳ್ಳುವ ಗುರಿಯನ್ನು ಹೊಂದಿದೆ.ಇದರ ಮೂಲಕ ಆಡಳಿತದ ವಿಕೇಂದ್ರೀಕರಣಕ್ಕೆ ಅವಕಾಶ ಕಲ್ಪಿಸಿದ್ದು, ಮನೆಯಲ್ಲಿಯೇ, ಸರ್ಕಾರದ ಸೇವೆಗಳನ್ನು ಪಡೆಯಬಹುದು ಮತ್ತು ಇದು ಕರ್ನಾಟಕದ ಎಲ್ಲಾ ನಾಗರಿಕರಿಗೆ ಪ್ರಯೋಜನವನ್ನು ನೀಡುತಿದ್ದು, ಹಾಗೂ ಪ್ರಕ್ರಿಯೆಗೆ ಕೆಲವು ಸವಾಲುಗಳಿದ್ದು, ಅವುಗಳನ್ನು ಪರಿಹರಿಸಿದರೆ, ಸರ್ಕಾರದ ಸೇವೆಗಳನ್ನು ಸಾರ್ವಜನಿಕರಿಗೆ ಇನ್ನು ಪರಿಣಾಮಕಾರಿಯಾಗಿ ತಲುಪಿಸಬಹುದಾಗಿದೆ.

## ಪರಾಮರ್ಶನ ಗ್ರಂಥಗಳು


- **ಸುಮಿ, ಕೆ. ವಿ. (2018) :** ಡಿಜಿಟಲ್ ಗವರ್ನೆನ್ಸ್, ನವದೆಹಲಿ ಗ್ಲೋಬಲ್ ವಿಷನ್ ಪಬ್ಲಿಶಿಂಗ್ ಹೌಸ್.
- **ಪ್ರಭು ಸಿ. ಎಸ್. ಆರ್. (2005) :** ಇ-ಗವರ್ನೆನ್ಸ್-ಕಾನ್ಸೆಪ್ಟ್ಸ್ ಆಂಡ್ ಕೇಸ್ ಸ್ಟಡೀಸ್ ಲೆಸನ್ಸ್ ಫ್ರಂ ವಾಟ್ ಈಸ್ ಇ-ಗವರ್ನೆನ್ಸ್, ನವದೆಹಲಿ ಪ್ರಿಂಟೀಸ್-ಹಾಲ್ ಆಫ್ ಇನಿಡಾ ಪಬ್ಲಿಕೇಷನ್.
- **ಡಾ. ಸುಮತಿ ಎಂ. (2020) :** ಎ ಹ್ಯಾಂಡ್ ಬುಕ್ ಆಫ್ ಇ-ಗವರ್ನೆನ್ಸ್ ಇನ್ ಇಂಡಿಯಾ. ನವದೆಹಲಿ ಅಭಿಜಿತ್ ಪಬ್ಲಿಕೇಷನ್ಸ್ 110002.
- **ನ್ಯಾಷನಲ್ ಇನ್‌ಸ್ಟಿಟ್ಯೂಷನ್ ಫಾರ್ ಸ್ಮಾರ್ಟ್ ಗವರ್ನೆನ್ಸ್. (2012):** ಇ-ಗವರ್ನೆನ್ಸ್ ಪ್ರಾಜೆಕ್ಟ್ ಲೈಫ್‌ಸೈಕಲ್. ಡಿಪಾರ್ಟ್‌ಮೆಂಟ್ ಆಫ್ ಎಲೆಕ್ಟ್ರಾನಿಕ್ಸ್ ಆಂಡ್ ಕಮ್ಯೂನಿಕೇಷನ್ ಟೆಕ್ನಾಲಜಿ, ಗವರ್ನಮೆಂಟ್ ಆಫ್ ಇಂಡಿಯಾ.


*– 100ನೇ ಪುಟಕ್ಕೆ ಮುಂದುವರೆದುದು*

ISSN : 2249-2429 ಸಂಶೋಧನೆ RNI REG.NO.KARKAN/2011/38712

# ಶೈಕ್ಷಣಿಕ ಸಾಧನವಾಗಿ ಟೆಲಿವಿಷನ್ ಮಾಧ್ಯಮ : ಕೇರಳ ವಿದ್ಯಾರ್ಥಿಗಳ ಬಳಕೆ ಮತ್ತು ಪ್ರವೃತ್ತಿ ಕುರಿತು ಅಧ್ಯಯನ

**ವಿನಯ್ ಜಿ. ಪಿ.**, ಸಂಶೋಧನಾರ್ಥಿ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ–577451

**ಸತ್ಯಪ್ರಕಾಶ್ ಎಂ. ಆರ್.**, ಪ್ರಾಧ್ಯಾಪಕರು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ– 577451

*ಸಾರಾಂಶ*

*ಟೆಲಿವಿಷನ್ ಮೂಲಕ ಶಿಕ್ಷಣವನ್ನು ನೀಡುವುದು ಭಾರತದಂತಹ ಅಪಾರ ಜನಸಂಖ್ಯೆಯುಳ್ಳ ಮತ್ತು ಅಭಿವೃದ್ಧಿಶೀಲ ರಾಷ್ಟ್ರಕ್ಕೆ ಹೆಚ್ಚು ಸೂಕ್ತಮಾದರಿಯಾಗಿದೆ. ಟೆಲಿವಿಷನ್ ಬಳಸಿಕೊಂಡು ನೀಡುವ ಔಪಚಾರಿಕ ಶಿಕ್ಷಣ ವ್ಯವಸ್ಥೆಯು ಅಭಿವೃದ್ಧಿಶೀಲ ರಾಷ್ಟ್ರಗಳ ಲಕ್ಷಾಂತರ ಜನರ ಆಕಾಂಕ್ಷೆಗಳನ್ನು ಸಾಕಾರಗೊಳಿಸುವಲ್ಲಿ ನೆರವಿಗೆ ಬಂದಿರುವ ಉದಾಹರಣೆಗಳಿವೆ. ಟೆಲಿವಿಷನ್‌ನದೃಶ್ಯ ಮತ್ತು ಶ್ರವ್ಯ ಸಾಧ್ಯತೆಗಳು ಇತರೆ ಮಾಧ್ಯಮಗಳಿಗೆ ಹೋಲಿಸಿದರೆ ಅಪಾರ ಪ್ರಭಾವ ಬೀರಬಲ್ಲದು ಎಂಬುದು ಸ್ವೀಕೃತ ವಿಚಾರ. ಟೆಲಿವಿಷನ್ ಮಾಧ್ಯಮ ಬಳಸಿಕೊಂಡು ಶಿಕ್ಷಣ ನೀಡುವ ಕಾರ್ಯದಲ್ಲಿ ಕೇರಳ ರಾಜ್ಯ ಮುಂದಿದೆ. ಪ್ರಸ್ತುತ ಅಧ್ಯಯನವು ಕೇರಳದ ಕೈಟ್ ವಿಕ್ಟರ್ಸ್ ಚಾನೆಲ್‌ನ ಶೈಕ್ಷಣಿಕ ಕಾರ್ಯಕ್ರಮಗಳ ಪ್ರಭಾವವನ್ನು ಅಳೆಯಲು ಪ್ರಯತ್ನಿಸುತ್ತದೆ. ಕೊಝಿಕೊಡೆ ಜಿಲ್ಲೆಯ ಪ್ರೌಢಶಾಲಾ ಮಕ್ಕಳು ಕೈಟ್‌ವಿಕ್ಟರ್ಸ್ ಕಾರ್ಯಕ್ರಮಗಳನ್ನು ವೀಕ್ಷಿಸುತ್ತಿರುವ ಪ್ರವೃತ್ತಿಗಳು ಮತ್ತುಅದರ ಪ್ರಭಾವವನ್ನು ಕ್ಷೇತ್ರ ಸಮೀಕ್ಷೆಯ ಮೂಲಕ ಮಾಹಿತಿ ಸಂಗ್ರಹಿಸಿ ವಿಶ್ಲೇಷಣೆಗೊಳಪಡಿಸಲಾಗಿದೆ.*

*ಪ್ರಮುಖ ಪದಗಳು : ವಿದ್ಯಾರ್ಥಿಗಳು, ಶೈಕ್ಷಣಿಕ ಟಿವಿ, ಮಾಧ್ಯಮ ಬಳಕೆ, ಕೈಟ್ ವಿಕ್ಟರ್ಸ್*

## ಪೀಠಿಕೆ

ಜಗತ್ತಿನಲ್ಲಿಯೇ ಜನಸಂಖ್ಯೆಯಲ್ಲಿ ಮೊದಲ ಸ್ಥಾನ ಪಡೆದಿರುವ ಭಾರತ ದೇಶವು ತನ್ನ ಅಪಾರ ಸಂಖ್ಯೆಯ ಮಕ್ಕಳಿಗೆ ಶಿಕ್ಷಣ ತಲುಪಿಸಲು ಸದಾ ನವ ಮಾರ್ಗಗಳನ್ನು, ಕ್ರಮಗಳನ್ನು ಕೈಗೊಳ್ಳುತ್ತಿರಬೇಕಾಗುತ್ತದೆ. ಭಾರತದಲ್ಲಿ ಟೆಲಿವಿಷನ್ ಒಂದು ಜನಪ್ರಿಯ ಮತ್ತು ಅಗ್ಗದ ಮನರಂಜನೆ ಒದಗಿಸುವ ಸಾಧನವಾಗಿ ಪ್ರಸಿದ್ಧಿ ಪಡೆದಿದೆ. ಆದರೆ ಅದರ ಬಳಕೆ ಮತ್ತು ವ್ಯಾಪ್ತಿಯನ್ನು ಹೆಚ್ಚುಗೊಳಿಸಿದ್ದೇ ಅದನ್ನು ಆರಂಭದಲ್ಲಿ ಸಾಮಾಜಿಕ ಶಿಕ್ಷಣಕ್ಕಾಗಿ ಶುರುಮಾಡುವ ಮೂಲಕ ಎಂಬುದು ಗಮನಾರ್ಹ ಅಂಶ. ಟೆಲಿವಿಷನ್ ಮೂಲಕ ಅನೌಪಚಾರಿಕವಾಗಿ ಲಕ್ಷಾಂತರ ಮಂದಿಗೆ ಒಮ್ಮೆಲೆ ಶಿಕ್ಷಣದ ಸಂದೇಶಗಳನ್ನು ತಲುಪಿಸುವುದು ಆ ಮೂಲಕ ಇದನ್ನು ಕಲಿಕಾ ಮಾಧ್ಯಮವಾಗಿ ಬಳಸಿಕೊಳ್ಳುವುದು ಸಾಧ್ಯವಿದೆ.

ಶೈಕ್ಷಣಿಕ ದೂರದರ್ಶನವು ಅದರ ನಮ್ಯತೆಯಿಂದಾಗಿ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಒದಗಿಸುತ್ತ ಬಂದಿದೆ. ಪ್ರಯೋಗಾಲಯ ಉಪಕರಣಗಳು, ಗ್ರಂಥಾಲಯಗಳು ಮತ್ತು ತರಬೇತಿ ಪಡೆದ ಶಿಕ್ಷಕರ ಕೊರತೆಯಂತಹ ಪ್ರಾಯೋಗಿಕ ಸಮಸ್ಯೆಗಳನ್ನು ಶಾಲೆಗಳಲ್ಲಿ ನಿವಾರಿಸಲು ಅವು ಸಹಾಯ ಮಾಡುತ್ತವೆ. ಪಠ್ಯಕ್ರಮದಲ್ಲಿನ ಬದಲಾವಣೆಗೆ ಅವರು ತೀವ್ರವಾಗಿ ಪ್ರತಿಕ್ರಿಯಿಸಬಹುದು ಮತ್ತು ಪಠ್ಯ ಪುಸ್ತಕದಲ್ಲಿ ಲಭ್ಯವಿಲ್ಲದ ವಸ್ತುಗಳನ್ನು ಪರಿಚಯಿಸಬಹುದು. ಶೈಕ್ಷಣಿಕ ದೂರದರ್ಶನವು ದೇಶದಾದ್ಯಂತ ಶಿಕ್ಷಣದ ಸಮಾನ ಅವಕಾಶಗಳನ್ನು ನೀಡುತ್ತದೆ. ಶೈಕ್ಷಣಿಕ ಸಂಪನ್ಮೂಲಗಳು ಲಭ್ಯವಿಲ್ಲದ ದೇಶದ ಗ್ರಾಮೀಣ ಮತ್ತು ವಂಚಿತ ಪ್ರದೇಶಗಳ ವಿದ್ಯಾರ್ಥಿಗಳು ನಗರ ಪ್ರದೇಶಗಳಲ್ಲಿರುವ ಗುಣಮಟ್ಟದ ಶಿಕ್ಷಣವನ್ನು ಪಡೆಯುತ್ತಾರೆ. ಹೀಗಾಗಿ, ದೂರದರ್ಶನವು ಬಡವರು ಮತ್ತು ಶ್ರೀಮಂತರು, ಸವಲತ್ತುಗಳು ಮತ್ತು ಹಿಂದುಳಿದವರು, ಗ್ರಾಮೀಣ ಮತ್ತು ನಗರಗಳ ನಡುವಿನ ಅಂತರವನ್ನು ಕಡಿಮೆ ಮಾಡುತ್ತದೆ.

ಶೈಕ್ಷಣಿಕ ಸಾಧನವಾಗಿ ಟೆಲಿವಿಷನ್: ಶಿಕ್ಷಣ ಮತ್ತು ಸಮುದಾಯ ಅಭಿವೃದ್ಧಿಯ ಮಾಧ್ಯಮವಾಗಿ ಟೆಲಿವಿಷನ್ ಅನ್ನು ಬಳಸಬೇಕು ಎಂಬ ಪ್ರಾಯೋಗಿಕ ಉದ್ದೇಶದೊಂದಿಗೆ ಭಾರತದಲ್ಲಿ ಟೆಲಿವಿಷನ್ ಆರಂಭಿಸಲಾಯಿತು. ಆಲ್ ಇಂಡಿಯಾ ರೇಡಿಯೊ ಆಶ್ರಯದಲ್ಲಿ ಯುನೆಸ್ಕೊ ನೆರವಿನ ಯೋಜನೆಯಾಗಿ 15 ಸೆಪ್ಟೆಂಬರ್ 1959 ರಂದು ಭಾರತದಲ್ಲಿ ಟೆಲಿವಿಷನ್ ಅನ್ನು ಪರಿಚಯಿಸಲಾಯಿತು (ನವೀದ್, 2020). ಇದು ಮುಖ್ಯವಾಗಿ ಸಾಮಾಜಿಕ ಶಿಕ್ಷಣ, ತರಬೇತಿ ಮತ್ತು ಮೌಲ್ಯಮಾಪನದ ಗುರಿಯನ್ನು ಹೊಂದಿತ್ತು. ದೆಹಲಿ ಟೆಲಿವಿಷನ್ ಕೇಂದ್ರ 1961 ರಲ್ಲಿಆಯ್ದ ವಿಷಯಗಳ ಮೇಲೆ, ವಿಶೇಷವಾಗಿ ವಿಜ್ಞಾನದ ಮೇಲೆ ಪಠ್ಯಕ್ರಮ ಆಧಾರಿತ ಪಾಠಗಳನ್ನು ಪ್ರಸಾರ ಮಾಡಲು ನಿರ್ಧಾರವನ್ನು ತೆಗೆದುಕೊಂಡಿತು. ಮಾಧ್ಯಮಿಕ ಹಂತದಲ್ಲಿ ವಿಜ್ಞಾನದ ಬೋಧನೆಯಲ್ಲಿ ಗುಣಮಟ್ಟವನ್ನು ಸುಧಾರಿಸುವುದು ಗುರಿಯಾಗಿತ್ತು. ಆ ಸಮಯದಲ್ಲಿ, ಕೆಲವು ದೆಹಲಿ ಶಾಲೆಗಳು ಪ್ರಯೋಗಾಲಯ ಸೌಲಭ್ಯಗಳನ್ನು ಹೊಂದಿದ್ದವು ಮತ್ತು ಕೆಲವೇ ಅರ್ಹ ವಿಜ್ಞಾನ ಶಿಕ್ಷಕರಿದ್ದರು. ಟೆಲಿವಿಷನ್‌ನ ದೃಶ್ಯ ಮಾಧ್ಯಮದಿಂದ ಇತರ ಭಾಗಗಳ ಶಾಲೆಗಳಲ್ಲಿದ್ದ ಮೂಲಸೌಕರ್ಯಗಳ ಅನಾನುಕೂಲಗಳನ್ನು ನಿವಾರಿಸಲು ಪ್ರಯತ್ನಿಸಲಾಯಿತು.

ಎನ್‌ಸಿಇಆರ್‌ಟಿ ಪ್ರಸಾರವು ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಶನಲ್ ಟೆಕ್ನಾಲಜಿ (ಸಿಐಇಟಿ) ಮತ್ತು ಸ್ಟೇಟ್ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನಲ್ ಟೆಕ್ನಾಲಜಿ (ಎಸ್‌ಐಇಟಿ) ಮೂಲಕ ಕಾರ್ಯಕ್ರಮಗಳ ನಿರ್ಮಾಣ ಮಾಡುವುದನ್ನು ಒಳಗೊಂಡಿದೆ. ಜ್ಞಾನದೀಪ್ ಟೆಲಿವಿಷನ್ ಮುಂಬಯಿ ಮತ್ತು ಪುಣೆ ಕೇಂದ್ರದ ವಯಸ್ಕರ ಶಿಕ್ಷಣ ಕಾರ್ಯಕ್ರಮವಾಗಿದೆ. ಇವುಗಳಲ್ಲದೇ ದೂರದರ್ಶನ ಸಂಸ್ಥೆಯು ಮೂರು ವಿಶೇಷ ಶೈಕ್ಷಣಿಕ ಚಾನೆಲ್‌ಗಳನ್ನು ಹೊಂದಿದೆ. ವ್ಯಾಸ್‌ಉನ್ನತ ಶಿಕ್ಷಣ ಚಾನೆಲ್, ಏಕಲವ್ಯ–ತಂತ್ರಜ್ಞಾನ ಚಾನೆಲ್ ಮತ್ತು ಜ್ಞಾನದರ್ಶನ್. ಜ್ಞಾನದರ್ಶನ (ಪ್ರವೀಣ್, 2004) ಸ್ಯಾಟಲೈಟ್ ಚಾನೆಲ್ ಆಗಿದ್ದು ದೆಹಲಿಯ ಇಂದಿರಾಗಾಂಧಿ ಮುಕ್ತ ವಿಶ್ವವಿದ್ಯಾನಿಲಯದಿಂದ ಪ್ರಸಾರವಾಗುವ 24 ಗಂಟೆಗಳ ಚಾನೆಲ್ ಆಗಿದೆ. 2004ರಲ್ಲಿ ಭಾರತವು ಉಡಾವಣೆಗೊಳಿಸಿದ ಎಜುಸ್ಯಾಟ್ ಉಪಗ್ರಹವು ಜಗತ್ತಿನಲ್ಲಿಯೇ ಶಿಕ್ಷಣಕ್ಕಾಗಿ ರೂಪಿಸಲಾದ ಮೊದಲ ಉಪಗ್ರಹವಾಗಿದೆ (ಇಸ್ರೊ, 2004). ಇದನ್ನು ಬಳಸಿಕೊಂಡು ಸಾಂಪ್ರದಾಯಿಕ ಶಿಕ್ಷಣದ ಜೊತೆಗೆಆಧುನಿಕ ಮಾದರಿಗಳಲ್ಲಿಯೂ ವಿಷಯಕೇಂದ್ರಿತ ಬೋಧನೆ, ಪ್ರಯೋಗಾಲಯ ಮಾಹಿತಿಗಳನ್ನು ಒದಗಿಸಲಾಗುತ್ತಿದೆ.

**ಕೇರಳದಲ್ಲಿ ಕೈಟ್ ವಿಕ್ಟರ್ಸ್ :** ಕೇರಳ ಇನ್‌ಫ್ರಾಸ್ಟ್ರಕ್ಚರ್ ಮತ್ತು ಟೆಕ್ನಾಲಜಿ ಫಾರ್ ಎಜುಕೇಶನ್ (KITE) ಕೇರಳ ಸರ್ಕಾರದ ಶಿಕ್ಷಣ ಇಲಾಖೆಯ ಅಡಿಯಲ್ಲಿ ವಿಶೇಷ ಉದ್ದೇಶದಿಂದ ಆರಂಭಿಸಿದ ವಿಶೇಷ ಸಮೂಹವಾಗಿದೆ. ಹಿಂದಿನ ಐಟಿ@ ಶಾಲಾ ಯೋಜನೆಯನ್ನು ಆಗಸ್ಟ್ 2017ರಲ್ಲಿ

ISSN : 2249-2429 ಸಂಶೋಧನೆ RNI REG.NO.KARKAN/2011/38712

ಕಾರ್ಯಾಚರಣೆಯ ವ್ಯಾಪ್ತಿಯನ್ನು ವಿಸ್ತರಿಸಲು ಉದ್ದೇಶಿಸಿ ಕೈಟ್ಸ್ ಆಗಿ ಪರಿವರ್ತಿಸಲಾಯಿತು (ಕೈಟ್, 2006). ಇದು ಕೇರಳ ಮೂಲಸೌಕರ್ಯ ಮತ್ತು ಹೂಡಿಕೆ ನಿಧಿ ಮಂಡಳಿಯಿಂದ ಅನುದಾನವನ್ನು ಪಡೆದ ಮೊದಲ ವಿಶೇಷ ಉದ್ದೇಶದ ಚಾನಲ್ ಆಗಿದೆ. ಕೇರಳದ ಸಾರ್ವಜನಿಕ ಶಿಕ್ಷಣ ಇಲಾಖೆಯು ಜೂನ್ 1, 2020 ರಿಂದ ಎಸ್ಇಆರ್ಟಿ ಶೈಕ್ಷಣಿಕ ಮೇಲ್ವಿಚಾರಣೆಯಲ್ಲಿ ಕೈಟ್ ವಿಕ್ಟರ್ಸ್ ಚಾನೆಲ್ ಮೂಲಕ 1 ರಿಂದ 12 ನೇ ತರಗತಿಯ ವಿದ್ಯಾರ್ಥಿಗಳಿಗೆ ಫಸ್ಟ್ ಬೆಲ್ ಎಂಬ ವರ್ಚುವಲ್ ತರಗತಿ ಆರಂಭಿಸಿತು.

ಬಹುಮುಖಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಆಧರಿಸಿಕೊಂಡು ಮಲಯಾಳಂ ಭಾಷೆಯಲ್ಲಿ ಶಿಕ್ಷಣ ನೀಡುವ ಚಾನೆಲ್‌ನ ಒಡೆತನವು ಕೇರಳ ಸರ್ಕಾರದ ಶಿಕ್ಷಣ ಇಲಾಖೆಯ ಬಳಿಯಿದ್ದು, ವಾಹಿನಿಯ ಕೇಂದ್ರ ಕಛೇರಿಯು ಕೇರಳದ ತಿರುವಂತಪುರಂನಲ್ಲಿದೆ. ಎಜುಸ್ಯಾಟ್ ಜಾಲವನ್ನು ಅನುಷ್ಠಾನಗೊಳಿಸಿರುವ ನೋಡಲ್ ಏಜೆನ್ಸಿಯಾಗಿ ಕೈಟ್ ಕೆಲಸ ಮಾಡುತ್ತಿದ್ದರೆ, ವಿಕ್ಟರ್ಸ್‌ಎಂಬುದು ಬೆಳಿಗ್ಗೆ ಆರರಿಂದ ರಾತ್ರಿ ಹನ್ನೊಂದರವರೆಗೆ ಶಿಕ್ಷಣ ನೀಡುವ ಚಾನಲ್ ಆಗಿದೆ. ಭಾರತದ ಆಗಿನ ರಾಷ್ಟ್ರಪತಿ ಡಾ. ಎ.ಪಿ.ಜೆ. ಅಬ್ದುಲ್‌ಕಲಾಂ ಅವರು 2005ರಲ್ಲಿ ಇದನ್ನು ಉದ್ಘಾಟಿಸಿದ್ದು, ಎಜುಸ್ಯಾಟ್ ಜಾಲದ ಮೂಲಕ ದಿನದ 17 ಗಂಟೆಗಳ ಕಾಲ ಸಂವಾದಾತ್ಮಕ ವರ್ಚುವಲ್ ತರಗತಿ ಕೊಠಡಿಗಳನ್ನು ಒದಗಿಸುತ್ತದೆ (ಐಎಎನ್ಎಸ್, 2021). ಇದು ಶಾಲಾ ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ನೇರವಾಗಿ ವಿಷಯ ತಜ್ಞರು ಮತ್ತು ಶಿಕ್ಷಣ ತಜ್ಞರೊಂದಿಗೆ ಸಂವಹನ ನಡೆಸಲು ಅನುವು ಮಾಡಿಕೊಡುತ್ತದೆ. ಗುಣಮಟ್ಟದ ಮೂಲದಿಂದ ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ಉತ್ಕೃಷ್ಟ ಶಿಕ್ಷಣದ ಪ್ರಸಾರವನ್ನು ಸಹ ಖಚಿತಪಡಿಸುತ್ತದೆ.

ಕೈಟ್ ವಿಕ್ಟರ್ಸ್ ಒಂದು ದೊಡ್ಡ ಪ್ರಯೋಜನವಾಗಿದೆ ಮತ್ತು ರಾಜ್ಯವು ಡಿಜಿಟಲ್ ಶಿಕ್ಷಣದ ಮಾರ್ಗವನ್ನು ಬದಲಾಯಿಸಲು ಪ್ರಬಲ ತಯಾರಿಯಾಗಿದೆ. ಕೈಟ್‌ಆನ್‌ಲೈನ್ ಕಲಿಕಾ ವೇದಿಕೆಗಳನ್ನು ಸಹ ಒಳಗೊಂಡಿದೆ. 1 ರಿಂದ 12 ನೇ ತರಗತಿಯವರೆಗಿನ ಎಲ್ಲಾ ವಿಷಯಗಳ ಡಿಜಿಟಲ್ ಸಂಪನ್ಮೂಲಗಳ ಭಂಡಾರವನ್ನು ಒಳಗೊಂಡ ಸಮಗ್ರ ಸಂಪನ್ಮೂಲ ಪೋರ್ಟಲ್ ಇದೆ. ಕೇರಳದ ಶಿಕ್ಷಣ ಇಲಾಖೆಯು ಕೇಂದ್ರದ ಮಾನವ ಸಂಪನ್ಮೂಲ ಸಚಿವಾಲಯದೊಂದಿಗೆ ಸೇರಿ 2019–20ರಲ್ಲಿ 9 ಮತ್ತು 10ನೇ ತರಗತಿ ವಿದ್ಯಾರ್ಥಿಗಳಿಗೆ ದೀಕ್ಷಾ ಎಂಬ ಕಾರ್ಯಕ್ರಮ ಆರಂಭಿಸಿದೆ. ಇದು 108 ಪಠ್ಯಪುಸ್ತಕಗಳನ್ನು ಮಲಯಾಳಂ, ತಮಿಳು, ಕನ್ನಡ ಮತ್ತು ಇಂಗ್ಲೀಷ್ ಭಾಷಾ ಮಾಧ್ಯಮಗಳಲ್ಲಿ ಪರಿಚಯಿಸಿದೆ. ಶೈಕ್ಷಣಿಕ ತಂತ್ರಜ್ಞಾನವು ವೇಗವಾಗಿ ಹೊರಹೊಮ್ಮುತ್ತಿದೆ ಮತ್ತು ಇದು ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವುದರ ಜೊತೆಗೆ ಇಡೀ ದೇಶಕ್ಕೆ ವಿಸ್ತರಿಸುವ ಗುರಿಯನ್ನು ಹೊಂದಿದೆ. ಇದು ಕಲಿಕೆಯ ವ್ಯಾಪ್ತಿ, ಅನುಭವಗಳನ್ನು ಸಹ ಹೆಚ್ಚಿಸುತ್ತದೆ. ಶೈಕ್ಷಣಿಕ ತಂತ್ರಜ್ಞಾನವು ಶಿಕ್ಷಕರಿಗೆ ಸೇವಾ ತರಬೇತಿಯನ್ನು ನೀಡಲು ಮತ್ತು ಅವರ ವೃತ್ತಿಪರ ಗುಣಮಟ್ಟ ಮತ್ತು ಕೌಶಲ್ಯಗಳನ್ನು ಸುಧಾರಿಸಲು ಸಾಕಷ್ಟು ಅವಕಾಶಗಳನ್ನು ಒದಗಿಸುತ್ತದೆ. ಶೈಕ್ಷಣಿಕ ತಂತ್ರಜ್ಞಾನವು ಇಂದು ಪೂರ್ವ ಪ್ರಾಥಮಿಕ ಶಿಕ್ಷಣದಿಂದ ಆರಂಭಿಸಿ ಉನ್ನತ ಶಿಕ್ಷಣದವರೆಗೂ ಎಲ್ಲೆಡೆ ಆವರಿಸಿದ್ದು, ಔಪಚಾರಿಕ–ಅನೌಪಚಾರಿಕ, ದೂರಶಿಕ್ಷಣ ಮಾದರಿಗಳನ್ನು ಬಹಳವಾಗಿ ಪ್ರಭಾವಿಸಿದೆ.

## ಸಂಶೋಧನಾ ವಿಧಾನ

ಸಮೀಕ್ಷೆ ಮತ್ತು ಸಂದರ್ಶನ ವಿಧಾನಗಳನ್ನು ಬಳಸಿಕೊಂಡು ಕೊಝಿಕೋಡೆಯ ಹೈಸ್ಕೂಲ್ ವಿದ್ಯಾರ್ಥಿಗಳ ಮೇಲೆ ಕೈಟ್ ವಿಕ್ಟರ್ಸ್ ಚಾನೆಲ್‌ಗಳ ಶೈಕ್ಷಣಿಕ ಕಾರ್ಯಕ್ರಮಗಳ ಪ್ರಭಾವವನ್ನುಅಧ್ಯಯನವು ವಿಶ್ಲೇಷಿಸಲು ಪ್ರಯತ್ನಿಸಿದೆ. ಕೈಟ್‌ವಿಕ್ಟರ್ಸ್ ಅನ್ನು ವೀಕ್ಷಿಸುವ ಪ್ರವೃತ್ತಿಗಳನ್ನು ಗುರುತಿಸುವುದು, ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳ ಮೇಲೆ ಅದು ಬೀರಿರುವ ಪ್ರಭಾವಅರಿಯುವ ಉದ್ದೇಶಗಳನ್ನು ಒಳಗೊಂಡಿದೆ. ಅಧ್ಯಯನವನ್ನು ಪರಿಮಾಣಾತ್ಮಕ ವಿಧಾನದಲ್ಲಿ ನಡೆಸಲಾಗಿದೆ. ಕೋಜಿಕೋಡೆ ಶೈಕ್ಷಣಿಕ ಜಿಲ್ಲೆಯಲ್ಲಿನ ಹದಿನೈದು ಪ್ರೌಢ ಶಾಲೆಗಳಿಂದ ಒಟ್ಟು ತೊಂಭತ್ತು ವಿದ್ಯಾರ್ಥಿಗಳನ್ನು ಸರಳ ಯಾದೃಚ್ಛಿಕ ವಿಧಾನದಿಂದ ಅಧ್ಯಯನಕ್ಕೆ ಆಯ್ಕೆಮಾಡಿ ಕೊಂಡು ಸಮೀಕ್ಷೆ ನಡೆಸಲಾಗಿದೆ. ಅಧ್ಯಯನ ಕೈಗೊಂಡ ಸಂದರ್ಭದಲ್ಲಿ ಕೋವಿಡ್‌ನ ಎರಡನೇ ಅಲೆಯ ಲಾಕ್‌ಡೌನ್ ಹೇರಿಕೆಯಾದ ಪರಿಣಾಮ ಆನ್‌ಲೈನ್ ಮೂಲಕ ಮಾಹಿತಿ ಸಂಗ್ರಹಿಸಲಾಗಿದೆ.

## ಸಂಶೋಧನಾ ಫಲಿತಾಂಶಗಳು

ಅಧ್ಯಯನಕ್ಕೆ ಪ್ರತಿಕ್ರಿಯಿಸಿದವರಲ್ಲಿ, ಶೇಕಡಾ ಅರವತ್ತರಷ್ಟು ವಿದ್ಯಾರ್ಥಿನಿಯರಿದ್ದರೆ ಉಳಿದ ಪಾಲು ವಿದ್ಯಾರ್ಥಿ ಬಾಲಕರದ್ದಾಗಿದೆ. ಅರ್ಧಕ್ಕಿಂತ ಹೆಚ್ಚಿನ ಅಂದರೆ ಶೇ. 55 ಭಾಗ ಸಂವಾದಿಗಳು ಹತ್ತನೇ ತರಗತಿಗೆ ಸೇರಿದವರಾಗಿದ್ದಾರೆ. ಎಲ್ಲಾ ಸಂವಾದಿಗಳು ಕೈಟ್ ವಿಕ್ಟರ್ಸ್ ಚಾನಲ್‌ಅನ್ನು ವೀಕ್ಷಿಸುತ್ತಿದ್ದಾರೆ. ಕೈಟ್ ವಿಕ್ಟರ್ಸ್‌ಚಾನೆಲ್ ವೀಕ್ಷಿಸುವ ಪ್ರವೃತ್ತಿಗಳನ್ನು ಗಮನಿಸಿದಾಗ ಸಂವಾದಿಗಳಲ್ಲಿ ಕೇವಲ 26 ಪ್ರತಿಶತದಷ್ಟು ಜನರು ಈ ಶಿಕ್ಷಣ ಚಾನಲ್ ಅನ್ನು ಸಾಮಾನ್ಯ ದಿನದಲ್ಲಿ 30 ನಿಮಿಷಗಳವರೆಗೆ ವೀಕ್ಷಿಸುತ್ತಾರೆ ಎಂಬುದು ಸ್ಪಷ್ಟವಾಗಿದೆ. ಆದರೆ 63 ಪ್ರತಿಶತದಷ್ಟು ಜನರು ಕೈಟ್ ವಿಕ್ಟರ್ಸ್ ಕಾರ್ಯಕ್ರಮಗಳನ್ನು ದಿನಕ್ಕೆ 30 ನಿಮಿಷಗಳಿಗಿಂತ ಹೆಚ್ಚು ವೀಕ್ಷಿಸುತ್ತಾರೆ. 30–90 ನಿಮಿಷಗಳ ವೀಕ್ಷಣೆಯ ಮಾಡುವ ವೀಕ್ಷಕರ ಪಾಲು ಶೇಕಡಾ 50 ಆಗಿದೆ.

ಪ್ರತಿದಿನವೂ ಈ ಚಾನಲ್‌ಅನ್ನು ನೋಡುತ್ತೀರಾ ಎಂದು ಸಂಶೋಧಕರು ಕೇಳಿದ ಪ್ರಶ್ನೆಗೆ 90 ಸಂವಾದಿಗಳು ಪ್ರತಿಕ್ರಿಯಿಸಿದ್ದು, 66 ಪ್ರತಿಶತದಷ್ಟು ಜನರು ಪ್ರತಿನಿತ್ಯ ವೀಕ್ಷಿಸುವುದಾಗಿ ಹೇಳಿದ್ದಾರೆ ಮತ್ತು 34 ಪ್ರತಿಶತದಷ್ಟು ಮಂದಿ ಪ್ರತಿದಿನ ವೀಕ್ಷಿಸುತ್ತಿಲ್ಲಎಂದಿದ್ದಾರೆ. ಕೈಟ್ ವಿಕ್ಟರ್ಸ್‌ಚಾನಲ್‌ನ ಕಾರ್ಯಕ್ರಮಗಳಲ್ಲಿ ಫಸ್ಟ್ ಬೆಲ್ ಕಾರ್ಯಕ್ರಮವು ಅತ್ಯಂತ ನೆಚ್ಚಿನಕಾರ್ಯಕ್ರಮವಾಗಿದೆಎಂದು 56.6 ಪ್ರತಿಶತ ಸಂವಾದಿಗಳು ತಿಳಿಸಿದ್ದಾರೆ. ನಂತರದ ಸ್ಥಾನಗಳಲ್ಲಿ ಸೈನ್ಸ್ ವೀಕ್ (11.1%), ಎಂಜಾಯ್ ಫಿಸಿಕ್ಸ್ (7.7%) ಮತ್ತು ಈಕ್ವಿಲಿಬ್ರಿಯಮ್ (6.6%) ಕಾರ್ಯಕ್ರಮಗಳು ಪಡೆದಿವೆ. ಕೈಟ್ ವಿಕ್ಟರ್ಸ್‌ಚಾನಲ್‌ನ ಅತ್ಯಂತ ಜನಪ್ರಿಯ ಕಾರ್ಯಕ್ರಮ ಯಾವುದೆಂದು ಪರೀಕ್ಷಿಸಿದಾಗ 97.7 ಪ್ರತಿಶತ ಸಂವಾದಿಗಳು ಫಸ್ಟ್ ಬೆಲ್ ಕಾರ್ಯಕ್ರಮವೆಂದು ಅಭಿಪ್ರಾಯಪಟ್ಟಿದ್ದಾರೆ.

ಕೈಟ್ ವಿಕ್ಟರ್ಸ್ ಕಾರ್ಯಕ್ರಮವನ್ನು ಹೆಚ್ಚಿನ ಮಂದಿ ವೀಕ್ಷಿಸುತ್ತಿರುವ ಪರಿಣಾಮ ಜನಪ್ರಿಯತೆ ಆಧಾರದಲ್ಲಿ ಕಾರ್ಯಕ್ರಮಗಳ ಕಾಲಾವಧಿಯಲ್ಲಿ ಹೆಚ್ಚಳ ಮಾಡುವ ಅವಶ್ಯಕತೆ ಬಗ್ಗೆ ವಿಚಾರಿಸಿದಾಗ ಶೇ. 66 ರಷ್ಟುಜನರು ಈಗಿನ ಕಾರ್ಯಕ್ರಮದ ಮಾದರಿ ಮತ್ತು ಸಮಯ ಸೂಕ್ತವಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಕೇವಲ 34 ಪ್ರತಿಶತ ಸಂವಾದಿಗಳು ಕಾರ್ಯಕ್ರಮದ ಅವಧಿಯನ್ನು ಹೆಚ್ಚಿಸಲು ತಿಳಿಸಿದ್ದಾರೆ. ವಿದ್ಯುಚ್ಛಕ್ತಿ ಸಮಸ್ಯೆ, ಸಿಗ್ನಲ್ ಸಂಪರ್ಕದ ಸಮಸ್ಯೆ, ಇತ್ಯಾದಿಗಳಿಂದಾಗಿ ಕೈಟ್ ವಿಕ್ಟರ್ಸ್‌ತರಗತಿಗೆ ಹಾಜರಾಗಲು ಸಾಧ್ಯವಾಗದಾದಾಗ ಪರ್ಯಾಯ ವಿಧಾನಗಳ ಮೂಲಕ ವೀಕ್ಷಿಸುವ ಬಗ್ಗೆ ಸಂವಾದಿಗಳು ತಿಳಿಸಿದ್ದಾರೆ. ಶೇ. 59ರಷ್ಟು ಮಂದಿ ತಪ್ಪಿಸಿಕೊಂಡ ಕಾರ್ಯಕ್ರಮಗಳನ್ನು ಯೂಟ್ಯೂಬ್‌ನಲ್ಲಿ ವೀಕ್ಷಿಸುವುದಾಗಿ ಹೇಳಿದ್ದಾರೆ. ಶೇ. 28 ಸಂಖ್ಯೆಯ ವಿದ್ಯಾರ್ಥಿಗಳು ತಪ್ಪಿ ಹೋದ ತರಗತಿಯನ್ನು ನಿರ್ಲಕ್ಷಿಸುತ್ತಿದ್ದಾರೆ. ಆದರೆ 13 ಪ್ರತಿಶತದಷ್ಟು ಮಾದರಿಗಳು ಮರುಪ್ರಸಾರ ಸಮಯದಲ್ಲಿ ಅವುಗಳನ್ನು ವೀಕ್ಷಿಸುವುದಾಗಿ ತಿಳಿಸಿದ್ದಾರೆ. ಇದರರ್ಥ 72 ಪ್ರತಿಶತ ಜನರು ಕೈಟ್ ವಿಕ್ಟರ್ಸ್ ಕಾರ್ಯಕ್ರಮಗಳನ್ನು

ISSN : 2249-2429 ಸಂಶೋಧನೆ RNI REG.NO.KARKAN/2011/38712

ತಪ್ಪದೇ ಅಥವಾ ಯಾವುದಾದರೂ ಒಂದು ವೇದಿಕೆಯ ಮೂಲಕ ವೀಕ್ಷಿಸುತ್ತಿದ್ದಾರೆ.

ಕೈಟ್ ವಿಕ್ಟರ್ಸ್ ಕಾರ್ಯಕ್ರಮಗಳು ಕಲಿಕೆಯ ಮೇಲೆ ಬೀರಿರುವ ಪ್ರಭಾವದ ಬಗ್ಗೆ ಪ್ರಶ್ನಿಸಿದಾಗ ಶೇ. 82ರಷ್ಟು ಸಂವಾದಿಗಳು ಕೈಟ್ ವಿಕ್ಟರ್ಸ್ ಕಾರ್ಯಕ್ರಮಗಳ ಮೂಲಕ ಜ್ಞಾನವನ್ನು ಪಡೆದಿದ್ದೇವೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಕೇವಲ 18 ಪ್ರತಿಶತದಷ್ಟು ಜನರು ಜ್ಞಾನವನ್ನು ಹೆಚ್ಚಿಸಲು ಉಪಯುಕ್ತವಾಗಿಲ್ಲ ಎಂದು ಹೇಳಿದರು. ಕೈಟ್ ವಿಕ್ಟರ್ಸ್ ಕಾರ್ಯಕ್ರಮಗಳು ಪ್ರೌಢಶಾಲಾ ವಿದ್ಯಾರ್ಥಿಗಳ ತಿಳುವಳಿಕೆಯ ಮಟ್ಟಗಳೊಂದಿಗೆ ಹೆಚ್ಚು ಹೊಂದಿಕೆಯಾಗುತ್ತವೆ ಎಂದು ಅಧ್ಯಯನವು ಕಂಡು ಹಿಡಿದಿದೆ. 91 ಪ್ರತಿಶತ ಪ್ರತಿ ಸ್ಪಂದಕರು ಕಾರ್ಯಕ್ರಮಗಳಲ್ಲಿ ನೀಡಿರುವ ವಿಜ್ಞಾನ ವಿಷಯಗಳನ್ನು ಅರ್ಥಮಾಡಿಕೊಂಡಿರುವುದು ತಿಳಿದುಬಂದಿದೆ. ಅಲ್ಲದೆ, 86 ಪ್ರತಿಶತ ಮಾದರಿಯು ಫಸ್ಟ್ ಬೆಲ್ ಕಾರ್ಯಕ್ರಮದ ವಿಷಯಗಳ ಬಗ್ಗೆ ಅನುಮಾನಗಳಿಗೆ ಸಂಬಂಧಿಸಿದಂತೆ ತಮ್ಮ ಶಿಕ್ಷಕರನ್ನು ಸಂಪರ್ಕಿಸುವುದಾಗಿ ಹೇಳಿದೆ. ಇದರರ್ಥ ಈ ಚಾನಲ್‌ನ ಕಾರ್ಯಕ್ರಮಗಳು ಪ್ರೌಢಶಾಲಾ ಮಟ್ಟದ ವಿದ್ಯಾರ್ಥಿಗಳ ತಿಳುವಳಿಕೆಯೊಂದಿಗೆ ಉತ್ತಮ ಮಾಹಿತಿಯನ್ನು ಒದಗಿಸುವ ಮೂಲಕ ವಿದ್ಯಾರ್ಥಿಗಳ ಶೈಕ್ಷಣಿಕ ಕಾರ್ಯಕ್ಷಮತೆಯ ಮೇಲೆ ಪ್ರಭಾವ ಬೀರುತ್ತಿವೆ.

ಶಿಕ್ಷಣದ ವಿಧಾನದ ಬಗೆಗಿನ ಆದ್ಯತೆಗಳ ಬಗ್ಗೆ ಅಧ್ಯಯನವು ಪ್ರಶ್ನೆಗಳನ್ನು ಮುಂದಿಟ್ಟು ಮೌಲ್ಯಯುತ ಮಾಹಿತಿಗಳನ್ನು ಹೊರಗೆಡಹಿದೆ. ಶಿಕ್ಷಣದ ವಿಧಾನದ ಒಂದು ಭಾಗವಾಗಿ, ಆನ್‌ಲೈನ್ ಮತ್ತುದೈಹಿಕ ತರಗತಿಗಳ ನಡುವಿನ ಆದ್ಯತೆಯ ಬಗ್ಗೆ ಅಧ್ಯಯನವು ಕೆಲವು ಪ್ರಶ್ನೆಗಳನ್ನು ಮುಂದಿಟ್ಟಿದೆ. ಶೇ. 74 ಪ್ರತಿಶತದಷ್ಟು ಜನರು ದೈಹಿಕ ತರಗತಿಗಳು, ಕೈಟ್ ವಿಕ್ಟರ್ಸ್ ರೀತಿಯ ದೂರ/ಆನ್‌ಲೈನ್ ತರಗತಿಗಳಿಗಿಂತ (26%) ಹೆಚ್ಚು ಪ್ರಯೋಜನಕಾರಿ ಎಂದು ಅಭಿಪ್ರಾಯಪಟ್ಟಿದ್ದಾರೆ. ತರಗತಿಯ ಪರಿಣಾಮಕಾರಿತ್ವದ ಸಂದರ್ಭದಲ್ಲಿ, ಮತ್ತೆ ದೊಡ್ಡ ಮೊತ್ತದ ಸಂವಾದಿಗಳು (61%) ತಮ್ಮ ಶಾಲಾ ಶಿಕ್ಷಕರಿಂದ ಸಿಗುವ ನೇರ ತರಗತಿಗಳು ಆನ್‌ಲೈನ್ ಶಿಕ್ಷಣ ತರಗತಿಗಳಿಗಿಂತ ಉತ್ತಮವಾಗಿವೆ. ಆದರೆಇನ್ನೊಂದು ಪ್ರಶ್ನೆಗೆ, ಅಂದರೆ, ಕೈಟ್ ವಿಕ್ಟರ್ಸ್‌ಚಾನೆಲ್‌ನ ಮುಂದುವರಿಕೆಯ ಅಗತ್ಯತೆ, ಪ್ರತಿಕ್ರಿಯಿಸಿದವರಲ್ಲಿ ಅರ್ಧಕ್ಕಿಂತ ಹೆಚ್ಚು ಜನರು 'ಹೌದು' ಎಂದು ಹೇಳಿದರು, ಅಂದರೆ ಅವರ ದೈಹಿಕ ತರಗತಿಗಳು ಪ್ರಯೋಜನಕಾರಿ ಮತ್ತು ಪರಿಣಾಮಕಾರಿಯಾಗಿದ್ದರೂ ಅವರಿಗೆ ಇನ್ನೂ ಆನ್‌ಲೈನ್ ಶಿಕ್ಷಣದ ಅಗತ್ಯವಿದೆ ಎಂದಿದ್ದಾರೆ.

## ಉಪಸಂಹಾರ

ಅಧ್ಯಯನವು ಕೈಟ್ ವಿಕ್ಟರ್ಸ್ ಚಾನಲ್ ಮೂಲಕ ಅಂದರೆ ಟೆಲಿವಿಷನ್ ಮೂಲಕ ನೀಡುವ ಶಿಕ್ಷಣದ ಪ್ರಭಾವನ್ನು ಪರಿಶೀಲಿಸುವ ಗುರಿಯನ್ನು ಹೊಂದಿತ್ತು. ಕೈಟ್ ವಿಕ್ಟರ್ಸ್ ಕಾರ್ಯಕ್ರಮಗಳು ಪ್ರೌಢಶಾಲಾ ವಿದ್ಯಾರ್ಥಿಗಳಲ್ಲಿ ಜನಪ್ರಿಯವಾಗಿರುವುದು ತಿಳಿದುಬಂದಿದೆ. ವಿಶೇಷವಾಗಿ ಫಸ್ಟ್ ಬೆಲ್, ವಿದ್ಯಾರ್ಥಿಗಳ ಕಲಿಕೆಯ ವಿಧಾನಗಳ ಮೇಲೆ ಗಮನಾರ್ಹ ಪ್ರಭಾವವನ್ನು ಬೀರಿದೆಎಂದು ಸಂಶೋಧನೆ ಸೂಚಿಸುತ್ತದೆ. ಮೂರನೇ ಎರಡರಷ್ಟು ಸಂವಾದಿಗಳು ಪ್ರತಿದಿನ ಕೈಟ್ ವಿಕ್ಟರ್ಸ್ ಕಾರ್ಯಕ್ರಮಗಳನ್ನು ಮೂವತ್ತು ನಿಮಿಷಗಳಿಗಿಂತ ಹೆಚ್ಚು ಸಮಯ ವೀಕ್ಷಿಸುತ್ತಿದ್ದಾರೆ. ಫಸ್ಟ್ ಬೆಲ್ ಅತ್ಯಧಿಕ ಸ್ಕೋರ್‌ನೊಂದಿಗೆ ಹೆಚ್ಚು ಇಷ್ಟಪಟ್ಟ (ಪ್ರತಿಶತ ತೊಂಭತ್ತೇಳು) ಕಾರ್ಯಕ್ರಮವಾಗಿದೆ ಟೆಲಿವಿಷನ್ ಪ್ರಸಾರದ ಕಾರ್ಯಕ್ರಮವನ್ನು ತಪ್ಪಿಸಿಕೊಂಡರೆ, ಐವತ್ತೊಂಬತ್ತು ಪ್ರತಿಶತದಷ್ಟು ವಿದ್ಯಾರ್ಥಿಗಳು ಅದನ್ನು ಯೂಟ್ಯೂಬ್‌ನಲ್ಲಿ ವೀಕ್ಷಿಸುತ್ತಾರೆ. ಸಾಂಪ್ರದಾಯಿಕ ತರಗತಿಗಳೊಂದಿಗೆ ಕೈಟ್ ವಿಕ್ಟರ್ಸ್ ಕಾರ್ಯಕ್ರಮಗಳನ್ನು ಹೋಲಿಸಿದಾಗ ವಿದ್ಯಾರ್ಥಿಗಳು ಭೌತಿಕ ತರಗತಿಗಳನ್ನು ಇರಿಸಿಕೊಳ್ಳಲು ಆಯ್ಕೆ ಮಾಡಿಕೊಂಡರು. ಮೂರನೇ ನಾಲ್ಕರಷ್ಟು ಸಂವಾದಿಗಳು ಭೌತಿಕ ತರಗತಿಗಳು ಮೌಲ್ಯಯುತವೆಂದು ಭಾವಿಸಿದ್ದಾರೆ ಮತ್ತು ಅರವತ್ತೊಂದು ಪ್ರತಿಶತ ಸಂವಾದಿಗಳು ಇದೇ ಬಗೆಯ ಶಿಕ್ಷಣವು ಪರಿಣಾಮಕಾರಿಯಾಗಿದೆ ಎಂದು ಸೂಚಿಸುತ್ತದೆ. ಎಂಭತ್ತಾರು ಪ್ರತಿಶತ ಸಂವಾದಿಗಳು ಕಾರ್ಯಕ್ರಮಗಳ ಶೈಕ್ಷಣಿಕ ವಿಷಯಗಳ ಕುರಿತು ಉದ್ಭವಾಗುವ ಪ್ರಶ್ನೆಗಳಿಗೆ ತಮ್ಮ ನಿಯಮಿತ ಶಾಲಾ ಶಿಕ್ಷಕರನ್ನು ಸಂಪರ್ಕಿಸಿರುವುದಾಗಿ ಹೇಳಿದ್ದಾರೆ. ಇದಲ್ಲದೆ, ಮೂರನೇ ಎರಡರಷ್ಟು ಮಂದಿ ಪ್ರತಿಕ್ರಿಯಿಸಿದವರು ಕಾರ್ಯಕ್ರಮಗಳ ಅವಧಿಯನ್ನು ವಿಸ್ತರಿಸುವ ಅವಶ್ಯಕತೆಯಿಲ್ಲ ಎಂದಿದ್ದಾರೆ. ಆದಾಗ್ಯೂ, ಸಮೀಕ್ಷೆಗೆ ಪ್ರತಿಕ್ರಿಸಿದವರಲ್ಲಿ ಅರ್ಧಕ್ಕಿಂತ ಸ್ವಲ್ಪ ಹೆಚ್ಚು ಸಂವಾದಿಗಳು ಕೈಟ್‌ವಿಕ್ಟರ್ಸ್ ಚಾನಲ್ ಹಾಗೂ ಕಾರ್ಯಕ್ರಮಗಳನ್ನು ಮುಂದುವರಿಸಲು ಕೇಳಿಕೊಂಡರು.

ಕೋವಿಡ್–19 ಲಾಕ್‌ಡೌನ್ ಸಮಯದಲ್ಲಿ ಮಕ್ಕಳಿಗೆ ಶಿಕ್ಷಣವನ್ನು ಒದಗಿಸುವಲ್ಲಿಕೈಟ್ ವಿಕ್ಟರ್ಸ್‌ಚಾನಲ್ ಮತ್ತು ಅದರ ಕಾರ್ಯಕ್ರಮಗಳ ಪಾತ್ರ ನಿರ್ಣಾಯಕವಾಗಿವೆ ಮತ್ತು ಸಂಶೋಧನಾ ಫಲಿತಾಂಶಗಳಲ್ಲಿ ತಿಳಿಸಿದ ಸಂಗತಿಗಳು ಸ್ಪಷ್ಟಪಡಿಸುವಂತೆ ಅವುಗಳ ಪ್ರಭಾವವು ವ್ಯಾಪಕವಾಗಿದೆ. ವಿದ್ಯಾರ್ಥಿಗಳ ಕಲಿಕೆಯ ಪ್ರವೃತ್ತಿಗಳು, ಅಭ್ಯಾಸಗಳು ಮತ್ತು ವರ್ತನೆಗಳ ಮೇಲೆ ಪ್ರಭಾವವು ಸ್ಪಷ್ಟವಾಗಿದೆ ಮತ್ತು ಇದು ಸಮೂಹ ಶಿಕ್ಷಣದ ಹೊಸ ಸಾಮರ್ಥ್ಯವನ್ನು ವಿವರಿಸುತ್ತದೆ. ಮಕ್ಕಳು ಉನ್ನತ ಗುಣಮಟ್ಟದ ಜ್ಞಾನವನ್ನು ಪಡೆದದ್ದಲ್ಲದೇ, ಅವರ ಗ್ರಹಿಕೆಯನ್ನು ಸುಧಾರಿಸುವಂತಹ ಸೃಜನಶೀಲ ವಿಧಾನಗಳಲ್ಲಿ ಹೊಸ ಆಲೋಚನೆಗಳು ಮತ್ತು ವಿಷಯಗಳನ್ನು ಕಲಿತರು. ಆದಾಗ್ಯೂ, ಪಠ್ಯದ ಪರಿಕಲ್ಪನೆಗಳ ತಿಳುವಳಿಕೆಯ ಸಮಯದಲ್ಲಿ ಬರಬಹುದಾದ ಪ್ರಶ್ನೆಗಳನ್ನು ಪರಿಹರಿಸುವಲ್ಲಿ ವ್ಯಕ್ತಿಗತವಾಗಿ ಶಿಕ್ಷಕರು ನೀಡುವ ಮಾರ್ಗದರ್ಶನವು ಹೆಚ್ಚು ಪರಿಣಾಮಕಾರಿ ಮತ್ತು ಉಪಯುಕ್ತವಾಗಿದೆ ಎಂದು ಸಂಶೋಧನೆ ತೋರಿಸಿದೆ. ಟೆಲಿವಿಷನ್ ಮೂಲಕ ಶೈಕ್ಷಣಿಕ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವುದು ಸಾಂಪ್ರದಾಯಿಕ ತರಗತಿಯ ಶಿಕ್ಷಣಕ್ಕೆ ಪರಿಣಾಮಕಾರಿ ಪೂರಕ ಚಟುವಟಿಕೆಯಾಗಬಲ್ಲದು ಎಂಬುದು ಸಂಶೋಧನೆ ತಿಳಿಸಿದ ಮುಖ್ಯ ಮಾಹಿತಿಯಾಗಿದೆ. ಜೊತೆಗೆ ಕೇವಲ ಟೆಲಿವಿಷನ್ ಮೂಲಕ ನೀಡುವ ಶಿಕ್ಷಣವು ಶಾಲಾ ಶಿಕ್ಷಣಕ್ಕೆ ಬದಲಿಯಾಗಿ ಕಾರ್ಯನಿರ್ವಹಿಸಲು ಸಾಧ್ಯವಿಲ್ಲ ಎಂದು ಸಾಬೀತಾಗಿದೆ. ಶಾಲಾಮಕ್ಕಳಿಗೆ ಉತ್ತಮ ಗುಣಮಟ್ಟದ ಶೈಕ್ಷಣಿಕ ಮಾಹಿತಿ ಮತ್ತುಕಲಿಕೆಯ ಅನುಭವವನ್ನುಒದಗಿಸಲು ಶೈಕ್ಷಣಿಕ ಟೆಲಿವಿಷನ್ ಬಳಸುವುದು ಮತ್ತು ಶಾಲೆಯ ನಿಯಮಿತ ತರಗತಿಗಳ ಕಲಿಕೆಯನ್ನು ಸಂಯೋಜಿಸಿ ನವಮಾದರಿಯ ಶಿಕ್ಷಣ ನೀಡುವುದು ಹೆಚ್ಚು ಪರಿಣಾಮಕಾರಿಯಾಗಿ ಫಲಿತಾಂಶ ನೀಡುತ್ತದೆ.

## ಪರಾಮರ್ಶನ ಗ್ರಂಥಗಳು


- **ಇಸ್ರೊ (2004) :** ಎಜುಸ್ಯಾಟ್. Retrieved from https://www.isro.gov.in/EDUSAT.html
- **ಪ್ರವೀಣ್ ಎ.ಜಿ. (2004) :** ಜ್ಞಾನದರ್ಶನ್. Retrieved from https://praveen1607.blogspot.com/2017/01/gyan-dharshan.html
- **IANS (2021) :** Kerala's KITE Victers set to launch a second channel, Times of India official newsportal, 2021 Aug 04.
- **KITE (2006) :** About Victers. Retrieved from https://www.kite.kerala.gov.in/
- **Naveed, F. (2020) :** Satellite Instructional Television Experiment (SITE). Retrieved fromhttps://www. masscommunicationtalk.com/satellite-instructional-television-experiment-site.html


■■

ISSN : 2249-2429 ಸಂಶೋಧನೆ RNI REG.NO.KARKAN/2011/38712

# ಅಧ್ಯಾಪಕರಿಗಾಗಿ ಸ್ವಬೋಧನಾ ಸಾಮಗ್ರಿಯ ತಯಾರಿ ಮತ್ತು ಮೌಲ್ಯೀಕರಣ ಕುರಿತು ಒಂದು ಅಧ್ಯಯನ

✍ **ಡಾ. ಚಿದಾನಂದ ಎ.ಎಲ್.,** ಸಂಯೋಜಕರು, ಶಿಕ್ಷಣಶಾಸ್ತ್ರ ವಿಭಾಗ(ಎಂ.ಎಡ್), ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ–574 199, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ, ಕರ್ನಾಟಕ

## ಪೀಠಿಕೆ

ಮಾನವ ಸಮಾಜದಲ್ಲಿ ಅಂಗವಿಕಲತೆ ಎಂಬುದು ಅಸಾಮಾನ್ಯವಾದುದೇನಲ್ಲ. ಅನಾಧಿಕಾಲದಿಂದಲೂ – ಅಂಗವಿಕಲತೆ ಜೀವಿಗಳನ್ನು ಕಾಡುತ್ತಿರುವ ಸಮಸ್ಯೆಯಾಗಿದೆ. ನಾಗರಿಕತೆ ಬೆಳೆದಂತೆ ಹಾಗೂ ಮಾನವಕುಲದ ಸಾಧನೆಯ ಫಲವಾಗಿ ಅಂಗವಿಕಲತೆ ಹೊಂದಿರುವವರ ಬಗೆಗಿನ ಮನೋಭಾವಗಳು ಬದಲಾಗುತ್ತ ಬಂದಿವೆ. ಇವರಿಗೆ ಬೇಕಿರುವ ಸೌಲಭ್ಯಗಳನ್ನು ಒದಗಿಸಿಕೊಟ್ಟು ಇವರೂ ಕೂಡ ಸುಂದರವಾದ ಮತ್ತು ಆರೋಗ್ಯಕರವಾದ ವಾತಾವರಣದಲ್ಲಿ ಬೆಳೆದು ಸಮಾಜದ ಮುಖ್ಯವಾಹಿನಿಯಲ್ಲಿ ಪಾಲ್ಗೊಳ್ಳುವಂತೆ ಮಾಡಲು ಇಂದು ಸಮಾಜ ಮುಂದಾಗಿದೆ.

1961ರಲ್ಲಿ ಸರ್ವರಿಗೂ ಶಿಕ್ಷಣ ಎಂಬ ನೀತಿಯನ್ನು ಜಾರಿಗೆ ತರಲಾಯಿತು. ಇದರಿಂದ ಅನೇಕ ವಿಶೇಷ ಶಾಲೆಗಳು ಪ್ರಾರಂಭವಾದವು. ಆದರೆ ಈ ವಿಶೇಷ ಶಾಲೆಗಳಲ್ಲಿ ಕೆಲವೇ ಮಕ್ಕಳು ಶಿಕ್ಷಣವನ್ನು ಪಡೆಯುತ್ತಿದ್ದು ಸಮಾಜದ ಇನ್ನೂ ಉಳಿದ ಇಂತಹ ಮಕ್ಕಳು ಶಿಕ್ಷಣದಿಂದ ಹೊರಗುಳಿಯುವಂತಾಯಿತು. ವಿಶೇಷ ಶಿಕ್ಷಣ ವ್ಯವಸ್ಥೆಯು ತುಂಬಾ ದುಬಾರಿ ವೆಚ್ಚದಾಯಕವಾದುದರಿಂದ 1970ರ ದಶಕದಲ್ಲಿ ಸಮನ್ವಯ ಶಿಕ್ಷಣವನ್ನು ಜಾರಿಗೆ ತರಲಾಯಿತು.

1977ರ ಅಧಿವೇಶನದಲ್ಲಿ ವಿಶ್ವ ಅಂಗವಿಕಲರ ದಿನಾಚರಣೆಯನ್ನು ಆಚರಿಸಬೇಕೆಂದು ಶಿಫಾರಸು ಮಾಡಲಾಯಿತು. 1978–79ರ ಅಧಿವೇಶನದಲ್ಲಿ ಅಂಗವಿಕಲರ ಕಲ್ಯಾಣ ಕಾರ್ಯಕ್ರಮ ಸಂಪೂರ್ಣ ಸಹಭಾಗಿತ್ವ ಮತ್ತು ಸಮಾನತೆ ಎಂಬುದಾಗಿರಬೇಕೆಂದು ತೀರ್ಮಾನಿಸಲಾಯಿತು. 1981ನೇ ವರ್ಷವನ್ನು ಅಂತರರಾಷ್ಟ್ರೀಯ ಅಂಗವಿಕಲರ ವರ್ಷವೆಂದು ಘೋಷಿಸಿ ಅಂಗವಿಕಲರ ಕಲ್ಯಾಣ ಕಾರ್ಯಕ್ರಮ ಸಂಪೂರ್ಣ ಸಹಭಾಗಿತ್ವ ಮತ್ತು ಸಮಾನತೆ ಎಂಬುದಾಗಿರಬೇಕೆಂದು ತೀರ್ಮಾನಿಸಲಾಯಿತು. 1961ನೇ ವರ್ಷವನ್ನು ಅಂತರರಾಷ್ಟ್ರೀಯ ಅಂಗವಿಕಲರ ವರ್ಷವೆಂದು ಘೋಷಿಸಿ ಅಂಗವಿಕಲರ ದಿನಾಚರಣೆಯನ್ನು ಆಚರಿಸಲಾಯಿತು.

1982ರ ಅಧಿವೇಶನದಲ್ಲಿ ಅಂಗವಿಕಲರ ಕಲ್ಯಾಣ ಕಾರ್ಯಕ್ರಮಗಳು ಹೇಗೆ ನಡೆದಿವೆ ಎಂಬುದನ್ನು ಪರಿಶೀಲಿಸಲು ವಿಶ್ವವ್ಯಾಪಿ ಕ್ರಿಯಾಶೀಲ ಯೋಜನಾ ಕಾರ್ಯಕ್ರಮ ಎಂಬ ಮಾರ್ಗದರ್ಶನ ಕೈಪಿಡಿಯನ್ನು ಬಿಡುಗಡೆ ಮಾಡಲಾಯಿತು.

1983–1992ರ ವರ್ಷಗಳನ್ನು ಅಂಗವಿಕಲರ ದಶಕಗಳ ವರ್ಷಗಳೆಂದು ಘೋಷಿಸಲಾಯಿತು. 1993ರಲ್ಲಿ ವಿಶ್ವಸಂಸ್ಥೆಯು ಸಮಾಜದಲ್ಲಿ ಎಲ್ಲರನ್ನೂ ಒಳಗೊಂಡಂತೆ ಸಮಾನ ಅವಕಾಶಗಳನ್ನು ಕಲ್ಪಿಸುವುದು, ಹಕ್ಕುಗಳನ್ನು ಸಂರಕ್ಷಿಸುವುದು ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಏಕರೂಪದ ನಿಯಮಗಳನ್ನು ಮಾಡುವ ಬಗ್ಗೆ ತೀರ್ಮಾನಗಳನ್ನು ತೆಗೆದುಕೊಳ್ಳಲಾಯಿತು.

1993 ರಿಂದ 2002ರ ವರ್ಷಗಳನ್ನು ಏಷಿಯಾ ಫೆಸಿಫಿಕ್ – ಅಂಗವಿಕಲರ ಘೋಷಿಸಲಾಯಿತು. ಸಮಾಜದ ಮುಖ್ಯವಾಹಿನಿಯಲ್ಲಿ ಬೆಳೆಯುವಂತೆ ಮಾಡಬೇಕಾದರೆ ಶಿಕ್ಷಣವೇ ಇದಕ್ಕೆ ಸಂಜೀವಿನಿಯಾಗಬೇಕು. ಶಿಕ್ಷಣದಿಂದ ಮಾತ್ರ ಜನರಲ್ಲಿ ಹುದುಗಿರುವ ಮೂಢನಂಬಿಕೆ, ಜಾತೀಯತೆ, ಅಂಧಶ್ರದ್ಧೆ ಈ ಮಕ್ಕಳ ಬಗ್ಗೆ ಇರುವ ಸಂಕುಚಿತ ಮನೋಭಾವನೆಯನ್ನು ಹೋಗಲಾಡಿಸಲು ಸಾಧ್ಯ. ಈ ದಿಸೆಯಲ್ಲಿ ಭಾರತ ಸರಕಾರದ ಮಾನವ ಸಂಪನ್ಮೂಲ ಇಲಾಖೆಯು ಅಂತರರಾಷ್ಟ್ರೀಯ ಮಟ್ಟದ ಸಂಸ್ಥೆಗಳ ಸಹಕಾರದೊಂದಿಗೆ ವಿವಿಧ ಹಂತಗಳಲ್ಲಿ ಸಮನ್ವಯ ಶಿಕ್ಷಣವನ್ನು ನೀಡುತ್ತಾ ಬಂದಿದೆ.

## ಸಮನ್ವಯ ಶಿಕ್ಷಣದ ಅರ್ಥ

ವಿಶೇಷ ಸಮಸ್ಯೆಗಳುಳ್ಳ ಮಕ್ಕಳೂ ಸಹ ಇತರೆ ಮಕ್ಕಳಂತೆ ಬೆಳೆಯಲು, ವಿಕಾಸ ಹೊಂದಲು ಸಹಾಯಕವಾಗಲು ಕನಿಷ್ಠತಮ ನಿಬಂಧನೆಗಳುಳ್ಳ ಪರಿಸರವನ್ನು ಒದಗಿಸಬೇಕು.

ಈ ನಿಟ್ಟಿನಲ್ಲಿ ವಿಶೇಷ ಸಮಸ್ಯೆಗಳುಳ್ಳ ಮಕ್ಕಳಿಗೆ ಸಾಮಾನ್ಯ ಶಾಲಾ ತರಗತಿಗಳಲ್ಲಿ ಇತರೇ ಮಕ್ಕಳಿಗೆ ನೀಡುವಂತಹ ಶೈಕ್ಷಣಿಕ ಅನುಭವಗಳನ್ನು ಒದಗಿಸುವುದು. ಜೊತೆಗೆ ಕೆಲವು ವಿಶೇಷ ಕ್ರಮಗಳು ಮತ್ತು ನಿಯಮಗಳನ್ನು ಅನುಸರಿಸಿ ಪೂರಕ ಚಟುವಟಿಕೆಗಳನ್ನು ಕೈಗೊಂಡು ಇತರ ಮಕ್ಕಳಂತೆಯೇ ಈ ಮಕ್ಕಳೂ ಸಹ ಕಲಿಯಲು ಸಾಧ್ಯವಾಗುವಂತೆ ಮಾಡಲು ಪ್ರಯತ್ನಿಸುವ ಶೈಕ್ಷಣಿಕ ವ್ಯವಸ್ಥೆಯೇ ಸಮನ್ವಯ ಶಿಕ್ಷಣ.

ಸಮನ್ವಯತೆ ಎಂದರೆ ವಿಶೇಷ ಸವಾಲುಗಳುಳ್ಳ ಮಕ್ಕಳನ್ನು ಅವರಿರುವ ಸ್ಥಳದಿಂದ ಸಾಮಾನ್ಯ ಶಾಲೆಗೆ ಸೇರಿಸುವುದು ಮಾತ್ರವಲ್ಲ, ಎಲ್ಲಾ ಮಕ್ಕಳಿಗೂ ಸಮಾನ ಶಿಕ್ಷಣವನ್ನು ಅವಕಾಶ ಮಾಡಿಕೊಡುವುದು ಮತ್ತು ವಿಶೇಷ ಸವಾಲುಗಳುಳ್ಳ ಮಕ್ಕಳೂ ಮಕ್ಕಳೂ ಸೇರಿದಂತೆ ಎಲ್ಲಾ ಕಲಿಯುವಂತೆ ಶಾಲೆಗಳನ್ನು ರೂಪಿಸುವುದು. ಎಲ್ಲಾ ಮಕ್ಕಳನ್ನು ತಲುಪಲು ಸಮನ್ವಯತೆಯು ಉತ್ತಮ ಬೋಧನೆಯ ಎಲ್ಲಾ ಕ್ರಮಗಳು ಮತ್ತು ವಿಶೇಷ ಬೋಧನಾ ಸಾಮಾಗ್ರಿಗಳ ಉಪಯೋಗವನ್ನು ಒಳಗೊಂಡಿರುತ್ತದೆ.

## ಅಧ್ಯಯನದ ಅವಶ್ಯಕತೆ

ಇಂದಿನ ಶಿಕ್ಷಣ ಕ್ರಮವು ಫಲಿತಾಂಶ ಕೇಂದ್ರಿತವಾಗಿದೆ, ಯಶಸ್ವಿಗೆ ಮನ್ನಣೆ ನೀಡುತ್ತದೆ, ತೀವ್ರವಾದ ಸ್ಪರ್ಧಾತ್ಮಕತೆಯನ್ನು ಪ್ರೋತ್ಸಾಹಿಸುತ್ತದೆ, ಕಂಠಪಾಠದ ಸಂಸ್ಕೃತಿಗೆ ಮಣೆ ಹಾಕುತ್ತಿದೆ. ನಿಜವಾದ ಅರ್ಥಪೂರ್ಣ ಕಲಿಕೆ ನಡೆಯುತ್ತಿಲ್ಲ. ಇದರಲ್ಲಿಯೂ ಮುಖ್ಯವಾದುದು ಕಲಿಕೆಯ ಸಮಸ್ಯೆಗಳ ಬಗ್ಗೆ ಸಾಕಷ್ಟು ಗಮನಗಳನ್ನು ನೀಡದಿರುವದು. ಸಮನ್ವಯ ಶಿಕ್ಷಣದ ಬಗ್ಗೆ ಶಿಕ್ಷಕರು, ಪೋಷಕರು ಗಮನಹರಿಸಿ, ಪರಿಹರಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗುವ ಅಗತ್ಯವಿದೆ.

ಭಾರತದಲ್ಲಿ ಸಮನ್ವಯ ಶಿಕ್ಷಣಕ್ಕೆ ಸಂಬಂಧಿಸಿದ ಸಂಶೋಧನಾ ಲೇಖನಗಳು ಕಂಡುಬಂದಿವೆಯಾದರೂ ಗಮನಾರ್ಹವಾಗಿ ಪ್ರಯೋಗವಾಗಿಲ್ಲ. ಶಾಲೆಗಳಲ್ಲಿ ಶಿಕ್ಷಕರಿಗೆ ನ್ಯೂನತೆಯುಳ್ಳ ಮಕ್ಕಳನ್ನು ಗುರುತಿಸುವ ಮತ್ತು ನಿವಾರಿಸುವ ಕ್ರಮಕ್ಕಾಗಿ ಸಮನ್ವಯ ಶಿಕ್ಷಣದೊಂದಿಗೆ ಕಲಿಕಾ ಸವಾಲುಗಳನ್ನು ಹೊಂದಿರುವ ತರಬೇತಿಯ ಅಗತ್ಯವಿದೆ. ಸವಾಲುಗಳುಳ್ಳ ಮಕ್ಕಳು ಸೂಕ್ತ ಪರಿಹಾರದ ಬಲದಿಂದ ಪ್ರಗತಿ ಸಾಧಿಸಿದರೆ

ISSN : 2249-2429 ಸಂಶೋಧನೆ RNI REG.NO.KARKAN/2011/38712

ಸಾಮುದಾಯಿಕ ಜೀವನದ ಉನ್ನತಿಯಾದಂತೆ ಎಂಬ ಉದಾರ ನಿಲುವಿನ ಅವಶ್ಯಕತೆಯನ್ನು ಹೊಂದಿದೆ.

ಸಮನ್ವಯ ಶಿಕ್ಷಣದ ಸೌಲಭ್ಯಗಳನ್ನು ತಿಳಿದುಕೊಂಡಿರುವ ವ್ಯಕ್ತಿಗಳು ಹೆಚ್ಚಾಗಬೇಕು. ಸಮನ್ವಯ ಸಮಾವೇಶದಲ್ಲಿ ನಿರ್ದಿಷ್ಟವಾದ ಸವಾಲುಗಳನ್ನು ಆರಂಭದಲ್ಲಿಯೇ ಗುರುತಿಸುವ, ಪತ್ತೆ ಹಚ್ಚುವ ಕೆಲಸಗಳಾಗಬೇಕು. ಕಂಡು ಬಂದ ದೋಷಗಳ ಪರಿಹಾರಕ್ಕೆ ವೈಜ್ಞಾನಿಕವಾದ, ಶಾಸ್ತ್ರೀಯವಾದ ಪರಿಹಾರ ಬೋಧನಾ ಕ್ರಮಗಳನ್ನು ಶಾಲೆಗಳಲ್ಲಿ ಅಳವಡಿಸಲು ಪ್ರಯತ್ನಗಳಾಗಬೇಕು. ಈ ಕುರಿತು ನಿತ್ಯವೂ ಶಿಕ್ಷಕರ ಗಮನ ಇರಬೇಕು. ಶಿಕ್ಷಕರ ಪ್ರಯತ್ನಗಳನ್ನು ಅರಿತು, ಪೋಷಕರು ಮನೆಯಲ್ಲಿಯೂ ಮಕ್ಕಳಿಗೆ ಪ್ರೋತ್ಸಾಹ, ಮಾರ್ಗದರ್ಶನ, ಉತ್ತೇಜನ ನೀಡಬೇಕು.

ಸಮನ್ವಯ ಶಿಕ್ಷಣದ ವಿಚಾರದಲ್ಲಿ ಶಿಕ್ಷಕರು ಉದಾಸೀನ ತಾಳದೆ ಸೂಕ್ಷ್ಮ ಸಂವೇದನಾಶೀಲತೆ ಜಾಗೃತಗೊಳಿಸುವ ತರಬೇತಿ ಕಾರ್ಯಕ್ರಮಗಳಾಗಬೇಕು, ಸವಾಲುಗಳಿಂದಾಗಿ ಉದ್ಭವಿಸುವ ಮಾನಸಿಕ – ಸಾಮಾಜಿಕ ಸಮಸ್ಯೆಗಳ ಪರಿಹಾರಕ್ಕೆ ವಿಶ್ವ ಆರೋಗ್ಯ ಸಂಸ್ಥೆ ಸೂಚಿಸಿದ ಮೂರು ಮುಖಗಳ ಕಾರ್ಯಕ್ರಮ ಜಾರಿಗೆ ಬರಬೇಕು.

ಪ್ರಸ್ತುತ ಶಿಕ್ಷಣ ವ್ಯವಸ್ಥೆಯಲ್ಲಿ ಸ್ವಬೋಧನಾ ಸಾಮಗ್ರಿಯ ಅವಶ್ಯಕತೆ ಬಹಳವಾಗಿ ಇದೆ. ಈ ಕಲ್ಪನೆಯ ಅರಿವು ಎಲ್ಲ ಶಿಕ್ಷಕರಿಗೂ ಅಗತ್ಯ. ಶಿಕ್ಷಕರೆಲ್ಲರಿಗೂ ಸ್ವಬೋಧನಾ ಸಾಮಗ್ರಿಯನ್ನು ನೀಡುವುದರಿಂದ – ಹಣ, ಸಮಯ ಮತ್ತು ಹೊಂದಾಣಿಕೆಯನ್ನು ಕಾಪಾಡಿಕೊಳ್ಳುವ ಸಾಧ್ಯತೆಯಿದೆ. ಇಲ್ಲಿ ಸರಕಾರ ಅಥವಾ ಒಂದು ಸಂಸ್ಥೆ ತರಬೇತಿಯೊಂದಕ್ಕೆ ವ್ಯಯಿಸುವ ಖರ್ಚುವೆಚ್ಚಗಳನ್ನು ಸ್ವಬೋಧನಾ ಸಾಮಗ್ರಿ ನೀಡುವ ಮೂಲಕ ಉಳಿಸಿಕೊಳ್ಳುವ ಸಾಧ್ಯತೆಯಿದೆ. ತರಬೇತಿಯ ನಿಗದಿತ ಸಮಯಕ್ಕೆ ಹೊಂದಾಣಿಕೆ ಮಾಡಿಕೊಳ್ಳಲಾಗದ ಶಿಕ್ಷಕರು ಸಮಯವನ್ನು ಕಾಪಾಡಿಕೊಳ್ಳಲು ಸಾಧ್ಯತೆಯಿದೆ. ಅದೇ ರೀತಿ ಪಾಠಬೋಧನೆ ಮತ್ತು ಸ್ವಬೋಧನಾ ಸಾಮಗ್ರಿಯೊಂದಿಗೆ ದಿನನಿತ್ಯದ ವೇಳೆಯನ್ನು ಹೊಂದಾಣಿಕೆ ಮಾಡಿಕೊಳ್ಳುವ ಸಾಧ್ಯತೆಯಿದೆ.

## ಅಧ್ಯಯನದ ಉದ್ದೇಶಗಳು

1. ಸಮನ್ವಯ ಶಿಕ್ಷಣದಲ್ಲಿ ತರಬೇತಿಗಾಗಿ ಪ್ರಾಥಮಿಕ ಶಾಲಾ ಶಿಕ್ಷಕ ಶಿಕ್ಷಕಿಯರಿಗೆ ಸ್ವಬೋಧನಾ ಸಾಮಗ್ರಿಯನ್ನು ಮೌಲ್ಯೀಕರಿಸುವುದು. (ಅಂದರೆ ತರಬೇತಿ ಪೂರ್ವ ಮತ್ತು ತರಬೇತಿ ನಂತರದಲ್ಲಿನ ಪರೀಕ್ಷೆಗಳಲ್ಲಿ ಶಿಕ್ಷಕರ–ಶಿಕ್ಷಕಿಯರ ಸರಾಸರಿಗಳ ನಡುವೆ ವ್ಯತ್ಯಾಸವಿದೆಯೇ ಎಂದು ನೋಡುವುದು).
2. ಸಮನ್ವಯ ಶಿಕ್ಷಣದ ಪರಿಕಲ್ಪನೆಗಳ ಅರಿವು ಮೂಡಿಸುವಲ್ಲಿ ತರಬೇತಿಗಾಗಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಸಂಬಂಧಿಸಿದಂತೆ ಸ್ವಬೋಧನಾ ಸಾಮಗ್ರಿಯನ್ನು ಮೌಲ್ಯೀಕರಿಸುವುದು. (ಅಂದರೆ ತರಬೇತಿ ಪೂರ್ವ ಮತ್ತು ತರಬೇತಿ ನಂತರದಲ್ಲಿನ ಪರೀಕ್ಷೆಗಳಲ್ಲಿ ಶಿಕ್ಷಕರ ಸರಾಸರಿಗಳ ನಡುವೆ ವ್ಯತ್ಯಾಸವಿದೆಯೇ ಎಂದು ನೋಡುವುದು).
3. ಸಮನ್ವಯ ಶಿಕ್ಷಣದ ಪರಿಕಲ್ಪನೆಗಳ ಅರಿವು ಮೂಡಿಸುವಲ್ಲಿ ತರಬೇತಿಗಾಗಿ ಪ್ರಾಥಮಿಕ ಶಾಲಾ ಶಿಕ್ಷಕಿಯರಿಗೆ ಸಂಬಂಧಿಸಿದಂತೆ ಸ್ವಬೋಧನಾ ಸಾಮಗ್ರಿಯನ್ನು ಮೌಲ್ಯೀಕರಿಸುವುದು. (ಅಂದರೆ ತರಬೇತಿ ಪೂರ್ವ ಮತ್ತು ತರಬೇತಿ ನಂತರದಲ್ಲಿನ ಪರೀಕ್ಷೆಗಳಲ್ಲಿ ಶಿಕ್ಷಕಿಯರ ಸರಾಸರಿಗಳ ನಡುವೆ ವ್ಯತ್ಯಾಸವಿದೆಯೇ ಎಂದು ನೋಡುವುದು).
4. ಸಮನ್ವಯ ಶಿಕ್ಷಣದ ಪರಿಕಲ್ಪನೆಗಳ ಅರಿವು ಮೂಡಿಸುವಲ್ಲಿ ತರಬೇತಿಗಾಗಿ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕ–ಶಿಕ್ಷಕಿಯರಿಗೆ ಸಂಬಂಧಿಸಿದಂತೆ ಸ್ವಬೋಧನಾ ಸಾಮಗ್ರಿಯನ್ನು ಮೌಲ್ಯೀಕರಿಸುವುದು. (ಅಂದರೆ ತರಬೇತಿ ಪೂರ್ವ ಮತ್ತು ತರಬೇತಿ ನಂತರದಲ್ಲಿನ ಪರೀಕ್ಷೆಗಳಲ್ಲಿ ಸರ್ಕಾರಿ ಶಾಲಾ ಶಿಕ್ಷಕ–ಶಿಕ್ಷಕಿಯರ ಸರಾಸರಿಗಳ ನಡುವೆ ವ್ಯತ್ಯಾಸವಿದೆಯೇ ಎಂದು ನೋಡುವುದು).
5. ಸಮನ್ವಯ ಶಿಕ್ಷಣದ ಪರಿಕಲ್ಪನೆಗಳ ಅರಿವು ಮೂಡಿಸುವಲ್ಲಿ ತರಬೇತಿಗಾಗಿ ಖಾಸಗಿ ಪ್ರಾಥಮಿಕ ಶಾಲಾ ಶಿಕ್ಷಕ–ಶಿಕ್ಷಕಿಯರಿಗೆ ಸಂಬಂಧಿಸಿದಂತೆ ಸ್ವಬೋಧನಾ ಸಾಮಗ್ರಿಯನ್ನು ಮೌಲ್ಯೀಕರಿಸುವುದು. (ಅಂದರೆ ತರಬೇತಿ ಪೂರ್ವ ಮತ್ತು ತರಬೇತಿ ನಂತರದಲ್ಲಿನ ಪರೀಕ್ಷೆಗಳಲ್ಲಿ ಖಾಸಗಿ ಶಾಲಾ ಶಿಕ್ಷಕ–ಶಿಕ್ಷಕಿಯರ ಸರಾಸರಿಗಳ ನಡುವೆ ವ್ಯತ್ಯಾಸವಿದೆಯೇ ಎಂದು ನೋಡುವುದು).

## ಅಧ್ಯಯನದ ಪೂರ್ವ ಸಿದ್ಧಾಂತಗಳು

1. ಸಮನ್ವಯ ಶಿಕ್ಷಣಕ್ಕೆ ಸಂಬಂಧಿಸಿದ ಪರಿಕಲ್ಪನೆಗಳ ಕುರಿತಂತೆ ಪ್ರಾಥಮಿಕ ಶಾಲಾ ಮಟ್ಟದ ಶಿಕ್ಷಕ ಶಿಕ್ಷಕಿಯರ ಪೂರ್ವಪರೀಕ್ಷೆ ಮತ್ತು ಅಂತಿಮ ಪರೀಕ್ಷೆಯ ಸರಾಸರಿಗಳಲ್ಲಿ ಯಾವುದೇ ಗಮನಾರ್ಹ ವ್ಯತ್ಯಾಸವಿರುವುದಿಲ್ಲ.
2. ಸಮನ್ವಯ ಶಿಕ್ಷಣಕ್ಕೆ ಸಂಬಂಧಿಸಿದ ಪರಿಕಲ್ಪನೆಗಳ ಅರಿವಿನ ಕುರಿತಂತೆ ಪ್ರಾಥಮಿಕ ಶಾಲಾ ಮಟ್ಟದ ಶಿಕ್ಷಕರ ಪೂರ್ವಪರೀಕ್ಷೆ ಮತ್ತು ಅಂತಿಮ ಪರೀಕ್ಷೆಯ ಸರಾಸರಿಗಳಲ್ಲಿ ಯಾವುದೇ ಗಮನಾರ್ಹ ವ್ಯತ್ಯಾಸವಿರುವುದಿಲ್ಲ.
3. ಸಮನ್ವಯ ಶಿಕ್ಷಣಕ್ಕೆ ಸಂಬಂಧಿಸಿದ ಪರಿಕಲ್ಪನೆಗಳ ಅರಿವಿನ ಕುರಿತಂತೆ ಪ್ರಾಥಮಿಕ ಶಾಲಾ ಮಟ್ಟದ ಶಿಕ್ಷಕಿಯರ ಪೂರ್ವಪರೀಕ್ಷೆ ಮತ್ತು ಅಂತಿಮ ಪರೀಕ್ಷೆಯ ಸರಾಸರಿಗಳಲ್ಲಿ ಯಾವುದೇ ಗಮನಾರ್ಹ ವ್ಯತ್ಯಾಸವಿರುವುದಿಲ್ಲ.
4. ಸಮನ್ವಯ ಶಿಕ್ಷಣಕ್ಕೆ ಸಂಬಂಧಿಸಿದ ಪರಿಕಲ್ಪನೆಗಳ ಅರಿವಿನ ಕುರಿತಂತೆ ಸರ್ಕಾರಿ ಪ್ರಾಥಮಿಕ ಶಾಲಾ ಮಟ್ಟದ ಶಿಕ್ಷಕ–ಶಿಕ್ಷಿಯರ ಪೂರ್ವಪರೀಕ್ಷೆ ಮತ್ತು ಅಂತಿಮ ಪರೀಕ್ಷೆಯ ಸರಾಸರಿಗಳಲ್ಲಿ ಯಾವುದೇ ಗಮನಾರ್ಹ ವ್ಯತ್ಯಾಸವಿರುವುದಿಲ್ಲ.
5. ಸಮನ್ವಯ ಶಿಕ್ಷಣಕ್ಕೆ ಸಂಬಂಧಿಸಿದ ಪರಿಕಲ್ಪನೆಗಳ ಅರಿವಿನ ಕುರಿತಂತೆ ಖಾಸಗಿ ಪ್ರಾಥಮಿಕ ಶಾಲಾ ಮಟ್ಟದ ಶಿಕ್ಷಕ–ಶಿಕ್ಷಿಯರ ಪೂರ್ವಪರೀಕ್ಷೆ ಮತ್ತು ಅಂತಿಮ ಪರೀಕ್ಷೆಯ ಸರಾಸರಿಗಳಲ್ಲಿ ಯಾವುದೇ ಗಮನಾರ್ಹ ವ್ಯತ್ಯಾಸವಿರುವುದಿಲ್ಲ.

## ಅಧ್ಯಯನದ ಚಲಕಗಳು

## ಅಧ್ಯಯನದ ಸ್ವತಂತ್ರ ಚಲಕ

ಸಮನ್ವಯ ಶಿಕ್ಷಣದ ಪರಿಕಲ್ಪನೆಗಳ ಅರಿವು ಮೂಡಿಸಲು ಪ್ರಾಥಮಿಕ ಶಾಲಾ ಶಿಕ್ಷಕ/ಶಿಕ್ಷಕಿಯರಿಗಾಗಿ ವಿಶೇಷವಾಗಿ ವಿನ್ಯಾಸಗೊಳಿಸಿದ ಸ್ವಬೋಧನಾ ತರಬೇತಿ ಸಾಮಗ್ರಿ.

## ಅಧ್ಯಯನದ ಅವಲಂಬಿತ ಚಲಕ

ಸಮನ್ವಯ ಶಿಕ್ಷಣಕ್ಕೆ ಸಂಬಂಧಿಸಿದ ಪರಿಕಲ್ಪನೆಗಳ ಅರಿವು ಮತ್ತು ಸಮನ್ವಯ ಶಿಕ್ಷಣದ ಅರಿವು ಬೆಳೆಸುವ ಸಂಬಂಧಿತ ಕೌಶಲಗಳ ಬೆಳವಣಿಗೆ.

## ಅಧ್ಯಯನದ ಸಾಧನಗಳು

ಪ್ರಸ್ತುತ ಆಧ್ಯಯನವು ಮೌಲ್ಯಮಾಪನ ಮತ್ತು ಮಾರ್ಗದರ್ಶನ ಸಾಧನಗಳನ್ನು ಒಳಗೊಂಡಿದೆ.

ISSN : 2249-2429 ಸಂಶೋಧನೆ RNI REG.NO.KARKAN/2011/38712

## ಅಧ್ಯಯನದ ಮೌಲ್ಯಮಾಪನ ಸಾಧನಗಳು

ಪೂರ್ವ ಪರೀಕ್ಷೆ ಮತ್ತು ಅಂತಿಮ ಪರೀಕ್ಷೆ: ಸಮನ್ವಯ ಶಿಕ್ಷಣದ ಪರಿಕಲ್ಪನೆಗಳ ಕುರಿತು ಅಧ್ಯಾಪಕರ ಅರಿವನ್ನು ಮೌಲ್ಯಮಾಪನ ಮಾಡುವ ಪರೀಕ್ಷೆ.

## ಅಧ್ಯಯನದ ಮಾರ್ಗದರ್ಶನ ಸಾಧನಗಳು

ಸಮನ್ವಯ ಶಿಕ್ಷಣದ ಪರಿಕಲ್ಪನೆಗಳ ಅರಿವು ಮೂಡಿಸುವಲ್ಲಿ ಪೂರಕವಾದ ಶಿಕ್ಷಕರ ಮಾರ್ಗದರ್ಶನಕ್ಕಾಗಿ ತಯಾರಿಸಿದ ಸ್ವಬೋಧನಾ ಸಾಮಗ್ರಿ ಮತ್ತು ಕಾರ್ಯತಖ್ತೆಗಳು.

## ಅಧ್ಯಯನದ ಜನಸಂಖ್ಯೆ

ಪ್ರಸ್ತುತ ಅಧ್ಯಯನದ ಜನಸಮೂಹವು ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲಾ ಅಧ್ಯಾಪಕರನ್ನು ಒಳಗೊಂಡಿದೆ.

## ಅಧ್ಯಯನದಲ್ಲಿ ಬಳಸಲಾದ ಸಂಖ್ಯಾಶಾಸ್ತ್ರೀಯ ತಂತ್ರಗಳು

ಸಮನ್ವಯ ಶಿಕ್ಷಣದ ಪರಿಕಲ್ಪನೆಗಳಿಗಾಗಿ ತಯಾರಿಸಿದ ಸ್ವಬೋಧನಾ ಸಾಮಗ್ರಿಯ ಪರಿಣಾಮದ ಪ್ರಮಾಣವನ್ನು ಅಧ್ಯಯನ ಮಾಡಲು ಈ ಕೆಳಗಿನ ಸಂಖ್ಯಾಶಾಸ್ತ್ರೀಯ ಪದ್ಧತಿಗಳನ್ನು ಬಳಸಲಾಯಿತು.

1. **ವಿವರಣಾತ್ಮಕ ಸಂಖ್ಯಾಶಾಸ್ತ್ರ :** ಸರಾಸರಿ ಮತ್ತು ಮಾನಕ ವಿಚಲನೆ

2. **ನಿರ್ಣಯಾತ್ಮಕ ಸಂಖ್ಯಾಶಾಸ್ತ್ರ :** ಶಾಲೆಗಳ ಹಾಗೂ ಅಧ್ಯಾಪಕರ ಸ್ವರೂಪಕ್ಕನುಗುಣವಾಗಿ ಅದರ ಸರಾಸರಿಗಳ ನಡುವೆ ಗಮನಾರ್ಹವಾದ ವ್ಯತ್ಯಾಸವಿದೆಯೇ ಎಂಬುದನ್ನು ಅಧ್ಯಯನ ಮಾಡಲು ನಿರ್ಣಯಾತ್ಮಕ ಸಂಖ್ಯಾಶಾಸ್ತ್ರವಾದ 'ಟಿ' ಪರೀಕ್ಷಣವನ್ನು ಬಳಸಲಾಗಿದೆ.

## ದತ್ತಾಂಶಗಳ ವಿಶ್ಲೇಷಣೆ

## ಉದ್ದೇಶ ಒಂದರ ವಿಶ್ಲೇಷಣೆ ಹಾಗೂ ನಿರೂಪಣೆ

ಸಮನ್ವಯ ಶಿಕ್ಷಣದಲ್ಲಿ ತರಬೇತಿಗಾಗಿ ಪ್ರಾಥಮಿಕ ಶಾಲಾ ಶಿಕ್ಷಕ ಶಿಕ್ಷಕಿಯರಿಗೆ ಸ್ವಬೋಧನಾ ಸಾಮಗ್ರಿಯನ್ನು ಮೌಲ್ಯೀಕರಿಸುವುದು. (ಅಂದರೆ ತರಬೇತಿ ಪೂರ್ವ ಮತ್ತು ತರಬೇತಿ ನಂತರದಲ್ಲಿನ ಪರೀಕ್ಷೆಗಳಲ್ಲಿ ಶಿಕ್ಷಕರ–ಶಿಕ್ಷಕಿಯರ ಸರಾಸರಿಗಳ ನಡುವೆ ವ್ಯತ್ಯಾಸವಿದೆಯೇ ಎಂದು ನೋಡುವುದು).

## ಪೂರ್ವ ಸಿದ್ಧಾಂತ

ಉದ್ದೇಶಕ್ಕೆ ಅನುಗುಣವಾಗಿ 'ಟಿ' ಪರೀಕ್ಷೆಯನ್ನು ಬಳಸಲಾಗಿದ್ದು 'ಟಿ' ಪರೀಕ್ಷೆಯ ಉದ್ದೇಶಕ್ಕಾಗಿ ಕೆಳಗಿನ ಪೂರ್ವಸಿದ್ಧಾಂತ ರಚಿಸಲಾಗಿದೆ.

ಸಮನ್ವಯ ಶಿಕ್ಷಣಕ್ಕೆ ಸಂಬಂಧಿಸಿದ ಪರಿಕಲ್ಪನೆಗಳ ಕುರಿತಂತೆ ಪ್ರಾಥಮಿಕ ಶಾಲಾ ಮಟ್ಟದ ಶಿಕ್ಷಕ ಶಿಕ್ಷಕಿಯರ ಪೂರ್ವಪರೀಕ್ಷೆ ಮತ್ತು ಅಂತಿಮ ಪರೀಕ್ಷೆಯ ಸರಾಸರಿಗಳಲ್ಲಿ ಯಾವುದೇ ಗಮನಾರ್ಹ ವ್ಯತ್ಯಾಸವಿರುವುದಿಲ್ಲ.

## ವಿಶ್ಲೇಷಣೆ

ಪ್ರಸ್ತುತ ಅಧ್ಯಯನದಲ್ಲಿ ಸಮನ್ವಯ ಶಿಕ್ಷಣದ ಪರಿಕಲ್ಪನೆಗಳಿಗೆ ಸಂಬಂಧಿಸಿದಂತೆ ಘಟಕಗಳನ್ನು ಯೋಜಿಸಿ ಅದರ ಪರಿಣಾಮವನ್ನು ತಿಳಿಯಲು ಪ್ರಾಯೋಗಿಕ ಗುಂಪಿನ ಶಿಕ್ಷಕ ಶಿಕ್ಷಕಿಯರ ಪೂರ್ವಪರೀಕ್ಷೆಯ ಹಾಗೂ ಅಂತಿಮ ಪರೀಕ್ಷೆಯ ಅಂಕಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ.

ಪ್ರಾಕಲ್ಪನೆಗೆ ಅನುಗುಣವಾಗಿ ದತ್ತಾಂಶಗಳನ್ನು ವಿಶ್ಲೇಷಿಸಲಾಗಿದ್ದು ಸಂಬಂಧಿಸಿದ ಸರಾಸರಿ ಮಾನಕವಿಚಲನೆ ಮತ್ತು 'ಟಿ' ಮೌಲ್ಯ ಹಾಗೂ ಲಕ್ಷ್ಯಾರ್ಹತೆಗಳನ್ನು ಗುರುತಿಸಲಾಗಿದ್ದು, ಈ ವಿವರಗಳನ್ನು ಕೆಳಗಿನ ಕೋಷ್ಟಕ ಒಂದರಲ್ಲಿ ನೀಡಲಾಗಿದೆ.

**ಕೋಷ್ಟಕ–1: ಸ್ವಬೋಧನಾ ಸಾಮಗ್ರಿಯ ಕಲಿಕೆಗೆ ಸಂಬಂಧಿಸಿದಂತೆ ಪ್ರಾಥಮಿಕ ಶಾಲಾ ಶಿಕ್ಷಕ ಶಿಕ್ಷಕಿಯರ ಪೂರ್ವಪರೀಕ್ಷೆ ಮತ್ತು ಅಂತಿಮ ಪರೀಕ್ಷೆಯ ಸರಾಸರಿಗಳ ವ್ಯತ್ಯಾಸವನ್ನು ಸೂಚಿಸುವ ಕೋಷ್ಟಕ.**

| ಚಲಕಗಳು | ಸಂಖ್ಯೆ | ಸರಾಸರಿ | ಮಾನಕ ವಿಚಲನೆ | t- ಮೌಲ್ಯ | ಲಕ್ಷ್ಯಾರ್ಹತೆ |
|---|---|---|---|---|---|
| ಪೂರ್ವ ಪರೀಕ್ಷೆ | 20 | 14.25 | 2.98 | 38.095 | 0.01 ಹಂತದಲ್ಲಿ ಗಮನಾರ್ಹತೆ ಇದೆ |
| ಅಂತಿಮ ಪರೀಕ್ಷೆ | 20 | 27.75 | 1.86 | | |

ಪ್ರಸ್ತುತ ಕೋಷ್ಟಕ ಒಂದರಲ್ಲಿ ಸಮನ್ವಯ ಶಿಕ್ಷಣದ ಪರಿಕಲ್ಪನೆಗಳಿಗೆ ಸಂಬಂಧಿಸಿದಂತೆ ಶಿಕ್ಷಕ / ಶಿಕ್ಷಕಿಯರ ಪೂರ್ವಪರೀಕ್ಷೆಯ ಸರಾಸರಿ 14.25 ಆಗಿದ್ದು, ಅಂತಿಮಪರೀಕ್ಷೆಯ ಸರಾಸರಿ 27.75 ಆಗಿದೆ. ಶಿಕ್ಷಕ ಶಿಕ್ಷಕಿಯರ ಪೂರ್ವಪರೀಕ್ಷೆ ಹಾಗೂ ಅಂತಿಮಪರೀಕ್ಷೆಯ ನಡುವಿನ 'ಟಿ' ಮೌಲ್ಯವು 38.095 ಆಗಿದೆ. ಈ ಮೌಲ್ಯವು 0.01 ಹಂತದಲ್ಲಿ 'ಟಿ' ಕೋಷ್ಟಕದ ಮೌಲ್ಯ 2.58 ಕ್ಕಿಂತ ಹೆಚ್ಚಾಗಿರುವುದರಿಂದ ಪೂರ್ವಪರೀಕ್ಷೆ ಮತ್ತು ಅಂತಿಮ ಪರೀಕ್ಷೆ ಎಂಬ ಎರಡು ಚಲಕಗಳ ನಡುವೆ ಗಮನಾರ್ಹವಾದ ವ್ಯತ್ಯಾಸವಿದೆ ಎಂಬುದನ್ನು ಸೂಚಿಸುವುದು.

## ಪೂರ್ವ ಸಿದ್ಧಾಂತದ ನಿರಾಕರಣೆ

ಪ್ರಸ್ತುತ ಅಧ್ಯಯನದ ಉದ್ದೇಶ ಒಂದರ ಪೂರ್ವಸಿದ್ಧಾಂತವನ್ನು ವಿಶ್ಲೇಷಿಸಿದಾಗ ದೊರೆತ 'ಟಿ' ಮೌಲ್ಯವು ಶಿಕ್ಷಕ/ಶಿಕ್ಷಕಿಯರ ಸಮನ್ವಯ ಶಿಕ್ಷಣದ ಅರಿವಿಗೆ ಸಂಬಂಧಿಸಿದ ಪೂರ್ವ ಪರೀಕ್ಷೆ ಹಾಗೂ ಅಂತಿಮ ಪರೀಕ್ಷೆಯ ಅಂಕಗಳ ಪ್ರಮಾಣದಲ್ಲಿ ಗಮನಾರ್ಹವಾದ ವ್ಯತ್ಯಾಸವಿದೆ ಎಂಬುದನ್ನು ಸೂಚಿಸುತ್ತಿದ್ದು, ಇದು ಉದ್ದೇಶ ಒಂದರ ಪೂರ್ವಸಿದ್ಧಾಂತಕ್ಕೆ ಅನುಗುಣವಾಗಿಲ್ಲದಿರುವುದರಿಂದ ಪುಸ್ತಕ ಪೂರ್ವಸಿದ್ಧಾಂತವನ್ನು ನಿರಾಕರಿಸಲಾಗಿದೆ.

ಅಲ್ಲದೆ, ಪೂರ್ವಪರೀಕ್ಷೆ ಮತ್ತು ಅಂತಿಮ ಪರೀಕ್ಷೆಯಲ್ಲಿ ಗಮನಾರ್ಹವಾದ ವ್ಯತ್ಯಾಸವಿದ್ದು ಅಂತಿಮ ಪರೀಕ್ಷೆಯ ಸರಾಸರಿಯು ಪೂರ್ವಪರೀಕ್ಷೆಯ ಸರಾಸರಿಗಿಂತ ಹೆಚ್ಚಿರುವುದರಿಂದ ಸಮನ್ವಯ ಶಿಕ್ಷಣದ ಪರಿಕಲ್ಪನೆಗಳಿಗೆ ಸಂಬಂಧಿಸಿದಂತೆ ತಯಾರಿಸಿದ ಸ್ವಬೋಧನಾ ಸಾಮಗ್ರಿಯು ಉದ್ದೇಶಿತ ಫಲವನ್ನು ಉಂಟುಮಾಡುವಲ್ಲಿ ಯಶಸ್ವಿಯಾಗಿದೆ ಎಂದು ಹೇಳಬಹುದು.

**ನಿರ್ಧಾರ :** ಶಿಕ್ಷಕ/ಶಿಕ್ಷಕಿಯರು ಸಮನ್ವಯ ಶಿಕ್ಷಣದ ಪರಿಕಲ್ಪನೆಗಳಿಗೆ ಸಂಬಂಧಿಸಿದಂತೆ ಸ್ವಬೋಧನಾ ಸಾಮಗ್ರಿಯ ಮೂಲಕ ಅರಿವನ್ನು ಹೆಚ್ಚಿಸಬಹುದು. ಈ ಸಾಮಗ್ರಿಯನ್ನು ಸಮನಾಂತರ ಸನ್ನಿವೇಶದಲ್ಲಿ ಯಶಸ್ವಿಯಾಗಿ ಬಳಸಿಕೊಳ್ಳಬಹುದು.

## ಉದ್ದೇಶ ಎರಡರ ವಿಶ್ಲೇಷಣೆ ಹಾಗೂ ನಿರೂಪಣೆ

ಸಮನ್ವಯ ಶಿಕ್ಷಣದ ಪರಿಕಲ್ಪನೆಗಳ ಅರಿವು ಮೂಡಿಸುವಲ್ಲಿ ತರಬೇತಿಗಾಗಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಸಂಬಂಧಿಸಿದಂತೆ ಸ್ವಬೋಧನಾ ಸಾಮಗ್ರಿಯನ್ನು ಮೌಲ್ಯೀಕರಿಸುವುದು. (ಅಂದರೆ ತರಬೇತಿ ಪೂರ್ವ ಮತ್ತು ತರಬೇತಿ ನಂತರದಲ್ಲಿನ ಪರೀಕ್ಷೆಗಳಲ್ಲಿ ಶಿಕ್ಷಕರ ಸರಾಸರಿಗಳ ನಡುವೆ ವ್ಯತ್ಯಾಸವಿದೆಯೇ ಎಂದು ನೋಡುವುದು).

## ಪೂರ್ವ ಸಿದ್ಧಾಂತ

ಉದ್ದೇಶಕ್ಕೆ ಅನುಗುಣವಾಗಿ 'ಟಿ' ಪರೀಕ್ಷೆಯನ್ನು ಬಳಸಲಾಗಿದ್ದು 'ಟಿ' ಪರೀಕ್ಷೆಯ ಉದ್ದೇಶಕ್ಕಾಗಿ ಕೆಳಗಿನ ಸರ್ವಸಿದ್ಧಾಂತ ರಚಿಸಲಾಗಿದೆ.

ಸಮನ್ವಯ ಶಿಕ್ಷಣಕ್ಕೆ ಸಂಬಂಧಿಸಿದ ಪರಿಕಲ್ಪನೆಗಳ ಅರಿವಿನ ಕುರಿತಂತೆ ಪ್ರಾಥಮಿಕ ಶಾಲಾ ಮಟ್ಟದ ಶಿಕ್ಷಕರ ಪೂರ್ವಪರೀಕ್ಷೆ ಮತ್ತು

ISSN : 2249-2429 ಸಂಶೋಧನೆ RNI REG.NO.KARKAN/2011/38712

**ಕೋಷ್ಟಕ–2 : ಸಮನ್ವಯ ಶಿಕ್ಷಣದ ಪರಿಕಲ್ಪನೆಗಳ ಅರಿವು ಮೂಡಿಸುವ ಸ್ವಬೋಧನಾ ಸಾಮಗ್ರಿಯ ಮೌಲ್ಯೀಕರಣಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ಶಾಲಾ ಶಿಕ್ಷಕ–ಶಿಕ್ಷಕಿಯರು ಪೂರ್ವಪರೀಕ್ಷೆ ಮತ್ತು ಅಂತಿಮ ಪರೀಕ್ಷೆಯಲ್ಲಿ ಪಡೆದಿರುವ ಅಂಕಗಳ ಆವೃತ್ತಿ ವಿತರಣೆಗಳು.**

| ವರ್ಗಾಂತರ | ಪೂರ್ವ ಪರೀಕ್ಷೆ | ಅಂತಿಮ ಪರೀಕ್ಷೆ | ಪೂರ್ವ ಪರೀಕ್ಷೆ | ಅಂತಿಮ ಪರೀಕ್ಷೆ | ಪೂರ್ವ ಪರೀಕ್ಷೆ | ಅಂತಿಮ ಪರೀಕ್ಷೆ | ಮೇಲ್ಮಿತಿ |
|---|---|---|---|---|---|---|---|
| | ಆವೃತ್ತಿ | | ಸಂಚಿತಾವೃತ್ತಿ | | ಸಂಚಿತ ಪ್ರತಿಶತ ಆವೃತ್ತಿ | | |
| 8–10 | 3 | 0 | 3 | 0 | 15 | 0 | 10.5 |
| 11–13 | 3 | 0 | 6 | 0 | 30 | 0 | 13.5 |
| 14–16 | 11 | 0 | 17 | 0 | 85 | 0 | 16.5 |
| 17–19 | 2 | 0 | 19 | 0 | 95 | 0 | 19.5 |
| 20–22 | 1 | 0 | 20 | 0 | 100 | 0 | 22.5 |
| 23–25 | | 2 | | 2 | | 10 | 25.5 |
| 25–28 | | 11 | | 13 | | 65 | 28.5 |
| 29–31 | | 7 | | 20 | | 100 | 31.5 |

ಅಂತಿಮ ಪರೀಕ್ಷೆಯ ಸರಾಸರಿಗಳಲ್ಲಿ ಯಾವುದೇ ಗಮನಾರ್ಹ ವ್ಯತ್ಯಾಸವಿರುವುದಿಲ್ಲ.

## ವಿಶ್ಲೇಷಣೆ

ಪ್ರಸ್ತುತ ಅಧ್ಯಯನದಲ್ಲಿ ಸಮನ್ವಯ ಶಿಕ್ಷಣದ ಪರಿಕಲ್ಪನೆಗಳಿಗೆ ಸಂಬಂಧಿಸಿದಂತೆ ಘಟಕಗಳನ್ನು ಯೋಜಿಸಿ ಅದರ ಪರಿಣಾಮವನ್ನು ತಿಳಿಯಲು ಪ್ರಾಯೋಗಿಕ ಗುಂಪಿನ ಶಿಕ್ಷಕರ ಪೂರ್ವಪರೀಕ್ಷೆ ಹಾಗೂ ಅಂತಿಮ ಪರೀಕ್ಷೆಯ ಅಂಕಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ.

ಪ್ರಾಕಲ್ಪನೆಗೆ ಅನುಗುಣವಾಗಿ ದತ್ತಾಂಶಗಳನ್ನು ವಿಶ್ಲೇಷಿಸಲಾಗಿದ್ದು ಸಂಬಂಧಿಸಿದ ಸರಾಸರಿ, ಮಾನಕವಿಚಲನೆ ಮತ್ತು 'ಟಿ' ಮೌಲ್ಯ ಹಾಗೂ ಲಕ್ಷ್ಯಾರ್ಹತೆಗಳನ್ನು ಗುರುತಿಸಲಾಗಿದ್ದು, ಈ ವಿವರಗಳನ್ನು ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ–3 : ಸ್ವಬೋಧನಾ ಸಾಮಗ್ರಿಯ ಕಲಿಕೆಗೆ ಸಂಬಂಧಿಸಿದಂತೆ ಪ್ರಾಥಮಿಕ ಶಾಲಾ ಶಿಕ್ಷಕರ ಪೂರ್ವಪರೀಕ್ಷೆ ಮತ್ತು ಅಂತಿಮ ಪರೀಕ್ಷೆಯ ಸರಾಸರಿಗಳ ವ್ಯತ್ಯಾಸವನ್ನು ಸೂಚಿಸುವ ಕೋಷ್ಟಕ.**

| ಚಲಕಗಳು | ಸಂಖ್ಯೆ | ಸರಾಸರಿ | ಮಾನಕ ವಿಚಲನೆ | t-ಮೌಲ್ಯ | ಲಕ್ಷ್ಯಾರ್ಹತೆ |
|---|---|---|---|---|---|
| ಪೂರ್ವ ಪರೀಕ್ಷೆ | 13 | 13.84 | 2.5 | 46.89 | 0.01 ಹಂತದಲ್ಲಿ ಗಮನಾರ್ಹತೆ ಇದೆ |
| ಅಂತಿಮ ಪರೀಕ್ಷೆ | 13 | 27.92 | 2.16 | | |

ಪ್ರಸ್ತುತ ಕೋಷ್ಟಕದಲ್ಲಿ ಸಮನ್ವಯ ಶಿಕ್ಷಣದ ಪರಿಕಲ್ಪನೆಗಳಿಗೆ ಸಂಬಂಧಿಸಿದಂತೆ ಶಿಕ್ಷಕರ ಪೂರ್ವಪರೀಕ್ಷೆಯ ಸರಾಸರಿ 13.04 ಆಗಿದ್ದು, ಅಂತಿಮಪರೀಕ್ಷೆಯ ಸರಾಸರಿ 27.75 ಆಗಿದೆ. ಶಿಕ್ಷಕರ ಪೂರ್ವಪರೀಕ್ಷೆ ಹಾಗೂ ಅಂತಿಮಪರೀಕ್ಷೆಯ ನಡುವಿನ 'ಟಿ' ಮೌಲ್ಯವು 46.89 ಆಗಿದೆ. ಈ ಮೌಲ್ಯವು 0.01 ಹಂತದಲ್ಲಿ 'ಟಿ' ಕೋಷ್ಟಕದ ಮೌಲ್ಯ 2.58 ಕ್ಕಿಂತ ಹೆಚ್ಚಾಗಿರುವುದರಿಂದ ಪೂರ್ವಪರೀಕ್ಷೆ ಮತ್ತು ಅಂತಿಮ ಪರೀಕ್ಷೆ ಎಂಬ ಎರಡು ಚಲಕಗಳ ನಡುವೆ ಗಮನಾರ್ಹವಾದ ವ್ಯತ್ಯಾಸವಿದೆ ಎಂಬುದನ್ನು ಸೂಚಿಸುವುದು.

## ಪೂರ್ವ ಸಿದ್ಧಾಂತದ ನಿರಾಕರಣೆ

ಪ್ರಸ್ತುತ ಅಧ್ಯಯನದ ಉದ್ದೇಶ ಎರಡರ ಪೂರ್ವಸಿದ್ಧಾಂತವನ್ನು ವಿಶ್ಲೇಷಿಸಿದಾಗ ದೊರೆತ 'ಟಿ' ಮೌಲ್ಯವು ಶಿಕ್ಷಕರ ಸಮನ್ವಯ ಶಿಕ್ಷಣದ ಅರಿವಿಗೆ ಸಂಬಂಧಿಸಿದ ಪೂರ್ವಪರೀಕ್ಷೆ ಹಾಗೂ ಅಂತಿಮ ಪರೀಕ್ಷೆಯ ಅಂಕಗಳ ಪ್ರಮಾಣದಲ್ಲಿ ಗಮನಾರ್ಹವಾದ ವ್ಯತ್ಯಾಸವಿದೆ ಎಂಬುದನ್ನು ಸೂಚಿಸುತ್ತಿದ್ದು, ಇದು ಉದ್ದೇಶ ಎರಡರ ಪೂರ್ವಸಿದ್ಧಾಂತಕ್ಕೆ ಅನುಗುಣವಾಗಿಲ್ಲದಿರುವುದರಿಂದ ಪುಸ್ತಕ ಪೂರ್ವಸಿದ್ಧಾಂತವನ್ನು ನಿರಾಕರಿಸಲಾಗಿದೆ.

ಅಲ್ಲದೆ, ಪೂರ್ವಪರೀಕ್ಷೆ ಮತ್ತು ಅಂತಿಮ ಪರೀಕ್ಷೆಯಲ್ಲಿ ಗಮನಾರ್ಹವಾದ ವ್ಯತ್ಯಾಸವಿದ್ದು ಅಂತಿಮ ಪರೀಕ್ಷೆಯ ಸರಾಸರಿಯು ಪೂರ್ವಪರೀಕ್ಷೆಯ ಸರಾಸರಿಗಿಂತ ಹೆಚ್ಚಿರುವುದರಿಂದ ಸಮನ್ವಯ ಶಿಕ್ಷಣದ ಪರಿಕಲ್ಪನೆಗಳಿಗೆ ಸಂಬಂಧಿಸಿದಂತೆ ತಯಾರಿಸಿದ ಸ್ವಬೋಧನಾ ಸಾಮಗ್ರಿಯು ಉದ್ದೇಶಿತ ಫಲವನ್ನು ಉಂಟುಮಾಡುವಲ್ಲಿ ಯಶಸ್ವಿಯಾಗಿದೆ ಎಂದು ಹೇಳಬಹುದು.

**ಕೋಷ್ಟಕ–4 : ಸಮನ್ವಯ ಶಿಕ್ಷಣದ ಪರಿಕಲ್ಪನೆಗಳ ಅರಿವು ಮೂಡಿಸುವ ಸ್ವಬೋಧನಾ ಸಾಮಗ್ರಿಯ ಮೌಲ್ಯೀಕರಣಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ಶಾಲಾ ಶಿಕ್ಷಕರು ಪೂರ್ವಪರೀಕ್ಷೆ ಮತ್ತು ಅಂತಿಮ ಪರೀಕ್ಷೆಯಲ್ಲಿ ಪಡೆದಿರುವ ಅಂಕಗಳ ಆವೃತ್ತಿ ವಿತರಣೆಗಳು.**

| ವರ್ಗಾಂತರ | ಪೂರ್ವ ಪರೀಕ್ಷೆ | ಅಂತಿಮ ಪರೀಕ್ಷೆ | ಪೂರ್ವ ಪರೀಕ್ಷೆ | ಅಂತಿಮ ಪರೀಕ್ಷೆ | ಪೂರ್ವ ಪರೀಕ್ಷೆ | ಅಂತಿಮ ಪರೀಕ್ಷೆ | ಮೇಲ್ಮಿತಿ |
|---|---|---|---|---|---|---|---|
| | ಆವೃತ್ತಿ | | ಸಂಚಿತಾವೃತ್ತಿ | | ಸಂಚಿತ ಪ್ರತಿಶತ ಆವೃತ್ತಿ | | |
| 8–10 | 3 | 0 | 2 | 0 | 15.38 | 0 | 10.5 |
| 11–13 | 2 | 0 | 4 | 0 | 30.76 | 0 | 13.5 |
| 14–16 | 8 | 0 | 12 | 0 | 92.30 | 0 | 16.5 |
| 17–19 | 1 | 0 | 13 | 0 | 100 | 0 | 19.5 |
| 20–22 | | 0 | | 0 | | 0 | 22.5 |
| 23–25 | | 2 | | 2 | | 15.38 | 25.5 |
| 25–28 | | 5 | | 7 | | 53.84 | 28.5 |
| 29–31 | | 6 | | 13 | | 100 | 31.5 |

ISSN : 2249-2429 ಸಂಶೋಧನೆ RNI REG.NO.KARKAN/2011/38712

**ನಿರ್ಧಾರ :** ಶಿಕ್ಷಕರು ಸಮನ್ವಯ ಶಿಕ್ಷಣದ ಪರಿಕಲ್ಪನೆಗಳಿಗೆ ಸಂಬಂಧಿಸಿದಂತೆ ಸ್ವಬೋಧನಾ ಸಾಮಗ್ರಿಯ ಮೂಲಕ ಅರಿವನ್ನು ಹೆಚ್ಚಿಸಬಹುದು. ಈ ಸಾಮಗ್ರಿಯನ್ನು ಸಮನಾಂತರ ಸನ್ನಿವೇಶದಲ್ಲಿ ಯಶಸ್ವಿಯಾಗಿ ಬಳಸಿಕೊಳ್ಳಬಹುದು.

## ಉದ್ದೇಶ ಮೂರರ ವಿಶ್ಲೇಷಣೆ ಹಾಗೂ ನಿರೂಪಣೆ

ಸಮನ್ವಯ ಶಿಕ್ಷಣದ ಪರಿಕಲ್ಪನೆಗಳ ಅರಿವು ಮೂಡಿಸುವಲ್ಲಿ ತರಬೇತಿಗಾಗಿ ಪ್ರಾಥಮಿಕ ಶಾಲಾ ಶಿಕ್ಷಕಿಯರಿಗೆ ಸಂಬಂಧಿಸಿದಂತೆ ಸ್ವಬೋಧನಾ ಸಾಮಗ್ರಿಯನ್ನು ಮೌಲ್ಯೀಕರಿಸುವುದು. (ಅಂದರೆ ತರಬೇತಿ ಪೂರ್ವ ಮತ್ತು ತರಬೇತಿ ನಂತರದಲ್ಲಿನ ಪರೀಕ್ಷೆಗಳಲ್ಲಿ ಶಿಕ್ಷಕಿಯರ ಸರಾಸರಿಗಳ ನಡುವೆ ವ್ಯತ್ಯಾಸವಿದೆಯೇ ಎಂದು ನೋಡುವುದು).

## ಪೂರ್ವ ಸಿದ್ಧಾಂತ

ಉದ್ದೇಶಕ್ಕೆ ಅನುಗುಣವಾಗಿ 'ಟಿ' ಪರೀಕ್ಷೆಯನ್ನು ಬಳಸಲಾಗಿದ್ದು 'ಟಿ' ಪರೀಕ್ಷೆಯ ಉದ್ದೇಶಕ್ಕಾಗಿ ಕೆಳಗಿನ ಸರ್ವಸಿದ್ಧಾಂತ ರಚಿಸಲಾಗಿದೆ.

ಸಮನ್ವಯ ಶಿಕ್ಷಣಕ್ಕೆ ಸಂಬಂಧಿಸಿದ ಪರಿಕಲ್ಪನೆಗಳ ಅರಿವಿನ ಕುರಿತಂತೆ ಪ್ರಾಥಮಿಕ ಶಾಲಾ ಮಟ್ಟದ ಶಿಕ್ಷಕಿಯರ ಪೂರ್ವಪರೀಕ್ಷೆ ಮತ್ತು ಅಂತಿಮ ಪರೀಕ್ಷೆಯ ಸರಾಸರಿಗಳಲ್ಲಿ ಯಾವುದೇ ಗಮನಾರ್ಹ ವ್ಯತ್ಯಾಸವಿರುವುದಿಲ್ಲ.

## ವಿಶ್ಲೇಷಣೆ

ಪ್ರಸ್ತುತ ಅಧ್ಯಯನದಲ್ಲಿ ಸಮನ್ವಯ ಶಿಕ್ಷಣದ ಪರಿಕಲ್ಪನೆಗಳಿಗೆ ಸಂಬಂಧಿಸಿದಂತೆ ಘಟಕಗಳನ್ನು ಯೋಜಿಸಿ ಅದರ ಪರಿಣಾಮವನ್ನು ತಿಳಿಯಲು ಪ್ರಾಯೋಗಿಕ ಗುಂಪಿನ ಶಿಕ್ಷಕಿಯರ ಪೂರ್ವಪರೀಕ್ಷೆ ಹಾಗೂ ಅಂತಿಮ ಪರೀಕ್ಷೆಯ ಅಂಕಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ.

ಪ್ರಾಕಲ್ಪನೆಗೆ ಅನುಗುಣವಾಗಿ ದತ್ತಾಂಶಗಳನ್ನು ವಿಶ್ಲೇಷಿಸಲಾಗಿದ್ದು ಸಂಬಂಧಿಸಿದ ಸರಾಸರಿ, ಮಾನಕವಿಚಲನೆ ಮತ್ತು 'ಟಿ' ಮೌಲ್ಯ ಹಾಗೂ ಲಕ್ಷ್ಯಾರ್ಹತೆಗಳನ್ನು ಗುರುತಿಸಲಾಗಿದ್ದು, ಈ ವಿವರಗಳನ್ನು ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ–5 : ಸ್ವಬೋಧನಾ ಸಾಮಗ್ರಿಯ ಕಲಿಕೆಗೆ ಸಂಬಂಧಿಸಿದಂತೆ ಪ್ರಾಥಮಿಕ ಶಾಲಾ ಶಿಕ್ಷಕಿಯರ ಪೂರ್ವಪರೀಕ್ಷೆ ಮತ್ತು ಅಂತಿಮ ಪರೀಕ್ಷೆಯ ಸರಾಸರಿಗಳ ವ್ಯತ್ಯಾಸವನ್ನು ಸೂಚಿಸುವ ಕೋಷ್ಟಕ.**

| ಚಲಕಗಳು | ಸಂಖ್ಯೆ | ಸರಾಸರಿ | ಮಾನಕ ವಿಚಲನೆ | t-ಮೌಲ್ಯ | ಲಕ್ಷ್ಯಾರ್ಹತೆ |
|---|---|---|---|---|---|
| ಪೂರ್ವ ಪರೀಕ್ಷೆ | 7 | 17 | 3.5 | 14.9 | 0.01 ಹಂತದಲ್ಲಿ ಗಮನಾರ್ಹತೆ ಇದೆ |
| ಅಂತಿಮ ಪರೀಕ್ಷೆ | 7 | 27.85 | 1.35 | | |

ಪ್ರಸ್ತುತ ಕೋಷ್ಟಕದಲ್ಲಿ ಸಮನ್ವಯ ಶಿಕ್ಷಣದ ಪರಿಕಲ್ಪನೆಗಳಿಗೆ ಸಂಬಂಧಿಸಿದಂತೆ ಶಿಕ್ಷಕಿಯರ ಪೂರ್ವಪರೀಕ್ಷೆಯ ಸರಾಸರಿ 15 ಆಗಿದ್ದು, ಅಂತಿಮಪರೀಕ್ಷೆಯ ಸರಾಸರಿ 27.75 ಆಗಿದೆ. ಶಿಕ್ಷಕಿಯರ ಪೂರ್ವಪರೀಕ್ಷೆ ಹಾಗೂ ಅಂತಿಮಪರೀಕ್ಷೆಯ ನಡುವಿನ 'ಟಿ' ಮೌಲ್ಯವು 14.9 ಆಗಿದೆ. ಈ ಮೌಲ್ಯವು 0.01 ಹಂತದಲ್ಲಿ 'ಟಿ' ಕೋಷ್ಟಕದ ಮೌಲ್ಯ 2.58 ಕ್ಕಿಂತ ಹೆಚ್ಚಾಗಿರುವುದರಿಂದ ಪೂರ್ವಪರೀಕ್ಷೆ ಮತ್ತು ಅಂತಿಮ ಪರೀಕ್ಷೆ ಎಂಬ ಎರಡು ಚಲಕಗಳ ನಡುವೆ ಗಮನಾರ್ಹವಾದ ವ್ಯತ್ಯಾಸವಿದೆ ಎಂಬುದನ್ನು ಸೂಚಿಸುವುದು.

## ಪೂರ್ವ ಸಿದ್ಧಾಂತದ ನಿರಾಕರಣೆ

ಪ್ರಸ್ತುತ ಅಧ್ಯಯನದ ಉದ್ದೇಶ ಮೂರರ ಪೂರ್ವಸಿದ್ಧಾಂತವನ್ನು ವಿಶ್ಲೇಷಿಸಿದಾಗ ದೊರೆತ 'ಟಿ' ಮೌಲ್ಯವು ಶಿಕ್ಷಕಿಯರ ಸಮನ್ವಯ ಶಿಕ್ಷಣದ ಅರಿವಿಗೆ ಸಂಬಂಧಿಸಿದ ಪೂರ್ವಪರೀಕ್ಷೆ ಹಾಗೂ ಅಂತಿಮ ಪರೀಕ್ಷೆಯ ಅಂಕಗಳ ಪ್ರಮಾಣದಲ್ಲಿ ಗಮನಾರ್ಹವಾದ ವ್ಯತ್ಯಾಸವಿದೆ ಎಂಬುದನ್ನು ಸೂಚಿಸುತ್ತಿದ್ದು, ಇದು ಉದ್ದೇಶ ಮೂರರ ಪೂರ್ವಸಿದ್ಧಾಂತಕ್ಕೆ ಅನುಗುಣವಾಗಿಲ್ಲದಿರುವುದರಿಂದ ಪುಸ್ತಕ ಪೂರ್ವಸಿದ್ಧಾಂತವನ್ನು ನಿರಾಕರಿಸಲಾಗಿದೆ.

ಅಲ್ಲದೆ, ಪೂರ್ವಪರೀಕ್ಷೆ ಮತ್ತು ಅಂತಿಮ ಪರೀಕ್ಷೆಯಲ್ಲಿ ಗಮನಾರ್ಹವಾದ ವ್ಯತ್ಯಾಸವಿದ್ದು ಅಂತಿಮ ಪರೀಕ್ಷೆಯ ಸರಾಸರಿಯು ಪೂರ್ವಪರೀಕ್ಷೆಯ ಸರಾಸರಿಗಿಂತ ಹೆಚ್ಚಿರುವುದರಿಂದ ಸಮನ್ವಯ ಶಿಕ್ಷಣದ ಪರಿಕಲ್ಪನೆಗಳಿಗೆ ಸಂಬಂಧಿಸಿದಂತೆ ತಯಾರಿಸಿದ ಸ್ವಬೋಧನಾ ಸಾಮಗ್ರಿಯು ಉದ್ದೇಶಿತ ಫಲವನ್ನು ಉಂಟುಮಾಡುವಲ್ಲಿ ಯಶಸ್ವಿಯಾಗಿದೆ ಎಂದು ಹೇಳಬಹುದು.

**ಕೋಷ್ಟಕ–6 : ಸಮನ್ವಯ ಶಿಕ್ಷಣದ ಪರಿಕಲ್ಪನೆಗಳ ಅರಿವು ಮೂಡಿಸುವ ಸ್ವಬೋಧನಾ ಸಾಮಗ್ರಿಯ ಮೌಲ್ಯೀಕರಣಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ಶಾಲಾ ಶಿಕ್ಷಕರು ಪೂರ್ವಪರೀಕ್ಷೆ ಮತ್ತು ಅಂತಿಮ ಪರೀಕ್ಷೆಯಲ್ಲಿ ಪಡೆದಿರುವ ಅಂಕಗಳ ಆವೃತ್ತಿ ವಿತರಣೆಗಳು.**

| ವರ್ಗಾಂತರ | ಪೂರ್ವ ಪರೀಕ್ಷೆ | ಅಂತಿಮ ಪರೀಕ್ಷೆ | ಪೂರ್ವ ಪರೀಕ್ಷೆ | ಅಂತಿಮ ಪರೀಕ್ಷೆ | ಪೂರ್ವ ಪರೀಕ್ಷೆ | ಅಂತಿಮ ಪರೀಕ್ಷೆ | ಮೇಲ್ಮಿತಿ |
|---|---|---|---|---|---|---|---|
| | ಆವೃತ್ತಿ | | ಸಂಚಿತಾವೃತ್ತಿ | | ಸಂಚಿತ ಪ್ರತಿಶತ ಆವೃತ್ತಿ | | |
| 8–10 | 1 | 0 | 1 | 0 | 14.28 | 0 | 10.5 |
| 11–13 | 1 | 0 | 2 | 0 | 28.57 | 0 | 13.5 |
| 14–16 | 3 | 0 | 5 | 0 | 71.42 | 0 | 16.5 |
| 17–19 | 1 | 0 | 6 | 0 | 85.71 | 0 | 19.5 |
| 20–22 | 1 | 0 | 7 | 0 | 100 | 0 | 22.5 |
| 23–25 | | 0 | | 0 | | 0 | 25.5 |
| 25–28 | | 5 | | 5 | | 71.42 | 28.5 |
| 29–31 | | 2 | | 7 | | 100 | 31.5 |

**ನಿರ್ಧಾರ :** ಶಿಕ್ಷಕಿಯರು ಸಮನ್ವಯ ಶಿಕ್ಷಣದ ಪರಿಕಲ್ಪನೆಗಳಿಗೆ ಸಂಬಂಧಿಸಿದಂತೆ ಸ್ವಬೋಧನಾ ಸಾಮಗ್ರಿಯ ಮೂಲಕ ಅರಿವನ್ನು ಹೆಚ್ಚಿಸಬಹುದು. ಈ ಸಾಮಗ್ರಿಯನ್ನು ಸಮನಾಂತರ ಸನ್ನಿವೇಶದಲ್ಲಿ ಯಶಸ್ವಿಯಾಗಿ ಬಳಸಿಕೊಳ್ಳಬಹುದು.

## ಉದ್ದೇಶ ನಾಲ್ಕರ ವಿಶ್ಲೇಷಣೆ ಹಾಗೂ ನಿರೂಪಣೆ

ಸಮನ್ವಯ ಶಿಕ್ಷಣದ ಪರಿಕಲ್ಪನೆಗಳ ಅರಿವು ಮೂಡಿಸುವಲ್ಲಿ ತರಬೇತಿಗಾಗಿ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕ–ಶಿಕ್ಷಕಿಯರಿಗೆ ಸಂಬಂಧಿಸಿದಂತೆ ಸ್ವಬೋಧನಾ ಸಾಮಗ್ರಿಯನ್ನು ಮೌಲ್ಯೀಕರಿಸುವುದು.

ISSN : 2249-2429 ಸಂಶೋಧನೆ RNI REG.NO.KARKAN/2011/38712

(ಅಂದರೆ ತರಬೇತಿ ಪೂರ್ವ ಮತ್ತು ತರಬೇತಿ ನಂತರದಲ್ಲಿನ ಪರೀಕ್ಷೆಗಳಲ್ಲಿ ಸರ್ಕಾರಿ ಶಾಲಾ ಶಿಕ್ಷಕ–ಶಿಕ್ಷಕಿಯರ ಸರಾಸರಿಗಳ ನಡುವೆ ವ್ಯತ್ಯಾಸವಿದೆಯೇ ಎಂದು ನೋಡುವುದು).

## ಪೂರ್ವ ಸಿದ್ಧಾಂತ

ಉದ್ದೇಶಕ್ಕೆ ಅನುಗುಣವಾಗಿ 'ಟಿ' ಪರೀಕ್ಷೆಯನ್ನು ಬಳಸಲಾಗಿದ್ದು 'ಟಿ' ಪರೀಕ್ಷೆಯ ಉದ್ದೇಶಕ್ಕಾಗಿ ಕೆಳಗಿನ ಸರ್ವಸಿದ್ಧಾಂತ ರಚಿಸಲಾಗಿದೆ.

ಸಮನ್ವಯ ಶಿಕ್ಷಣಕ್ಕೆ ಸಂಬಂಧಿಸಿದ ಪರಿಕಲ್ಪನೆಗಳ ಅರಿವಿನ ಕುರಿತಂತೆ ಸರ್ಕಾರಿ ಪ್ರಾಥಮಿಕ ಶಾಲಾ ಮಟ್ಟದ ಶಿಕ್ಷಕ–ಶಿಕ್ಷಿಯರ ಪೂರ್ವಪರೀಕ್ಷೆ ಮತ್ತು ಅಂತಿಮ ಪರೀಕ್ಷೆಯ ಸರಾಸರಿಗಳಲ್ಲಿ ಯಾವುದೇ ಗಮನಾರ್ಹ ವ್ಯತ್ಯಾಸವಿರುವುದಿಲ್ಲ.

## ವಿಶ್ಲೇಷಣೆ

ಪ್ರಸ್ತುತ ಅಧ್ಯಯನದಲ್ಲಿ ಸಮನ್ವಯ ಶಿಕ್ಷಣದ ಪರಿಕಲ್ಪನೆಗಳಿಗೆ ಸಂಬಂಧಿಸಿದಂತೆ ಘಟಕಗಳನ್ನು ಯೋಜಿಸಿ ಅದರ ಪರಿಣಾಮವನ್ನು ತಿಳಿಯಲು ಪ್ರಾಯೋಗಿಕ ಗುಂಪಿನ ಸರ್ಕಾರಿ ಶಾಲಾ ಶಿಕ್ಷಕ–ಶಿಕ್ಷಕಿಯರ ಪೂರ್ವಪರೀಕ್ಷೆ ಹಾಗೂ ಅಂತಿಮ ಪರೀಕ್ಷೆಯ ಅಂಕಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ.

ಪ್ರಾಕಲ್ಪನೆಗೆ ಅನುಗುಣವಾಗಿ ದತ್ತಾಂಶಗಳನ್ನು ವಿಶ್ಲೇಷಿಸಲಾಗಿದ್ದು ಸಂಬಂಧಿಸಿದ ಸರಾಸರಿ, ಮಾನಕವಿಚಲನೆ ಮತ್ತು 'ಟಿ' ಮೌಲ್ಯ ಹಾಗೂ ಲಕ್ಷ್ಯಾರ್ಹತೆಗಳನ್ನು ಗುರುತಿಸಲಾಗಿದ್ದು, ಈ ವಿವರಗಳನ್ನು ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ–7 : ಸ್ವಬೋಧನಾ ಸಾಮಗ್ರಿಯ ಕಲಿಕೆಗೆ ಸಂಬಂಧಿಸಿದಂತೆ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕ–ಶಿಕ್ಷಕಿಯರ ಪೂರ್ವಪರೀಕ್ಷೆ ಮತ್ತು ಅಂತಿಮ ಪರೀಕ್ಷೆಯ ಸರಾಸರಿಗಳ ವ್ಯತ್ಯಾಸವನ್ನು ಸೂಚಿಸುವ ಕೋಷ್ಟಕ.**

| ಚಲಕಗಳು | ಸಂಖ್ಯೆ | ಸರಾಸರಿ | ಮಾನಕ ವಿಚಲನೆ | t-ಮೌಲ್ಯ | ಲಕ್ಷ್ಯಾರ್ಹತೆ |
|---|---|---|---|---|---|
| ಪೂರ್ವ ಪರೀಕ್ಷೆ | 6 | 15 | 2.5 | 12.95 | 0.01 ಹಂತದಲ್ಲಿ ಗಮನಾರ್ಹತೆ ಇದೆ |
| ಅಂತಿಮ ಪರೀಕ್ಷೆ | 6 | 28.33 | 2.35 | | |

ಪ್ರಸ್ತುತ ಕೋಷ್ಟಕದಲ್ಲಿ ಸಮನ್ವಯ ಶಿಕ್ಷಣದ ಪರಿಕಲ್ಪನೆಗಳಿಗೆ ಸಂಬಂಧಿಸಿದಂತೆ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕ–ಶಿಕ್ಷಕಿಯರ ಪೂರ್ವಪರೀಕ್ಷೆಯ ಸರಾಸರಿ 15 ಆಗಿದ್ದು, ಅಂತಿಮ ಪರೀಕ್ಷೆಯ ಸರಾಸರಿ 28.33 ಆಗಿದೆ. ಸರ್ಕಾರಿ ಶಾಲಾ ಶಿಕ್ಷಕ–ಶಿಕ್ಷಕಿಯರ ಪೂರ್ವಪರೀಕ್ಷೆ ಹಾಗೂ ಅಂತಿಮ ಪರೀಕ್ಷೆಯ ನಡುವಿನ 'ಟಿ' ಮೌಲ್ಯವು 12.95 ಆಗಿದೆ. ಈ ಮೌಲ್ಯವು 0.01 ಹಂತದಲ್ಲಿ 'ಟಿ' ಕೋಷ್ಟಕದ ಮೌಲ್ಯ 2.58 ಕ್ಕಿಂತ ಹೆಚ್ಚಾಗಿರುವುದರಿಂದ ಪೂರ್ವಪರೀಕ್ಷೆ ಮತ್ತು ಅಂತಿಮ ಪರೀಕ್ಷೆ ಎಂಬ ಎರಡು ಚಲಕಗಳ ನಡುವೆ ಗಮನಾರ್ಹವಾದ ವ್ಯತ್ಯಾಸವಿದೆ ಎಂಬುದನ್ನು ಸೂಚಿಸುವುದು.

## ಪೂರ್ವ ಸಿದ್ಧಾಂತದ ನಿರಾಕರಣೆ

ಪ್ರಸ್ತುತ ಅಧ್ಯಯನದ ಉದ್ದೇಶ ನಾಲ್ಕರಲ್ಲಿ ಪೂರ್ವಸಿದ್ಧಾಂತವನ್ನು ವಿಶ್ಲೇಷಿಸಿದಾಗ ದೊರೆತ 'ಟಿ' ಮೌಲ್ಯವು ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕ–ಶಿಕ್ಷಕಿಯರ ಸಮನ್ವಯ ಶಿಕ್ಷಣದ ಅರಿವಿಗೆ ಸಂಬಂಧಿಸಿದ ಪೂರ್ವಪರೀಕ್ಷೆ ಹಾಗೂ ಅಂತಿಮ ಪರೀಕ್ಷೆಯ ಅಂಕಗಳ ಪ್ರಮಾಣದಲ್ಲಿ ಗಮನಾರ್ಹವಾದ ವ್ಯತ್ಯಾಸವಿದೆ ಎಂಬುದನ್ನು ಸೂಚಿಸುತ್ತಿದ್ದು, ಇದು ಉದ್ದೇಶ ನಾಲ್ಕರ ಪೂರ್ವಸಿದ್ಧಾಂತಕ್ಕೆ ಅನುಗುಣವಾಗಿಲ್ಲದಿರುವುದರಿಂದ ಪುಸ್ತಕ ಪೂರ್ವಸಿದ್ಧಾಂತವನ್ನು ನಿರಾಕರಿಸಲಾಗಿದೆ.

ಅಲ್ಲದೆ, ಪೂರ್ವಪರೀಕ್ಷೆ ಮತ್ತು ಅಂತಿಮ ಪರೀಕ್ಷೆಯಲ್ಲಿ ಗಮನಾರ್ಹವಾದ ವ್ಯತ್ಯಾಸವಿದ್ದು ಅಂತಿಮ ಪರೀಕ್ಷೆಯ ಸರಾಸರಿಯು ಪೂರ್ವಪರೀಕ್ಷೆಯ ಸರಾಸರಿಗಿಂತ ಹೆಚ್ಚಿರುವುದರಿಂದ ಸಮನ್ವಯ ಶಿಕ್ಷಣದ ಪರಿಕಲ್ಪನೆಗಳಿಗೆ ಸಂಬಂಧಿಸಿದಂತೆ ತಯಾರಿಸಿದ ಸ್ವಬೋಧನಾ ಸಾಮಗ್ರಿಯು ಉದ್ದೇಶಿತ ಫಲವನ್ನು ಉಂಟುಮಾಡುವಲ್ಲಿ ಯಶಸ್ವಿಯಾಗಿದೆ ಎಂದು ಹೇಳಬಹುದು.

**ನಿರ್ಧಾರ :** ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕ–ಶಿಕ್ಷಕಿಯರು ಸಮನ್ವಯ ಶಿಕ್ಷಣದ ಪರಿಕಲ್ಪನೆಗಳಿಗೆ ಸಂಬಂಧಿಸಿದಂತೆ ಸ್ವಬೋಧನಾ ಸಾಮಗ್ರಿಯ ಮೂಲಕ ಅರಿವನ್ನು ಹೆಚ್ಚಿಸಬಹುದು. ಈ ಸಾಮಗ್ರಿಯನ್ನು ಸಮನಾಂತರ ಸನ್ನಿವೇಶದಲ್ಲಿ ಯಶಸ್ವಿಯಾಗಿ ಬಳಸಿಕೊಳ್ಳಬಹುದು.

**ಕೋಷ್ಟಕ–8 : ಸಮನ್ವಯ ಶಿಕ್ಷಣದ ಪರಿಕಲ್ಪನೆಗಳ ಅರಿವು ಮೂಡಿಸುವ ಸ್ವಬೋಧನಾ ಸಾಮಗ್ರಿಯ ಮೌಲ್ಯೀಕರಣಕ್ಕೆ ಸಂಬಂಧಿಸಿದಂತೆ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕ–ಶಿಕ್ಷಕಿಯರು ಪೂರ್ವಪರೀಕ್ಷೆ ಮತ್ತು ಅಂತಿಮ ಪರೀಕ್ಷೆಯಲ್ಲಿ ಪಡೆದಿರುವ ಅಂಕಗಳ ಆವೃತ್ತಿ ವಿತರಣೆಗಳು.**

| ವರ್ಗಾಂತರ | ಪೂರ್ವ ಪರೀಕ್ಷೆ | ಅಂತಿಮ ಪರೀಕ್ಷೆ | ಪೂರ್ವ ಪರೀಕ್ಷೆ | ಅಂತಿಮ ಪರೀಕ್ಷೆ | ಪೂರ್ವ ಪರೀಕ್ಷೆ | ಅಂತಿಮ ಪರೀಕ್ಷೆ | ಮೇಲ್ಮಿತಿ |
|---|---|---|---|---|---|---|---|
| | ಆವೃತ್ತಿ | | ಸಂಚಿತಾವೃತ್ತಿ | | ಸಂಚಿತ ಪ್ರತಿಶತ ಆವೃತ್ತಿ | | |
| 8–12 | 1 | 0 | 1 | 0 | 16.66 | 0 | 12.5 |
| 13–17 | 4 | 0 | 5 | 0 | 83.33 | 0 | 17.5 |
| 18–22 | 2 | 0 | 6 | 0 | 100 | 0 | 22.5 |
| 23–27 | | 2 | | 2 | | 33.33 | 27.5 |
| 28–32 | | 4 | | 6 | | 100 | 32.5 |

## ಉದ್ದೇಶ ಅದರ ವಿಶ್ಲೇಷಣೆ ಹಾಗೂ ನಿರೂಪಣೆ

ಸಮನ್ವಯ ಶಿಕ್ಷಣದ ಪರಿಕಲ್ಪನೆಗಳ ಅರಿವು ಮೂಡಿಸುವಲ್ಲಿ ತರಬೇತಿಗಾಗಿ ಖಾಸಗಿ ಪ್ರಾಥಮಿಕ ಶಾಲಾ ಶಿಕ್ಷಕ–ಶಿಕ್ಷಕಿಯರಿಗೆ ಸಂಬಂಧಿಸಿದಂತೆ ಸ್ವಬೋಧನಾ ಸಾಮಗ್ರಿಯನ್ನು ಮೌಲ್ಯೀಕರಿಸುವುದು. (ಅಂದರೆ ತರಬೇತಿ ಪೂರ್ವ ಮತ್ತು ತರಬೇತಿ ನಂತರದಲ್ಲಿನ ಪರೀಕ್ಷೆಗಳಲ್ಲಿ ಖಾಸಗಿ ಶಾಲಾ ಶಿಕ್ಷಕ–ಶಿಕ್ಷಕಿಯರ ಸರಾಸರಿಗಳ ನಡುವೆ ವ್ಯತ್ಯಾಸವಿದೆಯೇ ಎಂದು ನೋಡುವುದು).

## ಪೂರ್ವ ಸಿದ್ಧಾಂತ

ಉದ್ದೇಶಕ್ಕೆ ಅನುಗುಣವಾಗಿ 'ಟಿ' ಪರೀಕ್ಷೆಯನ್ನು ಬಳಸಲಾಗಿದ್ದು 'ಟಿ' ಪರೀಕ್ಷೆಯ ಉದ್ದೇಶಕ್ಕಾಗಿ ಕೆಳಗಿನ ಸರ್ವಸಿದ್ಧಾಂತ ರಚಿಸಲಾಗಿದೆ.

ಸಮನ್ವಯ ಶಿಕ್ಷಣಕ್ಕೆ ಸಂಬಂಧಿಸಿದ ಪರಿಕಲ್ಪನೆಗಳ ಅರಿವಿನ ಕುರಿತಂತೆ ಖಾಸಗಿ ಪ್ರಾಥಮಿಕ ಶಾಲಾ ಮಟ್ಟದ ಶಿಕ್ಷಕ–ಶಿಕ್ಷಿಯರ ಪೂರ್ವಪರೀಕ್ಷೆ ಮತ್ತು ಅಂತಿಮ ಪರೀಕ್ಷೆಯ ಸರಾಸರಿಗಳಲ್ಲಿ ಯಾವುದೇ ಗಮನಾರ್ಹ ವ್ಯತ್ಯಾಸವಿರುವುದಿಲ್ಲ.

ISSN : 2249-2429 ಸಂಶೋಧನೆ RNI REG.NO.KARKAN/2011/38712

## ವಿಶ್ಲೇಷಣೆ

ಪ್ರಸ್ತುತ ಅಧ್ಯಯನದಲ್ಲಿ ಸಮನ್ವಯ ಶಿಕ್ಷಣದ ಪರಿಕಲ್ಪನೆಗಳಿಗೆ ಸಂಬಂಧಿಸಿದಂತೆ ಘಟಕಗಳನ್ನು ಯೋಜಿಸಿ ಅದರ ಪರಿಣಾಮವನ್ನು ತಿಳಿಯಲು ಪ್ರಾಯೋಗಿಕ ಗುಂಪಿನ ಖಾಸಗಿ ಶಾಲಾ ಶಿಕ್ಷಕ–ಶಿಕ್ಷಕಿಯರ ಪೂರ್ವಪರೀಕ್ಷೆ ಹಾಗೂ ಅಂತಿಮ ಪರೀಕ್ಷೆಯ ಅಂಕಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ.

ಪ್ರಾಕಲ್ಪನೆಗೆ ಅನುಗುಣವಾಗಿ ದತ್ತಾಂಶಗಳನ್ನು ವಿಶ್ಲೇಷಿಸಲಾಗಿದ್ದು ಸಂಬಂಧಿಸಿದ ಸರಾಸರಿ, ಮಾನಕವಿಚಲನೆ ಮತ್ತು 'ಟಿ' ಮೌಲ್ಯ ಹಾಗೂ ಲಕ್ಷ್ಯಾರ್ಹತೆಗಳನ್ನು ಗುರುತಿಸಲಾಗಿದ್ದು, ಈ ವಿವರಗಳನ್ನು ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ–9 : ಸ್ವಬೋಧನಾ ಸಾಮಗ್ರಿಯ ಕಲಿಕೆಗೆ ಸಂಬಂಧಿಸಿದಂತೆ ಖಾಸಗಿ ಪ್ರಾಥಮಿಕ ಶಾಲಾ ಶಿಕ್ಷಕ–ಶಿಕ್ಷಕಿಯರ ಪೂರ್ವಪರೀಕ್ಷೆ ಮತ್ತು ಅಂತಿಮ ಪರೀಕ್ಷೆಯ ಸರಾಸರಿಗಳ ವ್ಯತ್ಯಾಸವನ್ನು ಸೂಚಿಸುವ ಕೋಷ್ಟಕ.**

| ಚಲಕಗಳು | ಸಂಖ್ಯೆ | ಸರಾಸರಿ | ಮಾನಕ ವಿಚಲನೆ | t-ಮೌಲ್ಯ | ಲಕ್ಷ್ಯಾರ್ಹತೆ |
|---|---|---|---|---|---|
| ಪೂರ್ವ ಪರೀಕ್ಷೆ | 14 | 14.35 | 2.58 | 48.46 | 0.01 ಹಂತದಲ್ಲಿ ಗಮನಾರ್ಹತೆ ಇದೆ |
| ಅಂತಿಮ ಪರೀಕ್ಷೆ | 14 | 27.85 | 2.08 | | |

ಪ್ರಸ್ತುತ ಕೋಷ್ಟಕದಲ್ಲಿ ಸಮನ್ವಯ ಶಿಕ್ಷಣದ ಪರಿಕಲ್ಪನೆಗಳಿಗೆ ಸಂಬಂಧಿಸಿದಂತೆ ಖಾಸಗಿ ಪ್ರಾಥಮಿಕ ಶಾಲಾ ಶಿಕ್ಷಕ–ಶಿಕ್ಷಕಿಯರ ಪೂರ್ವಪರೀಕ್ಷೆಯ ಸರಾಸರಿ 14.35 ಆಗಿದ್ದು, ಅಂತಿಮ ಪರೀಕ್ಷೆಯ ಸರಾಸರಿ 27.85 ಆಗಿದೆ. ಖಾಸಗಿ ಶಾಲಾ ಶಿಕ್ಷಕ–ಶಿಕ್ಷಕಿಯರ ಪೂರ್ವಪರೀಕ್ಷೆ ಹಾಗೂ ಅಂತಿಮ ಪರೀಕ್ಷೆಯ ನಡುವಿನ 'ಟಿ' ಮೌಲ್ಯವು 48.46 ಆಗಿದೆ. ಈ ಮೌಲ್ಯವು 0.01 ಹಂತದಲ್ಲಿ 'ಟಿ' ಕೋಷ್ಟಕದ ಮೌಲ್ಯ 2.58 ಕ್ಕಿಂತ ಹೆಚ್ಚಾಗಿರುವುದರಿಂದ ಪೂರ್ವಪರೀಕ್ಷೆ ಮತ್ತು ಅಂತಿಮ ಪರೀಕ್ಷೆ ಎಂಬ ಎರಡು ಚಲಕಗಳ ನಡುವೆ ಗಮನಾರ್ಹವಾದ ವ್ಯತ್ಯಾಸವಿದೆ ಎಂಬುದನ್ನು ಸೂಚಿಸುವುದು.

## ಪೂರ್ವ ಸಿದ್ಧಾಂತದ ನಿರಾಕರಣೆ

ಪ್ರಸ್ತುತ ಅಧ್ಯಯನದ ಉದ್ದೇಶ ಅದರಲ್ಲಿ ಪೂರ್ವಸಿದ್ಧಾಂತವನ್ನು ವಿಶ್ಲೇಷಿಸಿದಾಗ ದೊರೆತ 'ಟಿ' ಮೌಲ್ಯವು ಖಾಸಗಿ ಪ್ರಾಥಮಿಕ ಶಾಲಾ ಶಿಕ್ಷಕ–ಶಿಕ್ಷಕಿಯರ ಸಮನ್ವಯ ಶಿಕ್ಷಣದ ಅರಿವಿಗೆ ಸಂಬಂಧಿಸಿದ ಪೂರ್ವಪರೀಕ್ಷೆ ಹಾಗೂ ಅಂತಿಮ ಪರೀಕ್ಷೆಯ ಅಂಕಗಳ ಪ್ರಮಾಣದಲ್ಲಿ ಗಮನಾರ್ಹವಾದ ವ್ಯತ್ಯಾಸವಿದೆ ಎಂಬುದನ್ನು ಸೂಚಿಸುತ್ತಿದ್ದು, ಇದು ಉದ್ದೇಶ ಅದರ ಪೂರ್ವಸಿದ್ಧಾಂತಕ್ಕೆ ಅನುಗುಣವಾಗಿಲ್ಲದಿರುವುದರಿಂದ ಪುಸ್ತಕ ಪೂರ್ವಸಿದ್ಧಾಂತವನ್ನು ನಿರಾಕರಿಸಲಾಗಿದೆ.

ಅಲ್ಲದೆ, ಪೂರ್ವಪರೀಕ್ಷೆ ಮತ್ತು ಅಂತಿಮ ಪರೀಕ್ಷೆಯಲ್ಲಿ ಗಮನಾರ್ಹವಾದ ವ್ಯತ್ಯಾಸವಿದ್ದು ಅಂತಿಮ ಪರೀಕ್ಷೆಯ ಸರಾಸರಿಯು ಪೂರ್ವಪರೀಕ್ಷೆಯ ಸರಾಸರಿಗಿಂತ ಹೆಚ್ಚಿರುವುದರಿಂದ ಸಮನ್ವಯ ಶಿಕ್ಷಣದ ಪರಿಕಲ್ಪನೆಗಳಿಗೆ ಸಂಬಂಧಿಸಿದಂತೆ ತಯಾರಿಸಿದ ಸ್ವಬೋಧನಾ ಸಾಮಗ್ರಿಯು ಉದ್ದೇಶಿತ ಫಲವನ್ನು ಉಂಟುಮಾಡುವಲ್ಲಿ ಯಶಸ್ವಿಯಾಗಿದೆ ಎಂದು ಹೇಳಬಹುದು.

**ಕೋಷ್ಟಕ–10 : ಸಮನ್ವಯ ಶಿಕ್ಷಣದ ಪರಿಕಲ್ಪನೆಗಳ ಅರಿವು ಮೂಡಿಸುವ ಸ್ವಬೋಧನಾ ಸಾಮಗ್ರಿಯ ಮೌಲ್ಯೀಕರಣಕ್ಕೆ ಸಂಬಂಧಿಸಿದಂತೆ ಖಾಸಗಿ ಪ್ರಾಥಮಿಕ ಶಾಲಾ ಶಿಕ್ಷಕ–ಶಿಕ್ಷಕಿಯರು ಪೂರ್ವಪರೀಕ್ಷೆ ಮತ್ತು ಅಂತಿಮ ಪರೀಕ್ಷೆಯಲ್ಲಿ ಪಡೆದಿರುವ ಅಂಕಗಳ ಆವೃತ್ತಿ ವಿತರಣೆಗಳು.**

| ವರ್ಗಾಂತರ | ಪೂರ್ವ ಪರೀಕ್ಷೆ | ಅಂತಿಮ ಪರೀಕ್ಷೆ | ಪೂರ್ವ ಪರೀಕ್ಷೆ | ಅಂತಿಮ ಪರೀಕ್ಷೆ | ಪೂರ್ವ ಪರೀಕ್ಷೆ | ಅಂತಿಮ ಪರೀಕ್ಷೆ | ಮೇಲ್ಮಿತಿ |
|---|---|---|---|---|---|---|---|
| | ಆವೃತ್ತಿ | | ಸಂಚಿತಾವೃತ್ತಿ | | ಸಂಚಿತ ಪ್ರತಿಶತ ಆವೃತ್ತಿ | | |
| 8–10 | 2 | 0 | 2 | 0 | 14.28 | 0 | 10.5 |
| 11–13 | 1 | 0 | 3 | 0 | 21.42 | 0 | 13.5 |
| 14–16 | 9 | 0 | 12 | 0 | 85.71 | 0 | 16.5 |
| 17–19 | 2 | 0 | 14 | 0 | 100 | 0 | 19.5 |
| 20–22 | | 0 | | 0 | | 0 | 22.5 |
| 23–25 | | 2 | | 2 | | 14.28 | 25.5 |
| 25–28 | | 6 | | 8 | | 57.14 | 28.5 |
| 29–31 | | 6 | | 14 | | 100 | 31.5 |

**ನಿರ್ಧಾರ :** ಖಾಸಗಿ ಪ್ರಾಥಮಿಕ ಶಾಲಾ ಶಿಕ್ಷಕ–ಶಿಕ್ಷಕಿಯರು ಸಮನ್ವಯ ಶಿಕ್ಷಣದ ಪರಿಕಲ್ಪನೆಗಳಿಗೆ ಸಂಬಂಧಿಸಿದಂತೆ ಸ್ವಬೋಧನಾ ಸಾಮಗ್ರಿಯ ಮೂಲಕ ಅರಿವನ್ನು ಹೆಚ್ಚಿಸಬಹುದು. ಈ ಸಾಮಗ್ರಿಯನ್ನು ಸಮನಾಂತರ ಸನ್ನಿವೇಶದಲ್ಲಿ ಯಶಸ್ವಿಯಾಗಿ ಬಳಸಿಕೊಳ್ಳಬಹುದು.

## ಅಧ್ಯಯನದ ಪ್ರಮುಖ ಫಲಿತಾಂಶಗಳು

1. ಸಮನ್ವಯ ಶಿಕ್ಷಣದ ಪರಿಕಲ್ಪನೆಗಳ ಅರಿವು ಮೂರಿಸಲು ಪ್ರಾಥಮಿಕ ಶಾಲಾ ಶಿಕ್ಷಕ–ಶಿಕ್ಷಕಿಯರಿಗೆ ಸಂಧಿಸಿದಂತೆ ತಯಾರಿಸಿದ ಸ್ವಬೋಧನಾ ಸಾಮಗ್ರಿಯ ಬಳಕೆಯು ಪ್ರಸ್ತುತ ಅಧ್ಯಯನದಲ್ಲಿ ಗಮನಾರ್ಹವಾಗಿ ಪರಿಣಾಮಕಾರಿಯಾಗಿದೆ.
2. ಸಮನ್ವಯ ಶಿಕ್ಷಣದ ಪರಿಕಲ್ಪನೆಗಳ ಅರಿವು ಮೂಡಿಸಲು ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಸಂಬಂಧಿಸಿದಡೆ ತಯಾರಿಸಿದ ಸ್ವಬೋಧನಾ ಸಾಮಗ್ರಿಯ ಬಳಕೆಯು ಪ್ರಸ್ತುತ ಅಧ್ಯಯನದಲ್ಲಿ ಗಮನಾರ್ಹವಾಗಿ ಪರಿಣಾಮಕಾರಿಯಾಗಿದೆ.
3. ಸಮನ್ವಯ ಶಿಕ್ಷಣದ ಪರಿಕಲ್ಪನೆಗಳ ಅರಿವು ಮೂಡಿಸಲು ಪ್ರಾಥಮಿಕ ಶಾಲಾ ಶಿಕ್ಷಕಿಯರಿಗೆ ಸಂಧಿಸಿದಂತೆ ತಯಾರಿಸಿದ ಸ್ವಬೋಧನಾ ಸಾಮಗ್ರಿಯ ಬಳಕೆಯು ಪ್ರಸ್ತುತ ಅಧ್ಯಯನದಲ್ಲಿ ಗಮನಾರ್ಹವಾಗಿ ಪರಿಣಾಮಕಾರಿಯಾಗಿದೆ.
4. ಸಮನ್ವಯ ಶಿಕ್ಷಣದ ಪರಿಕಲ್ಪನೆಗಳ ಅರಿವು ಮೂಡಿಸಲು ಪ್ರಾಥಮಿಕ ಸರಕಾರಿ ಶಾಲಾ ಶಿಕ್ಷಕ–ಶಿಕ್ಷಕಿಯರಿಗೆ ಸಂಬಂಧಿಸಿದಂತೆ ತಯಾರಿಸಿದ ಸ್ವಬೋಧನಾ ಸಾಮಗ್ರಿಯ ಬಳಕೆಯು ಪ್ರಸ್ತುತ ಅಧ್ಯಯನದಲ್ಲಿ ಗಮನಾರ್ಹವಾಗಿ ಪರಿಣಾಮಕಾರಿಯಾಗಿದೆ.

ISSN : 2249-2429 ಸಂಶೋಧನೆ RNI REG.NO.KARKAN/2011/38712

5. ಸಮನ್ವಯ ಶಿಕ್ಷಣದ ಪರಿಕಲ್ಪನೆಗಳ ಅರಿವು ಮೂಡಿಸಲು ಪ್ರಾಥಮಿಕ ಖಾಸಗಿ ಶಾಲಾ ಶಿಕ್ಷಕ–ಶಿಕ್ಷಕಿಯರಿಗೆ ಸಂಬಂಧಿಸಿದಂತೆ ತಯಾರಿಸಿದ ಸ್ವಬೋಧನಾ ಸಾಮಗ್ರಿಯ ಬಳಕೆಯು ಪ್ರಸ್ತುತ ಅಧ್ಯಯನದಲ್ಲಿ ಗಮನಾರ್ಹವಾಗಿ ಪರಿಣಾಮಕಾರಿಯಾಗಿದೆ.

## ಅಧ್ಯಯನದ ಶೈಕ್ಷಣಿಕ ನಿಹಿತಾರ್ಥಗಳು

1. ಸಮನ್ವಯ ಶಿಕ್ಷಣದ ಸ್ವಬೋಧನಾ ಸಾಮಗ್ರಿಯಿಂದ ಶಿಕ್ಷಕರು ಸಮನ್ವಯ ಶಿಕ್ಷಣದ ಅರ್ಥ, ಪರಿಕಲ್ಪನೆ ಮತ್ತು ಸಮರ್ಥನೆಯ ಕುರಿತು ಅರಿವು ಮೂಡಿಸಬೇಕು.
2. ಸಮನ್ವಯ ಶಿಕ್ಷಣವನ್ನು ಬೋಧಿಸುವ ಶಿಕ್ಷಕರು ಅದು ಒಳಗೊಂಡ ಸವಾಲುಗಳ ವಿಧಗಳನ್ನು ಕುರಿತು ಅರಿವು ಮೂಡಿಸಬೇಕು.
3. ಸಮನ್ವಯ ಶಿಕ್ಷಣದ ಕಲಿಕೆಯನ್ನು ಪ್ರಭಾವಿಸುವ ಅಂಶಗಳ ಬಗ್ಗೆ ಶಿಕ್ಷಕರು ವಿಶೇಷ ಗಮನ ನೀಡಿ ಸುಧಾರಿಸಲು ಪ್ರಯತ್ನಿಸಬೇಕು.
4. ಶಿಕ್ಷಕರು ಸಮನ್ವಯ ಶಿಕ್ಷಣದಲ್ಲಿ ಕಲಿಕಾ ಸವಾಲುಗಳುಳ್ಳ ಮಕ್ಕಳನ್ನು ವಿಶೇಷವಾಗಿ ಗುರುತಿಸಬೇಕು.
5. ಶಿಕ್ಷಕರು ಓದುಗಾರಿಕಾ ಸವಾಲುಗಳನ್ನು ತಿಳಿದುಕೊಂಡು ಪರಿಹರಿಸುವಲ್ಲಿ ವೈಯಕ್ತಿಕ ಗಮನ ನೀಡಬೇಕು.
6. ಶಿಕ್ಷಕರು ಬರವಣಿಗೆಯ ಸವಾಲುಗಳನ್ನು ಅರಿತುಕೊಂಡು ವಿಶೇಷ ಚಟುವಟಿಕೆಗಳನ್ನು ಮಕ್ಕಳಿಗಾಗಿ ಯೋಜಿಸಬೇಕು.
7. ಶಿಕ್ಷಕರು ಅಂಕಗಣಿತದ ಸವಾಲುಗಳನ್ನು ತಿಳಿದುಕೊಂಡು ನಿವಾರಿಸಲು ನಿರ್ದಿಷ್ಟ ಸವಾಲುಗಳನ್ನು ಹಮ್ಮಿಕೊಂಡು ಕಾರ್ಯರೂಪಕ್ಕೆ ತರಬೇಕು.
8. ಶಿಕ್ಷಕರು ಸಮನ್ವಯ ಶಿಕ್ಷಣದಲ್ಲಿ ಪರಿಹಾರತ್ಮಕ ಬೋಧನಾ ಕ್ರಮಗಳನ್ನು ಅಳವಡಿಸಿಕೊಂಡು ಅಭ್ಯಾಸ ಮಾಡಿಸಬೇಕು.
9. ಶಿಕ್ಷಕರು ಸಮನ್ವಯ ಶಿಕ್ಷಣದಲ್ಲಿ ಶಾಲೆ, ಶಾಲಾ ಅಭಿವೃದ್ಧಿ ಮಂಡಳಿ, ಮುಖ್ಯ ಶಿಕ್ಷಕರು ಮತ್ತು ಶಿಕ್ಷಕರ ಪಾತ್ರವನ್ನು ಅರಿತುಕೊಂಡು ಮಕ್ಕಳ ಸವಾಲುಗಳನ್ನು ಎದುರಿಸುವಲ್ಲಿ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಬೇಕು.
10. ಸಮನ್ವಯ ಶಿಕ್ಷಣದಲ್ಲಿ ಪೋಷಕರು ಮತ್ತು ಸಮುದಾಯದ ಪಾತ್ರವನ್ನು ಶಿಕ್ಷಕರು ಅರಿತುಕೊಂಡು ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.

## ಮುಂದಿನ ಅಧ್ಯಯನಕ್ಕೆ ಸಲಹೆಗಳು

1. ಸಮನ್ವಯ ಶಿಕ್ಷಣವು ಒಳಗೊಂಡ ಸವಾಲುಗಳನ್ನು ಪರಿಹರಿಸುವಲ್ಲಿ ಸಹಾಯಕವಾಗುವ ಕಾರ್ಯಕ್ರಮ ಸಾಮಗ್ರಿಗಳು, ತರಬೇತಿಗಳ ಬಗ್ಗೆ ಸಂಶೋಧನೆ ನಡೆಸಬಹುದು.
2. ಮಕ್ಕಳ ಸವಾಲುಗಳು ಪ್ರಾಥಮಿಕ ಶಾಲೆಗಳಲ್ಲಿ ಮಾತ್ರ ಕಂಡು ಬರುವುದಿಲ್ಲ. ಇದು ಪ್ರಾಥಮಿಕ ಹಂತದಿಂದ ಉನ್ನತ ಶಿಕ್ಷಣದ ಹಂತದ ವಿದ್ಯಾರ್ಥಿಗಳಲ್ಲಿಯೂ ಕಂಡು ಬರುವುದರಿಂದ ಅವರ ವಯಸ್ಸಿಗನುಗುಣವಾಗಿ ಸವಾಲುಗಳ ಪರಿಹಾರಕ್ಕೆ ನಿರ್ದಿಷ್ಟ ರೂಪುರೇಷೆಗಳನ್ನು ರೂಪಿಸಬಹುದು.
3. ಸಮನ್ವಯ ಶಿಕ್ಷಣದೊಂದಿಗೆ ಸಮಾನ ಶಿಕ್ಷಣವನ್ನು ಹೊಂದಲು ವಿಭಿನ್ನ ರೀತಿಯ ಚಟುವಟಿಕೆಗಳು ಸಹಾಯಕವಾಗುದೆಂಬುದರ ಬಗ್ಗೆ ಸಂಶೋಧನೆಗಳನ್ನು ನಡೆಸಬಹುದು.

## ಪರಾಮರ್ಶನ ಗ್ರಂಥಗಳು


- **ಉಮೇಶ್ ಎಚ್.ಎಸ್. (2002) :** "ಶೈಕ್ಷಣಿಕ ಮನೋವಿಜ್ಞಾನ", ಮೈಸೂರು ವಿಸ್ಮಯ ಪ್ರಕಾಶನ.
- **ಚಂದ್ರಾಚಾರ್ ಎಚ್.ಎಂ. (2014) :** "ಸಮಗ್ರ ಶೈಕ್ಷಣಿಕ ಮನೋವಿಜ್ಞಾನ", ರಾಣಿಬೆನ್ನೂರು ಅಶ್ವಿನಿ ಪ್ರಕಾಶನ.
- **ಪದ್ಮಪ್ರಸಾದ್ ಎಸ್.ಪಿ.(2005) :** "ಶೈಕ್ಷಣಿಕ ಸಂಶೋಧನೆ", ಬೆಂಗಳೂರು ಸುಮುಖ ಪ್ರಕಾಶನ.
- **ಪ್ರಭು ಆರ್.ಜಿ.(2004–05) :** "ಶೈಕ್ಷಣಿಕ ಮನೋವಿಜ್ಞಾನ", ಗದಗ ವಿದ್ಯಾನಿಧಿ ಪ್ರಕಾಶನ.
- **ಮಹಾಬಲೇಶ್ವರ ರಾವ್ (1999) :** "ಪ್ರಾಥಮಿಕ ಶಿಕ್ಷಣದ ಸಮಸ್ಯೆಗಳು ಮತ್ತು ಸವಾಲುಗಳು", ನವ ಕರ್ನಾಟಕ ಪಬ್ಲಿಕೇಶನ್ ಪ್ರೈವೇಟ್ ಲಿಮಿಟೆಡ್.
- **ಯಶೋಧರ ಕೆ. (2011) :** "ಶಿಕ್ಷಣದಲ್ಲಿ ಸಂಖ್ಯಾಶಾಸ್ತ್ರ", ಮೈಸೂರು ಶಿಬಾ ಪ್ರಕಾಶನ.
- **ಲಕ್ಷ್ಮಿ ಎನ್. (2011) :** "ಶೈಕ್ಷಣಿಕ ಸಂಶೋಧನೆ", ಗದಗ ವಿದ್ಯಾವಿಧಿ ಪ್ರಕಾಶನ ಪ್ರಕಾಶನ.
- **ಹೊಳೆಯಣ್ಣನವರ ಎಸ್.ಕೆ. (2004) :** "ಆಧುನಿಕ ಶಿಕ್ಷಣದ ಒಲವುಗಳು", ಗದಗ ವಿದ್ಯಾನಿಧಿ ಪ್ರಕಾಶನ.
- **Panda K.C. (1997) :** "Education of Children with Special Needs", New Delhi Vikas Publishing House Pvt. Ltd.
- **Sanchin Srivastava (2011) :** "Special Needs Children and Their Education", New Delhi Sonali Publicaitons.


## Hand Books


- **ಸಾರ್ವಜನಿಕ ಶಿಕ್ಷಣ ಇಲಾಖೆ,** ಕರ್ನಾಟಕ ಸರ್ಕಾರ, "ಸಮನ್ವಯ ಶಿಕ್ಷಣದ ಆಶಾದೀಪ", ಆಡಳಿತ ಅಧಿಕಾರಿಗಳ ಕೈಪಿಡಿ.
- **DSERT (2002) :** "Including Children with Special Needs in Mainstream Education - Training of Master Teachers".


■■

– *89ನೇ ಪುಟದಿಂದ ಮುಂದುವರೆದುದು*


- **ನ್ಯಾಷನಲ್ ಇನ್‌ಸ್ಟಿಟ್ಯೂಷನ್ ಫಾರ್ ಸ್ಮಾರ್ಟ್ ಗವರ್ನನ್ಸ್ (2012):** ಇ–ಗವರ್ನನ್ಸ್ ಪ್ರಾಜೆಕ್ಟ್ ಲೈಫ್‌ಸೈಕಲ್. ಡಿಪಾರ್ಟ್‌ಮೆಂಟ್ ಅಫ್ ಎಲೆಕ್ಟ್ರಾನಿಕ್ಸ್ ಆಂಡ್ ಕಮ್ಯೂನಿಕೇಷನ್ ಟೆಕ್ನಾಲಜಿ, ಗವರ್ನಮೆಂಟ್ ಆಫ್ ಇಂಡಿಯಾ.
- **ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, (ಇ–ಆಡಳಿತ) (2021):** 2020–21ನೇ ಸಾಲಿನ ವಾರ್ಷಿಕ ವರದಿಗಳು. ಬೆಂಗಳೂರು ಸರ್ಕಾರಿ ಕೇಂದ್ರ ಮುದ್ರಣಾಲಯ.
- ಕರ್ನಾಟಕ ಸರ್ಕಾರ, ವೆಬ್‌ಸೈಟ್. https://www. karnataka one.gov.in/
- ಕರ್ನಾಟಕ ಸರ್ಕಾರ, ವೆಬ್‌ಸೈಟ್. https://egovernance. karnataka. gov.in/english


■■

ISSN : 2249-2429 ಸಂಶೋಧನೆ RNI REG.NO.KARKAN/2011/38712

# ಮಹಿಳೆಯರ ಆರ್ಥಿಕ ಅಭಿವೃದ್ಧಿಯಲ್ಲಿ ಸ್ವ-ಸಹಾಯ ಸಂಘಗಳ ಪಾತ್ರ : ಒಂದು ಸಮಾಜ ಕಾರ್ಯ ಅಧ್ಯಯನ

✍ ಡಾ. ಕಲಾವತಿ ಹೆಚ್. ಕಾಂಬಳೆ, ಸಹಾಯಕ ಪ್ರಾಧ್ಯಾಪಕರು, ಸಮಾಜ ಕಾರ್ಯ ವಿಭಾಗ, ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ.

## ಪೀಠಿಕೆ

ಭಾರತ ದೇಶ ಹಳ್ಳಿಗಳ ದೇಶ. ಇಲ್ಲಿ ಕೃಷಿ ಪ್ರಧಾನವಾದ ಭಾರತದ ಭವಿಷ್ಯ ದೇಶದ ಸುಮಾರು 6 ಲಕ್ಷ ಹಳ್ಳಿಗಳ ಪುನರುಜ್ಜೀವನ ಮತ್ತು ಏಳಿಗೆಯಲ್ಲಿ ಅಡಗಿದೆ ಎಂಬುದು ನಿರ್ವಿವಾದದ ಸಂಗತಿ. ಭಾರತದ ಅಭಿವೃದ್ಧಿ ಎಂದರೆ 6 ಲಕ್ಷ ಹಳ್ಳಿಗಳ ಸಮಗ್ರ ಅಭಿವೃದ್ಧಿಯೆಂದೇ ಅರ್ಥೈಸಬೇಕು.

ಅಭಿವೃದ್ಧಿ ಎಲ್ಲಿಯೇ ಆಗಲಿ ಆಗಲೇಬೇಕಾದ ಅನಿವಾರ್ಯ ಕ್ರಿಯೆ. ಅದು ನಿಂತ ನೀರಾಗದೆ ಹರಿವ ಹೊಳೆಯಾಗಬೇಕು. ಅದೊಂದು ನಿರಂತರ ಅನಂತ ಕ್ರಿಯೆ. ಅಭಿವೃದ್ಧಿಯನ್ನು ಫಲಕಾರಿ, ಅಪೇಕ್ಷಿತ, ಅರ್ಥಪೂರ್ಣ ಹಾಗೂ ಉಪಯುಕ್ತಗೊಳಿಸಬೇಕಾದರೆ ಜನರ ಆರ್ಥಿಕ ಮಟ್ಟ ಸುಧಾರಣೆಯಾಗಬೇಕು ಎಂಬ ಅಂಶವನ್ನು ಅನೇಕ ತಜ್ಞರು ಕಂಡುಕೊಂಡಿರುವರು. ಗ್ರಾಮೀಣ ಜನತೆಯ ಜೀವನ ಮಟ್ಟವನ್ನು ಆರ್ಥಿಕತೆಯ ಆಧಾರದ ಮೇಲೆ ಸಮಗ್ರವಾಗಿ ಬದಲಾಯಿಸುವ ನಿಟ್ಟಿನಲ್ಲಿ ಬ್ಯಾಂಕುಗಳ ಪಾತ್ರ ಮಹತ್ತರವಾಗಿದೆ.

ಈ ಹಿಂದೆ ಹಳ್ಳಿಗರು, ಅಲ್ಲಿನ ರೈತರು ಸಾಹುಕಾರರ, ಕಲಾಲರ, ಹಳ್ಳಿಯ ಪಟ್ಟಭದ್ರರ ಕಪಿಮುಷ್ಠಿಯಲ್ಲಿ ಸಿಲುಕಿ ತಮ್ಮ ಆದಾಯದ ಬಹುಪಾಲನ್ನು ಬೇರೆಯವರಿಗಾಗಿಯೇ ಕಳೆದುಕೊಳ್ಳುವುದನ್ನು ಕಾಣುತ್ತಿದ್ದೇವು. ನಂತರದ ದಿನಗಳನ್ನು ರೈತರಿಗೆ ನೆರವಾಗಲೆಂದು 'ಗ್ರಾಮೀಣ ಸಾಲ ಪದ್ಧತಿ' ಜಾರಿಗೆ ಬಂದಿತು. ಗ್ರಾಮೀಣ ಸಾಲ ಪದ್ಧತಿಯ ಮೂಲ ಉದ್ದೇಶ ಸಂಪೂರ್ಣ ಮತ್ತು ಸಕಾಲಿಕ ಹಣಕಾಸಿನ ನೆರವನ್ನು ಹಳ್ಳಿಗರಿಗೆ ಕೃಷಿ ಮತ್ತು ಕೃಷಿಪೂರಕ ಚಟುವಟಿಕೆಗಳಿಗೆ ಒದಗಿಸಿ ತನ್ಮೂಲಕ ಜನರು ಹಾಗೂ ಹಳ್ಳಿಗಳು ಅಭಿವೃದ್ಧಿ ಹೊಂದಲು ಅವಕಾಶ ಕಲ್ಪಿಸುವುದೇ ಆಗಿತ್ತು. ಅದೇ ಸಂದರ್ಭದಲ್ಲಿ ಜನರಲ್ಲಿ ಜಾಗೃತಿ ಮೂಡಿ ಸಹಕಾರ ಮನೋಭಾವನೆಯೂ ಮೂಡಿತು. ಅದರ ದ್ಯೋತಕವಾಗಿ ಸಹಕಾರಿ ಸಂಘಗಳು ಹಳ್ಳಿಗಳಲ್ಲಿ ರೂಪು ತಾಳಿದವು.

ಹಲವು ದಶಕಗಳ ಕಾಲ ಗ್ರಾಮದ ಸಹಕಾರಿ ಸಂಘಗಳು ಹಳ್ಳಿಗರಿಗೆ ಕೃಷಿ ಮತ್ತು ಪೂರಕ ಚಟುವಟಿಕೆಗಳಿಗೆ ಸಾಲದ ಸಹಾಯವನ್ನು ಒದಗಿಸುತ್ತ ಬಂದವು. ಆದಾಗ್ಯೂ ಬಹುವಾಗಿ ಇರುವ ಬೇಡಿಕೆ ಹಾಗೂ ಸಾಲದ ಅಗತ್ಯಗಳ ಮುಂದೆ ಸಹಕಾರಿ ಸಂಘಗಳ ಸಾಲ ಪೂರೈಕೆ ಮನ ತಣಿಸಲಾಗಲಿಲ್ಲ. ಇಂತಹ ಸಂದಿಗ್ದ ಸ್ಥಿತಿಯನ್ನು ಕಡೆಗಾಣಿಸಲು ಒಂದಕ್ಕಿಂತ ಹೆಚ್ಚು ರೀತಿಯ ಹಣಕಾಸು ಸಂಸ್ಥೆ ಅಥವಾ ಬ್ಯಾಂಕುಗಳು ಗ್ರಾಮೀಣ ಜನರ ಆರ್ಥಿಕ ಸುಧಾರಣೆ ಕಡೆ ಗಮನ ಹರಿಸುವ ಪ್ರಮೇಯ ಒದಗಿಬಂತು.

ಗ್ರಾಮೀಣ ಪ್ರದೇಶಗಳಲ್ಲಿ ಬಡಜನರು ಗುಂಪುಗಳಾಗಿ ಸಂಘಟನೆ ಹೊಂದಿ ತಮ್ಮ ಆರ್ಥಿಕ, ಸಾಮಾಜಿಕ ಮಟ್ಟವನ್ನು ಸುಧಾರಣೆಗೊಳಿಸಿಕೊಳ್ಳಲು ಕಂಡುಕೊಂಡ ಅಸ್ತ್ರವೇ ಸ್ವ-ಸಹಾಯ ಸಂಘಗಳು. ಭಾರತ ಮತ್ತು ಇತರ ದೇಶಗಳಲ್ಲಿ ಪ್ರಾರಂಭಗೊಂಡಿರುವ ಸ್ವ-ಸಹಾಯ ಸಂಘಗಳು ಗ್ರಾಮೀಣ ಬಡಜನರಿಗೆ ಅರ್ಥಪೂರ್ಣ ಬದಲೀ ಸಾಲ ಪದ್ಧತಿಯನ್ನು ಅಳವಡಿಸಲು ಕಾರಣೀಭೂತವಾಗಿದೆ. ಇಂಡೋನೇಷಿಯಾ, ಬಾಂಗ್ಲಾ, ಮಲೇಷಿಯಾ ದೇಶದ ಪ್ರಯೋಗಗಳ ಜೊತೆಗೆ ಕರ್ನಾಟಕದ ಮೈರಾಡ ಮತ್ತು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಯೋಜನೆಯ ಪ್ರಯೋಗಗಳನ್ನು ನಾವು ಹೆಚ್ಚಿನದಾಗಿ ಗಮನಿಸಬಹುದಾಗಿದೆ.

## ಸ್ವ-ಸಹಾಯ ಸಂಘ ಎಂದರೇನು?

ಸಮಾಜದ ಬಡ ಕುಟುಂಬ ಅಥವಾ ಬಡತನದ ಹಿನ್ನೆಲೆಯಿರುವ ಸಮಾನ ಮನಸ್ಸಿನ ಪರಸ್ಪರ ಪ್ರೀತ್ಯಾದರಗಳಿಂದ ಕೂಡಿದ 5-20 ಜನ ಸದಸ್ಯರು ಒಂದೆಡೆ ಸೇರಿ ತಮ್ಮ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗಾಗಿ ಸ್ವ-ಇಚ್ಛೆಯಿಂದ ರಚಿಸಿಕೊಂಡ ಗುಂಪಿಗೆ ಸ್ವ-ಸಹಾಯ ಸಂಘ ಎಂದು ಕರೆಯುವರು (ಎರ್ರಿಸ್ವಾಮಿ-2000).

ತಮ್ಮ ಮತ್ತು ಗ್ರಾಮದ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾದ ನಿಯಮಗಳನ್ನು ರೂಪಿಸಿಕೊಂಡು ಪ್ರಾಮಾಣಿಕ ಪ್ರಯತ್ನದ ಮೂಲಕ ಸ್ವಂತ ಬಂಡವಾಳವನ್ನು ಕ್ರೋಢೀಕರಿಸಿಕೊಂಡು ತಮ್ಮ ತಮ್ಮಲ್ಲಿ ಸ್ವ-ಸಹಾಯ ಕಲ್ಪಿಸಿಕೊಳ್ಳುವ ಗುಂಪು ಇದಾಗಿದೆ. ನಿಗದಿತವಾಗಿ ಉಳಿತಾಯ ಮಾಡುವುದು, ತಮ್ಮದೇ ಹಣವನ್ನು ಸ್ವ-ಸಹಾಯ ತತ್ವದ ಮೂಲಕ ಸಾಲ ನೀಡುವುದು. ಸಾಮಾನ್ಯ ನಿಧಿಯನ್ನು ರೂಢಿಸುವುದು, ಒಮ್ಮತದ ತೀರ್ಮಾನದಿಂದ ಎಲ್ಲ ಸಮಸ್ಯೆ ನೀಗಿ, ಅಭಿವೃದ್ಧಿ ಸಾಧಿಸುವುದು ಗುಂಪಿನ ಪ್ರಮುಖ ಲಕ್ಷಣವೇ ಆಗಿದೆ.

## ಸ್ವ-ಸಹಾಯ ಸಂಘದ ಉದ್ದೇಶಗಳು

- ಸಂಘಶಕ್ತಿ ಸರ್ವಶಕ್ತಿ ಎಂಬ ತತ್ವವನ್ನು ಅನುಷ್ಠಾನಗೊಳಿಸುವುದು.
- ಉಳಿತಾಯ ಬಡಜನರಿಂದಲೂ ಸಾಧ್ಯ ಎಂಬುದನ್ನು ತೋರಿಸುವುದು.
- ಸ್ವ-ಸಹಾಯದ ಪರಿಕಲ್ಪನೆ ಮೂಡಿಸುವುದು.
- ಪರಸ್ಪರ ತಿಳುವಳಿಕೆ, ಅರಿವು ಮೂಡಿಸುವುದು.
- ಸಹಕಾರ ಮನೋಭಾವ ಬಿತ್ತುವುದು.
- ಸಣ್ಣ ಪುಟ್ಟ ಸಾಲ ಸೌಲಭ್ಯಗಳಿಗೆ ಬ್ಯಾಂಕ್/ಸರ್ಕಾರವನ್ನು ಕಾಯದೆ ತಮ್ಮ ಉಳಿತಾಯದ ಮೂಲಕವೇ ಸ್ವ-ಸಹಾಯವನ್ನು ಕಲ್ಪಿಸುವುದು.
- ಪರಿಸರ ಸಂರಕ್ಷಣೆ, ಅಕ್ಷರದ ಅರಿವಿನ ಕೆಲಸ.
- ತನ್ನ ಹಾಗೂ ತನ್ನ ಕುಟುಂಬದ ಒಟ್ಟಾರೆ ಗ್ರಾಮದ ಸರ್ವಾಂಗೀಣ ಪ್ರಗತಿಗೆ ಶ್ರಮಿಸುವುದು.
- ಬ್ಯಾಂಕ್ ಸಂಪರ್ಕ ಹೊಂದುವುದು, ನಿಜವಾದ ಅರ್ಥದಲ್ಲಿ ಬ್ಯಾಂಕುಗಳ ಸದುಪಯೋಗ ಹೊಂದುವುದು.
- ಗ್ರಾಮದ ಸಾಂಸ್ಕೃತಿಕ ರಾಯಭಾರಿಯಾಗುವುದು.
- ಕಡುಬಡವರಿಗಾಗಿ ಬ್ಯಾಂಕುಗಳ ಮೂಲಕ ಬದಲಿ ಸಾಲ ವ್ಯವಸ್ಥೆಯ/ವಿತರಣಾ ಪದ್ಧತಿಯ ರಚನೆ.
- ಬ್ಯಾಂಕು ಹಾಗೂ ಸರ್ಕಾರದಿಂದ ಸಿಗುವ ಸಾಲ ಸೌಲಭ್ಯಗಳ ಸೂಕ್ತ ಸದುಪಯೋಗ ಹಾಗೂ ಸಾಲಗಳ ಉತ್ತಮ ಮರುಪಾವತಿ.

APPROVED BY UGC CARE

ISSN : 2249-2429 ಸಂಶೋಧನೆ RNI REG.NO.KARKAN/2011/38712

- ತನ್ನ ಉದ್ಧಾರ ತನ್ನಿಂದಲೇ ಎಂಬ ತತ್ವಸಿದ್ಧಾಂತ.
- ಜನರ ಸಾಮಾಜಿಕ ಹಾಗೂ ಆರ್ಥಿಕ ಮಟ್ಟ ಸುಧಾರಣೆಗೆ ಶ್ರಮಿಸುವುದು.
- ಒಂದು ಮಿನಿ ಬ್ಯಾಂಕ್ ರೀತಿಯಲ್ಲಿ ಕೆಲಸ ನಿರ್ವಹಿಸುವುದು.

ಇತ್ತೀಚಿನ ದಿನಗಳಲ್ಲಿ ಗ್ರಾಮೀಣ ಭಾಗದ ಮಹಿಳೆಯರ ಆರ್ಥಿಕ ಮತ್ತು ಸಾಮಾಜಿಕ ಸಬಲೀಕರಣದಲ್ಲಿ ಸ್ವ-ಸಹಾಯ ಸಂಘಗಳು ಮಹತ್ವದ ಪಾತ್ರವನ್ನು ವಹಿಸುತ್ತಿವೆ. ಗ್ರಾಮೀಣ ಭಾಗದ ಬಡ ಮಹಿಳೆಯರು ಸ್ವ-ಸಹಾಯದ ಸಂಘದ ಸದಸ್ಯರಾಗಿ ಉಳಿತಾಯ, ಸಾಲ ಸೌಲಭ್ಯ ಮತ್ತು ಇತರ ಚಟುವಟಿಕೆಗಳಲ್ಲಿ (ಆದಾಯ ಉತ್ಪನ್ನಕಾರಕ ಚಟುವಟಿಕೆ, ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆ, ಸಾಕ್ಷರತೆ, ಮಕ್ಕಳ ಆರೈಕೆ ಮತ್ತು ಪೌಷ್ಟಿಕತೆ ಇತ್ಯಾದಿ) ಗಳಲ್ಲಿ ತಮ್ಮನ್ನು ತಾವು ಕ್ರಿಯಾತ್ಮಕವಾಗಿ ತೊಡಗಿಸಿಕೊಂಡಿದ್ದಾರೆ. ಉಳಿತಾಯ ಸ್ವ-ಸಹಾಯ ಸಂಘದಲ್ಲಿ ಮೂಲ ಘಟಕಾಂಶವಾಗಿದೆ ಮತ್ತು ಬಂಡವಾಳದ ನಿಯಂತ್ರಣ ಸಾಧಿಸುವ ಅವಕಾಶವನ್ನು ರಚಿಸುತ್ತದೆ.

## ಅಧ್ಯಯನದ ಉದ್ದೇಶಗಳು

1. ಸ್ವ-ಸಹಾಯ ಸಂಘದ ಮಹಿಳೆಯರ ಸಾಮಾನ್ಯ ಮಾಹಿತಿಯನ್ನು ತಿಳಿಯುವುದು.
2. ಸ್ವ-ಸಹಾಯ ಸಂಘದ ಮಹಿಳೆಯರ ಆರ್ಥಿಕ ಸ್ಥಿತಿಯನ್ನು ತಿಳಿದುಕೊಳ್ಳುವುದು.
3. ಸಮಾಜ ಕಾರ್ಯದ ಮಧ್ಯಸ್ಥಿತೆ ಅನ್ವಯಿಕೆಯನ್ನು ತಿಳಿಯುವುದು.

## ಸಂಶೋಧನಾ ವಿಧಾನ

ಪ್ರಸ್ತುತ ಸಂಶೋಧನೆಯನ್ನು ವಿಜಯಪುರ ತಾಲೂಕಿನ 150 ಸ್ವ-ಸಹಾಯ ಸಂಘದ ಸದಸ್ಯರ ಮೇಲೆ ಅಧ್ಯಯನ ಮಾಡಲಾಗಿದೆ. ಸದರಿ ಸಂಘಗಳು ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳು ರಚಿಸಿದ ಗುಂಪುಗಳನ್ನು ಅಧ್ಯಯನಕ್ಕೊಳಪಡಿಸಲಾಗಿದೆ. ವಿವರಣಾತ್ಮಕ ಸಂಶೋಧನಾ ವಿನ್ಯಾಸವನ್ನು ಅಳವಡಿಸಿಕೊಳ್ಳಲಾಗಿದೆ. ಪ್ರಾಥಮಿಕ ಮಾಹಿತಿ ಸಂಗ್ರಹಣೆಗಾಗಿ ಪೂರ್ವ ಮತ್ತು ನಂತರದ ಪರೀಕ್ಷೆಗೆ ಒಳಪಡಿಸಿದ ಅರೆ ರಚನಾತ್ಮಕ ಸಂದರ್ಶನ ಪಟ್ಟಿಯ ಸಹಾಯದಿಂದ ಉದ್ದೇಶಪೂರಿತ ನಮೂನೆ ಮಾದರಿಯನ್ನು ಬಳಸಿಕೊಳ್ಳಲಾಗಿದೆ. ಆವರ್ತಕ ವಿತರಣಾ ಕೋಷ್ಟಕಗಳು ಮತ್ತು ಶೇಕಡಾವಾರು ಲೆಕ್ಕಾಚಾರವನ್ನು ಸಂಖ್ಯಾಶಾಸ್ತ್ರೀಯ ತಂತ್ರಗಳಾಗಿ ಅಳವಡಿಸಿಕೊಳ್ಳಲಾಗಿದೆ.

## ದತ್ತಾಂಶ ವಿಶ್ಲೇಷಣೆ ಮತ್ತು ವಿವರಣೆ

**ಕೋಷ್ಟಕ - 1 : ಸ್ವ-ಸಹಾಯ ಸಂಘದ ಮಹಿಳೆಯರ ಸಾಮಾನ್ಯ ಮಾಹಿತಿ**

| ವಯಸ್ಸು | ಆವೃತ್ತಿ | ಶೇಕಡವಾರು |
|---|---|---|
| 20-30 | 20 | 13.3% |
| 31-40 | 60 | 40.0% |
| 41 ರ ಮೇಲ್ಪಟ್ಟ | 70 | 46.7% |
| ಒಟ್ಟು | 150 | 100% |
| ವೈವಾಹಿಕ ಸ್ಥಿತಿ | ಆವೃತ್ತಿ | ಶೇಕಡವಾರು |
| ವಿವಾಹಿತರು 118 | 78.7% | |
| ಅವಿವಾಹಿತರು | 05 | 3.3% |
| ವಿಧವೆಯರು 20 | 13.3% | |
| ವಿಚ್ಛೇದಿತರು, ಪರಿತ್ಯಕ್ತ/ಬೇರ್ಪಟ್ಟ | 03 | 2.0% |
| ದೇವದಾಸಿ 04 | 2.7% | |
| ಒಟ್ಟು | 150 | 100% |
| ಜಾತಿ | ಆವೃತ್ತಿ | ಶೇಕಡವಾರು |
| ಪರಿಶಿಷ್ಟ ಜಾತಿ | 40 | 26.7% |
| ಪರಿಶಿಷ್ಟ ಪಂಗಡ | 20 | 13.3% |
| ಇತರೆ ಹಿಂದೂಳಿದ ವರ್ಗ | 60 | 40.0% |
| ಇತರೆ (ಮುಸ್ಲಿಂ, ಜೈನ ಮತ್ತು ಕ್ರಿಶ್ಚಿಯನ್) | 30 | 20.0% |
| ಒಟ್ಟು | 150 | 100% |
| ಧರ್ಮ | ಆವೃತ್ತಿ | ಶೇಕಡವಾರು |
| ಹಿಂದೂ 120 | 80% | |
| ಮುಸ್ಲಿಂ 18 | 12% | |
| ಕ್ರಿಶ್ಚಿಯನ್ 06 | 4% | |
| ಇತರೆ (ಜೈನ) | 06 | 4% |
| ಒಟ್ಟು | 150 | 100% |
| ಶಿಕ್ಷಣದ ವಿವರ | ಆವೃತ್ತಿ | ಶೇಕಡಾವಾರು |
| ಅಶಿಕ್ಷಿತರು 45 | 30% | |
| ಕಲಿತವರು | 55 | 36.7% |
| ಔಪಚಾರಿಕ ಶಿಕ್ಷಣ ಪಡೆದವರು | 50 | 33.3% |
| ಒಟ್ಟು | 150 | 100% |
| ಉದ್ಯೋಗ ವಿವರ | ಆವೃತ್ತಿ | ಶೇಕಡಾವಾರು |
| ಕೂಲಿ 80 | 53.3% | |
| ಹೊಲಿಗೆ 30 | 20.0% | |
| ಒಕ್ಕಲುತನ 23 | 15.3% | |
| ವ್ಯಾಪಾರ 04 | 2.7% | |
| ಖಾಸಗಿ ನೌಕರಿ | 04 | 2.7% |
| ಕಿರಾಣಿ ಅಂಗಡಿ | 05 | 3.3% |
| ಎಮ್ಮೆ ಸಾಕಾಣಿಕೆ | 04 | 2.7% |
| ಒಟ್ಟು | 150 | 100% |
| ವಾರ್ಷಿಕ ಆದಾಯ | ಆವೃತ್ತಿ | ಶೇಕಡಾವಾರು |
| 11000 ಕ್ಕಿಂತ ಕಡಿಮೆ | 60 | 40.0% |
| 11000 ರಿಂದ 25000 | 85 | 56.7% |
| 25000 ಕ್ಕಿಂತ ಹೆಚ್ಚಿಗೆ | 5 | 3.3% |
| ಒಟ್ಟು | 150 | 100% |
| ಕುಟುಂಬದ ಸ್ವರೂಪ | ಆವೃತ್ತಿ | ಶೇಕಡಾವಾರು |
| ಅವಿಭಕ್ತ ಕುಟುಂಬ | 20 | 13.3% |
| ವಿಭಕ್ತ ಕುಟುಂಬ | 130 | 86.7% |
| ಒಟ್ಟು | 150 | 100% |

ಕೋಷ್ಟಕ ಸಂಖ್ಯೆ 1. ಸ್ವ-ಸಹಾಯ ಸಂಘದ ಮಹಿಳೆಯರ ಸಾಮಾನ್ಯ ಮಾಹಿತಿನ್ನು ವಿವರಿಸುತ್ತದೆ. 150 ಪ್ರತಿವಾದಿಗಳ ಪೈಕಿ ಬಹುಪಾಲು ಪ್ರತಿಶತ 46.7 ರಷ್ಟು 41 ರ ಮೇಲ್ಪಟ್ಟ ವಯಸ್ಸಿನವರಾಗಿದ್ದು, ಪ್ರತಿಶತ 40.0 ರಷ್ಟು 31-40 ವಯಸ್ಸಿನವರು ಮತ್ತು ಕಡಿಮೆ ಪ್ರತಿಶತ 13.3 ರಷ್ಟು 20-30 ವಯಸ್ಸಿನವರಾಗಿದ್ದಾರೆ. ಬಹುಪಾಲು ಪ್ರತಿಶತ 78.7 ರಷ್ಟು ವಿವಾಹಿತರಾಗಿದ್ದು, ಕಡಿಮೆ ಪ್ರತಿಶತ 13.3 ರಷ್ಟು ವಿಧವೆಯರು ಮತ್ತು ಅತಿ ಕಡಿಮೆ ಪ್ರತಿಶತ ಅಂದರೆ 3.3, 2,7 ಮತ್ತು 2 ರಷ್ಟು ಅವಿವಾಹಿತರು, ದೇವದಾಸಿ ಮತ್ತು ವಿಚ್ಛೇದಿತರು/ ಪರಿತ್ಯಕ್ತ,ಬೇರ್ಪಟ್ಟ ಮಹಿಳೆಯರಾಗಿದ್ದಾರೆ. ಪ್ರತಿಶತ 40 ರಷ್ಟು ಇತರೆ ಹಿಂದೂಳಿದ ವರ್ಗದ, ಪ್ರತಿಶತ 26.7 ಪರಿಶಿಷ್ಟ ಜಾತಿ, ಮುಂದುವರೆದು, ಪ್ರತಿಶತ 20 ರಷ್ಟು ಇತರೆ (ಮುಸ್ಲಿಂ, ಜೈನ ಮತ್ತು ಕ್ರಿಶ್ಚಿಯನ್) ಪ್ರತಿಶತ 13.3 ರಷ್ಟು ಪರಿಶಿಷ್ಟ ಪಂಗಡಕ್ಕೆ

ISSN : 2249-2429 ಸಂಶೋಧನೆ RNI REG.NO.KARKAN/2011/38712

ಸೇರಿದವರಾಗಿದ್ದಾರೆ. ಬಹುಪಾಲು ಪ್ರತಿಶತ 80 ರಷ್ಟು ಹಿಂದೂ ಧರ್ಮ, ಪ್ರತಿಶತ 12.0 ಮುಸ್ಲಿಂ, ಅತಿ ಕಡಿಮೆ ಪ್ರತಿಶತ 4.0 ರಷ್ಟು ಕ್ರಿಶ್ಚಿಯನ್ ಮತ್ತು ಜೈನ ಧರ್ಮದವರಾಗಿದ್ದಾರೆ. ಪ್ರತಿಶತ 36.7 ರಷ್ಟು ಪ್ರತಿವಾದಿಗಳು ಕಲಿತವರಾಗಿದ್ದಾರೆ, ಮುಂದುವರೆದು ಪ್ರತಿಶತ 33.3 ಔಪಚಾರಿಕ ಶಿಕ್ಷಣವನ್ನು ಪಡೆದಿದ್ದು ಉಳಿದ ಪ್ರತಿವಾದಿಗಳು ಪ್ರತಿಶತ 30.0 ರಷ್ಟು ಅಶಿಕ್ಷಿತರಾಗಿದ್ದಾರೆ. ಬಹುಪಾಲು ಪ್ರತಿವಾದಿಗಳು ಪ್ರತಿಶತ 53.3 ರಷ್ಟು ಕೂಲಿ, ಮುಂದುವರೆದು ಪ್ರತಿಶತ 20.0 ಹೊಲಿಗೆ, ಕಡಿಮೆ ಪ್ರತಿಶತ 15.3% ಒಕ್ಕಲುತನ, ಅತಿ ಕಡಿಮೆ ಪ್ರತಿಶತ 3.3 ರಷ್ಟು ಕಿರಾಣಿ ಅಂಗಡಿ, 2.7 ರಷ್ಟು ವ್ಯಾಪಾರ, ಖಾಸಗಿ ನೌಕರಿ ಮತ್ತು ಎಮ್ಮೆ ಸಾಕಾಣಿಕೆಯುನ್ನು ತಮ್ಮ ಉದ್ಯೋಗವನ್ನಾಗಿಸಿಕೊಂಡಿದ್ದಾರೆ. ಬಹುಪಾಲು ಪ್ರತಿವಾದಿಗಳು 56.7 ರಷ್ಟು ರೂ. 11000–25000 ವಾರ್ಷಿಕ ಆದಾಯವನ್ನು ಹೊಂದಿದ್ದು ಮುಂದುವರೆದು ಪ್ರತಿಶತ 40 ರಷ್ಟು ರೂ. 11000 ಕ್ಕಿಂತ ಕಡಿಮೆ ಆದಾಯ ಮತ್ತು ಅತಿ ಕಡಿಮೆ ಪ್ರತಿಶತ 3.3 ರೂ. 25000 ಕ್ಕಿಂತ ಹೆಚ್ಚಿಗೆ ವಾರ್ಷಿಕ ಆದಾಯವನ್ನು ಹೊಂದಿದವರಾಗಿದ್ದಾರೆ. ಸಿಂಹಪಾಲು ಪ್ರತಿವಾದಿಗಳು ಪ್ರತಿಶತ 86.7 ರಷ್ಟು ವಿಭಕ್ತ ಕುಟುಂಬದರು ಮತ್ತು ಪ್ರತಿಶತ 13.3 ರಷ್ಟು ಅವಿಭಕ್ತ ಕುಟುಂಬದವರಾಗಿದ್ದಾರೆ.

**ಕೋಷ್ಟಕ–2: ಸ್ವ–ಸಹಾಯ ಸಂಘದ ಮಹಿಳೆಯರ ಆರ್ಥಿಕ ಸ್ಥಿತಿಯ ಮಾಹಿತಿ**

| ಸ್ವ–ಸಹಾಯ ಸಂಘದ ಮಹಿಳೆಯ ತಿಂಗಳ ಉಳಿತಾಯ | ಮೊದಲು | | ನಂತರ | |
|---|---|---|---|---|
| | ಆವೃತ್ತಿ | ಶೇಕಡಾವಾರು | ಆವೃತ್ತಿ | ಶೇಕಡಾವಾರು |
| ರೂ.100 ಕ್ಕಿಂತ ಕಡಿಮೆ | 110 | 73.2% | 10 | 6.7 |
| ರೂ. 100 – 200 | 25 | 16.7% | 100 | 66.6 |
| ರೂ. 300 – 400 | 2 | 1.3 | 30 | 20.0% |
| ರೂ. 500 – 600 | 1 | 0.7 | 3 | 2.0% |
| ರೂ. 700 – 800 | 1 | 0.7 | 6 | 4.0% |
| ರೂ. 800 ಕ್ಕಿಂತ ಹೆಚ್ಚಿಗೆ | 1 | 0.7 | 1 | 0.7 |
| ಉಳಿತಾಯ ಇಲ್ಲ | 10 | 6.7 | – | – |
| ಒಟ್ಟು | 150 | 100% | 150 | 100% |
| ಉಳಿತಾಯದ ಮೂಲ | ಆವೃತ್ತಿ | ಶೇಕಡಾವಾರು | ಆವೃತ್ತಿ | ಶೇಕಡಾವಾರು |
| ಕೂಲಿ | 70 | 46.7 | 50 | 33.3% |
| ಹೊಲಿಗೆ 34 | 22.7 | 46 | 30.7 | |
| ಒಕ್ಕಲುತನ | 34 | 22.7 | 28 | 18.7% |
| ಖಾಸಗಿ ನೌಕರಿ | 02 | 1.3 | 02 | 1.3 |
| ಹೈನುಗಾರಿಕೆ | 02 | 1.3 | 02 | 1.3 |
| ವ್ಯಾಪಾರ (ಕಾಯಿಪಲ್ಲೆ, ಬಟ್ಟೆ ಇತ್ಯಾದಿ) | 06 | 4.0 | 04 | 2.7% |
| ಕಿರಾಣಾ ಅಂಗಡಿ | 02 | 1.3 | 06 | 4.0% |
| ಆಡು ಸಾಕಾಣಿಕೆ | – | – | 12 | 8.0% |
| ಒಟ್ಟು | 150 | 100% | 150 | 100% |
| ಕುಟುಂಬದ ತಿಂಗಳ ಖರ್ಚು | ಆವೃತ್ತಿ | ಶೇಕಡಾವಾರು | ಆವೃತ್ತಿ | ಶೇಕಡಾವಾರು |
| ರೂ. 500 ಕ್ಕಿಂತ ಕಡಿಮೆ | 04 | 2.7% | 02 | 1.3% |
| ರೂ. 500 –1000 | 16 | 10.7% | 04 | 2.7% |
| ರೂ. 1001– 1500 | 30 | 20.0% | 04 | 2.7% |
| ರೂ. 1501 –2000 | 80 | 53.3 | 20 | 13.3% |
| ರೂ. 2001 ರ ಮೇಲ್ಪಟ್ಟು | 20 | 13.3 | 120 | 80.0% |
| ಒಟ್ಟು | 150 | 100% | 150 | 100% |

| ಗರಿಷ್ಠ ಸಾಲ ಪಡೆದುಕೊಂಡಿದ್ದು | ಆವೃತ್ತಿ | ಶೇಕಡಾವಾರು | ಆವೃತ್ತಿ | ಶೇಕಡಾವಾರು |
|---|---|---|---|---|
| ರೂ. 1000 ಕ್ಕಿಂತ ಕಡಿಮೆ | 4 | 2.7% | 2 | 1.3% |
| ರೂ. 1000–2000 | 60 | 40.0% | 4 | 2.7% |
| ರೂ. 3000–4000 | 30 | 20.0% | 2 | 1.3% |
| ರೂ. 5000–6000 | 42 | 28.0% | 2 | 1.3% |
| ರೂ. 7000 ಮತ್ತು ಮೇಲ್ಪಟ್ಟು | 10 | 6.6 | 140 | 93.3% |
| ಸಾಲ ಪಡೆದುಕೊಂಡಿಲ್ಲ | 04 | 2.7% | – | 100% |
| ಒಟ್ಟು | 150 | 100% | 150 | 100% |

| ಬಡ್ಡಿ ದರ | ಆವೃತ್ತಿ | ಶೇಕಡಾವಾರು |
|---|---|---|
| ರೂ. 1 | 20 | 13.3% |
| ರೂ. 1.5 | 100 | 66.7% |
| ರೂ. 2 | 20 | 13.3% |
| ರೂ. 3 | 10 | 6.7% |
| ಒಟ್ಟು | 150 | 100 |
| ಉದ್ದೇಶ | ಆವೃತ್ತಿ | ಶೇಕಡಾವಾರು |
| ಒಕ್ಕಲುತನ/ಭೂಮಿ ಅಭಿವೃದ್ಧಿ | 40 | 26.7% |
| ಹೊಲಿಗೆ ಯಂತ್ರ ಖರೀದಿಸಲು | 05 | 3.3% |
| ಆಡು ಸಾಕಾಣಿಕೆ | 50 | 33.3% |
| ಎತ್ತುಗಳ ಖರೀದಿಗಾಗಿ | 08 | 5.3% |
| ಶಿಕ್ಷಣಕ್ಕಾಗಿ | 10 | 6.7% |
| ವ್ಯಾಪಾರ | 15 | 10.0% |
| ಕುಟುಂಬಕ್ಕಾಗಿ | 22 | 14.7% |
| ಒಟ್ಟು | 150 | 100% |

ಕೋಷ್ಟಕ ಸಂಖ್ಯೆ 2 ಸ್ವ–ಸಹಾಯ ಸಂಘದ ಮಹಿಳೆಯರ ಆರ್ಥಿಕ ಸ್ಥಿತಿಯ ಮಾಹಿತಿ ಕುರಿತು ವಿವರಿಸುತ್ತದೆ. ಸ್ವ–ಸಹಾಯ ಸಂಘಕ್ಕೆ ಸೇರುವ ಮೊದಲು ಸಿಂಹಪಾಲು ಅಂದರೆ ಪ್ರತಿಶತ 73.2 ರಷ್ಟು ರೂ. 100 ಕ್ಕಿಂತ ಕಡಿಮೆ ತಿಂಗಳ ಉಳಿತಾಯ ಮಾಡುತ್ತಿದ್ದರು, ಮುಂದುವರೆದು 16.7 ರಷ್ಟು ರೂ. 100–200, ಈಗ ಬಹುಪಾಲು ಪ್ರತಿಶತ 66.6 ರೂ 100–200 ಕ್ಕೆ ಹೆಚ್ಚಿದೆ. ಕಡಿಮೆ ಪ್ರತಿಶತ ಅಂದರೆ ಪ್ರತಿಶತ 1.3 ರಷ್ಟು ರೂ 300–400 ರಷ್ಟು ತಿಂಗಳ ಉಳಿತಾಯವು ಈಗ ಪ್ರತಿಶತ 20.0 ರಷ್ಟು ಏರಿಕೆಯಾಗಿದೆ ಮತ್ತು ಅತಿ ಕಡಿಮೆ ಪ್ರತಿಶತ ಅಂದರೆ 0.7 ರಷ್ಟು ರೂ. 500–600, 700–800 ಮತ್ತು ರೂ. 800 ರ ಕ್ಕಿಂತ ಹೆಚ್ಚಿಗೆ ತಿಂಗಳಿಗೆ ಉಳಿತಾಯ ಮಾಡುತ್ತಿದ್ದರು ಅದು ಈಗ ಪ್ರತಿಶತ 2.0, 4.0, ಕ್ಕೆ ಏರಿದೆ ಮತ್ತು ಪ್ರತಿಶತ 0.7 ರೂ. 800 ಅಷ್ಟೆ ಉಳಿದಿರುತ್ತದೆ. ಈಗ ಗ್ರಾಮೀಣ ಭಾಗದ ಮಹಿಳೆಯರು ಸ್ವ–ಸಹಾಯ ಸಂಘದ ಸದಸ್ಯರಾದ ಮೇಲೆ ಅವರ ತಿಂಗಳ ಉಳಿತಾಯುವು ಮೊದಲಿನ ಉಳಿತಾಯುಕ್ಕಿಂತ ಹೆಚ್ಚಾಗಿರುವುದು ಕಂಡುಬರುತ್ತದೆ. ಸ್ವ–ಸಹಾಯ ಸಂಘದ ಸದಸ್ಯರಾಗುವ ಮುಂಚೆ ತಿಂಗಳ ಉಳಿತಾಯದ ಮೂಲ ಪ್ರತಿಶತ 46.7 ರಷ್ಟು ಕೂಲಿ ಅದು ಈಗ ಪ್ರತಿಶತ 33.3 ರಷ್ಟು ಇಳಿಕೆಯಾಗಿದೆ ಅಂದರೆ ಪ್ರತಿಶತ 30.7 ಹೊಲಿಗೆ ಹೊಲಿಯುವ ಮೂಲಕ್ಕೆ ಹೆಚ್ಚಿಸಿಕೊಂಡಿದ್ದಾರೆ. ಪ್ರತಿಶತ 22.7 ರಷ್ಟು ಹೊಲಿಗೆ ಒಕ್ಕಲುತನ, ಕಡಿಮೆ ಪ್ರತಿಶತ 4.0 ರಷ್ಟು ವ್ಯಾಪಾರ( ಕಾಯಿಪಲ್ಲೆ, ಬಟ್ಟೆ ಇತ್ಯಾದಿ), ಅತಿ ಕಡಿಮೆ ಪ್ರತಿಶತ 1.3 ರಷ್ಟು ಖಾಸಗಿ ಉದ್ಯೋಗ ಮತ್ತು ಹೈನುಗಾರಿಕೆ ಮತ್ತು ಕಿರಾಣ ಅಂಗಡಿಯಾಗಿತ್ತು. ಪ್ರತಿಶತ 8.0 ರಷ್ಟು ಆಡು ಸಾಕಾಣಿಕೆ ಮತ್ತು 4.0 ರಷ್ಟು ಕಿರಾಣಾ ಅಂಗಡಿ ಮೂಲದಲ್ಲಿ ಹೆಚ್ಚಳವಾಗಿದೆ. ಸ್ವ–ಸಹಾಯ ಸಂಘ ಸೇರುವ ಮೊದಲು ಮಹಿಳೆಯರ ಕುಟುಂಬದ ಖರ್ಚು ಪ್ರತಿಶತ 53.3 ರಷ್ಟು

ISSN : 2249-2429 ಸಂಶೋಧನೆ RNI REG.NO.KARKAN/2011/38712

ರೂ 1501 ರಿಂದ 2000 ಪ್ರತಿಶತ 20.0 ರಷ್ಟು ರೂ 1001–1500 ಮುಂದುವರೆದು ಪ್ರತಿಶತ 13.3 ರೂ. 2001 ರ ಮೇಲ್ಪಟ್ಟಾಗಿತ್ತು ಅದು ಈಗ ಸಂಘದ ಸದಸ್ಯರಾದ ಮೇಲೆ ಸಿಂಹಪಾಲು ಪ್ರತಿಶತ 80.0 ರಷ್ಟು ಹೆಚ್ಚಾಗಿರುತ್ತದೆ. ಸ್ವ–ಸಹಾಯ ಸಂಘದ ಸದಸ್ಯರಾಗುವ ಮೊದಲು ಪ್ರತಿಶತ 40.0 ರಷ್ಟು ರೂ.1000–2000 ಸಾಲವನ್ನು ಪಡೆಯುತ್ತಿದ್ದರು ಮುಂದುವರೆದು ಪ್ರತಿಶತ 28.0 ರಷ್ಟು ರೂ. 5000–6000 ಸಾಲ ಪಡೆಯುತ್ತಿದ್ದರು, ಪ್ರತಿಶತ 20.0 ರಷ್ಟು ರೂ. 3000–4000 ಮತ್ತು ಕಡಿಮೆ ಪ್ರಮಾಣದಲ್ಲಿ ಅಂದರೆ ಪ್ರತಿಶತ 6.6 ಮತ್ತು 2.7 ರಷ್ಟು ರೂ 7000 ಮತ್ತು ಮೇಲ್ಪಟ್ಟು, ಅತಿ ಕಡಿಮೆ ಪ್ರತಿಶತ 2.7 ರಷ್ಟು ರೂ. 1000 ಕ್ಕಿಂತ ಕಡಿಮೆ ಮತ್ತು ಯಾವುದೆ ತರಹದ ಸಾಲವನ್ನು ಪಡೆದುಕೊಂಡಿರುವುದಿಲ್ಲ. ಸ್ವ–ಸಹಾಯ ಸಂಘ ಸೇರಿದ ಮೇಲೆ ಸಿಂಹಪಾಲು ಪ್ರತಿಶತ 93.3 ರಷ್ಟು ರೂ. 7000 ಮತ್ತು ಮೇಲ್ಪಟ್ಟು ಸಾಲವನ್ನು ಪಡೆದುಕೊಂಡಿರುತ್ತಾರೆ ಮುಂದುವರೆದು ಅತಿ ಕಡಿಮೆ ಪ್ರತಿಶತ 2.7, 1.3 ರಷ್ಟು ರೂ. 1000–2000, ರೂ. 1000 ಕ್ಕಿಂತ ಕಡಿಮೆ, ರೂ. 3000–4000 ಮತ್ತು 5000–6000 ಸಾಲವನ್ನು ಪಡೆದುಕೊಂಡು ಆದಾಯ ಉತ್ಪನ್ನಕಾರಕ ಚಟುವಟಿಕೆಗಳನ್ನು ಕೈಗೊಂಡಿರುತ್ತಾರೆ. ಸಿಂಹಪಾಲು ಅಂದರೆ ಪ್ರತಿಶತ 66.7 ರಷ್ಟು ರೂ. 1.5 ಬಡ್ಡಿಯನ್ನು ಕಟ್ಟುತ್ತಾರೆ ಮುಂದುವರೆದು ಕಡಿಮೆ ಪ್ರತಿಶತ 13.3 ರಷ್ಟು ರೂ. 1 ಮತ್ತು ರೂ. 2 ಬಡ್ಡಿ ದರ, ಅತಿ ಕಡಿಮೆ ಪ್ರತಿಶತ ಅಂದರೆ 6.7 ರಷ್ಟು ಸದಸ್ಯರು ರೂ. 3 ರ ಬಡ್ಡಿಗೆ ಸಾಲವನ್ನು ಪಡೆದುಕೊಂಡಿರುತ್ತಾರೆ. ಸಾಲ ಪಡೆಯುವ ಉದ್ದೇಶವು ಪ್ರತಿಶತ 33.3 ರಷ್ಟು ಆಡು ಸಾಕಾಣಿಕೆ ಮುಂದುವರೆದು 26.7 ಒಕ್ಕಲುತನ/ಭೂಮಿ ಅಭಿವೃದ್ಧಿಗೆ, ಕಡಿಮೆ ಪ್ರತಿಶತ 14.7 ಮತ್ತು 10.0 ರಷ್ಟು ಕುಟುಂಬಕ್ಕಾಗಿ ಮತ್ತು ವ್ಯಾಪಾರಕ್ಕಾಗಿ, ಅತಿ ಕಡಿಮೆ ಪ್ರತಿಶತ 6.7, 5.3 ಮತ್ತು 3.3 ರಷ್ಟು ಶಿಕ್ಷಣಕ್ಕಾಗಿ, ಎತ್ತುಗಳ ಖರೀದಿಗಾಗಿ ಮತ್ತು ಹೊಲಿಗೆ ಯಂತ್ರ ಖರೀದಿಸಲು ಸಾಲವನ್ನು ಪಡೆದುಕೊಂಡಿರುತ್ತಾರೆ.

## ಸಮಾಜ ಕಾರ್ಯದ ಮಧ್ಯಸ್ಥಿಕೆ

ಜನರಿಗೆ ಅವರಷ್ಟಕ್ಕೆ ಅವರು ಸಹಾಯ ಮಾಡಿಕೊಂಡು ತಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದಕ್ಕೆ ಸಮಾಜ ಕಾರ್ಯವು ಸಹಾಯ ಮಾಡುತ್ತದೆ. ಸಮಾಜ ಕಾರ್ಯದ ಪ್ರಾಥಮಿಕ ವಿಧಾನಗಳಾದ ವ್ಯಕ್ತಿಗತ ಸಮಾಜ ಕಾರ್ಯ, ವೃಂದಗತ ಸಮಾಜಕಾರ್ಯ, ಸಮುದಾಯ ಸಂಘಟನೆ ಮತ್ತು ಮಾಧ್ಯಮಿಕ ವಿಧಾನಗಳಾದ ಸಮಾಜ ಕಾರ್ಯ ಆಡಳಿತ, ಸಮಾಜ ಕಾರ್ಯ ಸಂಶೋಧನೆ ಮತ್ತು ಸಾಮಾಜಿಕ ಕ್ರಿಯಗಳು ಮತ್ತು ಅವುಗಳ ಕೌಶಲ್ಯಗಳು ಮತ್ತು ತಂತ್ರಗಳನ್ನು ಬಳಸಿಕೊಂಡು ಮಹಿಳೆಯರನ್ನು ಒಂದು ಕಡೆ ಸಂಘಟಿತರನ್ನಾಗಿಸಿ ಅವರು ತಮ್ಮ ಸಮಸ್ಯೆಗಳ ನಿವಾರಣೆಗೆ ಮತ್ತು ಅಭಿವೃದ್ಧಿಗಾಗಿ ಸಹಾಯ ಮಾಡಿಕೊಳ್ಳುವುದಕ್ಕೆ ಸಮಾಜ ಕಾರ್ಯವು ಸಹಾಯ ಮಾಡುತ್ತದೆ. ಧ್ವನಿ ಇಲ್ಲದ ಮಹಿಳೆಯರಿಗೆ ಅವರಲ್ಲಿ ಶಕ್ತಿ ಸಾಮರ್ಥ್ಯವನ್ನು ವೃದ್ಧಿಸಿ, ಅವರನ್ನು ಅಭಿವೃದ್ಧಿ ಪಡಿಸಲು ಹಲವಾರು ರೀತಿಯಲ್ಲಿ ಸಹಾಯ ಮಾಡುತ್ತದೆ.

## ಚರ್ಚೆ ಮತ್ತು ಉಪಸಂಹಾರ

ಸ್ವ–ಸಹಾಯ ಸಂಘದ ಪರಿಕಲ್ಪನೆಯು ಭಾರತ ದೇಶದ ಗ್ರಾಮೀಣ ಭಾಗದ ಮಹಿಳೆಯರ ಆರ್ಥಿಕ ಅಭಿವೃದ್ಧಿ/ ಸಬಲೀಕರಣದಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತಿವೆ. ಪ್ರಸ್ತುತ ಅಧ್ಯಯನವು ಕೂಡ ಗ್ರಾಮೀಣ ಭಾಗದ ಮಹಿಳೆಯರ ಆರ್ಥಿಕ ಅಭಿವೃದ್ಧಿಯಲ್ಲಿ ಸ್ವ–ಸಹಾಯ ಸಂಘಗಳ ಪಾತ್ರದ ಮಹತ್ವವನ್ನು ಎತ್ತಿ ತೋರಿಸಲಾಗಿದೆ. ಗ್ರಾಮೀಣ ಭಾಗದ ಮಹಿಳೆಯರಲ್ಲಿ ಉಳಿತಾಯ ಮನೋಭಾವನೆಯನ್ನು ಹೆಚ್ಚಿಸಿವೆ, ಸಂಘಕ್ಕೆ ಸೇರುವ ಮೊದಲು ಅವರು ಹೆಚ್ಚಾಗಿ ಕೂಲಿ ಕೆಲಸವನ್ನು ಮಾಡುತ್ತಿದ್ದರು. ಗ್ರಾಮೀಣ ಭಾಗದ ಮಹಿಳೆಯರು ಸಂಘ ರಚನೆಯ ಉದ್ದೇಶವು ಮಹಿಳೆಯರ ಹಕ್ಕುಗಳನ್ನು ಅರ್ಥೈಸಿಕೊಳ್ಳುವುದು, ಸುಲಭವಾಗಿ ಸಾಲ ಪಡೆಯುವುದು, ಮಹಿಳೆಯರ ಆರ್ಥಿಕ ಸಬಲೀಕರಣ, ಸಾಮಾಜಿಕ ಸಮಸ್ಯೆ, ಶಿಕ್ಷಣದ ಸಮಸ್ಯೆ, ಆರೋಗ್ಯ ಸಮಸ್ಯೆ ಮುಂತಾದವುಗಳ ನಿವಾರಣೆಗಾಗಿ ಮತ್ತು ಸರಕಾರದ ಸೌಲಭ್ಯಗಳನ್ನು ಪಡೆಯುವಗೊಸ್ಕರವಾಗಿದೆ ಎಂದು ಈ ಅಧ್ಯಯನದಿಂದ ತಿಳಿದು ಬಂದಿರುತ್ತದೆ. ಈಗ ಸಂಘದಿಂದ ವೈಯಕ್ತಿಕವಾಗಿ ಸಾಲವನ್ನು ಕಡಿಮೆ ಬಡ್ಡಿ ದರದಲ್ಲಿ ಪಡೆದುಕೊಂಡು ಅನೇಕ ಆದಾಯ ಉತ್ಪನ್ನಕಾರಕ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಇದರಿಂದ ಅವರ ಕುಟುಂಬದ ಆದಾಯದಲ್ಲಿ ಹೆಚ್ಚಳವಾಗಿರುವುದು ಈ ಅಧ್ಯಯನದಿಂದ ಕಂಡುಬಂದಿರುತ್ತದೆ. ಮೊದಲು ಕೂಲಿ ಮಾಡುವ ಮಹಿಳೆಯರು ಈಗ ಅನೇಕ ಆದಾಯಕಾರಕ ಚಟುವಟಿಕೆಗಳಾದ ಹೊಲಿಗೆ, ಆಡು ಸಾಕಾಣಿಕೆ, ಹೈನುಗಾರಿಕೆ, ಕಿರಾಣಿ ಅಂಗಡಿ ಮುಂತಾದವುಗಳನ್ನು ಕೈಗೊಂಡಿದ್ದಾರೆ. ಸಂಘದ ಸಭೆಗಳಲ್ಲಿ ಗ್ರಾಮೀಣ ಮಹಿಳೆಯರು ಉದ್ಯೋಗ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಕೌಟುಂಬಿಕ, ಆರೋಗ್ಯದ ಕುರಿತು ಹಲವಾರು ವಿಷಯಗಳನ್ನು ಚರ್ಚಿಸಿ ಅದರಿಂದ ಹೊರಬರಲು ಯಾವ ಕ್ರಮಗಳನ್ನು ಕೈಗೊಳ್ಳಬೇಕೆಂದು ಗುಂಪು ತೀರ್ಮಾನದಿಂದ ಕಂಡುಕೊಳ್ಳುತ್ತಿದ್ದಾರೆ. ಪ್ರತಿಯೊಂದು ವಿಷಯದಲ್ಲಿ ತೀರ್ಮಾನ ತೆಗೆದುಕೊಳ್ಳುವ ಬಲವಾದ ಸಾಮರ್ಥ್ಯ ಅವರಲ್ಲಿ ಬಂದಿರುತ್ತದೆ. ಬ್ಯಾಂಕಿನ ವ್ಯವಹಾರಗಳನ್ನು ಖುದ್ದಾಗಿ ತಾವೆ ಮಾಡುತ್ತಾರೆ. ಸಬ್ಸಿಡಿ ಮತ್ತು ಕಡಿಮೆ ಬಡ್ಡಿ ದರದಲ್ಲಿ ಸಾಲ ಸೌಲಭ್ಯಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಅಲ್ಲದೆ ಸರಕಾರಿ ಇಲಾಖೆಗಳಿಗೆ ತಾವೆ ಖುದಾಗಿ ಭೇಟಿ ನೀಡಿ ಆರ್ಥಿಕ ಅಭಿವೃದ್ಧಿ ಯೋಜನೆಗಳ ಕುರಿತು ತಿಳಿದುಕೊಂಡು ಅವುಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಒಟ್ಟಾರೆಯಾಗಿ ನಾಲ್ಕು ಗೋಡೆ ಮಧ್ಯದಲ್ಲಿರುವ ಮಹಿಳೆಯರು ಈಗ ಆರ್ಥಿಕವಾಗಿ ಅಭಿವೃದ್ಧಿಯಾಗುತ್ತಿದ್ದಾರೆ ಮತ್ತು ಸಮಾಜದಲ್ಲಿ ಅವರಿಗೆ ಘನತೆ–ಗೌರವದ ಬದುಕನ್ನು ಕಟ್ಟಿಕೊಳ್ಳುವಲ್ಲಿ ಸಾಧ್ಯವಾಗಿದೆ.

## ಪರಾಮರ್ಶನ ಗ್ರಂಥಗಳು


- **Gupta M.L. & Gupta Namita (2006) :** "Economic Empowerment of Women through SHGs", Kurukshetra, February.
- **Gurumoorthy T. R. (2000) :** "Self Help Groups Empower Rural Women", Kurushetra, Vol. 48 (5), February
- **Nagayya D. & Rao Keteshwara D. (2009) :** "Micro Finance and Support Organisations in the Southern States in India", Journal of Rural Development, Vol. 28 (3), July-September.
- **Padal S.R. (2011) :** "Effect of Self Help Groups in Economic Empowerment of Rural Women in Andra Pradesh", Journal of Peace, Gender and Development Studies, Vol. 1 (3) April.
- **Panda Snehalata (2009) :** "Empowerment of Women in India (Concept, Process and Perspective), Man and Development , Vol. 31 (3) September.
- **Puhazhendhi V. & Satyasai K.J.S. (2001) :** "Empowerment of Rural Poor through SHGs", Indian Journal of Agricultural Economics, Vol.56 (3) July-Sept.
- **ಎನ್.ಟಿ.ಎರ್ರಿಸ್ವಾಮಿ (2012) :** 'ಸ್ವಾವಲಂಬಿ ಬದುಕಿಗಾಗಿ ಸಾಲ ಹಾಗೂ ಸಹಾಯ ಧನ ಯೋಜನೆಗಳು', ದಾವಣಗೆರೆ ಪೂಜಾರ ಪ್ರಿಂಟರ್ಸ್.
- **ಎನ್.ಟಿ. ಎರ್ರಿಸ್ವಾಮಿ (2000) :** 'ಸ್ವ–ಸಹಾಯ ಸಂಘಗಳು ಒಂದು ಪರಿಕಲ್ಪನೆ', ಬದುಕು ಸ್ವಯಂ ಸೇವಾ ಸಂಸ್ಥೆ (ರಿ), ಪೋಲೀಸ್ ಠಾಣೆ ಮುಂಭಾಗ ಜಗಳೂರು–ದಾವಣಗೆರೆ ಜಿಲ್ಲೆ, ಪು.ಸಂ. 5 ಮತ್ತು 6.

ISSN : 2249-2429 ಸಂಶೋಧನೆ RNI REG.NO.KARKAN/2011/38712

# ಮೀಸಲಾತಿ ಮತ್ತು ಒಳ ಮೀಸಲಾತಿ ಹಂಚಿಕೆಯ ಸಾಧಕ – ಬಾಧಕಗಳು : ವಿಶ್ಲೇಷಣೆ

✍ **ಡಾ. ತಿಪ್ಪೇಸ್ವಾಮಿ ಎಂ.** ಸಂಶೋಧಕರು, ರೇಣುಕ ನಿಲಯ, ವಾರ್ಡ್ ನಂ–05, ಮೈರಾಢ ಕಛೇರಿ ಹತ್ತಿರ, ನಾಯಕನಹಟ್ಟಿ – 577536

*ಪ್ರಸ್ತಾವನೆ*

*ಒಳ ಮೀಸಲಾತಿ ಕುರಿತು ಪರಿಶಿಷ್ಟ ಸಮುದಾಯಗಳಿಗಿರುವ ವಿವಿಧ ಸೌಲಭ್ಯಗಳನ್ನು ಬಹುಪಾಲು ಕೆಲವು ಮುಂದುವರೆದ ಸಮುದಾಯಗಳು ಪಡೆದುಕೊಳ್ಳುತ್ತಿವೆ ಎಂಬ ಆರೋಪ–ಚರ್ಚೆಗಳಿಂದ ಕೆಲವು ಸಮುದಾಯಗಳು ಈಗಾಗಲೇ ಇರುವ ಮೀಸಲಾತಿಯಲ್ಲಿ ಸಮುದಾಯವಾರು ವರ್ಗೀಕರಣ ಆಧಾರದ ಮೇಲೆ ನೀಡಬೇಕೆಂದು ಕಳೆದ 25 ವರ್ಷಗಳಿಂದ ಬೇಡಿಕೆ–ಹೋರಾಟಗಳು ಜರುಗುತ್ತಿವೆ. ಈ ಹೋರಾಟಗಳು ಕರ್ನಾಟಕದಲ್ಲಿ ಅಷ್ಟೆ ಅಲ್ಲದೆ ವಿವಿಧ ರಾಜ್ಯಗಳಲ್ಲಿಯು ಸಹ ಇದೇ ಮಾದರಿಯಲ್ಲಿ ನಡೆಯುತ್ತಿದ್ದವು. ಈ ಮಾದರಿಯ ಒಳ ಮೀಸಲಾತಿಯ ಹಂಚಿಕೆಯಿಂದಾಗುವ ಸಾಧಕ–ಬಾದಕಗಳ ಜೊತೆಗೆ ಈಗಾಗಲೇ ಸರ್ವೋಚ್ಚ ನ್ಯಾಯಾಲಯ ನಿಗಧಿಪಡಿಸಿದ ಶೇಕಡ 50–50ರ ಮೀಸಲಾತಿಯ ಹಂಚಿಕೆಯ ಇತಿ–ಮಿತಿಗಳನ್ನು ಈ ಲೇಖನದಲ್ಲಿ ಚರ್ಚಿಸಲು ಪ್ರಯತ್ನಿಸಲಾಗಿದೆ.*

*ಪ್ರಮುಖ ಪದಗಳು*

*ಪ್ರಮುಖ ಪದಗಳು : ಒಳ ಮೀಸಲಾತಿ, ಮೀಸಲಾತಿ, ಜಾತಿ ಮೀಸಲಾತಿ.*

## ಪ್ರಸ್ತಾವನೆ

ಕರ್ನಾಟಕದಲ್ಲಿ ಘಟಿಸುತ್ತಿದ್ದ ಜಾತಿವಾರು ಮೀಸಲಾತಿ ಹೆಚ್ಚಳದ ಬೇಡಿಕೆ ಹಾಗೂ ಒಳ ಮೀಸಲಾತಿ ಕುರಿತಾದ ಸದಾಶಿವ ಆಯೋಗದ ವರದಿಯನ್ನು ಜಾರಿಗೊಳಿಸಬೇಕೆಂಬ ಒತ್ತಡಗಳು ರಾಜ್ಯದಲ್ಲಿ 2022–2023ನೇ ಸಾಲಿನಲ್ಲಿ ತುಸು ಹೆಚ್ಚಾಗಿ ಕೆಲಸಮಾಡಿದವು. ಒಂದೆಡೆ ಸರ್ಕಾರಗಳು ಜಾತಿವಾರು ಮೀಸಲಾತಿ ನೀಡುವ ಯೋಜನೆಯನ್ನು ಪರೋಕ್ಷ ಉದ್ದೇಶಗಳಿಂದ ಕೈಗೆತ್ತಿಕೊಂಡಿದ್ದು ದಿಟ. ಇದಕ್ಕಾಗಿ ಸಚಿವ ಮಾಧುಸ್ವಾಮಿ ನೇತೃತ್ವದಲ್ಲಿ ಸಚಿವ ಸಂಪುಟದ ಉಪಸಮಿತಿಯೊಂದನ್ನು ನೇಮಿಸಿ ಮರುವರ್ಗೀಕರಣಕ್ಕೆ ಸಂಬಂಧಿಸಿದಂತೆ ಅಧ್ಯಯನ ನಡೆಸಿತು.

ಇಂದಿರಾ ಸಾಹನಿ ಮತ್ತು ಇತರರ ವಿರುದ್ಧ ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು 1992–93ರಲ್ಲಿ ಹಿಂದುಳಿದ ಜಾತಿಗಳಿಗೆ ಮೀಸಲಾತಿ ನೀಡುವ ಸಲುವಾಗಿ ಹಾಗೂ ಮೀಸಲಾತಿಯನ್ನು ಶೇಕಡ 50ರಷ್ಟು ಮೀರದಂತೆ ಆದೇಶಿಸಿತು. ಈ ಆದೇಶವನ್ನು ರಾಷ್ಟ್ರದ ಎಲ್ಲ ರಾಜ್ಯಗಳು ಪಾಲಿಸುವುದು ಕಡ್ಡಾಯವಾಗಿತ್ತು. ಆದರೆ ರಾಜಕೀಯ ಚದುರಂಗ ಆಟದಲ್ಲಿ ರಾಜಕಾರಣಿಗಳು ತಮ್ಮ ಸ್ವಹಿತಾಸಕ್ತಿಗಾಗಿ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಆದೇಶವನ್ನು ಧಿಕ್ಕರಿಸಿ ಜಾತಿವಾರು ಪ್ರತ್ಯೇಕ ಮೀಸಲಾತಿಯನ್ನು ನೀಡುತ್ತಿರುವುದನ್ನು ಕಾಣಬಹುದು. ಇಂತಹ ಪ್ರಕರಣಗಳಲ್ಲಿ ಮೊದಲಿಗರಾಗಿ ತಮಿಳುನಾಡು ಸರ್ಕಾರ ಮುನ್ನಡೆಯನ್ನು ಸಾಧಿಸಿತು. ಎ.ಐ.ಎ.ಡಿ.ಎಂ.ಕೆ ಸರ್ಕಾರವು ಹಿಂದುಳಿದ ವರ್ಗಗಳಿಗೆ ಇದ್ದ ಶೇಕಡ 31ರಷ್ಟು ಮೀಸಲಾತಿಯನ್ನು ಶೇಕಡ 50ಕ್ಕೆ ಹೆಚ್ಚಳ ಮಾಡಿತು. ಇದರಿಂದ ಒಟ್ಟಾರೆ ಮೀಸಲಾತಿ ಪ್ರಮಾಣವು ಶೇಕಡ 68ನ್ನು ತಲುಪಿತು. ಇದರ ವಿರುದ್ಧ ಸರ್ವೋಚ್ಚ ನ್ಯಾಯಾಲಯದಲ್ಲಿ ದಾವೆಗಳನ್ನ ಹೂಡಲಾಯಿತು. ನ್ಯಾಯಾಲಯವು ನೈಜ ಸ್ಥಿತಿಯನ್ನು ಪರಿಶೀಲಿಸಲು ಆಯೋಗವನ್ನು ನೇಮಿಸುವಂತೆ ಸಲಹೆ ನೀಡಿತು. ಆಯೋಗದ ಸಲಹೆಯನ್ನು ನೀಡಿದ ನಂತರವು ತಮಿಳುನಾಡ ಸರ್ಕಾರ 1990ರಲ್ಲಿ ಹಿಂದುಳಿದ ವರ್ಗಕ್ಕೆ ಶೇಕಡ 30, ಅತ್ಯಂತ ಹಿಂದುಳಿದ ವರ್ಗಕ್ಕೆ ಶೇಕಡ 20, ಪರಿಶಿಷ್ಟ ಪಂಗಡಕ್ಕೆ ಶೇಕಡ 1, ಪರಿಶಿಷ್ಟ ಜಾತಿಗೆ ಶೇಕಡ 18 ರಷ್ಟು, ಸಾಮಾನ್ಯ ಶೇಕಡ 31ರಷ್ಟು ಮೀಸಲಾತಿಯನ್ನು ನಿಗಧಿಮಾಡಿತು. ಒಟ್ಟಾರೆ ಶೇಕಡ 69 ರಷ್ಟು ಮೀಸಲಾತಿ ಪ್ರಮಾಣವನ್ನು ತಮಿಳುನಾಡು ಹೊಂದಿತು. 1992ರಲ್ಲಿ ಸರ್ವೋಚ್ಚ ನ್ಯಾಯಾಲಯವು ಅನುಚ್ಛೇದ 16(4)ರ ಪ್ರಕಾರ ಮೀಸಲಾತಿಯ ಒಟ್ಟು ಪ್ರಮಾಣ ಶೇಕಡ 50 ದಾಟಬಾರದೆಂದು ಆದೇಶವಿತ್ತ ನಂತರ ಮದ್ರಾಸ್ ಉಚ್ಚ ನ್ಯಾಯಾಲಯವು 1994–95ರ ಸಾಲಿನಲ್ಲಿ ತಮಿಳುನಾಡು ಸರ್ಕಾರಕ್ಕೆ ಶೇಕಡ 50ಕ್ಕೆ ನಿಗಧಿಗೊಳಿಸಬೇಕೆಂದು ಆದೇಶವನ್ನು ನೀಡಿತು. ಆದರೆ ಈ ಆದೇಶ ಇಂದಿಗೂ ಜಾರಿಯಾಗಿಲ್ಲ ಎಂಬುವುದು ವಾಸ್ತವದ ಸಂಗತಿಯಲ್ಲಿ ಒಂದು. ಇದೇ ಮಾದರಿಯಲ್ಲಿ ರಾಜಸ್ಥಾನದಲ್ಲಿ ಮೀಸಲಾತಿ ಪ್ರಮಾಣ ಶೇಕಡ 68ರಷ್ಟಿದೆ. ಆಂಧ್ರಪ್ರದೇಶದಲ್ಲಿ ಈ ಮೇಲಿನ ಪ್ರಯತ್ನವನ್ನು ಮಾಡಿತ್ತಾದರೂ ನ್ಯಾಯಾಲಯದ ತಡೆಯಾಜ್ಞೆಯಿಂದಾಗಿ ಶೇಕಡ 50–50ರ ಅನುಪಾತದಲ್ಲಿ ಮುಂದುವರೆಯುತ್ತಿದೆ. ಒಕ್ಕೂಟ ಸರ್ಕಾರ ಮಾತ್ರ ಸರ್ವೋಚ್ಚ ನ್ಯಾಯಾಲಯದ ವಿಧಿಸಿದ ಮಿತಿಯನ್ನು ಈವರೆವಿಗೂ ಉಲ್ಲಂಗಿಸಿಲ್ಲ. ಆದರೆ ಕೆಲವು ರಾಜ್ಯ ಸರಕಾರಗಳು ಸ್ಥಳೀಯ ಮತ ರಾಜಕೀಯ ಕಾರಣಗಳಿಗೋ ಅಥವಾ ವಾಸ್ತವ ಪರಿಸ್ಥಿತಿಯ ಕಾರಣಗಳಿಗೋ ಸರ್ವೋಚ್ಚ ನ್ಯಾಯಾಲಯ ವಿಧಿಸಿರುವ ಮಿತಿಯ ಗಡಿಯನ್ನೂ ದಾಟಿ ಹೋಗಿವೆ. ಆ ರಾಜ್ಯಗಳೆಂದರೆ–ರಾಜಸ್ಥಾನ, ಗುಜರಾತ್, ತೆಲಂಗಾಣ, ಆಂಧ್ರಪ್ರದೇಶ, ಹರಿಯಾಣ, ಛತ್ತೀಸ್ಗಡ, ಮಧ್ಯಪ್ರದೇಶ, ಉತ್ತರಪ್ರದೇಶ ಮತ್ತು ಮಹಾರಾಷ್ಟ್ರ.[1]

ಕರ್ನಾಟಕದಲ್ಲಿ ನವೆಂಬರ್ 2019ರಲ್ಲಿ ನ್ಯಾ. ಹೆಚ್.ಎನ್. ನಾಗಮೋಹನದಾಸ್ ಅವರ ನೇತೃತ್ವದ ಆಯೋಗವನ್ನು ಅಂದಿನ ಸರ್ಕಾರ ನೇಮಕಮಾಡಿತು. ಈ ಆಯೋಗವು ತನ್ನ ವರದಿಯನ್ನು ಸಿದ್ಧಪಡಿಸಿ ದಿನಾಂಕ 02–07–2020ರಂದು ಸರ್ಕಾರಕ್ಕೆ ಸಲ್ಲಿಸಿತು. ಈ ಆಯೋಗದ ವರದಿಯನ್ವಯ ಪರಿಶಿಷ್ಟ ಜಾತಿಗೆ ಶೇಕಡ 17ರಷ್ಟು ಹಾಗೂ ಪರಿಶಿಷ್ಟ ಪಂಗಡಗಳಿಗೆ ಶೇಕಡ 7.5ರಷ್ಟು ಮೀಸಲಾತಿಯನ್ನು ನೀಡಬೇಕೆಂದು ಸಲಹೆ ನೀಡಿತು. ಈ ವರದಿಯು ಸರ್ವೋಚ್ಚ ನ್ಯಾಯಾಲಯ ನಿಗಧಿಗೊಳಿಸಿದ ಗರಿಷ್ಠ ಶೇಕಡ 50ರ ಮಿತಿಯನ್ನು ದಾಟುತ್ತದೆ ಎಂದು ಕೆಲ ಪತ್ರಿಕೆಗಳಲ್ಲಿ ವರದಿ ಭಿತ್ತರಗೊಂಡವು. ಈ ಆಯೋಗದ ಜೊತೆಯಲ್ಲಿ ಒಳಮೀಸಲಾತಿಯ ಸದಾಶಿವ ಆಯೋಗದ ವರದಿ ಅನ್ವಯ ಈಗಾಗಲೇ ಇದ್ದ ಶೇಕಡ 15ರಲ್ಲಿ ಬಲಗೈ ಸಮುದಾಯಕ್ಕೆ ಶೇಕಡ 6, ಎಡಗೈ ಸಮುದಾಯಕ್ಕೆ ಶೇಕಡ 5, ಸ್ಪೃಶ್ಯ ಸಮುದಾಯಕ್ಕೆ ಶೇಕಡ 3, ಇತರೆ ಸಮುದಾಯಕ್ಕೆ ಶೇಕಡ 1 ರಷ್ಟು ನೀಡಬೇಕೆಂದು ಸಲಹೆ ನೀಡಿತು. 2022–23ರಲ್ಲಿ ಸಾರ್ವಜನಿಕ ಚುನಾವಣೆಯು ಸನಿಹ ಬರುತ್ತಿದ್ದಂತೆ ಸದಾಶಿವ ಹಾಗೂ ನಾಗಮೋಹನದಾಸ ಆಯೋಗಗಳ ವರದಿ ಜಾರಿಯಾಗಬೇಕೆಂಬ ಬೇಡಿಕೆಯ ಹೋರಾಟಗಳು ತುಸು ಜೋರಾಗಿದ್ದವು.

ISSN : 2249-2429 ಸಂಶೋಧನೆ RNI REG.NO.KARKAN/2011/38712

ಕರ್ನಾಟಕ ಸರ್ಕಾರವು ಕರ್ನಾಟಕ ರಾಜ್ಯಪತ್ರ ಭಾನುವಾರ 23, ಅಕ್ಟೋಬರ್, 2022ರ ಭಾಗ–4ಎ, ಸಂ.536ರ ಅನುಸಾರ ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳು ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ಆಧ್ಯಾದೇಶ, 2022ರಂತೆ ಅನುಸೂಚಿತ ಜಾತಿಗಳಿಗೆ ಶೇಕಡ 17, ಅನುಸೂಚಿತ ಪಂಗಡಗಳಿಗೆ ಶೇಕಡ 07 ಮೀಸಲಾತಿಯನ್ನು ಹೆಚ್ಚಳದ ಆದೇಶದ ಮೂಲಕ ಕೇಂದ್ರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿತು. ಈ ಆದೇಶವಾದ ಕೆಲ ತಿಂಗಳುಗಳಲ್ಲಿಯೇ ಅಂದರೆ ದಿನಾಂಕ:24.03.2023 ರಂದು ಕರ್ನಾಟಕ ಸರ್ಕಾರ ಒಳ ಮೀಸಲಾತಿಯನ್ನು ಅಂತಿಮಗೊಳಿಸುವ ಆದೇಶದ ಮೂಲಕ ಕೇಂದ್ರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿತು. ಇದರ ಅನ್ವಯ ಎಡಗೈ ಸಮುದಾಯಕ್ಕೆ ಶೇಕಡ 6, ಬಲಗೈ ಸಮುದಾಯಕ್ಕೆ ಶೇಕಡ 5.5, ಸ್ಪೃಶ್ಯ ಸಮುದಾಯಕ್ಕೆ 4.5, ಇತರೆ ಸಮುದಾಯಗಳಿಗೆ ಶೇಕಡ 1 ರಷ್ಟು ಮೀಸಲಾತಿಯನ್ನು ವರ್ಗೀಕರಿಸಿ ಸರ್ಕಾರ ಆದೇಶಿಸಿತು. ಕರ್ನಾಟಕದಲ್ಲಿ ಈಗಾಗಲೇ ಇದ್ದ ಮೀಸಲಾತಿ ಅನ್ವಯ ಹಾಗೂ ಮರುಹಂಚಿಕೆಯನ್ನು ಈ ಮುಂದಿನ ಕೋಷ್ಟಕದಲ್ಲಿ ಕಾಣಬಹುದು.

**ಕೋಷ್ಟಕ : 1 – ಒಳ ಮೀಸಲಾತಿ ಪ್ರಮಾಣದ ಅಂತರ ಹಾಗೂ ಪರಿಶಿಷ್ಟ ಸಮುದಾಯಗಳ ಮೀಸಲು ಏರಿಕೆ ಪ್ರಮಾಣ**

| 2002–2023ರವರೆಗೆ | | | | 2023ರ ಮಾರ್ಚ್ ದಿನಾಂಕ 24ರ ನಂತರದಿಂದ ಪ್ರಸ್ತುತ | | |
|---|---|---|---|---|---|---|
| ಕ್ರ.ಸಂ. | ಜಾತಿವಾರು ವರ್ಗಗಳು | ವರ್ಗವಾರು ಮೀಸಲಾತಿ ಪ್ರಮಾಣ ಶೇಕಡಗಳಲ್ಲಿ | ಸಾಮಾನ್ಯ ಮೀಸಲಾತಿ ಪ್ರಮಾಣ ಶೇಕಡಗಳಲ್ಲಿ | ಜಾತಿವಾರು ವರ್ಗಗಳು | ವರ್ಗವಾರು ಮೀಸಲಾತಿ ಪ್ರಮಾಣ ಶೇಕಡಗಳಲ್ಲಿ | ಸಾಮಾನ್ಯ ಮೀಸಲಾತಿ ಪ್ರಮಾಣ ಶೇಕಡಗಳಲ್ಲಿ |
| 1. | ಎಡಗೈ ಸಮುದಾಯಗಳು | 6 | 50 | ಎಡಗೈ ಸಮುದಾಯಗಳು | 6 | 44 |
| 2. | ಬಲಗೈ ಸಮುದಾಯಗಳು | 5 | | ಬಲಗೈ ಸಮುದಾಯಗಳು | 5.5 | |
| 3. | ಸ್ಪೃಶ್ಯ ಸಮುದಾಯಗಳು | 3 | | ಸ್ಪೃಶ್ಯ ಸಮುದಾಯಗಳು | 4.5 | |
| 4. | ಇತರೆ ಸಮುದಾಯಗಳು | 1 | | ಇತರೆ ಸಮುದಾಯಗಳು | 1 | |
| | ಒಟ್ಟು | 15 | | ಒಟ್ಟು | 17 | |
| 5. | ಪರಿಶಿಷ್ಟ ಜಾತಿ | 15 | | ಪರಿಶಿಷ್ಟ ಜಾತಿ | 17 | |
| 6. | ಪರಿಶಿಷ್ಟ ಪಂಗಡ | 03 | | ಪರಿಶಿಷ್ಟ ಪಂಗಡ | 07 | |
| 7. | ಹಿಂದುಳಿದ ವರ್ಗಗಳು | 32 | | ಹಿಂದುಳಿದ ವರ್ಗಗಳು | 32 | |
| | ಒಟ್ಟು | 50 | 50 | ಒಟ್ಟು | 56 | 44 |
| | | 100 | | | 100 | |

ಮೂಲ : ಸದಾಶಿವ ಆಯೋಗದ ವರದಿ – 2012 ಹಾಗೂ ಕರ್ನಾಟಕ ಸರ್ಕಾರದ ನಡಾವಳಿ 27–03–2023

ಈ ಮೇಲ್ಕಂಡ ಕೋಷ್ಟಕದ ಅನುಸಾರ ಪ್ರಸ್ತುತ ಸರ್ವೋಚ್ಚ ನ್ಯಾಯಾಲಯದ ಗರಿಷ್ಠ ಮಿತಿಯನ್ನು ದಾಟುತ್ತದೆ. ಅಲ್ಲದೆ 2004–2005ರಲ್ಲಿ ಆಂಧ್ರಪ್ರದೇಶದ ಒಳಮೀಸಲಾತಿ ಹೆಚ್ಚಳದ ವಿಚಾರಣೆ ಸಂದರ್ಭದಲ್ಲಿ (ಈ. ವಿ ಚಿನ್ನಯ್ಯ v/s ಆಂಧ್ರಪ್ರದೇಶ, ಎಐಆರ್ 2005 ಎಸ್ ಸಿ 162) ಸರ್ವೋಚ್ಚ ನ್ಯಾಯಾಲಯ ತೀರ್ಪಿನಲ್ಲಿ ಉಲ್ಲೇಖವಾದ ಅಂಶ ಹೀಗಿತ್ತು. 'ಪರಿಶಿಷ್ಟ ಜಾತಿಗಳು' ಏಕರೂಪ (homogenious) ಜಾತಿಗಳ ಸಮೂಹದಿಂದ ರೂಪುಗೊಂಡಿವೆ. ಆದುದರಿಂದ, ಅವುಗಳನ್ನು ಯಾವುದೇ ರೀತಿಯಲ್ಲಿ ಒಳ ವರ್ಗೀಕರಣಕ್ಕೆ ಒಳಪಡಿಸಿದಲ್ಲಿ, ಅದು ಸಂವಿಧಾನ ವಿಧಿ 14ರ ಉಲ್ಲಂಘನೆ'.[2] ಅಲ್ಲದೆ 1992ರಲ್ಲಿ ಸರ್ವೋಚ್ಚ ನ್ಯಾಯಾಲಯದ ನವ ನ್ಯಾಯಮೂರ್ತಿಗಳ ಪೀಠ, ಇಂದ್ರಾ ಸಹಾನಿ ಪ್ರಕರಣದ ತೀರ್ಪಿನಲ್ಲಿ ಹೇಳಿರುವ ಕೆಲ ಅಂಶಗಳನ್ನು ಪರಿಗಣಿಸಿ, ಪರಿಶಿಷ್ಟ ಜಾತಿಗಳನ್ನು ಒಳವರ್ಗೀಕರಿಸಿ ಪ್ರತ್ಯೇಕ ಮೀಸಲಾತಿ ನೀಡಲು ಅವಕಾಶ ಇಲ್ಲ ಎಂದು, 2004ರ ಆದೇಶದಲ್ಲಿ ಸರ್ವೋಚ್ಚ ನ್ಯಾಯಾಲಯದ ಸಾಂವಿಧಾನಿಕ ಪೀಠ ಹೇಳಿದೆ.[3] ಕರ್ನಾಟಕದಲ್ಲಿ ಡಾ.ನಾಗನಗೌಡ ವರದಿ ಆಧಾರಿತ ಮೀಸಲಾತಿಯನ್ನು ಹಿಂದುಳಿದ ವರ್ಗಗಳಿಗೆ ಅನುಷ್ಠಾನ ಗೊಳಿಸಿದಾಗ ಒಳ ವರ್ಗೀಕರಣಕ್ಕೆ ಒಳಪಡಿಸಲಾಗಿತ್ತು. ಆದರೆ, ಎಂ.ಆರ್.ಬಾಲಾಜಿ v/s ಮೈಸೂರು(ನ್ಯಾ.ಗಜೇಂದ್ರಗಡಕರ್) ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯ ಒಳ ಮೀಸಲಾತಿ ಅಸಿಂಧು ಎಂದು ತೀರ್ಪು ನೀಡಿತ್ತು(1962)[4]. ಮೀಸಲಾತಿ ಪ್ರಕ್ರಿಯೆಗೆ ಒಳಪಡುವ ಸಂವಿಧಾನದ ವಿಧಿಗಳೆಂದರೆ –15(4), 16(4), 29(2), 38, 39, 46, 330, 332, 338ಬಿ ಮತ್ತು 342ಎ(1), (2). ವಿಧಿಗಳಾದ 330 ಮತ್ತು 332 ಅನ್ನು ಹೊರತುಪಡಿಸಿ, ಉಳಿದ ವಿಧಿಗಳಲ್ಲಿಯೇ ಆಗಲಿ ಅಥವಾ ಸಂವಿಧಾನದ ಬೇರೆ ಎಲ್ಲಿಯೇ ಆಗಲಿ ಮೀಸಲಾತಿಯ ಗರಿಷ್ಠ ಮಿತಿ ಮತ್ತು ಮೀಸಲಾತಿ ಜಾರಿಯಲ್ಲಿರಬೇಕಾದ ಸಮಯದ ಬಗ್ಗೆ ಹೇಳಿಲ್ಲ. ಆದರೆ, ವಿಧಿಗಳಾದ 330 ಮತ್ತು 332ರಲ್ಲಿ ಮಾತ್ರ ಪರಿಶಿಷ್ಟ ಸಮುದಾಯದವರು ಸಂಸತ್ ಮತ್ತು ವಿಧಾನಸಭೆಗಳಿಗೆ ಚುನಾಯಿತರಾಗಲೂ ಇರುವ ಮೀಸಲಾತಿ ಅವಕಾಶಗಳನ್ನೂ ತಿಳಿಸಿ, ಕಾಲವನ್ನು 10 ವರ್ಷಗಳು ಎಂದೂ ನಿಗಧಿಗೊಳಿಸಿದೆ. ಆದರೂ, ಪ್ರತಿ 10 ವರ್ಷಗಳಿಗೊಮ್ಮೆ ಮೀಸಲಾತಿ ಅವಕಾಶ ಮುಂದುವರಿಕೆಗೆ ಸಂವಿಧಾನ ತಿದ್ದುಪಡಿ ಮಾಡಿಕೊಂಡು ಬರಲಾಗುತ್ತಿದೆ.[5] ಪ್ರಸ್ತುತ ಪರಿಶಿಷ್ಟ ಸಮುದಾಯಗಳ ಒಳವರ್ಗೀಕರಣ ಮಾಡುವ ಅಧಿಕಾರ ಇರುವುದು ರಾಷ್ಟ್ರಪತಿಗಳಿಗೆ ಮಾತ್ರ(ವಿಧಿ 341 ಮತ್ತು 342). ಪರಿಶಿಷ್ಟ ಜಾತಿ ಪಟ್ಟಿಗೆ ಯಾವುದೇ ತಿದ್ದುಪಡಿ, ಮಾರ್ಪಾಡು ಅಥವಾ ಬದಲಾವಣೆ ತರಬೇಕು ಎಂದಿದ್ದರೆ ಆ ಅಧಿಕಾರ ಇರುವುದೂ ಸಂಸತ್ತಿಗಷ್ಟೇ. ಒಳ ಮೀಸಲಾತಿಗೆ ಸದ್ಯ ಇರುವ ಅವಕಾಶವೆಂದರೇ, ಒಂದೋ ಸಂವಿಧಾನ ತಿದ್ದುಪಡಿ ಆಗಬೇಕು ಅಥವಾ ಸರ್ವೋಚ್ಚ ನ್ಯಾಯಾಲಯದ ತೀರ್ಪು ಹೊರ ಬರಬೇಕು.[6] ಈಗಾಗಲೇ ಒಕ್ಕೂಟ ರಾಷ್ಟ್ರದ ಪಂಜಾಬ್, ಹರಿಯಾಣ, ಮಹಾರಾಷ್ಟ್ರ, ತಮಿಳುನಾಡು ಇತ್ಯಾದಿ ರಾಜ್ಯಗಳು ಒಳಮೀಸಲಾತಿಯನ್ನು ಜಾರಿಗೆ ತಂದಿವೆ. ಕೇಂದ್ರ ಸರ್ಕಾರವು ನ್ಯಾ.ರೋಹಿಣಿ ಆಯೋಗವನ್ನು ರಚಿಸಿ ಹಿಂದುಳಿದ ವರ್ಗಗಳಿಗೆ ಒಳಮೀಸಲಾತಿಯನ್ನು ನೀಡುವ ಬಗ್ಗೆ ವರದಿಯನ್ನು ಕೇಳಿದೆ. ಈ ಆಯೋಗವು ಕಾರ್ಯನಿರತವಾಗಿದೆ. ಸರ್ವೋಚ್ಚ ನ್ಯಾಯಾಲಯವು ಒಳಮೀಸಲಾತಿ ನೀಡುವ ವಿಷಯವನ್ನು 7 ನ್ಯಾಯಮೂರ್ತಿಗಳ ಪೀಠಕ್ಕೆ ವರ್ಗಾಯಿಸಿದೆ. ಈಗ ವಿಚಾರಣಾ ಹಂತದಲ್ಲಿದೆ.[7] ಸರ್ವೋಚ್ಚ ನ್ಯಾಯಾಲಯವು 2020ರಲ್ಲಿ ದೇಶದ ಎಲ್ಲ ರಾಜ್ಯಗಳ ಶಾಸನಗಳು

ISSN : 2249-2429 ಸಂಶೋಧನೆ RNI REG.NO.KARKAN/2011/38712

ಪರಿಶಿಷ್ಟ ಜಾತಿಯ ಮೀಸಲಾತಿಯ ಮರುವರ್ಗೀಕರಣ ಮಾಡಲು ಅಧಿಕಾರವನ್ನು ಹೊಂದಿರುತ್ತವೆ ಎಂದು ಉಲ್ಲೇಖಿಸಿತ್ತಾದರೂ ಐವರು ನ್ಯಾಯಮೂರ್ತಿಗಳ ಪೀಠ 2004ರಲ್ಲಿ ಪರಿಶಿಷ್ಟ ಜಾತಿಯ ಮೀಸಲಾತಿಯ ಮರುವರ್ಗೀಕರಣಕ್ಕೆ ಸಂಬಂಧಿಸಿದಂತೆ ನಿರ್ಬಂಧ ಹೇರಿರುವುದರಿಂದ ಈ ಆದೇಶವನ್ನು ಅಸಿಂಧುಗೊಳಿಸಲು ಸಾಧ್ಯವಾಗಿಲ್ಲ ಎಂಬುದನ್ನು ಇಲ್ಲಿ ಮರುಪ್ರಸ್ತಾಪಿಸಬಹುದು.

- **ಕೆನೆಪದರ ನೀತಿ ಜಾತಿ ಆಧಾರಿತವಾಗಿ ರೂಪಿತವಾಗಿರುವುದು ಎಷ್ಟು ಸರಿ ?**

ತಮಿಳುನಾಡು ಸರ್ಕಾರವು 1971ರಲ್ಲಿ ಶ್ರೀ ಸಟ್ಟನಾಥನ್ ಆಯೋಗವನ್ನು ನೇಮಿಸುವುದರ ಮೂಲಕ ಹಿಂದುಳಿದ ವರ್ಗಗಳಿಗೆ ಮೀಸಲಾತಿಯನ್ನು ನೀಡುವ ಸಲುವಾಗಿ ವರದಿಯನ್ನು ನೀಡುವಂತೆ ಆದೇಶಿಸಿತು. ಈ ಆಯೋಗದ ವರದಿಯಲ್ಲಿ ಮೊದಲನೆ ಬಾರಿಗೆ ಕೆನೆಪದರ ಪದ ಬಳಕೆಯಾಯಿತು. ಹಿಂದುಳಿದ ವರ್ಗದಲ್ಲಿ ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಮುಂದುವರೆದ ಸಮುದಾಯಗಳಿಗೆ ಮೀಸಲಾತಿ ಪಡೆಯಲು ಅರ್ಹರಲ್ಲವೆಂದು ಉಲ್ಲೇಖಿಸಿತು. ಅಲ್ಲದೆ ಈ ಕ್ರಮಕ್ಕೆ ವಾರ್ಷಿಕ ಆದಾಯದ ಮಿತಿಯನ್ನು ನಿಗಧಿಗೊಳಿಸಿ ಕೆನೆಪದರ ನೀತಿಯನ್ನು ಹಿಂದುಳಿದ ವರ್ಗಗಳಿಗೆ ಅನ್ವಯಿಸಲಾಯಿತು. 1977ರಲ್ಲಿ ಬಿ.ಪಿ. ಮಂಡಲ್ ಆಯೋಗದ ನೇಮಕ ಹಾಗೂ 1990ರ ಆಯೋಗದ ವರದಿಯ ಅನುಸಾರ ಹಿಂದುಳಿದ ವರ್ಗಗಳಿಗೆ ಶೇಕಡ 27 ರಷ್ಟು ಮೀಸಲಾತಿಯನ್ನು ಕೇಂದ್ರ ಸರ್ಕಾರ ಮಂಡಲ್ ವರದಿಯ ಅನುಸಾರ ಕಲ್ಪಿಸಿತು. ಈ ಮೀಸಲಾತಿ ನೀಡಿಕೆ ಕುರಿತು 16–11–1992ರಲ್ಲಿ ನವ ನ್ಯಾಯಮೂರ್ತಿಗಳ ಪೀಠವು ವಿಚಾರಣೆ ನಡೆಸಿ ಇಂದಿರಾ ಸಹಾನಿ ಪ್ರಕರಣದಲ್ಲಿ ಈ ರೀತಿ ಉಲ್ಲೇಖಿಸಿದೆ. "ಕೆನೆಪದರ ಎಂಬ ನೀತಿ ಕೇವಲ ಹಿಂದುಳಿದ ಜಾತಿಗಳಿಗೆ ಅನ್ವಯವಾಗುತ್ತದೆ. ಆದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಅನ್ವಯವಾಗುವುದಿಲ್ಲ."[8] ಇದೇ ಪ್ರಕರಣದಲ್ಲಿ ಸರ್ಕಾರಿ ಸೇವೆಗೆ ಸೇರಿದ ನಂತರ ಮುಂಬಡ್ತಿಯಲ್ಲಿ ಮೀಸಲಾತಿ ಕಲ್ಪಿಸುವ ಅಗತ್ಯವಿಲ್ಲ ಹಾಗೂ ಒಟ್ಟು ಮೀಸಲಾತಿಯಲ್ಲಿ ಶೇಕಡ 50 ರಷ್ಟು ಮೀರಬಾರದು ಎಂಬ ಅಂಶವನ್ನು ಉಲ್ಲೇಖಿಸಿತು. ಸರ್ವೋಚ್ಚ ನ್ಯಾಯಾಲಯದ ಈ ಮೇಲ್ಕಂಡ ತೀರ್ಪಿನ ಅನುಸಾರ ಪರಿಶಿಷ್ಟ ಸಮುದಾಯಗಳ ಹಿತಕ್ಕೆ ಧಕ್ಕೆಯಾಗುತ್ತದೆ ಎಂಬ ಉದ್ದೇಶದಿಂದ ಕೇಂದ್ರ ಸರ್ಕಾರವು 1995ರಲ್ಲಿ ಸಂವಿಧಾನಕ್ಕೆ 77ನೇ ತಿದ್ದುಪಡಿ ಮಾಡಿ 16(4) ಅನುಚ್ಛೇದವನ್ನು ಸೇರಿಸುವುದರ ಮೂಲಕ ಪರಿಶಿಷ್ಟ ಸಮುದಾಯಗಳಿಗೆ ಮುಂಬಡ್ತಿಯಲ್ಲಿ ಮೀಸಲಾತಿಯನ್ನು ಕಲ್ಪಿಸಿತು. ಅಲ್ಲದೆ ಬ್ಯಾಕ್ ಲಾಗ್ ಹುದ್ದೆಗಳಿಗೆ ಮೀಸಲಾತಿ ಅನ್ವಯವಾಗುವುದಿಲ್ಲವೆಂದು 2000 ಇಸವಿಯ ಸಂವಿಧಾನ ತಿದ್ದುಪಡಿ 16(4ಬಿ) ಮೂಲಕ ಜಾರಿಗೆ ತರಲಾಯಿತು. ಈ ಮಾದರಿಯ ತಿದ್ದುಪಡಿಗಳು ಸಂವಿಧಾನಕ್ಕೆ ಕಾಲ–ಕಾಲಗಳಲ್ಲಿ ಮಾಡುತ್ತ ಬರಲಾಗಿದೆ. ಈ ಮಾದರಿಗಳನ್ನು ಪ್ರಶ್ನಿಸಿ 2006ರಲ್ಲಿ ಎಂ. ನಾಗರಾಜ್ v/s ಸರ್ವೋಚ್ಚ ನ್ಯಾಯಾಲಯದ ಪ್ರಕರಣದಲ್ಲಿ ನಾಲ್ಕು ಅಂಶಗಳನ್ನು ಎತ್ತಿ ಹಿಡಿಯಿತು. ಅವು ಸರ್ಕಾರ ಮುಂಬಡ್ತಿಯಲ್ಲಿ ಮೀಸಲಾತಿ ನೀಡಬೇಕೆಂಬುದು ಕಡ್ಡಾಯ ಮಾನ ದಂಡವಿಲ್ಲ, ಮುಂಬಡ್ತಿ ಮೀಸಲಾತಿಯನ್ನು ನೀಡುವುದರಿಂದ ಆಡಳಿದ ಕಾರ್ಯದಕ್ಷತೆಗೆ ಧಕ್ಕೆ ಆಗಬಾರದು ಮುಂತಾದವು.

ಇನ್ನೂ ಕರ್ನಾಟಕ ಸರ್ಕಾರವು 2002ರಲ್ಲಿ ಪರಿಶಿಷ್ಟ ಸಮುದಾಯಗಳಿಗೆ ಮುಂಬಡ್ತಿ ಮೀಸಲಾತಿ ಹಾಗೂ ಸೇವಾ ಜೇಷ್ಠತೆಯನ್ನು ಕಲ್ಪಿಸಿತು. ಈ ಕಾಯಿದೆಯನ್ನು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಎಂ. ನಾಗರಾಜು ಪ್ರಕರಣದಲ್ಲಿ ಪ್ರಶ್ನಿಸಲಾಗಿ 2011ರಲ್ಲಿ ಕಾಯಿದೆಯು ಸಂವಿಧಾನ ಬದ್ಧವಾಗಿದೆ ಎಂದು ಉಲ್ಲೇಖಿಸಿತು. ಆದರೆ ಸರ್ವೋಚ್ಚ ನ್ಯಾಯಾಲಯ v/s ಪವಿತ್ರ ಬಿ. ಕೆ. ಪ್ರಕರಣ 2017ರಲ್ಲಿ ಮೇಲ್ಕಂಡ ಕರ್ನಾಟಕ ಸರ್ಕಾರದ ಕಾಯಿದೆಯನ್ನು ಅಸಿಂಧುಗೊಳಿಸಲಾಯಿತು. ಇದಾದ ಬಳಿಕ 2017ರಲ್ಲಿ ಕೆ.ರತ್ನಪ್ರಭ ಸಮಿತಿಯನ್ನು ಕರ್ನಾಟಕ ಸರ್ಕಾರವು ಪರಿಶಿಷ್ಟ ಸಮುದಾಯಗಳ ಸ್ಥಿತಿಗತಿ ಬಗ್ಗೆ ವರದಿಯನ್ನು ನೀಡುವಂತೆ ಆದೇಶಿಸಿತು. ಈ ಆಯೋಗದ ವರದಿಯ ಅನುಸಾರ 2018ರಲ್ಲಿ ನೂತನ ಕಾನೂನು ಮಾಡುವುದರ ಮೂಲಕ ಮುಂಬಡ್ತಿಯಲ್ಲಿ ಮೀಸಲಾತಿಯನ್ನು ಕಲ್ಪಿಸಿತು. ಈ ಆದೇಶವನ್ನು ಸರ್ವೋಚ್ಚ ನ್ಯಾಯಾಲಯ v/s ಪವಿತ್ರ ಬಿ. ಕೆ. ಪ್ರಕರಣ 2019ರಲ್ಲಿ ಸಿಂಧುಗೊಳಿಸಿತು.

- **ಮೀಸಲಾತಿ ಹಂಚಿಕೆಯಲ್ಲಿ ಕಾಡಲೇಬೇಕಾದ ಪ್ರಶ್ನೆಗಳು**

- ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೀಸಲಾತಿ ಮಾದರಿಯಂತೆ ಪ್ರವರ್ಗ–1, 2ಎ, 2ಬಿ, 3ಎ, 3ಬಿ, ವರ್ಗಗಳಿಗೆ ಮೀಸಲಾತಿ ಅನುಸಾರ ಚುನಾವಣೆಯ ಕ್ಷೇತ್ರಗಳ ಹಂಚಿಕೆ ಆಗದೇ ಇರುವುದಕ್ಕೆ ಕಾರಣಗಳೇನು ?
- ಒಳ ಮೀಸಲಾತಿ ಸಂಪೂರ್ಣ ? ಜಾರಿಯಾದಲ್ಲಿ ಈಗಾಗಲೇ ಇರುವ ಪರಿಶಿಷ್ಟ ಜಾತಿ ಮೀಸಲು ಚುನಾವಣಾ ಕ್ಷೇತ್ರಗಳನ್ನು ಒಳ ಮೀಸಲಾತಿ ಆಧಾರದಲ್ಲಿಯೇ ವರ್ಗೀಕರಿಸಲು ಸಾಧ್ಯವೇ?
- ಉದ್ಯೋಗ ಮತ್ತು ಶಿಕ್ಷಣದಲ್ಲಿ ಇರುವ ಮೀಸಲಾತಿಯು ಮುಂಬಡ್ತಿಯಲ್ಲಿ ಕೇವಲ ಪರಿಶಿಷ್ಟ ಸಮುದಾಯಗಳಿಗೆ ಮಾತ್ರ ಅನ್ವಯಿಸುತ್ತಿರುವುದು ಎಷ್ಟು ಸಮಂಜಸ ?
- ಸಂವಿಧಾನದ ಆಶಯದಲ್ಲಿ ಎಲ್ಲಾರು ಸಮಾನರು–ಜ್ಯಾತ್ಯಾತೀತ ರಾಷ್ಟ್ರದ ಪರಿಕಲ್ಪನೆ ಉಲ್ಲೇಖಿತವಾಗಿದ್ದರು ಜಾತಿ ಆಧಾರಿತ ಮೀಸಲಾತಿ ನೀಡುತ್ತಿರುವುದು ಸಂವಿಧಾನ ವಿರೋಧಿ ಪರಿ ಕಲ್ಪನೆಯೇ?
- ಈಗಾಗಲೇ ಎಲ್ಲಾ ಸಮುದಾಯಗಳಿಗೂ ಮೀಸಲಾತಿ ಸೌಲಭ್ಯ ಕಲ್ಪಿಸಿರುವುದರೊಂದಿಗೆ ಕೆನೆಪದರ ನೀತಿಯನ್ನು ಕೇವಲ ಹಿಂದುಳಿದ ಸಮುದಾಯಕ್ಕೆ ಅನ್ವಯಿಸುವಂತೆ ಹಾಗೂ ಪರಿಶಿಷ್ಟ ಸಮುದಾಯಗಳಿಗೆ ಅನ್ವಯಿಸದೇ ಇರುವುದು ಎಷ್ಟು ಸಮಂಜಸ?
- 2006ರ ಸಾಚಾರ್ ಆಯೋಗದ ವರದಿಯು ಪ್ರಕಾರ ಮುಸ್ಲಿಂರಲ್ಲಿಯು ಹಿಂದುಳಿದ, ಪರಿಶಿಷ್ಟ ಸಮುದಾಯಗಳಿವೆ. ಆದರೆ ಈ ಸಮುದಾಯದ ಬೆಳವಣಿಗೆಗೆ ಸರ್ಕಾರದ ಕಾರ್ಯ ಕ್ರಮಗಳೇನು ? ಅಥವಾ ಈಗಾಗಲೇ ಇರುವ ಹಿಂದುಗಳಲ್ಲಿನ ಪರಿಶಿಷ್ಟ ಸಮುದಾಯಗಳು ಮಾತ್ರ ಶೋಷಣಾತ್ಮಕ ಜೀವನವನ್ನು ನಡೆಸುತ್ತವೆ ಹೊರತಾಗಿ ಉಳಿದ ಸಮುದಾಯಗಳು ಶೋಷಣಾತ್ಮಕ ಜೀವನವನ್ನು ನಡೆಸುವುದಿಲ್ಲವೇ ?
- ಮೀಸಲಾತಿ ಒಂದೇ ಎಲ್ಲಾ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ನೀಡಲು ಸಾಧ್ಯವೇ ? ಅಥವಾ ಸರ್ಕಾರಗಳು ಜನಸಂಖ್ಯೆಗೆ ಅನುಗುಣವಾಗಿ ಹೆಚ್ಚು–ಹೆಚ್ಚು ಅವಕಾಶಗಳನ್ನು, ಶ್ರಮಕ್ಕೆ ತಕ್ಕ ಪ್ರತಿಫಲವನ್ನು, ಶೈಕ್ಷಣಿಕ ಅರ್ಹತೆ ಅನುಸಾರ ಉದ್ಯೋಗದ ಭದ್ರತೆಯನ್ನು ನೀಡುವುವವರೆಗೂ ಮೀಸಲಾತಿ ಅಗತ್ಯ ಎನಿಸುತ್ತದೆಯೇ ? – ಉತ್ತರ ಕಂಡುಕೊಳ್ಳಬೇಕಾದ ಅನಿವಾರ್ಯತೆ ಇದೆ.

- **ಸಮಾರೋಪ**

ಒಟ್ಟಾರೆಯಾಗಿ ಹೇಳುವುದಾದರೆ ಸಮುದಾಯಗಳಿಗೆ ಮೀಸಲಾತಿ ಪ್ರಮಾಣ ಹೆಚ್ಚಳ ಜೊತೆಗೆ ಸರ್ವೋಚ್ಚ ನ್ಯಾಯಾಲಯದ ಆದೇಶದ ಮಾರ್ಪಾಡು ಅಗತ್ಯವಾಗುತ್ತದೆ. ಇಲ್ಲಿ ಶೇಕಡ 50–50 ಅನುಪಾತದ

– *116ನೇ ಪುಟಕ್ಕೆ ಮುಂದುವರೆದುದು*

ISSN : 2249-2429 ಸಂಶೋಧನೆ RNI REG.NO.KARKAN/2011/38712

# ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕೃತಕ ಬುದ್ಧಿವಂತಿಕೆಯ ಪಾತ್ರ : ಕೊಡಗು ಜಿಲ್ಲೆಯ ಅಧ್ಯಯನ

**ರಶ್ಮಿ,** ಸಂಶೋಧನಾ ವಿದ್ಯಾರ್ಥಿ, ಅರ್ಥಶಾಸ್ತ್ರ ವಿಭಾಗ, ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ

**ಡಾ. ಪ್ರಕಾಶ. ಡಿ.ಎನ್.,** ಉಪನ್ಯಾಸಕರು, ಸಮಾಜಶಾಸ್ತ್ರ ಅಧ್ಯಯನ ವಿಭಾಗ, ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಂಗಳೂರು.

*ಪ್ರಸ್ತಾವನೆ*

*ಪ್ರಸ್ತುತ ಅಧ್ಯಯನವು ಕೊಡಗು ಜಿಲ್ಲೆಯ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಅಳವಡಿಸಲಾಗಿರುವ ಕೃತಕ ಬುದ್ಧಿವಂತಿಕೆಯ ಮೇಲೆ ಕೇಂದ್ರೀಕರಿಸುತ್ತದೆ. ಕೃತಕ ಬುದ್ಧಿವಂತಿಕೆಯ ವಿಧಾನದ ಅನ್ವಯವು ಗ್ರಾಹಕರು ಮತ್ತು ಗ್ರಾಹಕರ ಪ್ರತಿಕ್ರಿಯೆಗಳನ್ನು ಮೇಲ್ವಿಚಾರಣೆ ಮಾಡಲು ಕೊಡಗು ಜಿಲ್ಲೆಯ ಬ್ಯಾಂಕಿಂಗ್ ಮತ್ತು ಹಣಕಾಸು ಸೇವೆಗಳ ಮೇಲೆ ಹೆಚ್ಚು ಆಸಕ್ತಿ ತೋರಿಸುತ್ತದೆ. ಪ್ರಸ್ತುತ ಅಧ್ಯಯನವು ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕೃತಕ ಬುದ್ಧಿವಂತಿಕೆಯ ಪಾತ್ರ ಮತ್ತು ಕೃತಕ ಬುದ್ಧಿವಂತಿಕೆಯ ಬಳಕೆಯಿಂದಾಗುವ ಅನುಕೂಲಗಳು ಮತ್ತು ಅನಾನುಕೂಲಗಳನ್ನು ಅಧ್ಯಯನ ಮಾಡುವ ಉದ್ದೇಶಗಳನ್ನು ಒಳಗೊಂಡಿದೆ. ಬ್ಯಾಂಕಿಂಗ್ ಮತ್ತು ಹಣಕಾಸು ಸೇವೆಗಳಲ್ಲಿ ಬಳಸಲಾಗುವ ಮಾಹಿತಿಯನ್ನು ಗುರುತಿಸಲು, ಸಾಹಿತ್ಯ ವಿಮರ್ಶೆಯ ಆಧಾರದ ಮೇಲೆ ಅನುಷಾಂಗಿಕ ಮೂಲಗಳಿಂದ ಹಾಗೂ ಕೃತಕ ಬುದ್ಧಿವಂತಿಕೆಯ ಬಗ್ಗೆ ಗ್ರಾಹಕರು ಹೊಂದಿರುವ ಅರಿವಿನ ಕುರಿತು ಅಧ್ಯಯನ ಮಾಡಲು ಪ್ರಾಥಮಿಕ ಮಾಹಿತಿಯನ್ನು ಸಂಗ್ರಹಿಸಲು ರಚನಾತ್ಮಕ ಪ್ರಶ್ನಾವಳಿಯನ್ನು ಬಳಸಲಾಗಿದೆ. ಪ್ರಸ್ತುತ ಅಧ್ಯಯನದಿಂದ ಕಂಡುಬಂದಿರುವುದೆನೆಂದರೆ ಕೊಡಗುಜಿಲ್ಲೆಯ ರಾಷ್ಟ್ರೀಕೃತ ಬ್ಯಾಂಕುಗಳು ಗ್ರಾಹಕರ ಅನುಕೂಲಕ್ಕಾಗಿ ಆನ್‌ಲೈನ್ ಬ್ಯಾಂಕಿಂಗ್ ವ್ಯವಸ್ಥೆಯನ್ನು ಜಾರಿಗೆತಂದಿದ್ದು ಖಾತೆತೆರೆಯುವಿಕೆ, ಠೇವಣಿ, ಉಳಿತಾಯ, ಸಾಲಗಳು, ಗೂಗಲ್ ಪೇ, ಫೋನ್ ಪೇ ಮತ್ತು ಇತರೆ ಸೇವೆಗಳನ್ನು ಒದಗಿಸುತ್ತಿವೆ. ಇದರಿಂದಾಗಿ ಗ್ರಾಹಕರು ಇತ್ತಿಚಿನ ದಿನಗಳಲ್ಲಿ ಅಧಿಕವಾಗಿ ಕೃತಕ ಬುದ್ಧಿವಂತಿಕೆಯನ್ನು ಬಳಸುತ್ತಿದ್ದಾರೆ. ಹಣಕಾಸು ಸೇವೆಗಳ ಜೊತೆಗೆ, ಹೆಚ್ಚು ಪರಿಣಾಮಕಾರಿ ರೀತಿಯ ಬಳಕೆಯಿಂದಾಗಿ ನಗರ ಪ್ರದೇಶದಲ್ಲಿ ತೃಪ್ತರಾಗಿದ್ದರೆ, ಗ್ರಾಮೀಣ ಭಾಗದ ಜನರು ಅತೃಪ್ತರಾಗಿರುವುದು ಅಧ್ಯಯನದಿಂದ ವ್ಯಕ್ತವಾಗಿದೆ. ಬ್ಯಾಂಕಿಂಗ್ ಸೇವೆಗಳು ಕೆಲಸದ ಸ್ಥಳದಲ್ಲಿ ಕೃತಕ ಬುದ್ಧಿವಂತಿಕೆಯ ಕಾರ್ಯವಿಧಾನಗಳನ್ನು ಸುಧಾರಿಸಲು ಮತ್ತು ಅಭಿವೃದ್ಧಿಗಾಗಿ ಹೊಸ ಸಿದ್ಧತೆಗಳನ್ನು ಕೈಗೊಳ್ಳುವ ಮೂಲಕ ಗ್ರಾಹಕರು, ಬ್ಯಾಂಕಿಂಗ್ ಮತ್ತು ಹಣಕಾಸು ಸೇವೆಗಳಿಗೆ ಪ್ರತಿನಿಧಿಗಳಿಂದ ಹೆಚ್ಚಿನ ಬದ್ಧತೆಯನ್ನು ಹೊಂದಿರುತ್ತಾರೆ ಎಂಬುದು ತಿಳಿದುಬಂದಿದೆ.*

*ಕೀಲಿ ಪದಗಳು : ಕೃತಕ ಬುದ್ಧಿವಂತಿಕೆ, ಬ್ಯಾಂಕಿಂಗ್, ಮತ್ತು ಗ್ರಾಹಕರತೃಪ್ತಿ.*

## ಪೀಠಿಕೆ

ಕೃತಕ ಬುದ್ಧಿವಂತಿಕೆ (AI) ಎನ್ನುವುದು ಕಂಪ್ಯೂಟರ್ ವಿಜ್ಞಾನದ ಒಂದು ಶಾಖೆಯಾಗಿದ್ದು, ಇದು ದೃಷ್ಟಿಗೋಚರ ಗ್ರಹಿಕೆ, ಭಾಷೆ ಗುರುತಿಸುವಿಕೆ, ನಿರ್ಧಾರ–ಮಾಡುವಿಕೆ ಮತ್ತು ಭಾಷಾ ಅನುವಾದದಂತಹ ಮಾನವ ಬುದ್ಧಿವಂತಿಕೆಗೆ ಅಗತ್ಯವಿರುವ ಕಾರ್ಯಗಳನ್ನು ನಿರ್ವಹಿಸಬಲ್ಲ ಬುದ್ಧಿವಂತ ಯಂತ್ರಗಳ ಅಭಿವೃದ್ಧಿಯ ಮೇಲೆ ಕೇಂದ್ರೀಕರಿಸುತ್ತದೆ. ಇತ್ತೀಚಿಗೆ ಬ್ಯಾಂಕಿಂಗ್ ವಲಯದಲ್ಲಿ ಕೃತಕ ಬುದ್ಧಿವಂತಿಕೆಯ ಬಳಕೆ ಹೆಚ್ಚು ಪ್ರಚಲಿತವಾಗಿದೆ. ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕೃತಕ ಬುದ್ಧಿವಂತಿಕೆಯನ್ನು ಪ್ರಾಥಮಿಕ ಅಪ್ಲಿಕೇಶನ್‌ಗಳ ಬಳಕೆ, ಖಾತೆ ತೆರೆಯುವಿಕೆ, ಠೇವಣಿ, ಉಳಿತಾಯ, ಸಾಲಗಳು, ಗೂಗಲ್ ಪೇ, ಫೋನ್ ಪೇ, ವಂಚನೆಯ ಪತ್ತೆ ಮತ್ತು ತಡೆಗಟ್ಟುವಿಕೆಯ ಕಾರ್ಯವನ್ನು ಮಾಡುತ್ತದೆ. ಕೃತಕ ಬುದ್ಧಿವಂತಿಕೆಯ ಅಲ್ಗಾರಿದಮ್‌ಗಳು ನೈಜ ಸಮಯದಲ್ಲಿ ಬೃಹತ್ ಪ್ರಮಾಣದ ವಹಿವಾಟಿನ ಮಾಹಿತಿಯನ್ನು ವಿಶ್ಲೇಷಿಸಬಹುದು ಮತ್ತು ವಂಚನೆಯನ್ನು ಸೂಚಿಸುವ ಅನುಮಾನಾಸ್ಪದ ಚಟುವಟಿಕೆಯನ್ನು ಗುರುತಿಸಿ ನಿಯಂತ್ರಿಸಬಹುದು. ಇದು ಬ್ಯಾಂಕ್‌ಗಳಲ್ಲಿ ನಡೆಯುವ ವಂಚನೆಯ ವಹಿವಾಟುಗಳು ಸಂಭವಿಸುವ ಮೊದಲು ತಡೆಯಲು ಸಹಾಯ ಮಾಡುತ್ತದೆ. ಬ್ಯಾಂಕ್‌ಗಳಲ್ಲಿನ ಖಾತೆದಾರರಿಗೆ ಹಣಕಾಸಿನ ನಷ್ಟದ ಅಪಾಯವನ್ನು ಕಡಿಮೆ ಮಾಡಲು ನೆರವಾಗುತ್ತದೆ.

ಬ್ಯಾಂಕಿಂಗ್ ವಲಯದಲ್ಲಿ ಗ್ರಾಹಕರ ಸೇವೆಯನ್ನು ಸುಧಾರಿಸಲು ಕೃತಕ ಬುದ್ಧಿವಂತಿಕೆಯುನ್ನು ಸಹ ಬಳಸಬಹುದು. ಕೃತಕ ಬುದ್ಧಿವಂತಿಕೆಯಿಂದ ಚಾಲಿತವಾಗಿರುವ ಸಂದೇಶಗಳ ಮೂಲಕ (ಚಾಟ್‌ಬಾಟ್) ಸರಳವಾದ ಗ್ರಾಹಕರ ಪ್ರಶ್ನೆಗಳನ್ನು ನಿಭಾಯಿಸಬಹುದು ಮತ್ತು ಹಣವನ್ನು ವರ್ಗಾಯಿಸುವುದು ಅಥವಾ ಖಾತೆಯಲ್ಲಿರುವ ಹಣದ ಮೊತ್ತವನ್ನು ಪರಿಶೀಲಿಸುವಂತಹ ಮೂಲಭೂತ ಬ್ಯಾಂಕಿಂಗ್ ಕಾರ್ಯಗಳಿಗೆ ಸಹಾಯವನ್ನು ಒದಗಿಸುತ್ತದೆ. ಕೃತಕ ಬುದ್ಧಿವಂತಿಕೆಯು ಬ್ಯಾಂಕ್‌ಗಳು ತಮ್ಮ ಕೆಲಸದ ಹೊರೆಯನ್ನು ಕಡಿಮೆ ಮಾಡಲು, ತ್ವರಿತ ಮತ್ತು ಪರಿಣಾಮಕಾರಿ ಸೇವೆಯನ್ನು ಒದಗಿಸುವ ಮೂಲಕ ಗ್ರಾಹಕರ ತೃಪ್ತಿಯನ್ನು ಸುಧಾರಿಸಲು ಸಹಾಯ ಮಾಡುತ್ತದೆ.

ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕೃತಕ ಬುದ್ಧಿವಂತಿಕೆಯು ಪ್ರಭಾವ ಬೀರುವ ಮತ್ತೊಂದು ಕ್ಷೇತ್ರವೆಂದರೆ ಸಾಲ ಸೌಲಭ್ಯವಾಗಿದೆ. ಅದರಲ್ಲಿಯು ಹೆಚ್ಚು ನಿಖರವಾದ ಮತ್ತು ವಿಶ್ವಾಸಾರ್ಹ ಸಾಲ ಸೌಲಭ್ಯಗಳನ್ನು ಒದಗಿಸಲು ಕೃತಕ ಬುದ್ಧಿವಂತಿಕೆಯಿಂದ, ಆದಾಯ ಮತ್ತು ಉದ್ಯೋಗದ ಸ್ಥಿತಿ ಸೇರಿದಂತೆ ಬೃಹತ್ ಪ್ರಮಾಣದ ಮಾಹಿತಿಯನ್ನು ವಿಶ್ಲೇಷಿಸಲು ನೆರವಾಗುವುದರ ಜೊತೆಗೆ, ಬ್ಯಾಂಕ್‌ಗಳಿಗೆ ಉತ್ತಮ ಸಾಲ ನಿರ್ಧಾರಗಳನ್ನು ತೆಗೆದುಕೊಳ್ಳಲು ಹಾಗೂ ಅಪಾಯಗಳನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ.

ಒಟ್ಟಾರೆಯಾಗಿ, ಬ್ಯಾಂಕಿಂಗ್ ವಲಯದಲ್ಲಿ ಕೃತಕ ಬುದ್ಧಿವಂತಿಕೆ ಬಳಕೆಯು ದಕ್ಷತೆಯನ್ನು ಸುಧಾರಿಸಲು, ವೆಚ್ಚವನ್ನು ಕಡಿಮೆ ಮಾಡಲು ಮತ್ತು ಗ್ರಾಹಕ ಸೇವೆಯನ್ನು ಹೆಚ್ಚಿಸುವ ಸಾಮರ್ಥ್ಯವನ್ನು ಹೊಂದಿದೆ.ಆದರೆ, ಕೃತಕ ಬುದ್ಧಿವಂತಿಕೆಯು ಮಾಹಿತಿಯ ಗೌಪ್ಯತೆ ಮತ್ತು ಸುರಕ್ಷತೆಯ ಬಗ್ಗೆ ಕಳವಳವನ್ನು ಉಂಟುಮಾಡುತ್ತದೆ. ಜೊತೆಗೆ ಕೆಲವು ಕಾರ್ಯಗಳ ಯಾಂತ್ರೀಕೃತಗೊಂಡ ಪರಿಣಾಮದಿಂದಾಗಿ ಉದ್ಯೋಗದ ನಷ್ಟಗಳು ಸಂಭವಿಸುತ್ತವೆ. ಅಂತೆಯೇ, ಕೃತಕ ಬುದ್ಧಿವಂತಿಕೆ ಅಳವಡಿಕೆಯ ನೈತಿಕ ಪರಿಣಾಮಗಳನ್ನು ಎಚ್ಚರಿಕೆಯಿಂದ ಪರಿಗಣಿಸಲು ಮತ್ತು ತಮ್ಮ ಗ್ರಾಹಕರು ಮತ್ತು ಉದ್ಯೋಗಿಗಳೆರಡನ್ನೂ ರಕ್ಷಿಸಲು ಸೂಕ್ತವಾದ ಸುರಕ್ಷತೆಗಳನ್ನು ಖಚಿತಪಡಿಸಿಕೊಳ್ಳುವುದು ಬ್ಯಾಂಕುಗಳ ಮುಖ್ಯವಾದ ಕಾರ್ಯವಾಗಿದೆ.

## ಕೃತಕ ಬುದ್ಧಿವಂತಿಕೆಯ ಅರ್ಥ

ಕೃತಕ ಬುದ್ಧಿವಂತಿಕೆ (AI) ಎನ್ನುವುದು ಮನುಷ್ಯರಂತೆ ಯೋಚಿಸಲು ಮತ್ತು ಕಾರ್ಯನಿರ್ವಹಿಸಲು ಪ್ರೋಗ್ರಾಮ್‌ಗಳನ್ನು ಅನ್ವಹಿಸಲಾದ ಯಂತ್ರಗಳಲ್ಲಿನ ಮಾನವ ಬುದ್ಧಿಮತ್ತೆಯ ಪಾತ್ರವನ್ನು ಸೂಚಿಸುತ್ತದೆ.

ISSN : 2249-2429 ಸಂಶೋಧನೆ RNI REG.NO.KARKAN/2011/38712

ಕೃತಕ ಬುದ್ಧಿವಂತಿಕೆಯು ಅಲ್ಗಾರಿದಮ್‌ಗಳು ಮತ್ತು ಮಾದರಿಗಳ ಅಭಿವೃದ್ಧಿಯನ್ನು ಒಳಗೊಂಡಿರುತ್ತದೆ. ಅದು ಸಾಮಾನ್ಯವಾಗಿ ಮಾನವ ಬುದ್ಧಿವಂತಿಕೆಯ ಅಗತ್ಯವಿರುವ ಕಾರ್ಯಗಳನ್ನು ನಿರ್ವಹಿಸಲು ಯಂತ್ರಗಳನ್ನು ಸಕ್ರಿಯಗೊಳಿಸುತ್ತದೆ. ಉದಾಹರಣೆಗೆ : ದೃಶ್ಯಗ್ರಹಿಕೆ, ಭಾಷೆ ಗುರುತಿಸುವಿಕೆ, ನಿರ್ಧಾರ–ಮಾಡುವಿಕೆ ಮತ್ತು ಭಾಷಾ ಅನುವಾದ ಇತ್ಯಾದಿ. ಕೃತಕ ಬುದ್ಧಿವಂತಿಕೆಯ ವ್ಯವಸ್ಥೆಗಳು ಸಾಮಾನ್ಯವಾಗಿ ಹೆಚ್ಚಿನ ಪ್ರಮಾಣದ ಮಾಹಿತಿಯನ್ನು ಸಂಸ್ಕರಿಸಿ, ಮಾದರಿಗಳು ಮತ್ತು ಪ್ರವೃತ್ತಿಗಳಿಂದ ಕಲಿಯುವ ಮೂಲಕ ನಿರ್ಧಾರಗಳನ್ನು ಅಥವಾ ಕ್ರಮಗಳನ್ನು ತೆಗೆದುಕೊಳ್ಳಲು ಕೃತಕ ಬುದ್ಧಿವಂತಿಕೆಯ ಜ್ಞಾನವನ್ನು ಬಳಸುವ ಮೂಲಕ ಕಾರ್ಯ ನಿರ್ವಹಿಸುತ್ತವೆ. ಯಂತ್ರ ಕಲಿಕೆ, ಭಾಷಾ ಸಂಸ್ಕರಣೆ, ಕಂಪ್ಯೂಟರ್ ದೃಷ್ಟಿ ಮತ್ತು ರೊಬೊಟಿಕ್ಸ್ ಸೇರಿದಂತೆ ಕೃತಕ ಬುದ್ಧಿವಂತಿಕೆ ಒಳಗೆ ಹಲವಾರು ಉಪಕ್ಷೇತ್ರಗಳಿವೆ. ಆರೋಗ್ಯ, ರಕ್ಷಣೆ, ಸಾರಿಗೆ, ಶಿಕ್ಷಣ, ಬ್ಯಾಂಕಿಂಗ್, ಸಮೂಹ ಮಾಧ್ಯಮ, ಆಟೋಮೇಟೆಡ್ ಕೈಗಾರಿಕೆಗಳಲ್ಲಿ ಕ್ರಾಂತಿಗೊಳಿಸುವ ಸಾಮರ್ಥ್ಯವನ್ನು ಕೃತಕ ಬುದ್ಧಿವಂತಿಕೆಯು ಹೊಂದಿದೆ. ಕೃತಕ ಬುದ್ಧಿವಂತಿಕೆಯ ಕಾರ್ಯಗಳು ನಿರುದ್ಯೋಗವನ್ನು, ಆನ್‌ಲೈನ್ ಮೋಸ ವಂಚನೆಗಳು ಹೆಚ್ಚಾಗುತ್ತಿರುವುದು ಕಳವಳವನ್ನು ಉಂಟುಮಾಡುತ್ತಿದೆ.

## ಸಾಹಿತ್ಯಾವಲೋಕನ

ಬ್ಯಾಂಕಿಂಗ್ ವಲಯದಲ್ಲಿ ಕೃತಕ ಬುದ್ಧಿವಂತಿಕೆಯ ಬಳಕೆಯಿಂದಾಗುವ ಪ್ರಯೋಜನಗಳು ಮತ್ತು ಸವಾಲುಗಳನ್ನು ಅಧ್ಯಯನ ಮಾಡಲು ಈ ಕೆಳಕಂಡ ಸಾಹಿತ್ಯಾವಲೋಕನಗಳನ್ನು ಪರಾಮರ್ಶಿಸಲಾಗಿದೆ.

**ನವಲೀನ್‌ಕುಮಾರ್(2020)** ಈ ಇತ್ತೀಚಿನ ದಿನಗಳಲ್ಲಿ ಕೃತಕ ಬುದ್ಧಿವಂತಿಕೆಯ ಕಾರ್ಯಚಟುವಟಿಕೆಗಳ ಕುರಿತು ನಡೆಸಿದ ಅಧ್ಯಯನದಲ್ಲಿ ಆನ್‌ಲೈನ್ ಬ್ಯಾಕಿಂಗ್ ವಲಯದಲ್ಲಿ ಮೋಸ ವಂಚನೆಯನ್ನು ಪತ್ತೆ ಹಚ್ಚಲು ಮತ್ತು ತಡೆಗಟ್ಟಲು ಕೃತಕ ಬುದ್ಧಿವಂತಿಕೆ ಪರಿಣಾಮಕಾರಿ ಪಾತ್ರವಹಿಸುತ್ತಿದೆ ಎಂದು ತಿಳಿದುಬಂದಿದೆ. ಅಲ್ಲದೆ, ಯಾಂತ್ರಿಕ ಕಲಿಕೆಯ ಅಲ್ಗಾರಿದಮ್‌ಗಳು ಹೆಚ್ಚಿನ ನಿಖರತೆಯೊಂದಿಗೆ ವಂಚನೆಯನ್ನು ಪತ್ತೆಹಚ್ಚಲು ಸಮರ್ಥವಾಗಿವೆ ಎಂಬುದು ವ್ಯಕ್ತವಾಗಿದೆ. ಸಾಂಪ್ರದಾಯಿಕ ನಿಯಮ–ಆಧಾರಿತ ವ್ಯವಸ್ಥೆಗಳಿಗೆ ಹೋಲಿಸಿದರೆ ಧನಾತ್ಮಕ ಮತ್ತು ತಪ್ಪು ನಿರಾಕರಣೆಗಳ ಸಂಖ್ಯೆಯು ಕಡಿಮೆಯಾಗುತ್ತಿರುವುದು ಈ ಅಧ್ಯಯನದಿಂದ ತಿಳಿದುಬಂದಿದೆ.

**ವಾಂಗ್ (2019)** ರವರ ಪ್ರಕಾರ ಬ್ಯಾಂಕಿಂಗ್ ವಲಯದಲ್ಲಿ ಗ್ರಾಹಕರ ಸೇವೆಯನ್ನು ಸುಧಾರಿಸಲು ಕೃತಕ ಬುದ್ಧಿವಂತಿಕೆಯು ಚಾಟ್‌ಬಾಟ್‌ಗಳಲ್ಲಿ ಜನಪ್ರಿಯ ಸಾಧನವಾಗಿ ಹೊರಹೊಮ್ಮವುದರ ಬಗ್ಗೆ ಚರ್ಚಿಸಲಾಗಿದೆ. ಈ ಚಾಟ್‌ಬಾಟ್‌ಗಳು ಗ್ರಾಹಕರ ಪ್ರಶ್ನೆಗಳಿಗೆ ಉತ್ತರಿಸಲು, ಕಾಯುವ ಸಮಯವನ್ನು ಕಡಿಮೆ ಮಾಡಲು ಮತ್ತು ಒಟ್ಟಾರೆ ಗ್ರಾಹಕರ ತೃಪ್ತಿಯನ್ನು ಸುಧಾರಿಸಲು ಪರಿಣಾಮಕಾರಿಯಾಗಿರುವುದು ಈ ಅಧ್ಯಯನದಿಂದ ವ್ಯಕ್ತವಾಗಿದೆ.

**ಓಜಾ ಮತ್ತು ಇತರರು (2021)** ಇವರ ಅಧ್ಯಯನದ ಮೂಲಕ ತಿಳಿದುಬಂದ ಅಂಶವೆಂದರೆ, ಉತ್ತಮ ಕ್ರೆಡಿಟ್ ಸ್ಕೋರಿಂಗ್, ಕೃತಕ ಬುದ್ಧಿವಂತಿಕೆಯ ಅಲ್ಗಾರಿದಮ್‌ಗಳು, ಸಾಲ ಸೌಲಭ್ಯಗಳ ನಿಖರತೆಯನ್ನು ಸುಧಾರಿಸುವಲ್ಲಿ ಭರವಸೆಯನ್ನು ತೋರಿಸಿವೆ. ಇದು ಬ್ಯಾಂಕ್‌ಗಳು ಉತ್ತಮ ಸಾಲ ನಿರ್ಧಾರಗಳನ್ನು ಮಾಡಲು ಸಹಾಯ ಮಾಡುತ್ತದೆ. ಯಂತ್ರ ಕಲಿಕೆಯ ಮಾದರಿಗಳು ನಿಖರತೆ ಮತ್ತು ವಿಶ್ವಾಸಾರ್ಹತೆಯ ವಿಷಯದಲ್ಲಿ ಸಾಂಪ್ರದಾಯಿಕ ಕ್ರೆಡಿಟ್ ಸ್ಕೋರಿಂಗ್ ವಿಧಾನಗಳನ್ನು ಮೀರಿಸಿರುವುದು ಅಧ್ಯಯನದಿಂದ ತಿಳಿದುಬಂದಿದೆ.

**ನಾಸಿಫ್ ಮತ್ತು ಇತರರು (2021)** ಬ್ಯಾಂಕಿಂಗ್‌ನಲ್ಲಿ ಕೃತಕ ಬುದ್ಧಿವಂತಿಕೆಯ ಬಳಕೆಯು ಹಲವಾರು ನೈತಿಕ ಮತ್ತು ಗೌಪ್ಯತೆಯನ್ನು ಕಾಪಾಡುವಲ್ಲಿ ಕಾಳಜಿ ವಹಿಸುತ್ತದೆ. ಉದಾಹರಣೆಗೆ, ನಿರ್ಧಾರ ತೆಗೆದುಕೊಳ್ಳುವಲ್ಲಿ ಪಕ್ಷಪಾತದ ಸಂಭಾವ್ಯತೆ ಮತ್ತು ಗ್ರಾಹಕರ ಮಾಹಿತಿಯ ಸುರಕ್ಷತೆ ಇತ್ಯಾದಿ. ಈ ಕಾಳಜಿಗಳನ್ನು ಪರಿಹರಿಸಲು ಕೃತಕ ಬುದ್ಧಿವಂತಿಕೆಯ ಅನುಷ್ಠಾನದಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆಯ ಪ್ರಾಮುಖ್ಯತೆಯನ್ನು ಒತ್ತಿಹೇಳಿದೆ.

**ಭುವನ ಮತ್ತು ಇತರರು (2021)** ಬ್ಯಾಂಕಿಂಗ್ ವಲಯದಲ್ಲಿ ಕೃತಕ ಬುದ್ಧಿವಂತಿಕೆಯನ್ನು ಕಾರ್ಯಗತಗೊಳಿಸುವುದರಿಂದ ನುರಿತ ಸಿಬ್ಬಂದಿಯ ಅಗತ್ಯತೆ ಮತ್ತು ಸಾಂಸ್ಥಿಕ ಸಂಸ್ಕೃತಿಯಲ್ಲಿನ ಬದಲಾವಣೆಗಳಂತಹ ಸಾಂಸ್ಥಿಕ ಸವಾಲುಗಳನ್ನು ಸಹ ಎದುರಿಸಬಹುದು. ಸ್ಪಷ್ಟದೃಷ್ಟಿ, ನಾಯಕತ್ವ ಬೆಂಬಲ ಮತ್ತು ಮಧ್ಯಸ್ಥಗಾರರ ನಿರ್ಣಯಗಳನ್ನು ಒಳಗೊಂಡಂತೆ ಕೃತಕ ಬುದ್ಧಿವಂತಿಕೆ ಅನುಷ್ಠಾನಕ್ಕೆ ಕಾರ್ಯತಂತ್ರದ ವಿಧಾನದ ಅಗತ್ಯವನ್ನು ಮತ್ತು ಸಾಂಸ್ಥಿಕ ಸವಾಲುಗಳನ್ನು ಎದುರಿಸುತ್ತಿದೆ ಎಂಬುದು ಪ್ರಸ್ತುತ ಅಧ್ಯಯನದಿಂದ ವ್ಯಕ್ತವಾಗಿದೆ.

ಒಟ್ಟಾರೆಯಾಗಿ, ಈ ಮೇಲಿನ ಸಾಹಿತ್ಯಾವಲೋಕನವನ್ನು ಪರಿಶೀಲಿಸಿದಾಗ, ಕೃತಕ ಬುದ್ಧಿವಂತಿಕೆಯು ಬ್ಯಾಂಕಿಂಗ್ ವಲಯಕ್ಕೆ ಗಮನಾರ್ಹ ಪ್ರಯೋಜನಗಳನ್ನು ತರುವ ಸಾಮರ್ಥ್ಯವನ್ನು ಹೊಂದಿರುವುದರ ಬಗ್ಗೆ ಸೂಚಿಸುತ್ತದೆ. ಆದರೆ, ಅದರ ಅನುಷ್ಠಾನಕ್ಕೆ ನೈತಿಕ, ಸಾಂಸ್ಥಿಕ ಮತ್ತು ತಾಂತ್ರಿಕ ಅಂಶಗಳನ್ನು ಎಚ್ಚರಿಕೆಯಿಂದ ಪರಿಗಣಿಸುವ ಅಗತ್ಯವಿದೆ.

## ಅಧ್ಯಯನದ ಉದ್ದೇಶ

- ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕೃತಕ ಬುದ್ಧಿವಂತಿಕೆಯ ಪಾತ್ರವನ್ನು ವಿವರಿಸುವುದು.
- ಕೃತಕ ಬುದ್ಧಿವಂತಿಕೆಯ ಬಳಕೆಯಿಂದಾಗುವ ಅನುಕೂಲಗಳು ಮತ್ತು ಅನಾನುಕೂಲಗಳನ್ನು ಅಧ್ಯಯನ ಮಾಡುವುದು.

## ವಿಧಾನಶಾಸ್ತ್ರ

ಪ್ರಸ್ತುತ ಅಧ್ಯಯನ ವಿಷಯವು ಪ್ರಾಥಮಿಕ ಮತ್ತು ಮಾಧ್ಯಮಿಕ ಮೂಲಗಳಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದ್ದು, ವಿವರಣಾತ್ಮಕ ಸಂಶೋಧನೆಯ ಆಧಾರದ ವಿಶ್ಲೇಷಿಸಲಾಗಿದೆ. ಬ್ಯಾಂಕಿಂಗ್ ಮತ್ತು ಹಣಕಾಸು ಸೇವೆಗಳಲ್ಲಿ ಕೃತಕ ಬುದ್ಧಿಮತ್ತೆಯ ಬಳಕೆಯ ಕುರಿತು ವಿವಿಧ ಸಮೀಕ್ಷೆಗಳ ಮೂಲಕ ಪ್ರಾಥಮಿಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಪ್ರಾಥಮಿಕ ಮಾಹಿತಿಯ ಸಂಗ್ರಹಣೆಗಾಗಿ ಪ್ರಶ್ನಾವಳಿಯನ್ನು ಬಳಸಲಾಗಿದೆ ಮತ್ತು ಯಾದೃಚ್ಛಿಕ ಮಾದರಿಯ ವಿಧಾನವನ್ನು ಬಳಸಿ 40 ಮಾಹಿತಿದಾರರ ಮೂಲಕ ಮಾಹಿತಿಯನ್ನು ಸಂಗ್ರಹ ಮಾಡಲಾಯಿತು. ಜೊತೆಗೆ ಮಾಧ್ಯಮಿಕ ಮೂಲಗಳಾದ ಅಂತರ್‌ಜಾಲ, ಇ–ನಿಯತಕಾಲಿಕೆಗಳು, ಸಂಶೋಧನಾ ಪ್ರಬಂಧಗಳು, ಇ–ಪುಸ್ತಕಗಳು, ಪತ್ರಿಕೆಗಳು ಇತ್ಯಾದಿಗಳನ್ನು ಒಳಗೊಂಡಿರುವ ಇಂಟರ್ನೆಟ್ ಮೂಲಕ ಮಾಹಿತಿಯನ್ನು ಸಂಗ್ರಹಣೆ ಮಾಡಲಾಗಿದೆ.

## ಬ್ಯಾಂಕಿಂಗ್ ವಲಯದಲ್ಲಿ ಕೃತಕ ಬುದ್ಧಿವಂತಿಕೆಯಪಾತ್ರ

ಕೃತಕ ಬುದ್ಧಿವಂತಿಕೆಯ ತಂತ್ರಜ್ಞಾನವು ಬ್ಯಾಂಕಿಂಗ್ ಕ್ಷೇತ್ರದಲ್ಲಿ ಹೆಚ್ಚು ಮಹತ್ವದ ಪಾತ್ರವನ್ನು ವಹಿಸುತ್ತಿದೆ. ಬ್ಯಾಂಕಿಂಗ್‌ನಲ್ಲಿ ಕೃತಕ ಬುದ್ಧಿವಂತಿಕೆಯನ್ನು ಬಳಸುವ ಕೆಲವು ವಿಧಾನಗಳನ್ನು ಈ ಮುಂದಿನಂತೆ ತಿಳಿಸಲಾಗಿದೆ.

**ವಂಚನೆಯ ಪತ್ತೆ ಮತ್ತು ತಡೆಗಟ್ಟುವಿಕೆ :** ಅಸಾಮಾನ್ಯ ಮಾದರಿಗಳನ್ನು ಗುರುತಿಸಲು ಮತ್ತು ಸಂಭಾವ್ಯ ವಂಚನೆಯನ್ನು ಪತ್ತೆ ಹಚ್ಚಲು ಕೃತಕ ಬುದ್ಧಿವಂತಿಕೆಯ ಅಲ್ಗಾರಿದಮ್‌ಗಳು ನೈಜ ಸಮಯದಲ್ಲಿ ಹೆಚ್ಚಿನ

ISSN : 2249-2429 ಸಂಶೋಧನೆ RNI REG.NO.KARKAN/2011/38712

ಪ್ರಮಾಣದ ಗ್ರಾಹಕರ ಮಾಹಿತಿಯನ್ನು ವಿಶ್ಲೇಷಿಸಬಹುದು. ಇದು ಬ್ಯಾಂಕ್‌ಗಳಿಗೆ ಮೋಸದ ಚಟುವಟಿಕೆಗಳನ್ನು ತಡೆಯಲು ಮತ್ತು ತಮ್ಮ ಗ್ರಾಹಕರ ಆಸ್ತಿಗಳನ್ನು ರಕ್ಷಿಸಲು ಸಹಾಯ ಮಾಡುತ್ತದೆ.

**ಗ್ರಾಹಕರ ಸೇವೆ :** ಕೃತಕ ಬುದ್ಧಿವಂತಿಕೆಯು ಚಾಲಿತ ಚಾಟ್‌ಬಾಟ್‌ಗಳು ಮತ್ತು ಔಪಚಾರಿಕವಾಗಿ ಗ್ರಾಹಕರಿಗೆ ಗಡಿಯಾರದ ಸುತ್ತತ್ವರಿತ ಮತ್ತು ವೈಯಕ್ತಿಕರಿಸಿದ ಸಹಾಯವನ್ನು ಒದಗಿಸಬಹುದು. ಈ ಚಾಟ್‌ಬಾಟ್‌ಗಳು ಬ್ಯಾಂಕಿಂಗ್ ವಿಷಯಕ್ಕೆ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರಿಸಲು ನೆರವಾಗುತ್ತದೆ ಹಾಗೂ ಗ್ರಾಹಕರ ಬ್ಯಾಂಕಿಂಗ್ ವಹಿವಾಟುಗಳಿಗೆ ಸಂಬಂಧಿಸಿದ ಸಂದೇಹಗಳನ್ನು ನಿವಾರಿಸಲು ನೆರವಾಗುತ್ತದೆ.

**ಅಪಾಯದ ನಿರ್ವಹಣೆ :** ಬೃಹತ್ ಮಾಹಿತಿಯನ್ನು ವಿಶ್ಲೇಷಿಸುವ ಮತ್ತು ಸಂಭಾವ್ಯ ಅಪಾಯಗಳನ್ನು ಗುರುತಿಸುವ ಮೂಲಕ ಬ್ಯಾಂಕ್‌ಗಳಿಗೆ ಅಪಾಯಗಳನ್ನು ಹೆಚ್ಚು ನಿಖರವಾಗಿ ನಿರ್ಣಯಿಸಲು ಮತ್ತು ನಿರ್ವಹಿಸಲು ಕೃತಕ ಬುದ್ಧಿವಂತಿಕೆಯು ಸಹಾಯ ಮಾಡುತ್ತದೆ. ಸಂದಾಯದ ಅಪಾಯವನ್ನು ನಿರ್ಣಯಿಸುವ ಮೂಲಕ ಹಾಗೂ ದರಗಳನ್ನು ಊಹಿಸುವ ಮೂಲಕ ಸಾಲದ ನಿರ್ಧಾರಗಳನ್ನು ಅತ್ಯುತ್ತಮವಾಗಿಸಲು ಕೃತಕ ಬುದ್ಧಿವಂತಿಕೆಯನ್ನು ಬಳಸಲಾಗುತ್ತಿದೆ.

**ವೈಯಕ್ತೀಕರಿಸಿದ ಬ್ಯಾಂಕಿಂಗ್ ಸೇವೆಗಳು** : ಬ್ಯಾಂಕ್‌ಗಳು ತಮ್ಮ ಗ್ರಾಹಕರ ಅಗತ್ಯತೆಗಳು ಮತ್ತು ಆದ್ಯತೆಗಳನ್ನು ಅರ್ಥಮಾಡಿಕೊಳ್ಳಲು ಹಣಕಾಸು ಮಾಹಿತಿಯನ್ನು ವಿಶ್ಲೇಷಿಸುವ ಮೂಲಕ ವೈಯಕ್ತಿಕಗೊಳಿಸಿದ ಬ್ಯಾಂಕಿಂಗ್ ಸೇವೆಗಳನ್ನು ಒದಗಿಸಲು ಕೃತಕ ಬುದ್ಧಿವಂತಿಕೆಯು ಸಹಾಯ ಮಾಡುತ್ತದೆ. ಜೊತೆಗೆ, ಸೂಕ್ತವಾದ ಉತ್ಪನ್ನ ಶಿಫಾರಸುಗಳು, ವೈಯಕ್ತಿಕರಿಸಿದ ಮಾರ್ಕೆಟಿಂಗ್ ಮತ್ತು ಉದ್ದೇಶಿತ ಪ್ರಚಾರಗಳನ್ನು ನೀಡಲು ಬ್ಯಾಂಕ್‌ಗಳ ಮಾಹಿತಿಯನ್ನು ಬಳಸಲು ಉಪಯುಕ್ತವಾಗಿದೆ.

**ಅನುಸರಣೆ ಮತ್ತು ನಿಯಂತ್ರಕ ಅಗತ್ಯತೆಗಳು :** ಅನುಮಾನಾಸ್ಪದ ವಹಿವಾಟುಗಳ ಪತ್ತೆಯನ್ನು ಸ್ವಯಂ ಚಾಲಿತಗೊಳಿಸುವ ಮೂಲಕ ಮತ್ತು ಸಂಭಾವ್ಯ ಮನಿ ಲಾಂಡರಿಂಗ್ ಚಟುವಟಿಕೆಗಳನ್ನು ಫ್ಲ್ಯಾಗ್ ಮಾಡುವ ಮೂಲಕ ಬ್ಯಾಂಕ್‌ಗಳಿಗೆ ನಿಯಮಾವಳಿಗಳನ್ನು ಅನುಸರಿಸಲು ಕೃತಕ ಬುದ್ಧಿವಂತಿಕೆಯು ಸಹಾಯ ಮಾಡುತ್ತದೆ.

ಬ್ಯಾಂಕಿಂಗ್‌ನ ಹಣಕಾಸು ವ್ಯವಹಾರಗಳಲ್ಲಿ ಕೃತಕ ಬುದ್ಧಿವಂತಿಕೆಯ ಬಳಕೆಯು ದಕ್ಷತೆಯನ್ನು ಸುಧಾರಿಸುತ್ತದೆ, ವೆಚ್ಚವನ್ನು ಕಡಿಮೆ ಮಾಡುತ್ತದೆ ಮತು ಗ್ರಾಹಕರ ಅನುಭವವನ್ನು ಹೆಚ್ಚಿಸುತ್ತದೆ. ಮುಂದುವರೆದಂತೆ, ಇದುಮಾಹಿತಿಯನ್ನು ಗೌಪ್ಯತೆ, ಭದ್ರತೆ ಮತ್ತು ಉದ್ಯೋಗ ಸ್ಥಳಾಂತರದ ಬಗ್ಗೆ ಕಳವಳವನ್ನು ಉಂಟುಮಾಡುತ್ತದೆ.

| ಕೃತಕ ಬುದ್ಧಿವಂತಿಕೆಯ ಉಪಯುಕ್ತವಾದ ಅಪ್ಲಿಕೇಶನ್ಸ್ | ಹೌದು | | ಇಲ್ಲ | | ಒಟ್ಟು | |
|---|---|---|---|---|---|---|
| | ಆವೃತ್ತಿ | ಶೇಕಡವಾರು | ಆವೃತ್ತಿ | ಶೇಕಡವಾರು | ಆವೃತ್ತಿ | ಶೇಕಡವಾರು |
| ಚಾಟ್‌ಬೋಟ್ಸ್ | 36 | 90 | 04 | 10 | 40 | 100 |
| ವಾಯ್ಸ್ ಅಸಿಸ್ಟೆಂಟ್ಸ್ | 19 | 47.5 | 21 | 52.5 | 40 | 100 |
| ಅಥೆಂಟಿಕೇಷನ್ ಮತ್ತು ಬಯೋಮೆಟ್ರಿಕ್ಸ | 26 | 65 | 14 | 35 | 40 | 100 |
| ಫ್ರಾಡ್‌ಡಿಟೆಕ್ಷನ್ ಮತ್ತು ಪ್ರಿವೆಂನ್ಷನ್ | 37 | 92.5 | 3 | 7.5 | 40 | 100 |
| ಕೆವೈಸಿ/ಎಎಮ್‌ಎಲ್ | 39 | 97.5 | 01 | 2.5 | 40 | 100 |
| ಸ್ಮಾರ್ಟ ವಾಲ್ಲೇಟ್ | 27 | 67.5 | 13 | 32.5 | 40 | 100 |

ಬ್ಯಾಂಕಿಂಗ್ ಮತ್ತು ಹಣಕಾಸು ಸೇವೆಗಳಲ್ಲಿ ಕೃತಕ ಬುದ್ಧಿವಂತಿಕೆಯ ಉಪಯುಕ್ತತೆ ಹಾಗೂ ಅಪ್ಲಿಕೇಶನ್‌ಗಳನ್ನು ಮೌಲ್ಯಮಾಪನ ಮಾಡುವ ಆವರ್ತನ ವಿಶ್ಲೇಷಣೆಗೆ ಸಂಬಂಧಿಸಿದಂತೆ ಶೇಕಡ 90% ಮಾಹಿತಿದಾರರು ಕೃತಕ ಬುದ್ಧಿವಂತಿಕೆಯನ್ನು ಚಾಟ್‌ಬಾಟ್ ಅಪ್ಲಿಕೇಶನ್‌ಗಳು ಉಪಯುಕ್ತ ವೆಂದು ಮತ್ತು ಶೇಕಡ 52.5% ಉಪಯುಕ್ತವಲ್ಲ ಎಂದು ತಿಳಿಸಿದ್ದಾರೆ. ಶೇಕಡ 65% ಮಾಹಿತಿದಾರರು ದೃಢೀಕರಣ ಮತ್ತು ಬಯೋಮೆಟ್ರಿಕ್ಸ್ ತುಂಬಾ ಉಪಯುಕ್ತವಾಗಿದೆ ಎಂದು ಹೇಳುತ್ತಾರೆ ಹಾಗೂ ಶೇಕಡ 92.5% ಮಾಹಿತಿದಾರರು ವಂಚನೆಯ ಪತ್ತೆ ಮತ್ತು ತಡೆಗಟ್ಟಲು ಹಾಗೂ ಮಾಹಿತಿಯನ್ನು ಸುರಕ್ಷಿತಗೊಳಿಸಲು ಬಳಸುತ್ತಿರುವುದು ತಿಳಿದುಬಂದಿದೆ. ಶೇಕಡ 97.5% ಮಾಹಿತಿದಾರರು KYC / AML ನ ದಾಖಲೆಗಳನ್ನು ಒದಗಿಸಲು ಮತ್ತು ಸಲ್ಲಿಸಲು ಇತರ ವಿವರಗಳನ್ನು ಒದಗಿಸಲು ತುಂಬಾ ಉಪಯುಕ್ತವಾಗಿದೆ ಎಂದರೆ, ಶೇಕಡ 67.5% ಮಾಹಿತಿದಾರರು ಈ ಪೀಳಿಗೆಯಲ್ಲಿ ಕೃತಕ ಬುದ್ಧಿವಂತಿಕೆಯಲ್ಲಿನ ಸ್ಮಾರ್ಟ್ ವಾಲೆಟ್ ಅಪ್ಲಿಕೇಶನ್‌ಗಳು ನಗದುರಹಿತ ವಹಿವಾಟುಗಳನ್ನು ನಿರ್ವಹಿಸುತ್ತವೆ ಎಂದು ಪ್ರಸ್ತುತ ಅಧ್ಯಯನದಿಂದ ವ್ಯಕ್ತವಾಗಿದೆ.

## ಕೃತಕ ಬುದ್ಧಿವಂತಿಕೆ ಮತ್ತು ಆರ್ಥಿಕ ಸೇರ್ಪಡೆ

ಹಣಕಾಸಿನ ಸೇರ್ಪಡೆಯು ಎಲ್ಲಾ ವ್ಯಕ್ತಿಗಳು ಮತ್ತು ಸಮುದಾಯಗಳಿಗೆ, ವಿಶೇಷವಾಗಿ ಸಾಂಪ್ರದಾಯಿಕ ಬ್ಯಾಂಕಿಂಗ್ ವ್ಯವಸ್ಥೆಯಿಂದ ವಂಚಿತರಾದವರಿಗೆ, ಬ್ಯಾಂಕಿಂಗ್, ವಿಮೆ ಮತ್ತು ಉಳಿತಾಯ ಸೇರಿದಂತೆ ಹಣಕಾಸಿನ ಸೇವೆಗಳ ಲಭ್ಯತೆ ಮತ್ತು ಪ್ರವೇಶವನ್ನು ಸೂಚಿಸುತ್ತದೆ. ಕೃತಕ ಬುದ್ಧಿವಂತಿಕೆಯು ಆರ್ಥಿಕ ಸೇರ್ಪಡೆಯನ್ನು ಸುಧಾರಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸುವ ಸಾಮರ್ಥ್ಯವನ್ನು ಹೊಂದಿದೆ ಹಾಗೂ ಕೃತಕ ಬುದ್ಧಿವಂತಿಕೆಯು ಸಹಾಯ ಮಾಡುವ ಕೆಲವು ವಿಧಾನಗಳ ಕುರಿತು ಈ ಕೆಳಕಂಡಂತೆ ತಿಳಿಸಲಾಗಿದೆ.

**ಕ್ರೆಡಿಟ್ ಸ್ಕೋರಿಂಗ್ :** ಸಾಲಗಾರನ ಕ್ರೆಡಿಟ್‌ಅರ್ಹತೆಯ ಹೆಚ್ಚು ನಿಖರವಾದ ಚಿತ್ರವನ್ನು ನೀಡಲು, ಸಾಮಾಜಿಕ ಮಾಧ್ಯಮ ಚಟುವಟಿಕೆ ಮತ್ತು ಮೊಬೈಲ್ ಫೋನ್ ಬಳಕೆಯಂತಹ ಸಾಂಪ್ರದಾಯಿಕವಲ್ಲದ ಮಾಹಿತಿ ಮೂಲಗಳನ್ನು ಕೃತಕ ಬುದ್ಧಿವಂತಿಕೆ ವಿಶ್ಲೇಷಿಸುತ್ತದೆ. ಇದು ಬ್ಯಾಂಕುಗಳು ಮತ್ತು ಇತರ ಹಣಕಾಸು ಸಂಸ್ಥೆಗಳು ಸಾಂಪ್ರದಾಯಿಕ ಸಂದಾಯದ ಇತಿಹಾಸವನ್ನು ಹೊಂದಿರದೇ ಕಡಿಮೆ ಸಮುದಾಯಗಳಿಗೆ ಸಾಲವನ್ನು ವಿಸ್ತರಿಸಲು ಸಹಾಯ ಮಾಡುತ್ತದೆ.

**ಚಾಟ್‌ಬಾಟ್‌ಗಳು :** ಕೃತಕ ಬುದ್ಧಿವಂತಿಕೆ ಚಾಲಿತ ಚಾಟ್‌ಬಾಟ್‌ಗಳು ವಿವಿಧ ಬ್ಯಾಂಕ್ ಶಾಖೆಗಳಲ್ಲಿ ಖಾತೆಗಳನ್ನು ಹೊಂದಿರದ ವ್ಯಕ್ತಿಗಳಿಗೆ ಗ್ರಾಹಕ ಸೇವೆ ಮತ್ತು ಬೆಂಬಲವನ್ನು ಒದಗಿಸಬಹುದು. ಖಾತೆಗಳನ್ನು ತೆರೆಯುವುದು, ಹಣವನ್ನು ವರ್ಗಾಯಿಸುವುದು ಮತ್ತು ಸಾಲಗಳಿಗೆ ಅರ್ಜಿ ಸಲ್ಲಿಸುವಂತಹ ಕಾರ್ಯಗಳಿಗೆ ಚಾಟ್‌ಬಾಟ್‌ಗಳು ಸಹಾಯ ಮಾಡುತ್ತದೆ.

**ಸಮಸ್ಯೆಗಳ ಮೌಲ್ಯಮಾಪನ :** ಕಡಿಮೆ ಆದಾಯದ ಜನರಿಗೆ ಸಾಲ ನೀಡುವುದ ರೊಂದಿಗೆ ಎದುರಾಗುವ ಸಮಸ್ಯೆಗಳನ್ನು ಎದುರಿಸಲು ಹಣಕಾಸು ಸಂಸ್ಥೆಗಳಿಗೆ ಕೃತಕ ಬುದ್ಧಿವಂತಿಕೆ ಸಹಾಯ ಮಾಡುತ್ತದೆ. ಉದಾಹರಣೆಗೆ, ಸಾಂಪ್ರದಾಯಿಕ ಸಾಲವನ್ನು ಹೊಂದಿರದ ದೂರದ ಪ್ರದೇಶಗಳಲ್ಲಿನ ರೈತರ ಸಾಲದ ಅರ್ಹತೆಯನ್ನು ನಿರ್ಣಯಿಸಲು ಕೃತಕ ಬುದ್ಧಿವಂತಿಕೆಯ ಅಲ್ಗಾರಿದಮ್‌ಗಳ ಉಪಗ್ರಹ ಚಿತ್ರಣವನ್ನು ಬಳಸಿ ವಿಶ್ಲೇಷಿಸಬಹುದು.

**ಮೋಸ–ವಂಚನೆಯ ಪತ್ತೆ :** ನೈಜ ಸಮಯದಲ್ಲಿ ಬೃಹತ್ ಪ್ರಮಾಣದ ಮಾಹಿತಿಯನ್ನು ವಿಶ್ಲೇಷಿಸುವ ಮೂಲಕ ಮತ್ತು ಅಸಾಮಾನ್ಯ ಮಾದರಿಗಳು ಅಥವಾ ಅನುಮಾನಾಸ್ಪದ ಚಟುವಟಿಕೆಯನ್ನು ಗುರುತಿಸುವ ಮೂಲಕ

ಹಣಕಾಸು ಸಂಸ್ಥೆಗಳು ವಂಚನೆಯನ್ನು ಪತ್ತೆಹಚ್ಚಲು ಮತ್ತು ತಡೆಯಲು ಕೃತಕ ಬುದ್ಧಿವಂತಿಕೆ ಸಹಾಯ ಮಾಡುತ್ತದೆ.

**ಹಣಕಾಸು ವಿಷಯುಕ್ಕೆ ಸಂಬಂಧಿಸಿದ ಸಲಹೆ :** ಕೃತಕ ಬುದ್ಧಿವಂತಿಕೆಯು ವ್ಯಕ್ತಿಗಳಿಗೆ ಅವರ ಆರ್ಥಿಕ ಪರಿಸ್ಥಿತಿ ಮತ್ತು ಗುರಿಗಳ ಆಧಾರದ ಮೇಲೆ ವೈಯಕ್ತಿಕ ಹಣಕಾಸು ವ್ಯವಹಾರಗಳ ಬಗ್ಗೆ ಸಲಹೆ ಮತ್ತು ಶಿಫಾರಸುಗಳನ್ನು ಒದಗಿಸುತ್ತದೆ.

ಹಣಕಾಸು ಸೇವೆಗಳಲ್ಲಿ ಕೃತಕ ಬುದ್ಧಿವಂತಿಕೆಯ ಬಳಕೆಯು ಹಣಕಾಸಿನ ಸೇವೆಗಳಿಗೆ ಅವಕಾಶವನ್ನು ಹೆಚ್ಚಿಸುವ ಸಾಮರ್ಥ್ಯವನ್ನು ಹೊಂದಿದೆ. ಅದರಲ್ಲಿ ವಿಶೇಷವಾಗಿ ಬಡ ಅಥವಾ ಕಡಿಮೆ ಆದಾಯದ ಜನರಿಗೆ ಹಣಕಾಸಿನ ಸೇರ್ಪಡೆಯು ಸುಧಾರಿಸುತ್ತದೆ. ಆದಾಗ್ಯೂ, ಗೌಪ್ಯತೆ, ಪಕ್ಷಪಾತ ಮತ್ತು ಪಾರದರ್ಶಕತೆಯಂತಹ ಸಮಸ್ಯೆಗಳನ್ನು ಗಣನೆಗೆ ತೆಗೆದುಕೊಂಡು ಕೃತಕ ಬುದ್ಧಿವಂತಿಕೆಯನ್ನು ನೈತಿಕ ಮತ್ತು ಜವಾಬ್ದಾರಿಯುತ ರೀತಿಯಲ್ಲಿ ಅಭಿವೃದ್ಧಿಪಡಿಸಲಾಗಿದೆ ಮತ್ತು ನಿಯೋಜಿಸಲಾಗಿದೆ.

## ಬ್ಯಾಂಕಿಂಗ್ ವಲಯದಲ್ಲಿ ಕೃತಕ ಬುದ್ಧಿವಂತಿಕೆಯ ಬಳಕೆಯಿಂದಾಗುವ ಅನುಕೂಲಗಳು

ಬ್ಯಾಂಕಿಂಗ್ ವಲಯುದಲ್ಲಿ ಕೃತಕ ಬುದ್ಧಿವಂತಿಕೆಯುನ್ನು ಬಳಸುವುದರಿಂದ ಹಲವಾರು ಅನುಕೂಲಗಳಿವೆ. ಅವುಗಳಲ್ಲಿ ಪ್ರಮುಖ ಅನುಕೂಲಗಳೆಂದರೆ,

**ಸುಧಾರಿತ ವಂಚನೆಯ ಪತ್ತೆ :** ಕೃತಕ ಬುದ್ಧಿವಂತಿಕೆಯ ಅಲ್ಗಾರಿದಮ್‌ಗಳು ವಾಸ್ತವಿಕ ಸಮಯದಲ್ಲಿ ಹೆಚ್ಚಿನ ಪ್ರಮಾಣದ ಮಾಹಿತಿಯನ್ನು ವಿಶ್ಲೇಷಿಸಬಹುದು. ಇದರಿಂದಾಗಿ ಮೋಸದ ಚಟುವಟಿಕೆಗಳನ್ನು ಪತ್ತೆ ಹಚ್ಚಲು ಮತ್ತು ತಡೆಯಲು ಬ್ಯಾಂಕ್‌ಗಳಿಗೆ ಸುಲಭವಾಗುತ್ತದೆ.

**ಅಧಿಕದಕ್ಷತೆ** : ಮಾಹಿತಿ ಸಂಗ್ರಹ ಮತ್ತು ವರದಿ ತಯಾರಿಸಲು ಉತ್ಪಾದನೆಯಂತಹ ದಿನ ನಿತ್ಯದ ಕಾರ್ಯಗಳನ್ನು ಕೃತಕ ಬುದ್ಧಿವಂತಿಕೆಯು ಸ್ವಯಂಚಾಲಿತಗೊಳಿಸುತ್ತದೆ ಹಾಗೂ ಹೆಚ್ಚು ಸಂಕೀರ್ಣ ಕಾರ್ಯಗಳಿಗಾಗಿ ಮಾನವ ಸಂಪನ್ಮೂಲಗಳನ್ನು ಮುಕ್ತಗೊಳಿಸುತ್ತದೆ.

**ವೈಯಕ್ತಿಕಗೊಳಿಸಿದ ಗ್ರಾಹಕರ ಅನುಭವಗಳು** : ಗ್ರಾಹಕರ ವೈಯಕ್ತಿಕ ಅಗತ್ಯಗಳು ಮತ್ತು ಆದ್ಯತೆಗಳ ಆಧಾರದ ಮೇಲೆ ವೈಯಕ್ತಿಕಗೊಳಿಸಿದ ಸೇವೆಗಳು ಮತ್ತು ಉತ್ಪನ್ನ ಸುಧಾರಣೆಯನ್ನು ಮಾಡಲು ಕೃತಕ ಬುದ್ಧಿವಂತಿಕೆ ಬ್ಯಾಂಕ್‌ಗಳಿಗೆ ಸಹಾಯ ಮಾಡುತ್ತದೆ.

**ಸಮಸ್ಯೆಗಳ ನಿರ್ವಹಣೆ** : ಬೃಹತ್ ಪ್ರಮಾಣ ಮಾಹಿತಿಯನ್ನು ವಿಶ್ಲೇಷಿಸುವ ಮತ್ತು ಸಂಭಾವ್ಯ ಸಮಸ್ಯೆಗಳನ್ನು ಗುರುತಿಸುವ ಮೂಲಕ ಬ್ಯಾಂಕ್‌ಗಳಿಗೆ ಅಪಾಯಗಳನ್ನು ಹೆಚ್ಚು ನಿಖರವಾಗಿ ನಿರ್ಣಯಿಸಲು ಮತ್ತು ನಿರ್ವಹಿಸಲು ಕೃತಕ ಬುದ್ಧಿವಂತಿಕೆಯು ನೆರವಾಗುತ್ತದೆ.

**ಅಂತರ್‌ಜಾಲ ಗ್ರಾಹಕ ಸೇವೆ** : ಕೃತಕ ಬುದ್ಧಿವಂತಿಕೆಯು ಚಾಲಿತ ಚಾಟ್‌ಬಾಟ್‌ಗಳು ಮತ್ತು ವರ್ಚುವಲ್ ಸಹಾಯಕರು 24×7 ಗ್ರಾಹಕ ಸೇವೆ ಮತ್ತು ಸಹಾಯವನ್ನು ಒದಗಿಸುತ್ತದೆ. ಒಟ್ಟಾರೆಯಾಗಿ ಗ್ರಾಹಕರ ಹಣಕಾಸು ಸೌಲಭ್ಯವನ್ನು ಸುಧಾರಿಸುತ್ತದೆ.

**ವೆಚ್ಚ ಉಳಿತಾಯ** : ಹಸ್ತಚಾಲಿತ ಪ್ರಕ್ರಿಯೆಗಳನ್ನು ಸ್ವಯಂ ಚಾಲಿತಗೊಳಿಸಿ ಮತ್ತು ಕಾರ್ಯಾಚರಣೆಯ ದಕ್ಷತೆಯನ್ನು ಸುಧಾರಿಸುವ ಮೂಲಕ ಬ್ಯಾಂಕ್‌ಗಳಿಗೆ ವೆಚ್ಚವನ್ನು ಕಡಿಮೆ ಮಾಡಲು ಕೃತಕ ಬುದ್ಧಿವಂತಿಕೆಯು ಸಹಕರಿಸುತ್ತದೆ.

**ವೇಗದ ನಿರ್ಧಾರ ಕೈಗೊಳ್ಳುವಿಕೆ** : ಕೃತಕ ಬುದ್ಧಿವಂತಿಕೆಯ ಮಾಹಿತಿಯನ್ನು ವಿಶ್ಲೇಷಿಸುತ್ತದೆ ಮತ್ತು ಮಾನವನಿಗಿಂತ ವೇಗವಾಗಿ ಆಂತರಿಕ ನೋಟವನ್ನು ನೀಡುತ್ತದೆ. ಬ್ಯಾಂಕ್‌ಗಳು ವೇಗವಾಗಿ ಮತ್ತು ಹೆಚ್ಚು ತಿಳುವಳಿಕೆಯುಳ್ಳ ನಿರ್ಧಾರಗಳನ್ನು ತೆಗೆದುಕೊಳ್ಳಲು ಅನುವು ಮಾಡಿಕೊಡುತ್ತದೆ.

ಒಟ್ಟಾರೆಯಾಗಿ, ಬ್ಯಾಂಕಿಂಗ್‌ನಲ್ಲಿ ಕೃತಕ ಬುದ್ಧಿವಂತಿಕೆ ಬಳಕೆಯು ದಕ್ಷತೆಯನ್ನು ಸುಧಾರಿಸುತ್ತದೆ, ವೆಚ್ಚವನ್ನು ಕಡಿಮೆ ಮಾಡುತ್ತದೆ ಹಾಗೂ ಗ್ರಾಹಕರ ಹಣಕಾಸಿನ ಸೌಲಭ್ಯಗಳನ್ನು ಹೆಚ್ಚಿಸುತ್ತದೆ. ಅಲ್ಲದೆ, ಗೌಪ್ಯತೆ, ಭದ್ರತಾ ಮತು ್ತಕಾಳಜಿಯನ್ನು ವಹಿಸುವಲ್ಲಿ ಕೃತಕ ಬುದ್ಧಿವಂತಿಕೆಯ ಬಳಕೆಗೆ ಸಂಬಂಧಿಸಿದ ನೈತಿಕ ಮತ್ತು ನಿಯಂತ್ರಕ ಸಮಸ್ಯೆಗಳನ್ನು ಪರಿಹರಿಸುವುದು ಇದರ ಮುಖ್ಯ ಕಾರ್ಯವಾಗಿದೆ.

## ಬ್ಯಾಂಕಿಂಗ್ ವಲಯದಲ್ಲಿ ಕೃತಕ ಬುದ್ಧಿವಂತಿಕೆಯ ಬಳಕೆಯಿಂದಾಗುವ ಅನಾನುಕೂಲಗಳು

ಬ್ಯಾಂಕಿಂಗ್ ವಲಯುದಲ್ಲಿ ಕೃತಕ ಬುದ್ಧಿವಂತಿಕೆಯುನ್ನು ಬಳಸುವುದರಿಂದ ಅನೇಕ ಸಂಭಾವ್ಯ ಉಪಯೋಗಗಳಿದ್ದರೂ, ಪರಿಗಣಿಸಬೇಕಾದ ಕೆಲವು ಸಂಭಾವ್ಯ ಅನಾನುಕೂಲತೆಗಳು ಈ ಕೆಳಕಂಡಂತಿವೆ.

**ಗೌಪ್ಯತೆ ಕಾಳಜಿಗಳು :** ಬ್ಯಾಂಕಿಂಗ್‌ನಲ್ಲಿ ಕೃತಕ ಬುದ್ಧಿವಂತಿಕೆಯ ಬಳಕೆಯು ಸಾಮಾನ್ಯವಾಗಿ ಹೆಚ್ಚಿನ ಪ್ರಮಾಣದ ವೈಯಕ್ತಿಕ ಮಾಹಿತಿಯನ್ನು ಸಂಗ್ರಹಿಸುವುದು ಮತ್ತು ಪ್ರಕ್ರಿಯೆಗೊಳಿಸುವುದನ್ನು ಒಳಗೊಂಡಿದ್ದು, ಗೌಪ್ಯತೆ ಮತ್ತು ಸುರಕ್ಷತೆಯ ಬಗ್ಗೆ ಕಳವಳವನ್ನು ಉಂಟುಮಾಡುತ್ತದೆ.

**ದೋಷಗಳ ಅಪಾಯ :** ಕೃತಕ ಬುದ್ಧಿವಂತಿಕೆಯ ವ್ಯವಸ್ಥೆಗಳು ಮಾನವರಿಗಿಂತ ಹೆಚ್ಚು ವೇಗವಾಗಿ ಮಾಹಿತಿಯನ್ನು ವಿಶ್ಲೇಷಿಸ ಬಹುದಾದರೂ, ದೋಷ ಮತ್ತು ಪಕ್ಷಪಾತಗಳಿಂದ ಮುಕ್ತವಾಗದೇ ತಪ್ಪು ನಿರ್ಧಾರಗಳಿಗೆ ಕಾರಣವಾಗುವ ಸಂಭವವಿದೆ.

**ತಂತ್ರಜ್ಞಾನದ ಮೇಲೆ ಅವಲಂಬನೆ :** ಕೃತಕ ಬುದ್ಧಿವಂತಿಕೆಯ ವ್ಯವಸ್ಥೆಗಳ ಮೇಲೆ ಹೆಚ್ಚು ಅವಲಂಬಿತವಾಗಿರುವ ಬ್ಯಾಂಕುಗಳು ತಂತ್ರಜ್ಞಾನದ ಮೇಲೆ ಅತಿಯಾಗಿ ಅವಲಂಬಿತರಾಗಿದ್ದಾರೆ. ಇದು ಗಣಕಯಂತ್ರದ ವೈಫಲ್ಯ ಅಥವಾ ಸೈಬರ್-ದಾಳಿಯ ಸಂದರ್ಭದಲ್ಲಿ ಅಡಚಣೆಗಳು ಮತ್ತು ವಿಳಂಬಗಳನ್ನು ಉಂಟಾಗಬಹುದು.

**ನಿರುದ್ಯೋಗ ಸಮಸ್ಯೆ :** ಕೃತಕ ಬುದ್ಧಿವಂತಿಕೆಯನ್ನು ಎಲ್ಲಾ ಕಾರ್ಯಚಟುವಟಿಕೆಗಳಲ್ಲಿ ಬಳಸುವುದರಿಂದ ಯಾಂತ್ರೀಕರಣದ ಪ್ರಮಾಣವು ಹೆಚ್ಚಾಗುತ್ತಿದ್ದು, ನಿರುದ್ಯೋಗದ ಸಮಸ್ಯೆಗಳಿಗೆ ದಾರಿ ಮಾಡಿಕೊಡುತ್ತದೆ. ವಿಶೇಷವಾಗಿ ಸ್ವಯಂಚಾಲಿತ ಸಂಸ್ಥೆಗಳಲ್ಲಿ ಇದರ ಬಳಕೆಯು ಹೆಚ್ಚಾಗಿರುವುದರಿಂದ ನಿರುದ್ಯೋಗದ ಪ್ರಮಾಣವು ನಿರಂತರವಾಗಿ ಏರಿಕೆಯಾಗುತ್ತದೆ.

**ಮಾನವ ಸಂಪನ್ಮೂಲದ ಕೊರತೆ** : ಕೃತಕ ಬುದ್ಧಿವಂತಿಕೆಯ ಬಳಕೆಯ ಪ್ರಮಾಣವನ್ನು ಹೆಚ್ಚಿಸಲು ಕೌಶಲ್ಯಭರಿತ ಮತ್ತು ತರಬೇತಿ ಕೊರತೆಯಿಂದಾಗಿ ಕೃತಕ ಬುದ್ಧಿವಂತಿಕೆಯ ಬಳಕೆಯಲ್ಲಿ ಮಾನವ ಸಂಪನ್ಮೂಲ ಕೊರತೆಯಿಂದಕೂಡಿದೆ

**ನಿಯಂತ್ರಕ ಮತ್ತು ನೈತಿಕ ಕಾಳಜಿಗಳ ಕೊರತೆ :** ಬ್ಯಾಂಕಿಂಗ್‌ನಲ್ಲಿ ಕೃತಕ ಬುದ್ಧಿವಂತಿಕೆಯ ಬಳಕೆಯು ಪಾರದರ್ಶಕತೆ, ಹೊಣೆಗಾರಿಕೆ ಮತ್ತು ಪಕ್ಷಪಾತದಂತಹ ಸಮಸ್ಯೆಗಳ ಸುತ್ತ ಪ್ರಮುಖ ನಿಯಂತ್ರಕ ಹಾಗೂ ನೈತಿಕ ಪ್ರಶ್ನೆಗಳನ್ನು ಹುಟ್ಟು ಹಾಕುತ್ತದೆ.

ಈ ಮೇಲಿನ ಅಂಶಗಳನ್ನು ಗಮನಿಸಿದಾಗ ಕೃತಕ ಬುದ್ಧಿವಂತಿಕೆಯು ಬ್ಯಾಂಕಿಂಗ್ ವಲಯಕ್ಕೆ ಅನೇಕ ಪ್ರಯೋಜನಗಳನ್ನು ತರುವ ಸಾಮರ್ಥ್ಯವನ್ನು ಹೊಂದಿದ್ದರೂ, ಅದರಲ್ಲಿ ಸಂಭಾವ್ಯ ಸಮಸ್ಯೆಗಳ ಬಗ್ಗೆ ತಿಳಿಯುವುದು

ISSN : 2249-2429 ಸಂಶೋಧನೆ RNI REG.NO.KARKAN/2011/38712

ಮತ್ತು ಸಮಸ್ಯೆಗಳನ್ನು ತಗ್ಗಿಸಲು ವಿವಿಧ ಆಧುನಿಕ ತಂತ್ರಗಳನ್ನು ಅಭಿವೃದ್ಧಿಪಡಿಸುವುದು ಅತ್ಯಗತ್ಯವಾಗಿದೆ.


## ಉಪಸಂಹಾರ

ಬ್ಯಾಂಕುಗಳ ದಕ್ಷತೆಯನ್ನು ಸುಧಾರಿಸುವಲ್ಲಿ ವೆಚ್ಚವನ್ನು ಕಡಿಮೆ ಮಾಡಲು ಮತ್ತು ಗ್ರಾಹಕರ ಸೇವೆಯನ್ನು ಹೆಚ್ಚಿಸಲು ಪ್ರಯತ್ನಿಸುತ್ತಿರುವುದರಿಂದ ಬ್ಯಾಂಕಿಂಗ್ ವಲಯದಲ್ಲಿ ಕೃತಕ ಬುದ್ಧಿವಂತಿಕೆಯ ಪಾತ್ರ ಮಹತ್ವವಾಗಿದೆ. ಅಲ್ಲದೆ ಬ್ಯಾಂಕಿಂಗ್ ಸೇವೆಗಳಾದ ಖಾತೆ ತೆರೆಯುವಿಕೆ, ಸಾಲ ಸೌಲಭ್ಯ, ಉಳಿತಾಯ ಇತರೆ ಗ್ರಾಹಕ ಸೇವೆಗಳನ್ನು ಒದಗಿಸಲು ಹಾಗೂ ಬ್ಯಾಂಕಿಂಗ್‌ನಲ್ಲಿ, ನೈತಿಕತೆ, ಗೌಪ್ಯತೆ ಮತ್ತು ಸಾಂಸ್ಥಿಕ ಕಾಳಜಿಯನ್ನು ವಹಿಸುತ್ತದೆ. ಗ್ರಾಹಕರ ಮಾಹಿತಿಯನ್ನು ಮತ್ತು ನಿರ್ಧಾರ ತೆಗೆದುಕೊಳ್ಳುವಲ್ಲಿ ರಕ್ಷಣಾತ್ಮಕ ಕ್ರಮಗಳನ್ನು ಜಾರಿಗೆತಂದಿದೆ. ಒಟ್ಟಾರೆಯಾಗಿ ಬ್ಯಾಂಕಿಂಗ್‌ನಲ್ಲಿ ಕೃತಕ ಬುದ್ಧಿವಂತಿಕೆಯ ಬಳಕೆಯು ಗಮನರ್ಹ ಪ್ರಯೋಜನಗಳನ್ನು ತರುವ ಸಾಮರ್ಥ್ಯವನ್ನು ಹೊಂದಿದೆ. ಆದರೆ, ಎದುರಾಗುವ ಸವಾಲುಗಳನ್ನು ಹೆಚ್ಚರಿಕೆಯಿಂದ ಪರಿಗಣಿಸುವ ಅಗತ್ಯವಿದೆ. ಸಂಶೋಧನೆಗಳ ಆಧಾರದ ಮೇಲೆ, ಬ್ಯಾಂಕಿಂಗ್ ಮತ್ತು ಹಣಕಾಸು ಸೇವೆಗಳಲ್ಲಿನ ಕೃತಕ ಬುದ್ಧಿಮತ್ತೆಯು ಗ್ರಾಹಕರ ಅಗತ್ಯಗಳನ್ನು ಪೂರೈಸಲು ನೆರವಾಗುತ್ತದೆ ಹಾಗೂ ಬ್ಯಾಂಕಿಂಗ್ ಮತ್ತು ಹಣಕಾಸು ಸೇವೆಗಳಲ್ಲಿ ಗ್ರಾಹಕರು ಕೃತಕ ಬುದ್ಧಿವಂತಿಕೆಯ ಬಗ್ಗೆ ಅರಿವು ಹೊಂದಿರುವುದರಿಂದ ಹೆಚ್ಚು ಬಳಕೆಯಾಗುತ್ತಿರುವುದನ್ನು ನೋಡಬಹುದಾಗಿದೆ. ಹಾಗೆಯೇ, ಗ್ರಾಹಕರ ಬೇಡಿಕೆಯನ್ನು ವೇಗವಾಗಿ ಮತ್ತು ಸುಲಭವಾಗಿ ಪೂರೈಸಲು ಸಹಾಯ ಮಾಡುತ್ತದೆ. ಕಾರ್ಯಸ್ಥಳದಲ್ಲಿ ಕೃತಕ ಬುದ್ಧಿವಂತಿಕೆಯ ಕಾರ್ಯವಿಧಾನಗಳನ್ನು ಸುಧಾರಿಸಲು ಹೊಸ ರೀತಿಯ ಸಿದ್ಧತೆಗಳನ್ನು ಅಭಿವೃದ್ಧಿಪಡಿಸುವ ಮೂಲಕ ಗ್ರಾಹಕರು ಬ್ಯಾಂಕಿಂಗ್ ಮತ್ತು ಹಣಕಾಸು ಸೇವೆಗಳಿಗೆ ಪ್ರತಿನಿಧಿಗಳಿಂದ ಹೆಚ್ಚಿನ ಬದ್ಧತೆಯನ್ನು ಹೊಂದಿದ್ದಾರೆ. ನಿಯಂತ್ರಕ ಅನುಸರಣೆಯನ್ನು ಪೂರೈಸಲು, ವಂಚನೆಯನ್ನು ಪತ್ತೆ ಹಚ್ಚಲು ಮತ್ತು ವೈಯಕ್ತಿಕ ಸಾಲಗಳ ಅರ್ಹತೆಯನ್ನು ನಿರ್ಣಯಿಸಲು ಸಹ ಇದನ್ನು ಬಳಸಲಾಗುತ್ತಿದೆ. ಒಟ್ಟಾರೆಯಾಗಿ, ಕೃತಕ ಬುದ್ಧಿವಂತಿಕೆಯು ಪ್ರಸ್ತುತ ಸಮಾಜದಲ್ಲಿ ಪ್ರತಿಯೊಂದು ಕ್ಷೇತ್ರದ ಮೇಲೆ ಇದರ ಪ್ರಭಾವ ಬೀರುತ್ತಿದ್ದು, ಭವಿಷ್ಯದ ದಿನಮಾನಗಳಲ್ಲಿ ಕೃತಕ ಬುದ್ಧಿವಂತಿಕೆಯು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿ ಸುಸ್ಥಿರ ಅಭಿವೃದ್ಧಿಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತದೆ.

## ಪರಾಮರ್ಶನ ಗ್ರಂಥಗಳು


- **Bonnie G. Buchanan, P. F. (2019, April) :** Artificial Intelligence in finance. Retrieved 5 22, 2020, from The Alan Turing Institute.
- **Latimore, D. (2018) :** Artificial Intelligence in Banking
- **Dr. Navleen Kaur, Supriya Lamba Sahdev, Dr. Monika Sharma and Laraibe Siddiqui (2020) :** Banking 4.0: "The Influence of Artificial Intelligence on The Banking Industry & How Ai Is Changing the Face of Modern Day Banks"
- **IJSART - Volume 4 Issue 4 – (APRIL 2018) :** Kinjal Patel- Artificial Intelligence in Finance 5. International Journal of Management, Technology and Engineering Volume 8, Issue VII, July 2018 ISSN NO: 2249-7455 - Dr. Simran Jewandah How Artificial Intelligence Is Changing the Banking Sector –A Case Study of top four Commercial Indian Banks.
- **M. Bhuvana, P. G. Thirumagal and S.Vasantha :** Big Data Analytics - A Leveraging Technology for Indian Commercial Banks, Indian Journal of Science and Technology, Vol 9 (32), August 2016
- **"Banking in the age of disruption," EY, February 2017**
- https://www.businesstoday.in/magazine/special/hdfc-bank-digital-transformation best- indian-large-bank-2014/story/213957.html
- https://www.goodworklabs.com/artificial-intelligence-in-banking-industry/


■■

ವಿದ್ಯಾನಿಧಿ ಪ್ರಕಾಶನ®
ಶ್ರೀ ಶಿವಕುಮಾರ ಏಜನ್ಸಿ®
ಶೈಕ್ಷಣಿಕ ಪುಸ್ತಕಗಳ ಪ್ರಕಾಶಕರು ಮತ್ತು ಮಾರಾಟಗಾರರು
ಸ್ಟೇಶನ್ ರೋಡ ಮತ್ತು 'ನನಸು', ಹಳೆ ಸರಕಾರಿ ಆಸ್ಪತ್ರೆ ಎದುರಿಗೆ,
ಎಸ್.ಪಿ. ಗದಗ ಕಂಪೌಂಡ, ಜೆ.ಟಿ. ಮಠ ರೋಡ, ಗದಗ-582 101
ದೂರವಾಣಿ : 08372–200527
e-mail : vidyanidhiprakashana@gmail.com.

ISSN : 2249-2429 ಸಂಶೋಧನೆ RNI REG.NO.KARKAN/2011/38712

# ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆ ಮತ್ತು ಮನೆಯ ವಾತಾವರಣವನ್ನು ಕುರಿತು ಒಂದು ಅಧ್ಯಯನ

✍ **ಡಾ. ಬೈರಸಿದ್ದಪ್ಪ. ಜಿ. ಇ.,** ಸಹಾಯಕ ಪ್ರಾಧ್ಯಾಪಕರು, ಶ್ರೀ ವೆಂಕಟೇಶ್ವರ ಶಿಕ್ಷಣ ಮಹಾವಿದ್ಯಾಲಯ, ಚಿತ್ರದುರ್ಗ.

*ಅಧ್ಯಯನದ ಸಾರಾಂಶ*

*ಈ ಸಂಶೋಧನಾ ಅಧ್ಯಯನದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯ ಮೇಲೆ ಮನೆಯ ವಾತಾವರಣದ ಪ್ರಭಾವ ಹಾಗೂ ಸಹ ಸಂಬಂಧವನ್ನು ಕಂಡುಹಿಡಿಯಲು ಭಾರತೀಯ ಪ್ರೌಢಶಾಲೆ ಮದಕರಿಪುರಕ್ಕೆ ಭೇಟಿ ನೀಡಿ ಡಾ.ಕರುಣಾಶಂಕರ ಮಿಶ್ರಾರವರು ರಚಿಸಿರುವ ಮನೆಯ ವಾತಾವರಣದ ಸಾಧನವನ್ನು ಬಳಸಿಕೊಂಡು ದತ್ತಾಂಶವನ್ನು ಸಂಗ್ರಹಿಸಲಾಯಿತು, ಮತ್ತು ವಾರ್ಷಿಕ ಪರೀಕ್ಷೆಯ ಅಂಕಗಳನ್ನು ತೆಗೆದುಕೊಳ್ಳಲಾಯಿತು. ವಿವಿಧ ಸಂಖ್ಯಾಶಾಸ್ತ್ರೀಯ ವಿಧಾನಗಳನ್ನು ಬಳಸಿಕೊಂಡು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯ ಮೇಲೆ ಮನೆಯ ವಾತಾವರಣದ ಪ್ರಭಾವ ಹಾಗೂ ಸಹ ಸಂಬಂಧವನ್ನು ಕಂಡುಹಿಡಿಯಲಾಯಿತು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗಿಂತ ಪರಿಶಿಷ್ಟೇತರ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆ ಮತ್ತು ಮನೆಯ ವಾತಾವರಣ ಉತ್ತಮವಾಗಿರುವುದು ಕಂಡು ಬಂದಿದೆ.*

## ಪೀಠಿಕೆ

ಜ್ಞಾನವೆಂಬ ಜ್ಯೋತಿ ಬೆಳಗಲು ಶಿಕ್ಷಣ ಅತ್ಯವಶ್ಯಕ ಮಕ್ಕಳು ಮಾನವರಾಗಿ, ನಾಗರೀಕರಾಗಿ ಇತರರೊಡನೆ ಮೈತ್ರಿ, ಗೌರವ, ಘನತೆಯಿಂದ ವರ್ತಿಸುವಂತೆ ಮಾಡುವ ಪ್ರಮುಖ ಸಾಧನ ಶಿಕ್ಷಣವಾಗಿದೆ, ಮಗುವಿನ ಸರ್ವತೋಮುಖ ಬೆಳವಣಿಗೆಯ ಶಿಕ್ಷಣ, ಮಗುವನ್ನು ಸ್ವಾವಲಂಬಿಯಾಗಿ ಹಾಗೂ ಸಮಾಜದ ಉಪಯುಕ್ತ ಸದಸ್ಯರನ್ನಾಗಿ ಮಾಡುವುದು ಶಿಕ್ಷಣದಿಂದ ಮಾತ್ರ ಸಾಧ್ಯ, ಶಿಕ್ಷಣದ ಪ್ರಗತಿಗಾಗಿ ಪ್ರತಿಯೊಂದು ಮಗುವಿಗೂ ಅನೇಕ ಉತ್ತೇಜನ ಕಾರ್ಯಕ್ರಮಗಳನ್ನು ಸರ್ಕಾರವು ಹಮ್ಮಿಕೊಂಡಿದ್ದು, ಶೈಕ್ಷಣಿಕ ಪ್ರಗತಿಯುಂಟು ಮಾಡಲು ಪ್ರಯತ್ನಿಸುತ್ತಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರ ವಿದ್ಯಾರ್ಥಿಗಳು ಶೈಕ್ಷಣಿಕ ಸಾಧನೆಯ ಪ್ರಗತಿಯನ್ನು ಸಾಧಿಸಲು ಮನೆಯ ವಾತಾವರಣವು ಪ್ರಮುಖವಾದಂತಹ ಪಾತ್ರವನ್ನು ವಹಿಸುತ್ತದೆ.

## ಅಧ್ಯಯನದ ಅಗತ್ಯತೆ

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯ ಮೇಲೆ ಮನೆಯ ವಾತಾವರಣವು ಯಾವ ರೀತಿ ಪ್ರಭಾವವನ್ನು ಬೀರಿದೆ ಎಂಬುವುದನ್ನು ತಿಳಿದುಕೊಳ್ಳಲು ಹಾಗೂ ಸೂಕ್ತ ಪರಿಹಾರವನ್ನು ಒದಗಿಸಲು ಈ ಅಧ್ಯಯನವು ಅಗತ್ಯವಾಗಿದೆ.

## ಅಧ್ಯಯನದ ಉದ್ದೇಶಗಳು

1) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯನ್ನು ಕುರಿತು ಅಧ್ಯಯನ ಮಾಡುವುದು.
2) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣವನ್ನು ಕುರಿತು ಅಧ್ಯಯನ ಮಾಡುವುದು.
3) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಗೂ ಹಾಗೂ ಮನೆಯ ವಾತಾವರಣಕ್ಕೂ ಇರುವ ಸಹ ಸಂಬಂಧವನ್ನು ಕುರಿತು ಅಧ್ಯಯನ ಮಾಡುವುದು.

## ಪ್ರಾಕಲ್ಪನೆಗಳು

1) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯಲ್ಲಿ ಯಾವುದೇ ಮಹತ್ವ ಪೂರ್ಣ ವ್ಯತ್ಯಾಸ ಕಂಡು ಬರುವುದಿಲ್ಲ.
2) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣದಲ್ಲಿ ಯಾವುದೇ ಮಹತ್ವ ಪೂರ್ಣ ವ್ಯತ್ಯಾಸ ಕಂಡು ಬರುವುದಿಲ್ಲ.
3) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಗೂ ಹಾಗೂ ಮನೆಯ ವಾತಾವರಣಕ್ಕೂ ಮಹತ್ವ ಪೂರ್ಣ ಸಹ ಸಂಬಂಧವಿರುವುದಿಲ್ಲ.

## ಸಂಶೋಧನಾ ವಿಧಾನ

ಪ್ರಸ್ತುತ ಸಂಶೋಧನಾ ಅಧ್ಯಯನದಲ್ಲಿ ವಿವರಣಾತ್ಮಕ–ವಿಶ್ಲೇಷಣಾತ್ಮಕ ಅಧ್ಯಯನ ವಿಧಾನದಲ್ಲಿ ಸಮೀಕ್ಷಾ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ.

## ಪ್ರತಿದರ್ಶದ ಆಯ್ಕೆ

ಪ್ರಸ್ತುತ ಸಂಶೋಧನಾ ಅಧ್ಯಯನದಲ್ಲಿ ಚಿತ್ರದುರ್ಗ ಜಿಲ್ಲೆಯ ಚಿತ್ರದುರ್ಗ ತಾಲೋಕಿನ ಮದಕರಿಪುರ ಗ್ರಾಮದ ಭಾರತೀಯ ಪ್ರೌಢಶಾಲೆಯ 9 ನೇ ತರಗತಿಯ 39 ವಿದ್ಯಾರ್ಥಿಗಳನ್ನು ಈ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.

## ಅಧ್ಯಯನದ ಚರಾಂಶಗಳು

1) ಶೈಕ್ಷಣಿಕ ಸಾಧನೆ
2) ಮನೆಯ ವಾತಾವರಣ

## ದತ್ತಾಂಶ ಸಂಗ್ರಹಣೆಗೆ ಬಳಸಿದ ಸಾಧನಗಳು

1) **ಮನೆಯ ವಾತಾವರಣ** : ಡಾ.ಕರುಣಾ ಶಂಕರ ಮಿಶ್ರಾ ರವರು ರಚಿಸಿರುವ ಮನೆಯ ವಾತಾವರಣದ ಸಾಧನವನ್ನು ಬಳಸಿಕೊಳ್ಳಲಾಗಿದೆ. ಈ ಸಾಧನದಲ್ಲಿ ಕೌಟುಂಬಿಕ ಪರಿಸರ ಮತ್ತು ಸಾಮಾಜಿಕ ವಾತಾವರಣವನ್ನು ವಿವರಿಸಿದ್ದಾರೆ.

APPROVED BY UGC CARE

ISSN : 2249-2429 ಸಂಶೋಧನೆ RNI REG.NO.KARKAN/2011/38712

2) **ಶೈಕ್ಷಣಿಕ ಸಾಧನೆ :** ಭಾರತೀಯ ಪ್ರೌಢಶಾಲೆಯ 9 ನೇ ತರಗತಿಯ ವಿದ್ಯಾರ್ಥಿಗಳ ವಾರ್ಷಿಕ ಪರೀಕ್ಷೆಯ ಅಂಕಗಳನ್ನು ತೆಗೆದುಕೊಳ್ಳಲಾಗಿದೆ.

## ದತ್ತಾಂಶ ವಿಶ್ಲೇಷಣೆಗೆ ಬಳಸಿದ ಸಂಖ್ಯಾಶಾಸ್ತ್ರೀಯ ತಂತ್ರಗಳು

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣಕ್ಕೂ ಮತ್ತು ಶೈಕ್ಷಣಿಕ ಸಾಧನೆಗೂ ಇರುವ ವ್ಯತ್ಯಾಸ ಮತ್ತು ಸಹ ಸಂಬಂಧವನ್ನು ಕಂಡುಹಿಡಿಯಲು ಈ ಕೆಳಕಂಡ ಸಂಖ್ಯಾಶಾಸ್ತ್ರೀಯ ವಿಧಾನಗಳನ್ನು ಬಳಸಿಕೊಳ್ಳಲಾಗಿದೆ.

1. One way ANOVA
2. Tukeys multiple posthoc procedure
3. Karl Pearson correlation coefficient method

ಈ ವಿಧಾನಗಳನ್ನು ಅಳವಡಿಸಿಕೊಂಡು ದತ್ತಾಂಶವನ್ನು ವಿಶ್ಲೇಷಣೆ ಮಾಡಿ ಅರ್ಥೈಸಲಾಗಿದೆ

**ಪ್ರಾಕಲ್ಪನೆ–1. :** ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯಲ್ಲಿ ಯಾವುದೇ ಮಹತ್ವ ಪೂರ್ಣ ವ್ಯತ್ಯಾಸ ಕಂಡು ಬರುವುದಿಲ್ಲ.

**ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯನ್ನು ಸೂಚಿಸುವ ಕೋಷ್ಟಕ**

| ಪ್ರಸರಣದ ಮೂಲ | ಸ್ವತಂತ್ರದ ಪ್ರಮಾಣ | ವರ್ಗಗಳ ಸೂತ್ರ | ವರ್ಗಗಳ ಸರಾಸರಿ | f- ಮೌಲ್ಯ | p- ಮೌಲ್ಯ | ಮಹತ್ವ ಪೂರ್ಣತೆ |
|---|---|---|---|---|---|---|
| ಗುಂಪುಗಳ ಮಧ್ಯೆ | 2 | 127712.62 | 63856.31 | 31.1670 | 0.0001 | S |
| ಗುಂಪುಗಳ ಒಳಗೆ | 37 | 75807.15 | 2048.84 | | | |
| ಒಟ್ಟು | 39 | 203519.78 | | | | |

ಈ ಮೇಲ್ಕಂಡ ಕೋಷ್ಟಕದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನಾ ಮಟ್ಟ f=31.1670 ಆಗಿದ್ದು, ಇದು p=< 0.05% ಕ್ಕಿಂತ ಕಡಿಮೆ ಇರುವುದರಿಂದ ಶೂನ್ಯ ಪ್ರಾಕಲ್ಪನೆಯನ್ನು ತಿರಸ್ಕರಿಸಲಾಗಿದೆ, ಬದಲಿ ಪ್ರಾಕಲ್ಪನೆಯನ್ನು ರಚಿಸಲಾಗಿದೆ. ಅಂದರೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯಲ್ಲಿ ವ್ಯತ್ಯಾಸ ಕಂಡುಬರುತ್ತದೆ.

**ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಗುಂಪುಗಳ ಶೈಕ್ಷಣಿಕ ಸಾಧನೆಯ ಮಧ್ಯೆ ಇರುವ ಸಂಬಂಧವನ್ನು ಸೂಚಿಸುವ ಕೋಷ್ಟಕ**


| ಗುಂಪು | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಪರಿಶಿಷ್ಟೇತರ |
|---|---|---|---|
| N | 11 | 04 | 22 |
| ಸರಾಸರಿ | 393.50 | 387.43 | 507.32 |
| ಮಾನಕ ವಿಚಲನೆ | 45.90 | 35.43 | 71.79 |
| ಪರಿಶಿಷ್ಟ ಜಾತಿ | – | | |
| ಪರಿಶಿಷ್ಟ ಪಂಗಡ | p=0.9638, NS | | |
| ಪರಿಶಿಷ್ಟೇತರ | p=0.0001, S | p=0.0001, S | |

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಪ್ರೌಢಶಾಲಾ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯ ಅಂಕಗಳಲ್ಲಿ 5% ಕ್ಕಿಂತ ಕಡಿಮೆ ಮಹತ್ವ ಪೂರ್ಣ ವ್ಯತ್ಯಾಸ ಕಂಡು ಬರುವುದಿಲ್ಲ, ಅಂದರೆ ಸಮಾನತೆ ಕಂಡು ಬಂದಿದೆ.

ಪರಿಶಿಷ್ಟ ಜಾತಿ, ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯ ಅಂಕಗಳಲ್ಲಿ 5% ಕ್ಕಿಂತ ಕಡಿಮೆ ಮಹತ್ವ ಪೂರ್ಣ ವ್ಯತ್ಯಾಸ ಕಂಡು ಬರುತ್ತದೆ. ಅಂದರೆ ಪರಿಶಿಷ್ಟ ಜಾತಿ ಪ್ರೌಢಶಾಲಾ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಗಿಂತ ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆ ಉತ್ತಮವಾಗಿರುವುದು ಕಂಡು ಬಂದಿದೆ.

ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯ ಅಂಕಗಳಲ್ಲಿ 5% ಕ್ಕಿಂತ ಕಡಿಮೆ ಮಹತ್ವ ಪೂರ್ಣ ವ್ಯತ್ಯಾಸ ಕಂಡು ಬರುತ್ತದೆ. ಅಂದರೆ ಪರಿಶಿಷ್ಟ ಜಾತಿ ಪ್ರೌಢಶಾಲಾ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಗಿಂತ ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆ ಉತ್ತಮವಾಗಿರುವುದು ಕಂಡು ಬಂದಿದೆ.

**ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯನ್ನು ಸೂಚಿಸುವ ಕೋಷ್ಟಕ.**




**ಪ್ರಾಕಲ್ಪನೆ–2. :** ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣದಲ್ಲಿ ಯಾವುದೇ ಮಹತ್ವ ಪೂರ್ಣ ವ್ಯತ್ಯಾಸ ಕಂಡು ಬರುವುದಿಲ್ಲ.

**ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣವನ್ನು ಸೂಚಿಸುವ ಕೋಷ್ಟಕ.**

| ಪ್ರಸರಣದ ಮೂಲ | ಸ್ವತಂತ್ರದ ಪ್ರಮಾಣ | ವರ್ಗಗಳ ಸೂತ್ರ | ವರ್ಗಗಳ ಸರಾಸರಿ | f- ಮೌಲ್ಯ | p- ಮೌಲ್ಯ | ಮಹತ್ವ ಪೂರ್ಣತೆ |
|---|---|---|---|---|---|---|
| ಗುಂಪುಗಳ ಮಧ್ಯೆ | 2 | 13414.31 | 6707.16 | 13.8134 | 0.0001 | S |
| ಗುಂಪುಗಳ ಒಳಗೆ | 37 | 17965.46 | 485.55 | | | |
| ಒಟ್ಟು | 39 | 31379.78 | | | | |

ಈ ಮೇಲ್ಕಂಡ ಕೋಷ್ಟಕದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣದ ಮಟ್ಟ f=13.8134 ಆಗಿದ್ದು, p=<0.05 ಮಟ್ಟಕ್ಕಿಂತ ಕಡಿಮೆ ಇರುವುದರಿಂದ ಶೂನ್ಯ ಪ್ರಾಕಲ್ಪನೆಯನ್ನು ತಿರಸ್ಕರಿಸಲಾಗಿದೆ. ಬದಲಿ ಪ್ರಾಕಲ್ಪನೆಯನ್ನು ರಚಿಸಲಾಗಿದೆ.

ಅಂದರೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟೇತರ ಪ್ರಾಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣದಲ್ಲಿ ವ್ಯತ್ಯಾಸ ಕಂಡು ಬರುತ್ತದೆ.

ISSN : 2249-2429 ಸಂಶೋಧನೆ RNI REG.NO.KARKAN/2011/38712

**ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣದ ಮಧ್ಯೆ ಇರುವ ಸಂಬಂಧವನ್ನು ಸೂಚಿಸುವ ಕೋಷ್ಟಕ.**


| ಗುಂಪು | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಪರಿಶಿಷ್ಟೇತರ |
|---|---|---|---|
| N | 11 | 04 | 22 |
| ಸರಾಸರಿ | 315.38 | 302.71 | 346.44 |
| ಮಾನಕ ವಿಚಲನೆ | 18.36 | 28.9 | 21.28 |
| ಪರಿಶಿಷ್ಟ ಜಾತಿ | – | | |
| ಪರಿಶಿಷ್ಟ ಪಂಗಡ | p=0.5140, NS | | |
| ಪರಿಶಿಷ್ಟೇತರ | p=0.0038, S | p=0.0002, S | |

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣದಲ್ಲಿ 5 % ಕ್ಕಿಂತ ಕಡಿಮೆ ಮಹತ್ವ ಪೂರ್ಣ ವ್ಯತ್ಯಾಸ ಕಂಡು ಬರುವದಿಲ್ಲ, ಅಂದರೆ ಸಮಾನತೆ ಕಂಡು ಬಂದಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣದಲ್ಲಿ 5% ಕ್ಕಿಂತ ಕಡಿಮೆ ಮಹತ್ವ ಪೂರ್ಣ ವ್ಯತ್ಯಾಸ ಕಂಡುಬರುತ್ತದೆ. ಅಂದರೆ ಪರಿಶಿಷ್ಟ ಜಾತಿ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣಕ್ಕಿಂತ ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣ ಉತ್ತಮವಾಗಿರುವುದು ಕಂಡು ಬಂದಿದೆ.

ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣದಲ್ಲಿ 5% ಕ್ಕಿಂತ ಕಡಿಮೆ ಮಹತ್ವ ಪೂರ್ಣ ವ್ಯತ್ಯಾಸ ಕಂಡು ಬರುತ್ತದೆ. ಅಂದರೆ ಪರಿಶಿಷ್ಟ ಪಂಗಡ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣಕ್ಕಿಂತ ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣ ಉತ್ತಮವಾಗಿರುವುದು ಕಂಡು ಬಂದಿದೆ.

**ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣವನ್ನು ಸೂಚಿಸುವ ಕೋಷ್ಟಕ.**




**ಪ್ರಾಕಲ್ಪನೆ–3 :** ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಗೂ ಹಾಗೂ ಮನೆಯ ವಾತಾವರಣಕ್ಕೂ ಯಾವುದೇ ಮಹತ್ವ ಪೂರ್ಣ ಸಹ ಸಂಬಂಧವಿರುವುದಿಲ್ಲ.

**ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆ ಮತ್ತು ಮನೆಯ ವಾತಾವರಣವನ್ನು ಸೂಚಿಸುವ ಕೋಷ್ಟಕ.**


| ಚರಾಂಶಗಳು | ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣದೊಂದಿಗೆ ಶೈಕ್ಷಣಿಕ ಸಾಧನೆಯನ್ನು ಸೂಚಿಸುವ ಕೋಷ್ಟಕ. | | |
|---|---|---|---|
| ಮನೆಯ ವಾತಾವರಣ | r–ಮೌಲ್ಯ | t–ಮೌಲ್ಯ | p–ಮೌಲ್ಯ |
| | 0.5934 | 4.5445 | 0.0001, S |

**S–ಮಹತ್ವ ಪೂರ್ಣತೆ ಹೊಂದಿದೆ**

ಈ ಮೇಲಿನ ಕೋಷ್ಟಕದಲ್ಲಿ r ಮೌಲ್ಯವು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣ ಹಾಗೂ ಶೈಕ್ಷಣಿಕ ಸಾಧನೆಯನ್ನು ಪ್ರತಿನಿಧಿಸುತ್ತದೆ. r=0. 5934 ಆಗಿದ್ದು, ಇದರಿಂದ ದೊರೆತ t=4.5445 ಆಗಿದೆ. ಇದು p<0.05 ಮಹತ್ವ ಪೂರ್ಣತೆಯ ಮಟ್ಟಕ್ಕಿಂತ ಕಡಿಮೆ ಇರುವುದರಿಂದ ಶೂನ್ಯ ಪ್ರಾಕಲ್ಪನೆಯನ್ನು ತಿರಸ್ಕರಿಸಲಾಗಿದೆ. ಬದಲಿ ಪ್ರಾಕಲ್ಪನೆಯನ್ನು ರಚಿಸಲಾಗಿದೆ.

ಅಂದರೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣ ಉತ್ತಮವಾಗಿದ್ದಂತೆಲ್ಲಾ ಶೈಕ್ಷಣಿಕ ಸಾಧನೆಯ ಮಟ್ಟ ಉತ್ತಮವಾಗಿರುವುದು ಕಂಡು ಬಂದಿದೆ. ಮನೆಯ ವಾತಾವರಣ ಉತ್ತಮವಾಗಿಲ್ಲದ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯ ಮಟ್ಟ ಕಡಿಮೆಯಾಗಿರುವುದು ಕಂಡು ಬಂದಿದೆ.

**ಪರಿಶಿಷ್ಟ ಜಾತಿ. ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಗೂ ಮನೆಯ ವಾತಾವರಣಕ್ಕೂ ಇರುವ ಸಹ ಸಂಬಂಧವನ್ನು ಸೂಚಿಸುವ ಕೋಷ್ಟಕ.**




## ಅಧ್ಯಯನದ ಫಲಿತಾಂಶಗಳು

1. ಪ್ರಸ್ತುತ ಅಧ್ಯಯನದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಗಿಂತ ಪರಿಶಿಷ್ಟೇತರ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆ ಉತ್ತಮವಾಗಿರುವುದು ಕಂಡು ಬಂದಿದೆ.
2. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳ ಮನೆಯ ವಾತಾವರಣಕ್ಕಿಂತ ಪರಿಶಿಷ್ಟೇತರ ವಿದ್ಯಾರ್ಥಿಗಳ ಮನೆಯ ವಾತಾವರಣ ಉತ್ತಮವಾಗಿರುವುದು ಕಂಡು ಬಂದಿದೆ.

ISSN : 2249-2429 ಸಂಶೋಧನೆ RNI REG.NO.KARKAN/2011/38712

3. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಪ್ರೌಢಶಾಲಾ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆ ಮತ್ತು ಮನೆಯ ವಾತಾವರಣದಲ್ಲಿ ಸಮಾನತೆ ಕಂಡು ಬಂದಿದೆ.
4. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣದ ಮಟ್ಟವು ಉತ್ತಮವಾಗಿರುವಂತೆ ಶೈಕ್ಷಣಿಕ ಸಾಧನೆಯ ಮಟ್ಟವು ಉತ್ತಮವಾಗಿರುವುದು ಕಂಡು ಬಂದಿದೆ.

## ಉಪಸಂಹಾರ

ಈ ಸಂಶೋಧನಾ ಅಧ್ಯಯನದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣ ಮತ್ತು ಶೈಕ್ಷಣಿಕ ಸಾಧನೆಯಲ್ಲಿ ವ್ಯತ್ಯಾಸವಿರುವುದು ಕಂಡು ಬಂದಿದೆ. ಮನೆಯ ವಾತಾವರಣದ ಮಟ್ಟವು ಉತ್ತಮವಾಗಿರುವ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯ ಮಟ್ಟವು ಉತ್ತಮವಾಗಿರುವುದು ಕಂಡು ಬಂದಿದೆ. ಆದ್ದರಿಂದ ಶೈಕ್ಷಣಿಕ ಸಾಧನೆಯ ಮೇಲೆ ಮನೆಯ ವಾತಾವರಣದ ಪ್ರಭಾವವಿರುವುದು ಕಂಡು ಬಂದಿದೆ.

## ಪರಾಮರ್ಶನ ಗ್ರಂಥಗಳು


- **ಅನಂತರಾಮು ಬಿ.ಸಿ. (2011) :** ಕರ್ನಾಟಕ ರಾಜ್ಯದ ಅನುದಾನಿತ ಶಿಕ್ಷಣ ಮಹಾವಿದ್ಯಾಲಯಗಳ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯ ಮೇಲೆ ಪ್ರಭಾವ ಬೀರುವ ಅಂಶಗಳ ಅಧ್ಯಯನ.
- **ಅಶೋಕ ಜಿ.ಎನ್.(2011) :** ಸಂಶೋಧನಾ ವಿಧಾನ, ದಾವಣಗೆರೆ ನವನೀತ ಪ್ರಕಾಶನ.
- **ಕವಿತ ಕೆ. (2018) :** ಸರ್ಕಾರಿ ಮತ್ತು ಖಾಸಗಿ ಅನುದಾನಿತ ಪ್ರೌಢಶಾಲೆಯ 9ನೇ ತರಗತಿ ವಿದ್ಯಾರ್ಥಿಗಳ ಕೌಟುಂಬಿಕ ಪರಿಸರ ಮತ್ತು ಶೈಕ್ಷಣಿಕ ಸಾಧನೆಯ ನಡುವಿನ ಸಂಬಂಧದ ಅಧ್ಯಯನ.
- **ಮಂಜುಳ ಡಿ. (2013) :** ಕೇಂದ್ರ ಮತ್ತು ರಾಜ್ಯ ಪಠ್ಯಕ್ರಮ ಹೊಂದಿರುವ ಪ್ರೌಢಶಾಲಾ ವಿದ್ಯಾರ್ಥಿಗಳ ಸಾಧನೆ, ಅಭಿಪ್ರೇರಣೆ, ಮನೆಯ ವಾತಾವರಣ, ಪೋಷಕ ಮಗುವಿನ ಸಂಬಂಧದ ಒಂದು ತೌಲನಿಕ ಅಧ್ಯಯನ.
- **ವಾಮದೇವಪ ಹೆಚ್.ವಿ. (2017) :** ಶೈಕ್ಷಣಿಕ ಮೌಲ್ಯಮಾಪನ, ದಾವಣಗೆರೆ ಶ್ರೇಯಸ್ ಪಬ್ಲಿಕೇಷನ್ಸ್.


■■


*– 107ನೇ ಪುಟದಿಂದ ಮುಂದುವರೆದುದು*

ಜೊತೆಗೆ 50ಕ್ಕೂ ಹೆಚ್ಚು ಮೀಸಲಾತಿಯ ಪ್ರಮಾಣವನ್ನು ಮುಂದುವರೆದ ಸಮುದಾಯಗಳ ಹಿತಕ್ಕಾಗಿ ವರ್ಗೀಕರಿಸುತ್ತಾ ಹೋದರೆ ಅತಿ ಹಿಂದುಳಿದ ಸಮುದಾಯಗಳು ಉಳಿದಲ್ಲೇ ಉಳಿಯುತ್ತೆ ಎಂಬ ಶಂಕೆ ವ್ಯಕ್ತವಾಗುತ್ತದೆ. ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಶೇಕಡ 50–50 ಪ್ರಮಾಣದಲ್ಲಿ ಮೀಸಲಾತಿಯನ್ನು ನಿಗಧಿಪಡಿಸುವುದಾದರೆ ಈಗಾಗಲೇ ಇರುವ ವರ್ಗೀಕರಣದಲ್ಲಿ ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮುಂದುವರೆದ ಸಮುದಾಯಗಳನ್ನು ಹಿಂದುಳಿದ ಪಟ್ಟಿಯಿಂದ ಕೈಬಿಟ್ಟು ಮುಂದುವರೆದ ಸಮುದಾಯಗಳ ಪಟ್ಟಿಗೆ ಸೇರಿಸುವುದರಿಂದ, ಹಿಂದುಳಿದ ಸಮುದಾಯ ಗಳನ್ನು ಮುಂದುವರೆದ ಪಟ್ಟಿಯಿಂದ ಹಿಂದುಳಿದ ಪಟ್ಟಿಗೆ ಸೇರಿಸಿದಾಗ ನೈಜ ಫಲಾನುಭವಿಗಳು ಹಲವಾರು ಸೌಲಭ್ಯಗಳನ್ನು ಪಡೆಯಲು, ಸಾಮಾಜಿಕವಾಗಿ ಮುಂದುವರೆಯಲು ಅನುಕೂಲವಾಗುತ್ತದೆ. ಅಲ್ಲದೆ ಈ ಜಾತಿ ವರ್ಗೀಕರಣದ ಮೀಸಲಾತಿ ಆಧಾರದ ಮೇಲೆಯೇ ಚುನಾವಣಾ ಕ್ಷೇತ್ರಗಳನ್ನು ನಿಗಧಿಗೊಳಿಸಿದ್ದಲ್ಲಿ ಆಯಾ ಜಾತಿ ವರ್ಗೀಕರಣಗಳಲ್ಲಿ ಹಿಂದುಳಿದ ಸಮುದಾಯಗಳು ಸಹ ರಾಜಕೀಯವಾಗಿ ಮುನ್ನೆಲೆಗೆ ಬರಲು ಅನುಕೂಲವಾಗುತ್ತದೆ. ಈ ಮೇಲಿನ ಅಂಶಗಳನ್ನು ಕಡೆಗಣಿಸಿದ್ದಲ್ಲಿ ಬಲಿಷ್ಠ ಸಮುದಾಯಗಳ ಮುಂದೆ ಹಿಂದುಳಿದ ಸಮುದಾಯಗಳು ಮಂಡಿಯೂರುವ ಪದ್ಧತಿ ಮುಂದುವರೆಯುತ್ತದೆ.

## ಕೊನೆ ಟಿಪ್ಪಣಿಗಳು

1. ಲಿಂಗಪ್ಪ ಕೆ. ಎನ್. 2022, "ಮೀಸಲಾತಿಯ ಒಳನೋಟಗಳು", ಮೈಸೂರು ಅಭಿರುಚಿ ಪ್ರಕಾಶನ, ಪು. 78.
2. ಅದೇ ಪು. 32.
3. ಅದೇ ಪು. 33–34.
4. ಅದೇ ಪು. 35–36.
5. ಅದೇ ಪು. 77.
6. ಅದೇ ಪು. 36.
7. ಹೆಚ್.ಎನ್. ನಾಗಮೋಹನದಾಸ್., 2022, "ಮೀಸಲಾತಿ ಭ್ರಮೆ ಮತ್ತು ವಾಸ್ತವ", ಬೆಂಗಳೂರು ಜನಪ್ರಕಾಶನ, ಪು. 90.
8. ಅದೇ ಪು. 86.

■■


ವಿದ್ಯಾನಿಧಿ ಪ್ರಕಾಶನ®
ಶ್ರೀ ಶಿವಕುಮಾರ ಏಜನ್ಸಿ®
ಶೈಕ್ಷಣಿಕ ಪುಸ್ತಕಗಳ ಪ್ರಕಾಶಕರು ಮತ್ತು ಮಾರಾಟಗಾರರು
ಸ್ಟೇಶನ್ ರೋಡ ಮತ್ತು 'ನನಸು', ಹಳೆ ಸರಕಾರಿ ಆಸ್ಪತ್ರೆ ಎದುರಿಗೆ,
ಎಸ್.ಪಿ. ಗದಗ ಕಂಪೌಂಡ, ಜೆ.ಟಿ. ಮಠ ರೋಡ, ಗದಗ-582 101
ದೂರವಾಣಿ : 08372-200527
e-mail : vidyanidhiprakashana@gmail.com.

ISSN : 2249-2429 ಶಿಕ್ಷಣ ತಜ್ಞರು RNI REG.NO.KARKAN/2011/38712

# ವಿನೋಬಾ ಭಾವೆ (ಕ್ರಿ.ಶ. 1894–1986)
## (VINOBHA BHAVE - 1894-1986)

✍ ಡಾ. ಜಯದೇವ ಮೆಣಸಗಿ, ಎಂ.ಎಂ.ಟ್ರಸ್ಟ್, (ರಿ.) ಗದಗ.

ಆಚಾರ್ಯ ವಿನೋಬಾಭಾವೆ ಅವರು ಭಾರತಾಂಬೆಯ ಹೆಮ್ಮೆಯ ಸುಪುತ್ರರಾಗಿ, ಬ್ರಿಟಿಷರ ಗುಲಾಮರಾಗಿ ಬಾಳುತ್ತಿದ್ದ ಭಾರತೀಯರನ್ನು ಜಾಗ್ರತೆಗೊಳಿಸಿ ಭಾರತಾಂಬೆಯನ್ನು ಸ್ವತಂತ್ರಗೊಳಿಸಿದ ಸ್ವಾತಂತ್ರಯೋಧ, ಸತ್ಯ ಮತ್ತು ಅಹಿಂಸೆಗಳ ಮೂಲಕ ಜಗತ್ತಿನಲ್ಲಿಯೇ ಕ್ರಾಂತಿಯನ್ನು ಉಂಟು ಮಾಡಿ ಶಾಂತಿ ಸ್ಥಾಪಿಸಿದ ಶಾಂತಿದೂತ. ಅಸ್ಪೃಶತೆಯ ವಿರುದ್ಧ ಹೋರಾಡಿ ಹಿಂದುಳಿದವರಿಗೆ ಸಾಮಾಜಿಕ ನ್ಯಾಯದೊರಕಿಸಿ ಕೊಟ್ಟ ಮಾನವತಾವಾದಿ, ಸ್ವತಂತ್ರ ಭಾರತವನ್ನು ರಾಮರಾಜ್ಯವನ್ನಾಗಿ ಮಾಡಬೇಕೆಂಬ ಹೊಂಗನಸನ್ನು ಕಂಡ ಆದರ್ಶವಾದಿ, ರಾಜಕಾರಣಿಯಾಗಿ, ಸಮಾಜ ಸುಧಾರಕರಾಗಿ, ದಾರ್ಶನಿಕರಾಗಿ, ತತ್ವಜ್ಞಾನಿಯಾಗಿ, ಸತ್ಯಾನ್ವೇಷಿಯಾಗಿ ಪ್ರಸಿದ್ಧ ಹೊಂದಿದ ವಿನೋಬಾ ಭಾವೆಯವರು ಶ್ರೇಷ್ಠ ಶಿಕ್ಷಣ ತಜ್ಞರೂ ಆಗಿದ್ದರು. 1916 ರಲ್ಲಿ ವಿನೋಭಾವೆ ಅವರು ಗಾಂಧೀಜಿಯವರ ಸಂಪರ್ಕದಲ್ಲಿ ಬಂದರು. ಅಂದಿನಿಂದ ಅವರು ಅನುಯಾಯಿಯಾದರು. 1940 ರಲ್ಲಿ ಅಸಹಕಾರ ಚಳುವಳಿಯಲ್ಲಿ ಪ್ರಮುಖ ಪಾತ್ರವಹಿಸಿದರು. ಸ್ವಾತಂತ್ರ್ಯದ ನಂತರ ಅವರು ಯಾವುದೇ ಉನ್ನತ ಹುದ್ದೆಗಾಗಿ ಪ್ರಯತ್ನಿಸಲಿಲ್ಲ ಗಾಂಧೀಜಿಯವರು ಹಾಕಿಕೊಟ್ಟ ಮಾರ್ಗದಲ್ಲಿಯೇ ಮುಂದುವರಿದು ಅವರ ಆದರ್ಶಗಳನ್ನು ಸಮಾಜದಲ್ಲಿ ಬೆಳೆಸುವ ಕಾರ್ಯವನ್ನು ಮುನ್ನಡೆಸಿದರು.



### ಜೀವನ

ಆಚಾರ್ಯ ವಿನೋಭಾಭಾವೆ ಅವರು ವ್ಯಕ್ತಿತ್ವವನ್ನು ಶ್ರೀಮಂತಗೊಳಿಸಲು ಅವರು ಮಾಡಿದ ಕಾರ್ಯಗಳು ಮತ್ತು ಆದರ್ಶಗಳು, ಅವರನ್ನು ಉನ್ನತ ಮಟ್ಟಕ್ಕೆ ಏರಿಸಿದವು. ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳ ಬಗ್ಗೆ ಬೋಧಿಸಿದ ಅವರು 'ಸಮಾಜವಾದಿ' ಬಗ್ಗೆ ಒಂದು ಹೊಸ ಪರಿಕಲ್ಪನೆಯನ್ನು ನೀಡಿದರು.

ವಿನೋಬಾ ಭಾವೆಯವರು ಕ್ರಿ. ಶ. 1894ರ ಡಿಸೆಂಬರನಲ್ಲಿ ಮಹಾರಾಷ್ಟ್ರದ ಚಿಕ್ಕ ಹಳ್ಳಿಯಲ್ಲಿ ಒಂದು ಧಾರ್ಮಿಕ ಕುಟುಂಬದಲ್ಲಿ ಜನಿಸಿದರು. ಅವರ ಜೀವನದಲ್ಲಿ ಪ್ರಾರಂಭದ ದಿನಗಳಲ್ಲಿ ನಿಸರ್ಗ ಸೌಂದರ್ಯ ಮತ್ತು ಕುಟುಂಬದ ಪರಿಸರದಿಂದ ಪ್ರಭಾವಿತರಾದರು ಸ್ವಾಮಿ ಶಂಕರಾಚಾರ್ಯ ಮತ್ತು ಸಮರ್ಥ ಗುರು ರಾಮದಾಸ ಅವರ ಆದರ್ಶಗಳಿಂದ ಸಂಪ್ರದಾಯ ಮತ್ತು ಭಕ್ತಿಪೂರ್ವಕ ಜೀವನ ನಡೆಸಿದರು. ವಿನೋಭಾ ಅವರು ತಮ್ಮ ಇಡೀ ಜೀವನವನ್ನು ಜನರ ಸೇವೆಗಾಗಿ ಮುಡುಪಾಗಿಡಲು ಮತ್ತು ಅವಿವಾಹಿತವಾಗಿರಲು ನಿರ್ಧರಿಸಿದರು. ಕ್ರಿ. ಶ. 1905 ರ ಬಂಗಾಳ ವಿಭಜನೆ ಇವರ ಮೇಲೆ ಆಗಾಧವಾದ ಪರಿಣಾಮ ಬೀರಿತು. ಅವರು ತಮ್ಮ ಮನೆಯನ್ನು ಬಿಟ್ಟು ತಮ್ಮ ಜೀವನವನ್ನು ದೇಶ ಸೇವೆಗಾಗಿ ಮುಡುಪಾಗಿಟ್ಟರು. ವಿನೋಭಾ ಭಾವೆ ಅವರು ಮಹಾತ್ಮ ಗಾಂಧೀಜಿಯವರ ಅನುಯಾಯಿ ಆಗಿ 1916ರಲ್ಲಿ ಗಾಂಧೀಜಿಯವರೊಡನೆ ವಾಸಿಸಲು ಸರಬಮತಿ ಆಶ್ರಮಕ್ಕೆ ಹೋದರು ಅವರು ಸತ್ಯಾಗ್ರಹದ ಸಮಯದಲ್ಲಿ ಅನೇಕ ಸಲ ಜೈಲು ಶಿಕ್ಷೆಗೆ ಒಳಗಾದರು (ಸ್ವಾತಂತ್ರ್ಯ ಹೋರಾಟದಲ್ಲಿ) ವಿನೋಭಾ ಅವರು ಸ್ವಾತಂತ್ರ್ಯ ಸಿಕ್ಕಾಗ ಯಾವುದೇ ಅಧಿಕಾರವನ್ನು ಬಯಸಲಿಲ್ಲ, ಅವರ ಜೀವನ ಅತ್ಯಮೂಲ್ಯ ಸೇವೆಯನ್ನು ಸಬರಮತಿ ಆಶ್ರಮಕ್ಕೆ ನೀಡಿದರು. ಮಹಾತ್ಮ ಗಾಂಧೀಜಿಯವರು ಮರಣದ ನಂತರ ಅವರು ಮಾಡುತ್ತಿರುವ ಅರ್ಧಕ್ಕೆ ನಿಂತ ಕೆಲಸಗಳನ್ನು ಕೈಗೆತ್ತಿಕೊಂಡು ಮುಂದುವರೆಸಿದರು ಇವರು ಭೂದಾನ ಸರ್ವೋದಯ ಮತ್ತು ಸಾಮಾಜಿಕ ಬೆಳವಣಿಗೆಯ ಬಗ್ಗೆ ಹೇಳಿದ್ದಾರೆ.

### ವಿನೋಭಾ ಅವರ ಶೈಕ್ಷಣಿಕ ಉದ್ದೇಶಗಳು

ವಿನೋಭಾ ಅವರು ತಮ್ಮ ಜೀವನದ ಅನೇಕ ಅನುಭವಿಗಳಿಂದ ತಮ್ಮದೇ ಆದ ಅನೇಕ ಉದ್ದೇಶಗಳ ಬಗ್ಗೆ ಹೇಳಿದ್ದಾರೆ. ಅವರು ಸ್ವತಃ ತಾವೇ ವಿದ್ಯಾರ್ಥಿ ಮತ್ತು ಶಿಕ್ಷಕರಾಗಿ ಅನುಭವಿಸಿದ್ದಾರೆ. ವಿಶ್ವವಿದ್ಯಾಲಯದ ವಿದ್ಯಾರ್ಥಿ ಯಾಗಿದ್ದರು ಅವರು ತಮ್ಮ ಭೂದಾನ ಮತ್ತು ಗ್ರಾಮದಾನಗಳ ಬಗ್ಗೆ ಪ್ರಚಾರ ಮಾಡುವಾಗ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗುವಾಗ ಅವರು ಶಿಕ್ಷಕರ ಪಾತ್ರವನ್ನು ವಹಿಸಿದರು. ಅವರ ಜೀವನದ ಅನುಭವಗಳ ಮೇಲೆ ಉದ್ದೇಶಗಳು ಈ ಕೆಳಗಿನಂತಿವೆ.

### ಶಿಕ್ಷಣದ ಮೊದಲ ಉದ್ದೇಶ

ವಿನೋಭಾ ಭಾವೆ ಶಿಕ್ಷಣದ ಮೊದಲ ಉದ್ದೇಶ ವಿದ್ಯಾರ್ಥಿಯನ್ನು ಕಡಿಮೆ ಸಮಯದಲ್ಲಿ ಸ್ವಾವಲಂಬಿಯನ್ನಾಗಿ ಮಾಡುವದು. ವಿದ್ಯಾರ್ಥಿಯಲ್ಲಿ ಅತಿ ಕಡಿಮೆ ಅವಧಿಯಲ್ಲಿ ಅವನಿಗೆ ಸಾಧ್ಯವಾದಷ್ಟು ಸ್ವತಃ ದುಡಿಯುವದರ ಮೂಲಕ ಗಳಿಸುವಂತೆ ಮಾಡಲು ಅಸಮರ್ಥರಾದರೆ ಅವನು ಸಮಾಜಕ್ಕೆ ಉಪಯುಕ್ತವಾಗದೇ ಹೊರೆಯಾಗಿ ಪರಿಣಮಿಸುತ್ತಾನೆ. ಆರ್ಥಿಕ ಸ್ವಾವಲಂಬನೆಯು ಶಿಕ್ಷಣದ ಒಂದು ಮೂಲ ಉದ್ದೇಶವಾಗಿತ್ತು.

ಆರ್ಥಿಕ ಸ್ವಾವಲಂಬನೆಯ ಜೊತೆಗೆ ವಿದ್ಯಾರ್ಥಿ, ಸ್ವಕಲಿಕೆ, ಸ್ವಅನುಭವಗಳಿಂದ ಪ್ರಯೋಗಗಳಿಂದ ಕಲಿಕೆಯನ್ನು ಪ್ರೋತ್ಸಾಹಿಸಿದರು. ವಿದ್ಯಾರ್ಥಿಯು 15 ವರ್ಷಗಳವರೆಗೆ ಶಿಕ್ಷಕರ ಮೇಲೆ ಅವಲಂಬಿತರಾಗಿ ರುವದು. ಶಿಕ್ಷಕರಿಗೆ ಸ್ವತಃ ಲಾಭದಾಯಕವಿಲ್ಲ ಎಂದಿದ್ದಾರೆ.

### ಶಿಕ್ಷಣದ ಎರಡನೇ ಉದ್ದೇಶ

ವಿನೋಭಾ ಅವರ ಶಿಕ್ಷಣದ ಎರಡನೇ ಉದ್ದೇಶ ಶಿಕ್ಷಣ ಯಾವಾಗಲೂ ವೈಯಕ್ತಿಕ ಉದ್ದೇಶ ಮತ್ತು ಸಾಮಾಜಿಕ ಉದ್ದೇಶವನ್ನು ಹೊಂದಿರುತ್ತದೆ ವೈಯಕ್ತಿಕ ಉದ್ದೇಶ ಎಂದರೆ ಮೊದಲನೇ ಉದ್ದೇಶದಲ್ಲಿ ಕಲಿತಂತೆ, ಸ್ವಯಂಕಲಿಕೆ ಮತ್ತು ಸಾಮಾಜಿಕ ಉದ್ದೇಶ ಎಂದರೆ ಕೇವಲ ಒಂದು ದೇಶವನ್ನಲ್ಲ ಇಡೀ ವಿಶ್ವವನ್ನೆ ಭಯದ ವಾತಾವರಣದಿಂದ ಹೊರದೂಡುವದು. ವಿನೋಭಾ ಅವರು ನಮ್ಮ ಮುಂದಿರುವ ಮಹತ್ ಕಾರ್ಯ ಎಂದರೆ ಈ ಗುರಿಗಳನ್ನು ಸಾಧನೆ ಮಾಡುವದು ಎಂದು ವಿಚಾರ ಮಾಡುತ್ತಿದ್ದರು. ಪ್ರೀತಿ ಮತ್ತು ಶಾಂತಿಯನ್ನು ಯಾವುದು ಬಲಗೊಳಿಸುತ್ತಿದೆಯೇ ಅದುವೇ ನಿಜವಾದ ಶಿಕ್ಷಣ ಮತ್ತು ರಕ್ಷಣೆ (ಪೋಲಿಸ್) ಎರಡು ಬೇರೆ ಬೇರೆ

ISSN : 2249-2429 ಶಿಕ್ಷಣ ತಜ್ಞರು RNI REG.NO.KARKAN/2011/38712

ವಿಭಾಗಗಳಾಗಿ ಮಾಡದೇ ದೇಶದ ರಕ್ಷಣೆಗಾಗಿ ಶಿಕ್ಷಣ ಮತ್ತು ನಾವು ನಿಜವಾಗಿಯೇ ಪೋಲಿಸ್ ಮತ್ತುಸೈನಿಕರ ನಿರ್ವಹಣೆಗೆ ಮಾಡಲು ವೆಚ್ಚವನ್ನು ಕಡಿಮೆಗೊಳಿಸಿದರೆ ಇವತ್ತು ಆ ರಕ್ಷಣಾ ಇಲಾಖೆಗೆ ನಾವು ನಮ್ಮ ದೇಶದ ಒಟ್ಟು ವರಮಾನದ ಇಲ್ಲವೆ ಅದು ವ್ಯಯದ ಅರ್ಧಭಾಗವನ್ನು ಖರ್ಚು ಮಾಡುತ್ತಿದ್ದೇವೆ. ಇದನ್ನು ಭಾವೆಯವರು ಖಂಡಿಸಿದರು ಅದನ್ನೇ ಶಿಕ್ಷಣದ ಮೇಲೆ ವ್ಯಯ ಮಾಡಿದರೆ ಗಣನೀಯ ಸಾಧನೆ ಮಾಡಬಹುದು.

## ಶಿಕ್ಷಣದ ಮೂರನೇ ಉದ್ದೇಶ

ಭಾವೆ ಅವರ ಪ್ರಕಾರ ಶಿಕ್ಷಣದ ಮೂರನೇ ಉದ್ದೇಶ ಶಿಕ್ಷಣವನ್ನು ಕಲಿಕೆ ಕೆಲಸವನ್ನು ಬೇರೆ ಬೇರೆಯಾಗಿ ಮಾಡದೇ ಒಟ್ಟಿಗೆ ಮಾಡುವಂತೆ ಅವಕಾಶ ಮಾಡಿಕೊಡುವದು ವಿದ್ಯಾರ್ಥಿಗಳು ಕೇವಲ ಪುಸ್ತಕಗಳಿಂದ ಜ್ಞಾನ ಪಡೆಯುತ್ತಾರೆ. ಎಂದು ಕೆಲವರು ತಪ್ಪಾಗೀ ಭಾವಿಸಿದ್ದಾರೆ ಹಾಗೂ ಇದು ಕೇವಲ ಹಣ ಮತ್ತು ಸಮಯದ ಅಪವ್ಯಯವಾಗಿರುತ್ತದೆ. ಹೊರತು ವಿದ್ಯಾರ್ಥಿಗಳು ನಿಜವಾಗಿ ಏನನ್ನೂ ಕಲಿಯುವುದಿಲ್ಲ ವಿನೋಭಾ ಅವರ ಪ್ರಕಾರ ಪುಸ್ತಕದಿಂದ ಪಡೆದ ಜ್ಞಾನ ನಿಜವಾದ ಜ್ಞಾನ ಅಲ್ಲ ಅವನ ಕೆಲಸದಿಂದ ಅನುಭವದಿಂದ ಪಡೆದುಕೊಂಡಿದ್ದು ನಿಜವಾದ ಜ್ಞಾನ.

## ಶಿಕ್ಷಣದ 4ನೇ ಉದ್ದೇಶ

ವಿನೋಭಾ ಅವರು ಶಿಕ್ಷಣದ ನಾಲ್ಕನೇ ಉದ್ದೇಶ ಎಂದರೆ ಶಿಕ್ಷಣವು ಜೀವನವನ್ನು ಸಾಗಿಸುವ ಸರಿಯಾದ ಮಾರ್ಗವನ್ನು ಕಲಿಸುತ್ತದೆ ಎಂಬುದು ನಾಲ್ಕನೇ ಉದ್ದೇಶ ಈ ಉದ್ದೇಶದ ಈಡೇರಿಕೆ ಆಗದೆ ಹೋದರೆ ಕಲ್ಯಾಣ ಸಮಾಜವನ್ನು ನಿರ್ಮಾಣ ಮಾಡುವದು ಅಸಾಧ್ಯ ಎಂದು ವಿನೋಭಾ ಅವರು ನಂಬಿದ್ದರು ಏನೆಂದರೆ ಅನೇಕ ಜನರು ನಿಸರ್ಗದಡಿಯ ದೂರ ಹೋಗುತ್ತಿದ್ದಾರೆ. ಆದರೆ ನಿಜವಾದ ಪ್ರಶಾಂತತೆ ಮತ್ತು ಶಾಂತಿ ನಮ್ಮ ಜೀವನದಲ್ಲಿ ಪಡೆದುಕೊಳ್ಳಬೇಕಾದರೆ ನಾವು ಜೀವನದ ಪ್ರತಿ ಹಂತದಲ್ಲಿ ನಿಸರ್ಗದೊಂದಿಗೆ ಕಲಿಯಬೇಕು ಪ್ರಕೃತಿಯ ನಿಯಮಗಳಿಗೂ ಮತ್ತು ಜೀವನದ ಪ್ರತಿ ಹಂತದಲ್ಲಿ ನಿಸರ್ಗದೊಂದಿಗೆ ಕಲಿಯಬೇಕು ಪ್ರಕೃತಿಯ ನಿಯಮಗಳಿಗೂ ಮತ್ತು ಜೀವನದ ಮಾರ್ಗಗಳಿಗೂ ನೇರವಾದ ಸಂಬಂಧವಿದೆ ವಿನೋಭಾ ಅವರು ಕೃಷಿ ಕೆಲಸಕ್ಕೆ ಪ್ರತಿಯೊಬ್ಬರು ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು ಭೂಮಿಯೊಂದಿಗೆ ಸಂಬಂಧ ಹೊಂದಿರಬೇಕು. ಆದರೆ ಅವರು ಇತರ ಕೆಲಸಗಳನ್ನು ಕಡೆಗಣಿಸಲಿಲ್ಲ ಉಳಿದ ಜನರು ಇತರ ಉತ್ಪಾದಕ ಕಾರ್ಯಗಳಲ್ಲಿ ತೊಡಗುವಂತೆ ಸಲಹೆ ಮಾಡಿದರು ಇದು ಅವರ ಆರ್ಥಿಕ ಸ್ವಾವಲಂಬನೆ ಮತ್ತು ಸರ್ವೋದಯಕ್ಕೆ ನಾಂದಿಯಾಯಿತು ಎಂದರೆ ತಪ್ಪಾಗಲಿಕ್ಕಿಲ್ಲ.

## ವಿನೋಭಾ ಅವರ ಮೂಲ ಶಿಕ್ಷಣ ವೆಚ್ಚದಾಯಕವಲ್ಲ

ವಿನೋಭಾ ಅವರು ಪ್ರಸ್ತುತ ಶಾಲೆಗಳಲ್ಲಿ ಸಂಘಟಿಸಿರುವ ಮೂಲ ಶಿಕ್ಷಣವನ್ನು ವಿಮರ್ಶಿಸಿದರು ಅವರ ಪ್ರಕಾರ ಈ ಶಾಲೆಗಳು ಹೊರಗಿನ ವಾತಾವರಣದೊಂದಿಗೆ ಯಾವುದೇ ಸಂಬಂಧ ಹೊಂದಿಲ್ಲ. ಆದ್ದರಿಂದ ಈ ಶಾಲೆಗಳನ್ನು ಪುನರ ಸಂಘಟಿಸಬೇಕಾಗಿದೆ ಎಂದರು. ಕೆಲವು ವಿಮರ್ಶಕರು ಮೂಲ ಶಿಕ್ಷಣ ವೆಚ್ಚದಾಯಕವಾಗಿದೆ ಎಂದು ವಿಮರ್ಶೆ ಮಾಡಿದರು ಆದ್ದರಿಂದ ಸರಕಾರಕ್ಕೆ ಅದನ್ನು ನೀಡಲು ಸಾಧ್ಯವಿಲ್ಲ ಎಂದರು ಆದರೆ ವಿನೋಭಾ ಅವರು ಈ ವಾದವನ್ನು ಒಪ್ಪಲಿಲ್ಲ. ಏಕೆಂದರೆ ಮೂಲ ಶಿಕ್ಷಣ ಸಂಪೂರ್ಣವಾಗಿ ಆರ್ಥಿಕವಾಗಿ ಹೊರೆ ಬೀಳದ ಶಿಕ್ಷಣವಾಗಿದೆ. ಇದನ್ನು ಯಾರು ವೆಚ್ಚದಾಯಕ ಎಂದು ವಾದಿಸಿದ್ದಾರೆ ಅವರು ಮೂಲ ಶಿಕ್ಷಣವನ್ನು ವಿರೋಧಿಸುತ್ತಿದ್ದಾರೆ ಹೊರತು ಆದರೆ ವೆಚ್ಚವಲ್ಲ ಯಾವಾಗ ಮೂಲ ಶಿಕ್ಷಣವನ್ನು ಶಿಕ್ಷಣ ವ್ಯವಸ್ಥೆಯ ಸಂಪೂರ್ಣವಾಗಿ ಅಳವಡಿಸುವರೋ ಆಗ ಇದು ವೆಚ್ಚದಾಯಕವೆನಿಸುವದಿಲ್ಲ.

ಹಳ್ಳಿಗಳು ಮೂಲ ಶಿಕ್ಷಣವನ್ನು ಅಳವಡಿಸಲು ಹೆಚ್ಚು ಸೂಕ್ತವಾಗಿದೆ. ಯಾಕೆಂದರೆ ಹಳ್ಳಿಗರು ಹೆಚ್ಚಾಗಿ ಬೇರೆಯವರ ಮೇಲೆ ಅವಲಂಬಿತವಾಗಿರದೇ ಸಾಧ್ಯವಾದಷ್ಟು ತಾವೇ ವಸ್ತುಗಳನ್ನು ಉತ್ಪಾದಿಸುತ್ತಾರೆ ವಿನೋಭಾ ಭಾವೆಯವರು ಮೂಲ ಶಿಕ್ಷಣಕ್ಕೆ ಒಂದು ತುಣುಕು ಸಹ ಅವಶ್ಯಕತೆ ಇಲ್ಲಾ ಅದೇನಾದರೂ ಅವಶ್ಯಕತೆ ವಸ್ತು ಬೇಕೆಂದರೆ ದಕ್ಷ ಶಿಕ್ಷಕ ಮಾತ್ರ ಶಾಲೆಯ ಕಟ್ಟಡ, ಕಪ್ಪು ಹಲಿಗೆ, ಸೀಮೆಸುಣ್ಣ (ಚಾಕ್‌ಪೀಸ) ಯಾವುದಾದರೂ ಅಗತ್ಯವೋ ಇಲ್ಲಾ ಪುಸ್ತಕಗಳು ದೊರೆತರೆ ಅವರಿಗೆ ಹೆಚ್ಚು ಉಪಯುಕ್ತ ದೊರೆಯದೇ ಹೋದರೆ ಅದು ಅವರ ಮೇಲೆ ಯಾವುದೇ ಪರಿಣಾಮ ಬೀರುವದಿಲ್ಲ. ಆದ್ದರಿಂದ ಇದು ವೆಚ್ಚದಾಯಕವಿಲ್ಲ.

## ವಿನೋಭಾ ಅವರ ಮೂಲ ಶಿಕ್ಷಣ ಮತ್ತು ಸರಕಾರ

ವಿನೋಭಾ ಅವರ ಅಭಿಪ್ರಾಯದ ಪ್ರಕಾರ ಮೂಲ ಶಿಕ್ಷಣದ ಉದ್ದೇಶಗಳು ಈಡೇರದೆ ಇರುವದು ವಿಪರ್ಯಾಸ. ರಾಜ್ಯ ಸರ್ಕಾರ ಮೂಲ ಶಿಕ್ಷಣಕ್ಕಾಗಿ ಸಾಕಷ್ಟು ಪ್ರಯತ್ನಗಳನ್ನು ಮಾಡಿದರು ಅದು ಫಲಕಾರಿಯಾಗಿರುವುದಿಲ್ಲ. ಅದು ತನ್ನ ಬಲವನ್ನು ಗಳಿಸುವದರ ಬದಲು ಕಳೆದುಕೊಳ್ಳುತ್ತಿದೆ. ನಿಜವಾಗಿ ಮೂಲ ಶಿಕ್ಷಣದ ಗೋರಿಯನ್ನು ಸರಕಾರವೇ ನಿರ್ಮಾಣ ಮಾಡುತ್ತಿದೆ, ಯಾಕೆ ಇದು ಹೀಗೆ ? ಎನ್ನುವದಕ್ಕೆ ವಿನೋಭಾ ಅವರ ಮೂಲ ಶಿಕ್ಷಣ ಜೀವನದ ತತ್ವಶಾಸ್ತ್ರದ ಮೇಲೆ ಅವಲಂಬಿಸಿದೆ. ಆದ್ದರಿಂದ ಈ ತತ್ವವನ್ನು ಒಪ್ಪಿಕೊಳ್ಳದೇ ಹೋದರೆ ನಿರೀಕ್ಷಿತ ಫಲ ದೊರೆಯುವದಿಲ್ಲ. ಸರಕಾರದ ಒಂದು ಕಾರ್ಯ ಹೇಗೆಂದರೆ 'ಒಬ್ಬ ಮನುಷ್ಯ ಗಿಡಕ್ಕೆ ನೀರನ್ನು ಹಾಕದೆ ಕೇವಲ ಫಲವನ್ನು ನಿರೀಕ್ಷಿಸುವಂತಾಗಿದೆ.

## ಉಪಸಂಹಾರ

ವಿನೋಭಾ ಭಾವೆಯವರ ಶೈಕ್ಷಣಿಕ ವಿಚಾರಗಳು ಕೆಲವೊಂದು ಅವಗುಣಗಳನ್ನು ಹೊಂದಿದ್ದರೂ ಸಹ ಅವರು ನೀಡಿರುವ ಮೂಲ ಶಿಕ್ಷಣದ ಪರಿಕಲ್ಪನೆ ಒಂದು ತಾಸಿನ ಅವಧಿಯ ಶಿಕ್ಷಣ ಹಳ್ಳಿಗಳಲ್ಲಿ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವದು, ಆಳವಾಗಿ ಅವಲೋಕಿಸಿದಾಗ ಅವರ ವಿಚಾರ ಧಾರೆಗಳು ಅತ್ಯದ್ಭುತವಾಗಿರುವುದು ಅಲ್ಲಗಳೆಯುವಂತಲ್ಲ. ಮತ್ತು ಅವರ ಶೈಕ್ಷಣಿಕ ಉದ್ದೇಶಗಳು ಪ್ರಸ್ತುತ ಸಮಾಜಕ್ಕೆ ಎಷ್ಟರ ಮಟ್ಟಿಗೆ ಉಪಯುಕ್ತವಾಗಿವೆ ಎಂಬುದನ್ನು ಅವಲೋಕಿಸಿದಾಗ ಅವರೊಬ್ಬರು ಮಹಾನ್ ಶೈಕ್ಷಣಿಕ ತಜ್ಞರು, ಮಾನವತಾವಾದಿಗಳು, ಇದೆಲ್ಲಕ್ಕೂ ಮಿಗಿಲಾಗಿ ಗಾಂಧೀವಾದಿಗಳೆಂದರೆ ತಪ್ಪಾಗಲಾರದು ಎಂದು ಹೇಳಬಹುದು.

■■

APPROVED BY UGC CARE

**SHIKSHAN SOUDAH** *Kannada Quarterly* Printer, Publisher, Editor and Owned by : **Jayadev Mailarappa Menasagi** Resi. : Okkalageri Oni, GADAG-582101, Tq. Gadag, Dist.: Gadag. Karnataka State Printed at **Maima Akshara Mudrana,** S.P. Gadag Compound, J.T.Math Road, GADAG 582101, Tq. Gadag, Dist.: Gadag. Karnataka State Phone : 08372-200527, email : shikshansoudha@gmail.com.